
2



ಭಾರತಿ

ಸಂಪಾದಕಿ:
ಹೆಚ್. ಎಸ್. ಪಾ

ಭಾರತಿ

ಶ್ರೀಮತಿ ತಿರುಮಲೆ ರಾಜಮ್ಮ
ಅಭಿನಂದನ ಗ್ರಂಥ

ಸಂಪಾದಕಿ
ಹೆಚ್. ಎಸ್. ಪಾರ್ವತಿ

ಪ್ರಕಾಶಕರು
'ಭಾರತಿ' (ಶ್ರೀಮತಿ ತಿರುಮಲೆ ರಾಜಮ್ಮ) ಸನ್ಮಾನ ಸಮಿತಿ
649, 10 ನೇ ಮುಖ್ಯ ರಸ್ತೆ, ಜಯನಗರ, ಬೆಂಗಳೂರು

BHARATHI : Felicitation Volume–collection of articles by various authors on the life and works of 'Bharathi' (Smt. Thirumale Rajamma) welknown authoress, poetess, musician of Karnataka, along with articles, one act plays etc. written by her. Edited by Smt. H. S. Parvathi. Published by 'BHARATI' (Smt. Thirumale Rajamma) Sanmana Samiti, Bangalore. Demy$\frac{1}{8}$; xii+260+5 photo plates; 1972.

ರಕ್ಷಾಪುಟ ಕಲೆ
ಜಿ. ವೈ. ಹುಬ್ಳೀಕರ್

ಬೆಲೆ: ರೂ. ೧೫

PRINTED BY M. S. NAGARAJ, AT YUGANTHARA PRESS
1ST MAIN ROAD, CHAMARAJPET, BANGALORE-18

ನಮ್ಮ ಮಾತು

'ಭಾರತಿ' ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಶ್ರೀಮತಿ ತಿರುಮಲೆ-ರಾಜಮ್ಮ ಸಾಹಿತ್ಯ, ಸಂಗೀತ, ದೇಶ ಭಕ್ತಿಗಳ ತ್ರಿವೇಣಿ ಸಂಗಮ. ಸಾಹಿತ್ಯ, ಸಂಗೀತ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿ, ಸಿದ್ಧಿ ಗಳಿಸಿರುವುದಷ್ಟೇ ಅಲ್ಲ; ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಅಕ್ಕರೆಯ ಒಲವಿನ 'ತಂಗಿ'ಯಾಗಿ ತಮ್ಮ ಗಾನ ಸುಧಾಮೃತದಿಂದ ಅವರ ಹಾಗೂ ಇತರ ರಾಷ್ಟ್ರಧೀಮಂತರ ಮೆಚ್ಚುಗೆ ಗಳಿಸಿದ ಕೀರ್ತಿ ಅವರದು.

ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ಸಾಹಿತ್ಯ, ಸಂಗೀತ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ರಾಜಮ್ಮನವರ ಕೃತಿಗಳು ಸಂಖ್ಯೆಯಲ್ಲಿ ಕಡಿಮೆ ಇರಬಹುದು. ಆದರೆ ಗುಣಮಟ್ಟ, ಮೌಲ್ಯದ ದೃಷ್ಟಿಯಿಂದ ಬಹುಕಾಲ ನಿಲ್ಲುವಂತಹವು. 'ಭಾರತಿ' –ಈ ಕಾವ್ಯನಾಮ ಇವರಿಗೆ ಅನ್ವರ್ಥ.

ಇಂಥ ಮಹಿಳೆ ಯಾವ ನಾಡು, ನುಡಿಗಾದರೂ ಭೂಷಣ. ಇಂಥವರನ್ನು ಗುರುತಿಸಿ, ಅವರು ನಾಡು, ನುಡಿಗೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಸನ್ಮಾನಿಸಬೇಕಾದುದು ಕರ್ತವ್ಯ. ಈ ದೃಷ್ಟಿಯಿಂದ ನಡೆಸಿದ ಅಳಿಲು ಪ್ರಯತ್ನದ ಫಲ: ಈ 'ಭಾರತಿ' ಅಭಿನಂದನ ಗ್ರಂಥದ ಪ್ರಕಟಣೆ, ಸಮರ್ಪಣೆ.

ನಮಗೆ ತಿಳಿದ ಮಟ್ಟಿಗೆ ಈ ನಾಡಿನಲ್ಲಿ, ಮಹಿಳಾ ಸಾಹಿತಿಯೊಬ್ಬರ ಸಿದ್ಧಿ, ಸಾಧನೆ ಸ್ಮರಿಸಿ, ಸಮರ್ಪಿಸುತ್ತಿರುವ ಮೊದಲ ಅಭಿನಂದನ ಗ್ರಂಥವಿದು. 'ಭಾರತಿ' ಅವರ ಬಂಗಾರದ ಬಾಳಿನ ಸಮ್ಯಕ್ ದರ್ಶನ, ಅವರ ಕೃತಿಗಳ ಮೌಲ್ಯ ನಿರೂಪಣೆ, ಜೊತೆಗೆ ಅವರು ಬರೆದಿರುವ ಲೇಖನಗಳು, ಗ್ರಂಥ ವಿಮರ್ಶೆ, ಎರಡು ಏಕಾಂಕ ನಾಟಕಗಳು, ಹಲವು ಹಾಡುಗಳ ಪ್ರಕಟಣೆ–ಈ ಗ್ರಂಥದ ಮೌಲ್ಯವನ್ನು ಹೆಚ್ಚಿಸಿವೆ.

ಈ ಅಭಿನಂದನ ಗ್ರಂಥದಲ್ಲಿ ಅಲ್ಲಲ್ಲಿ, ಲೇಖನಗಳ ಕೊನೆಗೆ ಪ್ರಕಟವಾಗಿರುವ ನಾಲ್ಕು ಸಾಲಿನ ಪದ್ಯಗಳನ್ನು (ಲಿಮರಿಕ್ಸ್) ರಚಿಸಿರುವವರೂ 'ಭಾರತಿ'. ಇವು ಭಾರತಿ ಅವರ ಜೀವನ ದೃಷ್ಟಿ, ಜೀವನಾನುಭವಗಳಿಗೆ ಸಾಕ್ಷಿಯಾಗಿವೆ. ಮೂರು ಭಾಗಗಳ ಮೊದಲಲ್ಲಿ ಅಚ್ಚಾಗಿರುವ 'ನಾಂದಿ' ಪದ್ಯಗಳೂ ಭಾರತಿ ಅವರಿಗೆ ಈ ನಾಡು ನುಡಿ ಬಗೆಗಿರುವ ಭಕ್ತಿಯ ಸಂಕೇತಗಳಾಗಿವೆ.

ಈ ಗ್ರಂಥ ಕನ್ನಡ ನಾಡಿನ ಹಿರಿಯ ಲೇಖಕಿಯೊಬ್ಬರ ಸಿದ್ಧಿ-ಸಾಧನೆ-ಜೀವನ ದರ್ಶನಗಳ ಪರಿಚಯ ಮಾಡಿಕೊಡುವುದರಲ್ಲಿ ಸ್ವಲ್ಪ ಮಟ್ಟಿಗಾದರೂ ನೆರವಾಗುತ್ತದೆಂದು ನಂಬಿದ್ದೇನೆ.

—ಹೆಚ್. ಎಸ್. ಪಾರ್ವತಿ

ನಮೋಽಸ್ತುಭ್ಯಃ

'ಭಾರತಿ' (ಶ್ರೀಮತಿ ತಿರುಮಲೆ ರಾಜಮ್ಮ) ಸನ್ಮಾನ ಸಮಿತಿ, 'ಭಾರತಿ' ಯವರ ನಾಡು, ನುಡಿ ಮತ್ತು ಕಲಾತ್ಮಕ ಪ್ರತಿಭೆಯನ್ನು ಗುರುತಿಸುವ ಕರ್ತವ್ಯ ನಿಷ್ಠೆಯಿಂದ ರೂಪುಗೊಂಡಿತು. ಈ ಸಂದರ್ಭದಲ್ಲಿ ಅಭಿನಂದನ ಗ್ರಂಥವನ್ನು ಪ್ರಕಟಿಸಲು ನಿಶ್ಚಯಿಸಿ ನಾಡಿನ ಹಿರಿಯ ಕಿರಿಯ ಸಾಹಿತಿಗಳನ್ನು ಕೋರಿದಾಗ ಅವರು ತಮ್ಮ ಅಮೂಲ್ಯ ಲೇಖನಗಳನ್ನು ವೇಳೆಗೆ ಸರಿಯಾಗಿ ಕೊಟ್ಟು ಸಹಕರಿಸಿದರು. ಕನ್ನಡ ಅಭಿಮಾನಿಗಳು ಭಾರತಿ ಗ್ರಂಥವನ್ನು ಕೊಳ್ಳಲು ಉತ್ಸಾಹ ತೋರಿಸಿ ಉಪಕರಿಸಿದರು.

ಭಾರತಿ ಗ್ರಂಥ ಮುದ್ರಣ ಸಮಯದ ವೇಳೆಗೆ ಉಳಿದಿದ್ದ ಅತ್ಯಲ್ಪ ಕಾಲದಲ್ಲಿ ಮುಗಿಯಲು ಹಗಲು ರಾತ್ರಿ ಶ್ರಮಿಸಿದರು ಯುಗಾಂತರ ಪ್ರೆಸ್‌ನ ಎಂ. ಎಸ್. ನಾಗರಾಜ್. ಈ ಮುದ್ರಣಾಲಯದ ನೌಕರ ವರ್ಗದವರ ಸಹನೆ ಅಪಾರ. ಗ್ರಂಥದ ಮುದ್ರಣ ರೂಪುರೇಷೆಗಳನ್ನು ನೋಡಿಕೊಂಡು ಅವಿಶ್ರಾಂತವಾಗಿ ಒಪ್ಪನೋಡಿದ ಭಾರ್ಗವ ಅವರ ಅಭಿಮಾನವನ್ನು ಮರೆಯಲಾಗದು. ಈ ಎಲ್ಲಾ ಸಾಹಸದ ಸೂತ್ರ ಚಾಲಕರು ಹೆಚ್. ವಿ. ನಾರಾಯಣ್. ಇದಲ್ಲದೆ ಪರೋಕ್ಷವಾಗಿ, ಪ್ರತ್ಯಕ್ಷವಾಗಿ ಸಹಾಯ ಮಾಡಿದ ಸಕಲರಿಗೂ ವಂದನೆಗಳು.

'ಭಾರತಿ' (ಶ್ರೀಮತಿ ತಿರುಮಲೆ ರಾಜಮ್ಮ) ಸನ್ಮಾನ ಸಮಿತಿ, ಬೆಂಗಳೂರು
ಸಂಚಾಲಕ : ನಾ.ಕೃ. ಸತ್ಯನಾರಾಯಣ; ಸದಸ್ಯರು : ಹೆಚ್.ಎಸ್. ಪಾರ್ವತಿ, 'ನಿರುಪಮಾ', ಎಸ್. ಪ್ರಮೀಳಾ, ಹೆಚ್. ವಿ. ನಾರಾಯಣ್, ಸೂರ್ಯನಾರಾಯಣ ಚಡಗ, ಮಾವಿನಕೆರೆ ರಂಗನಾಥನ್, ಅರಳುಮಲ್ಲಿಗೆ ಪಾರ್ಥಸಾರಥಿ, ಈಶ್ವರಚಂದ್ರ; ಅಭಿನಂದನ ಗ್ರಂಥ ಸಂಪಾದಕಿ : ಹೆಚ್. ಎಸ್. ಪಾರ್ವತಿ.

ಭಾರತಿ ಗ್ರಂಥ ತರಂಗ

ತರಂಗ ★ ಬಾಳು – ಬಂಗಾರ

ತರಂಗ ★ ★ ಕೃತಿ – ಮೌಲ್ಯ

ತರಂಗ ★ ★ ★ ಭಾರತಿ : ಕೃತಿಸಂಪದ

P. KODANDA RAO

'ALOHA'
26, SRI KRISHNA RAO ROAD
BASAVANAGUDI, BANGALORE-4

October 28, 1972

Dear friends,

Cordial Greetings and best wishes from Mrs. Rao and myself. We were very pleased to learn that Smt. Rajamma is to be honoured for her services to literature and music. May we offer her our sincere felicitations there on...


with kind regards,

yours sincerely
P. Kodanda Rao

ತರಂಗ ★

ಆವಳ್ ವಾಗ್ವಧುವಿಂದೆ ಮಾನಿತಳ್ ಸೇವಾನಂದ ಚಿತ್ಸೌಖ್ಯಮಂ
ಆವಳ್ ಗಂಗ ಕದಂಬ ಸಾಳ್ವ ಯದು ರಟ್ಟರ್ ಪ್ರೊಯ್ಸಳರ್ಗಿತ್ತು ಸ-
ದ್ಭಾವಾತೀತ ವಿಚಿತ್ರ ಶಿಲ್ಪಕಲೆಯಿಂ ಸಾಹಿತ್ಯ ಸಂಪತ್ತಿನಿಂ-
ದಾವಳ್ ಶೋಭಿಸಳಾ ಧರಿತ್ರಿಗನಿಶಂ ಭದ್ರಂ ಶುಭಂ ಮಂಗಳಂ ||

ಬಾಳು: ಬಂಗಾರ




'ಭಾರತಿ'–ಹಸ್ತಾಕ್ಷರ

ಕೃತಕೃತ್ಯ 'ಭಾರತಿ'



'ಉಚ್ಚಳಿಯದಿರಲಿ ನಿನ್ನ ವಿಭವವೆಂದೆಂದು'

'ಭಾರತಿ' ಕುಟುಂಬ




'ಭಿನ್ನ ಸ್ವಭಾವಗಳ ಅನ್ಯೋನ್ಯ
ಭಾವದಾ ಪರಿಪೂರ್ಣ ಸಿದ್ಧಿಯಲಿ
ಪ್ರೇಮ ವಿಜಯಿಸಿತು'

ಸನ್ಮಾನಿತೆ 'ಭಾರತಿ'



೧೯೬೮ ರಲ್ಲಿ ರಾಜ್ಯ ಸಾಹಿತ್ಯ ಅಕಾಡಮಿ ಸನ್ಮಾನ. ಶ್ರೀಮತಿ ಜಿ. ಎಸ್. ಪಾಠಕ್ ಅವರಿಂದ ಪ್ರಶಸ್ತಿ ಪ್ರದಾನ.

ಸಾಹಿತ್ಯ ಸಂಪನ್ನವೃಂದ



ಸಿಂಪಿ ಲಿಂಗಣ್ಣ, ಶಂ. ಬಾ. ಜೋಶಿ,
'ಭಾರತಿ' (ತಿರುಮಲೆ ರಾಜಮ್ಮ),
ಶಿವರಾಮ ಕಾರಂತ, ಎಂ. ಮರಿಯಪ್ಪ ಭಟ್ಟ,
ಡಿ. ಎಲ್. ನರಸಿಂಹಾಚಾರ್

‘ ಭಾರತಿ: ಸಂಗೀತ ಭಾರತಿ ’



‘ ಭಾವಕ್ಕೆ ತಕ್ಕ ತಾಳವೂ ರಾಗವೂ ಉಂಟು ’

ನನ್ನ ಪತ್ನಿ ಭಾರತಿ

ತಿ. ತಾ. ಶರ್ಮ

ಪ್ರಥಮ ಸಂಗ್ರಾಮಾರಂಭದ ಘೋರ ವಾದ್ಯಗಳಾಗುತ್ತಿದ್ದುವು. ಆಗ ಹಾಸನದ ಹೊಸ ಬಡಾವಣೆಯ ಮನೆಯೊಂದರಲ್ಲಿ ಮಂಗಳವಾದ್ಯಗಳು ಮೊಳಗುತ್ತಿರಲು 'ರಾಜಿ'ಯೊಂದಿಗೆ ನನ್ನ ವಿವಾಹವಾಯಿತು. ಮುಂದೆ 'ಭಾರತಿ'ಯಾಗುವಳೆಂದು ಬಲ್ಲವರು ಯಾರು? ಹಸೆಯ ಮೇಲೆ, ಓರೆಗಣ್ಣಿಂದ, ಹೊಗೆಯ ಕಣ್ಣಿಂದ 'ಧರ್ಮಪತ್ನಿ'ಯನ್ನು ನೋಡಿದೆ. ಸಂತೋಷಪಟ್ಟೆ.

ಈ 'ಹುಡುಗಿ' ಓದುತ್ತಿದ್ದ ಶಾಲೆಗೆ ಸರ್ಕಲ್ ಇನ್ಸ್ಪೆಕ್ಟರ್ ಶ್ರೀನಿವಾಸರಾಯರು ಬರುವರೆಂದು ವ್ಯವಸ್ಥಾಪಕರು ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ಅದರ ಅಂಗವಾಗಿ ಶಾಲಾ ಬಾಲಕಿಯರೆಲ್ಲ "ಸಾವಿತ್ರೀ" ನಾಟಕವನ್ನಾಡಿದರು. ಆ ನಾಟಕ ನೋಡಲು ನಾನೂ ಹೋಗಿ, ಗ್ಯಾಲರಿಯಲ್ಲಿ ಕೂತಿದ್ದೆ.

ನಾಟಕ ಪ್ರಾರಂಭವಾಯಿತು; ನಾಯಕಿ ಪ್ರವೇಶವಾಗಬೇಕು. ಪರದೆ ಮೇಲಕ್ಕೆ ಏಳವೊಲ್ಲದು. ಸಾವಿತ್ರಿಯ ಪಾತ್ರಧಾರಿ ನೇಪಥ್ಯದಲ್ಲಿ ಏನೋ ಕೊಂಚ 'ತಕರಾರ್' ಮಾಡುತ್ತಿರುವ ಹಾಗೆ ಪುಕಾರ್ ಹರಡಿತು. ಪ್ರೇಕ್ಷಕರ ಗುಂಪಿನಲ್ಲಿ ಗಂಡ ಬಂದು ಕೂತಿದ್ದಾನೆ. "ಈ ಪ್ರೇಕ್ಷಕ ಹೊರಗೆ ಹೋಗುವುದೆ? ಸಾವಿತ್ರೀ ರಂಗ ಪ್ರವೇಶ ಮಾಡುವುದೆ?" ಈ ವಾದವಾಗಿ "ಪ್ರೇಕ್ಷಕನೂ ಕೂಡಬಹುದು, ಸಾವಿತ್ರೀ ಪ್ರವೇಶವೂ ಆಗಬಹುದು" ಎಂದು ತೀರ್ಮಾನವಾಯಿತು. ರಂಗಭೂಮಿಯ ಮೇಲೆ "ಸಾವಿತ್ರೀ ಪಾತ್ರಧಾರಿಣಿ"ಯನ್ನೂ ಕಂಡೆ. ಆಗ ಆದ ಆನಂದ ಮಾತಿಗೆ ನಿಲುಕುವಂತಹುದಲ್ಲ.

ನಾಟಕ ಮುಗಿದ ಕೂಡಲೆ ಸರ್ಕಲ್ ಇನ್ಸ್ಪೆಕ್ಟರ್ ಶ್ರೀನಿವಾಸರಾಯರೆದ್ದು ಭಾಷಣ ಮಾಡುತ್ತ ನಾಟಕದಲ್ಲಿ ಭಾಗವಹಿಸಿದವರನ್ನೆಲ್ಲ ಅಭಿನಂದಿಸಿ "ಸಾವಿತ್ರೀ ಪಾತ್ರವನ್ನು ನಿರ್ವಹಿಸಿದ ಈ ಹೆಣ್ಣು ಮಗು ಮುಂದೆ ಬಹಳ ಕೀರ್ತಿಶಾಲಿಯೆನಿಸುತ್ತಾಳೆ. ಕಲೆಯೆಂಬುದು ಈ ಮಗುವಿನ ವಶವಾಗಿದೆ. ಬಹಳ ಪ್ರವರ್ಧಮಾನಕ್ಕೆ ಬರುತ್ತಾಳೆ" ಇತ್ಯಾದಿಯಾಗಿ ಹೇಳಿ, ಆಶೀರ್ವಾದ ಮಾಡಿದರು.

ದೀರ್ಘದಂಡ ಪ್ರಣಾಮ ಮಾಡಿದ ಪಂಜೆ ಮಂಗೇಶರಾಯರು

ನಾನು ಪುರಾತನ ಶಿಲಾಶಾಸನಗಳ ಅನ್ವೇಷಣ, ಅಧ್ಯಯನ, ಸಂಶೋಧನ ನಡೆಸುವ ಕಚೇರಿಯಲ್ಲಿ ಕೆಲಸಕ್ಕೆ ಸೇರಿದೆ. ಮದರಾಸಿನಲ್ಲಿ ಸ್ವರ್ಗವಾಸಿ ಹೊಸಕೋಟೆ ಕೃಷ್ಣಶಾಸ್ತ್ರಿಗಳು ಅಧಿಕಾರಿಗಳು. ಪುರಸುವಾಕಂನಲ್ಲಿ, ವೆಳ್ಳಾವೀಧಿಯಲ್ಲಿ ಸತಿಪತಿಗಳಿಬ್ಬರೂ ಸಂಸಾರ ಹೂಡಿದೆವು. ಆ ಬೀದಿ ನಮ್ಮ ಕಾರ್ಯಾಲಯಕ್ಕೆ ಸಮೀಪವಾಗಿತ್ತು. ಅಲ್ಲದೆ ನಮ್ಮ ಕಚೇರಿಯ ಒಬ್ಬಿಬ್ಬರೂ ಅದೇ ಬೀದಿಯಲ್ಲೇ ವಾಸವಾಗಿದ್ದರು. ಸಮೀಪದಲ್ಲೇ ಸ್ವರ್ಗವಾಸಿ ಬೆನಗಲ್ ರಾಮರಾಯರ ಮನೆಯೂ ಇತ್ತು. ಬೆನಗಲ್ ರಾಮರಾಯರ ಮೂಲಕವಾಗಿ ಪಂಜೆ ಮಂಗೇಶರಾಯರ ಪರಿಚಯವಾಯಿತು. ಕೆಲವೇ ದಿನಗಳಲ್ಲಿ ಪಂಜೆಯವರು ಮನೆಗೆ ಬಂದರು. ನಾವಿಬ್ಬರೂ ಅವರಿಗೆ ಸ್ವಾಗತವಿತ್ತೆವು. ಆಗ ಆ ಹಿರಿಯರು, ಕನ್ನಡ ನಾಡಿನ ಮಹಾವಿದ್ವಾಂಸರು, ಏನು ಮಾಡಿದರು ಗೊತ್ತೆ? ದೀರ್ಘದಂಡ ಪ್ರಣಾಮ ಮಾಡಿದರು! ನಮಗಾದರೂ ಸಂಕೋಚ ಮಾತ್ರವಲ್ಲ ಮನಸ್ಸಿಗೆ ಬಹಳ ನೋವಾಯಿತು. ಆಗ ನನ್ನಾಕೆ,

> " ರಾಯರೆ! ತಮ್ಮಂತಹ ಹಿರಿಯರು ಹೀಗೆ ಮಾಡುವುದು ನ್ಯಾಯವಲ್ಲ. ಕಿರಿಯರನ್ನು ತಾವು ತುಂಬು ಹೃದಯದಿಂದ ಹರಸಬೇಕು. ತಮ್ಮಂತಹ ಹಿರಿಯರ ಆಶೀರ್ವಾದ ಬಲದಿಂದ ನಾವು ಬೆಳೆಯಬೇಕು; ಯೋಗ್ಯರು ಅನ್ನಿಸಿಕೊಳ್ಳಬೇಕು"

ಅಂದರು. ಆಗ ಪಂಜೆಯವರು ನಗುತ್ತ, ನಗುತ್ತ,

> " ಇದರಲ್ಲಿ ಅಪಚಾರವೇನೂ ಇಲ್ಲ. ಎಂತಹ ಕಿರಿಯರು ನೀವು; ಅದೆಂತಹ ಕಲಾವಿದರು! ಅತ್ತ ನೋಡಿದರೆ ಚಿತ್ರಗಳು, ಇತ್ತ ನೋಡಿದರೆ ವೀಣೆ! ಎಲ್ಲ ಅಚ್ಚುಕಟ್ಟು, ಸವಿಮಾತು, ಉತ್ತಮ ಸಂಸ್ಕಾರ "

ಅನ್ನುತ್ತಾ ಕೂತರು. ಆ ದಿನದ, ಆ ಸಮಯದ, ಪಂಜೆಯವರ ನಡೆ ನುಡಿಯ, ಅನುಭವ ಅವರ್ಣನೀಯ. ಪಂಜೆಯವರಂದು ಕೂತು ಮಾತನಾಡಿದ್ದೆಲ್ಲ ನನ್ನಾಕೆಯೊಂದಿಗೇ! " ಸಮಾನ ಪುಕ್ಕದ ಹಕ್ಕಿಗಳು! ಸಹಜವಾಗಿಯೇ ಇದೆ" ಅಂದೆ ನಾನು. ಮೂವರೂ ನಕ್ಕೆವು. ಆ ದಿನದ ಪಂಜೆಯವರ 'ನಗು'ವನ್ನು ನಾನು ಎಂದೆಂದಿಗೂ ಮರೆಯುವ ಹಾಗಿಲ್ಲ. ಅವರು ಹೊರಟು ಹೋದಮೇಲೆ " ಪಂಜೆಯವರಿಗೂ, ಮಗುವಿಗೂ, ಏನು ವ್ಯತ್ಯಾಸ" ಅಂದರು ನನ್ನಾಕೆ. ಮಕ್ಕಳಿಗೆ ಪಾಠ ಹೇಳಿ, ಮಕ್ಕಳಿಗಾಗಿ ಕವಿತ್ವ ಮಾಡಿ, ಕಥೆ ಬರೆದು, ಜನ್ಮಸಾರ್ಥಕ ಮಾಡಿಕೊಂಡವರು ಪಂಜೆ ಮಂಗೇಶರಾಯರು!

ಕಾವೇರೀ ಮಾತೆ ಕಾಪಾಡಿದಳು

ಶಾಸನಗಳ ಅನ್ವೇಷಣ ಕಾರ್ಯಕ್ಕಾಗಿ ಸೇಲಂ ಜಿಲ್ಲೆಯ ಧರ್ಮಪುರಿಗೆ ಹೊರಟೆವು. ಸತೀದ್ವಿತೀಯನಾಗಿ ನಾನು, ನನ್ನ ಹಿರಿಯ ಅಧಿಕಾರಿ ಕೃಷ್ಣಮಾಚಾರ್ಯರು (ಅನಂತರ ಅವರು 'ರಾವ್ ಬಹದ್ದೂರ್' ಆದರು) ಅವರ ಪತ್ನಿ, ಸಹೋದರಿ. ಐದು ಮಂದಿಯೂ ಪ್ರಯಾಣ ಮಾಡಿದೆವು. ಧರ್ಮಪುರಿಯಲ್ಲಿ ಕೆಲಸ ಮುಗಿಸಿ ಹತ್ತಿರದ ಪೆನ್ನಾಗರಕ್ಕೆ ಹೋದೆವು. ಹತ್ತಿರದಲ್ಲೇ ಹಳೇಪುರದ ಬಳಿ ಮೇಕೆದಾಟು! ಕಾವೇರಿ ಸ್ನಾನಕ್ಕಾಗಿ ಹೋದೆವು. ಹೆಂಗಸರು ಮೂವರೂ ನದಿಗೆ ಇಳಿದರು. ನಾನು ದೂರದಲ್ಲಿ ಮರಳಲ್ಲಿ ಬಿದ್ದುಕೊಂಡೆ. ಇದ್ದಕ್ಕಿದ್ದ ಹಾಗೆ ಹೆಂಗಸರ ಆರ್ತಾಲಾಪ ಕೇಳಿ ಬಂತು. ನೀರಿನ ಸುಳಿಗಳಿಗೆ ಸಿಕ್ಕಿದ್ದಾರೆ ನಾರಿಯರು; ಕಾಲುಗಳ ಕೆಳಗಿನ ಮರಳು ಕಡಿದು ಅವರು ನಿಸ್ಸಹಾಯಕರಾಗಿದ್ದಾರೆ. ನಾನು ಕೈಗಳನ್ನು ಮೇಲಕ್ಕೆಸೆದು, ದಿಕ್ಕು ಕಾಣದೆ, ನಿಂತಿದ್ದೇನೆ. ಕಾವೇರೀ ಮಾತೆಯ ಕೃಪೆ! ದಡದ ಕಡೆಗಿದ್ದವರೊಬ್ಬರು ಸೀರೆಯನ್ನೆಸೆದರು. ಸೆಳೆತಕ್ಕೆ ಸಿಕ್ಕಿದವರು ಸೀರೆಯನ್ನು ಹಿಡಿದು, ಹೇಗೋ ದರಂತದಿಂದ ಪಾರಾಗಿ ದಡ ಸೇರಿದರು! ಒಂದುವೇಳೆ ಆಗಬಾರದ್ದೇನಾದರೂ ಆಗಿದ್ದರೆ ಈ 'ಭಾರತಿ'ಯ ವೀಣಾ ವಾದನವನ್ನು ಬಾಪೂಜಿ ಕೇಳುತ್ತಿದ್ದರೆ? 'ತಪಸ್ವಿನೀ', 'ಮಹಾಸತಿ'ಗಳ ಸೃಷ್ಟಿಯಾಗುತ್ತಿತ್ತೆ?

'ಭಾರತಿ' ಕಾವ್ಯನಾಮ

ಮಂಗಳೂರು ಜಿಲ್ಲೆಯಲ್ಲಿ ಎರಡು ಮೂರು ಸಲ ಪ್ರವಾಸ ಮಾಡಿದ್ದೇವೆ. ಒಮ್ಮೆ ನಾವು ಮಂಗಳೂರಲ್ಲಿ, ಸೆಂಟ್ಲೆಂಡ್ ಪೇಟೆಯಲ್ಲಿ ಮನೆಮಾಡಿ ಸುಮಾರು ಒಂದು ತಿಂಗಳಿದ್ದೆವು ಅಲ್ಲಿ. ಮನೆ ಎದುರಿಗೇ ಅಯ್ಯರ್ ಸಹೋದರರು ಮೂವರಿದ್ದರು. ಅವರಂತೂ ನನ್ನಾಕೆಯ ವೀಣಾವಾದನದಿಂದ ಪಟ್ಟ ಸಂತೋಷಕ್ಕೆ ಪಾರವೇ ಇಲ್ಲ. ಆಗ ಅವರಲ್ಲೊಬ್ಬರು ತೆಗೆದ 'ವೀಣಾವಾದಿನೀ' ಫೋಟೋ ನೋಡಿದಾಗಲೆಲ್ಲ ಮಂಗಳೂರಲ್ಲಿ ಕಳೆದ ದಿನಗಳು ನೆನಪಿಗೆ ಬರುತ್ತವೆ.

ಕೃಷ್ಣಮಾಚಾರ್ಯರಿಗಂತೂ ನನ್ನಾಕೆಯ ಮೇಲೆ ಅಪಾರ ಅಭಿಮಾನ. ಅವರ ವೀಣಾವಾದನ ಕೇಳಿ ಹೆಮ್ಮೆಪಟ್ಟಿದ್ದಾರೆ. ಅವರ ಸಾಹಿತ್ಯ ಸೃಷ್ಟಿ ಕಂಡು, ತಲೆದೂಗಿ "ಭಾರತೀ" ಎಂಬ 'ಕಾವ್ಯನಾಮ' ಕೊಟ್ಟವರು ಅವರೆ!

ಕೆಲಸ ಹೋದರೆ ಹೋಗಲಿ

ಅನಂತಪುರ ಜಿಲ್ಲೆಯ ಸಂಚಾರವನ್ನು ಆರಂಭಿಸಿದೆವು. ಗುತ್ತಿಯಲ್ಲಿದ್ದೇವೆ. ರೈಲ್ವೆ ಸ್ಟೇಷನ್‌ಬಳಿ ಮುಸಾಫರ್ ಖಾನೆಯಲ್ಲಿ ಬಿಡಾರ. ಬೆಟ್ಟದ ಮೇಲೆ ಶಿಲಾ ಶಾಸನಗಳನ್ನು ಓದುವ ಕೆಲಸ. ಬೇಗನೆ ಕೆಲಸಗಳನ್ನೆಲ್ಲ ಮುಗಿಸಿ ನಾನು ಬೆಟ್ಟಕ್ಕೆ

[illegible]
ಇಬ್ಬರೂ ಕೂತು ಊಟ ಮಾಡಬೇಕು.

ಒಂದುದಿನ ಅವರು ಬೆಟ್ಟಿಪತ್ತಿ ಅಂಚೆ ಮೂಲಕ ತಮ್ಮ ಹೆಸರಿಗೆ ಬಂದಿದ್ದ ಪತ್ರವನ್ನು ಕೊಟ್ಟರು. ಅಹಮದಾಬಾದಿನಿಂದ 'ಅಖಿಲ ಭಾರತ ಸಂಗೀತ ಸಮ್ಮೇಳನ'ಕ್ಕೆ ಶ್ರೀಮತಿಯವರಿಗೆ ನೀಡಿದ್ದ ಆಹ್ವಾನ ಪತ್ರ. [illegible] ವರ್ಷದ ಕಾಂಗ್ರೆಸ್ ಅಧಿವೇಶನದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮಗಳಲ್ಲಿ ಇದೂ ಒಂದು.

ಅವರು—ಅಹಮದಾಬಾದಿಗೆ ಹೋಗೋಣ.

ನಾನು—ಆಗಬಹುದು. ಅಲ್ಲಿ ನಡೆಯುವುದು ಕಾಂಗ್ರೆಸ್. ನಾನು ಸರಕಾರಿ ಉದ್ಯೋಗಿ.

ಅವರು—ಆದರೆ ಏನಾಯಿತು? ನಾವು ಕಾಂಗ್ರೆಸ್ ಪ್ರತಿನಿಧಿಗಳಾಗಿ ಹೋಗುತ್ತೇವೆಯೇ? ನಾನು ಸಂಗೀತ ಸಮ್ಮೇಳನಕ್ಕೆಂದು ಹೋಗುತ್ತೇನೆ. ಅಲ್ಲಿ ಲಕ್ಷಗಟ್ಟಲೆ ಮಂದಿ ಬಂದಿರುತ್ತಾರೆ. ಅವರಲ್ಲಿ ನೀವೂ ಒಬ್ಬರು.

ನಾನು— ನಿಜ. ಯಾವ ಯಾವ ಪ್ರಾಂತ್ಯದಿಂದ, ರಾಜ್ಯದಿಂದ, ಸರಕಾರಿ ಅಧಿಕಾರಿಗಳೂ, ನೌಕರರೂ, ಅಹಮದಾಬಾದ್ ಕಾಂಗ್ರೆಸಿಗೆ ಬಂದಿರುತ್ತಾರೆಂದು ಕಂಡುಹಿಡಿಯಲು ನೂರಾರು ಮಂದಿ ಸಿ. ಐ. ಡಿ. ಗುಪ್ತ-ಗೂಢಚಾರರು ಬಂದಿರುತ್ತಾರೆ. ಅವರೇನಾದರೂ ನನ್ನನ್ನು ಗುರುತಿಸಿದರೋ ನನ್ನ ಕಪಾಳಕ್ಕೆ ಕಲ್ಲು ಬಿತ್ತು! ಮೊದಲು ಇದನ್ನು ಕುರಿತು ಆಲೋಚನೆ ಮಾಡು.

ಅವರು—ಇಷ್ಟೇ ತಾನೇ; ಹೋದರೆ ಹೋಗಲಿ. ಇಂತಹ ಅವಕಾಶ ನಮಗೆ ಇನ್ನು ಯಾವಾಗ ಸಿಗಬೇಕು? ನಡೀರಿ ಅಂದ್ರೆ ಹೋಗೋಣ.

ಆಯಿತು ನಿಶ್ಚಯ; ಪ್ರಯಾಣ ಮಾಡಿದ್ದಾಯಿತು ಗುತ್ತಿ ರೈಲ್ವೆ ನಿಲ್ದಾಣದಲ್ಲೇ ರೈಲ್ವೆ ಗಾಡಿಗಳಲ್ಲಿ ತುಂಬಿದ್ದ ಆಂಧ್ರ ಪ್ರಾಂತ್ಯದ ಕಾಂಗ್ರೆಸ್ ಯಾತ್ರಿಕರು ನಮ್ಮಿಬ್ಬರನ್ನೂ ಒಂದು ಗಾಡಿಯೊಳಕ್ಕೆ ಎಳೆದುಕೊಂಡೇಬಿಟ್ಟರು! ಅಹಮದಾಬಾದ್ ಸೇರಿದೆವು.

ಸ್ವಾಮಿ ಶ್ರದ್ಧಾನಂದಜಿಯವರ ಆಶೀರ್ವಾದ

ನಾನು ಸರಕಾರಿ ಉದ್ಯೋಗಿ; ಎಚ್ಚರಿಕೆಯಿಂದ ಓಡಾಡುತ್ತಿದ್ದೆ. ಶ್ರೀಮತಿಯವರಾದರೋ ಇಲ್ಲಿ, ಅಲ್ಲಿ, ಎಲ್ಲೆಲ್ಲೂ, ಇದ್ದಾರೆ. ಆಂಧ್ರ, ಕರ್ನಾಟಕ ಪ್ರಾಂತ್ಯ ಪ್ರತಿನಿಧಿಗಳನ್ನೆಲ್ಲ ಪರಿಚಯ ಮಾಡಿಕೊಂಡಿದ್ದಾರೆ! ಎರಡೂ ಪ್ರಾಂತ್ಯದವರ 'ಪ್ರಭಾತ ಭೇರಿ' ಗಳಲ್ಲೂ ಭಾಗವಹಿಸಿ ರಾಷ್ಟ್ರಗೀತೆಗಳನ್ನು ಹಾಡುತ್ತಿದ್ದಾರೆ. ಸಭೆಗೆ ಹೋಗಿ ಗಾಂಧೀಜಿಯವರ ಭೇಟಿ ಮಾಡಿದರು. ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಿ ವೀಣೆ ಬಾರಿಸಿ, ಮಹಾ ಮಹಾ ಕಲಾವಿದರಿಂದ 'ಭೇಷ್! ಭಲಾ!' ಅನ್ನಿಸಿಕೊಂಡರು. ಹಿರಿಯ ಗವಾಯಿಗಳೊಬ್ಬರು ಬಿಡಾರಕ್ಕೆ ಬಂದು ಶ್ರೀಮತಿಯವರ ವೀಣಾವಾದನ ಕೇಳಿದರು. ತಾವೂ ಹಾಡಿದರು, ಸಂತೋಷಪಟ್ಟರು!

ಒಂದು ದಿನ ಮೈಸೂರ ಸಂಗೀತ ಸಮ್ಮೇಳನದ ಪ್ರತಿನಿಧಿಗಳ ಬಿಡಾರದಿಂದ ಕಾಂಗ್ರೆಸ್ ನಗರದ ಕಡೆಗೆ ಹೋಗುತ್ತಿದ್ದೇವೆ, ನಮ್ಮ ಮಾತು ಕತೆಗಳಲ್ಲಿ ಮೈ ಮೇಲೆ ಎಚ್ಚರವೇ ಇಲ್ಲ. ದೊಡ್ಡದೊಂದು ವೇಗವಾಹನ-ಕಾರು ಧಾವಿಸಿ ಬರುತ್ತಿದೆ ಹಿಂದೆ. ಎದುರಾಗಿ ಸ್ವಾಮಿ ಶ್ರದ್ಧಾನಂದಜಿಯವರು ಬರುತ್ತಿದ್ದಾರೆ. ನಾವಿಬ್ಬರೂ ದುರಂತದಲ್ಲಿ ಮುಗಿಯಬಹುದಾದ ಸಂದರ್ಭವನ್ನವರು ಕಂಡುಕೊಂಡು, ಕ್ಷಣ ಮಾತ್ರದಲ್ಲಿ ನಮ್ಮಿಬ್ಬರನ್ನೂ ಬಾಚಿ ತಬ್ಬಿಕೊಂಡು, ರಸ್ತೆಯ ಪಕ್ಕಕ್ಕೆ ಎಳೆದು ನಿಲ್ಲಿಸಿದರು. ವಾಹನ ಮುಂದೆ ಓಡಿತು.

ಸ್ವಾಮಿಜಿ—ನೀವು ಯಾರು, ಎಲ್ಲಿಂದ ಬಂದಿದ್ದೀರಿ?

ನಾನು —ನಾವು ಸಂಗೀತ ಸಮ್ಮೇಳನಕ್ಕೆ ಬಂದಿದ್ದೇವೆ.

ಸ್ವಾಮಿಜಿ—ಈ ನನ್ನ ತಂಗಿ ಯಾರು?

ನಾನು —ನನ್ನ ಪತ್ನಿ.

ಸ್ವಾಮಿಜಿ—ಹಾಗೇನು? ಸಂತೋಷ. ನಿಮ್ಮನ್ನು ಅಭಿನಂದಿಸುತ್ತೇನೆ. ನೀವೆಲ್ಲಿಂದ ಬಂದಿದ್ದೀರಿ?

ನಾನು —ಮೈಸೂರು ಸಂಸ್ಥಾನದಿಂದ, ಬೆಂಗಳೂರಿನಿಂದ.

ಸ್ವಾಮಿಜಿ—ಹೌದೇನು, ಬಹಳ ಸಂತೋಷ. ಅಯ್ಯಾ! ನೀನು ನಿನ್ನ ಚಿಕ್ಕ ವಯಸ್ಸಿಗೆ ಹೆಂಡತಿಗೆ ಕಾಂಗ್ರೆಸ್ಸಿನ ತೀರ್ಥಕ್ಷೇತ್ರಕ್ಕೆ ಯಾತ್ರೆ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀಯೆ. ಕಾಶಿ, ರಾಮೇಶ್ವರಗಳಿಗಲ್ಲ ಇನ್ನು ಮೇಲೆ ಯಾತ್ರೆ ಮಾಡಬೇಕಾದ್ದು, ಕಾಂಗ್ರೆಸ್ ಅಧಿವೇಶನ ಕ್ಷೇತ್ರಕ್ಕೆ. ಭಾರತದಲ್ಲಿ ತರುಣರೆಲ್ಲ ನಿನ್ನಂತೆಯೆ ತಾವು ಕೈ ಹಿಡಿದವರಿಗೆ ಇಂತಹ ಅವಕಾಶವನ್ನು ಕಲ್ಪಿಸಿದರೆ ಎಷ್ಟು ಚೆನ್ನಾಗಿದ್ದೀತು! ದೇವರ ಪೂರ್ಣ ಅನುಗ್ರಹ ನಿಮ್ಮಿಬ್ಬರ ಮೇಲೂ ಇದೆ.

ನಗೆಮೊಗದಿಂದ, ವಾತ್ಸಲ್ಯ ಹೃದಯದಿಂದ, ಮಧುರ ವಾಣಿಯಿಂದ, ಸ್ವಾಮಿ ಶ್ರದ್ಧಾನಂದರು ನಮ್ಮನ್ನು ಆಶೀರ್ವಾದ ಮಾಡಿದರು. ಆ ಸಮಯವನ್ನು ಸ್ಮರಿಸಿಕೊಂಡರೆ ಇಂದಿಗೂ 'ಜನ್ಮ ಸಾರ್ಥಕವಾಯಿತು' ಅನ್ನಿಸುತ್ತದೆ.

ತಂಗಟೂರು ಪ್ರಕಾಶಂರವರ 'ಗೋದಾವರೀ' ಭವನದಲ್ಲಿ

ನನಗೆ ಉಪಕಮಂಡಲಕ್ಕೆ ವರ್ಗವಾಗುವುದಕ್ಕೆ ಮೊದಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಮೂರು ಸಲ ಸಂಚಾರ ಮಾಡಿದೆವು. ಮೊದಲನೆಯ ಸಲವೇ ಡಿ. ಕೆ. ಭಾರದ್ವಾಜರ ಸಹಾಯ ಪ್ರೋತ್ಸಾಹದಿಂದ ಶ್ರೀಮತಿಯವರು "ಸ್ವರಾಜ್ಯ ಸಂಪತ್ತು" "ನಾಮ ಕೀರ್ತನೆ" ಮೊದಲಾದ ರಾಷ್ಟ್ರಗೀತೆಗಳನ್ನು ಪ್ರಕಟಿಸಿದರು. ಆನಿಬೆಸೆಂಟ್ ಮಹಿಳಾ ವಿದ್ಯಾಶಾಲೆಗೆ ಶ್ರೀಮತಿ ಮನೋರಮಾ ಬಾಯಿಯವರು ಶ್ರೀಮತಿಯವರನ್ನು ಆಹ್ವಾನಿಸಿ, ಅಲ್ಲಿ ವೀಣಾವಾದನ ಕಾರ್ಯಕ್ರಮವನ್ನೇರ್ಪಡಿಸಿದ್ದರು.

ಉದಕಮಂಡಲದಲ್ಲಿ ಅತ್ಯುನ್ನತ ಸ್ಥಾನದಲ್ಲಿ, ಗವರ್ನರ ಭವನಕ್ಕೆ ಹಿಂದೆಯೇ ಇರುವುದು ಸ್ವರ್ಗವಾಸಿ ತಂಗಟೂರು ಪ್ರಕಾಶಂರವರ "ಗೋದಾವರೀ ಭವನ". ಇವರಿಬ್ಬರ ಮೇಲೆ ಪ್ರಕಾಶಂರವರಿಗೆ ವಿಶೇಷ ಅಭಿಮಾನ. ಅವರಿಗೂ ಅವರ ಪತ್ನಿ ಸ್ವರ್ಗಸ್ಥ ಹನುಮಾಯಮ್ಮನವರಿಗೂ, ಶ್ರೀಮತಿಯವರನ್ನು ಕಂಡರೆ ತಮ್ಮ ಮಗಳಿಗಿಂತ ಹೆಚ್ಚು ವಾತ್ಸಲ್ಯ! "ಅಮ್ಮಾಯಿ!" ಎಂದೇ ಕರೆಯುವರು. ಕೊಂಚ ಕಾಲ 'ಗೋದಾವರೀ ಭವನ'ದಲ್ಲಿ ನಮ್ಮ ವಾಸ, ಗ್ರಾಸ! ಶ್ರೀಮತಿಯವರನ್ನು ಕೂಡಿಕೊಂಡ ಗಂಡ ಹೆಂಡತಿಬ್ಬರೂ ಕನ್ನಡ ರಾಷ್ಟ್ರಗೀತೆಗಳನ್ನು ಕೇಳುವರು. "ಕನ್ನಡದಲ್ಲಿ ಗೀತೆಗಳನ್ನು ರಚಿಸಿದ್ದೀಯೆ, ತೆಲುಗಿನಲ್ಲಿ ರಚಿಸಬಾರದೇಕೆ" ಎಂದರು ಪ್ರಕಾಶಂ. ಮಾತ್ರವಲ್ಲ, ಅವರ ಕಡೆಯಿಂದ ಆ ಕೆಲಸ ಮಾಡಿಸಿದರು. ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದರು. ಉದಕಮಂಡಲವನ್ನು ಅವರು ಬಿಡುವ ದಿನ ಪ್ರಕಾಶಂ ದಂಪತಿಗಳನ್ನೂ ಅವರ ಇಬ್ಬರು ಮಕ್ಕಳನ್ನೂ ಮನೆಗೆ ಕರೆದು, ಔತಣ ಮಾಡಿ, ಸತ್ಕರಿಸಿ, ಫರ್ನ್‌ಹಿಲ್ ರೈಲ್ವೆ ನಿಲ್ದಾಣಕ್ಕೆ ಹೋಗಿ, ಅವರನ್ನು ಮದರಾಸಿಗೆ ಬೀಳ್ಕೊಟ್ಟು ಬಂದರು! ಊಟಕ್ಕೆ ಕೂತಾಗ ಶ್ರೀಮತಿಯವರ 'ಪಾಕಶಾಸ್ತ್ರ ಪ್ರಾವೀಣ್ಯತೆ' ಕುರಿತು ಪ್ರಕಾಶಂರವರು ಹೊಗಳಿದ್ದೂ ಹೊಗಳಿದ್ದೆ! ತಂಗಟೂರು ಪ್ರಕಾಶಂ ಅಂದರೆ ದೇಶ ಭಕ್ತಿಗೆ, ತ್ಯಾಗಕ್ಕೆ, ಸಂಕೇತ! "ಆಂಧ್ರ ಕೇಸರಿ" ಎಂಬುದವರ ಬಿರುದು!

ಬಾಪೂಜಿಯವರ ತನ್ಮಯತೆ

೧೯೩೧ ರಲ್ಲಿ ಅಹಮದಾಬಾದಿನಲ್ಲಿ ಶ್ರೀಮತಿಯವರಿಗೆ ಬಾಪೂಜಿಯವರ ಮೊದಲ ಪರಿಚಯ. ಪರಿಚಯ ಮಾಡಿಕೊಟ್ಟವರು ಚಕ್ರವರ್ತಿ ರಾಜಗೋಪಾಲಾಚಾರ್ಯರು; ಸರಳಾಬಾಯಿ ಚೌಧರಿಯವರು. ಬೆಳಗಾಂ ಕಾಂಗ್ರೆಸ್ಸಿಗೆ ನಾನು ನನ್ನಾಕೆಯನ್ನೇಕೆ ಕರತರಲಿಲ್ಲವೆಂದು ಕೇಳಿ, ತಾರು ಕೊಡಿಸಿ, ಅವರನ್ನು ಕರೆತರಿಸುವಂತೆ ಮಾಡಿದರು. ಬೆಂಗಳೂರಿಗೆ ಅವರು ಬಂದಾಗಂತೂ ಶ್ರೀಮತಿಯವರು ಪ್ರಾರ್ಥನೆಗೆ ಹೋಗಲೇಬೇಕು. ಪ್ರತ್ಯೇಕವಾಗಿ ಕರೆಸಿಕೊಂಡು ಹಾಡಿಸಿ, ಕೇಳಿ, ತನ್ಮಯರಾಗಿದ್ದಾರೆ. ಅವರ "ವೈಷ್ಣವ ಜನತೋ" ಕನ್ನಡಕ್ಕೆ ಭಾಷಾಂತರ ಮಾಡಿಸಿ ಹಾಡಿಸಿದ್ದಾರೆ. ಪುರಂದರ ದಾಸರ ಕೀರ್ತನೆಗಳನ್ನು ಕೇಳುವುದರಲ್ಲಂತೂ ಅಪಾರ ಆಸಕ್ತಿ ತೋರಿಸಿದ್ದಾರೆ.

ರಾಜಾಜಿಯವರ ವಾತ್ಸಲ್ಯ

ಹಾಗೆಯೇ ಶ್ರೀಮತಿಯವರನ್ನು ಕಂಡರೆ ರಾಜಾಜಿಯವರಿಗೆ ವಿಶೇಷ ವಾತ್ಸಲ್ಯ. ನಾನು ಅವರನ್ನು ಎಲ್ಲಿ, ಯಾವಾಗ, ಭೇಟಿಮಾಡಲಿ ಶ್ರೀಮತಿಯವರ ಯೋಗಕ್ಷೇಮ ಕುರಿತು ಮೊದಲಮಾತು. ಅನಂತರ ಉಳಿದದ್ದು ಎಲ್ಲದು.

ಪೋಲೀಸರಿಗೆ ನಿತ್ಯಭಯಂಕರರು

ಸ್ವಾತಂತ್ರ್ಯದ ಹೋರಾಟ ಕಾಲದಲ್ಲಿ ನನ್ನ ವಾಸದ ಮನೆಯೇ ಒಂದು 'ಕುರುಕ್ಷೇತ್ರ'. ಆ ಕ್ಷೇತ್ರಪಾಲಕರು ಶ್ರೀಮತಿಯವರು. ಈ ಮನೆ ರಾಜಕೀಯಾಪರಾಧಿಗಳ ರಹಸ್ಯ ಸ್ಥಾನವೆಂದು ಪೋಲೀಸಿನವರು ಭಾವಿಸಿ, ಮೇಲಿಂದ ಮೇಲೆ ಧಾವಿಸಿ ಬರುವರು. ಯಾವ ಹೊತ್ತಿನಲ್ಲೆಂದರೆ ಆ ಹೊತ್ತಿನಲ್ಲಿ ಬರುವರು. ಅವರಿಗೆಲ್ಲ ಶ್ರೀಮತಿಯವರು "ಹುಷಾರ್! ಕಾಂಪೌಂಡಿನೊಳಕ್ಕೆ ಕಾಲಿಟ್ಟೀರಿ" ಎಂಬ ಸವಾಲು! ರಾತ್ರಿ 'ಒಂದು ವಾರಂಟಿದೆ' ಅಂದರೆ ಕೂಡಲೆ ಅವರು, "ಬೆಳಗಾದ ಮೇಲೆ ಬಂದು ಬೇಕಾದದ್ದನ್ನು ಮಾಡಿ" ಎಂದು ಎಚ್ಚರಿಸುವರು! ಪೋಲೀಸ್ ಅಧಿಕಾರಿಗಳಿಗೆ ಸಹ ಚೆನ್ನಾಗಿ ಗೊತ್ತು, ಈ ಆಸಾಮಿ ಹತ್ತಿರ ತಮ್ಮ ಬೇಳೆಕಾಳು ಬೇಯುವುದಿಲ್ಲವೆಂಬುದು.

ವಿಶ್ವೇಶ್ವರಪುರದ ಸರ್ಕಲ್ ಸಾರ್ವಜನಿಕ ಸಭಾಧ್ಯಕ್ಷತೆಯನ್ನು ಶ್ರೀಮತಿಯವರೇ ವಹಿಸಿ, ಚಳವಳಿ ಮುಂದುವರಿಸಿದ್ದಾರೆ.

'ವಿಶ್ವ ಕರ್ನಾಟಕ'ಕ್ಕೆ ಅವರ ಸೇವೆ

ಕಡೆಯದಾಗಿ ನಾನು ಈ ಮಾತನ್ನು ಹೇಳಲೇಬೇಕು. 'ಭಾರತಿ'ಯವರ ಹೃತ್ಪೂರ್ವಕ ಸಹಕಾರವಿಲ್ಲದೆ ಇದ್ದರೆ 'ವಿಶ್ವ ಕರ್ನಾಟಕ' ಪತ್ರಿಕೆಯು ನಿರಾತಂಕವಾಗಿ ನಡೆಯುತ್ತಿರಲಿಲ್ಲ. ಈ ಪತ್ರಿಕೆಯ ನಿರ್ವಾಹ ಕಾರ್ಯದಲ್ಲಿ ಶ್ರೀಮತಿಯವರ ಪಾತ್ರವೇನೆಂಬುದು ಸಂಪಾದಕ ಶಾಖೆಯಲ್ಲಿ ಕೆಲಸಮಾಡುತ್ತಿದ್ದವರಿಗೂ, ಯಂತ್ರ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದವರಿಗೂ, ಎಲ್ಲರಿಗೂ ಚೆನ್ನಾಗಿ ಗೊತ್ತು. ಪ್ರಕಟವಾದ ಪತ್ರಿಕೆಯಲ್ಲಿ ತಪ್ಪುಗಳನ್ನು ತಿದ್ದಿ, ಆ ಪ್ರತಿಯನ್ನು ಸಹಾಯ ಸಂಪಾದಕರ ಮೇಜಿನ ಮೇಲಿಡುತ್ತಿದ್ದರು. ಮಾರನೆಯ ದಿನ ಬೆಳಿಗ್ಗೆ ಸಂಪಾದಕ ವರ್ಗದ ಸಹಾಯಕರು ಬಂದು, ಅದನ್ನು ನೋಡಿ "ನಾನು ಹುಷಾರಾಗಿರಬೇಕಪ್ಪ" ಅನ್ನುತ್ತಿದ್ದರು.

ಸರಕಾರದವರು 'ವಿಶ್ವಕರ್ನಾಟಕ'ಕ್ಕೆ ಸಾಕಾದಷ್ಟು ಕಾಗದ ಕೊಡುತ್ತಿರಲಿಲ್ಲ. ಅಲ್ಪಸ್ವಲ್ಪ ಕೊಡುತ್ತಿದ್ದರು. ಮಿಕ್ಕುದನ್ನೆಲ್ಲ ಒಂದಕ್ಕೆ ಮೂರರಷ್ಟು, ನಾಲ್ಕರಷ್ಟು ಕೊಟ್ಟು ಕಾಳ ಸಂತೆಯಲ್ಲಿ ಕೊಂಡು ತಂದು ಪೂರೈಸಬೇಕಾಗಿತ್ತು. ಕಾಗದ ಬರುವುದು ತಡವಾದರೆ ಪತ್ರಿಕೆಯು ಸಕಾಲದಲ್ಲಿ ಹೊರಡುವುದಿಲ್ಲ. ಹಣದ ಕೊರತೆಯಿಂದ ತಾಪತ್ರಯ ಪಡುತ್ತಿರಬೇಕು; ಹೀಗೆ ಆಲೋಚನೆ ಮಾಡಿ, ಶ್ರೀಮತಿಯವರು ಒಮ್ಮೆ ತಮ್ಮ ಕೈ ಚಿನ್ನದ ಬಳೆಗಳನ್ನು ತೆಗೆದು ವ್ಯವಸ್ಥಾಪಕರ ಕೈಯಲ್ಲಿಟ್ಟು, "ಕೂಡಲೆ ಹೋಗಿ, ಇದನ್ನು ಮಾರಿಯೋ, ಒತ್ತೆ ಇಟ್ಟೋ, ಹಣ ತಂದು, ಕಾಗದ ಕೊಂಡು ತಂದು, ಪತ್ರಿಕೆಯನ್ನು ಹೊರಡಿಸಿ" ಎಂದು ಹೇಳಿ, ಹಾಗೆ ಮಾಡಿಸಿ, ತೋರಿಸಿದ 'ತ್ಯಾಗ'ದ ಉದಾಹರಣೆಯನ್ನು ಕೊಟ್ಟು ಈ ವಿಚಾರವನ್ನು ಮುಗಿಸುತ್ತೇನೆ. ★

ಸೌಭಾಗ್ಯವತಿ ತಿರುಮಲೆ ರಾಜಮ್ಮ

● **ಅಂಬಿಕಾತನಯದತ್ತ**

ಭಾವಕ್ಕೆ ತಕ್ಕ ತಾಲವೂ ರಾಗವೂ ಉಂಟು.
ಭಾರತದ ಏಳಿಗೆಗೆ ಯಾವುದೋ ಕೃತಕೃತ್ಯ
'ಭಾರತಿ' – ಯ ಬಾಳುವೆಗೆ ಆ ನಡಿಗೆಯೆ ನೃತ್ಯ!
ಸಾಹಿತ್ಯ ಸಂಗೀತ ಸಹಜವಾಗಿದೆ ನಂಟು.

ತಿರುಮಲೆಯ ತಾತ, ನಮ್ಮಾತ ಒಡ್ಡಿದ ಕೈಗೆ
ಯಾವ ನಾಣ್ಯವು ಸಾಟಿ; ಪ್ರ್ಯೇಮ ತಾರಾರಾಜಿ
ಇಳೆಗಿಳಿಯು ರಾಜೀವವಾಗಿ ಸಂದಿತ್ತು ನೈಗೆ
ತೆರೆಯೇಕೆ, ಮುತ್ತೈದೆತನವೆ ತುಲಸಿಯ ಜಾಜಿ.

ತೊಂಡಿಮುಂಡಲಕು ವೆಂಗಚಕು ಯಾವುದು ತೋಡಿ
ಇದ್ದು ನೋಡಿ, ರಸಿಕ ದಾಂಪತ್ಯದಲಿ ಆತ್ಮರತಿ!
ಆತ್ಮಕೆಲ್ಲಿದೆ ವಿರತಿ; ಜೀವಮುಸಿರೇ ಜೋಡಿ
ಸ್ವಾಂತಃ ಸುಖಾಯ, ಎಲ್ಲಾ ಗತಿಯು ಶಿವ-ವಸತಿ.
ಷೋಕಿ ನಾಟಕವಲ್ಲ, ಶ್ರುತಿ ಬಹಳ ನಾಜೋಕು
ದಾಂಪತ್ಯ ಸೌಹಾರ್ದ, ಬೇಡಿ ಬಂದಿರಬೇಕು.

ಕಲೆ ಮತ್ತು ಆದರ್ಶಕ್ಕೆ ಒಲಿದ ಮನಸ್ಸು

● ಪು. ತಿ. ನರಸಿಂಹಾಚಾರ್

ಶ್ರೀಮತಿ ತಿರುಮಲೆ ರಾಜಮ್ಮನವರನ್ನು ನೆನೆದಾಗ ಮೊದಲೆದ್ದು ಕಾಣುವ ಗುಣ ಯಾವುದೆಂದರೆ ತಮ್ಮ ಆತ್ಮದ ಕಳೆಗೆ ಯಾವ ಕುಂದನ್ನೂ ತಂದುಕೊಳ್ಳದೆ ತಮ್ಮ ಪತಿ ಶ್ರೀ ತಿ. ತಾ. ಶರ್ಮರ ವರ್ಚಸನ್ನು ವರ್ಧಿಸಿರುವುದು. ಅಪೂರ್ವ ದಂಪತಿಗಳಿವರು. "ಭಾರತಿ"ಯವರ ಮಾತಿನಲ್ಲೇ ಈ ದಾಂಪತ್ಯವನ್ನು ವರ್ಣಿಸಬಹುದು.

"ಭಿನ್ನ ಸ್ವಭಾವಗಳ ಅನ್ಯೋನ್ಯಭಾವದಾ
ಪರಿಪೂರ್ಣ ಸಿದ್ಧಿಯಲ್ಲಿ ಪ್ರೇಮ ವಿಜಯಿಸಿತು"

ಶ್ರೀ ಶರ್ಮ ಅವರನ್ನು ನಮ್ಮ ಮನೆಯಲ್ಲಿ ನಿಯತ ಅವಧಿಗಿಂತ ಒಂದು ಗಳಿಗೆ ಹೆಚ್ಚು ಕಾಲ ನಿಲ್ಲಿಸಿಕೊಳ್ಳಬೇಕೆಂದು ನಾವಿಬ್ಬರೂ ಬಹಳ ಪ್ರಯತ್ನಿಸಿದ್ದೇವೆ; ಆದರೆ ಸಾಧ್ಯವಾಗಿಲ್ಲ. ಏಕೆಂದರೆ ಸತಿ ಮನೆಯಲ್ಲಿ ಒಂಟಿ, ದುರ್ಬಲೆ, ವೃದ್ಧೆ ಇತ್ಯಾದಿ ಹಂಬಲಗಳು ಅವರನ್ನು ತಮ್ಮ ಶಂಕರವನದ ಮನೆಯತ್ತ ತುಯ್ಯುತ್ತವೆ. ಶರ್ಮ ಅವರು ಮೇಲು ತೋರಿಕೆಗೆ ಬಹು ಗಡುಸಾಗಿ ಕಾಣುತ್ತಾರೆ. ಆದರೆ ಅಂತರಂಗದಲ್ಲಿ ಬಹು ಮೃದು. ರಾಜಮ್ಮನವರು ಈ ಮಾರ್ದವವನ್ನು ಅವರಿಗೆ ಕಲಿಸಿದರೆಂದು ಕಾಣುತ್ತದೆ. ಪ್ರತಿಯಾಗಿ ಶರ್ಮರು ತಮ್ಮ ಪೌರುಷ ಗುಣದಿಂದ ಅವರ ಪ್ರೀತಿಯನ್ನು, ಸಾಹಸ ಗುಣದಿಂದ ಅವರ ಸಹನಾ ಸಾಮರ್ಥ್ಯವನ್ನೂ, ಧ್ಯೇಯಾಭಿರುಚಿಯನ್ನೂ ಹೆಚ್ಚಿಸಿರಬಹುದು. ರಾಜಮ್ಮನವರು ಪರೋಕ್ಷದಲ್ಲಿ ತಮ್ಮ ಪತಿಯ ಗುಣಗಳನ್ನು ವರ್ಣಿಸುವುದನ್ನು ಕೇಳಬೇಕು. —(ಶರ್ಮ ಅವರಿಗೆ ಈ ಪುಣ್ಯವಿಲ್ಲ, ಏಕೆಂದರೆ ಮುಂದೆ ಹೊಗಳುವ ಗುಣ ಶ್ರೀಮತಿಯವರದಲ್ಲ.) —ಶ್ರೀ ಶರ್ಮರ ಕೆಚ್ಚನ್ನು ಅವರ ಸತಿಗಿಂತ ಹೆಚ್ಚು ಮೆಚ್ಚಿದವರಿಲ್ಲ. ತಮ್ಮ ಸಹಧರ್ಮಚರರ ಗುಣಮೋಹಿತರು ಈ ಸಾಧ್ವಿ. ಶರ್ಮರೂ ತಮ್ಮ ಸತಿಯ ಕೋಮಲಮನಸ್ಕತೆಗೂ ಸುಸೂಕ್ಷ್ಮ ಸಂವೇದನಾ ಸಾಮರ್ಥ್ಯಕ್ಕೂ ರಸಿಕತೆಗೂ ತಿತಿಕ್ಷೆಗೂ ಮಾರುಹೋಗಿದ್ದಾರೆ. ಹೀಗೆ

ಪರಸ್ಪರ ಗೌರವ ಮತ್ತು ಪ್ರೇಮದಿಂದ ಈ ದಂಪತಿಗಳ ಬಾಂಧವ್ಯ, ಮೈತ್ರಿ, ಒಂದು ಆದರ್ಶವೆನ್ನಬಹುದಾಗಿದೆ. ಅವರು ಜಗಳವಾಡುವುದೂ ಪ್ರಾಣ ಸ್ನೇಹಿತರಂತೆಯೇ. ಅವರ ಪ್ರೇಮ ಒಬ್ಬರನ್ನೊಬ್ಬರು ಕಾಣದಿದ್ದಾಗ ಹಂಬಲಿಸಿ ನೆನೆಯುವಂಥ ಪ್ರೇಮ. ರಾಮ-ಸೀತೆಯರ ವಿರಹದ ರೀತಿಯದು.

ಭಾರತಿಯವರೊಂದಿಗೆ ಮಾತನಾಡುತ್ತಿದ್ದರೆ ಗಂಟೆಗಳು ನಿಮಿಷಗಳಂತೆ ಕಳೆದು ಹೋಗುತ್ತವೆ. ಇಂಗ್ಲೀಷಿನ ಗಂಧ ಕೂಡ ಇಲ್ಲದೆ, ಇವರು ಇಷ್ಟು ಪ್ರೌಢವಾದ ಚಿಂತನಾಶಕ್ತಿಯನ್ನೂ ವಿಚಾರ ಕೌಶಲವನ್ನೂ ವಿಮರ್ಶಾ ವಿಚಕ್ಷಣತೆಯನ್ನೂ ಹೇಗೆ ಪಡೆದರೋ. ನಿಜವಾಗಿ ಬಹು ಶ್ರುತರಿವರು. ಪ್ರಾಚೀನ ತೆಲುಗು ಸಾಹಿತ್ಯದ ಆಳವಾದ ವ್ಯಾಸಂಗ ಇವರದು. ಇವರ ಮನೆಯು ತುಂಬಾ ಇಂಗ್ಲೀಷನ್ನೂ, ಸಂಸ್ಕೃತವನ್ನೂ, ಸಂಗೀತವನ್ನೂ ತಿಳಿದ ವಿದ್ವದ್ರಸಿಕರು ತುಂಬಿರುವರು. ಈ ಪರಿಸರದಿಂದಲೂ, ತಮ್ಮ ಸ್ವಂತ ಶ್ರಮದಿಂದಲೂ, ತಮ್ಮ ಬುದ್ಧಿಗೂ ಹೃದಯಕ್ಕೂ ಬೇಕಾದ ಪುಷ್ಟಿಯನ್ನು ಪಡೆದುಕೊಂಡಿರುವುದರಿಂದ ಈ ಪ್ರೌಢಿಮೆ ಇವರಿಗೆ ಲಭಿಸಿದೆ ಎನ್ನಬೇಕು. ಇವರನ್ನು ಕಂಡು ಮಾತನಾಡಿಸಿದಾಗಲೆಲ್ಲ ನನಗೆನ್ನಿಸುತ್ತದೆ, ಇಂಗ್ಲೀಷಿನ ಅತಿ ವ್ಯಾಮೋಹದಿಂದ ನಮ್ಮ ನಾಡು ಕಂಗೆಟ್ಟು ಬರಡಾಗುತ್ತಿದೆಯೆಂದು, ಕೃಪಣವಾಗುತ್ತಿದೆಯೆಂದು, ಪರಾನ್ನಭೋಗಿಯಾಗಿ ಅಗೌರವಕ್ಕೆ ಪಾತ್ರವಾಗುತ್ತಿದೆಯೆಂದು.

ಭಾರತಿಯವರದು ಉನ್ನತವಾದ ಮನಸ್ಸು, ಹರಿತವಾದ ಬುದ್ಧಿ; ಅದು ಅವರ ಭಾವನಾಶೀಲತೆಗೆ ಸಂಪೂರ್ಣವಾಗಿ ವಶವಾಗಿದೆ. ಅವರದು ಕವಿಯ ಮನಸ್ಸು, ಕಲೆಗೂ ಚೆಲುವಿಗೂ ಉನ್ನತಾದರ್ಶಕ್ಕೂ ಒಲಿಯುವಂಥದು. ಗಾಢವೂ ಅನುಭವಪೂರ್ಣವೂ ಆದ ಆಲೋಚನೆಗಳು ಒಂದು ಹೊಳಪಿನ ಮಾತಿನಲ್ಲಿ ಮಿಂಚಿ ಬರುತ್ತವೆ. ಅವರದು ಸ್ವತಂತ್ರವಾದ ಮನಃಪ್ರವೃತ್ತಿ. ಮನುಷ್ಯ ಸ್ವಭಾವವನ್ನು ಸ್ವಂತ ಅನುಭವದಿಂದ ಕಂಡುಕೊಂಡಿರುವರವರು. ಅವರದು ಬಹುಮುಖವುಳ್ಳ ವ್ಯಕ್ತಿತ್ವ. ತಮ್ಮ "ಮಹಾಸತಿ" ಎಂಬ 'ಭಾವಗೀತ' ಎನ್ನಬಹುದಾದ ನಾಲ್ಕು ಹೆಣ್ಣು ಪಾತ್ರಗಳಲ್ಲಿ ಅವರ ವಿವಿಧ ಮುಖಗಳನ್ನು ಕಂಡರಿಸಿ ನಮ್ಮ ಮುಂದೆ ಇಟ್ಟಿದ್ದಾರೆ ಎನ್ನಬೇಕು. ಅವರದು ಮುಖ್ಯವಾಗಿ ಮಾತೃಹೃದಯ. ಪೊನ್ನಚ್ಚಿಯ ಪಾತ್ರದಲ್ಲಿ ಇದು ಬಹುಶಃ ಮಾರ್ಮಿಕವಾಗಿ ಮೂಡಿ ಬಂದಿದೆ. ಹೆಣ್ಣಿನ ತಾಯಾಗುವುದು ಸುಲಭವಾದ ಮಾತಲ್ಲ. ಪತಿಯೊಂದಿಗೆ ಸಹಗಮಿಸುವ ಮಗಳನ್ನು ಕುರಿತ ಈ ಮಾತು ಕೇಳಿರಿ:

"ಸತ್ತವರಿಗೆ ನೀ ಬೇರೆ; ನಿನಗೆ ನೀನೇ ಬೇರೆ
ಜಗವನ್ನ, ಜನವನ್ನ, ನಿನ್ನದೆಂಬುದು ಶೂನ್ಯ
ದುಷ್ಟ ಧರ್ಮಗಳೆಲ್ಲ, ಕ್ರೂರ ಕರ್ಮಗಳೆಲ್ಲ
ಅಡಿಗೊಂದಪಾಯವನ್ನು ಹಂಚುತಿವೆ ನಿನಗೆ."

ಕೊನೆಯ ಎರಡು ಸಾಲುಗಳು ಸಾಮಾನ್ಯವಾದ ಮಾತುಗಳಲ್ಲ. ಸಾಮಾಜಿಕ ವ್ಯವಸ್ಥೆಯಿಂದಲೂ ಪ್ರಕೃತಿದತ್ತವಾದ ಶಾರೀರಕ ವ್ಯವಸ್ಥೆಯಿಂದಲೂ ಹೆಣ್ಣು ಪಡುವ ಕಷ್ಟ ಕಾರ್ಪಣ್ಯಗಳೆಲ್ಲ ಈ ಎರಡು ಸಾಲುಗಳಲ್ಲಿ, ಮಡುಗಟ್ಟಿ ನಿಂತಿರುವಂತಿದೆ. ಮಗಳ ಮನಸ್ಸನ್ನು ಕದಲಿಸಲಾಗದ ತಾಯಿ ಪರಿಸ್ಥಿತಿಯನ್ನು ಸ್ವಲ್ಪ ವೈರಾಗ್ಯಭಾವದಿಂದ ಪರಿಶೀಲಿಸಿ ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳುವ ಮಾತುಗಳು ಬಹು ಮಾರ್ಮಿಕವಾಗಿವೆ; ನಮ್ಮಲ್ಲಿ ಅನೇಕ ಆಲೋಚನಾ ತರಂಗಗಳನ್ನು ಅವು ಎಬ್ಬಿಸುತ್ತವೆ.

"ನೀರ ಹೀರುವವರೆಗೆ ಬೀಜವುದಿತ್ತು
ತೆನೆಯ ನೀಡುವವರೆಗೆ ಪೈರು ಬದುಕಿತ್ತು
ಬಾಳೆಗೊನೆ ಬಾಗುವುದು, ಜೇನು ಹನಿಗಟ್ಟುವುದು
ನಾಳೆಗೆಯು ಪಾಪವೇನಿದರಲ್ಲಿ ? ಅರಸಿದರೆ
ಎಲ್ಲಿ ದೋಷಕೆ ಮೂಲ ? ಪುಣ್ಯದಾ ಬೆಳಸೆಲ್ಲ
ಅನ್ಯರುಪಕಾರವೇ. ಅದು ಕಾರಣಕಾಗಿ
ನಿನ್ನ ವೈಭವವೆಲ್ಲಾ ಸೂರೆಯಾಗಲಿ ಬೇಕೊ
ಅದನರಿಯಲಾಗದು".

ನನಗನ್ನಿಸುತ್ತದೆ ಪಾಪ ಪುಣ್ಯಗಳ ಒಂದು ಮಹಾಜಿಜ್ಞಾಸೆಯೇ ಈ ಸಾಲುಗಳಲ್ಲಿ ಅಡಗಿರುವಂತಿದೆ. ವೈಯಕ್ತಿಕ ಲಾಭ ನಷ್ಟಗಳಿಂದ ನೋವು ನಲಿವುಗಳಿಂದ ವಿಶ್ವ ವ್ಯಾಪಾರಕ್ಕೆ ಬೆಲೆಗಟ್ಟುವ ಹಾಗಿಲ್ಲ.

ವಾತ್ಸಲ್ಯ ಹಾಗೂ ಮಾತೃ ಹೃದಯದ ತುಂಬು ಪ್ರವಾಹವನ್ನು 'ಭಾರತಿ'ಯವರ "ವಾತ್ಸಲ್ಯ ತರಂಗ ಲೀಲಾ"ದಲ್ಲಿ ನಾವು ಕಾಣುತ್ತೇವೆ. ಈ ರೂಪಕವನ್ನು ಇವರು ತಮ್ಮ ಮುಪ್ಪಿನಲ್ಲಿ ಬರೆದರು; ಆದರೆ ಶಕ್ತಿಗೇನೂ ಕೊರತೆ ಕಂಡುಬರುವುದಿಲ್ಲ. ನದಿ ಮಾಲಿನಿ ಮತ್ತು ಶಕುಂತ ಪಕ್ಷಿಗಳನ್ನು ರಂಗದ ಮೇಲೆ ತಂದು ನುಡಿಸಿರುವುದು ಬಹು ಮೋಹಕವಾಗಿದೆ. ಕನಸುಗಳನ್ನೂ, ಧ್ಯೇಯ ಮೌಲ್ಯಗಳನ್ನೂ ಆಜೀವ ಪರ್ಯಂತ ಉಳಿಸಿಕೊಳ್ಳುವುದು ಕಷ್ಟ. ಅದೊಂದು ದೇವರ ವರ. ವಾಸ್ತವತೆ, ವಾಸ್ತವದೃಷ್ಟಿ, ಯಾವ ಸಂಸಾರಿಗೆ ತಾನೆ ಇವುಗಳ ಅರಿವಿಲ್ಲ ? "The world is too much with us." ನಾವು ಮರೆಯಬೇಕೆಂದರೂ ಅದು ನಮ್ಮನ್ನು ಮರೆಯ ಗೊಡುವುದಿಲ್ಲ. ಕನಸುಗಳೂ, ಧ್ಯೇಯ ಮೌಲ್ಯಗಳೂ ಅವುಗಳಿಂದ ತಪ್ಪಿಸಿಕೊಳ್ಳುವ ವಿಧಾನವಲ್ಲ ; ಅವುಗಳನ್ನು ನೋಡಿ ನಮ್ಮ ಸ್ವಾತಂತ್ರ್ಯ ಮತ್ತು ಸಂತೋಷಗಳ ಅಭಿವೃದ್ಧಿಗೆ ಪಳಗಿಸಿ ಹದಗೊಳಿಸಿಕೊಳ್ಳುವ ವಿಧಾನಗಳು. 'ಭಾರತಿ'ಯವರು ಈ ನಾಟಕದ "ವಿಷಯ ಪ್ರವೇಶ"ದಲ್ಲಿ ತಮ್ಮ ತೀಕ್ಷ್ಣವಾದ ವಿಮರ್ಶಾ ದೃಷ್ಟಿಯನ್ನು ಪ್ರಕಾಶಗೊಳಿಸುವ ಹೃದ್ಯವಾದ ಮಾತುಗಳನ್ನು ಈ ಕುರಿತು ಹೇಳಿದ್ದಾರೆ: "ಶಕುನ್ತಲಾ-ದುಷ್ಯನ್ತರ ಗಾಂಧರ್ವ ವಿವಾಹ; ಅನಂತರ ಭರತನ ಜನನವಾದ ಕೆಲವು

ವರ್ಷಗಳ ಮೇಲೆ ತಾನಾಗಿಯೇ ಕಣ್ವ ಮಹರ್ಷಿಯು ಮಗಳನ್ನೂ ಮೊಮ್ಮಗನನ್ನೂ ಕಳಿಸುವುದು; ನಿಜಾಂಶ ತಿಳಿದಿದ್ದೂ ದುಷ್ಯಂತನು ಪತ್ನೀಸುತರನ್ನು ನಿರಾಕರಿಸುವ ಕಪಟ ವೇಷ; ಅಶರೀರವಾಣಿಯಾಗುವವರೆಗೂ ಆ ಸಂದರ್ಭದಲ್ಲಿ ಪತಿಪತ್ನಿಯರಲ್ಲಿ ನಡೆಯುವ ವಿವಾದ; —ಇವೆಲ್ಲ ಸಾಧಾರಣವಲ್ಲದೆ ಆಕರ್ಷಕವಲ್ಲ. ಮಹಾ ಭಾರತದ ಶಕುಂತಲೆಯ ಪಾತ್ರ ಅಷ್ಟಾಗಿ ಹೃದಯಸ್ಪರ್ಶಿಯಾಗದಿರಲು ಕಾರಣವೇನು? ಕಾಳಿದಾಸನು ಭಾವಿಸಿ ಸೃಷ್ಟಿಸಿದ ಶಕುಂತಲೆಯೇ ಕಾರಣವೆಂದು ಹೇಳಬಹುದಲ್ಲವೆ?” ಇದು ವಿಮರ್ಶೆ, ಭಾವುಕ ಸಹೃದಯರು ವಾಸ್ತವದ ಒಳಹೊಕ್ಕು ತಮ್ಮ ಕೂರ್ನೋಟದಿಂದ ಕಾವ್ಯಾಂತರಂಗವನ್ನು ನೋಡುವ ಕೌತುಕ. ಕಲೆ ಇರುವುದು ರೂಪ-ಮಧುರ ವಾಸ್ತವವನ್ನು ಪಾಕಮಾಡಿ ಅತ್ಯುನ್ನತವಾಗಿ ಪರಿಣಾಮಗೊಳಿಸುವುದಕ್ಕೆ. ಕಲೆ ಯಾವಾಗಲೂ ವಾಸ್ತವವನ್ನು ತಿರಸ್ಕರಿಸುತ್ತದೆ; ಒಂದು ಇನ್ನೊಂದಕ್ಕೆ ಉಪದಾನ ಕಾರಣ ಮಾತ್ರ. ಕೊನೆಯ ಜಯ ಕಲೆಯದು. ಅದಕ್ಕೆಯೇ ಮಹಾ ಭಾರತದ ಶಕುಂತಲೆ ಮರೆಯಾಗಿ ಕಾಳಿದಾಸನ ಶಕುಂತಲೆ ಅಜರಾಮರೆಯಾಗಿ ನಿಂತಳು. ಶಕುಂತಲೆಯನ್ನು ಹೆತ್ತು ಆ ಗಳಿಗೆಯಲ್ಲೇ ಇಂದ್ರನ ಅಪ್ಪಣೆಯಂತೆ ಸ್ವರ್ಗಕ್ಕೆ ಹೊರಡಬೇಕಾಗಿ ಬಂದ ಮೇನಕೆಗೆ ಮಾತ್ರ ಹೃದಯವಿರಲಿಲ್ಲ ಎಂಬುದನ್ನು ‘ಭಾರತಿ’ ಯವರ ಮನಸ್ಸು ಒಪ್ಪದು. ಅದರ ಫಲ ಈ ನಾಟಕ. ಕಾಳಿದಾಸನ ನಾಟಕದಲ್ಲಿ, ಶಕುಂತಲೆಯನ್ನು ಆ ಸಂದಿಗ್ಧ ಪರಿಸ್ಥಿತಿಯಲ್ಲಿ ಮೇನಕೆ ಮಾರೀಚ ಋಷಿಯ ಆಶ್ರಮಕ್ಕೆ ಒಯ್ಯುತ್ತಾಳೆ.

‘ಭಾರತಿ’ ಅವರೆನ್ನುತ್ತಾರೆ “ಮೇನಕೆಗೆ ಮಾತೃ ವಾತ್ಸಲ್ಯದ ಪ್ರಥಮಾನುಭವ ಆ ದುಃಖ ಸಮಯದಲ್ಲಿ ಆಗುತ್ತದೆ” ಎಂದು. ಮೇನಕೆಯಿಂದಾಗಿ ವಿಶ್ವಾಮಿತ್ರನ ಸುರಭಯಂಕರ ತಪಸ್ಸು ನಷ್ಟವಾಯಿತು, ನಿಜ. ಆದರೆ ವ್ಯರ್ಥವಾಗಲಿಲ್ಲ. ಮಿಕ್ಕ ಸಂದರ್ಭಗಳಲ್ಲಿನಂತೆ ಆಕೆಯ ತಾಯ್ತನದಲ್ಲಿ ಸಫಲಗೊಂಡು ಲೋಕಕ್ಕೆ ಮಂಗಳಕರವಾಯಿತು. ಶಕುಂತಲೆ ಹುಟ್ಟಿದಳು, ಭರತ ಹುಟ್ಟಿದ, ನಮ್ಮ ನಾಡು ಭರತ ವರ್ಷವೆನಿಸಿತು. ಮೇನಕೆ ಶಿಶುವನ್ನು ಸ್ವರ್ಗಕ್ಕೆ ಕೊಂಡೊಯ್ದಿದ್ದರೆ ಅದೂ ಆಕೆಯಂತೆಯೇ ಸುರವಾರನಾರಿಯಾಗುತ್ತಿತ್ತು. ಸಖಿ ಸಾನುಮತಿ ಇದನ್ನು ವರ್ಣಿಸುತ್ತ ಮೇನಕೆಗೆ ಶಿಶುವನ್ನು ಪುಣ್ಯಾಶ್ರಮದ ಪರಿಸರದಲ್ಲೇ ಬೆಳೆಯಲು ಬಿಡು ಎನ್ನುತ್ತಾಳೆ. ಸ್ತ್ರೀಯರ ವಿಷಯದಲ್ಲಿ ‘ಭಾರತಿ’ ಯವರ ಕೊನೆಯ ಮಾತು ಈ ನುಡಿಗಳಲ್ಲಿ ಅನುರಣಿಸುತ್ತವೆ ಎನ್ನಬೇಕು;

“ಶೀಲವು ಪವಿತ್ರ, ಸಂತತಿ ಪವಿತ್ರ, ಕೀರ್ತಿಯು ಪವಿತ್ರ
ಇದನೆಲ್ಲ ನೀ ಬಗೆದು ಮುಂದಿನದ ನಿಶ್ಚಯಿಸು”

ಸ್ತ್ರೀ ಪುರುಷರ ಪ್ರಣಯ ವ್ಯಾಪಾರದಲ್ಲಿ ಈ ಪರಿಣತಿಗೆ ಪೂರ್ವರಂಗ—ಹಾಗಾದರೆ ರಾಷ್ಟ್ರಕ್ಕೂ, ಜನಾಂಗಕ್ಕೂ ಶ್ರೇಯಸ್ಸು ಎಂಬ ಭಾವ ಈ ಮಾತುಗಳಲ್ಲಿದೆ. ಅಲ್ಲದೆ ಈ ಕಥಾ ಪ್ರಸಂಗದ ಕೊನೆಯಲ್ಲಿ ಕಣ್ವರ ಬಾಯಲ್ಲಿ ಬರುವ ಈ ಮಾತುಗಳನ್ನು ನಾವು ಗಮನಿಸಬೇಕು.

"ಎಲ್ಲರಥಿಮತಿಗಳು ಎಲ್ಲ ಕರ್ತವ್ಯಗಳು
ಒಂದು ಸಮ್ಮತವಾಗಿ ಪ್ರಕೃತಿ ಪ್ರಸನ್ನತೆಗೆ
ಹೊಂದಿಬಂದಿಹುದೆ ಉನ್ನತಿ ಕ್ರಮದ ಸೂಚನೆ."

ಈ ಮಾತು, ಅವರ ಮುಂದಿನ ಮಾತುಗಳು ಆಳವಾದ ಅನುಭವ ಮತ್ತು ಗಾಢ ಚಿಂತನೆಯಿಂದ ಮೂಡಿ ಬರುವ ಮಾತುಗಳು. 'ಭಾರತಿ'ಯವರಂಥ ಪ್ರೌಢ ಮನಸ್ಕರು ವಿರಳ.

ಪ್ರಕೃತಿ ವರ್ಣನೆಯಲ್ಲೂ ಇವರ ಮನಸ್ಸು ಕುಂಠಿಸದು. "ಮಹಾಸತಿ"ಯಲ್ಲಿ ನೀಲಬ್ಬೆ ಮಲ್ಲಬ್ಬೆಯರ ರಾತ್ರಿ ಮತ್ತು ಚಂದ್ರನನ್ನು ಕುರಿತ ಸಂಭಾಷಣೆಯಲ್ಲಿ ಈ ಕೌಶಲವನ್ನು ನಾವು ಕಾಣುತ್ತೇವೆ. ಪ್ರಕೃತಕ್ಕೆ ರಾತ್ರಿ ಕುರಿತು ಈ ನಾಲ್ಕು ಸಾಲುಗಳು ಸಾಕು;

"ಈ ಮಾತೆಯಂಕ ಜಗದೇಕ ಪರ್ಯಂಕ
ದಿವ್ಯ ಪ್ರಕಾಶವನು ಗರ್ಭದಲಿ ಬಚ್ಚಿಟ್ಟು
ಜಗದ ಜಾಗೃತಿಯೆಲ್ಲ ಬಾಚಿ ಕಟ್ಟುತಲಿಹಳು
ಮೋಹ ಪಾಶವ ಬಿಗಿದು."

ಕನ್ನಡ ಸಾಹಿತ್ಯದಲ್ಲಿ ಇಂಥ ಪ್ರತಿಭಾಸಂಪನ್ನ ವರ್ಣನೆಗಳು ಅಪರೂಪ.

ವರ್ಣನೆಯಲ್ಲೂ, ಕನ್ನಡದ ಈ ಸರಳ ರಗಳೆಯೆಂಬ ಮುಕ್ತ ಛಂದಸ್ಸನ್ನು ನಡೆಸುವುದರಲ್ಲೂ 'ಭಾರತಿ'ಯವರು ಕುಶಲಹಸ್ತರು. ಈ ಕುಸ್ತಿಯ ವರ್ಣನೆಯನ್ನು ನೋಡಿರಿ:

"ನಡುಗಟ್ಟಿದರು, ಭುಜಗಳ ತಟ್ಟಿ ದಿಟ್ಟತನದಿಂದಡಿಯ
ಮೆಟ್ಟಿದರು, ಹೂಂಕರಿಸಿ ಧುಮ್ಮಿಕ್ಕಿ ಪಾಯ್ದರು
ರಭಸದಲಿ ಪೊಯ್ದರು, ಪಲ್ಕಡಿದು ಮುಷ್ಟಿಯಲಿ
ಜಜ್ಜಿದರು, ನೆಲ ನಡುಗುವಂತೆ ಬಡಿದಾಡಿದರು."

ಈ ಛಂದಸ್ಸಿನಲ್ಲಿ ಮಾತುಗಳ ಬೆಡಗಿನ ನಡಗೆಗೆ ಈ ಸಾಲುಗಳು ಸಾಕ್ಷಿ:

"ಇನಿಯನ ವಿಚಾರವನು ತಿಳಿವ ಕಾತರ ಬೇರೆ"

"ಮುದ್ದು ಕುವರಿಯ ಕೋಮಲೆಯ ದುರ್ಗತಿಯನಿಂದು
ನೋಡಲಾಗದ ತೆರದಿ ಈ ಕಂಗಳಿಂಗಿದೊಡೆ
ಕೊರಗೊಂದೆ ಕಾಡುವುದು."

ಶ್ರೀನಿವಾಸರ ಮಾತಿನಲ್ಲಿ, "ಕಂಡೂ ಕಾಣದಂತಿರುವ ನಿಯಮದಿಂದ ಕೂಡಿ ಗದ್ಯವೋ ಎಂಬಂತೆ ತೋರುವ ಈ ವೃತ್ತವು ಚೆನ್ನಾಗಿ ಬಂದಾಗ ಒಂದೆರಡು ಒಡವೆಗಳನ್ನು ಮಾತ್ರ ತೊಟ್ಟ ಸುಲಕ್ಷಣೆಯಂತೆ, ಪ್ರಭಾತ ಕಲ್ಪವಾದ ಶರ್ವರಿಯಂತೆ, ಮನೋಜ್ಞವಾಗಿರುವುದು. ನಿಯಮ ಕಡಮೆಯಾದ್ದರಿಂದ ಇದನ್ನು ಚೆನ್ನಾಗಿ ಬರೆಯುವುದು ಕಷ್ಟ. ಇಂಥ ವೃತ್ತವನ್ನೂ ಬರೆಯುವುದರಲ್ಲಿ ಶ್ರೀಮತಿ ರಾಜಮ್ಮ

ನವರು ಒಟ್ಟಿನಲ್ಲಿ ಅಸಾಧಾರಣ ಕೌಶಲವನ್ನು ತೋರಿರುವರು." ಈ ನಾಟಕಗಳ ಓಟವನ್ನು ಗಮನಿಸಿರುವ ಸಹೃದಯರ ಮನಸ್ಸು ಶ್ರೀನಿವಾಸರ ಈ ಮಾತಿಗೆ 'ಅಸ್ತು ಅಸ್ತು' ಎನ್ನುತ್ತದೆ.

ಭಾರತಿಯವರದು ಗದ್ಯದಲ್ಲೂ ಪಳಗಿದ ಕೈ. ಅವರು ಕೈಲಾಸಂ ಅವರ ವಿಚಾರದಲ್ಲೂ ಹಾಗೂ ಪೂಜ್ಯ ಮಾಸ್ತಿಯವರ ಸಹ ಧರ್ಮಿಣಿಯವರ ವಿಚಾರದಲ್ಲೂ ಬರೆದಿರುವ ಪ್ರಬಂಧಗಳು ಇದಕ್ಕೆ ಸಾಕ್ಷಿಯಾಗಿ ನಿಂತಿವೆ.

ಸಾಹಿತ್ಯದಲ್ಲಿ ಒಂದರಲ್ಲೇ ಅಲ್ಲ; ಸಂಗೀತದಲ್ಲೂ "ಭಾರತಿ" ಅವರು ಪ್ರವೀಣರು. ಇಚೀಚೆಗೆ ಅವರ ವೀಣಾವಾದನವನ್ನು ಸನಿಹದಲ್ಲಿ ಕುಳಿತು ಕೇಳುವ ಸೌಭಾಗ್ಯ ನನಗೆ ದೊರೆಯಿತು. ಅದೆಷ್ಟು ಖಚಿತವೂ ವಿದ್ವತ್ ಪೂರ್ಣವೂ ಆದ ನುಡಿಸುವಿಕೆ! ಅದೆಷ್ಟು ವಿಧವಾದ ನುಡಿಕೆಯ ವಿಧಾನಗಳು, ಗಮಕ ವೈವಿಧ್ಯ. ಅವರಿಗೆ ಸರಿಯಾದ ಶಿಷ್ಯ ಸಂಪತ್ತಿಯಿಲ್ಲದಿರುವುದೊಂದು ದೊಡ್ಡ ಕೊರತೆ, ಅವರು ನುಡಿಸಿದ ಶಂಕರಾಭರಣ ವಿಸ್ತಾರ ವೈವಿಧ್ಯಗಳಲ್ಲಿ ನನಗೆ ಬೆರಗನ್ನು ತಂದಿತು. ಹೆಚ್ಚು ಜನರ ಕಿವಿಗೆ ಅವರ ನುಡಿಸುವಿಕೆ ಬೀಳಲಿಲ್ಲ. ಅಲ್ಲದೆ ಅವರದು ದುರ್ಬಲ ಶರೀರ. ಸಂಸಾರದ ಜಂಜಾಟದಲ್ಲಿ ಅವರ ಈ ಕಲಾಸಿದ್ಧಿಗಳು ಪರಮಾಶ್ಚರ್ಯಕರಗಳಾಗಿವೆ. ಕೃತಿ ರಚನೆಯಲ್ಲೂ ಇವರದು ಪಳಗಿದ ಕೈ. ಕೆಲವನ್ನು ಇವರ ಹಿರಿಯ ಸೊಸೆ, ಮೊಮ್ಮಗಳು ಮನೋಜ್ಞವಾಗಿ ಹಾಡುತ್ತಾರೆ. ಪ್ರಾಯಶಃ ಇನ್ನು ಮುಂದೆ ವಿದ್ವಾಂಸರ ಗಮನವೂ ಅವುಗಳ ಕಡೆಗೆ ಹರಿದೀತು. ಎಲ್ಲಕ್ಕೂ ಕಾಲ ಬೇಕು. ದೇವರ ಅನುಗ್ರಹ ಬೇಕು. 'ಭಾರತಿ'ಯವರ ವ್ಯವಸಾಯದಲ್ಲಿ ದೇವರಿದ್ದಾನೆ; ಜಯದಲ್ಲಿ ಈಗೀಗ ತೋರುತ್ತಿದ್ದಾನೆ. ಅಷ್ಟಕ್ಕೂ ಶ್ರೀಮತಿಯವರು ಐಶ್ವರ್ಯಕ್ಕೂ ನೆಮ್ಮದಿಗೂ ಕೊನೆಗೆ ಕೀರ್ತಿಗೂ ಪ್ರಥಮ ಸ್ಥಾನ ಕೊಟ್ಟವರಲ್ಲ. ಅವರ ಧ್ಯೇಯ ಸಜ್ಜೀವನ, ಸಾಧ್ವಿಯ ಜೀವನ.

"ನಮ್ಮ ಸ್ಥಿತಿಮಿತಿಯಲ್ಲಿ ನಾವಿರಲು ಬಾಳು ಹಿತ
ಆಗು ಹೋಗುಗಳಲ್ಲಿ ಅಧಿಕಾರವೆನಗುಂಟೆ
ನಮ್ಮಾಸೆ ನಮ್ಮ ಬಲ ನಮ್ಮಧೀನದೊಳಿಲ್ಲ
ಸುಖ ದುಃಖದಾಶ್ರಯದ ನಮ್ಮಿರವಿನಾಪರಿಯ
ಪರಿಮಿತಿಯ ನಾವಿನ್ನೂ ತಿಳಿದಿಲ್ಲ."

ಇಂಥ ಆಲೋಚನೆಗಳುಳ್ಳ ಜೀವ ಕಷ್ಟದಲ್ಲಿ ಕುಗ್ಗಿ ಧೃತಿಗೆಡುವುದಿಲ್ಲ. ಸುಖದಲ್ಲಿ ಹಿಗ್ಗಿ ಓರೆಕಾಯಿ ಆಗುವುದಿಲ್ಲ. ಇದು ತಾಳಿ ಬಾಳುವ ಬಾಳು. ಧ್ಯೇಯಗಾಮಿ, ಮೌಲ್ಯಾನುಯಾಯಿ. ಈ ಧ್ಯೇಯಗಳಲ್ಲಿ ಕುಟುಂಬದ ಪ್ರೇಮದ ಜತೆಗೆ ನಾಡ ಪ್ರೇಮವೂ ಸೇರಿದೆ. ಸ್ವಾರ್ಥ ತ್ಯಾಗವನ್ನು ಬೇಡುತ್ತಲೇ ಇರುತ್ತವೆ ಧ್ಯೇಯಗಳು. ಅವುಗಳನ್ನು ಪೂಜಿಸಬಯಸುವವರಿಗೆ ಕಷ್ಟಕಾರ್ಪಣ್ಯಗಳು ಅನಿವಾರ್ಯ. ಆದರೆ ತಪಸ್ಸು ವ್ಯರ್ಥವಾಗುವುದಿಲ್ಲ. ಈ ಧ್ಯೇಯಗಳಿಗಾಗಿ ಕ

ಪಡುವುದೂ ಇವರಿಗೆ ಹಿತವೇ. ಅದಕ್ಕಾಗಿಯೇ ಈ ಮುದ್ದಾದ ಹರಕೆಯ ಮಾತುಗಳು ಪೊನ್ನಬ್ಬೆಯ ಮೂಲಕ ಹೊರಟಿತು:

"ಕಲೆಯ ನಾಡೇ. ಎನ್ನ ಮನಗೆಲಿದ ನಾಡೇ
ಕರುನಾಡೆ, ನಿನಗೆ ಶುಭವಿರಲಿ. ಜಯವಿರಲಿ
ಅಚ್ಚಳಿಯದಿರಲಿ ನಿನ್ನ ವಿಭವವೆಂದೆಂದು"

ಈ ಹರಕೆ ಸಫಲವಾದಂದು ಶ್ರೀಮತಿಯವರನ್ನೂ, ಅವರ ಪತಿಯನ್ನೂ ನಾಡು ನೆನೆದೀತು. ಅವರ ನಾಂದಿಯಂತೆ ಈ ಮಹೋತ್ಸವವನ್ನು ನಾಡ ಸಹೃದಯರು ಏರ್ಪಡಿಸಿರುವುದು ಮನಸ್ಸಿಗೆ ತುಂಬ ಹರ್ಷವನ್ನು ತರುತ್ತಿದೆ. ದೊಡ್ಡವರನ್ನು ಗೌರವಿಸುವುದು ಆ ಜನಕ್ಕೆ ಶ್ರೇಯಸ್ಸನ್ನೂ ದೇವರ ಅನುಗ್ರಹವನ್ನೂ ತರುತ್ತದೆ.

ಶ್ರೀಮತಿಯವರೂ, ಅವರ ಪತಿಯೂ ಚಿರಕಾಲ ಸಂತೋಷವಾಗಿ ನಮ್ಮೊಂದಿಗೆ ಇರಲೆಂದು ಹಾರೈಸುತ್ತೇನೆ. ★

ಅಂತರ್ವಾಣಿ

ಕಾಲ ನುಂಗುವ ತುತ್ತು ಬಾಳು; ಬಾಳನು ಕಳೆವ
ಕಾಲವೊಂದು ವಿಪತ್ತು; ಬಾಳಿಹುದಕಸ್ಮಾತು
ಬಾಳು ಪೊತ್ತಿಹ ಭಾರ ಏಳುಜನ್ಮದ ಸಾಲ
ಸಾಲದರಿವಿಲ್ಲದಿರೆ ಬಾಳ್ ನಿನ್ನದಲ್ಲ.

ಕಾಲ ಕಿಂಕರನಾಗಿ ಬಾಳೆ ಮನಸಿಲ್ಲದಿರೆ
ಕಾಲ ವಿನಿಯೋಗದಲಿ ಬಾಳ್ಗೆ ದಕ್ಕಿಸು ಪಾಲು
ಶೀಲ ಸಾಮರ್ಥ್ಯದಲಿ ಸತ್ಯ ಸ್ವಾಮಿತ್ವದಲಿ
ಕಾಲ ಕೈವಶವೆನಿಸು. ಬಾಳ್ ನಿನ್ನದಾಗಿಸು.

ಸವಿತೃ-ದೈವತ ಪ್ರತಿಮೆ

● **ಶಂ. ಬಾ. ಜೋಶಿ**

['ಭಾರತಿ' (ಶ್ರೀಮತಿ ತಿ. ರಾಜಮ್ಮ) ಸನ್ಮಾನ ಸಮಿತಿಯ ಸಂಪಾದಿಕೆ ಸೋದರಿ ಎಚ್. ಎಸ್. ಪಾರ್ವತಿ ಅವರ ಕೋರಿಕೆಯನ್ನು ಕಡೆಗಣಿಸುವುದು ಅಶಕ್ಯವಿತ್ತು; ಶ್ರೀ ತಿರುಮಲೆ ದಂಪತಿಗಳ ಬಗೆಗಿನ ಪೂಜ್ಯಭಾವನೆ ಇದಕ್ಕೆ ಮುಖ್ಯ ಕಾರಣ. ಜೀವನ ಮೂಲ್ಯಗಳ ರಕ್ಷಣೆಗಾಗಿ, ಸಾಮಾಜಿಕ ಸಮಷ್ಟಿ ಪ್ರಜ್ಞೆಯಿಂದ ಎಡೆಬಿಡದೆ ಹೋರಾಡುವ ಸತ್ವಶೀಲ ವೀರ ಜೀವರುಗಳಿಗಿಂತ ವಂದ್ಯರು ಬೇರಾರೂ ಇಲ್ಲ, ನನ್ನ ಲೆಕ್ಕದಲ್ಲಿ. ಮೇಧಾವಿ, ತ್ಯಾಗಿ ನೇತಾರ ಶ್ರೀ ತಿ. ತಾತಾಚಾರ್ಯರ ಧರ್ಮಪತ್ನಿ ಎಂದು ಮಾತ್ರ ಶ್ರೀಮತಿ ರಾಜಮ್ಮನವರು ಸಮಾಜದ ಆದರ ಗೌರವಕ್ಕೆ ಪಾತ್ರರಾಗಿಲ್ಲ; ಅವರು ತಮ್ಮ ಪರಿಶುದ್ಧ ಚಾರಿತ್ರ್ಯದಿಂದ, ಉದಾತ್ತ ಪವಿತ್ರ ವಿಚಾರಗಳ ಬಲದಿಂದ ಸ್ವಂತದ್ದೇ ಆದ ವ್ಯಕ್ತಿ ವೈಶಿಷ್ಟ್ಯವನ್ನು ಉಳಿಸಿಕೊಂಡು, ಬೆಳಸಿಕೊಂಡು ಬಂದಿದ್ದಾರೆ. ವೀಣೆ ನುಡಿಸುವುದರಲ್ಲಿ, ಸಂಗೀತ ಶಾಸ್ತ್ರದಲ್ಲಿ ಪಳಗಿದವರೆಂಬ ಕೀರ್ತಿ, ಹಿರಿಮೆ ಬೇರೆಯೆ ಇದೆ. ಇವರ ನಯ ವಿನಯದಲ್ಲಿ ನಾಟಕೀಯತೆಯ-ಕೃತ್ರಿಮತೆಯ-ಲವಲೇಶವೂ ಕಾಣಲು ದೊರೆಯದು. ಇವರ ಸೌಮನಸ್ಯದ ಪರಿಮಳದಲ್ಲಿ ಅಸಂಸ್ಕೃತರನ್ನೂ ಸಂಸ್ಕಾರವಂತರನ್ನಾಗಿ ಮಾಡುವ ಸಾಮರ್ಥ್ಯವಿದೆ.

ಪೂಜ್ಯ 'ಭಾರತಿ' ಅವರ ಸಾಹಿತ್ಯ-ಸಂಗೀತ ಕ್ಷೇತ್ರದ 'ವಾಕ್' ವೈಶಿಷ್ಟ್ಯವು ನನ್ನ ದೃಷ್ಟಿಯಿಂದ ಪುರಾತನ ಭಾರತೀಯ **ಸವಿತೃ** ಸಂಪ್ರದಾಯವನ್ನು ಪುನರುಜ್ಜೀವಿಸುವ ಹಾದಿಯದು ಆಗಿದೆ. ಆ ಪುರಾತನ ಮೂಲ 'ಸವಿತೃ' ದೈವತ ಪ್ರತಿಮಾ ವಿಚಾರದ ವಿಸ್ಮೃತಿಯೇ, ಭಾರತದ ಅವನತಿಯ ಒಂದು ಪ್ರಧಾನ ಕಾರಣವೆಂದು ನನ್ನ ಅರಿಕೆಗೆ ಬರತೊಡಗಿದೆ. 'ಭಾರತಿ' ಸಂಭಾವನಾ ಗ್ರಂಥದ ಒಂದು ಲೇಖನದ ನೆಪದಿಂದ 'ಸವಿತೃ' ದೈವತವನ್ನು ಕುರಿತು ಎರಡು ಮಾತು ಬರೆದು ಇತ್ತ ಕಡೆಗೆ ಪ್ರಾಜ್ಞರ ಗಮನ ಸೆಳೆಯುವ ಮನೀಷೆಯಿದೆ. — ಲೇಖಕ.]

'ಸವಿತೃ' ದೈವತ ಪ್ರತಿಮಾ ವಿಚಾರ (ಸಾಂಕೇತಿಕ ಅರ್ಥ ವಿವರಣೆ)

'ಸವಿತೃ'ವನ್ನು ಸೂರ್ಯನೆಂದು ಬಗೆಯಲಾಗಿದೆ; ಆದರೆ ಋಗ್ವೇದದಲ್ಲಿ 'ಸೂರ್ಯ' ಎಂಬ ದೈವತದ ಸೂಕ್ತಗಳೂ ಇರುವಾಗ 'ಸವಿತೃ' ಎಂಬ ಇನ್ನೊಬ್ಬ ಸೂರ್ಯನ ಅವಶ್ಯಕತೆ ಏನಿತ್ತು? 'ನಮ್ಮ ಧೀಶಕ್ತಿಯನ್ನು ಪ್ರಚೋದಿಸಲಿ' ಎಂದು ಪ್ರಾರ್ಥಿಸುವ ಸಂಪ್ರದಾಯವಿರುವ ಈ 'ಸವಿತೃ' ದೇವನು ಜ್ಞಾನ ಸ್ವರೂಪನು ಎಂದು ಬೇರೆಯಾಗಿ ಹೇಳಬೇಕಾಗಿಲ್ಲ. ಅರ್ಥ: ವಿಚಾರ: ಜ್ಞಾನ ಇವನ್ನು ಎಲ್ಲ ಸಂಸ್ಕೃತಿಗಳಲ್ಲೂ ಪ್ರಕಾಶ ರೂಪದಲ್ಲಿ ಕಾಣಲಾಗುತ್ತದೆ. ಇದು ಭೌತ ಪ್ರಕಾಶವಲ್ಲ. ಸಾಂಕೇತಿಕ ಪ್ರಕಾಶ: ತಾತ್ತ್ವಿಕ ಪಾತಳಿಯ ಮೇಲಣ ಪ್ರಕಾಶ: ಏನೊಂದು ಸಂಕೇತ ಮಾಧ್ಯಮದ ನೆಪದಿಂದ ಹೊಳೆದು ಹೋಗುವ ಪ್ರಕಾಶ (Flash) ಇದು.

ಭೌತ ಸೂರ್ಯನ ಪ್ರಕಾಶದಲ್ಲಿ ಕಾಣುವುದು ಭೌತ ಸತ್ಯ

ಇದನ್ನು 'ಏಕಂ' ಸ್ವರೂಪೀ ಸತ್ >ಸತ್ಯ ಎಂದು ಹೆಸರಿಸಿದ್ದುಂಟು. 'ಸವಿತೃ'ವಿನ ಪ್ರಕಾಶದಲ್ಲಿ ಅರಿಕೆ ಬಂದ ಬರುವ ಸತ್ಯವು, ಸಾಂಕೇತಿಕ ಸ್ವರೂಪದ ತಾತ್ತ್ವಿಕ ಭೂಮಿಕೆಯ ಸತ್ >ಸತ್ಯ. ವೇದದಲ್ಲಿ ಋತ: ಸತ್ಯ ಎಂಬ ಜೋಡು ಸಂಕೇತದಿಂದ ನಿರ್ದೇಶಿಸಲ್ಪಡುವ ಸತ್ಯವು ಇದು.

ತತ್: ಏಕಂ ಸತ್ ಮತ್ತು **ತತ್**: ಸವಿತೃವಿನ ಪ್ರಕಾಶದಲ್ಲಿ ಕಾಣುವ ಸತ್ (ಸತ್ಯ) ಇವೆರಡೂ ಸತ್ಯಗಳ ಪಾತಳಿಗಳಲ್ಲಿ, ಭೂಮಿ ಮತ್ತು ಆಕಾಶ ಇವೆರಡರಲ್ಲಿ ಇರುವಷ್ಟು ಅಂತರವಿದೆ. ಭೌತಸೃಷ್ಟಿ ಮತ್ತು ಸಾಂಸ್ಕೃತಿಕ ಸೃಷ್ಟಿ ಹೇಗೆ ಆಯಿತು ಎಂಬುದರ ಬಗೆಗಿನ ಎರಡು ಸ್ವತಂತ್ರ (Cosmogony) ಉಲ್ಲೇಖಗಳಿವೆ. ವೇದದಲ್ಲಿ (೧) ಏಕಂ ಸತ್ (I. ೧೬೪.೪೬) ಅಥವಾ ಈ ವೈಚಾರಿಕ ಸೂತ್ರವೇ ದೈವತ ವಾದದ ಭೂಮಿಕೆಯಲ್ಲಿ 'ದ್ಯಾವಾ ಭೂಮೀ ಜನಯನ್ **ದೇವ ಏಕಃ**' (x.೮೧.೩) ಎಂಬ ಸ್ವರೂಪದಲ್ಲಿ ಅಭಿವ್ಯಕ್ತವಾಗಿದೆ. ಇದು, ಜೀವ ಸೃಷ್ಟಿಯು ಪೈದಾಳುವ ವಿಚಾರವನ್ನು ನಿವೇದಿಸುತ್ತದೆ. ಆದರೆ ಇದೇ ಬಗೆಯಲ್ಲಿ (೨) **ಋತಂ** ಚ **ಸತ್ಯಂ** ಚ ಅಭಿಧಾತ್ ತಪಸಃ ಅಜಾಯತ್....ಎಂಬ ಈ ಸೂತ್ರವು, ಮಾನವ ಜೀವನ ಪಾತಳಿಯ ಮೇಲೆ ಕಾಣಿಸಿಕೊಳ್ಳುವ 'ಸಾಂಸ್ಕೃತಿಕ' ಸೃಷ್ಟಿಯ ಆಧಾರಭೂತ ತತ್ತ್ವವನ್ನು ವಿವರಿಸುತ್ತದೆ.

ಇವೆರಡೂ 'ಸತ್ಯ'ದ ಆಕೃತಿ-ಸ್ವರೂಪ ಸಮಾನವಿಲ್ಲ. (೧) '**ಏಕಂ**' **ಸ್ವರೂಪೀ ಸತ್ >ಸತ್ಯವು** ಅ-ಖಂಡಿತ ವಿಶ್ವರೂಪ: 'ಅ-ದಿತಿ' ಸ್ವರೂಪ (Undifferentiated whole) ಆಗಿದೆ. ಇದನ್ನು '**ಏಕಂ** ಏವ ಅ-ದ್ವಿಯಮ್' ಎಂದು ಉಪನಿಷದಾದಿಗಳು ವರ್ಣಿಸಿವೆ. ಪಾಶ್ಚಾತ್ಯ ಭಾಷಿಕರು 'One without second' ಎಂದು ಹೇಳುವ 'whole truth' ಎಂಬುದು ಭಾರತೀಯ ಏಕಂ: ಸತ್ಯದಿಂದ ಭಿನ್ನವಲ್ಲ.

‘ಸೃಷ್ಟಿಯ ಆದಿಯಲ್ಲಿ ಎಲ್ಲೆಲ್ಲೂ ನೀರೇ ನೀರು ವ್ಯಾಪಿಸಿತ್ತು’ ಎಂಬ ಶ್ರದ್ಧೆ ಭಾರತದಂತೆ, ಇಜಿಪ್ತದವರೆಗಿನ ಹತ್ತಿರೊಂದಿರುವ ಪಶ್ಚಿಮ ಪ್ರದೇಶದ ಪುರಾತನ ಸಂಸ್ಕೃತಿಯಲ್ಲೂ ಪ್ರಭಾವಶಾಲಿಯಾಗಿತ್ತು. ‘ಆಪೋ ವಾ ಇದಂ ಅಗ್ರೇ ಆಸೀತ್’ ಎಂಬ ಶ್ರದ್ಧೆಯೆ, ‘ಆತ್ಮಾ ವಾ ಇದಂ ಅಗ್ರೇ ಆಸೀತ್’ ಎಂಬ ರೂಪದಲ್ಲೂ ಉಂಟು. ಅ-ಖಂಡಿತ ವಿಶ್ವರೂಪ ‘ಏಕಂ’ ಸ್ವರೂಪೀ ಈ ‘ಆತ್ಮ’ ತತ್ತ್ವ: ಇದೇ ಏಕಮೇವ ಸತ್ಯ; ಈ ‘ಸತ್ಯವೇ ದೇವರು’ ಅಥವಾ ಈ ‘ದೇವರೇ ಸತ್ಯ’ ಎಂದರೂ ಸರಿ. ಈ ಮಾತುಗಳನ್ನು ಒಂದೊಂದರ ಸಂಬಂಧದಲ್ಲಿ ಗ್ರಹಿಸಿಕೊಂಡರೆ, ‘ಏಕಂ ಏವ ಅದ್ವಿತೀಯಂ’ ಸ್ವರೂಪೀ ಸತ್ಯವು ಆಪಃ ರಸ ಸ್ವರೂಪಿಯಾಗಿದೆ. ಈ ‘ದೇವರು’ ಎಂಬುವನು ರಸಸ್ವರೂಪನು, ರಸಾಧಿಪತಿ ಎಂಬ ಮಾತು ಹೊರಡುತ್ತದೆ. ತೈತ್ತರೀಯ ಉಪನಿಷತ್ತಿನ ‘ರಸೋ ವೈ ಸಃ’ ಎಂಬ ವಾಕ್ಯವು ಇದಕ್ಕೆ ಪ್ರಮಾಣ. ಗಂಗೆಯು ಶಿರದಲ್ಲಿರುವ ಶಿವ, ಗಂಗೆ ಪಾದದಲ್ಲಿ ಉದ್ಭವಿಸುವ ವಿಷ್ಣು ಈ ದೈವತ ಪ್ರತಿಮೆಗಳು ರಸೇಶ್ವರ ತತ್ತ್ವದ ದರ್ಶನ ಮಾಡಿಸುತ್ತವೆ.

(೨) ಇನ್ನು ಋತ; ಸತ್ಯದ ಆಕೃತಿ-ಸ್ವರೂಪವು ‘ಏಕಂ’ ಸತ್ತಿಗಿಂತ ತೀರ ಭಿನ್ನ ಸ್ವರೂಪದ್ದು; ಮತ್ತು ವಿಭಿನ್ನ ಪಾತಳಿಯ ಮೇಲಣದು, ಎಂಬುದೂ ವೇದದಲ್ಲಿ ದೊರೆವ ಪ್ರಮಾಣಗಳಿಂದಲೇ ಸ್ಪಷ್ಟತೆಯನ್ನು ಪಡೆಯುತ್ತಿದೆ.

ಇಲ್ಲಿ ಓದುಗರು ಕೇಳಬಹುದು: ಸವಿತೃ ದೇವನ ಪ್ರತಿಮಾ ಪರಿಚಯ ಮಾಡಿಕೊಡಲು ಹೊರಟ ಈ ವಿವರಣೆಯಲ್ಲಿ ‘ಸತ್ಯ’ ‘ಸತ್ಯ’ಗಳ ನಡುವಣ ಅಂತರ, ಇವೆರಡರ ಆಕೃತಿ ಸ್ವರೂಪದ ವಿಚಾರಕ್ಕೆ ತೊಡಗಿದ್ದೇಕೆ? ಇದು ವಿಷಯಾಂತರವಲ್ಲವೆ? ಮೊದಲು ಭೌತ ಪಾತಳಿಯ ವಿಚಾರವು ತಿಳಿಯದೆ, ಸಾಂಕೇತಿಕ ಪಾತಳಿಯ ಸವಿತೃವಿನ ವಿಚಾರ ತಿಳಿಯಲು ಅಶಕ್ಯ. ಭೌತಸೂರ್ಯ ಪ್ರಕಾಶದ ಹಿನ್ನೆಲೆಯಲ್ಲಿ ಕಾಣುವ-ಅರಿಕೆಗೆ ಬರುವ-ಏಕಂ ಸ್ವರೂಪೀ ಸತ್ಯ ಕುರಿತು ಮೊದಲು ಹೇಳಿದ್ದಾಯ್ತು. ಋತ ಸ್ವರೂಪೀ ಸತ್ಯವು ಅರಿಕೆಗೆ ಬಂದದ್ದು-ಅರಿಕೆಗೆ ಬರಬಹುದಾದ್ದು ‘ಸವಿತೃ’ ದೈವತ ವಿವರಣೆಯು ಇದೀಗ ಆರಂಭವಾಗಲಿದೆ.

ಆಪಃ ರಸ-ಜನ್ಯ ಜೀವಿಯನ್ನು ‘**ನರ**’ನೆಂದಿರುವಲ್ಲಿ ಔಚಿತ್ಯವಿದೆ. ‘ಆಪೋ **ನಾರಾಃ** ಇತಿ ಪ್ರೋಕ್ತಾಃ; **ಆಪೋ ವೈ ನರಸೂನವಃ**....’ ಎಂದು ಸ್ವಯಂ ‘ನಾರಾಯಣ’ನೆ (ಆಪೋ ದೇವ) ನಾರದನಿಗೆ ಸ್ವನಾಮ ರಹಸ್ಯವನ್ನು ವಿವರಿಸುವಾಗ ಹೇಳಿದ್ದಾನೆ: (ಶಾಂತಿ ಪರ್ವ ನಾರಾಯಣಾಖ್ಯಾನದಲ್ಲಿ). ‘ನಾರ’ (ಆಪ) ಸಂತಾನ ನರರು; ಈ ನರವರ್ಗ ಭಾಷಾಸೃಷ್ಟಿಯೊಡನೆ ಮನು-ಜ ಪಾತಳಿಯ ಜೀವಿಯಾಗುತ್ತದೆ. ಭಾಷೆಯೊಡನೆ ಹುಟ್ಟಿದ ನರರು ಈ ಪ್ರಪಂಚದಲ್ಲಿ ಎಲ್ಲಿಯೂ ಕಾಣಲು ದೊರೆಯಲಾರರು. ಭಾಷಾ-ಪೂರ್ವ ಅವಸ್ಥೆಯ ನರ, ಮತ್ತು ವಾನರ ‘**ವಾ** ನರ’ ಎರಡರಲ್ಲಿಯೂ ಲಾಂಗೂಲ, (:ಲಾಂಗಲ-ಲಂಗ) ಹೊರತು ವಿಶೇಷ **ಭೇದವಿರಲಿಲ್ಲ,-ಇಲ್ಲ ಇಂದಿಗೂ!**

'ಭಾಷಾ' ಎಂಬ ಹೆಸರಿನ ಔಚಿತ್ಯವನ್ನು ಮನಗಾಣಲು, (ಭಾಷೆಯ ಅಭಾವದಲ್ಲಿ ಕತ್ತಲು ತಮ್ಮನ್ನು ಹೇಗೆ ಸುತ್ತುವರಿಯುತ್ತದೆ ಎಂಬುದನ್ನು ಅರಿಯಲು) ಪ್ರೌಢರು, ವಿಚಾರವಂತರು ಎಂಬವರು, ಕ್ಷಣಕಾಲ ಒಂದು ಪ್ರಯೋಗ ಮಾಡಿ ನೋಡಬೇಕು. ಕಣ್ಣು ತೆರೆದು ಇಟ್ಟೇ, ಮನಸಿನಲ್ಲಿ ಏನೊಂದು ಶಬ್ದ ಪ್ರತಿಮೆ, ಶಬ್ದ ಸಂಕೇತ ಬರಗೊಡದೆ ಸುತ್ತಲೂ ನೋಡುವ, ವಿಚಾರ ಮಾಡುವ ಪ್ರಯತ್ನ ನಡೆಸಬೇಕು. ಉಸಿರು ಆಡಿಸದೆ ಕ್ಷಣ ಹೊತ್ತು-ಕೆಲ ಹೊತ್ತು-ಇರುವಷ್ಟು ಅವಧಿ ಯವರೆಗೆ ಸಹ, ತಲೆಯಲ್ಲಿ ಒಂದೂ ಮಾತು (:ಶಬ್ದ, ವಾಕ್ಯ) ಬರದಂತೆ ಇರುವುದು ಅದೆಷ್ಟು ಕಷ್ಟವಿದೆ ಎಂಬುದು ಗೊತ್ತಾಗಬಲ್ಲದು. ಅರ್ಥ: ವಿಚಾರ (concept) ಎಂಬುದು ಸ್ವಯಂ ಜ್ಯೋತಿಃ ಸ್ವರೂಪವಿದೆ. ಈ ಅರ್ಥ: ವಿಚಾರ ಧಾರಣೆಗೆ (conception) 'ಮಾಧ್ಯಮ' ರೂಪ ಶಬ್ದಪ್ರತಿಮೆ, ಶಬ್ದಸಂಕೇತ ಅನಿವಾರ್ಯ ವಿದೆ. ಸಂದೇಹ-ನಿರಾಶೆ ಆವರಿಸಿದಾಗ 'ಕತ್ತಲು' ಕವಿದ ಅನುಭವ ಬರುತ್ತದೆ. ಈ ಸಂದೇಹ ನಿವಾರಣೆ ಮಾಡುವ ವಿಚಾರವು 'ಹೊಳೆ'ಯುತ್ತಲೆ ಆ 'ಕತ್ತಲು' ದೂರವಾಗುವ ಅನುಭವವು ಯಾರಿಗೆ ಗೊತ್ತಿಲ್ಲ? ಈ 'ಕತ್ತಲು' ಮತ್ತು ಈ 'ಪ್ರಕಾಶ' ಇವೆರಡೂ ಅಭೌತ; ಸಾಂಕೇತಿಕ: ತಾತ್ತ್ವಿಕ ಪಾತಳಿಯ ಮೇಲಣ ಅನು ಭವ ಸೂಚಕ ಮಾತುಗಳು. 'ಭಾಷೆ' ಎಂಬುದರೊಳಗಿನ 'ಭಾ' ಸಂಕೇತವು ಪ್ರಕಾಶ ಸೂಚಕ ಅರ್ಥವುಳ್ಳದಾಗಿದೆ. 'ಭಾಸ', ಪ್ರಜ್ಞೆ, ಅರಿವು, ಎಚ್ಚರ; ಇದು ಜಗ ಲಿನ ಜೀವನ ರೀತಿ ಸೂಚಕ; 'ಭಾ'ನು ಉಪಾಸಕರ ಮೌಲಿಕ ಮಾತು. 'ಸವಿತೃ' ಎಂಬುದು ಜ್ಞಾನ ಪ್ರೇರಕ, ಜ್ಞಾನ ಪ್ರಚೋದಕ ಶಕ್ತಿಯು ದೈವತ ಎಂಬರ್ಥದ ಪದ. ವೈದಿಕ ದೈವತ ಕಥಾವ್ಯಾಸಂಗಿ ಮ್ಯಾಕ್‌ಡೊನೆಲ್ ಬರೆಯುತ್ತಾರೆ " clearly the (ಸೂ > ಸವ್) root has the sense of stimulating, arousing, vivifying" (Vedic Mythology P-34). ಆದಕಾರಣ ಈ 'ಸವಿತೃ'ವು ಬರಿ ಜ್ಞಾನರೂಪ ಪ್ರಕಾಶದ ಮೊತ್ತವಲ್ಲ: ಇದು (ಕಾರ್ಯಕ್ಕೆ) ಪ್ರೇರಕ, ಪ್ರಚೋದಕ ಶಕ್ತಿಯುತ ಜ್ಞಾನ; ದೈವತ.

ಆದುದರಿಂದ ವಿಚಾರ: ಜ್ಞಾನದ ಮಾಧ್ಯಮವಾದ 'ಭಾ'ಷೆಯ ಹಿಂದಿನ ವಿಚಾರ ಪ್ರೇರಕ, ಪ್ರಚೋದಕ ಶಕ್ತಿ-ತತ್ತ್ವ ಎಂದರೇ 'ಸವಿತೃ' ದೈವತ. ಋಗ್ವೇದ ದಲ್ಲಿ, 'ಸವಿತೃ'ದೇವನನ್ನು 'ಕವಿ'ಯ ರೂಪಕದಿಂದ ವರ್ಣಿಸಿರುವುದು ನಿಷ್ಕಾರಣವಲ್ಲ; 'ವಿಶ್ವಾ ರೂಪಾಣಿ ಪ್ರತಿಮುಂಚತೇ ಕವಿಃ' (:ಸವಿತಾ ದೇವಃ) (V.೮೧.೨); ಇನ್ನೊಂದು ವರ್ಣನೆಯಲ್ಲಿಯೂ 'ಕವಿ' ಎಂಬ ವಿಶೇಷಣವು ತಪ್ಪದೆ ಬಂದಿದೆ IV.೫೩.೨) ಪ್ರತಿ'ಭಾ'ಶಾಲಿ ಕವಿಯ ಮೂಲಕ 'ಹ್ಯಾಮ್ಲೆಟ್' ಎಂಬ ಪಾತ್ರವು, ತನ್ನ ಗುಣ ವಿಶೇಷಗಳಿಂದ ಇಂದಿಗೂ ಅಮರವಾಗಿ ಉಳಿದಿದೆ! ಕವಿ ಸೃಷ್ಟಿಸುವ 'ವಿಶ್ವಾ' ರೂಪಿಣಿ (:ನಾನಾ ರೂಪ ಆಕೃತಿಗಳ) ಪಾತ್ರಗಳು, ನಮಗೆ ಮಾನವ ಜೀವನದ ಅರ್ಥಕ್ಕೆ ಕನ್ನಡಿ ಹಿಡಿಯುತ್ತವೆ. ಮಾನವ ಜೀವನದ ಅರ್ಥವು ಅಮೂರ್ತವಿದೆ; ಅವ್ಯಕ್ತ

ಇದೆ. ಆಕೃತಿ ರೂಪವಿಲ್ಲದ =ನಾಮ - ರೂಪಾತ್ಮಕವಲ್ಲದ ಸೃಷ್ಟಿಯು ಅರ್ಥವು ಆಗಲು ಶಕ್ಯವಿಲ್ಲ.

ಭೌತ ಪ್ರಕಾಶದಲ್ಲಿ ಹ್ಯಾಮ್ಲೆಟ್ ವ್ಯಕ್ತಿಯ ಬಾಹ್ಯ ಸ್ಥೂಲ ಆಕೃತಿ ಸ್ವರೂಪವು ಮಾತ್ರ ಕಾಣಬಲ್ಲದು. ಆದರೆ ಸ್ಥೂಲ ಸೃಷ್ಟಿಯು ಅಂತರಂಗದ ಅರ್ಥವಾಗಲು ಆವಶ್ಯಕವಾದ ಪ್ರಕಾಶವನ್ನು, ಪ್ರತಿಭಾ ಶಕ್ತಿಯೇ ಒದಗಿಸಬಲ್ಲದು. ಈ ಪ್ರತಿ'**ಭಾ**' **ಪ್ರೇರಣೆಗೆ ಸವಿತೃ ದೇವನೇ ಕಾರಣನು** ಎಂಬುದು ಭಾರತೀಯ ಸಂಸ್ಕೃತಿಯಲ್ಲಿ ಉಳಿದು ಬಂದಿರುವ ಸನಾತನ ಶ್ರದ್ಧೆಯಾಗಿದೆ.

ಋಗ್ವೇದದಲ್ಲಿ ಭೌತ ಸೃಷ್ಟಿಗೆ ಕಾರಣನನ್ನು 'ಪ್ರಜಾಪತಿ' ಎಂದಿರುವಂತೆ, ಸಾಂಸ್ಕೃತಿಕ ಸೃಷ್ಟಿಗೆ ಪ್ರೇರಕನು ಪ್ರಚೋದಕನು ಆದ ದೈವತವನ್ನೂ 'ಪ್ರಜಾಪತಿ' ಎಂದೇ ವರ್ಣಿಸಿರುವಲ್ಲಿ, ಸಂದಿಗ್ಧತೆಗೆ, ಮೋಸಕ್ಕೆ ಅವಕಾಶವಿದೆ. ನರನ ಜನ್ಮಕ್ಕೆ ಕಾರಣ 'ಪ್ರಜಾಪತಿ'ಯನ್ನು 'ಹಿರಣ್ಯ **ಗರ್ಭಃ** ಸಮವರ್ತತಾಗ್ರೇ, ಭೂತಸ್ಯ ಜಾತಃ ಪತಿಃ ಏಕ ಆಸೀತ್' (X.೧೨೧), ಎಂದಿರುವಲ್ಲಿ ಅಸಮರ್ಪಕತೆ ಎಳ್ಳನಿತೂ ಇಲ್ಲ. ಈ ಹಿರಣ್ಯ ಗರ್ಭವನ್ನು 'Golden Germ' ಎಂದು ತಜ್ಞರು ಭಾಷಾಂತರಿಸಿದ್ದು ಸಮರ್ಪಕವಿದೆ. ಆದರೆ ಜ್ಞಾನದಾತಾರನಾಗಿ, ನರನಿಗೆ **ಮನುಜನ** ಜನ್ಮವೀಯುವವನನ್ನೂ, ಒಂದು ಬಗೆಯಲ್ಲಿ 'ಪ್ರಜಾಪತಿ' ಎನ್ನಬಹುದಾದರೂ ಇದರಲ್ಲಿ ಔಚಿತ್ಯವು ಕಡಿಮೆಯಿದೆ - ಅರ್ಥದ ಸಂದಿಗ್ಧತೆಗೆ ಅವಕಾಶ ದೊರೆಯುತ್ತಿರುವುದರಿಂದ.

ಸವಿತೃದೇವನ ಇನ್ನೊಂದು ವರ್ಣನೆಯೊಳಗಿನ ಸಾಂಕೇತಿಕತೆಯ ಉಚ್ಚ ಪಾತಳಿ, ಇಂದಿಗೂ ಅಪೂರ್ವವಿದೆ; ಕೌತುಕಾಸ್ಪದವಾಗಿದೆ.

(ಹೇ ಸವಿತಃ ದೇವ!) "ಉತ ರಾತ್ರೀಂ ಉಭಯತಃ ಪರಿ ಈಯಸೇ" (V. ೮೧.೪)

'ಸವಿತೃದೇವನು ಉಭಯ ರಾತ್ರಿಗಳ ನಡುವಣಿಂದ ಹೊರಟಿದ್ದಾನೆ' ಎಂಬ ಈ ಸಾಂಕೇತಿಕತೆ ಭೌತಸೂರ್ಯನಿಗೆ ಸರಿಹೋಗುವುದಿಲ್ಲ. ಅಕ್ಕಪಕ್ಕದ (: ಉಭಯತಃ) ರಾತ್ರಿಗಳ ಮಧ್ಯೆ ನಡೆದಿರುವ ಈ ಸವಿತೃ (ಪ್ರಕಾಶ ತತ್ತ್ವದ) ದೈವತವು ಏನು ? ಎಂತಹದು ?

ಭಾ(ಷಾ)ರೂಪ ಸವಿತೃದೇವನ ಅಭಾವದಲ್ಲಿ, ಈ ಮಾನವರ ಪಾಲಿಗೆ ನಿನ್ನೆ → ಇಂದು → ನಾಳೆ ಎಂಬ ಕಾಲ ವಿಭಾಗಗಳೇ ಇಲ್ಲ. ಈ ಕಾಲ (ಸರ್ಪ)ವು ವಿಶ್ವವನ್ನು ಆವರಿಸಿ 'ವೃತ್ರ'ಕಾರದಲ್ಲಿ ಪ್ರಪಂಚವನ್ನು ತಾನೇ ತಾನಾಗಿ ಆಳುತ್ತದೆ. ಇದು ಅಖಂಡಿತ: ಅದಿತಿ ಸ್ವರೂಪ= Undifferentiated whole ಆಕೃತಿ ಸ್ವರೂಪವಾಗಿದೆ. ವೇದದಲ್ಲಿ ವರ್ಣಿತ 'ಏಕಂ' ಸ್ವರೂಪಿ ಸತ್ > ಸತ್ಯ ಎಂದರೇ ಈ ವೃತ್ರ, ಈ ಅದಿತಿ: ಅಖಂಡಿತರೂಪ ಆಕೃತಿ. ಇದನ್ನು ಕಗ್ಗತ್ತಲೆ: ಕಾಲ ಸರ್ಪ ಎಂದಿರುವಲ್ಲಿ ಇರುವ ಸಮರ್ಪಕತೆ ಅಪೂರ್ವವಿದೆ. ಈ ಕಗ್ಗತ್ತಲೆ—ಕಾಲ: ಸರ್ಪ—ಸವಿತೃ ಕೃಪೆಯ ಪ್ರಜ್ಞೋದಯದೊಡನೆ ತುಂಡರಿಸಲ್ಪಡುತ್ತದೆ,--'ಇಂದು'

ಸಂಜ್ಞೆಯಿಂದ ಗ್ರಹಿಸಿಕೊಳ್ಳಲಾಗುವ ಬಿಂದುವಿನಲ್ಲಿ 'ಇಂದು' ಉಂಟೆಂದು ನಿನ್ನೆ ಉಂಟು ; ನಾಳೆಯೂ ಉಂಟು !

ನಿಜವಾಗಿ 'ಇಂದು' ಈ ಕಾಲ ಪರಿಮಿತಿ ಒಂದು ಕ್ಷಣ ಸೂಚಕ. 'ಇಂದು' ಈ ಕ್ಷಣದ ಒಂದು ಪಕ್ಕದಲ್ಲಿ 'ನಿನ್ನೆ' : ಗತಕ್ಷಣ = ಕಾಲ ಇರುತ್ತದೆ; ಇನ್ನೊಂದು ಆಗಾಮಿ ಕ್ಷಣ, 'ನಾಳೆ' ಈ ಸಂಜ್ಞೆಯಿಂದ ಗುರುತಿಸಲ್ಪಡುತ್ತಿದ್ದು 'ಇಂದು' ಇದರ ಮುಂದೆಯೇ ಇನ್ನೊಂದು ಪಕ್ಕದಲ್ಲಿ ಇರುತ್ತದೆ. 'ಇಂದು' ಇದು ಸ್ಮೃತಿ : ಅರಿವು: ಭಾನವನ್ನು ಅವಲಂಬಿಸಿದೆ. 'ಇಂದು' ಈ ಭಾವ (ಬೆಳಕು) ಮಸುಳಿಸುತ್ತಲೆ, ಮರಳಿ ಏನೆಲ್ಲ ಕತ್ತಲು ; ವೃತ್ತನ ಸಾಮ್ರಾಜ್ಯ ! ಮಾನವರ ಜೀವನಾನುಭವಗಳು ನಿನ್ನೆಯ ಕತ್ತಲಲ್ಲಿ ಅಡಗುತ್ತವೆ. ಅವಕಾರಣ ಅರ್ಥವಾಗದ ನಿನ್ನೆಗಳು ಎಂದರೆ ಕತ್ತಲೆ: ಸುಪ್ತಚೇತನ. ಆಗಾಮಿ ನಾಳೆಯ ಒಡಲೊಳಗಿನ ಅರ್ಥ : ವಿಚಾರವು ಮಾನವನ ಲೆಕ್ಕಕ್ಕೆ ನಿಲುಕದೆ ಉಳಿಯುವುದರಿಂದ "ನಾಳೆ" ಎಂಬುದೂ ಕತ್ತಲೆ. ಇಂತು, 'ಇಂದು' ಈ ಕ್ಷಣವು ಸದಾಕಾಲವೂ ಕೆಲ-ಬಲದ ಎರಡು ಕತ್ತಲು : ರಾತ್ರಿಗಳ ನಡುವೆ ಹೊರಟಿದೆ. 'ಇಂದು' ಈ ಭಾನ ಸವಿತೃವಿನ ಕೃಪೆ ಎಂಬುದನ್ನು ಸ್ಮರಿಸಿ ಕೊಂಡರೆ, ಈ 'ಸವಿತೃ' ದೇವನು ಎರಡು ಇರುಳುಗಳ ನಡುವಣಿಂದ ಸಾಗುತ್ತಾನೆ ಎಂಬ ಪುರಾತನ ಕವಿಯ ದರ್ಶನದ ಸಾರ್ಥಕ್ಯವು ಗಮನಕ್ಕೆ ಬರಬಲ್ಲದು. ಈ ಎರಡು ಇರುಳುಗಳಲ್ಲಿ ನಿನ್ನೆಯನ್ನೂ (ಅರಿತು ಮರೆತುದನ್ನು) ಸುಪ್ತಚೇತನ (Subconscious) ಮತ್ತು ಆಗಾಮಿಯನ್ನು, ಅರಿಕೆಗೆ ನಿಲುಕದ್ದನ್ನು ಅಪ್ರಕೇತ (Unconscious) ಚೇತನ ಎಂದು ಆಧುನಿಕ ಪರಿಭಾಷೆಯಲ್ಲಿ ವಿವರಿಸಬಹುದು.

ಆದರೆ ಈ ಸವಿತೃವಿಗೂ ಋತ : ಸತ್ಯದ ವಿಚಾರಕ್ಕೂ ಏನು ಸಂಬಂಧ ? ಎಂಬ ಮಹತ್ತ್ವದ ಅಂಶದ ವಿಚಾರವೂ ಈ ಸಂದರ್ಭದಲ್ಲಿ ಕ್ರಮಪ್ರಾಪ್ತ ಕರ್ತವ್ಯ ವಾಗುತ್ತದೆ. ಋತ ಸ್ವರೂಪಿ ಸತ್ಯದ ಅರ್ಥವು ವಿಶದವಾಗಲು ಏಕಂ ಸ್ವರೂಪೀ ಸತ್ಯದ ಅರ್ಥವು ಸ್ಪಷ್ಟವಾಗುವ ಅವಶ್ಯಕತೆಯಿದೆ.

'ಏಕಂ ಏವ ಅದ್ವಿತೀಯಂ' ಸ್ವರೂಪೀ ಸತ್ಯವು ಅರ್ಥಕ್ಕೆ ಒಗ್ಗದ-ಅರ್ಥಕ್ಕೆ ಅಳವಡದ ವೈಶಿಷ್ಟ್ಯವುಳ್ಳದ್ದು! 'ಏಕಂ' ಇದು ವಿಶ್ಲೇಷಣಕ್ಕೆ ಒಗ್ಗಿದ್ದರೆ ಅದರ 'ಏಕಂ' (:Undifferentiated whole)' ಈ ವೈಶಿಷ್ಟ್ಯಕ್ಕೆ ಬಾಧೆ ಬರಲಿದೆ! ಈ 'ಏಕಂ' ತತ್ತ್ವವು ಏಕಕಾಲಕ್ಕೇ ಪರಸ್ಪರ ವಿರೋಧೀ-ವಿಪರೀತಗಳನ್ನು ಏಕತ್ರ ಅಪೇಕ್ಷಿಸುತ್ತದೆ. 'ಅಮೃತಂಚೈವ ಮೃತ್ಯುಃ ಚ, ಸತ್ ಅಸತ್ ಚ ಸ್ವರೂಪದ ತತ್ತ್ವವಿದು! ಹಿರಣ್ಯ ಗರ್ಭ ದೇವನ ಸೂಕ್ತದಲ್ಲಿ, ವೇದದಲ್ಲಿ ಸಹ ಇದೇ ವಿವರಣೆಯುಂಟು : 'ಯಸ್ಯ ಛಾಯಾ ಅಮೃತಂ ಯಸ್ಯ ಮೃತ್ಯುಃ' (X. ೧೨೧) ಈ 'ಹಿರಣ್ಯಗರ್ಭ' ದೈವತದ ಉಪಾಸನೆ ರಾತ್ರಿ ಸಂಪ್ರದಾಯವಾಗಿರುವಲ್ಲಿ ಇರುವ ಅಂತಃ ಸಂಗತಿ (Self Consistency) ಇದು ಸಾರ್ವಕಾಲಿಕ ಸತ್ಯ, ತ್ರಿಕಾಲಾಬಾಧಿತ ಸತ್ಯ. ಸವಿತೃ ಪ್ರಕಾಶದಲ್ಲಿ ಅರಿಕೆಗೆ ಬರುವ ಸತ್ಯ : ವಿಶ್ವಸ್ಥ ನಿಯಮ.

ಈ ಅರ್ಥಗ್ರಹಣಕ್ಕೆ ಅವಶ್ಯಕವಿರುವ ಸೂಚಕ ಪ್ರಮಾಣಗಳು ವೈದಿಕ ಸಾಹಿತ್ಯದಲ್ಲಿಯೇ ಉಂಟು. 'ಸವಿತೃ'ವನ್ನು ಸೂರ್ಯರೂಪವೆಂಬಲ್ಲಿ ಇದು ಪ್ರಕಾಶ ತತ್ತ್ವಾಧಿಷ್ಠಿತ ದೈವತ ಎಂಬುದನ್ನು ಸಿದ್ಧಪಡಿಸಲು ಬಾಹ್ಯ ಪ್ರಮಾಣಗಳ ಅವಶ್ಯಕತೆಯುಂಟೆ? ಪ್ರಪಂಚವನ್ನು ಆವರಿಸುವದ, ಎಲ್ಲೆಲ್ಲೂ ಕತ್ತಲನ್ನು ಉಂಟುಮಾಡುವದ ಎಂಬ 'ವೃತ್ರ'ವನ್ನು ಚಂದ್ರನ ಪರ್ಯಾಯ ಎಂದು ವೇದವೆ ಹೇಳಿದೆ! ಈ ಕತ್ತಲೆಯ ರೂಪದ ಕಾಳಸರ್ಪ ಸಂಹಾರಿ: ಅಹಿ-ವೃತ್ರಘ್ನ ಎಂಬ ಇಂದ್ರನಿಗೆ 'ಸವಿತೃ'-ಸೂರ್ಯನ ಪರ್ಯಾಯ ಎಂಬ ಮಾತೂ ಈ ವೇದದಲ್ಲಿಯೆ ಉಂಟು, (II.30) "Indra is distinctly identified with Surya" ಎಂದೂ, the 'ಶತಪಥ ಬ್ರಾಹ್ಮಣ' too once identifies Indra with the Sun, Vrtra being the Moon. (Vedic Mythology P. 57), ಮ್ಯಾಕ್ ಡೊನೆಲ್ ಸಹ ನಮೂದಿಸಿದ್ದಾರೆ. ಸವಿತೃ ಪ್ರಕಾಶ ಪ್ರಜ್ಞೋದಯವು ತಲೆಯೆತ್ತುತ್ತಲೆ ಕತ್ತಲೆಯು-ಕಾಲ-ಸರ್ಪ ತನ್ನತಾನೆ ಇಲ್ಲವಾಗುತ್ತದೆ! ಈ ಕಾರಣದಿಂದ ಅಹಿರ್ಘ್ನ ಇಂದ್ರ, ಕತ್ತಲೆ ಓಡಿಸುವ ಸವಿತೃ ಬೇರೆಯಲ್ಲ.

ವೇದವು ವರ್ಣಿಸಿರುವ ಸವಿತೃ ದೈವತವು, ಪ್ರಕಾಶ ತತ್ತ್ವದ ಸಾರ ದೈವತವಿರುವಂತೆ, 'ಹಿರಣ್ಯಗರ್ಭ': ಪ್ರಜಾಪತಿ ದೈವತವು (ವೃತ್ರಶಕ್ತಿ) ರಾತ್ರೀ ತತ್ತ್ವದ ಚಾಂದ್ರ ದೈವತವಾಗಿದೆ. ಇವೆರಡಲ್ಲಿ ಯಾವುದೊಂದೇ (ಏಕಂ ಏವ) ಸತ್ಯ ಎಂಬ ಆಗ್ರಹವು, 'ಋತ' (ಎಂದರೆ ವಿಶ್ವನಿಯಮ) ಸ್ವರೂಪೀ ಸತ್ಯಕ್ಕೇ ಬಾಧಕವಾಗುತ್ತದೆ! ಋಗ್ವೇದದ ಮೂಲ ವರುಣನು, ಋತದ ಎಂದರೆ ವಿಶ್ವನಿಯಮದ-ವಿಶ್ವ ವ್ಯವಸ್ಥೆಯ ಸಂರಕ್ಷಕನು (ಋತಸ್ಯ ಗೋಪಾ) ಆಗಿದ್ದುದನ್ನು ತಜ್ಞರು ಕಂಡುಹಿಡಿದಿದ್ದಾರೆ. ಋತದ, ಎಂದರೆ ವಿಶ್ವನಿಯಮದ ಸಂರಕ್ಷಕ ದೈವತವು ಋತಕ್ಕೆ ಅಧೀನವಾಗಿ ಇರಬಲ್ಲನು. ಋತಸ್ವರೂಪೀ ಸತ್ಯದ ಸಂರಕ್ಷಕ ದೇವರು, ತಾನೇ ಸರ್ವತಂತ್ರ ಸ್ವತಂತ್ರನು, ಸರ್ವಾಧಿಕಾರಿ, ಅನಿಯಂತ್ರಿತ ದೈವತ ಶಕ್ತಿಯಾಗಲು ಶಕ್ಯವಿಲ್ಲ.

ಆದರೆ ಋತ: ಸತ್ಯಾಧಿಷ್ಠಿತ ಪ್ರಕಾಶ ತತ್ತ್ವದ ದೈವತ ಪೂಜಕರು ಮತ್ತು ಏಕಂ ಸತ್ ತತ್ತ್ವಾಧಿಷ್ಠಿತ ರಾತ್ರೀ ತತ್ತ್ವದ: ಅಸುರನ ಸ್ವರೂಪ ದೈವತ ಪೂಜಕರು, ಈ ಉಭಯ ಪಂಥಗಳ ಮೇಲ್ಮೆಯ ಸ್ಪರ್ಧೆಯಲ್ಲಿ 'ಏಕಂ' ಸ್ವರೂಪೀ ಸತ್ಯವು ಎಂದರೆ ರಾತ್ರೀಸಂಪ್ರದಾಯವೇ ಲೋಕಪ್ರಿಯವಾದುದಕ್ಕೆ, ಇಂದಿನ ಋಗ್ವೇದದಲ್ಲಿಯೇ ಪ್ರಮಾಣಗಳು ದೊರೆಯುತ್ತವೆ. ಪಂಚರಾತ್ರ, ನವರಾತ್ರ, ಶಿವರಾತ್ರ್ಯಾದಿ ರಾತ್ರೀ ಸಮಯಾಚಾರಗಳು ಶಿಷ್ಟ ಮಾನ್ಯವಾಗಿ ಸಾಂಕೇತಿಕ ರೀತಿಯಿಂದ ಹಗಲಿನಲ್ಲಿಯೇ ಆಚರಿಸುವ ಇಂದಿನ ರೂಢಿಯು ಋತಃ ಸತ್ಯವು ಮರೆತು ಹೋದುದಕ್ಕೆ ಸಾಕ್ಷಿಯಾಗಿದೆ.

o o o o

'ಏಕಮೇವ ಸತ್ಯ' ಎಂಬ ಶ್ರದ್ಧೆಯು ಜೀವನ ರೀತಿಯಲ್ಲಿ ಸಾಮಾಜಿಕ ಸಮಷ್ಟಿಗೆ-ಬದ್ಧವಿದ್ದ ಸಂಸ್ಕೃತಿಗೆ ವ್ಯಾಘಾತವಾಯಿತು. 'ಏಕಂ ಏವ' ಅದ್ವಿತೀಯ ಸತ್ಯದ

ಅನುಸಂಧಾನದಲ್ಲಿ ಪಿಂಡಾಂಡ ಬ್ರಹ್ಮಾಂಡ ಐಕ್ಯ–ಇದುವೆ ಬಾಳ ಗುರಿಯಾಗಲೇ ಬೇಕು. 'ಕಲೆಗಾಗಿ ಕಲೆ', 'ಸಾಹಿತ್ಯಕ್ಕಾಗಿ ಸಾಹಿತ್ಯ', 'ರಾಷ್ಟ್ರಕ್ಕಾಗಿ ರಾಷ್ಟ್ರ'....ಎಂಬೀಬಗೆಯ ಶ್ರದ್ಧಾ ಪ್ರಕಾರಗಳು ಏನೆಲ್ಲ 'ಇಝು'ಂಗಳು 'ಏಕಂ ಏವ' ಸತ್ಯದ ವಿವಿಧ ಪರ್ಯಾಯಗಳೇ ಆಗುತ್ತವೆ. ಸಾಧನ ಮತ್ತು ಸಾಧ್ಯ (: ಸಿದ್ಧಿ) ಇವೆರೆಡರ ನಡುವಣ ಅಂತರವು ನಷ್ಟ ವಾಗುವಲ್ಲಿ, ಜೀವನದಲ್ಲಿ ಅರ್ಥ: ಮೂಲ್ಯಕ್ಕೆ ಸ್ಥಾನವೆ ಉಳಿಯಲಾರದು. ಇದು ಇಂದ್ರಿಯ ಪೂಜಕರ ರಾತ್ರೀ ಸಂಪ್ರದಾಯದ ಆಕಾರಕ್ಕೆ ಮಾರ್ಪಡದೆ ಇದ್ದರೇ ಸೋಜಿಗ!

ಮಾನವನು **ನರ-ಮನು-ಜ**ನಾಗಿದ್ದಾನೆ. 'ನಳ' (ನರ)ನಿಗೆ '**ದಮಯಂತಿ**' ಯನ್ನು ಮಡದಿಯಾಗಿ ಕಲ್ಪಿಸಲಾಗಿರುವ ಸಾಂಕೇತಿಕತೆಯಲ್ಲಿ ಮನುಜ ಪಾತಳಿಯ ಜೀವನ ರೀತಿಯ ಅರಿವೂ ಸ್ಪಷ್ಟವಾಗಿ ಎದ್ದು ಕಾಣುವಂತಿದೆ; ಆದರೆ **ಮದ-ಯಂತಿ** ಯಂತೆ 'ದಮಯಂತಿ'ಯು ಅಚ್ಚುಮೆಚ್ಚಿನ ನಲ್ಲೆಯಾಗಲು ಅಶಕ್ಯ ಎಂಬ ಹಾಗಿನ ಕೃತಿರಚನೆ ಮತ್ತು ಸಾಹಿತ್ಯಕರ ಪ್ರಭಾವದಿಂದಾಗಿ ಮಾನವ ಜೀವನ ರೀತಿಯು, ಭಾರತೀಯರಲ್ಲಿ ಸಹ, ರಾತ್ರೀ ಸಂಪ್ರದಾಯದ ಪ್ರಸ್ಥ ಬೆಳೆಯುತ್ತ ಬರಲು ಕಾರಣ ವಾಗಿದೆ.

ತತ್ ಸವಿತುಃ ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ
ಧಿಯೋ ಯೋ ನಃ ಪ್ರಚೋದಯಾತ್ । (III. ೬೨. ೧೦)

o o o

ವೇದ ಪುರಾಣಾದಿಗಳ ಕಾಲ ಎಂದೋ ಮುಗಿದುಹೋಗಿದೆ. ಸಾವಿರಾರು ವರ್ಷಗಳ ಹಿಂದಿನ ಈ ದೈವತಗಳ ಪವಾದ ಕಥೆ (myth) ಆಧುನಿಕ ಕಾಲದಲ್ಲಿ ಪ್ರಯೋಜನವೇನು? ಅದನ್ನು ಆಗಿಹೋಯ್ತು; ಅದನ್ನು ಮತ್ತೆ ಕೆದುರುವಲ್ಲಿ ವೇಳೆಯ ಅಪವ್ಯಯ, ಬುದ್ಧಿಯ ಅಪವ್ಯಯವೇ ಅಲ್ಲವೆ?

ಈ ಮನೋಭಾವ ಅರ್ಥವಿಹೀನ ಎಂದು ಹೇಳಲು ಆಗುವದಿಲ್ಲ, ಈ ರೂಢ ವಿರುವ ಕಥೆಗಳ ವಿಕೃತ ರೂಪವನ್ನು ನೋಡುವಾಗ. ಆದರೆ ನಮ್ಮ ವೇದ, ಪುರಾಣ ಕಥೆಗಳು, ಒಂದೊಂದು ಸಂಪ್ರದಾಯದ ಪ್ರಚಾರಕ್ಕೆ (: Propaganda ಕ್ಕೆ) ಅನುಕೂಲ ವಾಗುವ ಹಾಗೆ ಮಾರ್ಪಡುತ್ತ ಬಂದಿರುವುದರಿಂದ ಇವು ನಿಜವಾದ ತಮ್ಮ ಮೂಲ ರೂಪಕ್ಕೆ ಎರವಾಗಿವೆ. ಪಾಶ್ಚಾತ್ಯರಲ್ಲಿ ಗಯಟೆ (Goethe) ಮುಂತಾದ ಪ್ರತಿಭಾ ಶಾಲಿಗಳು ಪುರಾತನ ಪವಾಡ ಕಥೆಗಳನ್ನು (myths) ಬಳಸುವಲ್ಲಿ, ಹೊಸದನ್ನು ಸೃಷ್ಟಿಸುವಲ್ಲಿ ಅಪೂರ್ವ ಕೌಶಲವನ್ನು ತೋರಿಸಿದ್ದಾರೆ.

ಜರ್ಮನಿಯ ವಿಖ್ಯಾತ ಸಾಹಿತಿ, ರಸಿಕ ವಿಮರ್ಶಕನೆಂದು ಜಾಗತಿಕ ಕೀರ್ತಿ ಯನ್ನು ಸಂಪಾದಿಸಿದ ಡಾ. ಥಾಮಸ್ ಮನ್ನ್ ಒಂದೆಡೆಗೆ ಪವಾಡಕಥೆಯ ಜೀವಾಳವು ಏನು-ಎಂಥದು ಎಂಬುದನ್ನು ಸ್ವಲ್ಪದರಲ್ಲಿಯೆ ಸುಂದರವಾಗಿ ಹೇಳಿದ್ದಾನೆ: "The essence of the myth is recurrence, timelessness, a perpetual pre-

sent" (Essays of three Decades P. 189). ನಿಜವಾದ ಪವಾಡ ಕಥೆಯು (myth) ಪವಾಡ ಚಮತ್ಕೃತಿ (miracle) ಎಂದರೆ ಅದು ಒಳಗೊಳ್ಳುವ-ಸಾರ್ವಕಾಲಿಕ ಸನಾತನ (perennial) ಸತ್ಯವನ್ನು ಪ್ರತೀತಿಗೆ ತಂದುಕೊಡುವ ಅಪೂರ್ವ ಅರ್ಥಶಕ್ತಿ.

ಸವಿತೃ: ಸೂರ್ಯ ಮತ್ತು ರಸ: ಚಂದ್ರ ಎಂದರೆ ಪ್ರಕಾಶ ತತ್ತ್ವದ ಸಾಂಕೇತಿಕ ಸತ್ಯ ಹಾಗೂ ರಾತ್ರೀ ತತ್ತ್ವದ 'ರಸೋ ವೈ ಸಃ' ಸ್ವರೂಪದ ಏಕಂ (: ಕ್ಷರ) ಸತ್ಯ-ರಸಸತ್ಯ ಇವೆರಡಲ್ಲಿ ಯಾವುದೊಂದನ್ನೂ ಕಡೆಗಣಿಸ ನಡೆಯದು. ವಿಶ್ವ ನಿಯಮವು (: ಋತ) ಇವೆರಡನ್ನೂ ಆಳುತ್ತಿದೆ. ಸೂರ್ಯ-ಚಂದ್ರರಿಬ್ಬರೂ ಋತಕ್ಕೆ ಅಧೀನರು; ಆದರೆ ಇವೆರಡರಲ್ಲಿ ತಾರತಮ್ಯವು ಇಲ್ಲದಿಲ್ಲ. **ಜೀವನ ಮೌಲ್ಯಗಳ-**ಸದ್ಬುದ್ಧಿ-ವಿಶ್ವಾಸದ ಪ್ರಜ್ಞೆಯ-**ಅಭಾವದ** ನರ(ಳ)ರ **ಬಾಳು ಮನು-ಜತ್ವಕ್ಕೆ ಕಲಂಕ**; ಮಾನವ ಜೀವನ: ಸಂಸ್ಕೃತಿಗೆ ಮಾರಕ.

ಮಾನವ ಜೀವನವನ್ನಾಳುತ್ತಿರುವ 'ಸತ್ಯ'ವು ಏಕೈಕ ಸ್ವರೂಪದ್ದಲ್ಲ. ಭಾಷಾಪೂರ್ವ 'ವಾನರ': ಬೃಹತ್ ಲಾಂಗೂಲನವರೆಗಿನ ಜೀವಸೃಷ್ಟಿಯನ್ನು ಆಳುತ್ತಿರುವ 'ಸತ್ಯ'ವು Elan-Vital ಸ್ವರೂಪದ (Physico-Chemical) ಭೌತಜೀವನದ ಜಲದ ಪಾತಳಿಯ **Biosphere**ಗೆ ಸಂಬಂಧಪಟ್ಟ ಏಕೈಕ ಸತ್ಯ, ಎಂದು ಜ್ಯುಲಿಯನ್ ಹಕ್ಸ್ಲೆ ಪ್ರಭೃತಿ ಆಧುನಿಕ ಸಂಶೋಧಕರು ನಿರ್ಣಯಕ್ಕೆ ಬಂದಿದ್ದಾರೆ. ಅಲ್ಲದೆ ಮಾನವ ಜೀವನ ಪಾತಳಿಯ ಮೇಲೆ ವಿಕಾಸ ಕ್ರಮದಲ್ಲಿ ಪ್ರಾದುರ್ಭವಿಸಿದ (Emergent) ಪಾತಳಿಯ **ಚೇತಸ ಪ್ರಜ್ಞೆಯನ್ನು**, ಈ ಸಂಶೋಧಕರು Noetic sphere ಎಂದು ಹೆಸರಿಸಿದ್ದಾರೆ. ಭಾರತೀಯ ವಿಖ್ಯಾತ ವಿಜ್ಞಾನಿ ಡಾ. ಜಗದೀಶ್ ಚಂದ್ರಬೋಸರು ವೃಕ್ಷಾದಿಗಳ ಸಂವೇದನಾಶಕ್ತಿಯ ಬಗೆಗೆ ನಡೆಸಿದ ಸಂಶೋಧನವು ಮುಂದುವರಿದು ಈ ಜೀವನ ವಿಶ್ವದಲ್ಲಿ ಚೇತಸ ಪ್ರಜ್ಞೆಯ ಸ್ವತಂತ್ರ ಅಸ್ತಿತ್ವವನ್ನು ಒಪ್ಪಬೇಕಾಗಿ ಬಂದಿದೆ, ಭೌತಶಾಸ್ತ್ರಜ್ಞರಿಗೂ! ಜ್ಯುಲಿಯನ್ ಹಕ್ಸ್ಲೆ ಈ ನೂತನ ಸಂಶೋಧನವನ್ನು ನಿರ್ದಿಷ್ಟಪಡಿಸಿ ಹೇಳಲು ಪಾರಿಭಾಷಿಕ ಸಂಕೇತವನ್ನು ಗೊತ್ತುಪಡಿಸುವ ಸಂದರ್ಭದಲ್ಲಿ ಬರೆಯುವುದೇನೆಂದರೆ: "We need a term to denote mind in this broad sense as including all kinds of conscious experience and activity rational intellectual and imagination, emotionally motivated beliefs and attitudes, **mythical** experiences and aesthetic expressions, deliberate technical skills and symbolic actions. I shall use the term noetic for this purpose" (New Bottles for New wine P. 50. Harper & Brothers N.Y.)

ಡಾ. ಹಕ್ಸ್ಲೆ ಪ್ರಭೃತಿ ಜೀವ ವಿಜ್ಞಾನಿಗಳ (Biologists) ಈ ಸಂಶೋಧನವು, ಮಾನವನೊಳಗಿನ ಚೇತಸ ಪ್ರಜ್ಞಾ ಪಾತಳಿಯ ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತಿರುವುದರಿಂದ ಋಗ್ವೇದದಲ್ಲಿ ಉಲ್ಲೇಖಿತ ಸತ್ಯದ ಉಭಯವಿಧ ಪಾತಳಿಗಳ ಅಸ್ತಿತ್ವವು

ಕಾಲ್ಪನಿಕ ಎಂದು ತಿರಸ್ಕರಿಸಲು ಆಗುವುದಿಲ್ಲ. 'ನಳ'ನ ಪಾತಳಿಯ (Biosphere) ಮೇಲೆಯೇ ಮುಕ್ತಸಂಗಿಯಾಗಿ ಬಾಳ ಬಯಸುವ ಸ್ವಚ್ಛಂದ ವೃತ್ತಿಯು ಮನುಜತ್ವವು ಕಾಣಿಸಿಕೊಳ್ಳುವ ಮುಂಚಿನ ಹಂತದ ಮನೋಭಾವ ಈ ಫ್ರೈಡ ಸತ್ಯ.

ಆದರೆ ಈ ನರ-ಮನುಜನು ಉಭಯ ಪಾತಳಿಗಳ ಮೇಲಿನ 'ಸತ್ಯ'ಗಳ ಉರುಳಿಗೆ ಕೊರಳುಕೊಟ್ಟು ಬಾಳುವ ಅಭಿಶಪ್ತ ಮಾನವ ಪ್ರಾಣಿಯಾಗಿರುವುದನ್ನು ಈ ಪ್ರಪಂಚಕ್ಕೆ ಅರುಹಿದ ಶ್ರೇಯಸ್ಸು, ಪುರಾತನ ಭಾರತೀಯ ಪ್ರತಿಭೆಗೇ ಸಲ್ಲುತ್ತದೆ. ಋತ: ಸತ್ಯದ ಹಿರಿಮೆಯನ್ನು ಅರಿಯದ ಮಾನವ ಜೀವಿಗಳಿಗೆ ಸ್ವೋಪಜ್ಞತೆ-ಚೇತನ ಪ್ರಜ್ಞೆ ಒಂದು ಶಾಪದಂತೆ ಎನಿಸುತ್ತಿರುವುದು, ಇಂದಿನ ಸಾಹಿತ್ಯ ಕಲೆಗಳ ಮೂಲಕ ಕಾಣದೊರೆಯುತ್ತದೆ. ಇದರಿಂದಾಗಿ 'ತತ್'-ಮಯತೆಯಲ್ಲಿ ಸ್ವೈಮರೆತು ಬಾಳಲು ಅನುಕೂಲವಾಗುವ ಚಾಂದ್ರ ಭೂಮಿಕೆಯ ಕೃತಿಗಳು, ಮಾನವ ಜೀವನದಲ್ಲಿ ಹಗಲನ್ನೂ ಇರುಳನ್ನಾಗಿ ಮಾರ್ಪಡಿಸುತ್ತಿರುವುದು ಎಲ್ಲೆಲ್ಲೂ ಕಾಣುತ್ತಿದೆ. 'ಹಗಲು ಇರುಳುಗಳಲ್ಲಿ ಭೇದವಿಲ್ಲ; ಸೂರ್ಯನನ್ನು ಹೆರುವವಳು ರಾತ್ರೀ ದೇವಿತಾನೆ?' ಎಂಬ ಈ ವಾದ ವೇದದಷ್ಟು ಪುರಾತನವಿದೆ.

ಆದರೆ 'ಏಕಂ'ಸತ್ತಿನಲ್ಲಿ ಸ್ವೈಮರೆತು ವಿಶ್ವಸ್ಥ ಋತ ಸ್ವರೂಪೀ (ವಿಶ್ವ ನಿಯಮದ) ಸತ್ಯವನ್ನು ಕಾಣಲು ತಪ್ಪಿ(ದರೆ) ಆ ಪ್ರಾಯಶ್ಚಿತ್ತವನ್ನು ತಪ್ಪಿಸಲು ಸಾಧ್ಯವೆ? ಈ ಎರಡೂ ಸತ್ಯಗಳ ವಿಚಾರವು ಆಭಾಸವೆನಿಸದ ಹಾಗೆ ಇವಕ್ಕೆ ನೂತನ ನಾಮಕರಣವು ಅವಶ್ಯವೆಂದು ತೋರುತ್ತದೆ: **ನರನ** ಅಸ್ತಿತ್ವಕ್ಕೆ ಆಧಾರಭೂತ ಸತ್ಯವನ್ನು **'ಹಿರಣ್ಯ ಗರ್ಭ'ದೇವನ ಸತ್ಯ** ಎಂದು ಕರೆವಲ್ಲಿ ಔಚಿತ್ಯವಿರುವಂತೆ, **ಮನು-ಜನ** (ಮನುಜತ್ವದ) ಅಸ್ತಿತ್ವಕ್ಕೆ ಆಧಾರಭೂತ ಸತ್ಯವನ್ನು ವಿವಸ್ವ-ಮನುವಿನ (ಅಥವಾ ವೈಶ್ವಾನರನ ಇಲ್ಲವೆ ಸವಿತೃವಿನ ಸತ್ಯ ಎನ್ನುವಲ್ಲಿಯೂ ಸಮರ್ಪಕತೆಯುಂಟು.*

---

* ಈ ಎರಡೂ ಸತ್ಯಗಳ ಕೂಲಂಕಷ ವಿಮರ್ಶೆಗಾಗಿ-ಈ ಜ್ಞಾನೋಪಲಬ್ಧಿಯ ಸಾಮಾಜಿಕ ಹಿನ್ನೆಲೆಯನ್ನು, ಈ ಜ್ಞಾನೋಪಲಬ್ಧಿಯ ಕ್ರಮವನ್ನು ಅರಿಯುವುದಕ್ಕಾಗಿ ಮೈಸೂರು ವಿಶ್ವ ವಿದ್ಯಾನಿಲಯದ ಪ್ರಕಟನೆ: 'ಋಗ್ವೇದ ಸಾರ: ನಾಗಪ್ರತಿಮಾ ವಿಚಾರ' ಓದಬಹುದು.

ಜನ್ಮ ಜನ್ಮಗಳಿಂದ ಕರ್ಮಭಾರವ ತರುವ
ಜನ್ಮಗಳ ಪೊರುತ ಬೇಸತ್ತುದೀ ಭೂಮಿ
ನಿನ್ನ ಬೆನ್ನತ್ತಿ ಬರೆ ಕರ್ಮಲೋಪದ ಗಂಟು
ಜನ್ಮವೆತ್ತಿದೆ ಅದರ ಉದ್ದೇಶವೇನುಂಟು ?

ನಮ್ಮೆಲ್ಲರ ಪ್ರತಿನಿಧಿ

● ಎಂ. ಕೆ. ಇಂದಿರಾ

'ಹೆಣ್ಣುಮಕ್ಕಳು ಉತ್ತಮ ಸಾಹಿತ್ಯ ರಚಿಸುತ್ತಿಲ್ಲ; ಅದರಲ್ಲೂ ಅವರು ಕವಿತೆ, ನಾಟಕ ಬರದೇ ಇಲ್ಲ; ಮಾಮೂಲಿ ಕತೆ, ಕಾದಂಬರಿ ಬರೆಯುವುದರಲ್ಲೇ ತೃಪ್ತರಾಗುತ್ತಿದ್ದಾರೆ; ಹೆಸರಿಗಾಗಿ ಬರೆಯುತ್ತಿದ್ದಾರೆ!' – ಈ ಮಾತುಗಳನ್ನು ನಾವು ನೂರಾರು ಬಾರಿ ಕೇಳಿದ್ದೇವೆ; ಈಗಲೂ ಕೇಳುತ್ತಿದ್ದೇವೆ.

ಇದು ಒಂದು ದೂರಲ್ಲ, ವಾಸ್ತವಾಂಶ. ಆದರೆ ಸಾಮಾನ್ಯವಾಗಿ ಈ ಮಾತನ್ನಾಡುವಾಗ ಸಮಗ್ರ ಕನ್ನಡನಾಡಿನ ಮಹಿಳೆಯರೆಲ್ಲರ ಪ್ರತಿನಿಧಿಯಾಗಿ; ಮಹಿಳೆಯರಿಗಾಗಿ; ನಲವತ್ತೆರಡು ವರ್ಷಗಳ ಹಿಂದೆಯೇ ಸೌಭಾಗ್ಯವತಿ ತಿರುಮಲೆ ರಾಜಮ್ಮನವರು "ತಪಸ್ವಿನಿ"ಯನ್ನು, ಗೀತನಾಟಕ ಅಥವಾ ಕಾವ್ಯನಾಟಕ ರೂಪದಲ್ಲಿ ಬರೆದು ವಿದ್ವಜ್ಜನರ ಮುಂದಿಟ್ಟರು ಎನ್ನುವುದನ್ನು ಮರೆಯಬಹುದು. ಇಲ್ಲಾ, ಆ ಮಾತಾಡುವವರು 'ತಪಸ್ವಿನಿ'ಯನ್ನು ಓದದೆಯೂ ಇರಬಹುದು.

ಇಂದಿನ ಲೇಖಕಿಯರು ಕಾವ್ಯ, ನಾಟಕಗಳನ್ನು ಬರೆಯದಿದ್ದ ಮಾತ್ರಕ್ಕೆ ಅವರಿಂದ ಅಂಥ ಕೃತಿಗಳ ರಚನೆ ಸಾಧ್ಯವೇ ಇಲ್ಲ ಎನ್ನುವ ಮಾತು ಅಷ್ಟು ಸುಕ್ತವೆನಿಸಲಾರದು.

ಒಂದು ಮಾತನ್ನು ಎಲ್ಲರೂ ಒಪ್ಪುತ್ತಾರೆ. ಈಗ್ಯೆ ನಲವತ್ತೆರಡು ವರ್ಷಗಳಿಗೆ ಮುನ್ನ ಬರೆಯುವ ಮಹಿಳೆಯರೇ ಇರಲಿಲ್ಲ, ಕನ್ನಡದಲ್ಲಿ. ಕೊಡಗಿನ ಗೌರಮ್ಮನವರು ಒಂದೆರಡು ಸಾಮಾಜಿಕ ಸಣ್ಣಕತೆ ಬರೆದಿದ್ದು ಅನೇಕರ ನೆನಪಿನಲ್ಲಿದೆ. ಅಷ್ಟೇ ಅಲ್ಲದೆ ಮಹಿಳೆಯರಲ್ಲಿ ಶ್ರೀಮತಿ 'ಭಾರತಿ'ಯವರಲ್ಲದೆ ಕಾವ್ಯ, ಕವಿತೆ, ನಾಟಕ ಬರೆದವರು ವಿರಳವೆಂದರೂ ಒಪ್ಪುತ್ತದೆ.

ಅದರಲ್ಲೂ ಪೌರಾಣಿಕ ಕಥಾವಸ್ತುವನ್ನು ತೆಗೆದುಕೊಂಡು ಹಿತ, ಮಿತವಾಗಿ, ಹೃದಯಸ್ಪರ್ಶಿಯಾಗಿ, ಸತ್ವಪೂರ್ಣವಾಗಿ ಬರೆದು ಓದುಗರೆದುರು ಇಟ್ಟವರು, ರಾಜಮ್ಮ

ನವರು. ಪಠಿಸಿದ ಪಂಡಿತೋತ್ತಮರು ಮೂಗಿನ ಮೇಲೆ ಬೆರಳಿಟ್ಟರು. ಇದು ಪುರುಷ ವರ್ಗಕ್ಕೇ ಒಂದು ಸವಾಲು!

ಬರೆದವರು ಮಹಿಳೆ: ಶ್ರೀ ರಾಮಾಯಣದಲ್ಲಿ ತಪೋಧನನಾದ ವಾಲ್ಮೀಕಿ ಮಹರ್ಷಿಗಳಿಂದ ತೀರಾ ಸಾಮಾನ್ಯವಾಗಿ ನಿರೂಪಿತಗೊಂಡ ಊರ್ಮಿಳಾದೇವಿಯನ್ನು ಕುರಿತಾದ ರೂಪಕದ ನಿರೂಪಣಾ ಕ್ರಮವಂತೂ ಮಹಿಳಾ ಜನಾಂಗದ ಮೇಲೆ ಅನುಕಂಪದ ಹೊನಲು ಹರಿಸಿದೆ. ನಿಜವೆಂದರೆ ರಾಮಾಯಣದಲ್ಲಿ ಶ್ರೀರಾಮ, ಸೀತಾದೇವಿ, ಸೌಮಿತ್ರಿಯರಿಗಿಂತ ಊರ್ಮಿಳೆಯ ತ್ಯಾಗ ಹಿರಿದು. ವಾಲ್ಮೀಕಿ, ತುಳಸೀದಾಸ ಮೊದಲಾದವರು, ರಾಮಾಯಣದ ಕರ್ತೃ, ಕವಿಗಳೆಲ್ಲರೂ ಮೂಲೆಗೊತ್ತರಿಸಿದ ಒಂದು ಅಮೂಲ್ಯ ಪಾತ್ರವನ್ನು ಬೆಳಕಿಗೆ ತಂದು ಅವರ ಹಿರಿಮೆ, ತ್ಯಾಗಗಳನ್ನು ಇಂದಿನ ಪಂಡಿತ ಪಾಮರರಿಗೆಲ್ಲ ಪರಿಚಯ ಮಾಡಿಕೊಟ್ಟ ಪುಣ್ಯಫಲ ಶ್ರೀಮತಿ ರಾಜಮ್ಮನವರದು.

ಶ್ರೀಮತಿಯವರು ಕೀರ್ತಿ ಮತ್ತು ಹಣದ ಕಡೆಗೆ ಕಣ್ಣೆತ್ತಿಯೂ ನೋಡಿದವರಲ್ಲ. ಅವರ ಕೃತಿಗಳಿಗೆ ಸಂಖ್ಯಾಬಲವೂ ಇಲ್ಲ, ಕುಂತಿಯಂತೆ ಆರೇ ಮಕ್ಕಳನ್ನು ಪಡೆದು ಪುನೀತರಾಗಿದ್ದಾರೆ. ಅದು ಅವರ ತಪಸ್ಸಿನ ಫಲವೆನ್ನಬಹುದು.

ನನಗೆ ತಿಳಿದಂತೆ ನಾಲ್ಕು ನಾಟಕಗಳು, ಎರಡು ಜೀವನ ಚಿತ್ರಗಳು–' ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು' ಎನ್ನುವಂತೆ.

ಅವರಲ್ಲೂ ' ತಪಸ್ವಿನಿ ' 'ಮಹಾಸತಿ' 'ವಾತ್ಸಲ್ಯ ತರಂಗ ಲೀಲಾ' ಇವು ಎಂಥ ಕಠಿಣ ಮನದ ಪುರುಷರನ್ನೂ ಮೇಣದಂತಾಗಿಸುವ ಕೃತಿಗಳು.

ಕವಿತೆಯ ಒಂದೊಂದು ಸಾಲೂ ಅಮೂಲ್ಯ. ವನವಾಸದಿಂದ ಹಿಂದಿರುಗಿದ ಲಕ್ಷ್ಮಣನ ಬಾಯಿಂದ ನಾಲ್ಕಾರು ಸಾಲುಗಳಲ್ಲಿ ಹದಿನಾಲ್ಕು ವರ್ಷಗಳ ಕಥನವನ್ನೂ ಸುಲಲಿತವಾಗಿ ಹೇಳಿಸಿದ್ದಾರೆ. ಇಂಥ ಅದ್ಭುತ ಸಿದ್ಧಿಯನ್ನು ಪಡೆದಿದ್ದರೂ ಒಂದು ದಿನಕ್ಕೂ ಪ್ರಸಿದ್ಧಿಗಾಗಿ ತಡಕಾಡಿದವರಲ್ಲ. ಆ ' ತಪಸ್ವಿನಿ 'ಯಂತೆಯೇ ಇವರೂ ತೆರೆಮರೆಯ ' ತಪಸ್ವಿನಿ.'

ಹದಿನಾಲ್ಕು ವರ್ಷಗಳ ವಿರಹದ ನಂತರವೂ ಆ ದಂಪತಿಗಳ ಬಾಯಿಂದ ಎಂತಹ ನಿರುದ್ವೇಗದ, ಅಮಲಪ್ರೇಮದ ಮಾತುಗಳನ್ನಾಡಿಸಿದ್ದಾರೆ ಭಾರತಿಯವರು.

ನಿನ್ನ ಧರ್ಮದ ಬಲವೆ ಎನ್ನ ಜೀವದ ಕಳೆಯು
ನಿನ್ನ ಪ್ರೇಮದ ಗೆಲುವೆ ಎನ್ನ ಹರ್ಷವು ದೇವಿ.
"ಅಗ್ನಿ ಸಂಸ್ಕಾರವೇನಿದು ಲೋಕಪಾವನೆಗೆ ?"
ಭ್ರಮೆ ಇಲ್ಲ; ಬೇಸರವೆ ಇಲ್ಲ. ಧರ್ಮವ ಬಗೆದೆ
ಪ್ರಕೃತಿಯಲಿ, ವಿಶ್ವಪ್ರೇಮದಲಿ ಬೆರೆದೆನು ದೇವ.

ಹೀಗೆ ಆಣಿಮುತ್ತಿನಂಥಾ ಮಾತುಗಳು ಉದುರಿವೆ ಪಾತ್ರಗಳ ಬಾಯಿಂದ. ರಾಮಾಯಣಯುದ್ಧಕ್ಕೂ ಹರಿದ ಸಾವು, ನೋವು, ದುಃಖ, ದುರಂತಗಳೆಲ್ಲ ಧೀರವಾಗಿ,

ಉದಾರವಾಗಿ, ಶಾಂತಿ-ಸಂಯಮಗಳಿಂದ ಎಲ್ಲವನ್ನು ನಿರ್ವಹಿಸಿದ ಪಾತ್ರನೆಂದರೆ ಊರ್ಮಿಳೆಯದೇ !

ಅಂಥ ಒಂದು ಅಪೂರ್ವ ಪಾತ್ರವನ್ನು ತೊಳೆದು, ಬೆಳಗಿ ನಮ್ಮ ಮುಂದೆ ಇಟ್ಟಿದ್ದಾರೆ ಸೌ|| ರಾಜಮ್ಮನವರು. ಈ ಉಪಕಾರಕ್ಕೆ ಮಹಿಳಾಲೋಕ ಅವರಿಗೆ ಏನು ತಾನೇ ಕೊಡಬಲ್ಲದು ?

ಇದಲ್ಲದೆ 'ಮಹಾಸತಿ' 'ವಾತ್ಸಲ್ಯ ತರಂಗ ಲೀಲಾ' ಇವುಗಳೂ ಸಹಾ ನಾರೀ ಮಣಿಯರನ್ನೇ ಕುರಿತಾದವು.

ಹೆಣ್ಣು ತಾಯಿಯಾದಾಗ ಆಕೆಯಲ್ಲಿ ಒಂದು ದೈವೀಕತೆ ಉದ್ಭವಿಸಿ ಬರುತ್ತದೆ ಎಂಬುದು ಲೋಕಜನ್ಯವಾದ ಅನುಭವದ ಸಂಗತಿ. ಆದರೆ, ಮಹಾಭಾರತದಲ್ಲಿ ಕುಂತಿ ಕರ್ಣನನ್ನು ನದಿಯಲ್ಲಿ ತೇಲಿಬಿಡುವಾಗ ಮತ್ತು ಮೇನಕೆ ಶಕುಂತಲೆಯನ್ನು ತೊರೆದು ಹೋಗುವಾಗ; ವೇದವ್ಯಾಸರು ಆ ಎರಡು ಪಾತ್ರಗಳನ್ನು ನಿರ್ಮಮತೆಯ ಪ್ರತೀಕಗಳನ್ನಾಗಿ ಮಾಡಿದ್ದಾರೆ. ವ್ಯಾಸರ ದೃಷ್ಟಿಯಲ್ಲಿ ಅದು ಸೂಕ್ತವೇ ಇರ ಬಹುದು ! ಕುಂತಿಗೆ ಲೋಕಾಪವಾದದ ಭಯವಿತ್ತು, ಮೇನಕೆ ಹೇಳಿ ಕೇಳಿ ದೇವ ಲೋಕದವಳು. ಅವಳು ಭೂಮಿಗೆ ಬಂದುದಾದರೂ ಸುರೇಂದ್ರನ ಆಜ್ಞೆ ಪಾಲಿಸಲು. ವಿಶ್ವಾಮಿತ್ರನ ತಪೋಭಂಗವಷ್ಟೇ ಅವಳ ಕರ್ತವ್ಯ. ನರ ರಾಜನಿಂದ ಜನಿಸಿದ ಶಿಶು ವನ್ನು ದೇವಲೋಕಕ್ಕೊಯ್ಯುವ ಅಧಿಕಾರವೂ ಅವಳಿಗಿಲ್ಲ. ಆದ್ದರಿಂದ ಅವಳು ಮಗುವನ್ನು ಮಾಲಿನೀ ತೀರದಲ್ಲಿ ಮಲಗಿಸಿ ಹೋದಳು. ಇದು ವ್ಯಾಸರ ದೃಷ್ಟಿ ಕೋನ.

ಆದರೆ ಜನ್ಮತಃ ಹೆಣ್ಣಾದ ನಮ್ಮ 'ಭಾರತಿ'ಯವರ ದೃಷ್ಟಿಕೋನ ಇಲ್ಲಿ ಅಪೂರ್ವ ವಾದದ್ದು ಮತ್ತು ಅಲಭ್ಯವಾದದ್ದು. ಹುಲಿ ಕ್ರೂರ ಮೃಗ ನಿಜ. ಆದರೆ ಅದು ತನ್ನ ಮರಿಗಳ ಮಟ್ಟಿಗೆ ಎಂದೂ ಕ್ರೂರವಲ್ಲ. ಅವುಗಳಿಗೆ ಅದು ತಾಯಿಯೇ. ಆ ತತ್ವವನ್ನು ಇಲ್ಲಿ ಕಾಣಿಸಿದ್ದಾರೆ ಲೇಖಕಿ. ಆ ಮಾತನ್ನು ಅವರು ತಮ್ಮ ಬಾಯಿಂದ ಹೇಳದೆ ಮೇನಕೆಯ ಬಾಯಿಂದಲೇ ಹೇಳಿಸಿದ್ದಾರೆ:

'ಒಂದನುಗ್ರಹವಾಯ್ತು. ನಿಜಸುಖದ ವಂಚನೆ ನಮಗೇನು ಹೊಸದಲ್ಲ.
ಅನುರಾಗ ಮಹಿಮೆಯ ಅನುತಾಪವೆಮಗುಂಟೆ ? ಸಹಜ ಪ್ರೇಮಾನು
ಭವ ಎಂತುದೋ ಬಲ್ಲೆವೇ ? ಹೃದಯಾನುಬಂಧದಾ ಆಪ್ತ ಭಾವವ
ದೆಂತೋ ? ಆ ದಿವ್ಯತೆಯನರಿವ ಭಾಗ್ಯ ನಮಗೆಲ್ಲಿಯದು ? ಊಳಿಗದ
ತೊತ್ತುಗಳು ನಾವು.'

ಮೇನಕೆಯ ತಾಯ್ತನದ, ಎಂಥ ಸಂಕಟದ ಮಾತುಗಳಿವು ! ಶಿಶುವಿರಹದ ವೇದನೆಯ ನುಡಿಗಳಿವು. ವೇಶ್ಯೆಯಾದ ಮಾತ್ರಕ್ಕೆ ಅವಳಿಗೆ ತಾಯ್ತನವಿಲ್ಲವೇ ? ಆದರೆ ಅದನ್ನ ಪ್ರಕಟಿಸುವ ಅವಕಾಶ, ಅಧಿಕಾರ, ಸ್ವಾತಂತ್ರ್ಯ ಯಾವುದೂ ಅವಳಿ ಗಿಲ್ಲ.

ಇಂಥ ನುಡಿಮುತ್ತುಗಳಿಂದ ತುಂಬಿದ ಕೆಲವೇ ಕೃತಿಗಳನ್ನು ರಚಿಸಿ ಹಿಂದಿನ, ಇಂದಿನ, ಮುಂದಿನ ಲೇಖಕಿಯರೆಲ್ಲರ ಪ್ರತಿನಿಧಿಯಾಗಿ ಮಹಿಳಾ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ ರಾಜಮ್ಮನವರು.

ನಿಜ ಜೀವನದಲ್ಲೂ ಅವರು ಮಹಾಸತಿ, ತಪಸ್ವಿನಿ! ಶ್ರೀ ವೈಷ್ಣವ ಸಂಪ್ರದಾಯದ ನಿಷ್ಠಾನುಚಾರಿಣಿ, ದೈವಭಕ್ತೆ, ಪತಿಭಕ್ತೆ, ಸದಾಚಾರ ಸಂಪನ್ನೆ! ಮಹಿಳಾ ಲೋಕಕ್ಕೆ ಮಾತೃದೇವಿ. ತುಂಬು ಕುಟುಂಬ.

ಸಾಹಿತ್ಯದಷ್ಟೇ ಸಂಗೀತದಲ್ಲೂ-ವೀಣೆ-ಪ್ರವೀಣೆ, ಪತ್ರಿಕೋದ್ಯೋಗಿ, ರಾಜಕಾರಣಿ, ಸಾಹಿತಿ ಪತಿಯ ಛಾಯಾನುವರ್ತಿಯಾಗಿ ಅಖಂಡ ಹಲವು ದಶಕಗಳ ಕಾಲ ದಾಂಪತ್ಯ ಜೀವನ ನಡೆಸಿಕೊಂಡು ಬಂದಿರುವ ಪಾವನೆ, ತಿರುಮಲೆ ರಾಜಮ್ಮನವರು. ಮಕ್ಕಳೂ, ಸೊಸೆಯರೂ ಕಲಾವಿದರೇ.

ಇಂಥ ಪುಣ್ಯವತಿಗೆ ಸನ್ಮಾನ ಸಮಾರಂಭವೇರ್ಪಡಿಸಿರುವುದು ಕನ್ನಡನಾಡಿನ ಮಹಿಳಾ ವೃಂದಕ್ಕೆ ಪುಣ್ಯ ವಿಶೇಷ. ಇಂದಿನ, ಮುಂದಿನ ಲೇಖಕಿಯರಿಗೆ ಅವರು ಸ್ಫೂರ್ತಿದಾಯಕರು. ಅವರ ಆಶೀರ್ವಾದ ಎಲ್ಲರಿಗೂ ಬೇಕು. ಪರಮಾತ್ಮ ಆ ದಂಪತಿಗಳಿಗೆ ಎಲ್ಲಾ ಸೌಭಾಗ್ಯಗಳನ್ನೂ ದಯಪಾಲಿಸಿದ್ದಾನೆ. ಇನ್ನು ನೂರ್ಕಾಲ ಅವರ ಸೇವೆ ಮಾಡುವ ಮಹಾ ಭಾಗ್ಯವನ್ನು ಕನ್ನಡಿಗರೆಲ್ಲರಿಗೆ ಕರುಣಿಸೆಂದು ಆ ದಯಾಮಯನಲ್ಲಿ ಪ್ರಾರ್ಥಿಸೋಣ. ★

ಜನ್ಮದುದ್ದೇಶವನು ಭಾವಿಸದ ಬದುಕಿನಲಿ
ಉನ್ನತಿಯದೆತ್ತ ಉದ್ಧಾರದಾ ಮಾತೆತ್ತ?
ತನ್ನ ತನ, ತನ್ನ ಜನ, ತನ್ನ ನೆಲದಭಿಮಾನ
ಶೂನ್ಯವಾಗಿರೆ ಜನ್ಮಕಿನ್ನು ಧನ್ಯತೆಯೆತ್ತ?

ಜೀವಿಸುವ ಬಯಕೆ ತಪ್ಪಲ್ಲ, ಜೀವಿಸಬೇಕು.
ಸಾವೆಮಗೆ ಶತ್ರುವೇ? ಭಾವ ಬಲಿತಿಹುದಂತು.
ಜೀವನವ ಸವಿಯುತಾ ಜನ್ಮವನು ತೇಯುತಾ
ಆವ ಸಂಗ್ರಹವಾಯ್ತು? ಏನ ಸಾಧಿಸಲಾಯ್ತು?

‘ಭಾರತಿ’ : ಜೀವನ ಪರಿಚಯ

ಕಂದಾಡೆ ಶಾಮಣ್ಣ

ಸಂಗೀತ ಸಾಹಿತ್ಯಗಳ ಮಿಳನವನ್ನು ನಾವೆಷ್ಟೋ ಜನರಲ್ಲಿ ಕಾಣುತ್ತೇವೆ. ಇವೆರಡೂ ಒಂದೇ ಮನೋಧರ್ಮದ ಎರಡು ಪ್ರಕಾರಗಳು ಎಂದು ತೋರ್ಪಡಿಸಿದವಳು ತಿರುಮಲೆ ರಾಜಮ್ಮ. ಚಿಕ್ಕಂದಿನಲ್ಲಿ ಶಾಲೆಯಲ್ಲಿ ಹೆಚ್ಚು ವಿದ್ಯೆ ಕಲಿಯದೆ ವೀಣಾವಾದನವನ್ನೇ ಮುಖ್ಯವಾಗಿ ಕಲಿತು, ಪ್ರವೀಣೆಯಾಗಿ; ಅದೇ ಬುದ್ಧಿಶಕ್ತಿಯನ್ನೂ, ಮನೋಭಾವವನ್ನೂ ಸಾಹಿತ್ಯದಲ್ಲೂ ಪ್ರಯೋಗಿಸಿದವಳು ಈಕೆ.

ರಾಜಮ್ಮನ ತಂದೆ ರಾಘವಾಚಾರ್ಯರು ಪ್ರೌಢಶಾಲೆಯ ಉಪಾಧ್ಯಾಯರು. ಆಂಗ್ಲ ವ್ಯಾಕರಣ, ಗಣಿತ, ಸಂಸ್ಕೃತ ವ್ಯಾಕರಣಗಳಲ್ಲಿ ಪ್ರವೀಣರು. ಜೀವನದಲ್ಲಿ ತುಂಬ ಶಿಸ್ತಿನ ವ್ಯಕ್ತಿ. ತಾಯಿ ತುಂಬಾ ಜಾಣೆ. ಉದಾರಿ. ಸ್ನೇಹಪರ ಸ್ವಭಾವ. ಇವರ ಮೊದಲ ಮಗ ವಾಸು. ಎರಡನೆಯವನು ಕಂದಾಡೆ ಕೃಷ್ಣಯ್ಯಂಗಾರ್. ಮೂರನೆಯವಳು ರುಕ್ಮಿಣಮ್ಮ. ನಾಲ್ಕನೆಯವಳೇ ರಾಜಮ್ಮ; ೧೯೦೦ನೇ ನವೆಂಬರ್ ೨೦ ರಂದು ತುಮಕೂರಿನಲ್ಲಿ ಇವಳು ಜನಿಸಿದಳು.

ಬಾಲ್ಯದಿಂದಲೇ ಎಲ್ಲ ವಿಷಯಗಳಲ್ಲಿ ಅಪಾರ ಕುತೂಹಲ. ನಾಲ್ಕು ವರ್ಷದವಳಿದ್ದಾಗ ಮನೆಯ ಬಳಿ ಯಾರೇ ಹಾಡಿದರೂ ಅದನ್ನು ಗಮನವಿಟ್ಟು ಆಲಿಸುತ್ತಿದ್ದಳು. ಭಿಕ್ಷುಕಿಯೊಬ್ಬಳು ‘ಬಾಬಾ ಕಂದಯ್ಯ, ಮನೆಗೆ ಬಾರೋ ಕಂದಯ್ಯ’ ಎಂದು ಹಾಡುತ್ತಾ ಬರುವಳು. ರಾಜಮ್ಮ ಅವಳಿಗೆ ನಿತ್ಯವೂ ಒಂದೊಂದು ಕಾಸು ಕೊಡುವಳು. ಮತ್ತೊಬ್ಬ ಸಾಬಿ—ಬಳೆ ಗತ್ತುವವನು—ಬಂದರೆ ಇವಳು ಅವನ ತೊಡೆಯ ಮೇಲೆ ಕುಳಿತು ಗಟ್ಟಿ ಹಿಡಿದುಕೊಳ್ಳುವಳು. ಹತ್ತು ನಿಮಿಷವಾದರೂ ಬಿಡಲೊಲ್ಲಳು. ಕಷ್ಟವಾದ ಮಾತುಗಳಿಗೆ ಕಾಸು ಕೊಟ್ಟಿದ್ದಕ್ಕೆ ಅರ್ಥ:

ಬಾರೋ ನಿನ್ನ ಬೇಡಿಕೊಂಬೆ ಮಾರ ಜನಕನೆ ।
ನಾರಿಯರ ಮನಕೆ ಮುದವ ತೋರೋ ಜೇಗನೆ ॥

ಗೌರಿ ನಾಟಿ ಕಾಪಿ ಮೋಹನ ಭೈರವಿ ಶಹನ
ಮಾರವಿ ನಿಲಾಂಬರಿಯಂ ಸಾರಿ ಪಾಡಲು ॥

ಈ ಹಾಡನ್ನು ರಾಜಮ್ಮ ಕಲಿಯುತ್ತಿರಲು, ಮಾತುಗಳ ಅರ್ಥವನ್ನು ಕೇಳಿದಾಗ ಹೀಗೆಂದಳು- 'ಮುದವ' ಎಂದರೆ ನಮ್ಮ ಮನೆಗೆ ಬರುವ ಮುದುಕ; 'ಕಾಪಿ' ಎಂದರೆ ನಾವು ಕುಡಿಯುವ ಕಾಫಿ; 'ಲಾಂಬರಿ' ಎಂದರೇ ಲಾಂಪ್ರ.

ಮನೆಯಲ್ಲಿ ತಾಯಿ ಹಾಡುತ್ತಿದ್ದ ಕನ್ನಡ, ತೆಲುಗು ಹಾಡುಗಳು, ತಂದೆಯ ಸಂಸ್ಕೃತ ಶ್ಲೋಕಗಳು ಇವೇ ಇವಳಿಗೆ ವಿದ್ಯಾಭ್ಯಾಸ. ಆಗ ಎಳೆಯ ವಯಸ್ಸಿನವರಿಗೆ ತಕ್ಕ ಶಾಲೆಗಳಿರಲಿಲ್ಲ.

೧೯೦೨ರಿಂದ ಐದು ವರ್ಷಕಾಲ ನಮ್ಮ ಕುಟುಂಬ ಹಾಸನದಲ್ಲಿತ್ತು. ಅಲ್ಲಿಯೇ ಮಿಷನ್ ಸ್ಕೂಲಿನಲ್ಲಿ ಇವಳ ಅಕ್ಷರಾಭ್ಯಾಸ. ಅನಂತರ ತಂದೆಗೆ ಚಿತ್ರದುರ್ಗಕ್ಕೆ ವರ್ಗ. ಎರಡು ವರ್ಷ ಅಲ್ಲಿದ್ದು ಮತ್ತೆ ೧೯೦೯ರಲ್ಲಿ ಹಾಸನಕ್ಕೆ ಈ ಕುಟುಂಬ ಬಂದಿತು. ಅಲ್ಲಿನ ಮಿಷನ್ ಸ್ಕೂಲು, ಬಳಿಕ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ನಾಲ್ಕು ವರ್ಷಕಾಲ ರಾಜಮ್ಮನ ಪ್ರಾಥಮಿಕ ಮಾಧ್ಯಮಿಕ, ವಿದ್ಯಾಭ್ಯಾಸ. ಈಗಿನ ಮಾಧ್ಯ ಮಿಕ ನಾಲ್ಕನೆಯ ತರಗತಿಗೆ ಸಮನಾದ ಆಗಿನ ಲೋವರ್ ಸೆಕೆಂಡೆರಿಯಲ್ಲಿದ್ದಾಗಲೆ ಇವಳ ಶಾಲೆಯ ಓದು ಮುಗಿಯಿತು. ಆ ಕಾಲದಲ್ಲಿ ಹೆಣ್ಣು ಮಕ್ಕಳನ್ನು ಸಾಮಾನ್ಯ ವಾಗಿ ಬಹುಕಾಲ ಶಾಲೆಯಲ್ಲಿ ಓದಿಸುತ್ತಿರಲಿಲ್ಲ.

ಶಾಲೆಯಲ್ಲಿದ್ದಾಗಲೇ ತನ್ನ ಹನ್ನೆರಡನೆಯ ವಯಸ್ಸಿನಲ್ಲಿ ಇವಳು ಸಂಗೀತದಲ್ಲಿ ಪ್ರತಿಭೆಯುಳ್ಳವಳಂತೆ ಕಂಡು ಬಂದಳು. ಮೈಸೂರು ವಿದ್ವಾಂಸರೊಬ್ಬರಿಂದ ರಚಿತ ವಾದ 'ಸಾವಿತ್ರಿ' ಎಂಬ ಸಂಗೀತ ನಾಟಕದ ಅಭ್ಯಾಸ ಶಾಲೆಯಲ್ಲಿ ಮೊದಲಾಯಿತು. ಇದರಲ್ಲಿ ಕಥೆಯೆಲ್ಲವೂ ಹಾಡುಗಳಿಂದಲೇ ನಡೆಯಬೇಕು. ಗದ್ಯವೇ ಇಲ್ಲ. ಇದರಲ್ಲಿ ತನ್ನ ಪಾಲಿಗೆ ಬಂದ ಸಾವಿತ್ರಿಯ ಪಾತ್ರವನ್ನು ರಾಜಮ್ಮ ಅಸಾಧಾರಣವಾಗಿ ನಿರ್ವಹಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದಳು. ಶಾಲೆಗಳ ಮೇಲ್ವಿಚಾರಣೆಗಾಗಿ ಬಂದಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀನಿವಾಸರಾಯರು ಈ ಕೌಶಲ್ಯವನ್ನು ಮೆಚ್ಚಿ ತಮ್ಮ ಕೈಗಡಿಯಾರದ ಬೆಳ್ಳಿ ಸರಪಣಿಯನ್ನು ಆಗಲೇ ಕೊಟ್ಟು ಬಹುಮಾನಿಸಿದರು. ಶಾಲೋಪಾಧ್ಯಾಯ ರೆಲ್ಲರೂ ಇವಳಿಗೆ ಸಂಗೀತ ಪಾಠ ಹೇಳಿಸಬೇಕೆಂದು ನಮ್ಮ ತಂದೆಯವರನ್ನು ಒತ್ತಾಯ ಪಡಿಸಿದರು. ಅವರಿಗೂ ಸಂಗೀತಕ್ಕೂ ಬಹುದೂರ. ಅವರೂ ಎಲ್ಲರ ಸಲಹೆಯಂತೆ ಮಗ ಳಿಗೆ ವೀಣಾವಾದನವನ್ನು ಕಲಿಸಲು ಸಂಗೀತದ ಪ್ರಾಧ್ಯಾಪಕ ಕೃಷ್ಣಪ್ಪನವರನ್ನು ನೇಮಿ ಸಿದರು. ಇವಳಾದರೋ ಪಾಠವನ್ನು ಅತಿ ವೇಗದಿಂದ ಕಲಿತು ಅಧ್ಯಾಪಕರನ್ನು ಮೆಚ್ಚಿಸಿದಳು. ಪ್ರತಿನಿತ್ಯವೂ ಇವಳ ವಾದನದ ಅಭ್ಯಾಸದಿಂದಲೂ, ಸುಶ್ರಾವ್ಯವಾದ ಕಂಠಸ್ವರದಿಂದಲೂ ನಮ್ಮ ಮನೆಯಲ್ಲಿ ಸಂಗೀತ ವಾತಾವರಣ ನೆಲೆಗೊಂಡಿತು. ರಾಜ ಮ್ಮನ ಕಂಠಸ್ವರ ವೀಣೆಯ ನಾದಕ್ಕೆ ಬಹು ಚೆನ್ನಾಗಿ ಹೊಂದುವುದು. ಇದನ್ನು ಕೇಳಲು ನೆರೆಹೊರೆಯವರೂ ಪರಿಚಿತರೂ ಬಂದು ನೆರೆಯುವರು. ತಂದೆಯವರಿಗೆ

ಅನೇಕ ಶಾಸ್ತ್ರಗಳ ಜ್ಞಾನವಿದ್ದರೂ ಸಂಗೀತದಲ್ಲಿ ಅಭಿರುಚಿ ಇರಲಿಲ್ಲ. ಸ್ವಭಾವದಲ್ಲಿ ಸ್ವಲ್ಪ ಕಾಠಿಣ್ಯವಿದ್ದಿತು. ಇವಳ ವೀಣಾವಾದನ ಮತ್ತು ಹಾಡುಗಳನ್ನು ಕೇಳಿ ಕೇಳಿ ಅವರ ಮನಸ್ಸು ಕರಗಿ ತಾಳ್ಮೆಯೂ ಅಧಿಕವಾಯಿತೆಂದರೆ ಗಾನಪ್ರಿಯರಿಗೆ ಇದು ಚೆನ್ನಾಗಿ ಅರ್ಥವಾದೀತು.

ರಾಜಮ್ಮನಿಗೆ ಹದಿಮೂರನೇ ವಯಸ್ಸಿನಲ್ಲಿ ಮದುವೆಯಾಯಿತು. ಪತಿ ತಿರುಮಲೆ ತಾತಾಚಾರ್ಯ ಶರ್ಮರು ಇವಳ ತಾಯಿಯ ದೊಡ್ಡಪ್ಪನ ಮೊಮ್ಮಗ. ಲಗ್ನವಾದ ಬಳಿಕ ಮೂರು ವರ್ಷ ಶರ್ಮರು ಹಾಸನದ ಹೈಸ್ಕೂಲಿನಲ್ಲಿಯೇ ವ್ಯಾಸಂಗ ಮಾಡಿದರು. ಅಲ್ಲಿಂದ ತೇರ್ಗಡೆಯಾಗಿ ಮುಂದಿನ ವ್ಯಾಸಂಗಕ್ಕಾಗಿ ಮೈಸೂರಿನ ಕಾಲೇಜನ್ನು ಸೇರಿದರು. ರಾಜಮ್ಮನ ಹದಿನೈದನೇ ವಯಸ್ಸಿನಲ್ಲಿ ನಮ್ಮ ತಂದೆಗೆ ಬೆಂಗಳೂರಿಗೆ ವರ್ಗವಾಯಿತು. ಅನಂತರ ಒಂದು ವರ್ಷ ಮೈಸೂರು, ಪುನಃ ೧೯೧೭ರಲ್ಲಿ ಬೆಂಗಳೂರು. ಇಲ್ಲಿಗೆ ಬಂದು ಈ ಕುಟುಂಬವು ಮುನಿಸಿಪಲ್ ಪಾರ್ಕ್ ಮತ್ತು ತುಳಸಿ ತೋಟದ ಬಳಿ ದೊಡ್ಡ ಮನೆಯೊಂದರಲ್ಲಿ ನೆಲೆಸಿತು. ರಾಜಮ್ಮನಿಗೆ ವೀಣಾ ವ್ಯಾಸಂಗಕ್ಕೆ ಈಗ ಹೆಚ್ಚು ಅವಕಾಶ ಸಿಕ್ಕಿತು. ನಗರ್ತರ ಪೇಟೆಯಲ್ಲಿದ್ದ ಸುಪ್ರಸಿದ್ಧ ವೈಣಿಕ ಗೋಪಾಲರಾಯರು ಅತಿ ಶ್ರದ್ಧೆಯಿಂದ ಪಾಠ ಹೇಳುವರು. ಎರಡು ಮೂರು ವರ್ಷಗಳಲ್ಲಿ ಈಕೆಗೆ ವೀಣಾವಾದನದಲ್ಲಿ ಪಾಂಡಿತ್ಯವೇ ಲಭಿಸಿತು. ಆಗ ರಾಜಮ್ಮ ಯಾವುದೇ ಬಗೆಯ ಸಾಹಿತ್ಯವನ್ನು ಹೆಚ್ಚಾಗಿ ಓದಿರಲಿಲ್ಲ. ಶಾಲೆಯ ಓದು ಕೂಡ ಲೋಯರ್ ಸೆಕೆಂಡರಿಗೆ ನಿಂತಿತ್ತು. ಆಂಗ್ಲಭಾಷೆಯ ಪರಿಚಯವೇ ಇರಲಿಲ್ಲ. ಇವಳಲ್ಲಿ ಸಾಹಿತ್ಯಾಭಿರುಚಿ ಹುಟ್ಟಿ ಬೆಳೆಯಲು ಬೇರೆ ಅವಕಾಶಗಳೊದಗಿದವು.

ನಮ್ಮ ಸೋದರ ಮಾವ ವಿದ್ವಾನ್ ವೆಂಕಟವರದಾಚಾರ್ಯರು ಪ್ರಸಿದ್ಧ ನಾಟಕ ಕರ್ತರು. 'ಭೋಜ ಪ್ರಬಂಧ' ಅಥವಾ 'ಕಾಳಿದಾಸ ನಾಟಕ'ವನ್ನು ರಚಿಸಿದವರು. ನಮ್ಮೆಲ್ಲರ ಮೇಲೂ ಅಪಾರ ವಿಶ್ವಾಸವನ್ನಿಟ್ಟು ಸದಾ ನಮ್ಮನ್ನು ಪ್ರೋತ್ಸಾಹಿಸುತ್ತಾ ತಮ್ಮ ಸತಿಯೊಡಗೂಡಿ ನಮ್ಮೊಂದಿಗೇ ವಾಸವಾಗಿದ್ದರು. ಅವರ ಸಾಹಿತ್ಯ ನಮ್ಮೆಲ್ಲರನ್ನೂ ಆಕರ್ಷಿಸಿತು. ಅವರು ದೊಡ್ಡ ಪಂಡಿತರಲ್ಲದಿದ್ದರೂ ಕವಿಗಳು. ಅವರ ನಾಟಕಗಳ ಪ್ರದರ್ಶನವು ಶಿರಹಟ್ಟಿ ನಾಟಕ ಕಂಪನಿಯವರಿಂದ ತುಳಸಿ ತೋಟದ ನಾಟಕ ಮಂದಿರದಲ್ಲಿ ನಡೆಯುತ್ತಿತ್ತು. ನಾಟಕದ ಹಾಡುಗಳು ರಾತ್ರಿ ನಮ್ಮ ಮನೆಗೇ ಕೇಳಿಸುತ್ತಿದ್ದವು. ಆ ನಾಟಕಗಳ ರಸಭರಿತವಾದ ಸಂಭಾಷಣೆಗಳು, ಹಾಡುಗಳು ರಾಜಮ್ಮನ ಮನಸ್ಸಿಗೆ ಅಂಟಿದವು. ಅನಂತರ ಅಮೆಚೂರ್ ನಾಟಕ ಸಂಘದಲ್ಲಿ ನಾನು, ನನ್ನ ತಮ್ಮ ಕೃಷ್ಣಯ್ಯಂಗಾರ್, ತಿ.ತಾ. ಶರ್ಮ, ಇವರ ಅಣ್ಣ ಶ್ರೀನಿವಾಸ ಶರ್ಮ ಮೊದಲಾದವರೆಲ್ಲ ಸದಸ್ಯರಾಗಿಯೂ, ಪಾತ್ರಧಾರಿಗಳಾಗಿಯೂ ಭಾಗವಹಿಸಿದೆವು.

ಬಳ್ಳಾರಿ ಟಿ. ರಾಘವಾಚಾರ್ಯರ ನೇತೃತ್ವದಲ್ಲಿ ಪ್ರದರ್ಶಿತವಾದ ತೆಲುಗು ನಾಟಕಗಳ ಮೂಲಕ ತೆಲುಗು ಸಾಹಿತ್ಯದ ಪರಿಚಯ ರಾಜಮ್ಮನಿಗಾಯಿತು. ಈ ಸಂದರ್ಭದಲ್ಲಿಯೇ ನಮಗೆ ಟಿ. ಪಿ. ಕೈಲಾಸಂ ಅವರ ಪರಿಚಯವಾ

ಆಯಿತು. ಹೀಗೆ ನಾಟಕಗಳ ಪರಿಚಯವಾಯಿತೇ ವಿನಃ ರಾಜಮ್ಮನಿಗೆ ಇತರ ಸಾಹಿತ್ಯದ ಪರಿಚಯ, ಪರಿಶ್ರಮ, ಅಭ್ಯಾಸ ಹೇಗಾದುವೆಂಬುವನ್ನು ಹೇಳುವುದು ಸಾಧ್ಯವಿಲ್ಲ. ಮೇಲೆ ವಿವರಿಸಿದ ಎಲ್ಲ ವಿಷಯಗಳ ಕಾಲ ೧೯೧೬—೧೯೨೦ ಎನ್ನಬಹುದು. ಈಕೆಯ ಪತಿ ತಿರುಮಲೆ ತಾತಾಚಾರ್ಯ ಶರ್ಮ ಮೈಸೂರಿನಲ್ಲಿ ಇಂಟರ್‌ಮೀಡಿಯಟ್ ನಂತರ ಅನಾರೋಗ್ಯದಿಂದ ಮುಂದೆ ವ್ಯಾಸಂಗ ಮಾಡಲಿಲ್ಲ. ಇವರ ಕನ್ನಡ ಭಾಷಾಜ್ಞಾನ ಅಸಾಧಾರಣವಾಗಿತ್ತು. ಇವರು ೧೯೧೯ರಲ್ಲಿ ಮದರಾಸಿನಲ್ಲಿ ಶಾಸನ ಇಲಾಖೆಯನ್ನು ಸೇರಿದರು. ರಾಜಮ್ಮ ೧೯೨೦ರಲ್ಲಿ ಮದರಾಸಿಗೆ ಹೊರಟಳು. ಅಲ್ಲಿ ಮೂರು ವರ್ಷವಿದ್ದು ಅವರ ಪ್ರೋತ್ಸಾಹದಿಂದಲೇ ನಮ್ಮ ಪ್ರಾಚೀನ ಇತಿಹಾಸಗಳ ಪರಿಚಯ ಪಡೆದಳು. ಆದರೇನು ಸ್ವತಃ ಹೆಚ್ಚಾಗಿ ಬರೆಯುವ ಯೋಚನೆ ಇರಲಿಲ್ಲ. ಮನಸ್ಸಿನಲ್ಲಿ ಏನೇನೋ ಭಾವನೆಗಳಡಗಿದ್ದು. ಇವರೀರ್ವರ ಮನಗಳೂ ರಾಷ್ಟ್ರೀಯತೆಯ ಕಡೆಗೇ ಒಲಿದವು. ಮಹಾತ್ಮ ಗಾಂಧಿಯವರು ಮದರಾಸಿಗೆ ಭೇಟಿಯಿತ್ತರು. ಆಗಲೇ ಸ್ವಾತಂತ್ರ್ಯೋದ್ಯಮವು ಭಾರತದಲ್ಲೆಲ್ಲಾ ಹರುಡುತ್ತಾ ಬಂದಿತು. ಇದರ ಅಂಗವಾಗಿ ಸಮಾಜ ಸುಧಾರಣೆಯ ಚಳುವಳಿ ಹತ್ತಾರು ವರುಷಗಳಿಂದ ನಡೆಯುತ್ತಲೇ ಇದ್ದಿತು. ಸಮಾಜದ ಮುಂದಾಳುಗಳ ಅನೇಕ ಭಾಷಣಗಳನ್ನು ರಾಜಮ್ಮ ಓದಿಯೂ ಕೇಳಿಯೂ ಇರಬೇಕು. ಬಾಲ್ಯ ವಿವಾಹ ನಿಷೇಧ, ಬಾಲ ವಿಧವೆಯರ ವಿವಾಹ ಇವುಗಳ ವಿಷಯವಾಗಿ ಅಂತಃಕರಣ ಕಲಕುವ ಮೂರು ಅಂಕಗಳ ಒಂದು ಸಾಮಾಜಿಕ ನಾಟಕವನ್ನು ಬರೆದಳು. ಅದರ ಹೆಸರು 'ಸುಖ ಮಾರ್ಗ'

೧೯೧೯ರಲ್ಲಿ ಅಮೆಚೂರ್ ನಾಟಕ ಸಂಘದವರು ಕವಿ ರವೀಂದ್ರನಾಥ್ ಠಾಕೂರರನ್ನು ಬೆಂಗಳೂರಿಗೆ ಆಹ್ವಾನಿಸಿ ಲಲಿತಕಲಾ ಸಮ್ಮೇಳನವನ್ನೇರ್ಪಡಿಸಿದರು. ಆ ಕಾಲದಲ್ಲಾದ ಭಾಷಣಗಳನ್ನೂ, ಮುಖ್ಯವಾಗಿ ಕೈಲಾಸಂ ಅವರ ವಿನೋದಭಾಷಣಗಳನ್ನೂ ನಾವೆಲ್ಲಾ ಕೇಳಿ ಆನಂದಿಸಿದ್ದೆವು. ಅಮೆಚೂರ್ ನಾಟಕ ಸಂಘದವರು ತಮಗೆ ಯೋಗ್ಯವಾದ ಹೊಸನಾಟಕಗಳನ್ನು ಕನ್ನಡದಲ್ಲಿ ಬರೆಸಬೇಕೆಂದಾಶಿಸಿ ನಾಟಕ ಸ್ಪರ್ಧೆಯನ್ನೇರ್ಪಡಿಸಿದರು. ಒಂದಂಕದ ಮತ್ತು ಮೂರಂಕದ ನಾಟಕಗಳು ಬೇಕಾಗಿದ್ದವು. ಅವರ ಪ್ರಚಾರದ ಫಲವಾಗಿ ಅನೇಕ ಹೊಸ ನಾಟಕಗಳು ಸ್ಪರ್ಧೆಗೆ ಬಂದವು. ಏಕಾಂಕ ನಾಟಕಗಳ ಪೈಕಿ ಟಿ. ಪಿ. ಕೈಲಾಸಂ ಅವರ 'ಟೊಳ್ಳು ಗಟ್ಟಿ'ಗೆ ಐವತ್ತು ರೂಪಾಯಿಯ ಮೊದಲನೆಯ ಬಹುಮಾನ ದೊರೆಯಿತು. ಮೂರು ಅಂಕಗಳ ನಾಟಕಗಳಿಗಾಗಿ ಇಟ್ಟಿದ್ದ ೩೦೦ ರೂಪಾಯಿ ಬಹುಮಾನವನ್ನು ರಾಜಮ್ಮನ 'ಸುಖಮಾರ್ಗ'ಕ್ಕೂ, ಕೆ. ಭೀಮರಾಯರ 'ಪೃಥ್ವೀರಾಜ' ಎಂಬ ಐತಿಹಾಸಿಕ ನಾಟಕಕ್ಕೂ ಸಮವಾಗಿ ಹಂಚಿದರು. ಈ ಐತಿಹಾಸಿಕ ನಾಟಕ ಅನೇಕಾವರ್ತಿ ಯಶಸ್ವಿಯಾಗಿ ಪ್ರದರ್ಶಿತವಾಯಿತು. 'ಸುಖಮಾರ್ಗ'ವನ್ನು ಪ್ರದರ್ಶಿಸಲು ಸಾಧ್ಯವಾಗಲಿಲ್ಲ.

೧೯೨೨ನೇ ಇಸವಿಯಲ್ಲಿ ರಾಜಮ್ಮನಿಗೆ ಮೈಸೂರಿನ ಪ್ರಖ್ಯಾತ ವೈಣಿಕರಾದ ಶೇಷಣ್ಣನವರ ಬಳಿ ವೀಣೆಯ ಪಾಠವನ್ನು ಮುಂದುವರಿಸಲು ಅವಕಾಶ ದೊರೆಯಿತು.

ಕೆಲವು ತಿಂಗಳ ಕಾಲ ಅವರಲ್ಲಿ ಶಿಷ್ಯಳಾಗಿ, ವೇಗದಿಂದ ಕಲಿತು ಗುರುಗಳನ್ನು ಮೆಚ್ಚಿಸಿದಳು. ಅಷ್ಟರಲ್ಲಾಗಲೇ ದೇಹಾರೋಗ್ಯ ಕಡಮೆಯಾಗಿ ಮೈಸೂರಿನ 'ಸ್ಯಾನಿಟೋರಿಯಂ'ನಲ್ಲಿ ಚಿಕಿತ್ಸೆ ಪಡೆಯಬೇಕಾಯಿತು. ಗುಣಹೊಂದಿದ ಮೇಲೆ ಮದರಾಸು ನೀಲಗಿರಿಗಳಲ್ಲಿ ಒಂದು ವರ್ಷಕಾಲ ಪತಿಯೊಡನೆ ಕಳೆದಳು. ೧೯೨೩ರಲ್ಲಿ ಶರ್ಮರು ಮದರಾಸಿನ ಶಾಸನ ಇಲಾಖೆಯನ್ನು ತೊರೆದು ಬೆಂಗಳೂರಿಗೆ ಬಂದು ಪತ್ರಿಕಾ ಸಂಪಾದಕರಾದರು. ಮೊದಲು ತುಮಕೂರಿನ ಕೆ. ರಂಗಾಚಾರ್ಯರಿಂದ ಬೆಂಗಳೂರಿಗೆ ವರ್ಗಾಯಿಸಲ್ಪಟ್ಟ 'MYSORE CHRONICLE' ಎಂಬ ಇಂಗ್ಲಿಷ್ ವಾರಪತ್ರಿಕೆ, ಅನಂತರ ಇವರದೇ ಆದ 'ವಿಶ್ವ ಕರ್ನಾಟಕ'ಗಳನ್ನು ನಡೆಸಿದರು. ೧೯೨೩ರಿಂದ ಇಂದಿನವರೆವಿಗೂ ಈ ದಂಪತಿಗಳ ಜೀವನ ಬೆಂಗಳೂರಿನಲ್ಲಿಯೇ ನಡೆದು ಬಂದಿದೆ.

ರಾಜಮ್ಮನಿಗೆ ೧೯೨೧ ರಿಂದಲೂ ರಾಜಕೀಯ ಪ್ರಮುಖರು, ಸಂಗೀತ ವಿದ್ವಾಂಸರು, ಸಾಹಿತ್ಯಪ್ರಮುಖರು-ಇಂಥವರ ಪರಿಚಯವೇ ಹೆಚ್ಚು. ಆಗಿನ ಕರ್ನಾಟಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಲ್ಲೊಬ್ಬನಾಗಿದ್ದ ನನ್ನ ಮನೆಗೆ ಅನೇಕ ಮಹನೀಯರು ಬರುವರು. ಕೆಲವರು ನಮ್ಮಲ್ಲೇ ಬಿಡಾರ ಮಾಡುವರು. ಎಲ್ಲೆಲ್ಲಿಯೋ ಇದ್ದವರನ್ನು ಒಂದೇ ಕಾರ್ಯಕ್ಕಾಗಿ ಒಟ್ಟಿಗೆ ತಂದದ್ದು ಗಾಂಧೀಜಿಯವರ ಪ್ರಭಾವ; ಕಡಪ ರಾಘವೇಂದ್ರರಾವ್, ಶ್ರೀನಿವಾಸರಾವ್, ಕೌಜಲಗಿ ಕೃಷ್ಣರಾವ್ ಮುದವೀಡಕರ್, ಆಲೂರು ವೆಂಕಟರಾವ್, ಇನ್ನೂ ಇತರರು ಬರುತ್ತಿದ್ದರು. ದತ್ತಾತ್ರೇಯ ಭಾರದ್ವಾಜರಂತೂ ನಮ್ಮ ಆಪ್ತರಂತೆಯೇ ಬಹುಕಾಲ ಇದ್ದರು. ಇವಲ್ಲದೆ ಬೇರೆ ಬೇರೆ ಕಾರಣಗಳಿಂದ ಬೆಂಗಳೂರಿಗೆ ಬಂದ ಹರೀಂದ್ರನಾಥ ಚಟ್ಟೋಪಾಧ್ಯಾಯ, ಅವರ ಸತಿ ಕಮಲಾದೇವಿ, ದಿಲೀಪ್‌ಕುಮಾರ್ ರಾಯ್ ಇವರೆಲ್ಲರೂ ರಾಜಮ್ಮನ ವೀಣಾವಾದನವನ್ನು ಸಾವಧಾನವಾಗಿ ಶ್ರವಣ ಮಾಡಿದರು. ೧೯೨೪ರಲ್ಲಿ ಬೆಳಗಾಂನಲ್ಲಿ ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಹಾಗೂ ಗಾಂಧೀಜಿಯವರ ಸಮಕ್ಷಮದಲ್ಲಿ ರಾಜಮ್ಮನ ವೀಣಾವಾದನ ನಡೆಯಿತು. ದೇಶದ ಮುಂದಾಳುಗಳ ಪರಿಚಯ ಮೆಚ್ಚುಗೆಗಳೇ ರಾಜಮ್ಮನಿಗೆ ಹತ್ತಾರು ವರ್ಷಗಳ ಕಾಲ ದೊರೆತದ್ದರಿಂದ ಈಕೆಯ ಜೀವನದ ಗುರಿಯೇ ರಾಷ್ಟ್ರೋನ್ನತಿಯ ಕಡೆಗೆ ಭದ್ರವಾಗಿ ನಿಂತಿತು. ಆ ವರ್ಷಗಳಲ್ಲಿಯೂ, ಅನಂತರವೂ ಈಕೆ ರಚಿಸಿರುವ ರಾಷ್ಟ್ರೀಯ ಗೀತೆಗಳಿಂದ ಇದು ವ್ಯಕ್ತವಾಗುತ್ತದೆ. ದೇಶಭಕ್ತಿಯೇ ಈಕೆಯನ್ನು ಕವಯಿತ್ರಿಯನ್ನಾಗಿ ಮಾಡಿತು, ರಾಷ್ಟ್ರೀಯ ಚಳುವಳಿಯೇ ಕಾವ್ಯಕ್ಕೆ ಹುರುಪನ್ನಿತ್ತಿತು. ಭಾರತದ ವೈಭವವೇ ವಸ್ತುವನ್ನೊದಗಿಸಿತು ಎನ್ನಬೇಕು.

೧೯೨೭ರಲ್ಲಿ ಮಹಾತ್ಮಾ ಗಾಂಧಿಯವರು ಬೆಂಗಳೂರಿನ ಕುಮಾರ ಪಾರ್ಕ್ ಬಂಗಲೆಯಲ್ಲಿ ಒಂದು ತಿಂಗಳ ಕಾಲ ತಂಗಿದ್ದಾಗ ರಾಜಮ್ಮನ ವೀಣಾವಾದನವನ್ನು ಆಗಾಗ ಆಲಿಸುತ್ತಿದ್ದರು. ಆಗಲೇ ಹರೀಂದ್ರನಾಥ ಚಟ್ಟೋಪಧ್ಯಾಯರ ಸಂಗೀತವನ್ನೂ ಆಲಿಸಿದರು. ಒಂದು ದಿನ ಇಬ್ಬರ ಗಾನವನ್ನೂ ಒಂದಾದನಂತರ ಮತ್ತೊಂ

ದನ್ನು ಶ್ರವಣಮಾಡಿ ಇವರೀರ್ವರನ್ನೂ, ಶರ್ಮ ಅವರನ್ನೂ, ಹರೀಂದ್ರರ ಪತ್ನಿ ಕಮಲಾದೇವಿ ಅವರನ್ನೂ ನೋಡುತ್ತಾ ಸೀಸದಕಡ್ಡಿಯಿಂದ ಒಂದು ಕಾಗದದ ಮೇಲೆ ನಾಲ್ಕು ವಾಕ್ಯಗಳನ್ನು ಬರೆದುಕೊಟ್ಟರು. (ಅಂದು ಸೋಮವಾರವಾಗಿದ್ದರಿಂದ ಗಾಂಧೀಜಿಯವರಿಗೆ ಮೌನವ್ರತ). ಬರವಣಿಗೆ ಹೀಗಿತ್ತು :

"I am highly pleased and delighted with this seeming musical competition between man and woman. But, who cannot say that in the one case the husband is proud of the wife and in the other case the wife of the husband? But you can turn the tables if you like..."

ಅದೇ ತಿಂಗಳಲ್ಲಿ ಬೆಂಗಳೂರು ದೇಶೀಯ ವಿದ್ಯಾಶಾಲೆಯಲ್ಲಿ ಅಖಿಲಭಾರತ ಖಾದಿ ಪ್ರದರ್ಶನ ನಡೆಯುತ್ತಿತ್ತು. ಮಹಾತ್ಮ ಗಾಂಧಿಯವರ ಮಕ್ಕಳೀರ್ವರು, ಒಬ್ಬ ಮೊಮ್ಮಗ, ಕಸ್ತೂರಿ ಬಾ ಗಾಂಧಿ ಮುಂತಾದ ಅವರ ಕುಟುಂಬದವರಲ್ಲದೆ, ಗಂಗಾಧರ ರಾವ್ ದೇಶಪಾಂಡೆ, ಚಕ್ರವರ್ತಿ ರಾಜಗೋಪಾಲಚಾರಿ ಮುಂತಾದವರೂ ಈ ಪ್ರದರ್ಶನಕ್ಕೆ ಬರುತ್ತಿದ್ದರು. ಸಭೆಗಳನ್ನು ನಡೆಸುತ್ತಿದ್ದರು. ನಮ್ಮ ಮನೆ ಈ ಪ್ರದರ್ಶನ ನಡೆಯುತ್ತಿದ್ದ ಸ್ಥಳಕ್ಕೆ ಸಮೀಪದಲ್ಲಿತ್ತು. ಒಂದು ಸಾಯಂಕಾಲ ಅನಿರೀಕ್ಷಿತವಾಗಿ ಗಂಗಾಧರರಾವ್, ರಾಜಾಜಿ, ಮಹದೇವ ದೇಸಾಯಿ, ಅನುಸೂಯಾ ಬೆನ್–ಇವರು ನಮ್ಮ ಮನೆಗೆ ದಯಮಾಡಿಸಿದರು. ಆಗ ನಾನು ಮನೆಯಲ್ಲಿರಲಿಲ್ಲ. ನನ್ನ ತಮ್ಮ ಮತ್ತು ರಾಜಮ್ಮ ಇದ್ದರು. ಅತಿಥಿಗಳು ನಮ್ಮ ಮನೆತನದ ಪರಿಚಯ ಮಾಡಿಕೊಂಡು ವೀಣೆಯನ್ನು ಶ್ರವಣ ಮಾಡಲು ಆಶಿಸುವಲ್ಲಿ ರಾಜಮ್ಮನೂ ಸ್ವಲ್ಪ ಕಾಲ ನುಡಿಸಿದಳು. ಹಾಡುಗಳ ಮಧ್ಯೆ ಗಂಗಾಧರರಾಯರು ಎದೆ ತಟ್ಟಿಕೊಂಡು 'Look at our Karnataka sir' ಎನ್ನಲು ರಾಜಾಜಿಯವರು 'Ah! What did you say? They were originally in Tamilnadu, resided for some time in Telugu areas, adopted Telugu and then came here and settleddown in the Kannada Country' ಎಂದು ಟೀಕಿಸಿದರು.

ಇಷ್ಟು ಮಂದಿ ಮಹನೀಯರ ಪರಿಚಯ, ಭಾಷಣ ಶ್ರವಣ, ಗಾಂಧಿ ಸಾಹಿತ್ಯದ ಕೆಲವು ಭಾಗಗಳು ಇವೆಲ್ಲವುಗಳಿಂದ ಪ್ರೇರಿತಳಾದ ರಾಜಮ್ಮನ ಕವಿತೆಯು ಆರಂಭದಲ್ಲಿ ಹಾಡುಗಳ ರೂಪದಲ್ಲಿಯೇ ಹೊರಬಿತ್ತು. ಮನಸ್ಸಿನಲ್ಲಿದ್ದ ಭಾವವೇ ಮಾತುಗಳನ್ನೊದಗಿಸಿತು. ನಿದರ್ಶನಕ್ಕಾಗಿಯೇ ಕೆಲವನ್ನು ಸೂಚಿಸಲಾಗಿದೆ;

೧೯೨೨—[೧] ಗಾಂಧಿ ಮಹಾತ್ಮರನು ಬೇಗ ಬಂಧನದಿಂದ ಬಿಡಿಸುವ ಬನ್ನಿರೈ
[ಮುಂದೆ ೫ ನುಡಿಗಳು]

೧೯೨೩—[೨] ದೇಶೀಯ ವಸ್ತ್ರವ ಧರಿಸೋ ಪರದೇಶ ವಸ್ತ್ರ ಮನಸಾರ ಧಿಕ್ಕರಿಸೊ
[ಮುಂದೆ ೫ ನುಡಿಗಳು]

[೩] ಕಂಗೊಳಿಸೆ ನವಯುಗದಿ ಮಂಗಳ ಪ್ರಭಾತವು

[ಮುಂದೆ ೩ ನುಡಿಗಳು]

೧೯೨೪—[೪] ಜೈ ಭಾರತ ಭುವಿಗೇ ಮಾತೆಗೆ ಜೈ ಪಾವನ ಮೂರ್ತಿಗೆ ಸನ್ಮಂಗಳ
ವಾಗಲಿ ಸತತಂ

[ಮುಂದೆ ೫ ನುಡಿಗಳು]

[೫] ಭಾರತೀಯರಿಗೆ ಜನುಮವನಿತ್ತ ಭಾರತ ಮಾತೆಗೆ ನಮೋ ನಮೋ

[ಸುಮಾರು ೫೦ ಪದ್ಯಗಳು]

[೬] ಭುವಿಗೆ ದಾಸನೆನಿಸೋ ಭಾರತ ಭುವಿಗೆ ದಾಸನೆನಿಸೋ

[ಮೂರು ನುಡಿಗಳು]

[೭] ಭಜಿಸಿ ಭಾರತೋರ್ವಿಯ ವಿಜಯವನೆ ಸಾರುವ

[ಧ್ವಜವಂದನೆ ೩ ನುಡಿ]

[೮] ಪಾಲಿಸು ಪಾವನ ಮಹಿಮ ವಿಶಾಲ
ಆಲಿಸು ಬಿನ್ನಪ ಧರ್ಮಪಾಲ

[ಮೂರು ನುಡಿಗಳು]

[೯] ಆರ್ಯ ಜನನೀ—ಧರಣೀ—ಸಕಲ ಚೈತನ್ಯ ಸ್ವರೂಪಿಣೀ।
ಆರ್ಯರ ಹೃದಯದೊಳೊಗೆದ ಶ್ರುತಿಯ ಗಾಂಭೀರ್ಯದ
ನಾದ ತರಂಗಿಣೀ•

[ನಾಲ್ಕು ನುಡಿಗಳು]

ಈ ಸಾಹಿತ್ಯವನ್ನು ವಿಮರ್ಶಿಸುವ ಅಥವಾ ಟೀಕಿಸುವ ಕಾರ್ಯವನ್ನು ಸಾಹಿತ್ಯ ವಿದ್ವಾಂಸರಿಗೆ ಬಿಟ್ಟಿದ್ದೇನೆ. ಆಯಾ ಕಾಲವು ಆಯಾ ಕವನಗಳಿಗೆ ಹೇಗೆ ಸ್ಫೂರ್ತಿಯನ್ನಿತ್ತಿತು ಎಂಬುದನ್ನು ಮಾತ್ರ ಸೂಚಿಸಲಾಗಿದೆ. ವೈದಿಕ ಶೇಷಣ್ಣನವರು ಸ್ವರ್ಗಸ್ಥರಾದಾಗ ರಾಜಮ್ಮ ರಚಿಸಿದ ಪದ್ಯಮಾಲಿಯನ್ನು ವಾಚಕರು ಬೇರೊಂದೆಡೆಯಲ್ಲಿ ಓದಬಹುದು. ಪ್ರಪಂಚದ ಎರಡನೆಯ ಮಹಾ ಸಂಗ್ರಾಮವಾದನಂತರ ಪ್ರಮುಖ ರಾಷ್ಟ್ರಗಳು, ಇನ್ನು ಮುಂದೆ ಯುದ್ಧಗಳನ್ನೇ ನಿಲ್ಲಿಸಿಬಿಡಬೇಕೆಂದು ಒಂದೆಡೆ ಸೇರಿ ಸಂಕಲ್ಪ ಮಾಡಿದರು. ಆಗ ರಾಜಮ್ಮ ಕೆಲವು ಹಾಡುಗಳನ್ನು ರಚಿಸಿದಳು.

ಮೊದಲನೆಯದು :

ಸಮರದಾಹವೆಂದೆಂದು ಸುಪ್ರಾಪ್ತವಾಗದ।
ಅಮರ ವರವನೆಮಗೆ ಕರುಣಿಸೈ ದೇವ॥ (೫ ನುಡಿ)

ಅಖಿಲ ಭಾರತ ಸ್ವಾತಂತ್ರ್ಯೋದ್ಯಮದಲ್ಲಿ ನಮ್ಮ ಮನೆಯವರೆಲ್ಲರೂ ಯಥಾಶಕ್ತಿ ಭಾಗವಹಿಸಿದ್ದೇ ಹೊರತು ಮೈಸೂರಿನ ರಾಜಕೀಯವನ್ನು ಗಮನಿಸಲಿಲ್ಲ. ದೇಶೀಯ ಸಂಸ್ಥಾನಗಳ ರಾಜಕೀಯಗಳಿಗೆ ಕೈಹಾಕಬಾರದೆಂದೇ ಆಗ ಕಾಂಗ್ರೆಸ್ಸಿನ ನೀತಿ. ಆದರೆ 'ವಿಶ್ವಕರ್ನಾಟಕ' ಸಂಪಾದಕತ್ವದ ದೆಸೆಯಿಂದ ಇಲ್ಲಿನ ರಾಜಕೀ

ಯವು ಶರ್ಮರಿಗೆ ಅಂಟಿಕೊಂಡೇ ಇತ್ತು. ೧೯೪೭ನೇ ಇಸವಿಯ ಅನಂತರ ಇಲ್ಲಿಯೂ ಸ್ವತಂತ್ರ ಕಾಂಗ್ರೆಸ್ ಆರಂಭವಾಯಿತು. ಮೈಸೂರು ಕಾಂಗ್ರೆಸ್ ನಾಯಕತ್ವದಲ್ಲಿ ಸ್ವಾತಂತ್ರ್ಯೋದ್ಯಮವು ಬಲಗೊಂಡು, ಆಗಿನ ಸರಕಾರಕ್ಕೆ ಹೇಳಿಕೊಂಡು ಪ್ರಯೋಜನವಿಲ್ಲ, ಮಹಾರಾಜರ ಬಳಿಗೇ ಹೊರಡೋಣವೆಂಬ ನಿರ್ಧಾರದಿಂದ ‘ಮೈಸೂರು ಚಲೋ’ ಎಂಬ ಚಳವಳಿ ಆರಂಭವಾಯಿತು. ಇದರಲ್ಲಿ ರಾಜಮ್ಮನ ಮಗ ಶ್ರೀರಂಗಾಚಾರ್ಯ ಸ್ವಯಂ ಸೇವಕರ ಒಂದು ಪಡೆಯೊಡನೆ ನುಗ್ಗಿದ. ರಾಜಮ್ಮನ ಒಬ್ಬಳೇ ಮಗಳಾದ ಜಯಮ್ಮ ಸ್ವಯಂ ಸೇವಕಿಯರನ್ನು ಸೇರಿಸಿ ಬಾವುಟದೊಡನೆ ಮೆರವಣಿಗೆ ಮೊದಲಾದ ಕಾರ್ಯಗಳನ್ನು ಶಿಸ್ತಿನಿಂದ ಮಾಡುತ್ತಿದ್ದಳು. ಶರ್ಮರು ಮ್ಯಾಜಿಸ್ಟ್ರೇಟರ ಆಜ್ಞೆಯನ್ನುಲ್ಲಂಘಿಸಿ ಬಂಧನಕ್ಕೊಳಗಾಗಲು, ಆದಿನ ಸಾಯಂಕಾಲವೇ ವಿಶ್ವೇಶ್ವರಪುರ ವರ್ತುಳದಲ್ಲಿ ಪ್ರಚಂಡ ಸಭೆ ಸೇರಿತು. ರಾಜಮ್ಮನೇ ಅಧ್ಯಕ್ಷತೆ ವಹಿಸಿದ್ದಳು. ಜಯ ಲಭಿಸುವವರೆಗೂ ಇದೇ ಹೋರಾಟವನ್ನು ನಡೆಸತಕ್ಕದ್ದೆಂದು ತೀರ್ಮಾನವಾಯಿತು. ಪ್ರತಿಬಂಧಕ ಆಜ್ಞೆಯನ್ನುಲ್ಲಂಘಿಸಲು ನೂರಾರು ಮಂದಿ ಸಿದ್ಧವಾದರು. ಇದಾದನಂತರ ಎರಡು ತಿಂಗಳಿನಲ್ಲಿಯೇ ನಮ್ಮ ಮಹಾರಾಜರು ಪ್ರಜೆಗಳಿಗೆ ಆಡಳಿತ ಸ್ವಾತಂತ್ರ್ಯವನ್ನಿತ್ತದ್ದು ಚರಿತ್ರಾರ್ಹವಾದ ಸಂಗತಿ.

ಆಗತ್ಯ ಕರ್ತವ್ಯಗಳ ಮಧ್ಯೆ ಬಿಡುವಾದಾಗಲೆಲ್ಲಾ ರಾಜಮ್ಮನ ವ್ಯಾಸಂಗ, ರಚನೆಗಳು ನಡೆಯುತ್ತಿದ್ದವು. ಆದರೆ ಆಗಾಗ ಖಾಯಿಲೆ ಬರುತ್ತಲೇ ಇತ್ತು. ಉತ್ಕೃಷ್ಟವಾದ ಧ್ಯೇಯಗಳನ್ನೂ ನೀತಿಯನ್ನೂ ಬೆಳಸಿಕೊಂಡು ಬರುತ್ತಿದ್ದ ಈ ಕುಟುಂಬಕ್ಕೆ ೧೯೪೯ರ ಸುಮಾರಿನಲ್ಲಿ ಸಿಡಿಲಿನಂಥ ಆಘಾತವಾಯಿತು. ರಾಜಮ್ಮನ ಒಬ್ಬಳೇ ಮಗಳಾದ ಜಯಮ್ಮ ಅಕಾಲ ಮೃತ್ಯುವಿಗೆ ತುತ್ತಾದಳು. ಆ ದುಃಖ ಬಹುಕಾಲ ನಮ್ಮನ್ನೆಲ್ಲ ನಿಸ್ತೇಜರನ್ನಾಗಿ ಮಾಡಿತು. ಸಂಗೀತ ಸಾಹಿತ್ಯಗಳು ಮುಂಚೆ ವಿನೋದಕ್ಕಾಗಿದ್ದು ಅನಂತರ ದುಃಖವನ್ನು ಮರೆಯಿಸುವ ಸಾಧನಗಳಾದುವೆನ್ನಬಹುದು. ಹೇಗೋ ಸಮಾಧಾನಗೊಂಡು ಇವುಗಳ ಸೇವೆ ಹೇಗಾದರೂ ಮುಂದುವರಿಸತಕ್ಕದೆಂದು ನಂಬಿ ರಾಜಮ್ಮ ಮಾಡಿದ ಪ್ರವಾಸಗಳೂ, ಪಾಲುಗೊಂಡ ಸಭೆ, ಸಮ್ಮೇಳನಗಳೂ, ಇತರ ಕಾರ್ಯಗಳೂ ವಿದ್ವಾಂಸರಿಂದ ಬೇರೆ ಬೇರೆ ಕಡೆ ಯೋಗ್ಯವಾದ ರೀತಿಯಲ್ಲಿ ವರ್ಣಿಸಲ್ಪಟ್ಟಿವೆ.

ಈಗ ಈಕೆ ಪತಿಯೊಡನೆ ಶಂಕರಮಠದ ಇದಿರಾಗಿ ವಾಸಮಾಡುವಳು.

ಹಿರಿಯ ಮಗನಾದ ಶ್ರೀರಂಗಾಚಾರ್ಯ ಬೆಂಗಳೂರಿನಲ್ಲಿ ಮುದ್ರಣಕಾರ. ಎರಡನೇ ಮಗ ವೆಂಕಟಾಚಾರ್ಯ ಕೇಂದ್ರ ಸರಕಾರದ ಒಂದು ಉದ್ಯೋಗದಲ್ಲಿ ಜಕಾರ್ತಾದಲ್ಲಿರುವ.

ನಾಲ್ಕೈದು ವರ್ಷಗಳ ಹಿಂದೆ ರಾಜಮ್ಮ ತನ್ನ ಮನೆಯ ಆವರಣದಲ್ಲಿ ಗಿಡಗಳನ್ನು ಬೆಳೆಸುವ ಕಾರ್ಯವನ್ನು ಶ್ರದ್ಧೆಯಿಂದ ಕೈಗೊಂಡು, ದಿನಂಪ್ರತಿ ನಾಲ್ಕೈದು ಗಂಟೆಗಳ ಕಾಲ ತೋಟದ ಕಾರ್ಯವನ್ನು ಮಾಡುವಳು.

ಶರೀರಕ್ಕೆ ಸುಖವಿಲ್ಲ, ಮನಸ್ಸು ಗಟ್ಟಿ, ಹೆಚ್ಚು ನಡೆಯಲು ತ್ರಾಣವಿಲ್ಲ. ಬುದ್ಧಿ ವೇಗವಾಗಿ ಓಡುವದು. ದಿನಚರಿಯಲ್ಲಿ ನಿಧಾನ ಅಥವಾ 'ಭಾವನ'. ಬರವಣಿಗೆಯಲ್ಲಿ ಚುರುಕು. ಕಣ್ಣ ಮುಂದಿರುವ ಚರಾಚರ ವಸ್ತುಗಳ ಮೇಲಿರುವುದಕ್ಕಿಂತಲೂ ಅಗೋಚರವಾದ ಶಕ್ತಿಯ ಮೇಲೆ ನಂಬಿಕೆ ಹೆಚ್ಚು. ತನ್ನ ಬಂಧುಗಳಲ್ಲಿ ತನ್ನ ನಡೆನುಡಿಗಳು ಒಂದುವೇಳೆ ಸರಿಯಾಗಿ ಅರ್ಥವಾಗದಿದ್ದರೂ ತನ್ನ ಜೀವನದ ಮತ್ತು ಕೃತಿಗಳ ಪರಿಚಯವನ್ನು ಪಡೆದು ಆನಂದದ ಘಳಿಗೆಗಳನ್ನು ಸವಿಯುತ್ತಿರುವ ಅನೇಕಾನೇಕ ದೇಶಬಾಂಧವರ ವಾತ್ಸಲ್ಯ ತನ್ನನ್ನು ಕಾಯುವುದೆಂಬ ನಂಬಿಕೆ, ಕನ್ನಡ ವಾಙ್ಮಯದ ಪುರೋಭಿವೃದ್ಧಿಗಾಗಿ ನಡುಕಟ್ಟಿನಿಂತಿರುವ ಭಾಷಾಭಿಮಾನಿಗಳ ಪ್ರೋತ್ಸಾಹ, ಆಶೀರ್ವಾದಗಳು–ಇವೇ ಈಕೆಯ ಜೀವನವನ್ನು ನಡೆಸುತ್ತಿವೆ. ★

ಎನ್ನದೆಲ್ಲವ ಕಳೆದೆ ನಾಗೆಲ್ದೆನೆನ್ನದಿರು.
ಜನ್ಮ ಕಳೆಯುದು ನಿನಗೆ ಜಗದ ಋಣವಿಕ್ಕಿಹುದು.
ನಿನ್ನಂತೆ ಜಗಕೆ ಬಂದವರ ನೆರವ ನೀ ಪಡೆದೆ
ನಿನ್ನ ಪ್ರತ್ಯುಪಕಾರವೇನಾದರಿಹುದೇ?

ಜಗದ ಮಡಿಲಲಿ ಬೆಳೆದು ಜಗದ ಜನರಲಿ ಬೆರೆದು
ಜಗ ಬೆಳೆದುದನೆ ತಿಂದು ಸೊಗದಿ ಬಾಳಿದ್ದು
ಮುಗಿವ ಕಾಲದ ಮರೆದು ವಿಭವವಾಶ್ರಯಿಸಿದೆ
ಜಗಕೇನ ನೀನಿತ್ತೆ? ಜನ್ಮದಾ ಮಲಿನವೇ?

ಮಣ್ಣ ಪಾಲಿದು ಜನ್ಮ ಮುಗಿಲ ಮುಟ್ಟುವುದಲ್ಲ.
ಜನ್ಮದನುಭವವೆಲ್ಲ ಸೂರೆಗೊಂಬುದು ಕಾಲ.
ನಿನ್ನ ಗತಿಯೆಲ್ಲ ನೀ ಕಾಣದಿಹ ಪರಿಯೊಳದೆ
ನಿನ್ನ ಪುಣ್ಯದ ನೆನಹು ನಿಲುವ ನಂಬಿಕೆಯೇನು?

‘ಭಾರತಿ’ ಯವರೊಡನೆ ಕೆಲ ನಿಮಿಷಗಳು

● ವಾಣಿ

ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದ ಸಡಗರ. ಚಪ್ಪರದಲ್ಲಿ ಜನಗಳ ಓಡಾಟ. ಈ ಗದ್ದಲದ ನಡುವೆ ನನ್ನನ್ನು ಹಿಡಿದು ನಿಲ್ಲಿಸಿ ಸ್ನೇಹಿತೆಯೊಬ್ಬರು ಹೇಳಿದರು :

"ನೋಡಿ, ಅಲ್ಲಿ ನಿಂತಿದಾರಲ್ಲ ಅವರೇ ಭಾರತಿ..."

"ಎಲ್ಲಿ?" ಎಂದೆ. ಆಕೆ ಬೆರಳು ನೀಡಿ ತೋರಿಸಿದರು. ಆಸಕ್ತಿಯಿಂದ ನೋಡಿದೆ. ಏಕೆಂದರೆ ಅನೇಕ ವರ್ಷಗಳ-ಎಂದರೆ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಅವರ ‘ತಪಸ್ವಿನಿ’ ಓದಿದಾಗಿನಿಂದ ಮನದಲ್ಲಿ ಮೂಡಿನಿಂತ ಹಂಬಲ ಅದು : ಇಂಥ ಸುಂದರ ಕೃತಿಯನ್ನು ರಚಿಸಿದವರನ್ನು ನೋಡಬೇಕು, ನೋಡಿ, ನನ್ನ ಮೆಚ್ಚುಗೆ ತಿಳಿಸಬೇಕು ಎಂಬುದು.

‘ತಪಸ್ವಿನಿ’ಯನ್ನು ಓದಿದ ಅನೇಕರು ಇದೇ ಅಭಿಪ್ರಾಯ ವ್ಯಕ್ತ ಪಡಿಸಿದ್ದುಂಟು. ರಾಮಾಯಣ ಮಹಾಕಾವ್ಯದ ನಾಯಕರು ಶ್ರೀರಾಮ, ಸೀತಾದೇವಿ, ಲಕ್ಷ್ಮಣ ಕಾಡಿಗೆ ನಡೆದರು. ವನವಾಸ ಅನುಭವಿಸಿದರು. ಅವರ ಕಥೆ, ಸಾರ್ಥಕ ಜೀವನ, ದುಷ್ಟ ಶಿಕ್ಷಣ, ಶಿಷ್ಟರಕ್ಷಣೆ ಲೋಕಪ್ರಿಯವಾಯ್ತು. ಅದನ್ನು ಕವಿಗಳು ಹಾಡಿ ಹೊಗಳಿದರು.

ಆದರೆ ಪತಿಯನ್ನು ವನವಾಸಕ್ಕೆ ಕಳುಹಿಸಿ, ತಾನು ಹಿಂದೆ ಉಳಿಯಬೇಕಾದಾಗ, ಅರಮನೆಯಲ್ಲಿದ್ದರೂ ಹದಿನಾಲ್ಕು ವರ್ಷಗಳು ಪತಿಯನ್ನು ಅಗಲಿ, ಅವನ ಧ್ಯಾನದಲ್ಲಿ ಕಳೆದ ತಪಸ್ವಿನಿ ಊರ್ಮಿಳೆ ಯಾರ ಗಮನವನ್ನೂ ಸೆಳೆಯಲಿಲ್ಲ. ಅಂತಹ ಪಾತ್ರವನ್ನು ಎತ್ತಿಕೊಂಡು ಶ್ರೀಮತಿ ಭಾರತಿಯವರು ‘ತಪಸ್ವಿನಿ’ ರಚಿಸಿದರು. ಅದು ಜನರ ಮೆಚ್ಚುಗೆ ಗಳಿಸಿದ್ದು ಆಶ್ಚರ್ಯವಲ್ಲ.

ಈ ಎಲ್ಲ ನೆನಪುಗಳೂ ನುಗ್ಗಿ ಬಂದಾಗ ಎದುರಿಗೇ ನಿಂತಿದ್ದರು ಹಿರಿಯ ದಂಪತಿಗಳು. ಅವರನ್ನು ಪರಿಚಯ ಮಾಡಿಸಿದಾಗ ಗೌರವದಿಂದ ನಮಿಸಿದೆ.

ಶ್ರೀಮತಿ ತಿರುಮಲೆ ರಾಜಮ್ಮನವರದು ಅಂತಹ ವ್ಯಕ್ತಿತ್ವ. ಮಾತೃವಾತ್ಸಲ್ಯ ತುಂಬಿ ಸೂಸುವ ನಗು ಮುಖ – ಎಂಥವರಲ್ಲೂ ಗೌರವವನ್ನೂ, ಅಭಿಮಾನವನ್ನೂ ಉಕ್ಕಿಸುವಂಥದು. ಜೀವನದ ಸಿಹಿಕಹಿಗಳನ್ನು ಉಂಡು ಪಕ್ವವಾದ ಮನಸ್ಸು; ಎಲ್ಲರನ್ನೂ ತುಂಬು ಅಭಿಮಾನದಿಂದ ಮಾತಾಡಿಸುವ ಸರಳ ನಡೆನುಡಿ; ಅವರ ಸುತ್ತ ಒಂದು ಬಗೆಯ ಸ್ನೇಹದ ವಾತಾವರಣ ಮೂಡಲು ಅವಕಾಶವಿತ್ತಿದೆ.

ನನಗೆ ಅವರ ಎರಡನೇ ಭೇಟಿ ಆದುದು ಇತ್ತೀಚೆಗೆ: ರವೀಂದ್ರ ಕಲಾಕ್ಷೇತ್ರದಲ್ಲಿ. ಕೇವಲ ಮುಗುಳ್ನಗೆ, ವಂದನೆ, ಒಂದೆರಡು ಯೋಗಕ್ಷೇಮದ ಮಾತು. ಇಷ್ಟೇ ಆದರೂ ನನಗೆ ಅವರಲ್ಲಿ ಎಂದೂ ಮಾಸದಂತಹ ಗೌರವ, ಆತ್ಮೀಯತೆ ಉಂಟಾಗಿದೆ.

‘ಭಾರತಿ’ಯವರು ‘ತಪಸ್ವಿನಿ’ಯಲ್ಲದೆ ಇನ್ನೂ ಕೆಲವು ಪುಸ್ತಕಗಳನ್ನು ರಚಿಸಿದ್ದಾರೆ. ಸಂಖ್ಯೆಯ ದೃಷ್ಟಿಯಿಂದ ಅವರ ಕೃತಿಗಳು ಕಡಿಮೆ ಇರಬಹುದು. ಆದರೆ ಒಳ್ಳೆಯ ಅಭಿರುಚಿ ಹಾಗೂ ಗುಣಮಟ್ಟದಿಂದ ಅವು ಕನ್ನಡ ಸಾಹಿತ್ಯಕ್ಕೆ ಒಳ್ಳೆಯ ಕೊಡುಗೆ ಎಂದು ಧಾರಾಳವಾಗಿ ಹೇಳಬಹುದು

ಎದ್ದೇಳು! ಎದ್ದೇಳು! ಎಂಬುದೊಳ ಕೂಗು
ಉದ್ಧರಿಸು ನಿನ್ನಾತ್ಮ ಸಂಸ್ಕಾರವೆಂದೆನುತ.
ಬದ್ಧನಾಗಿರು ಧ್ಯೇಯವೊಂದರಲಿ, ಕಜ್ಜದಲಿ
ಶ್ರದ್ಧೆಯೊಂದಿರು ಜನುಮ ಸಿದ್ಧಿ ನಿರ್ಧಾರವದು.

ಎದೆ ಕೂಗು ಎಚ್ಚಿಸುತ ಬದುಕನೆಚ್ಚರಿಸುತಿರೆ
ಹದನಾವುದೆನುತಲೀ ಜನುಮ ಸಾರ್ಥತೆಗೆ
ಜಿಪುಕುತಿರೆ ‘ಸ್ವಾತಂತ್ರ್ಯ’ ಅದೆ ಪರಮ ಸಾಧನೆ
‘ಅದುವೆ ಜೀವನ ಸುಧೆ’ ಎಂಬುದೊಳದನಿಯು.

ಏಳು ಬೀಳುಗಳುಂಟು ಬೀಗದಿರು ಬಾಗದಿರು
ಬಾಳಿ ನೆಣಕೆಯೊಳಾದ ಭಂಗವಾದರು ಬರಲಿ;
ತಾಳಿಕೋ ಏನಾದರಾಗಲೆಂದೆದೆಯೊಡ್ಡು
ನಾಳೆಗೇನೆಂದು ನೆನೆಯದೆ ನುಗ್ಗು ಮುಂದಕೆ

ಸಾಹಿತ್ಯ ಸಂಗೀತ ವಿಶಾರದೆ

● ರಂ. ಶ್ರೀ ಮುಗಳಿ

ನಾಲ್ವತ್ತೆರಡು ವರ್ಷಗಳ ಹಿಂದಿನ ಮಾತು. ನಾನು ತರುಣನಾಗಿದ್ದಾಗ ಮೊದಲ ಬಾರಿಗೆ ಬೆಂಗಳೂರನ್ನು ನೋಡಲು ಬಂದಿದ್ದೆ. ಕನ್ನಡ ನಾಡಿನ ಸಂಸ್ಕೃತಿಯ ಹಲವು ಮುಖಗಳನ್ನು ಅರಿತುಕೊಳ್ಳಲು ಆತುರನಾಗಿದ್ದೆ. ವಿಶೇಷವಾಗಿ ಕರ್ನಾಟಕ ಸಂಗೀತವನ್ನು ಕೇಳಿ ತಣಿಯಬೇಕೆಂಬ ತುಂಬ ಹಂಬಲವಿತ್ತು. ವಿದ್ಯಾರ್ಥಿಯಾದ ಕಾಲದಲ್ಲಿ ಸುಬ್ಬಣ್ಣ ಎಂಬ ಸಂಗೀತ ಗುರುಗಳಿಂದ ಕರ್ನಾಟಕ ಸಂಗೀತದ ಕೆಲವು ಪಾಠಗಳನ್ನು ಹೇಳಿಸಿಕೊಂಡಿದ್ದೆ. ಧಾರವಾಡದಲ್ಲಿ ಅವರೊಬ್ಬರೇ ಈ ಸಂಗೀತ ಪದ್ಧತಿಯನ್ನು ಬಲ್ಲವರಾಗಿದ್ದರು. ಬೆಂಗಳೂರಿಗೆ ಬಂದಮೇಲೆ ಒಂದೆರಡು ದಿನಗಳಲ್ಲಿಯೆ ನನ್ನ ಹಂಬಲ ಕೈಗೂಡಿತು. ಮಾನ್ಯ ಶ್ರೀ ತಿ.ತಾ. ಶರ್ಮ ಅವರ ಮನೆಯಲ್ಲಿ ಅವರ ಧರ್ಮಪತ್ನಿ ವೀಣೆಯನ್ನು ನುಡಿಸುತ್ತ ಹಾಡುವರೆಂದು ತಿಳಿದು, ಹಿರಿಯರೊಡನೆ ಅಂದು ಸಂಜೆ ಹೋಗಿ ಕೂತುಕೊಂಡೆ. ವೀಣೆಯ ನಾದಲಹರಿಗಳು ವಾತಾವರಣವನ್ನು ತುಂಬಿದವು. ಅವುಗಳ ಜೊತೆಗೂಡಿ ಅಷ್ಟೇ ಮಧುರವಾದ ಹಾಡುಗಾರಿಕೆ ಹೊರಹೊಮ್ಮಿತು. ಎರಡು-ಮೂರು ಗಂಟೆ ಕಾಲ ನಾನು ಮೈಮರೆತು ಹೋಗಿದ್ದೆ. ಅಲ್ಲಿಗೆ ಬಂದವರೆಲ್ಲರೂ ತನ್ಮಯರಾಗಿ ಕೂತಿದ್ದರು. ಒಂದೊಂದುಸಲ ವೀಣೆಯ ಇಂಚರ ಯಾವುದು, ಹಾಡಿನ ದನಿ ಯಾವುದು ಎಂಬುದೂ ತಿಳಿಯದಷ್ಟು ಅವು ಸಮರಸವಾಗಿದ್ದುವು. ರತ್ನಾಕರ ಕವಿ ತನ್ನ 'ಭರತೇಶ ವೈಭವ'ದ ವೀಣಾ ಸಂಧಿಯಲ್ಲಿ ಮಾಡಿದ ವರ್ಣನೆ ತೀರ ಸರಿಯಾದ್ದೆಂದು ತೋರಿತು.

ವೀಣೆಯೊಳೊಮ್ಮೆ ತೋರುವಳು ರಾಗವ ತನ್ನ ।
ಗೋಣೊಳಗೊಮ್ಮೆ ತೋರುವಳು ॥
ವೀಣೆಯನೊಂದ ಬಿಟ್ಟೊಂದ ನುಡಿಸುವಳೀ ।
ಜಾಣೆಯೆಂಬಂತಿಹುದಾಗ ॥

ವೀಣೆಯು ನುಡಿಸುತ ಪಾಡಿದರಿವಳೀಗ ।
ವೀಣೆಗಳೆರಡನೊಂದಾಗಿ ॥
ಹೂಣಿ ನುಡಿಸುತಿದ್ದಳೆಂಬೊಲಿಹುದು ಮರ್ಝು ।
ರಾಣಿಯ ದನಿಯು ಚೆಲ್ವಿಕೆಯು ॥

ಇದು ಬರೀ ಕಲಾಚಾತುರ್ಯವಾಗಿರಲಿಲ್ಲ ಅಥವಾ ನಾದಮಾಧುರ್ಯವಾಗಿರಲಿಲ್ಲ. ಅಂತರಂಗದ ಅಮೂರ್ತ ಅನುಭವಗಳು ಈ ಸಂಗೀತರೂಪದಲ್ಲಿ ಆಕಾರವನ್ನು ಪಡೆಯುತ್ತಿರುವಂತೆ ಭಾಸವಾಗುತ್ತಿತ್ತು. ಆದ್ದರಿಂದ ಕೇಳುಗರ ಅಂತಃಕರಣಗಳೂ ಅದರೊಡನೆ ಬೆರೆಯುತ್ತಿದ್ದವು. ಇದನ್ನೂ ಕೂಡ ರತ್ನಾಕರನು ಹೀಗೆ ಬಣ್ಣಿಸಿದ್ದಾನೆ:

ಒಳಗುಮ್ಮಿದಾನಂದರಸ ತನ್ನ ತನು ತುಂಬಿ ।
ತುಳುಕಿ ಹೊರಗೆ ಸೂಸುವಂತೆ ॥
ತೆಳುವಸಿರಿಂದ ಬಾಯ್ದೆರೆಯೊಳು ಸುಸ್ವರ ।
ಹೊಳೆದು ಮೋಹಿಸುತಿದ್ದುದಾಗ ॥

ಈ ಬಗೆಯ ಆನಂದರಸವನ್ನು ಅಂದು ನಮಗೆ ಉಣಬಡಿಸಿದವರು ಶ್ರೀಮತಿ ರಾಜಮ್ಮನವರು. ಬೇಲೂರು ಹಳೇಬಿಡುಗಳಲ್ಲಿಯ ವಾಸ್ತುವೈಭವವನ್ನು, ಶ್ರವಣಬೆಳ್ಗೊಳದಲ್ಲಿಯ ಗೊಮ್ಮಟೇಶ್ವರನ ಮೂರ್ತಿ ವೈಭವವನ್ನು ಕಣ್ಣಾರೆ ಕಂಡು ಪುಳಕಿತನಾದ ನಾನು ಶ್ರೀಮತಿ ರಾಜಮ್ಮನವರ ಸಂಗೀತದ ಮೂಲಕ ಕರ್ನಾಟಕ ಸಂಗೀತದ ನಾದವೈಭವವನ್ನು ಅನುಭವಿಸಿ, ಇಂಥ ಕನ್ನಡ ಸಂಸ್ಕೃತಿ ಪರಂಪರೆಗೆ ಕನ್ನಡನಾಡಿನ ಹಲವಾರು ಮಕ್ಕಳು ಹೊರತಾಗಿರುವರಲ್ಲ ಎಂದು ಕೊರಗಿದೆ, ಅದರ ಪ್ರಸಾರ ಕಾರ್ಯಕ್ಕೆ ನನ್ನನ್ನು ನಾನೇ ಅರ್ಪಿಸಿಕೊಂಡೆ.

ಬರಬರುತ್ತ ಸಂಗೀತದಂತೆ ಸಾಹಿತ್ಯದಲ್ಲಿಯೂ ಶ್ರೀಮತಿ ರಾಜಮ್ಮನವರು ವಿಶಾರದೆಯಾಗಿರುವರೆಂದು ಹಾಡುಗಳನ್ನೂ, ತಪಸ್ವಿನಿ ಮುಂತಾದ ನಾಟಕಗಳನ್ನೂ ನೋಡಿದಾಗ ಅರಿವಾಗಿ ಅವರ ಬಗ್ಗೆ ನನ್ನ ಹೆಮ್ಮೆ ಇಮ್ಮಡಿಸಿತು. ಸಂಗೀತದಲ್ಲಿ ಹೇಗೆ ಅವರ ಅಂತರಂಗದ ಪರಿಪಾಕವು ಮೂಡುವುದೋ ಹಾಗೇ ಸಾಹಿತ್ಯದಲ್ಲಿಯೂ ಅವರ ಶಾಂತಿಸಹನೆಗಳು ಶಬ್ದರೂಪ ತಾಳುತ್ತವೆ. ‘ತಪಸ್ವಿನಿ’ ಎಂಬ ಪದ್ಯನಾಟಕದಲ್ಲಿ ರಾಮಾಯಣದಲ್ಲಿ ಕಡೆಗಣಿಸಲಾದ ಲಕ್ಷ್ಮಣನ ಹೆಂಡತಿ ಊರ್ಮಿಳೆಯ ಪಾತ್ರ ಸೃಷ್ಟಿ ಮಾತ್ರ ಆಗಿರುವುದಿಲ್ಲ, ತಪಸ್ವಿನಿಯಾಗಿ, ಶಾಂತಿ ಸಹನೆಯ ಮೂರ್ತಿಯಾಗಿ ತಮ್ಮ ಬಾಳನ್ನು ನಡೆಸಿಕೊಂಡು ಹೋಗುತ್ತಿರುವ ಶ್ರೀಮತಿ ರಾಜಮ್ಮನವರ ಅಂತರಂಗವೂ ಆಕೃತಿ ಮೂಡಿದೆ.

“ಸೈರಣೆಯೆ ಇನಿದಾಯ್ತು ನಿನಗೆ. ಅಭಿಮಾನ ಬಲದಿ ಸೈರಣೆಯು ಅನುಭವವಾಯ್ತು. ಅನುಭವದ ವಿಶ್ರಾಂತಿಯೇ ಶಾಂತಿಯೆನಿಸಿತು. ಶಾಂತಿಯಲಿ ಮನವು ಸ್ಥಿರಕಂಡು ಉನ್ನತಿಯ ಮುಖವಾಯ್ತು”–ಊರ್ಮಿಳೆಯ ಈ ಉಕ್ತಿಗಳಲ್ಲಿ ರಾಜಮ್ಮ

ನವರ ವ್ಯಕ್ತಿತ್ವವೇ ಮಿಡಿದಿರುವಂತೆ ಕಾಣುತ್ತದೆ. ತಮ್ಮ ಸ್ವಭಾವ ಮತ್ತು ಮನೋಧರ್ಮಕ್ಕೆ ಸರಿಹೋಗುವ ವಿಷಯಗಳನ್ನೇ ಅವರು ತಮ್ಮ ಬರೆವಣಿಗೆಗೆ ಆರಿಸಿಕೊಂಡಿದ್ದಾರೆ. ತಪಸ್ವಿನಿಯಂತೆ "ಮಹಾಸತಿ"ಯೂ ಇದಕ್ಕೆ ನಿದರ್ಶನ. ತಪಸ್ವಿನಿಯಲ್ಲಿ ಸೈರಣೆಯ ತತ್ವವನ್ನು ಎತ್ತಿಹಿಡಿದಂತೆ ಮಹಾಸತಿಯಲ್ಲಿ ತ್ಯಾಗದ ತತ್ವವನ್ನು ಎತ್ತಿ ತೋರಿಸಿದ್ದಾರೆ. "ಬಿದ್ದವರ ತ್ಯಾಗದಲಿ ಉದ್ಧಾರವಾಯ್ತು ಜಗ" ಎಂಬುದೇ ಕಲಿಯ ಮಾತು ಲೇಖಕಿಯರ ಮಾತೇ ಆಗಿರುವಂತಿದೆ.

ಶ್ರೀಮತಿ ರಾಜಮ್ಮನವರು ಉಜ್ವಲವಾದ ದೇಶಭಕ್ತಿಯಿಂದ ತಮ್ಮ ಯಜಮಾನರಾದ ಶ್ರೀ ತಿ.ತಾ. ಶರ್ಮ ಅವರೊಡನೆ ಬಿಸಿಲಿನಲ್ಲಿ ತಾಪಿನಲ್ಲಿ ನಡೆದು, "ಬಂದದ್ದೆಲ್ಲಾ ಬರಲಿ" ಎಂದು ಅನುಭವಿಸುತ್ತ ತಮ್ಮ ಮನಶ್ಶಾಂತಿಯನ್ನು ಕದಡಿಸಿಕೊಳ್ಳದೆ ಮುಖದ ಮೇಲಿನ ಮುಗುಳುನಗೆಯನ್ನು ಬಾಡಿಸದೆ ಸಮರ್ಪಣಭಾವದಿಂದ ಬಾಳುತ್ತಿದ್ದಾರೆ. ಅವರು ಸಾಹಿತ್ಯ ಸಂಗೀತ ವಿಶಾರದೆಯಾಗಿರುವಂತೆ ಜೀವನಕಲೆಯಲ್ಲಿಯೂ ವಿಶಾರದೆಯಾಗಿದ್ದಾರೆ. ಇನ್ನೊಂದು ಬಗೆಯಿಂದ ಹೇಳುವುದಾದರೆ ಅವರ ಜೀವನ ಕಲೆ, ಅಂತರಂಗದ ಪರಿಪಾಕ ಇವೇ ಅವರ ಸಾಹಿತ್ಯ ಸಂಗೀತಗಳಾಗಿ, ಅವುಗಳಲ್ಲಿಯ ಕಲಾಗುಣಕ್ಕೆ ಹೆಚ್ಚಳ ತಂದಿರುತ್ತವೆ.

ದಿನದಿನಕೆ ಚಣ ಚಣಕೆ ಜೀರ್ಣವೀ ಜನುಮ.
ಜನುಮ ಘುಣವಂತೆಯೋ ಕ್ಷೀಣವಾದರೆ ಸಫಲ.
ಜನುಮವುದ್ದೇಶವನು. ಉಣುವ ಕೂಲಿಯ ತೆತ್ತು
ದಿನವ ಕಳೆ ನಿನ್ನ ಮನ ನಿಶ್ಶಂಕೆಯೊಳಗಿರಿಸು.

ಕಳೆಕಳೆದು ಮನ ಬೆಳೆವ ಕಾಲವೇ ಕಾಲ.
ಕಳೆದುದನು ಕಾಣುತಿಹ ಕಾಲಕಿಲ್ಲ ಚ್ಯುತಿ
ಭವ ಸವೆದು ಸಾಧಿಸುವ ಬಾಳದೇ ಬಾಳು
ಸವೆದುದನು ಸಲಿಸುತಿಹ ಬಾಳ್ಗಿಲ್ಲ ಸಾವು.

ಉದ್ಧರಿಸು ನಿನ್ನನಾ ಬಳಿಕ ಮುಂದಕೆ ಸಾಗು.
ತಿದ್ದಿಕೊಳು ನಿನ್ನನೀ ಸ್ವಪ್ರಯತ್ನದಲಿ.
ಶುದ್ಧನಾಗುತೆ ಮುಂದೆ ಬಾ ಬುದ್ಧಿ ಪೇಳಲಿಕೆ
ಉದ್ಧಟತನದ ಮಾಣು, ಕ್ರುದ್ಧನಾಗದಿರು.

ಗಾಂಧೀಜಿ ವಾತ್ಸಲ್ಯವನ್ನು ಗೆದ್ದ ಕನ್ನಡಿತಿ

● **ಕಮಲಾ ಹಂಪನಾ**

ಎರಡು ಕಲೆಗಳ ಅಪೂರ್ವ ಸಂಗಮ : 'ಭಾರತಿ' ಕಾವ್ಯನಾಮಾಂಕಿತರಾದ ಶ್ರೀಮತಿ ತಿರುಮಲೆ ರಾಜಮ್ಮ.

ಸಂಗೀತ ಸಾಹಿತ್ಯಗಳೆರಡೂ ಸರಸ್ವತಿಯ ಎರಡು ಕಣ್ಣುಗಳಿದ್ದಂತೆ. ಈ ಎರಡು ವಿದ್ಯೆಗಳೂ ಎರಡು ಪರ್ವತಗಳಂತೆ, ಎರಡು ಮಹಾ ಸಾಗರಗಳಂತೆ. ಇಂತಹ ಅಪೂರ್ವ ವಿದ್ಯೆಗಳ ಸಂಗಮ, ಸಾಮರಸ್ಯವನ್ನು ಸಾಹಿತಿ ಶ್ರೀ ತಿ. ತಾ. ಶರ್ಮರ ಪತ್ನಿ ತಿರುಮಲೆ ರಾಜಮ್ಮನವರಲ್ಲಿ ಕಾಣಬಹುದು.

ವ್ಯಕ್ತಿ, ತನ್ನ ಜೀವಿತ ಕಾಲದಲ್ಲಿ ವಿದ್ಯೆಯ ಒಂದು ಮುಖವನ್ನು ಪರಿಚಯ ಮಾಡಿಕೊಳ್ಳುವುದೇ ಕಷ್ಟವಾಗುತ್ತದೆ. ತಿರುಮಲೆ ರಾಜಮ್ಮನವರು ಕಷ್ಟಪಟ್ಟು ಆರ್ಜಿಸಿದ ನಿರಂತರ ತಪಸ್ಸು, ಸಾಧನೆಯಿಂದ ಸಾಕ್ಷಾತ್ಕಾರ ಮಾಡಿಕೊಂಡಂಥ ವಿದ್ಯೆ ಸಂಗೀತ; ಕಲೋಪಾಸಕರ, ವಿದ್ವಾಂಸರ, ರಸತಜ್ಞರ ಮನೆತನದಲ್ಲಿ ಹುಟ್ಟಿ ಬೆಳೆದು ಅವರ ಒಡನಾಟದಿಂದ, ಸಂಸ್ಕಾರಬಲದಿಂದ ಹವ್ಯಾಸವಾಗಿ ಜೊತೆಯಲ್ಲಿ ಅಂಟಿ ಬಂದ ವಿದ್ಯೆ ಸಾಹಿತ್ಯ. ಸಂಗೀತದಲ್ಲಿ ಇದ್ದ ಇವರ ಅಪಾರ ಆಸಕ್ತಿ, ಶ್ರದ್ಧೆ, ಭಕ್ತಿ, ಒಲವುಗಳನ್ನು ಕಂಡ ವಿದ್ಯಾಧಿದೇವತೆ, ಸರಸ್ವತಿಯೇ ಮನಸೋತು ಇವರಿಗೆ ಸಾಹಿತ್ಯದ ವರವನ್ನೂ ದಯಪಾಲಿಸಿದಳೇನೋ! ಸರಸ್ವತಿಯ ವರಪುತ್ರಿ ರಾಜಮ್ಮ.

ತಿರುಮಲೆ ರಾಜಮ್ಮನವರ ಮನೆತನ ಕುರಿತು ಹೆಚ್ಚಾಗಿ ಪ್ರಸ್ತಾಪಿಸಬೇಕಾಗಿಲ್ಲ. ಅವರ ಮನೆತನ ಶತಾವಧಾನಿಗಳ ಮನೆತನ ಎಂದಾಗ ಆತ್ಮಕ್ಕೆ ಆಗಿರುವ ಸಂಸ್ಕಾರದ ಹಿರಿಮೆ ತಿಳಿಯುತ್ತದೆ. ಕಲೆ, ಸಂಗೀತ, ಸಾಹಿತ್ಯ ಇವರ ಮನೆತನದಲ್ಲಿ ಮುಪ್ಪುರಿಗೊಂಡಿರುವುದನ್ನು ಕಾಣಬಹುದು. ೧೯೦೦ರ ನವೆಂಬರ್ ೨೦ನೇ ತಾರೀಖು ಜನಿಸಿದ ತಿರುಮಲೆ ರಾಜಮ್ಮನವರು, ಕಂದಾಡೆ ರಾಘವಾಚಾರ್ಯರ ಹಾಗೂ ಸೀತಮ್ಮನವರ ಮಗಳು. ಕಂದಾಡೆ ರಾಘವಾಚಾರ್ಯರು ಮದನಪಲ್ಲಿಯ ಪುಂಗನೂರಿನ ಕಡೆ

ಯವರು. ಹೈಸ್ಕೂಲಿನಲ್ಲಿ ವಿಜ್ಞಾನದ ಉಪಾಧ್ಯಾಯರಾಗಿದ್ದರು. ಸಂಸ್ಕೃತವನ್ನು ಚೆನ್ನಾಗಿ ಬಲ್ಲವರಾಗಿದ್ದರು, ರಾಜಮ್ಮನ ತಾಯಿ ಸೀತಮ್ಮನವರು. ಚಿಕ್ಕಬಳ್ಳಾಪುರದ ಮಹಾಮಹೋಪಾಧ್ಯಾಯ ವಿದ್ವಾನ್ ರಾಜಗೋಪಾಲಾಚಾರ್ಯರು ಒಳ್ಳೆ ಮೇಧಾವಿಗಳು, ಚತುಶ್ಶಾಸ್ತ್ರ ಪಂಡಿತರು, ಶತಾವಧಾನಿಗಳು, ಮಹಾವಾಗ್ಮಿಗಳು. ಲೂಯಿರೈಸ್ ಅವರಿಗೆ ಬಲಗೈ ಆಗಿದ್ದವರು. ಕಾಶಿಗೆ ಮೂರು ಬಾರಿ ಹೋಗಿ ಅಲ್ಲಿಯ ಪಂಡಿತರನ್ನು ತಮ್ಮ ವಿದ್ವತ್ತಿನಿಂದ ಮೂರು ಬಾರಿಯೂ ಸೋಲಿಸಿ ಬಂದವರು. ಇಂಥವರ ಮೊಮ್ಮಗಳು ರಾಜಮ್ಮ. ರಾಜಗೋಪಾಲಾಚಾರ್ಯರ ಅಣ್ಣನ ಮೊಮ್ಮಗನೇ ತಿ. ತಾ. ಶರ್ಮರು. ಸೀತಮ್ಮನವರು ತಮ್ಮ ಸೋದರಳಿಯ ತಿ. ತಾ. ಶರ್ಮರಿಗೆ ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿ ತಮ್ಮ ತವರಿನ ಸಂಬಂಧವನ್ನು ಉಳಿಸಿಕೊಳ್ಳುವುದರ ಜೊತೆಗೆ ಆ ಮನೆಯ ವಿದ್ವತ್ತನ್ನೂ ಸಹ ಉಳಿಸಿಕೊಂಡರು.

ರಾಜಮ್ಮನವರಿಗೆ ಚಿಕ್ಕಂದಿನಿಂದಲೂ ಸಂಗೀತದಲ್ಲಿ ಆಸಕ್ತಿ. ಆ ಸಕ್ತಿಗೆ ತಕ್ಕಂತಹ ಮಧುರವಾದ ಕಂಠ. ಅದು ದೈವದತ್ತ ವರ. ಪ್ರತಿ ವರುಷವೂ ಶಾಲೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ಮೊದಲನೆಯ ಬಹುಮಾನ ರಾಜಮ್ಮನವರಿಗೆ ಮೀಸಲು. ಜತೆಗೆ ನಾಟಕಗಳಲ್ಲಿಯೂ ವಿಶೇಷ ಅಭಿರುಚಿ. ಶಾಲೆಯಲ್ಲಿನ ಅನೇಕ ನಾಟಕಗಳಲ್ಲಿ ಭಾಗವಹಿಸಿ ಅಭಿನಯಿಸುತ್ತಿದ್ದರು. ಅವರ ಸಾವಿತ್ರಿ ಪಾತ್ರದ ಅಭಿನಯಕ್ಕೆ ಬಹುಮಾನ ದೊರೆತಿದೆ. ರಾಜಮ್ಮನವರಿಗೆ ಚಿಕ್ಕಂದಿನಿಂದಲೂ ಮನೆಯಲ್ಲಿಯೂ, ಶಾಲೆಯಲ್ಲಿಯೂ ವಿಶೇಷವಾಗಿ ನೈತಿಕ ಶಿಕ್ಷಣ ದೊರೆಯುತ್ತಿತ್ತು. ಈ ಮೂಲಕ ಹಿಂದೂ ಧರ್ಮ, ಸಂಸ್ಕೃತಿ, ಸನಾತನ ಸಂಪ್ರದಾಯ, ದೇವರಲ್ಲಿ ಭಕ್ತಿ, ಗುರುಹಿರಿಯರಲ್ಲಿ ಗೌರವ ಇವೆಲ್ಲವೂ ಅವರಿಗೆ ಸಹಜವಾಗಿಯೇ ಉಂಟಾಯಿತು. ಇಷ್ಟಾದರೂ ಚಿಕ್ಕಂದಿನಲ್ಲಿ ರಾಜಮ್ಮನವರು 'ತುಂಟಿ' ಎನ್ನುವ ಹೆಸರನ್ನು ಗಳಿಸಿದ್ದರು. ಶಾಲೆಗೆ ಎಂದೂ ಸರಿಯಾದ ವೇಳೆಗೆ ಹೋದವರಲ್ಲ, ತಡವಾಗಿ ಹೋಗಿ ಕಡೆಯಲ್ಲಿ ಕುಳಿತುಕೊಳ್ಳುವುದು, ಅನಂತರ ಉಪಾಧ್ಯಾಯರ ಪ್ರಶ್ನೆಗಳಿಗೆ ಸರಿಯಾದ ಉತ್ತರ ಹೇಳಿ ಮುಂದೆ ಬಂದು ಕೂಡುವುದು. 'ತುಂಟಿ' ಎನ್ನುತ್ತಿದ್ದ ಗುರುಗಳೇ 'ಬುದ್ಧಿವಂತೆ' 'ಚತುರೆ' ಎಂದು ಸಂತೋಷದಿಂದ ಹೊಗಳುತ್ತಿದ್ದರು. ಮನೆಯಲ್ಲಿ ಸಂಪ್ರದಾಯದ ಹಾಡು, ದೇವರನಾಮಗಳನ್ನೂ ಕಲಿಯುತ್ತಿದ್ದರು. ಇವರಿಗೆ ಸಂಗೀತದಲ್ಲಿ ಇದ್ದ ಆಸಕ್ತಿ, ಅಭಿರುಚಿ, ಕಂಠ ಮಾಧುರ್ಯ ಕಂಡ ಇವರ ಶಾಲೆಯ ಸಂಗೀತದ ಗುರುಗಳಾದ ಶ್ರೀ ವೆಂಕಟಕೃಷ್ಣಯ್ಯನವರು, ಅವರೇ ಇಷ್ಟಪಟ್ಟು, ಇವರ ಮನೆಗೇ ಬಂದು ರಾಜಮ್ಮನವರಿಗೆ ಸಂಗೀತ ಹೇಳಿಕೊಟ್ಟರು.

ವಿದ್ಯೆಯ ಬಗ್ಗೆ ರಾಜಮ್ಮನವರಿಗೆ ವಿಶೇಷ ಆಸಕ್ತಿ ಇದ್ದರೂ ಅಂದಿನ ಸಮಾಜದ ವಾತಾವರಣಕ್ಕೆ ತಕ್ಕಂತೆ, ಅವರು ತಮ್ಮ ವಿದ್ಯಾಭ್ಯಾಸವನ್ನು ಎಂಟನೆಯ ತರಗತಿಗೇ ನಿಲ್ಲಿಸಬೇಕಾಯಿತು. ಇದಕ್ಕೆ ಮೊದಲೇ ಅವರ ೧೧ನೇ ವರ್ಷ ವಯಸ್ಸಿನಲ್ಲಿ, ೧೬ರ

ಹರೆಯದಲ್ಲಿದ್ದು, ಪ್ರೈಮರಿ ಎರಡನೆಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ತಿ. ತಾ. ಶರ್ಮರೊಡನೆ ವಿವಾಹವಾಯಿತು.

ದೇಶವೆಲ್ಲೆಲ್ಲಾ ಇಂಗ್ಲೀಷಿನ ವ್ಯಾಮೋಹ ಜನತೆಯನ್ನು ಆಕರ್ಷಿಸಿದ್ದ ಕಾಲ ಅದು. ರಾಜಮ್ಮನವರ ತಂದೆ ತಾಯಿಗಳಿಗೂ ತಮ್ಮ ಮಗಳು ಇಂಗ್ಲೀಷನ್ನು ಕಲಿಯಬೇಕು ಎನ್ನುವ ಆಸೆ. ಅದಕ್ಕೆ ರಾಜಮ್ಮನವರಿಗೆ ಗುರು: ಮನೆಯಲ್ಲಿಯೇ ಇದ್ದ ಪತಿ ತಿ.ತಾ. ಶರ್ಮರೇ. ಒಂದೇ ಒಂದು ದಿವಸ ಇಂಗ್ಲೀಷಿನ ವ್ಯಾಸಂಗ ನಡೆಯಿತು. ಮಾರನೆಯ ದಿನ ಕೈಯಲ್ಲಿ ಒಂದು ಕೋಲನ್ನು ಹಿಡಿದು ಕುಳಿತರು ಗುರುಗಳು. ಸಹಜ ತುಂಟಿಯಾದ ರಾಜಮ್ಮನವರು 'ನನಗೆ ಇಂಗ್ಲಿಷೂ ಬೇಡ, ನಿಮ್ಮ ಏಟೂ ಬೇಡ' ಎಂದು ಇಂಗ್ಲೀಷಿಗೆ ತಿಲಾಂಜಲಿ ನೀಡಿದರು. ರಾಜಮ್ಮನವರು ಇಂಗ್ಲೀಷ್ ಕಲಿಯದೇ ಇದ್ದರೂ, ಶಾಲೆಯಲ್ಲಿ ಕಲಿತದ್ದು ಸ್ವಲ್ಪವೇ ಆದರೂ, ಆ ವಿದ್ಯೆ ಬಹಳ ಸತ್ವಯುತವಾಗಿದ್ದು, ಅವರ ಬಾಳು ಬೆಳಗಿ ಅರಳುವುದಕ್ಕೆ ಸಹಾಯವಾಯಿತು.

ಅನಂತರ ಇವರು ಬೆಂಗಳೂರಿಗೆ ಬಂದಾಗ ಮನೆವಾರ್ತೆ ಪೇಟೆಯ ಒಂದು ಮನೆಯಲ್ಲಿ ನೆಲಸಿದರು. ಸಮೀಪದಲ್ಲಿಯೇ ಅಮೆಚೂರ್ ಡ್ರಮ್ಯಾಟಿಕ್ ಅಸೋಸಿಯೇಷನ್ ಇದ್ದು' ಅಲ್ಲಿ ನಡೆಯುತ್ತಿದ್ದ ಅನೇಕ ನಾಟಕಗಳನ್ನು ನೋಡುವ ಅವಕಾಶ ದೊರೆಯಿತು. ರಾಜಮ್ಮನವರಿಗೆ ಮೊದಲಿನಿಂದಲೂ ನಾಟಕದಲ್ಲಿ ವಿಶೇಷ ಒಲವು. ಅನೇಕ ನಾಟಕಗಳನ್ನು ಓದಿದರು, ಅನುಭವಿಸಿದರು, ಸಂತೋಷಗೊಂಡರು. ತಮ್ಮ ಅರಿವಿಲ್ಲದಂತೆಯೇ ಮನಸ್ಸು ಸಾಹಿತ್ಯದ ಕಡೆ ಹರಿದಿತ್ತು.

ಇಂದು ಕನ್ನಡದ ಹಿರಿಯ ಸಾಹಿತಿಯ ಮಡದಿಯೆಂದೂ, ತಮ್ಮ ಸ್ವಂತ ಶಕ್ತಿಯಿಂದ ಕನ್ನಡದಲ್ಲಿ ಹಿರಿಯ ಸ್ತ್ರೀ ಸಾಹಿತಿಯೆಂದೂ ಪ್ರಸಿದ್ಧರಾಗಿರುವ ರಾಜಮ್ಮನವರ ಮಾತೃಭಾಷೆ ತೆಲುಗು. ಮೊದಲು ತೆಲುಗು ಸಾಹಿತ್ಯವನ್ನು ಬಹಳವಾಗಿ ಓದಿಕೊಂಡರು. ಅದರಲ್ಲಿಯೂ ತೆಲುಗಿನ ಪ್ರಸಿದ್ಧ ಸಾಹಿತಿಯಾದ 'ವೀರೇಶಲಿಂಗಂ' ಅವರ ಸಾಹಿತ್ಯವನ್ನು ಉಪನ್ಯಾಸವನ್ನು ಓದಿ, ಮೆಚ್ಚಿಕೊಂಡು, ಅನಂತರ ದೇಶಭಾಷೆಯಾದ ಕನ್ನಡಕ್ಕೆ ಮನಸೋತರು. ಅಂದಿನ ಪ್ರಸಿದ್ಧ ಕಾದಂಬರಿಕಾರರಾದ ವೆಂಕಟಾಚಾರ್ಯ, ಗಳಗನಾಥ, ವಾಸುದೇವಾಚಾರ್ಯರ ಕಾದಂಬರಿಗಳನ್ನು ಓದಿದರು. ಜೊತೆಗೆ ಅವರ ಸೋದರಮಾವಂದಿರ, ಅಣ್ಣಂದಿರ ಪ್ರೋತ್ಸಾಹ ರಾಜಮ್ಮನವರಲ್ಲಿ ಸುಪ್ತವಾಗಿದ್ದ ಸಾಹಿತ್ಯಾಭಿರುಚಿ ಉದ್ದೀಪನಗೊಳ್ಳಲು ನೆರವಾಯಿತು.

"ಅಂದು ನಮ್ಮ ಮನೆಯೇ ಒಂದು ರಂಗಭೂಮಿಯಾಗಿತ್ತು. ಮನೆಯಲ್ಲಿ ಎಲ್ಲರೂ ಬಣ್ಣ ಬಳಿದುಕೊಂಡು ಓಡಾಡಿದವರೇ. ಅದ್ದರಿಂದಲೇ ನನಗೂ ನಾಟಕಗಳ ಬಗ್ಗೆ, ಸಾಹಿತ್ಯದ ಬಗ್ಗೆ ಒಲವು ಬೆಳೆಯಿತೆಂದರೆ ಆಶ್ಚರ್ಯವಿಲ್ಲ" ಎಂದು ರಾಜಮ್ಮನವರೇ ಹೇಳುತ್ತಾರೆ. ತಮ್ಮ ೧೮ನೆಯ ವಯಸ್ಸಿನಲ್ಲಿ ರಾಜಮ್ಮನವರು ತೆಲುಗಿಗೆ ಅನುವಾದವಾಗಿದ್ದ ರವೀಂದ್ರರ "ದೃಢ ಪ್ರತಿಜ್ಞೆ" ಎನ್ನುವ ಕಾದಂಬರಿಯನ್ನು ತೆಲುಗಿನಿಂದ ಕನ್ನಡಕ್ಕೆ ಭಾಷಾಂತರ ಮಾಡಿದರು. ಅದೇ ವೇಳೆಗೆ

ತಿ. ತಾ. ಶರ್ಮರೂ ಪ್ರಾಕ್ತನ ಸಂಶೋಧನ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಅವರ ಜೊತೆಯಲ್ಲಿ ಇತಿಹಾಸ ಹಾಗೂ ಪುರಾಣ ಪ್ರಸಿದ್ಧವಾದ ಊರುಗಳನ್ನು ಸುತ್ತುವ, ಅಲ್ಲಿನ ಸ್ಥಳ ಮಹಿಮೆಗಳನ್ನು ತಿಳಿಸುವ ಶಾಸನಗಳನ್ನು, ವೀರಸತಿ, ಮಹಾಸತಿ ಕಲ್ಲುಗಳನ್ನು ಕಾಣುವ ಅವಕಾಶ ದೊರೆತು, ಅವುಗಳ ಬಗ್ಗೆ ಹೆಚ್ಚಿನ ಆಸಕ್ತಿ ಉಂಟಾಯಿತು–ರಾಜಮ್ಮನವರಿಗೆ. ಅದೇ ವೇಳೆಗೆ ಮದ್ರಾಸಿನಲ್ಲಿ ಬೆನಗಲ್ ರಾಮರಾಯರ, ಪಂಜೆ ಮಂಗೇಶರಾಯರ ಪರಿಚಯವೂ ಆದದ್ದು ರಾಜಮ್ಮನವರ ಸಾಹಿತ್ಯಾಭಿರುಚಿಯ ಮೇಲೆ ಹೆಚ್ಚಿನ ಪರಿಣಾಮ ಬೀರಿತು ಸಹಜ ಪ್ರತಿಭೆಯ ಜೊತೆಗೆ ಪಾಂಡಿತ್ಯವೂ, ಜೀವನಾನುಭವವೂ ಬೆರೆತು, ಸ್ವಂತ ಹಾಡು, ಕವನ, ನಾಟಕಗಳ ರಚನೆಗೆ ಅವಕಾಶವಾಯಿತು.

ಸಾಹಿತ್ಯದ ಬೆಳವಣಿಗೆಯ ಜೊತೆಯಲ್ಲಿಯೇ ಸಂಗೀತದ ಬೆಳವಣಿಗೆಯೂ ರಾಜಮ್ಮನವರಲ್ಲಿ ಮುಂದುವರೆಯುತ್ತಿತ್ತು. ಬೆಂಗಳೂರಿನಲ್ಲಿ ಅವರು ನೆಲಸಿದಾಗ ವೀಣಾ ವಿದ್ವಾನ್ ಗೋಪಾಲರಾಯರಿಂದ ಹಾಗೂ ತಾಯಪ್ಪನವರಿಂದ ವೀಣಾ ಪಾಠವಾಯಿತು. ಗುರುಗಳ ಬಗ್ಗೆ ರಾಜಮ್ಮನವರಿಗೆ ಅಪಾರ ಭಕ್ತಿ, ಗೌರವ, ಪೂಜ್ಯಭಾವನೆ. ಇವುಗಳಿಗೆ ತಕ್ಕಂತೆ ವಿದ್ಯೆಯಲ್ಲಿ ಆಳವಾದ ಶ್ರದ್ಧೆ. ಇವುಗಳಿಂದಲೇ ಇಂತಹ ಶಿಷ್ಯಳಿಗೆ ಪಾಠ ಹೇಳಿಕೊಟ್ಟರೆ ನಾವು ವಿದ್ಯೆ ಕಲಿತಿದ್ದಕ್ಕೂ ಸಾರ್ಥಕ ಎಂದು ಗುರುಗಳಿಂದ ರಾಜಮ್ಮನವರು ಹೊಗಳಿಸಿಕೊಳ್ಳಲು ಸಮರ್ಥರಾದರು. ಅದಕ್ಕಾಗಿ ರಾಜಮ್ಮನವರು ಎಷ್ಟು ಅಭ್ಯಾಸ ಮಾಡಿದರೋ! ಎಷ್ಟು ಕಷ್ಟಪಟ್ಟರೋ! ಮುಂದೆ ರಾಜಮ್ಮನವರು ವೀಣೆ ಶೇಷಣ್ಣನವರ ಶಿಷ್ಯತ್ವ ಸಂಪಾದಿಸಿದರು. ಹೀಗೆ ಸಂಗೀತ ಸಾಹಿತ್ಯಗಳೆರಡನ್ನೂ ಸರಿಸಮಾನವಾಗಿ ಚಿಕ್ಕ ವಯಸ್ಸಿನಲ್ಲಿಯೇ ಅರ್ಜಿಸಿಕೊಂಡ ಹಿರಿಮೆ ರಾಜಮ್ಮನವರದು.

ಅದೇ ಸಮಯದಲ್ಲಿ ಮದ್ರಾಸಿನಲ್ಲಿ ಮಹಾತ್ಮಾಗಾಂಧೀಜಿಯವರ ದರ್ಶನವಾಯಿತು. ಅವರ ಬಗ್ಗೆ ಮೊದಲೇ ಮೂಡಿದ್ದ ಪೂಜ್ಯಭಾವನೆಗಳೆಲ್ಲಾ ಅವರನ್ನು ಕಾಣುತ್ತಿದ್ದಂತೆಯೇ ಇಮ್ಮಡಿಗೊಂಡವು, ಮುಮ್ಮಡಿಗೊಂಡವು. ಮಾರನೆಯ ದಿವಸವೇ ಸ್ಫೂರ್ತಿಗೊಂಡಿದ್ದ ರಾಜಮ್ಮನವರು “ದೇಶಸೇವಾನಿರತರಾಗಿರೈ ಲೋಗರೇ” ಎನ್ನುವ ಕವನವನ್ನು ರಚಿಸಿದರು. ಇದೇ ರಾಜಮ್ಮನವರು ರಚಿಸಿದ ಮೊಟ್ಟಮೊದಲನೆಯ ಕವನ. ಅಂದಿನ ಸಂಜೆ ಬೆನಗಲ್ ರಾಮರಾಯರು, ಪಿ. ಕೋದಂಡರಾಯರೂ ಮೊದಲಾದವರು ಇದ್ದಂತಹ ಸಭೆಯಲ್ಲಿ ರಾಜಮ್ಮನವರು ಈ ಕವನವನ್ನು ಹಾಡಿದರು. ಅಂದಿನ ವಾತಾವರಣಕ್ಕೆ ಆ ಹಾಡು ಹೆಚ್ಚಿನ ಪುಷ್ಟಿ ಕೊಟ್ಟಿತಲ್ಲದೆ ರಾಜಮ್ಮನವರ ಕೀರ್ತಿಯೂ ಹರಡಲಾರಂಭಿಸಿತು.

ಅಂದಿನಿಂದಲೇ ರಾಜಮ್ಮನವರ ತನುಮನಗಳಲ್ಲಿ ‘ದೇಶಸೇವೆಯೇ ಈಶಸೇವೆ’ ಎನ್ನುವ ತಾರಕ ಮಂತ್ರ ಮಿಡಿಯಲಾರಂಭಿಸಿತು. ಅದೇ ದಿವಸ ನಾಲ್ಕು ಆಣೆ ಕೊಟ್ಟು ಕಾಂಗ್ರೆಸ್ಸಿನ ಸದಸ್ಯೆಯೂ ಆದರು.

ಇಲ್ಲಿಯವರೆಗೂ ಶಾಂತರೀತಿಯಿಂದ ನಡೆದುಬಂದ ರಾಜಮ್ಮನವರ ಜೀವನ ಈಗ ಕ್ರಾಂತಿಯ ಕಡೆ ತಿರುಗಿತು. ಭಾರತದಿಂದ ಬ್ರಿಟಿಷರನ್ನು ಓಡಿಸುವ ಸಲುವಾಗಿ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ, ಭಾರತದ ಜನ ಎಚ್ಚೆತ್ತು, ಕಾರ್ಯ ಸಾಧಿಸಲು ಧೈರ್ಯದಿಂದ, ಉತ್ಸಾಹದಿಂದ ಮುನ್ನುಗ್ಗುತ್ತಿದ್ದ ಕಾಲ ಅದು. ನಾಡುನುಡಿಗಳ ಅಭಿಮಾನಿಗಳಾದ ಈ ಕಿರುವಯಸ್ಸಿನ, ಬಿಸಿರಕ್ತದ ತರುಣ ದಂಪತಿಗಳ ಮನಸ್ಸನ್ನು ಸಹಜವಾಗಿಯೇ ಆಗಿನ ವಾತಾವರಣ ಸೆರೆಹಿಡಿಯಿತು. ಇಲ್ಲಿಯವರೆಗೂ ಕಲಿತ ಗಳಿಕೆಯೆಲ್ಲಾ ದೇಶಸೇವೆಯ ಕಾರ್ಯಕ್ಕೆ ಮೀಸಲಾಯಿತು. ಅಂದಿನ ಜನತೆಗೆ ಬ್ರಿಟಿಷರಿಂದ ಆಗುತ್ತಿರುವ ಅನ್ಯಾಯಗಳನ್ನು ಕುರಿತು ಕೆಲವು ಹಾಡುಗಳ ರಚನೆಯಾದರೆ, ಇನ್ನು ಕೆಲವು ಉತ್ಸಾಹಿ ತರುಣ ದೇಶಪ್ರೇಮಿಗಳಿಗೆ ಸ್ಫೂರ್ತಿಯನ್ನು ಪ್ರಚೋದಿಸುವ ಗೀತೆಗಳಾದವು. ಹೀಗೆ ಅವರ ಎಲ್ಲ ಹಾಡುಗಳಲ್ಲೂ ಬ್ರಿಟಿಷರ ಖಂಡನೆ, ದೇಶಪ್ರೇಮ ಕಾಣುತ್ತಿದ್ದು ಅವುಗಳನ್ನು ಅಚ್ಚು ಹಾಕಿಸಲು ಎಲ್ಲ ಪ್ರಕಾಶಕರೂ ಹೆದರುತ್ತಿದ್ದರು. ಇದಾದ ಕೆಲವು ದಿವಸಗಳ ನಂತರ ತಿ. ತಾ. ಶರ್ಮರು ಮಂಗಳೂರಿಗೆ ಯಾವುದೋ ಸರ್ಕಾರಿ ಕೆಲಸದ ಮೇಲೆ ಹೋಗಬೇಕಾಯಿತು. ರಾಜಮ್ಮನವರ ಪ್ರವಾಸವೂ ಜೊತೆಯಲ್ಲಿ ಇದ್ದುದೆ. ಆಗ ಅಸಹಕಾರ ಚಳುವಳಿ ನಡೆಯುತ್ತಿದ್ದ ಕಾಲ. ಅದೇ ಸಮಯದಲ್ಲಿ "ಸ್ವರಾಜ್ಯ ಪರಿಷತ್ತು" ಎನ್ನುವ ಉತ್ತಮ ದೇಶಪ್ರೇಮ ಗೀತೆಯು ರಾಜಮ್ಮನವರಿಂದ ರಚಿತವಾಯಿತು. ಅದನ್ನು "ತಿಲಕ ಸಂದೇಶ" ಎನ್ನುವ ಪತ್ರಿಕೆಯಲ್ಲಿ ಡಿ. ಕೆ. ಭಾರದ್ವಾಜರು ಅಚ್ಚು ಹಾಕಿಸಿದರು. ಸರಕಾರದ ಭಯದಿಂದಾಗಿ ರಾಜಮ್ಮನವರ ಹೆಸರು ಆ ಪತ್ರಿಕೆಯಲ್ಲಿ 'ಭಾರತ ಪುತ್ರಿ' ಎಂದು ಅಚ್ಚಾಯಿತು —ಆಗ ಶ್ರೀ ಕೃಷ್ಣಮಾಚಾರ್ಯರು-ತಿ. ತಾ. ಶರ್ಮರ ಮೇಲಧಿಕಾರಿಯಾಗಿದ್ದವರು. ಕನ್ನಡ, ಇಂಗ್ಲಿಷ್, ತೆಲುಗು ಸಾಹಿತ್ಯವನ್ನು ಚೆನ್ನಾಗಿ ಬಲ್ಲವರಾಗಿದ್ದವರು. ಮೇಲಾಗಿ ದೇಶ ಪ್ರೇಮಿಗಳು. ಅವರು 'ಭಾರತ ಪುತ್ರಿ' ಎನ್ನುವ ಹೆಸರಿಗೆ ಬದಲಾಗಿ 'ಭಾರತೀ' ಎನ್ನುವ ಹೆಸರಷ್ಟೇ ಸಾಕೆಂದು ಸೂಚಿಸಿದರು. ಅನಂತರ ರಾಜಮ್ಮನವರ ಹೆಸರು 'ಭಾರತಿ'ಯಾಗಿ ಅದೇ ಕಾವ್ಯನಾಮವಾಯಿತು. ಅದೇ ದಿವಸ ಸಂಜೆ ಮಂಗಳೂರಿನಲ್ಲಿ ರಾಜಮ್ಮನವರು ವೀಣಾ ಕಛೇರಿಯನ್ನು ನಡೆಸಿದರು. ಸಮಾರಂಭ ಚೆನ್ನಾಗಿ ನಡೆದು ಜನತೆಯಿಂದ ಉತ್ತೇಜನ ದೊರೆಯಿತು.

ಇತ್ತ ನಾಟಕ ಶಿಖಾಮಣಿ ಕೈಲಾಸಂ ಪರಿಚಯವಾಗಿ ಮನೆಯಲ್ಲಿಯ ಒಬ್ಬ ಅಣ್ಣನಂತಾದರು. ಅವರ ಪ್ರಭಾವ ಸಹಜವಾಗಿ ರಾಜಮ್ಮನವರ ಮೇಲೆ ಆಯಿತೆಂದರೆ ಆಶ್ಚರ್ಯವೇನಿಲ್ಲ. ಅವರ ನಾಟಕ ಕಲೆಗೆ, ಪ್ರಭುತ್ವಕ್ಕೆ, ಪಾಂಡಿತ್ಯಕ್ಕೆ ಮಾರು ಹೋಗಿ ರಾಜಮ್ಮನವರಲ್ಲಿ ಪೂಜ್ಯಭಾವನೆಯುಂಟಾಯಿತು. ಅದಕ್ಕೆ ಕುರುಹಾಗಿ ಕೈಲಾಸಂ ತೀರಿದಾಗ " ಆ ರ್ಯ ಕೈ ಲಾ ಸಂ " ಎಂದು ಕರೆದು, ಅವರ ಜೀವನ ಚರಿತ್ರೆಯನ್ನು ಬರೆಯುವುದರ ಮೂಲಕ ಆತನ ಋಣವನ್ನು ಸ್ವಲ್ಪಮಟ್ಟಿಗೆ ತೀರಿಸಿದ್ದಾರೆ. ಅವರಿಂದ, ಮನೆಯವರೆಲ್ಲ ನೀಡಿದ ಪ್ರೇರಣೆ, ಪ್ರೋತ್ಸಾಹದಿಂದ

ರಾಜಮ್ಮನವರು ನಾಟಕಗಳನ್ನೂ ಬರೆಯಲು ತೊಡಗಿದರು. ಇವರು ಬರೆದ ನಾಟಕ ಒಂದಕ್ಕೆ ಅಮೆಚೂರ್ ಡ್ರಮಾಟಿಕ್ ಅಸೋಸಿಯೇಷನ್‌ನಿಂದ ಬಹುಮಾನವೂ ದೊರೆಯಿತು. ಜೊತೆಗೆ ಇವರ ಮತ್ತೊಂದು ನಾಟಕ 'ತಪಸ್ವಿನಿ'ಗೆ ಮೈಸೂರು ವಿಶ್ವವಿದ್ಯಾನಿಲಯದ ಬಹುಮಾನ ದೊರೆಯಿತು. ಕನ್ನಡಿಗರಿಗೆ ಇವರ ಪ್ರತಿಭೆಯ ಪರಿಚಯವಾಯಿತು.

ಸಾಹಿತ್ಯ ಸೇವೆಯ ಜೊತೆಯಲ್ಲಿಯೇ ಸಂಗೀತದ ಅಭ್ಯಾಸವೂ ನಡೆಯುತ್ತಿತ್ತು. ರಾಜಮ್ಮನವರು ಮೈಸೂರಿನಲ್ಲಿ ನಿಂತು, ಆಸ್ಥಾನ ವಿದ್ವಾನ್ ವೈಣಿಕ ಶಿಖಾಮಣಿ ವೀಣೆ ಶೇಷಣ್ಣನವರ ಬಳಿಯಲ್ಲಿ ವೀಣೆ ಅಭ್ಯಾಸ ಮುಂದುವರಿಸಿದರು. ಶಿಷ್ಯಳಿಗೆ ಗುರುಗಳಲ್ಲಿ ಅಪಾರ ಭಕ್ತಿ, ಗೌರವ. ಗುರುವಿಗೆ ಶಿಷ್ಯಳ ಬಗ್ಗೆ ಅಪಾರ ಕರುಣೆ, ಪ್ರೀತಿ. ಗುರುವಿನ ಮನಸ್ಸನ್ನು ತನ್ನ ಬುದ್ಧಿವಂತಿಕೆಯಿಂದ ಶಿಷ್ಯೆ ಗೆದ್ದಳು. ಗುರು ತನ್ನ ಔದಾರ್ಯದಿಂದ ಶಿಷ್ಯಳ ಮನಸ್ಸನ್ನು ಗೆದ್ದರು. ರಾಜಮ್ಮನವರು ಗುರುದಕ್ಷಿಣೆಯನ್ನು ವಿದ್ಯೆಯ ಮೂಲಕ, ಸಂಗೀತದ ಮೂಲಕ ಮಾತ್ರ ಸಲ್ಲಿಸದೆ, ಸಾಹಿತ್ಯದ ಮೂಲಕವೂ ಕಣ್ಣೀರ ಕಾಣಿಕೆಯನ್ನು ಅರ್ಪಿಸಿದ್ದಾರೆ. "ಆಸ್ಥಾನ ವಿದ್ವಾನ್ ವೈಣಿಕ ಶಿಖಾಮಣಿ ವೀಣೆ ಶೇಷಣ್ಣನವರು" ಎನ್ನುವ ರಾಜಮ್ಮನವರ ಗ್ರಂಥ ಗುರುವಿಗೆ ಅರ್ಪಿಸಿದ ಕಾಣಿಕೆ ಆದಂತೆ, ಕನ್ನಡ ಸಾಹಿತ್ಯಕ್ಕೂ ಕೊಟ್ಟ ಒಂದು ಉತ್ತಮ ಕೃತಿಯೂ ಆಗಿದೆ.

ಇಡೀ ಭಾರತದಲ್ಲೇ ಸ್ವರಾಜ್ಯ, ಸ್ವಾತಂತ್ರ್ಯ ಎಂಬ ಕೂಗು ಕೇಳುತ್ತಿದ್ದ- ಅದೇ ಸಮಯದಲ್ಲಿ ಅಹಮದಾಬಾದಿನಲ್ಲಿ ಕಾಂಗ್ರೆಸ್ಸಿನ ಮಹಾ ಸಭೆಯ ಆಶ್ರಯದಲ್ಲಿ ಸಂಗೀತ ಸಮ್ಮೇಳನ ನಡೆಯಿತು. ಆ ಸಮ್ಮೇಳನಕ್ಕೆ ಹೋಗುವ ಕುತೂಹಲ ರಾಜಮ್ಮನವರಿಂದ ಅರ್ಜಿ ಹಾಕಿಸಿತು. ಆಸೆ ನೆರವೇರಿತು. ಮಹಾತ್ಮಾ ಗಾಂಧಿಯವರನ್ನೂ, ದೇಶಭಕ್ತರನ್ನೂ ಸಂಗೀತ ವಿದ್ವಾಂಸರನ್ನೂ ಕಾಣುವ ಅತೀವ ಹಂಬಲ ರಾಜಮ್ಮನವರಲ್ಲಿ ತುಂಬಿತು. ಅದಕ್ಕೆ ತಿ. ತಾ. ಶರ್ಮರ ಪ್ರೋತ್ಸಾಹವೂ ದೊರೆಯಿತು. ಆ ವೇಳೆಗಾಗಲೇ ತಮ್ಮ ಸಹಜ ಪಾಂಡಿತ್ಯ ಪ್ರತಿಭೆಗಳಿಂದ ಸಾಕಷ್ಟು ಪ್ರಸಿದ್ಧಿ ಹೊಂದಿದ್ದ ರಾಜಮ್ಮನವರು ರಾಜಾಜಿಯವರಿಂದ ಮಹಾತ್ಮಗಾಂಧಿಯವರನ್ನು ನೋಡಲು ಒಂದು ಪತ್ರವನ್ನು ಪಡೆದು ಅಹಮದಾಬಾದಿಗೆ ಹೊರಟರು.

ಆ ಪತ್ರದ ಒಕ್ಕಣೆ ಹೀಗಿತ್ತು :

"ಈ ಪತ್ರವನ್ನು ತಂದಿರುವ ತರುಣಿ ದೇಶಾಭಿಮಾನಿ, ಕಲಾವಿದೆ, ಚೆನ್ನಾಗಿ ವೀಣೆ ನುಡಿಸುತ್ತಾಳೆ, ಹಾಡುತ್ತಾಳೆ. ಹಾಡಿಸಿ ಕೇಳುವುದಾದರೆ ಸಂತೋಷ. ಅವಕಾಶವಿಲ್ಲವಾದರೆ ನಿಮ್ಮ ಸ್ವಂತ ಪುತ್ರಿಯಂತೆ ತಿಳಿದು ಹರಸಬೇಕು."

ರಾಜಮ್ಮನವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದ ಮಾತುಗಳು, ಅದೂ ರಾಜಾಜಿಯವರ ಮೆಚ್ಚುಗೆಯ ನುಡಿಗಳು.

ಅಹಮದಾಬಾದನ್ನು ತಲುಪಿದ್ದಾಯಿತು. ಮಹಾತ್ಮಾ ಗಾಂಧಿ ಮೊದಲಾದ ದೇಶ

ಭಕ್ತರು, ಸಂಗೀತ ವಿದ್ವಾಂಸರ ದರ್ಶನದಿಂದ ರಾಜಮ್ಮನವರಿಗೆ ಯಾವುದೋ ಒಂದು ಹೊಸಲೋಕದ ದರ್ಶನವಾದಂತಾಗಿ ಆನಂದದಿಂದ ಪುಳಕಿತರಾದರು. ಅಲ್ಲಿನ ಕಾರ್ಯಕ್ರಮಗಳು 'ಜೈ ಭಾರತ ಭೂಮಿಗೆ' ಎನ್ನುವ ಇವರ ಸ್ವಂತ ರಚನೆಯ ಹಾಡಿನ ಪ್ರಾರ್ಥನೆಯಿಂದಲೇ ಪ್ರಾರಂಭವಾಯಿತು. ಗಾಂಧೀಜಿಯವರು ಮನಸ್ಸಿಟ್ಟು ಕೇಳಿದರು; ಸಂತೋಷಗೊಂಡರು. ಅಂದೇ ಸಂಜೆ ರಾಜಮ್ಮನವರು ಪ್ರಾರ್ಥನಾ ಸಮಯದಲ್ಲಿ ಯಾರಿಗೂ ತಿಳಿಸದೆ, "ದರ್ಶನ್, ದರ್ಶನ್" ಎಂದು ಕೂಗುತ್ತ ಮುಂಬರುತ್ತಿರುವ ಜನರ ಮಧ್ಯೆ ಗಾಂಧೀಜಿಯವರ ಶಿಬಿರದತ್ತ ನಡೆದರು. ಗಾಂಧೀಜಿಯನ್ನು ಕಂಡು ಮಾತಾಡಿದರು. ಅಂದಿನ ಅವರ ಆನಂದಕ್ಕೆ ಇನ್ನೆಲ್ಲಿಯ ಎಣೆ. ಗಾಂಧೀಜಿಯವರು ಈಕೆಯನ್ನು ಗುರುತಿಸಿದ್ದು ಮಾತ್ರವಲ್ಲದೆ, 'ಇಲ್ಲಿ ಇರುವವರಿಗೂ ರಾಜಮ್ಮನವರು ನಿತ್ಯವೂ ಹಾಡಬೇಕೆಂದೂ, ಕರ್ನಾಟಕಕ್ಕೆ ತಾವು ಬಂದಾಗಲೂ ಅವರು ಬಂದು ಹಾಡಬೇಕೆಂದೂ' ಹೇಳಿ ಆಶೀರ್ವದಿಸಿ ಕಳುಹಿಸಿಕೊಟ್ಟರು.

ಇನ್ನೊಮ್ಮೆ ೧೯೨೪ರಲ್ಲಿ ಬೆಳಗಾಂನಲ್ಲಿ ರಾಷ್ಟ್ರೀಯ ಮಹಾಸಭೆ ನಡೆಯಿತು. ಆಗ ರಾಜಮ್ಮನವರು ಬಾಣಂತಿಯಾಗಿದ್ದು, ಆ ಸಭೆಗೆ ಹೋಗಲಾಗಲಿಲ್ಲ. ಆದರೆ ಗಾಂಧೀಜಿಯವರು ತಂಗಿ ರಾಜಮ್ಮನ ಯೋಗಕ್ಷೇಮ ವಿಚಾರಿಸಿ, ಮುದವೀಡು ಕೃಷ್ಣರಾಯರಿಗೆ ತಿಳಿಸಿ, ರಾಜಮ್ಮನವರಿಗೆ ತಂತಿಕೊಡಿಸಿ ಕರೆಸಿಕೊಂಡರು. ಇಂತಹ ಭವ್ಯ ಚೇತನ ರಾಜಮ್ಮನವರದು. ಬೆಂಗಳೂರಿಗೆ ಮಹಾತ್ಮಾಜೀಯವರು ಬಂದಾಗಲೂ ರಾಜಮ್ಮನವರ ಸಂಗೀತದ ಔತಣ ಮಹಾತ್ಮಾಜೀಯವರಿಗೆ. ಗಾಂಧೀಜಿಯವರ ಮೇಲಿನ ಭಕ್ತಿಯ ಸಂಕೇತವಾಗಿ ತಮ್ಮ ಒಬ್ಬ ಮಗನನ್ನು "ಬಾಪೂ" ಎಂದೇ ರಾಜಮ್ಮ ದಂಪತಿಗಳು ಕರೆಯುತ್ತಾರೆ.

ಇದೆಲ್ಲವನ್ನೂ ಗಮನಿಸಿದಾಗ ರಾಜಮ್ಮನವರ ಬಾಳು ಹೂವಿನಂತಿರಬಹುದೆಂಬ ನಂಬಿಕೆ ಮೂಡಿದರೂ, ಅಲ್ಲಲ್ಲಿಯೇ ಕಹಿ ಘಟನೆಗಳು ನಡೆದು, ಜೀವನದ ತತ್ತ್ವವನ್ನು ಅವರು ಇನ್ನೂ ಚೆನ್ನಾಗಿ ಅರಿಯುವಂತೆ ಮಾಡಿವೆ. ಅವರೇ ಹೇಳುವಂತೆ "ನಮ್ಮ ಜೀವನವೇ ಒಂದು ಹೋರಾಟ, ನಮ್ಮ ಬದುಕೇ ಒಂದು ಜಂಜಾಟ."

ಒಡಹುಟ್ಟಿದ ಅಣ್ಣ ಸಂತಿದ್ದ ಕೈಲಾಸಂ ತೀರಿಹೋಗುತ್ತಿದ್ದ ಹಾಗೆ, ಅವರ ಒಬ್ಬಳೇ ಮಗಳು ಜಯಳ ನಿಧನ, ನಂತರ ಸ್ವಲ್ಪ ದಿವಸಗಳಲ್ಲಿಯೇ ತಾಯಿಯ ಮರಣ ಆ ಪೆಟ್ಟಿನಿಂದ ಚೇತರಿಸಿಕೊಳ್ಳುವುದಕ್ಕೆ ಮೊದಲೇ ಅಚ್ಚುಮೆಚ್ಚಿನ ಅಣ್ಣ-ಹೀಗೆ ಸಾವಿನ ಪರಂಪರೆಯೇ ಮನೆಯಲ್ಲಿ ನಡೆದಾಗ, ರಾಜಮ್ಮನವರಿಗೆ ಜೀವನವೇ ಬೇಡ ಎನಿಸಿದ್ದೂ ಉಂಟು. ಈ ಮಾನಸಿಕ ತೊಂದರೆಯ ಜೊತೆಗೆ ಅನಾರೋಗ್ಯವೂ ಅವರನ್ನು ಕಾಡಿಸಿತು. ಆಗ ಅವರ ಮನಸ್ಸಿಗೆ ಎಷ್ಟು ಬೇಸರವಾಯಿತೆಂದರೆ ಆಳವಾಗಿ ಅಭ್ಯಾಸ ಮಾಡಿದ, ಜೀವದ ಉಸಿರಿನಂತೆ ಜೊತೆಯಲ್ಲಿಯೇ ಸಾಗಿಬಂದಿದ್ದ ಸಂಗೀತ ಸಾಹಿತ್ಯಗಳೂ ಬೇಡವಾಯಿತು; ಬೇಸರ ತಂದಿತು. ಕೇವಲ ತೋಟಗಾರಿಕೆಯಲ್ಲಿ ಕೆಲವು ದಿವಸ ಮನಸ್ಸು ನಿಂತಿತು. ಆದರೆ ಇವರ ಪಾಂಡಿತ್ಯ ಪ್ರತಿಭೆಗಳ ಪರಿಚಯವನ್ನು

ಪಡೆದಿದ್ದ ಕನ್ನಡ ಜನತೆ ಇವರನ್ನು ಹಾಗೆಯೇ ಬಿಡಲು ಇಷ್ಟಪಡಲಿಲ್ಲ. ಅವರು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದಕ್ಕಾಗಿಯಾದರೂ ರಾಜಮ್ಮನವರು ಮತ್ತೆ ಸಂಗೀತ, ಸಾಹಿತ್ಯಕ್ಕೆ ಕೈಹಾಕಬೇಕಾಯಿತು. ಹೀಗೆ ಇವರು ಒಲ್ಲೆನೆಂದರೂ ಸರಸ್ವತಿ ಇವರಿಂದ ಸೇವೆ ಮಾಡಿಸಿಕೊಳ್ಳುತ್ತಿದ್ದಾಳೆ.

ರಾಜಮ್ಮನವರು ಸ್ವರ, ಪ್ರಸ್ತಾರಗಳನ್ನು ಹಾಕಿ, ವಿಶಿಷ್ಟ ರೀತಿಯಲ್ಲಿ ನೂರಾರು ಗೀತೆಗಳನ್ನು ರಚಿಸಿ, ಸಂಗೀತ ಸಾಹಿತ್ಯವನ್ನು ಹೆಚ್ಚಿಸಿದ್ದಾರೆ. ಇವರ ಮೂವತ್ತು ಗೀತೆಗಳನ್ನು ಆಕಾಶವಾಣಿಯವರು ತೆಗೆದುಕೊಂಡಿರುವುದಲ್ಲದೆ, ಕೆಲವನ್ನು ಹಾಡಿಸಿದ್ದಾರೆ.

ರಾಜಮ್ಮನವರು ತಮ್ಮ ಸಾಹಿತ್ಯ ಸೇವೆಯಿಂದ ೧೯೪೩ನೆಯ ಇಸವಿಯಲ್ಲಿ ಶಿವಮೊಗ್ಗೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾಗೋಷ್ಠಿಯ ಅಧ್ಯಕ್ಷಿಣಿ ಪೀಠ ಅಲಂಕರಿಸಿದರು. ಅಂದಿನ ಅವರ ಭಾಷಣ ಅತ್ಯಂತ ವಿದ್ವತ್ಪೂರ್ಣವಾಗಿದ್ದು, ವಿಚಾರಯುಕ್ತವಾಗಿದೆ.

ಅನೇಕ ಸಭೆಗಳಲ್ಲಿ ಸ್ವಾರಸ್ಯವಾಗಿ ಭಾಷಣಗಳನ್ನು ಮಾಡುವುದಲ್ಲದೆ, ಅನೇಕ ಸಭೆಗಳ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮಗಳನ್ನೂ ಸುಸೂತ್ರವಾಗಿ ನಡೆಸಿಕೊಡುತ್ತಾರೆ. ಇಂದಿಗೂ ಅನೇಕ ಸಂಘ, ಸಂಸ್ಥೆಗಳಲ್ಲಿ ಸದಸ್ಯೆಯಾಗಿದ್ದು, ಸೇವೆ ಸಲ್ಲಿಸುತ್ತಿದ್ದಾರೆ.

೭೨ ವರ್ಷ ವಯಸ್ಸಿನ ರಾಜಮ್ಮನವರು "ಜೀವನಾನುಭವ ಹೆಚ್ಚಾಗಿದ್ದು ಸಾಹಿತ್ಯವನ್ನು ಇನ್ನೂ ಹೆಚ್ಚು ಸತ್ತ್ವಯುತವನ್ನಾಗಿ ಸೃಜಿಸಬೇಕೆಂಬ ಅಪೇಕ್ಷೆ ಇದ್ದರೂ, ದೈಹಿಕ ಶ್ರಮದಿಂದಾಗಿ ಅದು ಸಾಧ್ಯವಾಗದು" ಎಂದು ನೊಂದು ನುಡಿಯುತ್ತಾರೆ. ಅವರ ಮನೆಗೆ ಹೋಗಿ ನೋಡಿದರೆ ನಡುಮನೆಯ ತುಂಬಾ ವೀಣೆಗಳೇ! ಇಂದೂ ಕಲಾಸಕ್ತಿಯಿರುವ ವಿದ್ಯಾರ್ಥಿನಿಯರಿಗೆ ವೀಣಾ ಪಾಠ ಹೇಳಿಕೊಡುತ್ತಾರೆ. ವೀಣೆ ಹಿಡಿದು ಕುಳಿತ ರಾಜಮ್ಮನವರು ವಾಗ್ದೇವಿಯ ವರಪುತ್ರಿಯಂತೆ ಕಾಣುತ್ತಾರೆ.

ಸೌಮ್ಯ ಮುಖ, ಮುಖದಲ್ಲಿ ಕಾಂತಿಯಿಂದ ಹೊಳೆಯುವ ಕಣ್ಣುಗಳು, ಮಾತನಾಡಿದರೆ ವೀಣೆ ನುಡಿದಂತೆ ಹೊರಹೊಮ್ಮುವ ಮಧುರ ಧ್ವನಿ, ಎಂಥವರ ಮನಸ್ಸನ್ನೂ ಕ್ಷಣಕಾಲದಲ್ಲಿಯೇ ಸೆರೆಹಿಡಿಯುತ್ತದೆ.

ರಾಜಮ್ಮನವರ ಸಾಹಿತ್ಯಸೇವೆ ಬಹುಮುಖ ಪ್ರತಿಭೆಯುಳ್ಳದ್ದು. ತಪಸ್ವಿನಿ — ಮುಂತಾದ ನಾಟಕಗಳೂ, ವೈಣಿಕ ಶಿಖಾಮಣಿ ವೀಣೆ ಶೇಷಣ್ಣ, ಆರ್ಯ ಕೈಲಾಸಂ ಮೊದಲಾದವರ ವ್ಯಕ್ತಿ ಚಿತ್ರಗಳೂ, ಆಕಾಶವಾಣಿಯಲ್ಲಿ ಬಿತ್ತರಗೊಂಡಿರುವ ಅನೇಕ ಭಾಷಣಗಳೂ 'ಭಾರತ ಮಹಿಳೆಯರು' ಮೊದಲಾದ ಅನೇಕ ಪ್ರಬಂಧಗಳೂ, 'ಪುತಿನ ಅವರ ಅಹಲ್ಯೆ' 'ಜನಪದ ಸಾಹಿತ್ಯ' ಮುಂತಾದ ಕೃತಿ ವಿಮರ್ಶೆಗಳೂ, ಬಿಡಿ ಕವನಗಳು—ಹೀಗೆ ಒಂದೇ, ಎರಡೇ, ಇವೆಲ್ಲಾ ರಾಜಮ್ಮನವರಿಂದ ರಚಿತವಾಗಿವೆ. 'ಅದು ಮುಟ್ಟದ ಸೊಪ್ಪಿಲ್ಲ' ಎನ್ನು

ವಂತೆ ರಾಜಮ್ಮನವರು ಕೈಹಾಕದ ಸಾಹಿತ್ಯ ವಿಭಾಗವಿಲ್ಲ; ಇವರು ರಚಿಸಿರುವ ಸಾಹಿತ್ಯವೇ ಆಗಲಿ, ಸಂಗೀತವೇ ಆಗಲಿ, ದೇಶಭಕ್ತಿಯು ಲೇಪದಿಂದ ಜ್ವಲಿಸುತ್ತದೆ. ಎಲ್ಲದರಲ್ಲೂ ಆದರ್ಶದ ಹೊಂಬೆಳಕಿದೆ. ರಾಜಮ್ಮನವರದು ಉನ್ನತ ಚೇತನ; ಹಿರಿಯರ ಬಗ್ಗೆ ಅಪಾರ ಗೌರವ ಭಾವನೆಯುಳ್ಳ "ಅವರ ಮುಂದೆ ನಾವೆಲ್ಲ ಏನು ?" ಎನ್ನುವ ರಾಜಮ್ಮನವರ ವಿನಯ ಅವರ ವಿದ್ಯೆಗೆ ಭೂಷಣಪ್ರಾಯ. ನಾನಾ ಮುಖ ಪ್ರತಿಭೆಗಳಿಂದ ಶೋಭಿಸುವ ರಾಜಮ್ಮನವರ ಎಲ್ಲ ಕೆಲಸಗಳಿಗೂ ಸ್ಫೂರ್ತಿಯನ್ನು ನೀಡುವ ಶಕ್ತಿಯಾಗಿ ತಿ. ತಾ. ಶರ್ಮರು ಇದ್ದರೆ, ತಿ.ತಾ. ಶರ್ಮರ ಎಲ್ಲ ಚಟುವಟಿಕೆಗಳಿಗೂ ಪ್ರೋತ್ಸಾಹ ತುಂಬಿ ಜೀವನಾಡಿಯಂತೆ ಮಿಡಿದು ಆದರ್ಶಪತ್ನಿಯಾಗಿದ್ದಾರೆ.

"ಜಾಣೆ ಜಾಣನು ಕೂಡಲದು

ತಂತಿಗೂಡಿ

ವೀಣೆಯ ನುಡಿಸಿದಂತಿಹುದು"

ಎಂದು ಹಾಡಿರುವ ಶ್ರೇಷ್ಠ ಕವಿ ರತ್ನಾಕರನ ಹೋಲಿಕೆಯಂತೆ ಇವರು ಆದರ್ಶ ದಂಪತಿಗಳಾಗಿದ್ದಾರೆ.

ತಿ. ತಾ. ಶರ್ಮರು ತಮ್ಮ ಮಡದಿಯನ್ನು ಕುರಿತು "She is a helpful guide to me" ಎಂದೂ, "Throughout a co-worker" ಎಂದೂ ಹೇಳುತ್ತಾರೆ.

"ನಮ್ಮಿಬ್ಬರದೂ ಒಂದೇ ಮನೆತನ ; ನಮ್ಮಿಬ್ಬರ ಸಂಸ್ಕಾರ ಒಂದೇ, ನಮ್ಮಿಬ್ಬರ ಆದರ್ಶಗಳೂ ಒಂದೇ" ಎಂಬುದು ಅವರ ದಾಂಪತ್ಯ ಜೀವನದ ರಹಸ್ಯ. ಬದುಕು ಸಾಮರಸ್ಯದ ಸಂಗೀತ ಸೂತ್ರದಂತೆ. ಯಾವ ಕೆಲಸದಲ್ಲಿಯೂ ಇಬ್ಬರ ಕೈವಾಡವೂ ಇರುತ್ತಿದ್ದು, ಬಹುಪಟ್ಟಿಗೆ ಎಲ್ಲವನ್ನೂ ತೂಗಿಸಿಕೊಂಡು ಹೋಗಿದ್ದಾರೆ. ಕ್ರಾಂತಿಕಾರಿ ಜೀವನವನ್ನು ನಡೆಸಿದ ತಿ. ತಾ. ಶರ್ಮರಿಗೆ, ಅದೇ ಅಭಿರುಚಿಯುಳ್ಳ ಪತ್ನಿ ದೊರೆತಿದ್ದು, ಅವರ ಎಲ್ಲ ಕೆಲಸಗಳಿಗೂ ಹೆಚ್ಚಿನ ಪ್ರೋತ್ಸಾಹ ದೊರಕಿ ಉತ್ತಮ ಫಲವನ್ನು ತಂದು ಕೊಡಲು ಅನುಕೂಲವಾಯಿತು. ತಿ. ತಾ. ಶರ್ಮರು ಮೆಚ್ಚಿ ನುಡಿಯುತ್ತಾರೆ: "ನನ್ನ ವೈಯಕ್ತಿಕ ಜೀವನದಲ್ಲಾಗಲೀ, ವೃತ್ತಿದೃಷ್ಟಿಯಿಂದಾಗಲೀ ಅಪೂರ್ವ ಪ್ರಭಾವ ನಮ್ಮ ಮನೆಯವರದೆ" ಎಂದು. ತಾವೇ ನಡೆಸಿಕೊಂಡು ಬಂದ ಮುದ್ರಣಾಲಯದಿಂದ ಪತ್ರಿಕೆಗಳು ಸಂಜೆ ಹೊರಬೀಳಬೇಕು ; ಒಮ್ಮೆ ದುಡ್ಡಿನ ಅನಾನುಕೂಲವಾಯಿತು. ಕೂಡಲೇ ರಾಜಮ್ಮನವರು ತಮ್ಮ ಕೈಯಲ್ಲಿದ್ದ ಬಂಗಾರದ ಬಳೆಗಳನ್ನು ತೆಗೆದುಕೊಟ್ಟು ಸಹಕರಿಸಿದರು. ಇಷ್ಟು ಹಿರಿಯ ಚೇತನ ರಾಜಮ್ಮನವರದು.

ಸ್ವತಃ ಸಾಹಿತಿಗಳಾದ ರಾಜಮ್ಮನವರು ಸುಸಂಸ್ಕೃತ ಗುಣಗಳ ತವರಾಗಿದ್ದಾರೆ. ಕನ್ನಡದಲ್ಲಿ ಮಾತ್ರವಲ್ಲದೆ ತೆಲುಗಿನಲ್ಲಿಯೂ ಹಾಡುಗಳನ್ನು ರಚಿಸಿ, ಮಾತೃಭಾಷೆಯ ಪ್ರೇಮವನ್ನು ಎತ್ತಿ ತೋರಿಸ್ಸಾರೆ. ವಿದ್ಯೆಗೆ ತಕ್ಕ ವಿನಯ, ಸೌಜನ್ಯಗಳು ಶ್ರೀಮತಿ ರಾಜಮ್ಮನವರಲ್ಲಿ ಮನೆಮಾಡಿಕೊಂಡಿವೆ. ಆದರ್ಶ ಗೃಹಿಣಿಯಾಗಿ, ಆದರ್ಶ ಮಾತೆ

ಯಾಗಿ, ಆದರ್ಶ ಗುರುವಾಗಿ, ಆದರ್ಶ ಸಾಹಿತಿಯಾಗಿ, ಆದರ್ಶ ಸಂಗೀತಗಾರಳಾಗಿ ಬೆಳಗುತ್ತಿರುವ ಅಮೂಲ್ಯರತ್ನವಾಗಿದ್ದಾರೆ. ತಿ. ತಾ. ಶರ್ಮರ ಹಿಂದೆ ರಾಜಮ್ಮನವರು ಎನ್ನುವುದಕ್ಕಿಂತಲೂ ಇಬ್ಬರೂ ಜೊತೆಜೊತೆಯಾಗಿ ಹೆಜ್ಜೆಯಿಟ್ಟು ಬಾಳಿನ ಪಯಣವನ್ನು ಸಂತಸದಿಂದ ಕಳೆಯುತ್ತಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ. ★

ಬೀಳಾಗಬೇಡ ಶೀಲವ ಮೆರೆಸು ಮೇಲುವೆಯ
ತಾಳು ನಮ್ರತೆಗೊಂದು ಮೇಲೊಡವೆಯೆನಿಸು
ಕೀಳು ಮಾತುಗಳ ನೆನೆಯಲಿ ಬೇಡ, ಹದ್ದಿನಲಿ
ನಾಲಿಗೆಯ ನಿರಿಸು; ನಿಜ ವಿಶ್ವಾಸ ಬೆಳಸು.

ನಿನ್ನದೆನು ಜಗದ ಸುಖ ದುಃಖವನು ಪಾಲ್ಗೊಂಡು
ನಿನ್ನಂತೆ ತಿಳಿಯನ್ಯರಭಿಮಾನ ಗೌರವವ
ಭಿನ್ನನಾದರೆ ಖಿನ್ನನಾಗುವುದು ಎಲ್ಲರಲಿ
ಉನ್ನತಿಯ ಬಯಸಿದರೆ ಧನ್ಯನಪ್ಪುದು ನಿಜವೆ ?

ಬನ್ನವಿಡುವುದು ಬಾಳೆ? ಬನ್ನಪಡುವುದು ಬಾಳೆ ?
ಭಿನ್ನ ಭಾವದಿ ಖಿನ್ನನಾಗುವುದು ರೀತಿಯೇ ?
ಚೆನ್ನಾಗಿರಲಿ ಬಾಳು, ಚಿನ್ನವಾಗಲಿ ಪುಣ್ಯ,
ಉನ್ನತಿಯ ಕೈತುತ್ತು ಹಂಚುತಿರು ಜಗಕೆ.

ಮಾನವರ ಉನ್ನತಿಗೆ ಮಾನಸೋನ್ನತಿಯೊಂದೆ.
ಜ್ಞಾನದುನ್ನತಿಗಿಂತ ಮಾನದುನ್ನತಿ ಮುಂದೆ.
ನಾವಧಿಕನೆಂದಂದೆ ನಿನ್ನನೇ ನೀಕೊಂದೆ,
ಹೀನ ಭಾವವು ಬೇಡ, ಧೂರ್ತ ತನವೂ ಬೇಡ.

ಸಾತ್ವಿಕ ವಿದುಷಿ

● ಎನ್. ಚನ್ನಕೇಶವಯ್ಯ

ನಲವತ್ತು ವರುಷಗಳಿಗೂ ಹಿಂದೆ–ಸಂಗೀತ ವಿದ್ವಾನ್ ಶ್ರೀ ಕೆ. ವಾಸುದೇವಚಾರ್ಯರನ್ನು ಹಿಂಬಾಲಿಸಿ ಕಾರ್ಯಾಂತರದಿಂದ ನಾನು ಕಲ್ಯಾಣನಗರಿಗೆ (ಬೆಂಗಳೂರಿಗೆ) ಬಂದಿದ್ದೆ. ಕಾಕತಾಳೀಯವಾಗಿ ಅದೇ ಕಾಲದಲ್ಲಿ ನನಗಿಂತ ವಯೋಜ್ಯೇಷ್ಠರೂ, ಗೌರವಾದರಗಳಿಗೆ ಪಾತ್ರರೂ ಆದ ನನ್ನ ಮಿತ್ರರು ವಿದ್ವಾನ್ ಶ್ರೀ ರಾಳ್ಲಪಲ್ಲಿ ಅನಂತ ಕೃಷ್ಣ ಶರ್ಮರವರೂ ಬೆಂಗಳೂರಿಗೆ ದಯಮಾಡಿಸಿದ್ದು, ನಾನು ಅವರನ್ನು ಸಂಧಿಸಿದೆ. ಬಳೇಪೇಟೆಯಿಂದ ಸುಲ್ತಾನ್‌ಪೇಟೆಗೆ ಶ್ರೀ ಕಾಶಿ ವಿಶ್ವೇಶ್ವರ ಸ್ವಾಮಿಯ ದೇವಾಲಯದ ಮುಂದಿನ ಹೆದ್ದಾರಿಯಲ್ಲಿ ಹೋಗುತ್ತ ಬಲಪಾರ್ಶ್ವದಲ್ಲಿ ಒಂದು ಮನೆಗೆ ಅವರು ನನ್ನನ್ನು ಕರೆದುಕೊಂಡು ಹೋದರು. ನನಗೆ ಪರಿಚಿತವಾದ ಮುಖದಂತೆ ಭಾಸವಾದ ಆ ಮನೆಯ ಯಜಮಾನರು, ವಿದ್ವಾನ್ ಶರ್ಮರವರು ನಮ್ಮನ್ನು ಆತ್ಮೀಯತೆಯಿಂದ ಬರಮಾಡಿಕೊಂಡು, ಅಪರಿಚಿತನಾದ ನನ್ನನ್ನು ಯಥೋಚಿತವಾಗಿ ಸತ್ಕರಿಸಿದರು.

ಅಖಿಲ ಭಾರತ ಕಾಂಗ್ರೆಸ್ ಪ್ರಚಾರ ಶಾಖೆಯು ತನ್ನ ಪ್ರಚಾರವನ್ನು ಅತಿಶಯವಾಗಿ ನಡೆಸುತ್ತಿದ್ದ ಕಾಲದಲ್ಲಿ ಮೈಸೂರಿನ ಟೌನ್‌ಹಾಲ್ ಮೈದಾನದಲ್ಲಿ ಆಗಾಗ್ಗೆ ನಡೆಯುತ್ತಿದ್ದ ಭಾಷಣಗಳ ಮಾಲೆಯಲ್ಲಿ ಈ ಗೃಹಸ್ಥರೂ ಒಮ್ಮೆ ಭಾಗವಹಿಸಿದ್ದು, ಸಾಮಯಿಕವಾಗಿ ಗದಾಯುದ್ಧದಲ್ಲಿ ದುರ್ಯೋಧನನು ಭೀಮಸೇನನ ಹೊಡೆತಕ್ಕೆ ತೊಡೆ ಮುರಿದು ಬಿದ್ದು ಏಳಲಾಗದಿದ್ದ ಸನ್ನಿವೇಶದಲ್ಲಿ :

> ಇದು ಲಾಕ್ಷಾಗೇಹ ದಾಹಕ್ಕಿದು ವಿಷಮ ವಿಷಾನ್ನಕ್ಕಿದು ನಾಡಜೂಜಿಂ।
> ಗಿದು ಪಾಂಚಾಲೀ ಪ್ರಪಂಚಕ್ಕಿದು ಕೃತಕ ಸಭಾಲೋಕನ ಭ್ರಾಂತಿಗೆಂದೋ।
> ವದೆ ಪೊಯ್ದುಂ ಕಾಲ್ಗಳಿಂ ತೋಳ್ಗಳನಗಲುರಮಂ ಕಣ್ಣೆಯುಂ ನೆತ್ತಿಯುಂ ಕೋ
> ಪದಿನಯ್ದುಂ(ದುರ್ನಯಕ್ಕಯ್ದೆಡೆಯನುರು ಗದಾದಂಡದಿಂ ಭೀಮಸೇನಮ್॥

–ಎಂಬ ರನ್ನನ 'ಗದಾಯುದ್ಧ' ಕಾವ್ಯದಲ್ಲಿನ ಈ ವೃತ್ತವನ್ನು ಮಾತಿನಿಂದಲೂ,

ಏರಿದ ಧ್ವನಿಯಿಂದಲೂ, ಮುಷ್ಟಿಯಿಂದಲೂ ವಿವರಿಸುತ್ತಿದ್ದ ವೀರರಸ ಪ್ರಧಾನವಾದ ಭಾಷಣವು ಕರ್ಣತಾಡಿತವಾದಂತಾಗಿ ಇವರೇ ಖ್ಯಾತರಾದ ತಿ. ತಾ. ಶರ್ಮರೆಂದು ಜ್ಞಾಪಿಸಿಕೊಂಡೆ.

ಶ್ರೀ ಅನಂತ ಕೃಷ್ಣ ಶರ್ಮರು ಆ ಮನೆಯ ಗೃಹಿಣಿಯನ್ನು "ರಾಜಮ್ಮನವರೇ, ಸ್ವಲ್ಪಕಾಲ ವೀಣಾವಾದನವಾಗಲಿ" ಎಂದು ಕೇಳಿದರು. ತೆಳ್ಳನೆಯ, ಸೂಕ್ಷ್ಮ ಪ್ರಕೃತಿಯ, ಸರಳ ಸ್ವಭಾವದ ಆ ಮನೆಯೊಡತಿಯು ತಡಮಾಡದೆ ವೀಣೆಯನ್ನು ಹಿಡಿದು ಕುಳಿತು ಆಡಂಬರ ರಹಿತವಾದ, ಮೀಟಿನ ಖಟ-ಪಟ ಶಬ್ದವಿಹೀನವಾದ, ಅದ್ಭುತ ಸಾಧಕದ ಪ್ರದರ್ಶನವಿಲ್ಲದ, ಬಹು ಸಹಜವಾದ, ಕರ್ಣರಸಾಯನವಾದ ಸುಧೆಯೊಂದಿಗೆ ತಮ್ಮ ಇಂಪಾದ ಕಂಠನಾದವನ್ನೂ ಜತೆಗೂಡಿಸಿಕೊಂಡು ನುಡಿಸಿ, ಹಾಡಿ ಆನಂದ ಪಡಿಸಿದರು. ೧೯೨೪ರಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಏರ್ಪಾಡಾಗಿದ್ದ ಸಂಗೀತ ಸಮ್ಮೇಳನದಲ್ಲಿ ವೈಣಿಕ ಶಿಖಾಮಣಿ ಶೇಷಣ್ಣನವರೇ ಮೊದಲಾಗಿ ನಮ್ಮ ಮೈಸೂರು ಸಂಸ್ಥಾನದ ಅನೇಕ ವಿದ್ವಾಂಸರೂ, ಶ್ರೀಮತಿ ತಿರುಮಲೆ ರಾಜಮ್ಮನವರೂ ಭಾಗವಹಿಸಿದ್ದುದೂ, ಈಕೆಯು ತಮ್ಮ ಇಂಪಾದ, ಸೌಜನ್ಯಪೂರ್ಣವಾದ ಸಂಗೀತದಿಂದ ಮಹಾತ್ಮ ಗಾಂಧಿಯವರೇ ಮೊದಲಾದ ನಾಯಕ ಮಣಿಗಳ ವಿಶೇಷ ಮೆಚ್ಚಿಗೆಗೆ ಪಾತ್ರರಾಗಿದ್ದರೆಂಬುದನ್ನೂ ಕೇಳಿದ್ದ ಪ್ರಕೃತ, ಇಂದು ಈಕೆಯು ಹಾಡಿದ ದೀಪಕರಾಗದ 'ಕಲಲನೇರ್ಚಿನ' ಎಂಬ ತ್ಯಾಗರಾಜರ ಕೃತಿಯಿಂದ ಬಹು ಆಕರ್ಷಿತನಾಗಿ ಒಡನೆಯೆ ಅದನ್ನು ಸ್ವರಪಡಿಸಿ ಬರೆದುಕೊಂಡೆ. ಹೀಗೆ ಶ್ರೀಮತಿ ರಾಜಮ್ಮನವರ ಪ್ರಥಮ ಪ್ರತ್ಯಕ್ಷ ಪರಿಚಯವು ನನಗೆ ಉಂಟಾಯಿತು.

೧೫-೨೦ವರುಷಗಳ ನಂತರ ಬೆಂಗಳೂರು ನ್ಯಾಷನಲ್ ಕಾಲೇಜಿನ ಪ್ರಾಧ್ಯಾಪಕರಾಗಿದ್ದ ಶ್ರೀ ಕೃಷ್ಣಯ್ಯಂಗಾರ್ಯರೆಂಬುವರು ಮೈಸೂರಿಗೆ ಬಂದಿದ್ದವರು ವಿದ್ವಾನ್ ರಾಳ್ಲಪಲ್ಲಿಯವರೊಂದಿಗೆ ನನ್ನ ಮನೆಗೆ ದಯಮಾಡಿಸಿ, ನಾನು ಹಾಡಿದ ಶಂಕರಾಭರಣ ರಾಗವನ್ನು ಮೆಚ್ಚಿ, ಬೆಂಗಳೂರಿಗೆ ನಾನು ಹೋದಾಗ ಅವರನ್ನು ಭೇಟಿ ಮಾಡಬೇಕೆಂದೂ; ಶ್ರೀಮತಿ ರಾಜಮ್ಮನವರು ತಮ್ಮ ಸಹೋದರಿಯೆಂದೂ ಹೇಳಲು, ರಾಜಮ್ಮನವರ ಮನೆತನದವರು ಸಂಗೀತ ಕಲಾರಾಧಕರಾದ ರಸಿಕರೂ ಹೌದೆಂದುಕೊಂಡೆ.

೧೯೫೭ ರಲ್ಲಿ ನಾನು ಮೈಸೂರು ವಾಸವನ್ನು ಬಿಟ್ಟು ಬೆಂಗಳೂರಿಗೆ ಬಂದಮೇಲೆ ಇಲ್ಲಿನ ಅನೇಕ ಕಲಾವಿದರು ಸೇರಿ ಗೃಹನಿರ್ಮಾಣ ಸಂಘವೊಂದನ್ನು ಏರ್ಪಡಿಸಿಕೊಳ್ಳಲು, ಅದರ ಅಧ್ಯಕ್ಷರಾದ ತಿ. ತಾ. ಶರ್ಮರು ಹಾಗೂ ಅವರ ಸಹಧರ್ಮಿಣಿ ಶ್ರೀಮತಿ ರಾಜಮ್ಮನವರ ವಿಶೇಷ ಪರಿಚಯಕ್ಕೆ ನನಗೆ ಅವಕಾಶ ದೊರೆಯಿತು,

ಶ್ರೀಮತಿ ರಾಜಮ್ಮನವರು ಕರ್ಣಾಟಕ ಸಾಹಿತ್ಯ ಪರಿಷತ್ತು ಮೊದಲಾದ ಅನೇಕ ಕಡೆಗಳಲ್ಲಿ ವೇದಿಕೆಯನ್ನೇರಿ ವೀಣಾಕಛೇರಿ ಮಾಡಿ ಕೀರ್ತಿಶಾಲಿಗಳಾಗಿದ್ದ ವಿಷಯವು

ಪರೋಕ್ಷವಾಗಿ ನನಗೆ ಗೊತ್ತಿದ್ದರೂ, ಈಗ್ಗೆ ೨-೩ ವರ್ಷಗಳಿಗೆ ಹಿಂದೆ ದಿವಂಗತ ಶೇಷಣ್ಣನವರ ಪುಣ್ಯ ದಿನಾಚರಣೆಗಾಗಿ ಅವರ ಮೊಮ್ಮಗ ಸ್ವರಮೂರ್ತಿ ವಿದ್ವಾನ್ ಶ್ರೀ ವಿ.ಎನ್. ರಾವ್ ಅವರು ತಮ್ಮ ಮನೆಯಲ್ಲಿ ಒಂದು ಸಭೆಯನ್ನೇರ್ಪಡಿಸಿದಾಗ ಇವರ ವೀಣಾ ಕಚೇರಿಯನ್ನು ಪ್ರತ್ಯಕ್ಷವಾಗಿ ಕೇಳುವ ಅವಕಾಶ ಲಭಿಸಿತು. ವೀಣಾ ವಾದನದಲ್ಲಿ ಮೈಸೂರಿಗೆ ಅತ್ಯುನ್ನತ ಸ್ಥಾನ ಗಳಿಸಿಕೊಟ್ಟ ಶ್ರೀ ಶೇಷಣ್ಣನವರ ಸಂಪೂರ್ಣ ಆಶೀರ್ವಾದ, ಅನುಗ್ರಹಕ್ಕೆ ಪಾತ್ರರಾಗಿದ್ದ ಅವರ ಮೆಚ್ಚಿನ ಶಿಷ್ಯೆ ಶ್ರೀಮತಿ ರಾಜಮ್ಮನವರು ವರ್ಣ, ತಾನ ಪ್ರಸ್ತಾರ, ಕೃತಿಗಳ ಖಚಿತ ನಿರೂಪಣೆ ಅಲಂಕಾರಿಕ ಸ್ವರ ಕಲ್ಪನೆ, ರಾಗ ಪ್ರಸ್ತಾರ ಮುಂತಾದವನ್ನು ಅನುಭವ ಪೂರ್ಣವಾಗಿಯೂ, ಹಿತಕರವಾಗಿಯೂ, ಆಕರ್ಷಕವಾಗಿಯೂ ಇರುವಂತೆ ಎರಡು ಗಂಟೆಗಳ ಕಾಲ ನಿರರ್ಗಳವಾದ ಗಾನಸುಧೆಯನ್ನು ಹಂಚಿ ಸಂತೋಷಗೊಳಿಸಿದರು.

ನಮ್ಮ ರಾಜ್ಯದ ಸಂಗೀತ ನಾಟಕ ಅಕಾಡಮಿಯಿಂದ ಗೌರವಿಸಲ್ಪಟ್ಟಿರುವ ಈಕೆಯು ಬೆಂಗಳೂರು ಗಾಯನ ಸಮಾಜದ ಆಶ್ರಯದಲ್ಲಿ ವಿದ್ವಾನ್ ರಾಳ್ಲಪಲ್ಲಿಯವರ ಅಧ್ಯಕ್ಷತೆಯಲ್ಲಿ ನಡೆದ ದ್ವಿತೀಯ ಸಂಗೀತ ಸಮ್ಮೇಳನದಲ್ಲಿ ತಮ್ಮ ಗುರುಗಳು ಶೇಷಣ್ಣನವರನ್ನು ಕುರಿತು ಭಾಷಣ ಮಾಡಿದಾಗ ಹೊರಗೆಡಹುವ ಇವರ ವಾಗ್ಧೋರಣೆ, ಸುಸಂಸ್ಕೃತ ಭಾಷೆ, ವಿವೇಚಿತವಾದ ಅಭಿಪ್ರಾಯಗಳು ಪ್ರಶಂಸಾರ್ಹವಾಗಿದ್ದವು. ಈಕೆಗಿರುವ ಶಬ್ದಸಂಪತ್ತಿ, ಉತ್ತಮ ಶೈಲಿ ಮೊದಲಾದುವನ್ನು, 'ಭಾರತಿ' ಎಂಬ ನಾಮಾಂಕಿತದಿಂದ ಇವರು ಬರೆದಿರುವ 'ವೈಣಿಕ ಶಿಖಾಮಣಿ ಶೇಷಣ್ಣ' ಎಂಬ ಹೊತ್ತಿಗೆಯಲ್ಲಿ ಮನಗಾಣಬಹುದು.

ಹೀಗೆ ಸಂಗೀತ ಸಾಹಿತ್ಯಗಳೆರಡರಲ್ಲಿಯೂ ಒಳ್ಳೆಯ ಪ್ರಭುತ್ವ, ಪಾಂಡಿತ್ಯಗಳಿಸಿರುವ, ವಯೋವೃದ್ಧೆಯೂ ಜ್ಞಾನವೃದ್ಧೆಯೂ ಆಗಿರುವ ಈ ಸಾತ್ವಿಕ ವಿದುಷಿಯನ್ನು ಸನ್ಮಾನಿಸಿ, ಗೌರವಿಸುವುದು ಸೂಕ್ತವೇ ಆಗಿದೆ.

ಸರ್ವಶಕ್ತನು ಶ್ರೀಮತಿ ರಾಜಮ್ಮನವರಿಗೆ ಅತಿಶಯವಾದ ಯಶಸ್ಸು, ದೀರ್ಘಾಯುಸ್ಸನ್ನು ಅನುಗ್ರಹಿಸಿ ತಮ್ಮ ಪತಿಯೊಂದಿಗೆ ಸುಖವಾಗಿ ಬಾಳುತ್ತ ಸಂಗೀತ-ಸಾಹಿತ್ಯಗಳ ದ್ವಾರ ಲೋಕಸೇವೆ ಸಲ್ಲಿಸುವಂತೆ ಕರುಣಿಸಲೆಂದು ಪ್ರಾರ್ಥಿಸುತ್ತೇವೆ. ★

‘ಭಾರತಿ’ ಕೊಡುಗೆ

● ಚಿ. ನ. ಮಂಗಳಾ

ಹತ್ತನೆಯ ಶತಮಾನದಲ್ಲಿದ್ದ ರಾಜಶೇಖರನು ತನ್ನ ಕಾವ್ಯ ಮೀಮಾಂಸೆ ಗ್ರಂಥದಲ್ಲಿ, “ಪುರುಷರಂತೆಯೇ ಮಹಿಳೆಯರೂ ಕವಯಿತ್ರಿಯರಾಗಬಲ್ಲರು. ರಾಜಕುಮಾರಿಯರು, ಮಂತ್ರಿ ಕುಮಾರಿಯರು, ದೇವದಾಸಿಯರು, ಶಾಸ್ತ್ರವಿಶಾರದರಾಗಿ, ಕಾವ್ಯ ಕೋವಿದೆಯರಾಗಿರುವುದಾಗಿ ಕೇಳಿ ಬರುವುದರ ಜೊತೆಗೆ ಪ್ರತ್ಯಕ್ಷನಾಗಿ ಕಂಡುಬರುವುದು” ಎಂದು ಹೇಳಿದ್ದಾನೆ.

ಹತ್ತನೆಯ ಶತಮಾನದಲ್ಲಿದ್ದ ಕಾವ್ಯ ವಿಮರ್ಶಕನೊಬ್ಬನು ಈ ಪ್ರಶಂಸೆಯ ಮಾತನ್ನು ಹೇಳಬೇಕಾದರೆ ಹತ್ತನೆಯ ಶತಮಾನದಲ್ಲೂ, ಅದರ ಹಿಂದಿನ ಶತಮಾನಗಳಲ್ಲೂ ಕವಯಿತ್ರಿಯರಿದ್ದಿರಲೇಬೇಕು.

ಆದರೆ ಭಾರತೀಯ ಸಾಹಿತ್ಯ ಚರಿತ್ರೆಯಲ್ಲೇ ಏಕೆ, ಇಡೀ ವಿಶ್ವ ಸಾಹಿತ್ಯ ಚರಿತ್ರೆಯಲ್ಲೇ ‘ಕವಿ’ಗಳಿಗೆ ಸಮನಾಗಿ ನಿಲ್ಲಬಲ್ಲ ಅಥವಾ ‘ಕವಿ’ಗಳ ಸಂಖ್ಯೆಗೆ ಸಮನಾಗಬಲ್ಲ ‘ಕವಯಿತ್ರಿ’ ಯರೆಷ್ಟು ಮಂದಿ ? ಬೆರಳೆಣಿಸುವಷ್ಟು ಮಾತ್ರ.

ವಿಶ್ವ ಸಾಹಿತ್ಯಕ್ಕೇ ಅನ್ವಯಿಸುವ ಮಾತು ಕನ್ನಡ ಸಾಹಿತ್ಯಕ್ಕೂ ಅನ್ವಯಿಸುತ್ತದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಆದರೆ ಈ ಕೊರತೆಯನ್ನು ತಮ್ಮ ಕಾವ್ಯಶ್ರೀಯಿಂದ ತುಂಬಿರುವ ಪ್ರತಿಭಾನ್ವಿತ ಕವಯಿತ್ರಿ ಭಾರತಿ ಎಂಬುದಕ್ಕೆ ಅವರಿಂದ ರಚಿತವಾಗಿರುವ ಎರಡು ಕಾವ್ಯನಾಟಕಗಳೂ ನೂರಾರು ಹಾಡುಗಳೂ, ಬಿಡಿ ಕಾವ್ಯಗಳೂ, ಚೀಟು ಪದ್ಯಗಳೂ ಸಾಕ್ಷಿ.

ಗಾಂಧೀಜಿ ಅವರನ್ನು ಮೊದಲ ಬಾರಿ ಸಮುದ್ರ ತೀರದಲ್ಲಿ ನೋಡಿದಾಗ ಉಕ್ಕಿ ಹರಿದ ಅವರ ಕಾವ್ಯಧಾರೆ ‘ಭಾರತಿ’ಯ ಕಾವ್ಯಧಾರೆಯಾಗಿರುವುದು ಅನ್ವರ್ಥವೆ.

ಬಹುಶಃ ಭಾರತಿಯವರ ಅತ್ಯಮೂಲ್ಯ ಕೊಡುಗೆ ಅವರ ಎರಡು ಕಾವ್ಯ ನಾಟಕಗಳಾದ ‘ತಪಸ್ವಿನಿ ಹಾಗೂ ಮಹಾಸತಿ’. ರಾಮಾಯಣದಲ್ಲಿ ಕವಿಯ ಅನಾದರಕ್ಕೆಪಾತ್ರ

ವಾಗಿರುವ 'ಊರ್ಮಿಳೆ'ಯನ್ನು ಕುರಿತು ಹಲವಾರು ವಿಮರ್ಶಕರು ವಿಮರ್ಶೆ ಮಾಡಿದ್ದರೂ ಯಾರೂ ಆ ಪಾತ್ರಕ್ಕೆ ಕಾವ್ಯ ಚೇತನ ತುಂಬುವ ಸಾಹಸ ಮಾಡಿರಲಿಲ್ಲ. ಆ ಸಾಹಸ ಮಾಡಿ ಅಪಾರ ಯಶಸ್ಸನ್ನು ಗಳಿಸಿದ ಕೀರ್ತಿ ಶ್ರೀಮತಿ 'ಭಾರತಿ' ಅವರದು.

ಲಕ್ಷ್ಮಣ ಅಡವಿಗೆ ಹೊರಡಲು ಊರ್ಮಿಳೆ ಅವನೊಡನೆ ಹೊರಡಲಿಲ್ಲವಷ್ಟೆ. ಅವನಿಗೆ ಆಕೆ ಆಗ ಏನು ಹೇಳಿದಳು? ಲಕ್ಷ್ಮಣನಿಲ್ಲದ ಅಯೋಧ್ಯೆಯಲ್ಲಿ ಹೇಗೆ ಕಾಲ ನೂಕಿದಳು? ಈ ಪ್ರಶ್ನೆಗಳಲ್ಲಿ ಕವಯಿತ್ರಿಯ ಹೃದಯವನ್ನು ಕಲಕಿ ಊರ್ಮಿಳೆಯ ಪಾತ್ರ ಮಹಾ 'ತಪಸ್ವಿನಿ'ಯ ಪಾತ್ರವಾಗಿ ಈ ನಾಟಕದಲ್ಲಿ ಮೂಡಿಬಂದಿದೆ.

"ನಿನ್ನ ತಪ ಮುಗಿದುದೊ ?" ಎಂದು ಲಕ್ಷ್ಮಣ ಕೇಳಿದಾಗ,

"ಈಗಳೆ ಸಿದ್ಧಿ" ಎಂದು ಊರ್ಮಿಳೆ ಹೇಳುತ್ತಾಳೆ!

ಸೀತಾರಾಮರೊಡನೆ ಹಿಂತಿರುಗಿದ ಪತಿಯ ದರ್ಶನದಿಂದಲೇ ಊರ್ಮಿಳೆಯ ತಪಸ್ಸು ಸಿದ್ಧಿಸಿತು. ಇಂತಹ ಕಿರಿ ನುಡಿಯಲ್ಲಿ ಹಿರಿದಾದ ಅರ್ಥವನ್ನು ತುಂಬಿಸಿದ್ದಾರೆ 'ಭಾರತಿ' ಅವರು.

'ಮಹಾಸತಿ' ಕಾವ್ಯ ನಾಟಕ ಸುಗುನಾಡಾಧಿಪತಿ ರವಿಗನ ಮಗಳು ದೇಕಬ್ಬೆ ಪತಿಯ ಮರಣದ ವಾರ್ತೆ ಕೇಳಿ ಆಗಿನ ಕಾಲಕ್ಕೆ ವೀರಸತಿಗೆ ಉಚಿತವಾದ ಮಾರ್ಗವನ್ನು ಹಿಡಿದಳು. ಪತಿಯ ಚಿತೆಯೇರಿ ಸ್ವರ್ಗ ಸೇರಿದಳು.

ಚಿತೆಯೇರುವ ಮುನ್ನ ದೇಕಬ್ಬೆ,

"ಸೊಗಮಿತ್ತು ಜೀವನದೊಳಿಂಬೊಗೆದು ಇನ್ನೆವರ
ಮೆನ್ನ ಜೀವಾನಂದಾಧಾರ ಮಾಗಿರ್ದ
ಮಮತೆಯಾಗರವೆ! ತಾಯ್ನೆಲವೆ...."

–ಎನ್ನುತ್ತಾಳೆ.

"ಜೈ ಭಾರತ ಜನನಿಗೆ ಮಾತೆಗೆ" ಎಂದು ಭಾರತ ಜನನಿಯ ನನ್ನಂಗಳವನ್ನು ಕೋರುತ್ತ ಸಾಹಿತ್ಯರಂಗಕ್ಕೆ ಕಾಲಿಟ್ಟ 'ಭಾರತಿ' ಶ್ರೀಮತಿ ತಿರುಮಲೆ ರಾಜಮ್ಮನವರ ಕೊಡುಗೆ ಕನ್ನಡ ಕಾವ್ಯ ನಾಟಕಕ್ಕೆ ಅಮೂಲ್ಯವಾಗಿದೆ.

ಮಾನವೀಯತೆಯ ಕೆಲವೊಂದು ಮೂಲಭೂತ ಮೌಲ್ಯಗಳನ್ನು ಕುರಿತು 'ಭಾರತಿ' ಅವರು ತಮ್ಮ ಕೃತಿಗಳಲ್ಲಿ ರೇಗದೆ, ಗೊಣಗದೆ, ಗುಡುಗದೆ ಭಾರತೀಯ ಸ್ತ್ರೀತ್ವಕ್ಕೆ ಸಹಜವಾದ ಸೌಮ್ಯತೆಯಿಂದ, ಸಭ್ಯತೆಯಿಂದ ಆದರೆ ಧೈರ್ಯದಿಂದ ತಮ್ಮ ಅಂತರಾಳದ ಭಾವನೆಗಳನ್ನು ಕಾವ್ಯಮಯವನ್ನಾಗಿಸಿದ್ದಾರೆ.

'ಭಾರತಿ' ಅವರ ಸಾಹಿತ್ಯ ಅನಾದಿಕಾಲದಿಂದಲೂ ಭಾರತೀಯರ ಜೀವನದ ಬುನಾದಿಯಾಗಿರುವ ಕೆಲವೊಂದು ಧ್ಯೇಯ ಧೋರಣೆಗಳ, ಆದರ್ಶಗಳ ಪ್ರತೀಕ. ಇಲ್ಲಿ ಆಧುನಿಕತೆಯ ಕುರುಹಾದ ಬೌದ್ಧಿಕ ಕಸರತ್ತಿರದೆ ಹೋಗಬಹುದು. ಅಥವಾ ಆಧುನಿಕ ಸಮಾಜದಲ್ಲಿ ಸಾಹಿತ್ಯರಂಗದಲ್ಲಿ ಕಂಡುಬರುತ್ತಿರುವ ಮೌಲ್ಯಗಳ ತಿಕ್ಕಾಟ ವಿಲ್ಲದಿರಬಹುದು. 'ಭಾರತಿ' ಅವರ ಸಾಹಿತ್ಯ 'ಚರ್ಚೆ'ಗೆ ಒಳಗಾಗದಿರಬಹುದು.

ಬಹಳ 'ಜನಪ್ರಿಯ'ವಾಗದೆ ಇರಬಹುದು. ಅದರ ಇರವೂ ಅರಿವಾಗದಂತೆ ಇರಬಹುದು. ಆದರೆ 'ಭಾರತಿ'ಯವರ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ವಿಶಿಷ್ಟವಾದ ಸ್ಥಾನ ಇದೆ ಎನ್ನುವುದನ್ನು ಯಾವ ನಿಷ್ಪಕ್ಷಪಾತ ವಿಮರ್ಶಕನೂ ಅಲ್ಲಗಳೆಯಲಾರ.

'ಭಾರತಿ'ಯವರು ಪ್ರತಿಪಾದಿಸಿರುವ ಜೀವನ ಮನೋಧರ್ಮ ಅತಿ ಆದರ್ಶಪ್ರಾಯ ಎನ್ನಿಸುವುದು ನಿಜವಾದರೂ ದಿನದಿನಕ್ಕೂ ಬದಲಾಗುವ ಸಮಾಜ ಜೀವನದ ಹೋರಾಟವನ್ನು ಮಾತ್ರ ಚಿತ್ರಿಸಲು ಹೋಗದೆ ವ್ಯಕ್ತಿಯ ಆಂತರಿಕ ಸತ್ವದಮೌಲ್ಯವನ್ನು ಭಾರತೀಯ ಆದರ್ಶದ ಅಳತೆಗೋಲಿನಿಂದ ಅಳೆಯುವ ಪ್ರಯತ್ನ ಮಾಡಿರುವ ಭಾರತಿಯವರ ಸಾಹಿತ್ಯ ಕಾಲದ ಒತ್ತಡವನ್ನು ತಡೆದು ನಿಲ್ಲಬಲ್ಲ ಸಾಹಿತ್ಯ.

ಜೀವನದ ಹೊರಗಿನ ಮೆರುಗು ಬೆರಗನ್ನು ಮಾತ್ರವಲ್ಲದೆ ಒಳಹುದವನ್ನು ತಮ್ಮ ತುಂಬು ಸಾಂಸ್ಕೃತಿಕ ಜೀವನದಿಂದ ಅನುಭವಿಸಿ ಅರಿತ ಕವಯಿತ್ರಿ 'ಭಾರತಿ' ತಮ್ಮ ಭಾಷೆಯಲ್ಲಿ ಸಾಧಿಸಿರುವ ನಯ, ಹದ, ಬಿಗಿ ಸಾಹಿತ್ಯ ಪ್ರತಿಭೆಗೊಂದು ನಿದರ್ಶನ.

ಭಾರತಿಯವರು ಬದುಕನ್ನು ನೋಡುವ ರೀತಿ ಸತ್ಸಂಪ್ರದಾಯದಲ್ಲಿ ಬೆಳೆದು ಬಂದ ಅಚ್ಚ ಭಾರತೀಯ ಹೆಣ್ಣುಮಗಳೊಬ್ಬಳು ಜೀವನವನ್ನು ನೋಡುವ ರೀತಿ. ಈ ಜೀವನ ದೃಷ್ಟಿ ನಮಗೆ ಒಪ್ಪಿಗೆಯಾಗಲಿ ಬಿಡಲಿ, ಅವರು ಭಾಷೆಗೆ ತೋರಿರುವ ಮರ್ಯಾದೆಯನ್ನು ಅಲ್ಪವಾಗಿ ಕಾಣುವುದು ಸಾಧ್ಯವಲ್ಲ.

ಭಾರತಿಯವರ ನಾಟಕಗಳಲ್ಲಿ ಕಾಣುವ ಪಾತ್ರಚಿತ್ರಣ ಸಾಮರ್ಥ್ಯ, ಭಾವರಾಗಗಳ ರಸಸೃಷ್ಟಿ, ರಂಗ ಸಂಪದ, ಭಾಷಾಶುದ್ಧಿ, ಸ್ವಜನ ದೃಷ್ಟಿ ಇವು 'ಭಾರತಿ' ಅವರ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಚಿರಸ್ಥಾಯಿಯಾದ ಸ್ಥಾನವನ್ನು ಕಲ್ಪಿಸಿಕೊಟ್ಟವೆ. ☆

ಶುಭದ ನುಡಿ ಶುಭದ ಬಗೆ ಶುದ್ಧ ಬುದ್ಧಿಯ ಪೇಳು.
ಅಭಯದಿಂದನುಭವಿಸು ಆನಂದ ಭಾಗ್ಯವನು.
ಪ್ರಭು ಸಮ್ಮತದ ಪ್ರೇಮಪುತ್ರ ನೀನಾಗಿರು.
ವಿಬುಧ ಜನ ವಿಶ್ವಾಸ ಪಾತ್ರನಾಗುತಿರು.

ಒಂದು ನೆನಪು

● ವೀಣೆ ದೊರೆಸ್ವಾಮಿ ಅಯ್ಯಂಗಾರ್

ಸುಮಾರು ೧೯೩೪-೩೫ರ ಸಮಯ. ಆಗಿನ್ನೂ ನಾನು ಹೈಸ್ಕೂಲು ವಿದ್ಯಾರ್ಥಿ. ಆಗ ನಮ್ಮ ಗುರುಗಳಾದ ವೆಂಕಟಗಿರಿಯಪ್ಪನವರ ಜೊತೆ ಬೆಂಗಳೂರಿಗೆ ಬಂದಿದ್ದೆ. ಒಂದು ವಾರ ಇಲ್ಲಿಯೇ ಇರುವ ಅವಕಾಶ ದೊರಕಿತ್ತು. ಒಂದುದಿನ ಸಾಯಂಕಾಲ ನಮ್ಮ ಗುರುಗಳು ಟಿ. ಟಿ. ಶರ್ಮರ ಮನೆಗೆ ಹೋಗೋಣವೆಂದು ಕರೆದರು. ನಾನೂ ಜೊತೆಯಲ್ಲಿ ಹೋದೆ. ಸ್ವಲ್ಪ ಹೊತ್ತು ಶರ್ಮರ ಜೊತೆ ಮಾತುಕಥೆ ಸಾಗಿದ್ದಂತೆಯೇ ಶ್ರೀಮತಿ ಶರ್ಮ ಅವರೂ ಮಾತಿನಲ್ಲಿ ಸೇರಿದರು. ಸ್ವಲ್ಪ ಹೊತ್ತಿನ ನಂತರ ಶ್ರೀಮತಿ ರಾಜಮ್ಮನವರು ನನ್ನ ಕಡೆ ನೋಡಿ "ಈ ಹುಡುಗ ಯಾರು?" ಎಂದು ಗುರುಗಳನ್ನು ಪ್ರಶ್ನಿಸಿದರು. ಗುರುಗಳು "ನನ್ನ ಶಿಷ್ಯನೇ, ಕೈ ಚೆನ್ನಾಗಿದೆ" ಅಂದರು. ತಕ್ಷಣ ರಾಜಮ್ಮನವರು "ಹಾಗಾದರೆ ಒಂದೆರಡು ಕೀರ್ತನೆ ನುಡಿಸಲಿ" ಎನ್ನುತ್ತಾ ವೀಣೆಯನ್ನು ತಂದು ನನ್ನ ಮುಂದೆ ಇಟ್ಟೇ ಬಿಟ್ಟರು.

ನಾನು ಸುಮಾರು ಅರ್ಧ ಘಂಟೆ ವೀಣೆ ನುಡಿಸಿದೆ. ರಾಜಮ್ಮನವರು ಅಭಿಮಾನದಿಂದ ಮೆಚ್ಚಿಕೊಂಡರು. ಅನಂತರ ನಮ್ಮ ಗುರುಗಳು "ನಿಮ್ಮ ವೀಣಾಭ್ಯಾಸ ಹೇಗೆ ಸಾಗಿದೆ?" ಎಂದು ಆಕೆಯನ್ನು ಕೇಳಿದರು. ಆಗಲೇ ಅವರೂ ಒಬ್ಬ ವೀಣಾ ವಿದುಷಿ ಎನ್ನುವ ವಿಚಾರ ನನಗೆ ತಿಳಿದದ್ದು. ನಮ್ಮ ಗುರುಗಳು "ಇವರು ಸಾಮಾನ್ಯ ಗುರುಗಳ ಶಿಷ್ಯರಲ್ಲ ಕಣಯ್ಯ. ವೀಣೆ ಶೇಷಣ್ಣನವರ ಶಿಷ್ಯರು" ಎಂದ ಕೂಡಲೇ ಅವರ ವೀಣಾವಾದನ ಕೇಳಬೇಕೆನ್ನುವ ಕುತೂಹಲ ನನ್ನಲ್ಲಿ ಉದಯಿಸಿತು. ರಾಜಮ್ಮನವರು ತಮ್ಮ ಸ್ವಾಭಾವಿಕ ಸಂಕೋಚದಿಂದ,

"ನಾನು ಈಚೆಗೆ ಅಭ್ಯಾಸಮಾಡಿಲ್ಲ" ಎಂದರು.

"ಅನುಭವದ ಮುಂದೆ ಅಭ್ಯಾಸವೇನು? ಪರವಾಗಿಲ್ಲ ನುಡಿಸಿ" ಎಂದು ಒತ್ತಾಯ ಪಡಿಸಿದರು ಗುರುಗಳು.

ರಾಜಮ್ಮನವರು ವೀಣೆ ಕೈಗೆತ್ತಿಕೊಂಡು ನುಡಿಸಲಾರಂಭಿಸಿದರು. ಆಗ ಅವರು ನುಡಿಸಿದ ಆರಭಿ ರಾಗದ ತ್ಯಾಗರಾಜರ ಕೀರ್ತನೆ " ಜೂತಾ ಮುರಾರೆ " ಈಗಲೂ ನನ್ನ ಕಿವಿಯಲ್ಲಿ ಧ್ವನಿಸುತ್ತಿದೆ. ನಮ್ಮ ಗುರುಗಳು ಸ್ವಲ್ಪತ್ತ ನೋಡಿ :

"ಕೇಳಿದ್ಯೇನಯ್ಯಾ? ಸುಮ್ಮನೆ ಸಾಧಕ ಮಾಡಿದರೆ ಬರಲಿಲ್ಲ.... ಎಷ್ಟು ನೆಮ್ಮದಿ ಇದೆ ಆ ನಾದದಲ್ಲಿ. ಆ ನೆಮ್ಮದಿ ಬರಬೇಕು."

—ಎಂದು ಹೇಳಿ

"ಈ ವಾದನವನ್ನು ಕೇಳಿದರೆ ಹಳೆಯ ನೆನಪು ಬರುತ್ತದೆ" ಎಂದು ಶೇಷಣ್ಣ ನವರನ್ನು ಜ್ಞಾಪಿಸಿಕೊಂಡರು. ಶೇಷಣ್ಣನವರ ಹೆಸರು ಕೇಳಿದ ಕೂಡಲೇ ರಾಜಮ್ಮ ನವರು ಭಕ್ತಿ ಶ್ರದ್ಧೆಗಳಿಂದ ಪುಳಕಿತರಾದರು.

"ಅವರು ಇನ್ನೂ ಹತ್ತಾರುವರ್ಷ ಬದುಕಿರಬೇಕಾಗಿತ್ತು. ಅವರಲ್ಲಿ ಇನ್ನಷ್ಟು ಕಾಲ ವೀಣಾಭ್ಯಾಸ ಮಾಡುವ ಅವಕಾಶ ನನಗೆ ದೊರೆಯಲಿಲ್ಲ" ಎಂದು ನೊಂದು ಕೊಂಡರು.

ಮಾತು ಶೇಷಣ್ಣನವರ ಪಾಠ್ಯಕ್ರಮದ ಕಡೆ ತಿರುಗಿತು.

ಅಂದಿನಿಂದ ನನಗೆ ಶ್ರೀಮತಿ ರಾಜಮ್ಮನವರ ಪರಿಚಯ. ಮೈಸೂರಿನ ವೀಣೆ ಸಂಪ್ರದಾಯದ ಬಗ್ಗೆ ಅವರಿಗೆ ತುಂಬಾ ನಂಬಿಕೆ ಮತ್ತು ಶ್ರದ್ಧೆ. ಆ ನಂಬಿಕೆ ಶ್ರದ್ಧೆ ಗಳು ಅಂದಿನಿಂದ ಇಂದಿನವರೆಗೆ ಅಚ್ಚಳಿಯದೆ ಉಳಿದಿವೆ. ಅನೇಕ ಸಂದರ್ಭಗಳಲ್ಲಿ ಅವರನ್ನು ನಾನು ಸಂದರ್ಶಿಸಿದಾಗ ಸಂಗೀತದಲ್ಲಿ, ಅದರಲ್ಲೂ ವೀಣೆಯ ವಿಷಯದಲ್ಲಿ ಎಂಥ ಆಳವಾದ ಜ್ಞಾನ ಮತ್ತು ವಿಮರ್ಶನಾಶಕ್ತಿ ಅವರಿಗಿದೆ ಎನ್ನುವುದನ್ನು ಹೆಚ್ಚು ಹೆಚ್ಚಾಗಿ ಮನಗಂಡಿದ್ದೇನೆ.

ಶ್ರೀಮತಿ ರಾಜಮ್ಮನವರು ಒಳ್ಳೆಯ ಸಾಹಿತಿ ಮತ್ತು ಉತ್ತಮ ಸಂಗೀತ ಕಲಾ ವಿದೆ ಮಾತ್ರವಲ್ಲದೆ ಒಳ್ಳೆಯ ದೇಶಾಭಿಮಾನಿಗಳೂ ಹೌದು. ಅವರೇ ರಚಿಸಿರುವ ದೇಶಭಕ್ತಿ ಗೀತೆಗಳಲ್ಲಿ ಈ ದೇಶಾಭಿಮಾನ ಸ್ಪಷ್ಟವಾಗುತ್ತದೆ. 'ಜೀವನ' ಪತ್ರಿಕೆಯಲ್ಲಿ ಇವರು ಸಂಗೀತದ ಬಗ್ಗೆ ಬರೆದ ಹಲವಾರು ಲೇಖನಗಳನ್ನು ನಾನು ಓದಿದ್ದೇನೆ. ಓದಿ ಮೆಚ್ಚಿದ್ದೇನೆ. ★

ಈ ಮಾತೆಗೆ, 'ಸನ್ಮಂಗಳವಾಗಲಿ ಸತತ'

● **ಅನುಪಮಾ ನಿರಂಜನ**

ನಾವು ಶಾಲೆಯಲ್ಲಿದ್ದಾಗ 'ಜೈ ಭಾರತ ಭುವಿಗೆ ಮಾತೆಗೆ ಜೈ' ಎಂಬ ಹಾಡನ್ನು ಹಾಡುತ್ತಿದ್ದ ನೆನಪು. ಬಹು ಹುರುಪಿನಿಂದ, ದೇಶಭಕ್ತಿಯಿಂದ ಹಾಡನ್ನು ನಿನದಿಸುತ್ತಿದ್ದಾಗ ಅದನ್ನು ಬರೆದವರು ಯಾರೆಂಬ ಅರಿವು ನಮಗಿರಲಿಲ್ಲ. ಕೆಲವು ವರ್ಷಗಳ ಹಿಂದೆ ಆ ಗೀತೆಯನ್ನು ಬರೆದವರು ಶ್ರೀಮತಿ ತಿರುಮಲೆ ರಾಜಮ್ಮನವರು ಎಂದು ತಿಳಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಅನೇಕ ದೇಶಭಕ್ತಿ ಗೀತೆಗಳನ್ನು ಬರೆದ ಈ ಕವಯಿತ್ರಿಯನ್ನು ಕಾಣಬೇಕು ಎಂಬ ಹಂಬಲ ಹಿರಿದಾಗಿ ಬೆಳೆಯಿತು. ಇದೇ ಸಮಯದಲ್ಲಿ ಅವರ 'ತಪಸ್ವಿನಿ' ಕಾವ್ಯ ನಾಟಕವೂ ಓದಲು ದೊರಕಿತು. . ಸುಮಾರು ೧೯೩೦ರಷ್ಟು ಹಿಂದೆಯೇ ಬರೆದ ಈ ಪದ್ಯ ನಾಟಕದ ಸೊಗಸು, ಲಾಲಿತ್ಯ, ರಮ್ಯತೆ ನನ್ನನ್ನೂ ದಂಗು ಬಡಿಸಿತು. ಆ ಕಾವ್ಯದ ಸರಳತೆ, ಸುಭಗತೆ, ಪಾತ್ರ ಪರಿಪುಷ್ಟಿ, ಸನ್ನಿವೇಶಗಳ ಸಮ್ಮೋಹಕತೆ, ಕವಿತಾ ಪ್ರಪಂಚಕ್ಕೆ ಇದು ಮಹಿಳೆಯ ಅದ್ವಿತೀಯ ಕಾಣಿಕೆ ಎನ್ನುವುದನ್ನು ಸ್ಪಷ್ಟ ಮಾಡಿದವು. ಆಗ ಅವರ ಇತರ ಬರಹಗಳು, ಕವನಗಳನ್ನು ದೊರಕಿಸಿಕೊಳ್ಳುವ ಪ್ರಯತ್ನಮಾಡಿ ಸೋತೆ. ಅವರು ಬರೆದವುಗಳಲ್ಲಿ ಎಷ್ಟೋ ಪುಸ್ತಕ ರೂಪದಲ್ಲಿ ಬಂದೇ ಇಲ್ಲ ಎಂದು ತಿಳಿದಾಗ ಅತೀವ ವೇದನೆ. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಮಹಿಳೆಯೋರ್ವರು ಬರೆದ ಸಾಹಿತ್ಯ, ಚಾರಿತ್ರಿಕ ದೃಷ್ಟಿಯಿಂದಲೂ, ಸಾಹಿತ್ಯಿಕ ಮೌಲ್ಯಮಾಪನ ದೃಷ್ಟಿಯಿಂದಲೂ ಅಮೂಲ್ಯವಾದುದು. ಅದು ಸಂಗ್ರಹ ರೂಪದಲ್ಲಿ ಸಿಗಬೇಕಾದುದು ಯೋಗ್ಯ. ಈ ದಿಸೆಯಲ್ಲಿ ಏನಾದರೂ ಮಾಡಬೇಕು, ಎಂದು ನಾವು ನಾಲ್ಕಾರು ಜನ ಸ್ನೇಹಿತೆಯರು ಕುಳಿತು ಚರ್ಚಿಸಿದೆವು. ಆದರೆ ಧನ ಜನ ಬಲವಿಲ್ಲದೆ ಈ ಆಸೆ ಕಮರಿಯೇ ಹೋಯಿತು.

ಆದರೆ ತಿರುಮಲೆ ರಾಜಮ್ಮನವರನ್ನು ಕಾಣಬೇಕು ಎನ್ನುವ ನನ್ನ ಬಯಕೆ ಬೆಳೆಯುತ್ತಲೇ ಹೋಯಿತು. ಒಂದೇ ಊರಿನಲ್ಲಿದ್ದರೂ, ನನ್ನ ವೈದ್ಯಕೀಯ ಕೆಲಸಗಳ ಒತ್ತಡದಿಂದ ಅವರ ಮನೆಗೆ ಹೋಗುವುದು ಸಾಧ್ಯವೇ ಆಗಲಿಲ್ಲ.

ಆದರೆ ಒಂದು ಅಪೂರ್ವ ಸನ್ನಿವೇಶದಲ್ಲಿ ಶ್ರೀಮತಿ ಭಾರತಿಯವರ ಭೆಟ್ಟಿಯಾಯಿತು. ನಗರದ ಪುರಭವನದಲ್ಲಿ ಒಂದು ಸಮಾರಂಭ. 'ಆತ್ಮಾಹುತಿ' ಎಂಬ ಪುಸ್ತಕವನ್ನು ಬಿಡುಗಡೆ ಮಾಡಲು, ಹುತಾತ್ಮ ಭಗತ್ ಸಿಂಗರ ತಾಯಿ ಬಂದಿದ್ದರು. ಆ ಸಮಾರಂಭದಲ್ಲಿ ಪ್ರಾಸ್ತಾವಿಕ ಭಾಷಣ ಶ್ರೀ ತಿ. ತಾ. ಶರ್ಮ ಅವರದು [ಇವರು ಶ್ರೀಮತಿ ಭಾರತಿಯವರ ಯಜಮಾನರು] ಅಧ್ಯಕ್ಷತೆ ಶ್ರೀ ನಿರಂಜನ ಅವರದು.

ಸಮಾರಂಭ ಆರಂಭವಾಗುವ ಕೆಲವು ನಿಮಿಷಗಳ ಮುಂಚೆ ನನ್ನ ಪಕ್ಕದ ಆಸನದಲ್ಲಿ ಗಿಡ್ಡನೆಯ, ತೆಳ್ಳನೆಯ, ಚುರುಕು ಕಣ್ಣಿನ, ವೃದ್ಧ ಮಹಿಳೆಯೊಬ್ಬರು ಬಂದು ಕುಳಿತರು. ಬಹಳ ಪರಿಚಿತ ಎನ್ನಿಸುವ ಮುಖಭಾವ. ನಾನು ತುಸು ಬಾಗಿ,

"ನೀವು ಭಾರತಿಯವರಲ್ಲವೆ?" ಎಂದು ಗೌರವದಿಂದ ಪ್ರಶ್ನಿಸಿದೆ.

ಆ ಮುಖದಲ್ಲಿ ಮುಗುಳು ನಗೆ, ಆಶ್ಚರ್ಯ.

"ಹೌದು, ನೀವು ?"

"ನಾನು ಅನುಪಮಾ ನಿರಂಜನಾಂತ."

"ಓ ಗೊತ್ತು. ನಿಮ್ಮೆಜಮಾನ್ರು ನಮ್ಮ ಮನೆಗೆ ಬಂದಾಗ ಹೇಳಿದ್ರು, ನಿಮ್ಮನ್ನ ಒಂದ್ಸಾರಿ ಕರ್ಕೊಂಡು ಬನ್ನೀಂತ."

ಆ ಮಾತೆಯ ಸಹೃದಯತೆ ಕಡಲಿನಷ್ಟೇ ಆಳ.

ವೇದಿಕೆಯ ಮೇಲೆ ಭಾಷಣಗಳು ಸಾಗಿದ್ದಂತೆ, ಮಧ್ಯ ಮಧ್ಯದಲ್ಲಿ ನಮ್ಮಿಬ್ಬರ ಸಂವಾದ ಸಾಗಿತು.

ಶ್ರೀ ತಿ. ತಾ. ಶರ್ಮರ ಭಾಷಣವನ್ನು ಕೇಳಿ ನಾನು ನಂಗಾಗಿ ನುಡಿದೆ:

"ತುಂಬಾ ಚೆನ್ನಾಗಿ ಮಾತಾಡುತಾರೆ."

ಭಾರತಿಯವರ ಕಣ್ಣುಗಳು ಹುಣ್ಣಿಮೆಯ ನಕ್ಷತ್ರಗಳಾದುವು. ತುಟಿಗಳಲ್ಲಿ ತೃಪ್ತಿ, ಸಂತೋಷಗಳ ನಗೆ ಬೆಳಗಿತು. ಅವರೆಂದರು :

"ಯಾವಾಗ್ಲೂ ಹಾಗೇಮ್ಮ. ಸಿಡಿಲುಮರಿ ಅವ್ರು. ಅವ್ರಿಗೆ ಸ್ಫೂರ್ತಿ ಬಂದ್ರೆ ಹೊತ್ತುಗೊತ್ತಿನ ಪರಿವೆಯಿಲ್ಲ. ಹಸಿವು, ನಿದ್ರೆಗ್ಳ ಯೋಚ್ನೆಯಿಲ್ಲ. ಹಿಂದಿಗೂ ಹಾಗೇ, ಇಂದಿಗೂ ಅಷ್ಟೆ ಅವರನ್ನ ನೋಡ್ಕೊಳ್ಳೋಕೆ ನಾನಿಲ್ದೆ ಹೋಗಿದ್ದಿದ್ರೆ...."

ತ್ಯಾಗ, ಬಲಿದಾನಗಳ ಕತೆಯೇ ಇವರ ಬದುಕು. ಭಾರತಿ, ಋಷಿಪತ್ನಿ ಎನಿಸಿತು ನನಗೆ. ನಾನೆಂದೆ:

"ನೀವು ಅಷ್ಟು ಹಿಂದೆಯೇ ಎಷ್ಟೊಂದು ಒಳ್ಳೆಯ ಸಾಹಿತ್ಯ ಬರೆದ್ರಿ! ನಮ್ಗೆ ಹೆಮ್ಮೆಯಾಗುತ್ತೆ !"

"ಹೆಮ್ಮೆ ? ಏನು ಪ್ರಯೋಜನಕ್ಕೆ? ಬರ್ದಿರೋದು ಪ್ರಕಟವಾಗ್ದೆ ಉಳಿದಿವ್ಯಲ್ಲ! ಯ ರೂ ಪ್ರಕಟಿಸೋರೇ ಮುಂದೆ ಬರೋಲ್ವಲ್ಲ!"

ನಮ್ಮ ಜನಕ್ಕೆ, ಪ್ರಕಾಶಕರಿಗೆ ಕಾದಂಬರಿ, ಕತೆ ಬೇಕು, ಸಾಹಿತ್ಯದ ಇನ್ಯಾವ

ಪ್ರಕಾರಗಳಲ್ಲೂ ಆಸಕ್ತಿಯಿಲ್ಲ. ಎಂದು ಯೋಚಿಸಿದಾಗ ನನಗೆ ತುಂಬಾ ಸಂಕಟ ವಾಯಿತು. ನಾನು ಮೂಕಳಾಗಿ ಕುಳಿತೆ.

ಗುಂಗಿನಲ್ಲಿದ್ದಂತೆ ಭಾರತಿ ಮಾತನಾಡಿದರು :

"ಆಗಿನ ದಿನಗಳ್ನ ನೆನಸಿಕೊಂಡ್ರೆ ಕನಸು ಕಂಡ ಹಾಗಿದ್ಯಮ್ಮ. ಏನು ಉತ್ಸಾಹ, ಏನು ಸಂಭ್ರಮ ಅಂತೀರಿ? ಬೆಳಗ್ನಿಂದ ಸಂಜೇವರ್ಗೂ ಮನೆಗೆ ಬರೋವ್ರು ಹೋಗೋವ್ರು, ಮಾತು ಚರ್ಚೆ. ದಿನಾ ಹೋಗೋದು ತಿಳೀತಿದ್ದಿಲ್ಲ. ಬಂದೋರಿಗೆ ಮಾಡಿ ಹಾಕೋದೇ ಸಮಸ್ಯೆಯಾಗ್ತಿತ್ತು. ಹಾಗೇ ಜೀವನದ ಬಹಳ ಸಮಯವೂ ಕಳೆದು ಹೋಯ್ತು."

"ನೀವ್ಯಾಕೆ ಕಾದಂಬರಿ ಬರೀಲಿಲ್ಲ?" ಎಂದು ಪ್ರಶ್ನಿಸಿದೆ.

"ಬರೀಬಹುದಾಗಿತ್ತೇನೋ ಗೊತ್ತಿಲ್ಲ. ನಿಮಗೆ ವಯಸ್ಸಿದೆ ಬರೀತೀರ. ನಂಗೆ ಅದು ಇಲ್ವಲ್ಲ!"

ಭಾರತಿ ಕಾಲುಗಳೆರಡನ್ನು ಮಡಿಸಿಕೊಂಡು ಆಸನದಲ್ಲಿ ಕುಳಿತಿದ್ದರು. ಮೊದಲೇ ಸಣ್ಣ ಆಕೃತಿ. ಅವರು ನನಗೆ ಮಗುವಿನ ಹಾಗೆ ಕಂಡರು. ಮುಖದಲ್ಲಿ ಅದೇ ಮುಗ್ಧತೆ, ಅಂಥದೇ ನಗೆ, ಈ ದಿವ್ಯ ಜೀವ ಎಷ್ಟೊಂದು ತ್ಯಾಗ ಬಲಿದಾನಗಳನ್ನು ಮಾಡಿದರು, ತನ್ನ ಸ್ವಂತ ಸಾಧನೆಗಳನ್ನೂ ಮರೆತು ಪತಿಯ ಏಳಿಗೆಗೆ ದುಡಿದರಲ್ಲಾ ಎನಿಸಿ ಅವರ ಬಗ್ಗೆ ಅತೀವ ಹೆಮ್ಮೆಯೆನಿಸಿತು.

ಸಭೆ ಮುಗಿದಾಗ, "ಭಗತ್ ಸಿಂಗರಿಗೆ ಜಯವಾಗಲಿ" ಎಂಬ ಉದ್ಘೋಷ ಜನ ವೃಂದದಿಂದ ಮೇಲೆದ್ದಿತ್ತು.

ನನ್ನ ತಾಯಿ ಇಲ್ಲೀ ಇರುವರಲ್ಲ, ಇವರಿಗೆ ಜಯಘೋಷ ಮಾಡಬಾರದೇ, ಎಂದು ನನ್ನ ಮನಸ್ಸು ಮಿಡಿಯಿತು.

ಆದರೆ ಈಗ, ಅಂಥ ಒಂದು ಘಳಿಗೆ ಪ್ರಾಪ್ತವಾಗುತ್ತಿರುವುದು ನನಗೆ ಅತ್ಯಂತ ಆನಂದದಾಯಕವಾದ ಸಂಗತಿ.

ಆರು ಮೆಚ್ಚಿದರೇನು ? ಆರು ಚುಚ್ಚಿದರೇನು ?
ಧೀರ ಗಂಭೀರ ವೃತ್ತಿಗೆ ಭಕ್ತರಾದವರನು.
ಸಾರು ನೀ ಸ್ವಾರ್ಥ ಸ್ವಾತಂತ್ರ್ಯ ಸುಸ್ಫೂರ್ತಿಯನು.
ತೀರಿಸೀ ಜಗದ ಜೀವನದ ಋಣವೆಲ್ಲವನು.

ನನಗೊಂದು ಸುದಿನ

● 'ರಾಜಶ್ರೀ'

ಇಪ್ಪತ್ತೈದು ವರ್ಷಗಳಾಗಿರಬಹುದು. ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣವು ಕಿಕ್ಕಿರಿದು ತುಂಬಿದೆ. ಸೂಜಿಮೊನೆಯಷ್ಟು ಸಹ ಜಾಗವಿಲ್ಲ. ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರೇ ಜಾಸ್ತಿ, ಪರಿಷತ್ತಿನ ಆಡಳಿತ ವರ್ಗದವರಿಗೇ ಒಳ ಬರಲು ಸಾಧ್ಯವಿರಲಿಲ್ಲ. ಹಾಗೂ ಹೀಗೂ ಮಾಡಿ ಕೆಲವು ಪರಿಷತ್ತಿನ ಅಧಿಕಾರಿಗಳು ಸ್ವಲ್ಪ ಜಾಗ ಬಿಡಿಸಿಕೊಂಡು ಮುಖ್ಯ ಅತಿಥಿಗಳನ್ನು ಅತಿ ಪ್ರಯಾಸದಿಂದ ವೇದಿಕೆಯ ಮೇಲಕ್ಕೆ ಕರೆತಂದರು. ಅವರನ್ನು ನೋಡಿದ ಕೂಡಲೇ ಪ್ರೇಕ್ಷಕರು ಹರ್ಷೋದ್ಗಾರಗಳನ್ನು ಮಾಡಿದರು. ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮೇಜು ಕುರ್ಚಿಗಳನ್ನು ಬಡಿದು ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ವೇದಿಕೆಯ ಮೇಲೆ ಮುಖ್ಯ ಅತಿಥಿಗಳು, ನಾನು, ಸಿದ್ಧವ್ವನಹಳ್ಳಿ ಕೃಷ್ಣಶರ್ಮ ಮತ್ತು ನಲವತ್ತೇಳು-ನಲವತ್ತೆಂಟು ವಯಸ್ಸಿನ, ತೇಜಃಪುಂಜರಾದ ಮಹಿಳೆಯೊಬ್ಬರು, ಅವರ ಹತ್ತಿರ ವೀಣೆಯೊಂದು, ಅಂದಿನ ಸಭಾಧ್ಯಕ್ಷರು-ಇಷ್ಟು ಜನರಿದ್ದೆವು. ಮುಖ್ಯ ಅತಿಥಿಗಳ ಸಾಮೀಪ್ಯ ಬಯಸಿದ ಪ್ರೇಕ್ಷಕರು ವೇದಿಕೆಯ ಕಡೆಗೆ ನುಗ್ಗುತ್ತಿದ್ದರು. ಸ್ವಯಂ ಸೇವಕರು ಅವರನ್ನು ಅತಿಕಷ್ಟದಿಂದ ತಡೆಯುತ್ತಿದ್ದರು. ಕಾರ್ಯಕ್ರಮವು ಆರಂಭವಾಯಿತು.

ಸಿದ್ಧವ್ವನಹಳ್ಳಿ ಕೃಷ್ಣಶರ್ಮರ ಸಿಂಹವಾಣಿ ಮೊಳಗಿತು. ಸದ್ದಡಗಿತು. ಪರಿಚಯ ಭಾಷಣವಾಯಿತು. ಮುಖ್ಯ ಅತಿಥಿಗಳು ಭಾಷಣ ಮಾಡಲು ಎದ್ದರು. ಮತ್ತೆ ಗಲಾಟೆ ಶುರುವಾಯಿತು. ಸಿದ್ಧವ್ವನಹಳ್ಳಿ ಕೃಷ್ಣಶರ್ಮರು ಎಷ್ಟು ಕೇಳಿಕೊಂಡರೂ ಗಲಾಟೆ ನಿಲ್ಲಲಿಲ್ಲ. ಮುಖ್ಯ ಅತಿಥಿಗಳು ಕೈಜೋಡಿಸಿ ಮಾತನಾಡಲಾರಂಭಿಸಿದ ಕೂಡಲೇ ಗಲಾಟೆ ನಿಂತಿತು. ಅವರ ಭಾಷಣವು ಕೇವಲ ಕೆಲ ನಿಮಿಷಗಳ ಕಾಲ ಮಾತ್ರ ನಡೆಯಿತು. ನಂತರ ವೀಣಾ ಕಾರ್ಯಕ್ರಮ. ಆದರೆ ಪ್ರೇಕ್ಷಕರಿಗೆ

ಮುಖ್ಯ ಅತಿಥಿಗಳು ಭಾಷಣವನ್ನು ಬೇಗ ಮುಗಿಸಿದ್ದು ಇಷ್ಟವಾಗಲಿಲ್ಲ. ಮತ್ತೆ ಗಲಾಟೆ ಆರಂಭವಾಯಿತು. ಮುಖ್ಯ ಅತಿಥಿಗಳು ಕಾರ್ಯದರ್ಶಿಯವರನ್ನು ಕರೆದು ವೀಣಾವಾದನವನ್ನು ಆರಂಭಿಸುವಂತೆ ಸೂಚನೆ ಕೊಟ್ಟರು. ಭಾರತದ ಆದರ್ಶ ಮಹಿಳೆಯ ಪ್ರತೀಕವಾದ ಆ ವಿದುಷಿ ವೇದಿಕೆಯ ಮೇಲೆ ಕುಳಿತು ವೀಣೆಯನ್ನು ಶ್ರುತಿಮಾಡಿಕೊಳ್ಳಲುಪಕ್ರಮಿಸಿದರು. ಗಲಾಟೆಯಲ್ಲಿ ಏನೂ ಕೇಳಿಸಲಿಲ್ಲ. ನಿಸ್ಸಹಾಯಕತೆಯಿಂದ ಸುತ್ತಲೂ ನೋಡಿದರು. ಮುಖ್ಯ ಅತಿಥಿಗಳು ಎದ್ದು ನಿಂತು ಪ್ರೇಕ್ಷಕರನ್ನು ಗದ್ದಲವನ್ನು ನಿಲ್ಲಿಸುವಂತೆ ಕೇಳಿಕೊಂಡರು. ಪ್ರಯೋಜನವಾಗಲಿಲ್ಲ. ಆಗ ಅವರೂ ಅವರ ಪತ್ನಿಯೂ, ಕುರ್ಚಿಗಳನ್ನು ಬಿಟ್ಟುಕೊಟ್ಟು ತಾವೂ ವಿದುಷಿಯ ಪಕ್ಕದಲ್ಲೇ, ವೀಣೆಯ ಹತ್ತಿರ ಕಿವಿಗಳನ್ನಿಟ್ಟುಕೊಂಡು ಆಲಿಸಲಾರಂಭಿಸಿದರು. ವಿದುಷಿಯ ಹತ್ತಿರವೇ ಹೇಗೋ ಜಾಗಮಾಡಿಕೊಂಡು ನಾನೂ ಮುದುಡಿಕೊಂಡು ಕುಳಿತಿದ್ದೆ. ಬೆರಳುಗಳು ಲೀಲಾಜಾಲವಾಗಿ ನೃತ್ಯಮಾಡಿದುವು. "ನಗೆಯು ಬರುತಿದೆ" ಎಂಬ ದೇವರ ನಾಮವನ್ನು ನಾಯಕಿ ರಾಗದಲ್ಲಿ ಭಾವ ಪೂರ್ಣವಾಗಿ ನುಡಿಸಿದರು. ಮುಖ್ಯ ಅತಿಥಿಗಳು ಕೇಳಿ ಬೆರಗಾದರು. ಸಂತೋಷಾಧಿಕ್ಯದಿಂದ ಕೈಜೋಡಿಸಿ ವಿದುಷಿಯನ್ನು ವಂದಿಸಿದರು. ಮನಸ್ಸಿಲ್ಲದ ಮನಸ್ಸಿನಿಂದ ವೇದಿಕೆಯಿಂದ ಇಳಿದು ಮುಂದಿನ ಕಾರ್ಯಕ್ರಮಕ್ಕೆ ತೆರಳಿದರು. ಅವರು ಯಾರೆಂದರೆ ಚಲನಚಿತ್ರ ಪ್ರಪಂಚದಲ್ಲಿ ಆಗ ದೇದೀಪ್ಯಮಾನರಾಗಿ ವಿರಾಜಿಸುತ್ತಿದ್ದ ಪ್ರಭಾತ್, ರಾಜಕಮಲ್ ಕಂಪನಿಗಳ ಮಾಲೀಕರೂ, ಪ್ರತಿಭಾವಂತ ದಿಗ್ದರ್ಶಕರೂ ಆದ ವಿ. ಶಾಂತಾರಾಮ್ ಮತ್ತು ಅವರ ಪತ್ನಿ ಸುಪ್ರಸಿದ್ಧ ತಾರೆ ಜಯಶ್ರೀ. ತಮ್ಮ ವೀಣಾವಾದನದಿಂದ ಅತಿಥಿಗಳ ಕಣ್ಣುಗಳಿಂದ ಆನಂದಬಾಷ್ಪವನ್ನು ತರಿಸಿದ ವೀಣಾವಿದುಷಿ "ಭಾರತಿ" ಕಾವ್ಯನಾಮದಿಂದ ಸಂಗೀತ ಮತ್ತು ಸಾಹಿತ್ಯ ಪ್ರಪಂಚಗಳಲ್ಲಿ ವಿಜೃಂಭಿಸಿದ, ಹಾಗೂ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರ ಧರ್ಮಪತ್ನಿ ಶ್ರೀಮತಿ ತಿರುಮಲೆ ರಾಜಮ್ಮನವರು. ಅವರನ್ನು ಹಿಂದೆ ನಾನು ಅನೇಕ ಬಾರಿ ದೂರದಿಂದ ನೋಡಿದ್ದೆ. ಅವರ ಬಗ್ಗೆ ಕೇಳಿದ್ದೆ. ಅವರ ಸಾಹಿತ್ಯ ದೃಷ್ಟಿಯನ್ನು ಕಂಡು ತಲೆದೂಗಿದ್ದೆ. ಆದರೆ ಅವರ ವೀಣಾವಾದನವನ್ನು ಪ್ರಥಮ ಬಾರಿಗೆ ಕೇಳುವ ಹಾಗೂ ಅವರ ಪರಿಚಯ ಮಾಡಿಕೊಳ್ಳುವ ಭಾಗ್ಯ ನನಗೆ ಒದಗಿದುದು ಆದಿನ. ಎಂತಹ ಸುದಿನ !

ರಾಜಮ್ಮನವರದು ಮಾತೃ ವಾತ್ಸಲ್ಯ. ಬಾಹ್ಯಾಡಂಬರದ ಚೂಪುಗಾರಿಕೆ ಮಾತುಗಳಿಲ್ಲ. ಮನಸ್ಸಿನಲ್ಲಿ ಇರುವುದನ್ನು ಖಂಡಿತವಾಗಿ ಹೇಳುವ ಸ್ವಭಾವ. ಯಾವಾಗಲೂ ಆತ್ಮೀಯತೆ, ಶಾಂತಿ, ಸಮಾಧಾನಗಳು ತುಂಬಿಕೊಳ್ಳುತ್ತಿರುವ ಪ್ರಕೃತಿ. ಅವರ ವೀಣಾವಾದನವನ್ನು ಕಚೇರಿಯ ಥಾಟಿಯಲ್ಲಿ ಕೇಳಲು ಆಸೆಯಿತ್ತು. ಆದರೆ ಅದಕ್ಕೆ ಅವಕಾಶ ಬಹುಕಾಲ ಒದಗಿ ಬರಲಿಲ್ಲ. ಅವರು ವಿಶ್ವೇಶ್ವರಪುರದ ಶ್ರದ್ಧಾನಂದ ಭವನದಲ್ಲಿ ಸಂಗೀತ ತರಗತಿಯೊಂದನ್ನು ನಡೆಸುತ್ತಿದ್ದರು. ಹೆಣ್ಣು ಮಕ್ಕಳಿಗೆ ವೀಣಾ ಪಾಠ ಹೇಳಿ ಕೊಡುತ್ತಿದ್ದರು. ಒಂದೆರಡು ಬಾರಿ ತರಗತಿ

ಗಳು ನಡೆಯುವಾಗ ಹೋಪದ್ದುಂಟು. ಆಗ ಅವರು "ಬನ್ನೀಪ್ಪ, ವಯಸ್ಸಾಯಿತು, ಕೈಯಲ್ಲಿ ಆಗುವುದಿಲ್ಲ. ಆದರೂ ಕೆಲವು ಹೆಣ್ಣು ಮಕ್ಕಳಿಗೆ ವೀಣೆ ಕಲಿಸುವುದರ ಮೂಲಕ ಅವರ ಮಧ್ಯದಲ್ಲಿ ಕೊಂಚ ಕಾಲಯಾಪನೆ ಮಾಡುತ್ತೇನೆ. ತಿಳಿದಿರುವುದನ್ನು ಮರೆಯದಂತೆ ಇಡಲು ಪ್ರಯತ್ನಿಸುತ್ತಿದ್ದೇನೆ. ನೀವೇ ವೈಣಿಕರು. ತಪ್ಪೇನಾದರೂ ಇದ್ದರೆ ನಗಬೇಡಿ" ಎಂದು ಎಷ್ಟು ಸಹಜ ಸರಳತೆಯಿಂದ ಮಾತನಾಡುತ್ತಿದ್ದರು. ನನಗೆ ಏನು ಹೇಳಲೂ ತೋಚುತ್ತಿರಲಿಲ್ಲ. ಸುಮ್ಮನೆ ಕುಳಿತು ಅವರ ಶಿಕ್ಷಣ ಕ್ರಮ ವನ್ನು ಕಂಡು ಆನಂದಿಸುತ್ತಿದ್ದೆ. ಅದರಲ್ಲಿ ಶಿಸ್ತು, ಕಲಿತುಕೊಳ್ಳುತ್ತಿದ್ದವರೊಡನೆ ತಾಯಿಯ ಸಲುಗೆಯಿದ್ದರೂ, ಗುರುವಿನ ಬಿಗಿ, ಬೇಜಾರುಪಟ್ಟುಕೊಳ್ಳದೆ ಒಂದೇ ಸಂಗತಿಯನ್ನು ಪದೇ ಪದೇ ನುಡಿಸಿ ತೋರಿಸುವುದು ಇವುಗಳನ್ನು ಕಂಡು ಆಶ್ಚರ್ಯ ಪಡುತ್ತಿದ್ದೆ. ಆಗ ನನ್ನ ಮನಸ್ಸು "ಇವರು ಶೇಷಣ್ಣನವರಲ್ಲಿ ಕಲಿಯುತ್ತಿದ್ದಾಗ, ಅವರೂ ಹೀಗೇ ಮಾಡುತ್ತಿದ್ದರೇ?" ಎಂದು ಕೇಳುತ್ತಿತ್ತು. ರಾಜಮ್ಮನವರನ್ನೇ ನೇರವಾಗಿ ಕೇಳೋಣವೆಂದರೆ ಏನೋ ಸಂಕೋಚ. ಹೀಗಾಗಿ ಬಾಯಿಗೆ ಬೀಗ ಹಾಕಿಕೊಂಡು ಕುಳಿತಿರುತ್ತಿದ್ದೆ. ಕೆಲ ವರ್ಷಗಳ ಕೆಳಗೆ ಜೀವನ ಪ್ರಕಾಶನದ ಕುಸುಮ "ವೈಣಿಕ ಶಿಖಾಮಣಿ ಶೇಷಣ್ಣ" ಎಂಬ ರಾಜಮ್ಮನವರ ಪುಸ್ತಕ ಹೊರಬಂದಿತು. ಅದನ್ನು ಕನಿಷ್ಠಪಕ್ಷ ಒಂದು ನೂರು ಸಲಕ್ಕೆ ಕಡಿಮೆ ಇಲ್ಲದೆ ಓದಿದ್ದೇನೆ. ನಿರರ್ಗಳ ವಾಗಿ ಹರಿಯುವ ವಿಚಾರ ಧಾರೆ, ಶೇಷಣ್ಣನವರಲ್ಲಿ ಗುರುಕುಲವಾಸ ಮಾಡಿದ ಬಗ್ಗೆ ಉತ್ಪ್ರೇಕ್ಷೆರಹಿತ ವಿವರಣೆ ಮತ್ತು ಅವರಲ್ಲಿ ತಮಗಿದ್ದ ನಿಶ್ಚಲವಾದ ಗುರು ಭಕ್ತಿಯ ಪ್ರದರ್ಶನ–ಇವುಗಳು ಆ ಪುಸ್ತಕದ ವೈಶಿಷ್ಟ್ಯ.

ಈಗ ನಾಲ್ಕು ಅಥವಾ ಐದು ವರ್ಷಗಳ ಕೆಳಗೆ ಸ್ವರಮೂರ್ತಿ ವಿ.ಎಸ್. ರಾಯರು ಮಲ್ಲೇಶ್ವರದ ತಮ್ಮ ಮನೆಯಲ್ಲಿ ಶ್ರೀ ಶೇಷಣ್ಣನವರ ದಿನಾಚರಣೆಯನ್ನು ಅದ್ದೂರಿ ಯಾಗಿ ನಡೆಸಿದರು. ಆ ಸಂದರ್ಭದಲ್ಲಿ ಶೇಷಣ್ಣನವರ ಇಬ್ಬರು ಹಿರಿಯ ಶಿಷ್ಯರಾದ ವೀಣಾ ನಾರಾಯಣ ಅಯ್ಯರ್ ಮತ್ತು ತಿರುಮಲೆ ರಾಜಮ್ಮನವರಿಂದ ಪ್ರತ್ಯೇಕವಾದ ವೀಣಾವಾದನವು ನಡೆಯಿತು. ಮೊದಲು ನಾರಾಯಣ ಅಯ್ಯರ್ ಮುಕ್ಕಾಲು ಘಂಟೆ ನುಡಿಸಿದರು. ನಂತರ ಭಾರತಿಯವರು ವೀಣೆಯನ್ನು ಕೈಯಲ್ಲಿ ಎತ್ತಿಕೊಂಡು ಸಭೆಯ ನ್ನೊಮ್ಮೆ ನೋಡಿದರು. ವಿ. ಸೀ., ತಿ. ತಾ. ಶರ್ಮ, ದೊರೆಸ್ವಾಮಿ ಅಯ್ಯಂಗಾರ್, ವೀಣಾ ವೆಂಕಟರಾವ್ ಇವರೆಲ್ಲ ಇದ್ದರು. ವೀಣೆಯನ್ನು ಸರಿಯಾಗಿ ಶ್ರುತಿಮಾಡಿ ಕೊಂಡು "ಏನು ನುಡಿಸಲಿ?" ಎಂದು ವಿ. ಸೀ. ಯವರನ್ನು ಕೇಳಿದರು. "ತಮಗೆ ಏನು ಇಷ್ಟವೊ ಅದನ್ನು ನುಡಿಸಿ. ತಾವು ಏನು ನುಡಿಸಿದರೂ ಅದು ನಮಗೆ ಅಮೃತ ಧಾರೆಯೆ" ಎಂದರು ವಿ. ಸೀ. ತ್ಯಾಗರಾಜರ ಸೂರ್ಯಕಾಂತ ರಾಗದ "ಮುದ್ದು ಮೋಮು" ಕೃತಿಯನ್ನು ನುಡಿಸಿದರು. ಅದೇನು ರಾಗ ಪಲ್ಲವಿ? ಅದೇನು ಚಲ್ಲು ಕಟ್ಟು? ಸುಮಾರು ಮುಕ್ಕಾಲು ಘಂಟೆ ಅದೊಂದೇ ಕೃತಿ ನುಡಿಸಲ್ಪಟ್ಟಿತು. ರಾಜಮ್ಮನವರ ಮನೋಧರ್ಮದ ರಸಗಂಗೆಯಲ್ಲಿ ಮೀಯುವ ಭಾಗ್ಯ ನನ್ನ ಪಾಲಿಗೆ

ಬಂದಿತ್ತು. ನಂತರ ಮತ್ತೊಂದು ಕೃತಿ, ಒಂದು ತಿಲ್ಲಾನ ಇದ್ದ ಹಾಗೆ ನನ್ನ ಜ್ಞಾಪಕ. ಅಂತಹ ಇಳಿ ವಯಸ್ಸಿನಲ್ಲೂ ರಾಜಮ್ಮನವರು ತೋರಿದ ಲವಲವಿಕೆ, ಪಾಂಡಿತ್ಯ, ನಾದ ಶುದ್ಧತೆ ಮತ್ತು ಲಯಜ್ಞಾನ-ಇವುಗಳನ್ನು ಕಂಡು ಎಲ್ಲರಿಗೂ ಆನಂದವಾಯಿತು. "ಬಹಳ ಹೊತ್ತಾಯಿತು. ಇನ್ನೂ ವಿದ್ವಾಂಸರನೇಕರಿದ್ದಾರೆ. ನಿಲ್ಲಿಸುತ್ತೇನೆ" ಎಂದು ಹೇಳಿ ರಾಜಮ್ಮನವರು ವೀಣೆಯನ್ನು ಕೆಳಗೆ ಇಟ್ಟರು.

ಭಾರತಿಯವರು ಬೆಂಗಳೂರು ಗಾಯನ ಸಮಾಜದ ದ್ವಿತೀಯ ಸಂಗೀತ ಸಮ್ಮೇಳನದಲ್ಲಿ (೧೯೭೦ನೆಯ ಅಕ್ಟೋಬರ್ ತಿಂಗಳು), ಬೆಳಗ್ಗೆ ನಡೆದ ಪರಿಣತರ ಸಭೆಯಲ್ಲಿ ತಮ್ಮ ಗುರುಗಳಾಗಿದ್ದ ಶೇಷಣ್ಣನವರ ಬಗ್ಗೆ ಸ್ಫೂರ್ತಿಯಿಂದ ಕೂಡಿದ ಭಾಷಣವನ್ನು ಮಾಡಿದರು. ಅವರು ವೀಣೆಯನ್ನು ನುಡಿಸುವಾಗ ಕಾಣುವ ಮಾರ್ದವತೆಯನ್ನು ಅವರ ಭಾಷಣದಲ್ಲಿಯೂ ಕಾಣಬಹುದು. ಸಮ್ಮೇಳನದ ಅಧ್ಯಕ್ಷರಾಗಿದ್ದ ಶ್ರೀರಾಳ್ಲಪಲ್ಲಿ ಅನಂತಕೃಷ್ಣಶರ್ಮರವರು ರಾಜಮ್ಮನವರಿಗೆ ಧನ್ಯವಾದಗಳನ್ನರ್ಪಿಸುತ್ತ "ಬಹಳ ವಿಷಯಗಳು ತಿಳಿಯಿತು. ರಾಜಮ್ಮನವರ ಸಂಸ್ಕಾರ ಎಷ್ಟು ಉತ್ತಮವಾದದ್ದು ?" ಎಂದರು.

ಭಾರತಿಯವರಲ್ಲಿ ಸ್ನೇಹಪರತೆ ತುಂಬಿದೆ. ಅವರೊಡನೆ ಮೊಟ್ಟಮೊದಲು ಸಂಭಾಷಿಸುವವರು ಅದನ್ನು ಕಂಡುಕೊಳ್ಳುತ್ತಾರೆ. ಬಹಳ ಬೇಗ ಜನರಲ್ಲಿ ಹೊಂದಿಕೊಳ್ಳುತ್ತಾರೆ. ಯಾರ ಮನಸ್ಸನ್ನೂ ನೋಯಿಸುವುದಿಲ್ಲ. ಎಲ್ಲರಿಗೂ ಬೇಕಾದವರು. ಇತ್ತೀಚೆಗೆ ಅವರ ಮನೆಗೆ ಹೋಗಿದ್ದಾಗ ಬಾಯಿತುಂಬ ಮಾತನಾಡಿ ಉಪಚರಿಸಿದರು. "ನನ್ನ ವೀಣೆಯ ಸೋರೆ ಬುರುಡೆ ತುಂಬ ಎತ್ತರ. ವೀಣೆಗೆ ಹೊಂದಿಕೊಳ್ಳುವಂತಹ ಒಂದು ಸೋರೆ ಬುರುಡೆಯನ್ನು ತಂದುಕೊಡಿ. ವೀಣೆಯ ಮೇಲೆ ಬೆರಳಾಡಿಸಿ ಬಹಳ ದಿವಸವಾಯಿತು" ಎಂದು ಹೇಳಿ, "ನನಗೆ ಈಗ ೭೨ ವರ್ಷ ವಯಸ್ಸು. ಆದರೂ ವೀಣೆ ನುಡಿಸಬೇಕೆಂಬ ಹಂಬಲ ಹೋಗಿಲ್ಲ." ಎಂದರು. ಆಶ್ಚರ್ಯಪಟ್ಟೆ, "ಎಂತಹ ಶ್ರದ್ಧೆ ?" ಎಂದಿತು ನನ್ನ ಮನಸ್ಸು ! 'ಭಾರತಿ'ಯವರಂತಹ ವ್ಯಕ್ತಿಗಳು ದೊರೆಯುವುದು ದುರ್ಲಭ. ಅವರನ್ನು ಗೌರವಿಸುವುದರ ಮೂಲಕ ನಮ್ಮನ್ನು ನಾವೇ ಗೌರವಿಸಿಕೊಂಡ ಹಾಗಾಯ್ತು. ಭಾರತಿಯವರು ದೀರ್ಘಾಯುವಾಗಲಿ. ★

ಭಾರತೀಯ ಸ್ತ್ರೀ ಪರಂಪರೆಯ ಪ್ರತೀಕ

● ಪಂಕಜಾ ಶ್ರೀನಾಥ್

"ಜೈ ಭಾರತ ಭುವಿಗೆ" ಗೀತೆಯನ್ನು ಓದದ, ಹಾಡದ ಕನ್ನಡಿಗರು ವಿರಳ. ಈ ಗೀತೆಯನ್ನು ರಚಿಸಿದವರು "ಭಾರತಿ" ಕಾವ್ಯನಾಮದ ಶ್ರೀಮತಿ ತಿರುಮಲೆ ರಾಜಮ್ಮನವರೆಂದು ಬಹುಮಂದಿಗೆ ತಿಳಿದಿರಲಾರದು. ಕನ್ನಡದಲ್ಲಿ ಬರಹಗಾರರ ಸಂಖ್ಯೆ ವಿರಳವಾಗಿದ್ದ ಕಾಲದಿಂದಲೂ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸೇವೆ ಮಾಡುತ್ತ ಬಂದಿರುವ ಧೀಮಂತ ಮಹಿಳೆ ತಿರುಮಲೆ ರಾಜಮ್ಮನವರು. ಜನಪ್ರಿಯತೆಗಾಗಲೀ, ಪ್ರಚಾರಕ್ಕಾಗಲೀ ಎಂದೂ ಹಾತೊರೆದವರಲ್ಲ. ಎಲೆಮರೆಯ ಕಾಯಿಯಂತೆ ಸಾಹಿತ್ಯ, ಸಂಗೀತ, ಪತ್ರಿಕೋದ್ಯಮಗಳ ಜಗತ್ತಿನಲ್ಲಿ ಸೇವೆ ಸಲ್ಲಿಸುತ್ತಿರುವ, ರಾಜಮ್ಮನವರ ಬಹುಮುಖ ಪ್ರತಿಭೆಯನ್ನು, ಪ್ರಶಸ್ತಿಗಳ ಅಳತೆಗೋಲಿನಿಂದ ಅಳೆಯುವುದು ತಪ್ಪಾದರೂ, ಇಂತಹ ಹಿರಿಯ ಸಾಹಿತಿಗಳಿಗೆ ಪ್ರಶಸ್ತಿಗಳು ನ್ಯಾಯವಾಗಿಯೇ ಸಲ್ಲುತ್ತವೆ. ೧೯೬೭ರಲ್ಲಿ ರಾಜ್ಯಸರ್ಕಾರ ತಡವಾಗಿಯಾದರೂ, ಅವರ ಪ್ರತಿಭೆಯನ್ನು ಗುರುತಿಸಿ, ಸಾಹಿತ್ಯ ಅಕಾಡಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಹೆಸರಾಂತ ಸಾಹಿತಿ, ಪತ್ರಿಕೋದ್ಯಮಿ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರ ಪತ್ನಿ ರಾಜಮ್ಮ ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮ ಸ್ವಂತ ಪ್ರತಿಭೆಯಿಂದ ಹಿರಿಯ ಸ್ಥಾನ ಗಳಿಸಿಕೊಂಡಿದ್ದಾರೆ.

ರಾಜಮ್ಮನವರು ೧೯೦೦ನೇ ಇಸವಿಯ ನವೆಂಬರ್ ೨೦ರಂದು ಸುಪ್ರಸಿದ್ಧ ಶತಾವಧಾನಿಗಳ ಮನೆತನದಲ್ಲಿ ಹುಟ್ಟಿದರು. ಅವರ ಮಾತಾಮಹ, ಚಿಕ್ಕಬಳ್ಳಾಪುರದ ಮಹಾಮಹೋಪಾಧ್ಯಾಯ ರಾಜಗೋಪಾಲಾಚಾರ್ಯರು ಘನ ವಿದ್ವಾಂಸರು, ಉದ್ದಾಮ ಪಂಡಿತರು. ಇಂಥ ಸುಸಂಸ್ಕೃತ ಮನೆತನದಲ್ಲಿ ಹುಟ್ಟಿಬೆಳೆದ ರಾಜಮ್ಮನವರ ಸಂಸ್ಕಾರ ಹಿರಿದಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಇಂದಿನ ಪ್ರಚಲಿತ ಅರ್ಥದಲ್ಲಿ ಅವರಿಗೆ ಹೆಚ್ಚಿನ ಶಿಕ್ಷಣಕ್ಕೆ ಅವಕಾಶವಿರಲಿಲ್ಲ. ಕನ್ನಡ ಲೋಯರ್ ಸೆಕೆಂಡರಿ

ಪರೀಕ್ಷೆಯನ್ನೂ ಅವರು ದಾಟಲಿಲ್ಲ. ಆದರೆ ಮನೆಯ ಹಿರಿಯರ ಪಾಂಡಿತ್ಯದ ನೆರಳಿನಲ್ಲಿ, ಅವರ ನಡೆನುಡಿಗಳ ಮೇಲ್ಪಂಕ್ತಿಯಲ್ಲಿ ಅವರಿಗೆ ದೊರೆತದ್ದು ಅಮೂಲ್ಯ ಶಿಕ್ಷಣ. ಚಿಕ್ಕಂದಿನಿಂದಲೂ ಅವರಿಗೆ ಸಂಗೀತದಲ್ಲಿ ವಿಶೇಷ ಆಸಕ್ತಿ. ಶಾಸ್ತ್ರೀಯ ಸಂಗೀತವನ್ನು ಬಹು ಚಿಕ್ಕ ವಯಸ್ಸಿನಲ್ಲೇ ಕಲಿಯಲಾರಂಭಿಸಿದರು.

ಹನ್ನೊಂದನೇ ವಯಸ್ಸಿನಲ್ಲಿ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರೊಂದಿಗೆ ವಿವಾಹವಾಯಿತು. ಬೆಂಗಳೂರಿಗೆ ಬಂದು ಸಂಸಾರ ಹೂಡಿದರು. ಅಂದಿನ ದಿನಗಳಲ್ಲಿ ಇಂಗ್ಲೀಷ್ ಭಾಷೆ ಕಲಿಯುವುದು ಫ್ಯಾಷನ್ ಆಗಿದ್ದರೂ, ರಾಜಮ್ಮನವರ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ. ಸ್ವಯಂ ಶರ್ಮರೇ ಪತ್ನಿಗೆ ಇಂಗ್ಲೀಷ್ ಕಲಿಸಲು ಯತ್ನಿಸಿದರೂ ಅವರು ಯಶಸ್ವಿಯಾಗಲಿಲ್ಲ. ಅವರ ಮನೆ ಮಾತು ತೆಲುಗು. ತೆಲುಗು ಭಾಷೆ ಸಾಹಿತ್ಯದ ಪರಿಚಯ ಅವರಿಗಿತ್ತು. ಆಗಿಂದಾಗ ಅವರು ತೆಲುಗು ಕೃತಿಗಳನ್ನೂ, ಲೇಖನಗಳನ್ನೂ ಕನ್ನಡಕ್ಕೆ ಅನುವಾದ ಮಾಡುತ್ತಿದ್ದರು. ಅವರ ಮೊದಲ ಸ್ವತಂತ್ರ ಕೃತಿ "ಕಪಟನಾಟಕ" ೧೯೨೨ರಲ್ಲಿ ಪ್ರಕಟವಾಯಿತು. ಆ ನಾಟಕ ವಿಶೇಷ ಜನಮನ್ನಣೆ ಗಳಿಸಿತು. ೧೯೨೭ರಲ್ಲಿ "ಅಹಲ್ಯ" ಎಂಬ ಸಂಗೀತ ನಾಟಕವನ್ನು ರಚಿಸಿದರು. ೧೯೩೦ರಲ್ಲಿ 'ತಪಸ್ವಿನಿ' ಪ್ರಕಟವಾಯಿತು. ರಾಮಾಯಣದಲ್ಲಿ ವಾಲ್ಮೀಕಿಯಾದಿಯಾಗಿ ಪ್ರತಿಯೊಬ್ಬ ಕವಿಯ ಅನಾದರಕ್ಕೂ ಗುರಿಯಾದ ವ್ಯಕ್ತಿ ಊರ್ಮಿಳೆ. ಸೀತೆಯ ತ್ಯಾಗವನ್ನು ಎತ್ತಿ ತೋರಿಸುವ ಉತ್ಸಾಹದಲ್ಲಿ ಊರ್ಮಿಳೆಯನ್ನು ಎಲ್ಲರೂ ಮರೆತಿದ್ದಾರೆ. ಸೀತೆಗೆ ಅರಣ್ಯವಾಸದ ಕಷ್ಟದಲ್ಲೂ ಪತಿಯ ಸಾನ್ನಿಧ್ಯದ ಸುಖ ಸಂತೋಷಗಳಿದ್ದುವು. ಆದರೆ ಭ್ರಾತೃಭಕ್ತ ಲಕ್ಷ್ಮಣ ಅಣ್ಣನೊಂದಿಗೆ ಹದಿನಾಲ್ಕು ವರ್ಷ ದೀರ್ಘಕಾಲ ಅರಣ್ಯಕ್ಕೆ ಹೋದಾಗ, ಊರ್ಮಿಳೆಗೆ ಎಷ್ಟು ದುಃಖವಾಗಿರಬೇಡ! ಅವಳ ತ್ಯಾಗ ಸೀತೆಯ ತ್ಯಾಗಕ್ಕೆ ಯಾವ ರೀತಿಯಲ್ಲಿ ಕಡಿಮೆಯಾಗಿತ್ತು? ಊರ್ಮಿಳೆಯ ಪಾತ್ರವನ್ನು ರಾಜಮ್ಮನವರು 'ತಪಸ್ವಿನಿ' ಕಾವ್ಯ ನಾಟಕದಲ್ಲಿ ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ರಾಜಮ್ಮನವರ ಪ್ರತಿಭೆ ಅನುಭವದ ಮೂಸೆಯಲ್ಲಿ ಪುಟಗೊಂಡು ಪರಿಪಕ್ವವಾಗಲು, ಶ್ರೀ ಶರ್ಮರು ಪ್ರಾಚ್ಯ ಸಂಶೋಧನಾ ಇಲಾಖೆಯಲ್ಲಿ ಕೆಲಸ ಮಾಡುತ್ತಾ, ಬೇರೆ ಬೇರೆ ಊರುಗಳಿಗೆ ಭೇಟಿ ನೀಡುತ್ತಿದ್ದುದು ಹೆಚ್ಚಿನ ಸಹಕಾರಿಯಾಯಿತು. ಶಾಸನಗಳು, ವೀರಸತಿ, ಮಹಾಸತಿ ಕಲ್ಲುಗಳು ಮೊದಲಾದುವನ್ನು ನೋಡುವ ಅಪೂರ್ವ ಸುಯೋಗ ಅವರ ಪಾಲಿಗಿತ್ತು.

ಶಾಸ್ತ್ರೀಯವಾಗಿ ವೀಣಾ ವಾದನವನ್ನು ವೈಣಿಕ ಶಿಖಾಮಣಿ ಶೇಷಣ್ಣನವರಿಂದ ಕಲಿಯುವ ಅಪೂರ್ವ ಅವಕಾಶ ಅವರಿಗಿತ್ತು. ಗುರುಗಳ ಬಗೆಗೆ ಅವರು ಬರೆದಿರುವ ವ್ಯಕ್ತಿಚಿತ್ರ "ಶೇಷಣ್ಣನವರು" ಒಂದು ಉತ್ತಮ ಕೃತಿ. "ಆರ್ಯಕೈಲಾಸಂ" ಟಿ.ಪಿ. ಕೈಲಾಸಂ ಅವರ ವ್ಯಕ್ತಿಚಿತ್ರ.

ಕ್ರಾಂತಿಜೀವಿ ಶರ್ಮರ ಸಹಧರ್ಮಿಣಿ ರಾಜಮ್ಮನವರಲ್ಲಿ ದೇಶಸೇವೆಯ ಕಿಚ್ಚು

ಇದ್ದುದರಲ್ಲಿ ಆಶ್ಚರ್ಯವೇನಲ್ಲ. ಅವರು ಅನೇಕ ದೇಶಭಕ್ತಿ ಗೀತೆಗಳನ್ನೂ ರಚಿಸಿದ್ದಾರೆ. "ಜೈ ಭಾರತ ಭುವಿಗೆ" ಗೀತೆಯನ್ನು ಅವರು ಮೊದಲು ಹಾಡಿದ್ದು, ಅಹಮದಾಬಾದಿನಲ್ಲಿ, ಗಾಂಧೀಜಿಯವರ ಸಮ್ಮುಖದಲ್ಲಿ. ಮಹಾತ್ಮರು ಈ ಗೀತೆಯನ್ನು ಕೇಳಿ ಸುಪ್ರೀತರಾಗಿ, ಅಲ್ಲಿರುವ ತನಕ ಪ್ರತಿನಿತ್ಯ ರಾಜಮ್ಮನವರಿಂದ ಹಾಡಿಸುತ್ತಿದ್ದರು. ಮುಂದೆ ಬೆಳಗಾವಿಯಲ್ಲೂ ರಾಜಮ್ಮನವರಿಗೆ ವಿಶೇಷ ಕರೆ ಕಳುಹಿಸಿ ಬರಮಾಡಿಕೊಂಡರು.

ರಾಜಮ್ಮನವರ ಸಾಹಿತ್ಯ ಕೃಷಿ, ಕಾವ್ಯ ಮತ್ತು ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲೂ ಅವರು ಕೃತಿ ರಚನೆಮಾಡಿದ್ದಾರೆ. ಅನ್ನದ ಸಮಸ್ಯೆಯನ್ನು ನಿರೂಪಿಸಿ 'ಉನ್ಮತ್ತ ಭಾಮಿನಿ' ಎಂಬ ಏಕಾಂಕವನ್ನೂ, ಸ್ವಾತಂತ್ರ್ಯದ ಕಲ್ಪನೆಯನ್ನು ವಿವರಿಸಿ "ಸ್ವರ್ಗ ನಿರಸನ" ಎಂಬ ಗದ್ಯ ನಾಟಕವನ್ನೂ ಅವರು ರಚಿಸಿದ್ದಾರೆ. ಅವರ ಕಾದಂಬರಿ "ಕಾಡು ಊರಾಯಿತು, ಮನೆ ದೇಗುಲವಾಯಿತು" ಪ್ರಕಟವಾಗಬೇಕಾಗಿದೆ. ಅವರ ರಾಷ್ಟ್ರಭಕ್ತಿ ಗೀತೆಗಳು, ಭಾವಗೀತೆಗಳು ಸಂಕಲನ ರೂಪದಲ್ಲಿ ಹೊರಬೀಳದಿದ್ದರೂ, ಹಾಡಿನ ರೂಪದಲ್ಲಿ ಹೆಚ್ಚು ಜನಪ್ರಿಯವಾಗಿವೆ.

ಅವರ ಇತರ ಕೆಲವು ಕೃತಿಗಳು ದುಂದುಭಿ (ಪ್ರಹಸನ), ಮಕ್ಕಳಿಗಾಗಿ ಎರಡು ಪುಟ್ಟ ನಾಟಕಗಳು–"ಧ್ರುವ" ಮತ್ತು "ಕೃಷ್ಣನ ಬಾಲಲೀಲೆ" "ಭಾರತೀಯ ಸಂಗೀತ ದರ್ಶನ" (ಪ್ರಬಂಧ), ಪು.ತಿ.ನ. ಅವರ ಅಹಲ್ಯೆಯ ವಿಮರ್ಶೆ, ಜಯದೇವ ಮತ್ತು ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರುಗಳನ್ನು ಕುರಿತ ಪ್ರಬಂಧಗಳು, "ಲೋಕಾಭಿರಾಮ" ಪದ್ಯರೂಪದಲ್ಲಿ ಹರಟೆಗಳ ಸಂಕಲನ, "ಅಂತರ್ಜ್ಯೋತಿ" "ಬಿಂದು ಸುಂದರ" ಎಂಬ ಹೊಸ ಪ್ರಯೋಗ (ಮಕ್ಕಳಿಗಾಗಿ) ಇನ್ನೂ ಬೆಳಕು ಕಾಣಬೇಕಾಗಿದೆ.

ರಾಜಮ್ಮನವರು ಪತ್ರಕರ್ತೆಯೂ ಹೌದು. ತಿ. ತಾ. ಶರ್ಮರು "ವಿಶ್ವಕರ್ನಾಟಕ" ಪತ್ರಿಕೆಯನ್ನು ನಡೆಸುತ್ತಿದ್ದಾಗ, ರಾಜಮ್ಮನವರ ಕೊಡುಗೆಯೂ ಆ ಪತ್ರಿಕೆಯಲ್ಲಿರುತ್ತಿತ್ತು. ಎಷ್ಟೋಬಾರಿ ಪತ್ರಿಕೆಯ ಪೂರ್ಣ ಹೊಣೆಗಾರಿಕೆಯನ್ನು ಅವರೇ ಹೊತ್ತಿದ್ದೂ ಉಂಟು. ಸಂಪಾದಕೀಯವನ್ನೂ ಅವರು ಅನೇಕ ಸಲ ಬರೆದಿದ್ದಾರೆ. ನೆನಪಿನ ಸಾಲುಗಳು ಗರಿಗೆದರಿ ನಿಂತಾಗ, ಅವರು ಒಮ್ಮೆ, ೧೯೪೧ರಲ್ಲಿ ಪ್ರೆಸ್ಸಿಗೆ ಬೆಂಕಿ ಬಿದ್ದ ಸಂದರ್ಭವನ್ನು ನೆನಸಿಕೊಂಡರು. ವಿದ್ಯುತ್ ತಂತಿಗಳು ಷಾರ್ಟ್ ಆದ್ದರಿಂದ ಬೆಂಕಿ ಹತ್ತಿಕೊಂಡಿತು. ರಾಜಮ್ಮನವರ ಸಕಾಲಿಕ ಕಾರ್ಯದಿಂದ ಬೆಂಕಿಯನ್ನು ಬೇಗ ಆರಿಸಲು ಸಾಧ್ಯವಾಯಿತು.

ಈ ಇಳಿ ವಯಸ್ಸಿನಲ್ಲೂ ರಾಜಮ್ಮನವರು ಸಂಗೀತ ಪಾಠಗಳನ್ನಿಟ್ಟುಕೊಂಡಿದ್ದಾರೆ. ಅವರ ಗಾನ ವಿದ್ಯಾ ಮಂದಿರ ಇಂದಿಗೂ ಎಷ್ಟೋ ಮಂದಿಗೆ ವೀಣಾವಾದನ ಮತ್ತು ಹಾಡುಗಾರಿಕೆಗಳ ಶಿಕ್ಷಣ ನೀಡುತ್ತಿದೆ.

ರಾಜಮ್ಮನವರ ಜೀವನದಲ್ಲಿ ಅನೇಕ ಏರುಪೇರುಗಳಿದ್ದು, ಅವರದು ಪುಟಗೊಂಡ ಅನುಭಾವಿ ಜೀವನವಾಗಿದೆ. ೧೯೪೫ ರಿಂದ ಸುಮಾರು ಹತ್ತು ವರ್ಷಗಳ

ಕಾಲ ಅವರು ಯಾವ ಕಾರ್ಯ ಚಟುವಟಿಕೆಗಳನ್ನೂ ಇಟ್ಟುಕೊಂಡಿರಲಿಲ್ಲ. ಕಾರಣ, ಅವರ ಏಕಮಾತ್ರ ಪುತ್ರಿಯ ಮರಣದೊಂದಿಗೆ ಆರಂಭವಾದ ದುರಂತಗಳ ಸಾಲು, ಅನಾರೋಗ್ಯ ಮತ್ತು ಆರ್ಥಿಕ ಅಡಚಣೆಗಳು. ಪುನಃ ೧೯೫೫ರಲ್ಲಿ ಅವರ " ಮಹಾ ಸತಿ " ಪ್ರಕಟವಾಯಿತು.

ಇಂದು ಕನ್ನಡ ಸಾಹಿತ್ಯವಾಹಿನಿ ಪ್ರವಹಿಸುತ್ತಿರುವ ರೀತಿಯನ್ನು ಪ್ರಸ್ತಾಪಿಸಿ " ಭಾರತಿ " ಅವರು ನಮ್ಮ ಬರಹಗಾರರು ಕಥೆ ಕಾದಂಬರಿಗೆ ಆದ್ಯತೆ ನೀಡುವ ಪ್ರವೃತ್ತಿ ಟೀಕಿಸಿದರು. ಮಹಿಳಾ ಬರಹಗಾರರಂತೂ ಕಲ್ಪನಾ ಸಾಹಿತ್ಯ ಬಿಟ್ಟು, ಬೇರೊಂದರ ಕಡೆಗೂ ದೃಷ್ಟಿಯನ್ನೇ ಹಾಯಿಸುವುದಿಲ್ಲ. ವಿಚಾರ ಸಾಹಿತ್ಯ ನಿರ್ಮಾಣಕ್ಕೆ ಅವರೇಕೆ ಪ್ರಯತ್ನಿಸಬಾರದು? ಕಾದಂಬರಿಗಳನ್ನು ಜನ ಹೆಚ್ಚು ಓದುತ್ತಾರೆಂಬ ಕಾರಣದಿಂದ, ವಿಚಾರ ಸಾಹಿತ್ಯವನ್ನು ಕಡೆಗಾಣಿಸುವುದು ತಪ್ಪಲ್ಲವೇ? ವಿಚಾರ ಪ್ರಚೋದಕ ಸಾಹಿತ್ಯ ನಿರ್ಮಾಣ, ಪ್ರತಿಭೆಯುಳ್ಳವರ ಮೊದಲ ಕರ್ತವ್ಯವಲ್ಲವೇ? ಎಂದು ಕೇಳಿದರು. ಓದಿ ಮರೆಯುವ ಸಾಹಿತ್ಯಕ್ಕಿಂತ, ಶಾಶ್ವತವಾಗಿ ನಿಲ್ಲುವ ಕೃತಿಗಳ ರಚನೆಯಾಗಬೇಕು ಎಂದು ಕಳಕಳಿಯಿಂದ ನುಡಿದರು. ಬರಹಗಾರರು ಯೋಚಿಸಬೇಕಾದ ವಿಷಯವಿದು.

ಬಹುಮುಖ ಪ್ರತಿಭೆಯ ಶ್ರೀಮತಿ ರಾಜಮ್ಮನವರ, ನಮ್ಮ ಭಾರತೀಯ ಸ್ತ್ರೀ ಪರಂಪರೆಯ ಪ್ರತೀಕವೆಂದು ಧಾರಾಳವಾಗಿ ಹೇಳಬಹುದು. ★

ಗೆದ್ದು ಬಾ ಕ್ಲೇಶಗಳ ಭದ್ರವಪ್ಪುದು ಬಾಳು.
ಬುದ್ಧ ಪೇಳಿದ ತತ್ವದಂತೆ ನಿರ್ಬಾಧಿತ
ನಿದ್ದೆಯಲ್ಲಿರುವಂಥ ಶುದ್ಧ ಸತ್ವವನಾಂತು
ಉದ್ಧರಿಸು ಬಾಳು, ವರ್ಧಿಸಲು ವಿನಿಯೋಗಿಸು.

ಕಾಲ ವಿನಿಯೋಗದಲಿ ಬಾಳು ವರ್ಧಿಸಲಿ.
ಬಾಳ ವಿನಿಯೋಗದಲಿ ಕಾಲ ವರ್ಧಿಸಲಿ.
ಶೀಲ ಸಂವರ್ಧನವೆ ಸತ್ಯದಾ ವಿಜಯವೆ
ಬಾಳಿನ ಪ್ರಯೋಗದ ಹಾರೈಕೆಯಾಗಲಿ.

ತಾಯಿ ಭಾರತಿ

● ಆದ್ಯ ರಾಮಾಚಾರ್ಯ

ಬೆಂಗಳೂರು ನಗರದ ವಿಶ್ವೇಶ್ವರಪುರ ಬಡಾವಣೆಯಲ್ಲಿರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಮಂದಿರದಿಂದ ಹೊರಬಿದ್ದೊಡನೆಯೇ ಎದುರು ಭಾಗದಲ್ಲಿ "ಗಾನ ವಿದ್ಯಾ ವಿಹಾರ" ಎಂಬ ಹೆಸರಿನ ಬೋರ್ಡು ಕಾಣಸಿಗುತ್ತಲಿತ್ತು. ಹತ್ತಾರುವರುಷಗಳ ಹಿಂದಿನ ಮಾತಿದು. ಅಂದು ಈ ಮೈಸೂರೆಂಬುದು ವಿಶಾಲ ಎಂಬ ಹೆಸರನ್ನು ಇನ್ನೂ ಅಂಟಿಸಿಕೊಂಡಿರಲಿಲ್ಲ. ಹರಿದು ಹಂಚಿಹೋದ ನೆಲ, ಜನ, ಒಂದಾಗುವದಕ್ಕೆ ಇಲ್ಲಿಯ ಕೆಲವರು, ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸುತ್ತಿದ್ದರು. ಈ ತತ್ವಕ್ಕಾಗಿ ಪರ ಹಾಗೂ ವಿರೋಧ ಗುಂಪುಗಳು ಹುಟ್ಟಿಕೊಂಡಿದ್ದವು. ಇಲ್ಲಿಯ ಕರ್ನಾಟಕ-ಏಕೀಕರಣದ ಚಳುವಳಿಗೆ ಅಧ್ವರ್ಯರಾದ ಶ್ರೀ ತಿ.ತಾ. ಶರ್ಮರನ್ನು ಕಾಣಲು ನಾನು ಆಗಾಗ ಗಾನವಿದ್ಯಾ ವಿಹಾರದ ಮೆಟ್ಟಲನ್ನು ಹತ್ತುತ್ತಿದ್ದೆ.

ಒಂದು ಚಿಕ್ಕ ಕೋಣೆಯಲ್ಲಿ "ಗಾನವಿದ್ಯಾ ವಿಹಾರ" ಸಂಸ್ಥೆಯು ತನ್ನನ್ನು ಹುಡುಕಿಕೊಂಡು ಬಂದ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಂಡು ಬರುವ ಸಂಪ್ರದಾಯವನ್ನಿಟ್ಟುಕೊಂಡಿತ್ತು. ವಯೋವೃದ್ಧರಾದ ಮುತ್ತೈದೆಯೊಬ್ಬರು ಈ ಶಾಲೆಯ ಅಧ್ಯಾಪಕರಾಗಿ ಕೆಲಸಕಾರ್ಯ ನಿರ್ವಹಿಸುತ್ತಿದ್ದರು. ಸಾಯಂಕಾಲ ಆರು ಗಂಟೆಗೆ ನಾನು ಹೋಗುತ್ತಿದ್ದೆ. ಆಗ ಶರ್ಮರು ಬರೆಯುವದನ್ನು ನಿಲ್ಲಿಸಿ, ಮುಂಭಾಗದ ವರಾಂಡಾಕ್ಕೆ ಬಂದು ಕೂಡುತ್ತಿದ್ದರು. ಶರ್ಮರಿಗೆ ಕಿವಿ ಸ್ವಲ್ಪ ಮಾಂದ್ಯ. ನಾನು ಉತ್ತರ ಕನ್ನಡದವನು, ಹೀಗಾಗಿ ನಮ್ಮ ಮಾತು ಕತೆಗಳಲ್ಲಿ ಗೋಲಗುಮ್ಮಟವೇ ಬಂದಿಳಿಯುತ್ತಿತ್ತು, ನಮ್ಮ ಹರಟೆಯಿಂದ ಸಂಗೀತ ಪಾಠಕ್ಕೆ ವ್ಯತ್ಯಯ ಉಂಟಾಗುತಿತ್ತು. ಹೀಗಿದ್ದರೂ ಸಹ ಅಲ್ಲಿಯ ಅಧ್ಯಾಪಕರಾಗಲಿ ಅಥವಾ ಪಾಠಕ್ಕೆ ಬಂದ ಮಕ್ಕಳಾಗಲೀ ಒಂದು ದಿನವೂ ಬೇಸರಪಡುತ್ತಿರಲಿಲ್ಲ. ತಮ್ಮ ಪಾಠದಲ್ಲಿಯೇ ಅವರು ತಲ್ಲೀನರಾಗುತ್ತಿದ್ದರು.

ಒಂದುಸಲ ನನ್ನ ತಂದೆಯ ಬಾಲ್ಯ ಸ್ನೇಹಿತರಾದ ಶ್ರೀ ಮೊಹರೆ ಹನುಮಂತ ರಾಯರು ಬಂದಿದ್ದರು. ಇವರು 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಸಂಪಾದಕ ರಾಗಿದ್ದರಲ್ಲದೆ ಕನ್ನಡ ಪತ್ರಿಕಾವೃತ್ತಿಯನ್ನು ಅಖಿಲ ಭಾರತ ಮಟ್ಟದಲ್ಲಿ ಪ್ರತಿನಿಧಿಸು ವಂತೆ ಮಾಡಿದ ಹಿರಿಯರಲ್ಲಿ ಮೊದಲಿಗರಾಗಿದ್ದರು. ರಾಯರು ಇಲ್ಲಿರುವಷ್ಟು ಕಾಲ ತಮ್ಮ ಹಳೆಯ ಮಿತ್ರರಾದ ಶ್ರೀ ಡಿ.ವಿ.ಜಿ., ಶ್ರೀ ಮಾಸ್ತಿ, ಶ್ರೀ ವಿ.ಸೀ., ಪಾರ್ಥನಾರಾಯಣ ಪಂಡಿತರು ಹೀಗೆ ಯಾರಾರನ್ನೋ ಹುಡುಕಿಕೊಂಡು ಹೋಗಿ ಮಾತನಾಡಿಸಿ ಬರುತ್ತಿದ್ದರು. ಈ ಕಾರ್ಯಕ್ರಮದಲ್ಲಿ ಅವರು ನನ್ನನ್ನೂ ಸಂಗಡ ಕರೆದುಕೊಂಡು ಹೋಗುತ್ತಿದ್ದರು. ಇದರಿಂದಾಗಿ ಇಲ್ಲಿಯ ಹಿರಿಯಸಾಹಿತಿಗಳ ಪರಿಚಯ ನನಗಾಗುವಂತಾಯಿತು.

ಒಂದುದಿನ ಹನುಮಂತರಾಯರು "ಶ್ರೀಮತಿ ರಾಜಮ್ಮನವರ ಪರಿಚಯ ಇದೆಯೇ?" ಎಂದು ಕೇಳಿದರು.

"ಯಾವ ರಾಜಮ್ಮನವರು?"

"ಭಾರತಿ ಎಂಬ ಕಾವ್ಯನಾಮದಿಂದ 'ಮಹಾಸತಿ' ಎಂಬ ಪುಸ್ತಕ ಬರೆದಿದ್ದಾರಲ್ಲ ಅವರು. ಈ ತಾಯಿ ಇಲ್ಲಿಯ ಪ್ರಸಿದ್ಧ ವೀಣಾ ವಿದ್ವಾಂಸರಾಗಿದ್ದ ಪೂಜ್ಯ ವೀಣೆ ಶೇಷಣ್ಣನವರ ಶಿಷ್ಯೆ. ಶರ್ಮರ ಬಗ್ಗೆ ಏನೆಲ್ಲ ಬರೆದು ಕಳಿಸಿದ ನಿನಗೆ ಇವರ ಪರಿಚಯ ವಿಲ್ಲ ಎಂದರೆ ಅಚ್ಚರಿಯಾದೀತು. ಈ ದಂಪತಿಗಳಿಬ್ಬರೂ ರಾಷ್ಟ್ರಪ್ರೇಮಿಗಳು. ಮಹಾತ್ಮ ಗಾಂಧಿಯವರಿಗೆ ರಾಜಮ್ಮನವರನ್ನು ಕಂಡರೆ ಸ್ವಂತ ಮಗಳನ್ನು ಕಂಡಷ್ಟು ಆನಂದವಾಗುತ್ತಿತ್ತು. ಅವರು ರಾಜಮ್ಮನವರನ್ನು ಕರೆಸಿ ಅವರಿಂದ ವೀಣೆ ನುಡಿಸಿ, ಕೇಳಿ ಆನಂದಿಸುತ್ತಿದ್ದರು. ಒಂದುಸಲ ಶರ್ಮಾಜಿಯೊಬ್ಬರೇ ಬಾಪೂಜಿಯನ್ನು ಕಾಣಲು ಹೋದಾಗ ರಾಜಮ್ಮನನ್ನು ಕರೆತರಲಿಲ್ಲವೇಕೆ? ಎಂದು ಬಾಪೂ ಆಕ್ಷೇಪಿಸಿದುದೂ ಉಂಟು. ಇಂದು ನಿನಗೆ 'ಮಹಾಸತಿ' ಪುಸ್ತಕ ತಂದುಕೊಡುವೆ. ಅದನ್ನೋದು. ಅನಂತರ ಈ ದಂಪತಿಗಳನ್ನು ಕಾಣಲು ಹೋಗುವಾ" ಎಂದು ಹೇಳಿದರು.

ಮೊಹರೆಯವರು ಕೊಟ್ಟ ಈ ಶಬ್ದ ಚಿತ್ರದಿಂದ ನನ್ನ ಮನಸ್ಸು ಗಾನವಿದ್ಯಾ ವಿಹಾರದಲ್ಲಿ ಪಾಠ ಹೇಳುತ್ತಿದ್ದ ಆ ಮುತ್ತೈದೆಯನ್ನು ಸ್ಮರಿಸಿಕೊಂಡಿತು. ತೇಜಃಪುಜ ವಾದ ಆ ನೋಟ ಒಂದು ಕ್ಷಣ ನನ್ನ ಮುಂದೆ ಸುಳಿದಂತಾಯಿತು. ಇವರೇ ಆ ರಾಜಮ್ಮ ನವರು. ಹನುಮಂತರಾಯರಿಂದ ಹೊಗಳಿಸಿಕೊಂಡ ಈ ತಾಯಿಯ ಕೃತಿ ಎಂಥದಾಗಿರ ಬೇಕು ಎಂದು ಯೋಚನೆಗಿಟ್ಟುಕೊಂಡಿತು.

ಚಿಕ್ಕ ಹೊತ್ತಿಗೆ ಮಹಾಸತಿಯನ್ನೋದಿದಾಗ ಆ ಭ್ರಮೆ ನಿರಸನವಾಗಿ ಈ ತಾಯಿಯನ್ನು ಪಡೆದ ನಮ್ಮ ನಾಡು ಧನ್ಯ, ಈ ನುಡಿಯನ್ನು ಹೊಂದಿದ ನಮ್ಮ ಕನ್ನಡಸಾಹಿತ್ಯ ಗ್ರಂಥ ಭಂಡಾರವು ಸಾರ್ಥಕವಾಯಿತು ಎನಿಸಿತು.

ಇಷ್ಟು ದಿನಗಳ ಕಾಲ ನಾನು ಇವರ ಪರಿಚಯ ಮಾಡಿಕೊಳ್ಳಲಿಲ್ಲವಲ್ಲ ಎಂದು ಹಳಹಳಿಸಿದೆ. ಮರುದಿನ ಹನುಮಂತರಾಯರೊಂದಿಗೆ ಹೋಗಿ ಈ ದಂಪತಿಗಳನ್ನು ಕಂಡು ಗಂಟೆಗಟ್ಟಲೆ ಹರಟೆಹೊಡೆದು ಬಂದೆವು.

ಅಂದು ಈ ತಾಯಿ 'ಭಾರತಿ'ಯ ಪರಿಚಯವನ್ನು ಹನುಮಂತರಾಯರು ಮಾಡಿ ಕೊಟ್ಟರು. ಮುಂದೆ ಆ ಪರಿಚಯ ಆತ್ಮೀಯವಾಗಿ ಬೆಳೆಯಿತು. ಈ ದಂಪತಿಗಳು ಕಾಲಾಂತರದಲ್ಲಿ ಶಂಕರಪುರದ ರಂಗರಾವ್ ರೋಡಿನಲ್ಲಿರುವ ನನ್ನ ಮನೆಯ ಮುಂಭಾಗ ದಲ್ಲಿಯೇ ವಾಸಕ್ಕೆಂದು ಬಂದರು. ನನ್ನನ್ನು ತಮ್ಮ ಚಿರಂಜೀವಿಯಂತೆ ಕಂಡು ಅನು ಗ್ರಹಿಸಿದರು. ಅವರ ಈ ಅಂತಃಕರಣವು ನನ್ನ ಮಕ್ಕಳಿಗೂ ಮೀಸಲಾಗಿದೆ. ಈ 'ಅಜ್ಜ-ಅಜ್ಜಿ'ಯನ್ನು ಹುಡುಕಿಕೊಂಡು ನನ್ನ ಮಕ್ಕಳು ಆಗಾಗ ಹೋಗಿ ಬರುತ್ತವೆ.

ಸುಸಂಸ್ಕೃತ ಮನೆತನದಲ್ಲಿ ಜನ್ಮತಾಳಿದ ರಾಜಮ್ಮನವರು ಕೈಹಿಡಿದು ನಡೆದು ಕೊಂಡು ಬಂದ ಮನೆತನವಾದರೂ ಸಹ, ಇತಿಹಾಸ ಪ್ರಸಿದ್ಧವಾದ ತಿರುಮಲೆ ತಾತಾ ಚಾರ್ಯರ ಮನೆತನ, ಈ ಮನೆತನದ ಹಿರಿಯರು ಕರ್ನಾಟಕ ರಾಜ್ಯ ರಮಾರಮಣ ನೆಂದು ಖ್ಯಾತನಾದ ವಿಜಯನಗರದ ಕೃಷ್ಣದೇವರಾಯನಿಗೆ ಕಿರೀಟವಿಟ್ಟು ಆಶೀರ್ವಾದ ಮಾಡಿದ ತಪಃ ಪ್ರಭಾವಿಯಾದ ಮನೆತನ. ಇಂಥ ಮನೆತನದಲ್ಲಿ ಹುಟ್ಟಿದ ಶರ್ಮರು ರಾಜಮ್ಮನವರಿಗೆ ಬಾಲ್ಯದಿಂದಲೇ ಸುಪರಿಚಿತರು. ಕೂಡಿ ಆಡಿ ಬೆಳೆದವರು. ಅತಿಚಿಕ್ಕ ವಯಸ್ಸಿನಲ್ಲಿಯೇ ಸಂಸಾರದ ಭಾರವನ್ನು ಹೊತ್ತವರು. ಶರ್ಮರು ತಮ್ಮ ತಾರುಣ್ಯ ದಲ್ಲಿ ಕೈಲಿದ್ದ ಕೆಲಸ ಬಿಟ್ಟು ವೃತ್ತಪತ್ರಿಕಾ ವೃತ್ತಿಯನ್ನು ಕೈಕೊಂಡಾಗ ರಾಜಮ್ಮ ನವರು ಅವರಿಗೆ ಆಶ್ರಯವಾಗಿ ನಿಂತರು. ರಾಷ್ಟ್ರದ ಬಂಧ ವಿಮೋಚನೆಗಾಗಿ ಸತಿಪತಿ ಗಳಿಬ್ಬರೂ ಮನಃಪೂರ್ವಕವಾಗಿ ಸೇವೆಸಲ್ಲಿಸಿದರು. ಇಬ್ಬರ ಜೀವನದ ಧ್ಯೇಯವೂ ಒಂದೇ ಆಗಿತ್ತು. ಇಬ್ಬರೂ ಸ್ವಾತಂತ್ರ್ಯ ಪ್ರೇಮಿಗಳು, ಧ್ಯೇಯವೂ ಒಂದೇ ಆಗಿತ್ತು. ಸಂಗೀತ ಸಾಹಿತ್ಯದಲ್ಲಿ ಇಬ್ಬರಿಗೂ ಸಮನಾದ ಅಭಿರುಚಿ ಇತ್ತು. ಇಂಥ ಆದರ್ಶ ಕುಟುಂಬವನ್ನು ಕಂಡ ಗಾಂಧೀಜಿಯವರೊಬ್ಬರೇ ಏಕೆ, ಕನ್ನಡನಾಡೇ ಹೆಮ್ಮೆಪಡು ತ್ತಿತ್ತು.

ರಾಜಮ್ಮನವರಿಗೆ ಶಾಲೆಯಲ್ಲಾದ ಶಿಕ್ಷಣ ಅತ್ಯಲ್ಪ. ಆದರೆ ಅವರು ತಮ್ಮ ಮನೆಯಲ್ಲಿ ಪಡೆದ ಹಾಗೂ ಮನದಿಂದ ಹೊಂದಿದ ಶಿಕ್ಷಣ ಮಾತ್ರ ಅತೀ ಮಹತ್ವ ವಾದುದು. ಅವರು ರಚಿಸಿದ ತಪಸ್ವಿನಿ, ಮಹಾಸತಿ, ದುಂದುಭಿ ಮೊದಲಾದ ಕೃತಿ ಗಳು ಕನ್ನಡ ಸಾಹಿತ್ಯದಲ್ಲಿಯೇ ಮಹೋನ್ನತ ಕೃತಿರತ್ನಗಳೆಂದು ಕರೆಸಿಕೊಂಡಿವೆ. ಈ ಕೃತಿಗಳಿಂದ ರಾಜಮ್ಮನವರ ಸಂಸ್ಕಾರ ಎಂಥದು ಎಂಬುದನ್ನು ತಿಳಿದು ನೋಡ ಬಹುದಾಗಿದೆ.

ರಾಜಮ್ಮನವರು ಇಂದು ತುಂಬ ಬಳಲಿದ್ದಾರೆ. ಅವರ ದೇಹ ತುಂಬ ಜರ್ಝರಿತ ವಾಗಿದೆ. ಹೀಗಿದ್ದರೂ ಸಹ ಅವರ ಸ್ವಾತಂತ್ರ್ಯ ಪ್ರವೃತ್ತಿಗೆ ಧಕ್ಕೆ ಎಂಬುದಿಲ್ಲ. ಸಾಹಿತ್ಯ ರಚಿಸಬೇಕೆಂಬ ಅವರ ಹಂಬಲ ಕಡಿಮೆಯಾಗಿಲ್ಲ. ಪಾಠ ಹೇಳಿಕೊಡುವ ಲವಲವಿಕೆಗೆ ಕುಂದುಂಟಾಗಿಲ್ಲ. ಮನೆಯ ಕೆಲಸಕಾರ್ಯಗಳನ್ನೆಲ್ಲ ತಾವೇ ಮಾಡಿ ಕೊಳ್ಳುವ ಮಡಿಯ ಸ್ವಭಾವ ಅವರದು. ದಿನಗಳೆದಂತೆ ಶಕ್ತಿ ಶಿಥಿಲವಾಗುತ್ತಿದ್ದರೂ ಅವರು ಯಾವುದನ್ನೂ ಬಿಟ್ಟು ಕೊಡುವವರಲ್ಲ. ವ್ರತ ನಿಯಮಗಳಲ್ಲಿ ಅಪಾರವಾದ

ನಂಬಿಕೆ ಅವರಿಗಿದೆ. ರಾತ್ರಿಯ ಹತ್ತು ಗಂಟೆಯ ನಂತರ ಅವರ ಲೇಖನ, ವಾಚನ ಕಾರ್ಯಕ್ರಮ ಆರಂಭವಾಗುತ್ತದೆ. ಅವರ ಈ ಸ್ವಾತಂತ್ರ್ಯ ಪ್ರೇಮ ಇಸ್ನೊಬ್ಬರಿಗೆ ಎಂದೂ ಭಾರವೆನಿಸಿಲ್ಲ. ತಾವಾಯಿತು, ತಮ್ಮ ದಿನಚರಿಯಾಯಿತು.

ಈ ದಂಪತಿಗಳಲ್ಲಿ ಆಕಸ್ಮಿಕವಾಗಿ ಕಾಣಿಸಿಕೊಳ್ಳುವ ಮುನಿಸು, ಮುಂಗೋಪ, ಸರಸ ಸಲ್ಲಾಪಗಳ ಪರಿಚಯವೂ ನನಗಿದೆ.

"ನಾನೂ ಅಂತ ಈ ಮಹಾನುಭವರೊಂದಿಗೆ ಈಸಿದ್ದೇನೆ. ಮಹಾ ಮುಂಗೋಪಿಗಳು. ಇನ್ನೊಬ್ಬರಿಂದ ಈ ಜೀವನ ಸಾಧ್ಯವೇ ಅಪ್ಪ?" ಎಂದು ರಾಜಮ್ಮನವರು ಹೇಳಿದಲ್ಲಿ, ಅಂದು ಶರ್ಮಾಜಿಯವರು ಯಾವದೋ ಭಾಷಣಕ್ಕೆಂದು ಹೋದವರು ಗಂಟೆ-ನಾಕಾದರೂ ಮನೆಗೆ ಬಂದಿಲ್ಲ ಎಂದು ನಾವು ತಿಳಿದುಕೊಳ್ಳಬೇಕು.

"ಈ ಮನೆಗೆ ಬರೋ ಜನವೆಲ್ಲ ಈ ಮಹಾನುಭಾವರನ್ನೇ ಹುಡುಕಿಕೊಂಡು ಬರುತ್ತಾರೆ. ಇವರಿಗೆ ಜನ ಸಿಕ್ಕರೇ ಸಾಕು, ತಾವಾಯಿತು ತಮ್ಮ ಪ್ರಪಂಚವಾಯಿತು. ಈ ಮನೆಯಲ್ಲಿ ನಾನೊಬ್ಬಳಿದ್ದೇನೆ ಎಂಬ ಅರಿವಿದೆಯೇ? ಮಹಾರಾಯರು ಸ್ಥಿತಪ್ರಜ್ಞರು" ಎಂದು ರಾಜಮ್ಮನವರು ಹೇಳಿದ ಮಾರನೆಯದಿನ ಬೆಳಗಾಗುತ್ತಲೆ ಶರ್ಮರು ಕೈಯಲ್ಲಿ ಕಾಫಿಪುಡಿಯ ಪೊಟ್ಟಣ ಹಿಡಿದುಕೊಂಡು ಹೊರಬರುವ ದೃಶ್ಯ ಕಾಣಬಹುದು. "ಏನಿದು?" ಎಂದು ಯಾರಾದರೂ ಮಾತನಾಡಿಸಿದರೆ "ನಮ್ಮಾಕೆಗೆ ಇಂಥದೇ ಕಾಫಿ ಪುಡಿಯಾಗಬೇಕು. ಅಂದರೇನೆ ಅದು ಸ್ವೀಕಾರಕ್ಕೆ ಯೋಗ್ಯ" ಎಂದು ಹೇಳಿ ನಮ್ಮನ್ನು ನಗಿಸಿ, ತಾವೂ ನಕ್ಕು ಹೊರಡುತ್ತಾರೆ.

ಸತಿ-ಪತಿಗಳಿಬ್ಬರೂ ಮನೆಯ ಮುಂದಿನ ಕೈತೋಟದಲ್ಲಿ ಕುಳಿತ ನೋಟವಂತೂ ಬಹು ಸೊಗಸಾಗಿರುತ್ತದೆ. ರಾಜಮ್ಮನವರ ಮಾತು ಬಲು ಮೃದು. ಶರ್ಮರಿಗೆ ಅದು ಕೇಳಿಸುವದಿಲ್ಲ. ಆಗ ಏತನ್ಮಧ್ಯೆ ಈ ಅಸ್ಮಾದಿಕರ ಪ್ರವೇಶವಾಗುತ್ತದೆ. ಸರಿ ಆಹವಾಲುಗಳಿಗೋ, ಚರ್ಚೆಗೋ ಆರಂಭ.

ರಾಜಮ್ಮನವರ ಅಂತರಂಗವು ದೇಹದ ಶಿಥಿಲತೆಯಿಂದ ಕೊಂಚವೂ ಕುಸಿದಿಲ್ಲ. ಬದಲಾಗಿ ಕೃತಿರಚನೆಗಾಗಿ ಹಂಬಲಿಸುತ್ತಿದೆ. 'ನಾನು ಮಾಡಿದ್ದು ತೀರ ಅಲ್ಪ. ಮಾಡಬೇಕಾದುದು ಇನ್ನೂ ತುಂಬ ಇದೆ. ಆದರೆ ನನ್ನ ಆಶೆ ಈ ಜನ್ಮದಲ್ಲಿ ಈಡೇರಿತೆ?' ಎಂದು ಕೊರಗುತ್ತಿದ್ದಾರೆ. ಈ ದಂಪತಿಗಳಿಗೆ ಶಾರದೆಯು ಶತಮಾನಗಳ ಆಯುಸ್ಸು, ಸುಖಜೀವನ ದಯಪಾಲಿಸಿ ಅವರು ನಮಗೆ ಆಶೀರ್ವದಿಸುವಂತೆ ಅನುಗ್ರಹಿಸಲಿ. ★

ಸುಮ ಕೋಮಲ, ವಜ್ರ ಕಠಿಣ

● ಟಿ. ವೈದೇಹಿ

ನನ್ನ ಬಾಲ್ಯದಲ್ಲಿ, ಶಾಲೆಯಲ್ಲಿ ಒಂದು ಪ್ರಾರ್ಥನೆ ಹೇಳುತ್ತಿದ್ದುದು ನೆನಪಿದೆ. ಆ ಹಾಡು ಯಾವುದು ಗೊತ್ತೆ? "ಜೈ ಭಾರತ ಭುವಿಗೆ ಮಾತೆಗೆ ಜೈ ಪಾವನ ಮೂರ್ತಿಗೆ ಸನ್ಮಂಗಳವಾಗಲಿ ಸತತಂ"–ಇದೇ ಆ ಹಾಡು. ಆ ಹಾಡನ್ನು ಹಾಡಲು ನಮಗೆಲ್ಲ ತುಂಬಾ ಉತ್ಸಾಹ. ಆ ವಯಸ್ಸಿನಲ್ಲಿ ಬರಿಯ ಹಾಡಿನ ಧಾಟಿ ಮನಸ್ಸಿಗೆ ಹಿಡಿಸಿತ್ತು. ಇಷ್ಟು ಜನಪ್ರಿಯವಾದ ಹಾಡನ್ನು ಬರೆದವರು ಯಾರು ಎಂಬುದು ಗೊತ್ತಿರಲಿಲ್ಲ ನಮಗೆ.

ನಮ್ಮಕ್ಕನ ಮದುವೆ ಆಯಿತು. ನಮ್ಮ ಭಾವನವರು ಒಮ್ಮೆ ಅಂದರು, "ಈ ಹಾಡು ನಮ್ಮ ಚಿಕ್ಕಮ್ಮ ಬರೆದದ್ದು" ಎಂದು. ಅವರೇ ತಿರುಮಲೆ ರಾಜಮ್ಮನವರು. ನಮ್ಮ ಮನೆಗೂ ಮುಂಚಿನಿಂದ ಅವರ ಬಂಧುತ್ವವಿತ್ತು. ಅಕ್ಕನ ಮದುವೆಯಿಂದ, ಮತ್ತಷ್ಟು ಹತ್ತಿರವಾಯಿತು. ಇದರಿಂದ ಅನೇಕ ಸಲ ಬೆಂಗಳೂರಿನಲ್ಲಿ ಅವರ ಮನೆಗೆ ಬಂದು ಹೋಗುವ ಸಂದರ್ಭ ಬಂತು. ಹಬ್ಬ ಹರಿದಿನಗಳಲ್ಲಿ ಅಕ್ಕನ ಮನೆಯಲ್ಲಿ ಎಲ್ಲರೂ ಸೇರುತ್ತಿದ್ದೆವು. ಆಗ ಸಂಜೆ ಸಂಗೀತ ನಡೆಯುತ್ತಿದ್ದುದು ವಾಡಿಕೆ. ಆಗ ರಾಜಮ್ಮನವರು ವೀಣೆ ನುಡಿಸುವರು, ಹಾಡುವರು. "ಜೈ ಭಾರತ ಭುವಿಗೆ" ಹಾಡನ್ನು ಬರೆದವರು ಇವರೇ ಎಂದು ತಿಳಿದ ಮೇಲೆ ಅವರ ಬಗೆಗೆ ಒಂದು ಬಗೆಯ ಅಭಿಮಾನ ಬೆಳೆಯಿತು.

ಒಮ್ಮೆ ಅವರ ಮನೆಗೆ ಹೋದಾಗ ನನ್ನನ್ನು ಹಾಡು ಎಂದು ಕೇಳಿದರು. ಅವರ ಮುಂದೆ ನಾನು ಏನು ಹಾಡುವುದು ? ಹೆದರಿಕೆಯಾಯಿತು. ಹೇಗೋ ಅಂತೂ ಹಾಡಿ ಮುಗಿಸಿದೆ. "ಶಾರೀರ ಚೆನ್ನಾಗಿದೆ, ಇನ್ನೂ ಅಭ್ಯಾಸ ಮಾಡು" ಎಂದರು. ದೈವ ಕೃಪೆ, ಹಿರಿಯರ ಆಶೀರ್ವಾದದಿಂದ ಒಂದಿಷ್ಟು ಸಂಗೀತಾಭ್ಯಾಸವೂ ಆಯಿತು, ವಿದ್ಯಾ

ಭ್ಯಾಸವೂ ಮುಂದುವರಿಯಿತು. ಅಕ್ಕನ ಜೊತೆ, ತಾಯಿಯ ಜೊತೆ ಅವರ ಮನೆಗೆ ಹೋದಾಗಲೆಲ್ಲ ಅಭಿಮಾನದಿಂದ ಮಾತಾಡಿಸುತ್ತಿದ್ದರು.

ರಾಜಮ್ಮನವರ ಅಣ್ಣಂದಿರು ಕಂದಾಡೆ ಕೃಷ್ಣಅಯ್ಯಂಗಾರ್ಯರು ಸಂಗೀತಾಭಿಮಾನಿಗಳು, ರಸಿಕರು. ಅವರಿಗೂ ನನ್ನ ಬಗೆಗೆ ಬಹು ಅಭಿಮಾನ. "ರಾಜಿ ಹಾಡುವ ಕೀರ್ತನೆಗಳನ್ನು ನೀನೂ ಕಲಿತು ಹಾಡಬೇಕಮ್ಮ" ಎಂದು ಹೇಳುತ್ತಿದ್ದರು. (ರಾಜಮ್ಮನವರನ್ನು ಮನೆಯಲ್ಲಿ ಎಲ್ಲರೂ "ರಾಜಿ" ಎಂದು ಕರೆಯುವುದು ವಾಡಿಕೆ).

ಆ ಮನೆಯ ವಾತಾವರಣವೇ ವೈಶಿಷ್ಟ್ಯದಿಂದ ಕೂಡಿತ್ತು. ದೊಡ್ಡಮನೆ, ಮನೆ ತುಂಬಾ ಜನ, ವಿದ್ಯಾರ್ಥಿಗಳು, ಮಕ್ಕಳು, ಸ್ನೇಹಿತರು, ಬಂಧುಗಳು ಇರುತ್ತಿದ್ದರು. ಬಂದು ಹೋಗುವವರಂತೂ ಲೆಕ್ಕವೇ ಇಲ್ಲ, ಹೀಗಾಗಿ ಆ ಮನೆಯಲ್ಲಿ ನಿತ್ಯ ಸಮಾರಾಧನೆ-ನಿತ್ಯ ಉತ್ಸವ! ರಾಜಮ್ಮನವರ ತಾಯಿ ಸೀತಮ್ಮ ಎಲ್ಲರ ಪಾಲಿಗೂ "ಅನ್ನಪೂರ್ಣೆ!" ಮನೆ ಕೆಲಸ, ಬಂದವರ ಊಟೋಪಚಾರ-ಎಲ್ಲ ಕೆಲಸಗಳೂ ಮನೆಯವರ ಪಾಲಿಗೆ. ಎಲ್ಲರೂ ಎಲ್ಲ ಕೆಲಸಕ್ಕೂ ಸಿದ್ಧ! ಇದು ಆ ಮನೆಯವರ ವಿಶೇಷ. ಅಂಥ ಮನೆಯಲ್ಲಿ ರಾಜಮ್ಮನವರಿಗೆ ಮನೆಗೆಲಸದ ಬಗ್ಗೆ ಶ್ರದ್ಧೆ ಏನೆಂದು ಹೇಳಬೇಕಾಗಿಲ್ಲ. ಅವರು ಏಳುವುದು ಬೆಳಿಗ್ಗೆ ೬ ಘಂಟೆಗೆ. ಮಲಗುವುದು ರಾತ್ರಿ ೧೨ಕ್ಕೋ ೧ ಘಂಟೆಗೋ. ಮನೆ ಕೆಲಸಗಳೆಲ್ಲ ಮುಗಿದ ಮೇಲೆ ಅಧ್ಯಯನ, ಬರೆಯುವುದು ವಾಡಿಕೆ. ಸಂಗೀತವೇ ಆಗಲಿ, ಸಾಹಿತ್ಯ ಸೃಷ್ಟಿಯೇ ಆಗಲಿ, ಬೇರೆ ಯಾವ ಬಗೆಯ ಆತಂಕಗಳೂ ಇರಬಾರದು ಎಂದು ಅವರು ಆ ಕೆಲಸವನ್ನ ರಾತ್ರಿಯೇ ಮಾಡುತ್ತಾರೆ.

ತುಂಬಿದ ಮನೆಯವರು ರಾಜಮ್ಮನವರು. ಅವರ ತಾತಂದಿರು, ವಿದ್ವಾನ್ ರಾಜಗೋಪಾಲಾಚಾರ್ಯರು, ದೊಡ್ಡ ಸಂಸ್ಕೃತ ಪಂಡಿತರು. ಲೂಯಿ ರೈಸರಿಗೆ ಅವರು ಸಂಸ್ಕೃತ ಪಾಠ ಹೇಳಿದವರಂತೆ. ಆ ಸಂಸ್ಕಾರ ಬಲ ರಾಜಮ್ಮನವರಲ್ಲೂ ಬೆಳೆದು ಬಂದಿದೆ. ಸಾಹಿತ್ಯ ಸೃಷ್ಟಿಗೆ ಪುಟಕೊಟ್ಟದ್ದೂ ಅವರ ವಂಶಾನುಗತವಾದ ಸಂಸ್ಕಾರ.

ರಾಜಮ್ಮನವರ ಹಿರಿಯ ಸೊಸೆಯಾಗಿ ಅವರ ಮನೆ ಸೇರಿದೆ. ನನಗೆ ಆ ಮನೆಯ ವಾತಾವರಣಕ್ಕೆ ಹೊಂದಿಕೊಳ್ಳಲು ಕಷ್ಟವಾಗಲಿಲ್ಲ. ಮನೆಗೆ ಅನೇಕ ಹಿರಿಯ ಸಾಹಿತಿಗಳೂ, ಕಲಾವಿದರೂ, ರಾಜಕಾರಣಿಗಳೂ ಬರುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ತಾವು ವೀಣೆ ನುಡಿಸುತ್ತಿದ್ದುದಲ್ಲದೆ ನನ್ನನ್ನೂ ಹಾಡು ಎಂದು ಹೇಳುವವರು ಅತ್ತೆಯವರು. ಜೀವನದ ಹೊಸ ರೂಪದ ಅನುಭವ ನನಗೆ ಆಗಲು ಪ್ರಾರಂಭವಾಯಿತು. ಆ ವಿದ್ವಜ್ಜನರ ಮಧ್ಯೆ ಅವರ ವಿಚಾರ ಪೂರ್ಣವಾದ ಮಾತುಕತೆ ಕೇಳುತ್ತಾ ಕೂಡುವುದೇ ಒಂದು ಯೋಗ! ಗಂಟೆಗಟ್ಟಲೆ ಮಾತು! ಅತ್ತೆಯವರು ಎದ್ದು ಬಿಸಿ ಬಿಸಿ ಕಾಫಿ ಮಾಡಿ ಎಲ್ಲರಿಗೂ ಕೊಟ್ಟದ್ದೂ ಉಂಟು. ಇಂದಿಗೂ ಅದೇ ಅಭ್ಯಾಸ, ಯಾವ ಹೊತ್ತಿನಲ್ಲಿ ಬಂದರೂ ಕಾಫಿ ಸೇವನೆಯಿಲ್ಲದೆ ಯಾರೂ ಹೊರಡುವಂತಿಲ್ಲ.

ಆಡಂಬರ ಜೀವನ, ಸುಖಮಯ ಜೀವನ–ಇವನ್ನು ಬಯಸಿದವರಲ್ಲ ಭಾರತಿಯವರು. ಸರಳ, ತೃಪ್ತ ಜೀವನ ಅವರದು. ವ್ಯಕ್ತಿತ್ವಕ್ಕೆ ಒಂದು ಬೆಲೆ ಇದೆಯೇ ವಿನಃ ಬಾಹ್ಯಾಡಂಬರಕ್ಕಲ್ಲ ಎನ್ನುವುದು ಅವರ ದೃಷ್ಟಿ. "ಸುಮ ಕೋಮಲ, ವಜ್ರ ಕಠಿಣ" ಅನ್ನುತ್ತಾರಲ್ಲ, ಹಾಗೆ ಮೃದು ಶರೀರ, ಶಾರೀರ. ನಡೆ ನುಡಿ ಮೃದು. ಆದರೆ ಒಮ್ಮೆ ಮಾಡಿದ ಸಂಕಲ್ಪವನ್ನ ಎಂದೂ ಬದಲಿಸುವವರಲ್ಲ. ಹಿಡಿದ ಪಟ್ಟನ್ನು ಸುಲಭವಾಗಿ ಬಿಡುವುದಿಲ್ಲ.

ಅವರ ಕೈ ಎಷ್ಟು ನಯವಾಗಿ ವೀಣೆ ಮೀಟಬಲ್ಲದೋ, ಎಷ್ಟು ರಮ್ಯ ನಾದ ಬರಿಸಬಲ್ಲದೋ ಅಷ್ಟೇ ರುಚಿಯಾದ ಪಕ್ವಗಳನ್ನು ಮಾಡಬಲ್ಲದು. ವಾಡಿಕೆಯಾಗಿ ಬರುವ ಸ್ನೇಹಿತರು, ವಿದ್ವಾಂಸರು, ಸಾಹಿತಿಗಳಿಗೆ ರುಚಿರುಚಿಯಾಗಿ ಅಡಿಗೆ ಮಾಡಿ ಬಡಿಸುವುದೆಂದರೆ ಅವರಿಗೆ ಬಹಳ ಉತ್ಸಾಹ. ಬಹಳ ಬೇಕಾದವರು ಬಂದಾಗ ಲೋಕಾಭಿರಾಮವೆಲ್ಲ ಆದ ಮೇಲೆ "ರಾಜಮ್ಮನವರೇ ಅವತ್ತು ನೀವು ಮಾಡಿದ್ರಲ್ಲ ಪುಳಿಯೋರೆ...." ಎಂದು ಮೆಲ್ಲಗೆ ಪೀಠಿಕೆ ಹಾಕಿದಾಗ, "ಅಯ್ಯೋ ಅದಕ್ಕೇನಂತೆ ನಾಳೆ, ಬನ್ನಿ ಮಾಡೋಣ" ಅನ್ನುತ್ತಾರೆ. ಸರಿ ಅವರ ಆಸೆ ತೀರುವವರೆಗೂ ಅತ್ತೆಯವರ ಆತಿಥ್ಯ "ಸಾಕು, ಸಾಕು".... ಅನ್ನುತ್ತಿದ್ದರೂ, ಇನ್ನಷ್ಟು ಬಡಿಸುವ ಪೂರ್ವಿಕರ ಪದ್ಧತಿ ಅವರಲ್ಲಿ ಉಳಿದು ಬಂದಿದೆ.

ವೀಣೆ ಶೇಷಣ್ಣನವರ ಪರಂಪರಾಗತ ಶೈಲಿಯ ವೀಣಾವಾದನ ರಾಜಮ್ಮನವರದು. ಅನೇಕರು ಬಂದು ನುಡಿಸಿ ಎಂದು ಕೇಳುವರು. ಕೆಲವರು "ಗೀತ ಗೋವಿಂದ" ಕೇಳಬೇಕೆಂದರೆ, ಕೆಲವರು ರಾಗ–ತಾನ ಕೇಳುವರು. ಒಂದೇ ರಾಗವನ್ನು ಒಂದೆರಡು ಗಂಟೆಗಳ ಕಾಲ ನುಡಿಸಬಲ್ಲರು. ನನಗೂ ಕೆಲವು ಕೀರ್ತನೆ, ದೇವರ ನಾಮ ಹಾಗೂ ಅವರೇ ರಚಿಸಿರುವ ಹಾಡುಗಳನ್ನು ಹೇಳಿ ಕೊಟ್ಟಿದ್ದಾರೆ. ಅವರಲ್ಲಿ ಸಂಗೀತಾಭ್ಯಾಸ ಮಾಡುವುದು ಸುಲಭದ ಕೆಲಸವಲ್ಲ. ಒಂದು ಸ್ವರ, ಸಂಗತಿ ಹೆಚ್ಚು ಕಡಿಮೆಯಾದರೂ ಒಪ್ಪುವವರಲ್ಲ ಅವರು. ಎಷ್ಟೋ ಕಾಲವಾದ ಮೇಲೆ ಹಾಡಿದರೂ ಸಂಗತಿಗಳು ಬದಲಾದರೆ ಅದನ್ನ ತಿದ್ದದೆ ಬಿಡುವುದಿಲ್ಲ. ಅವರ ಹಾಡುಗಳಲ್ಲಿ ನನಗೆ ಬಹಳ ಪ್ರಿಯವಾದದ್ದು "ಕಂಗೊಳಿಸೆ ನವಯುಗದಿ ಮಂಗಳ ಪ್ರಭಾತವು".

"ಸಂದರ್ಶನವೆಸಗಲೆಂದು ತಂದು ಬೆಳಗಿ ಶುಭವಾರತಿ" ಅನ್ನುವ ಹಾಡು. ಈ ಹಾಡಿನ ಕೊನೆ ನುಡಿ ಯಾರ ಮನಸ್ಸನ್ನಾದರೂ ಆಕರ್ಷಿಸದೇ ಇರದು!

> ಸತಿಯರ ಸೌಭಾಗ್ಯದ ಸೊಡರ ಪಿಡಿದು ಬನ್ನಿ ।
> ಮಾತೆಯರ ಮಮತೆಯ ಜ್ಯೋತಿಯ ತಂದಿರಿಸಿ ।
> ಶಾಂತಿದಾಂತಿಕರ ಯುಗದ ಕಾಂತಿವೆರಸಿದಾರತಿಯ ।
> ಜಗಕೆ ಶ್ರೇಯವಾಗಲೆಂದು ಬಗೆದು ಪಾಡಿ ಬೆಳಗಿರಿ ॥

ಭಾರತಿಯವರ ನಾಟಕಗಳನ್ನು ಓದಿದಾಗ ಮನಸ್ಸಿಗೆ ಅನ್ನಿಸಿದ ಭಾವನೆಗಳು. 'ತಪಸ್ವಿನಿ' ನಾಟಕದ ನಾಯಕಿ "ಊರ್ಮಿಳಾ" ಇಂದೇನು ಇಷ್ಟು ಸಂಭ್ರಮ ಎಂದು

ಯೋಚಿಸಿರುತ್ತಿರುವಾಗ ನದಿಯ ದಂಡೆಯಲ್ಲಿ ದೋಣಿಗಳು ಸಾಲಾಗಿ ಹೋಗುತ್ತವೆ. ೧೪ನೇ ದೋಣಿಯನ್ನು ಎಣಿಸಿದಾಗ ಸಂದ ವರ್ಷಗಳ ನೆನಪಾಗುತ್ತದೆ ಅವಳಿಗೆ. 'ತಪಸ್ವಿನಿ' ನಾಟಕ ಪ್ರಾರಂಭವಾಗುವುದು ಹೀಗೆ. ಸೀತೆಗಿಂತಲೂ ಊರ್ಮಿಳೆಯ ತ್ಯಾಗವೇ ಹೆಚ್ಚು. ಸೀತೆ ವನವಾಸ ಮಾಡಿದರೂ, ಅವರ ಜೊತೆಯಲ್ಲಿ ರಾಮ ಲಕ್ಷ್ಮಣರಿದ್ದರು, ಆದರೆ ಸರಯೂ ನದಿ ತೀರದಲ್ಲಿ ತಪಸ್ವಿನಿಯಾಗಿ ಕಾಲಕಳೆದ ಊರ್ಮಿಳೆಯ ತ್ಯಾಗವನ್ನು ಗುರುತಿಸುವವರು ಯಾರು? ಪಾತ್ರಗಳಿಗೆ ಸಲ್ಲಬೇಕಾದ ಪ್ರಾಶಸ್ತ್ಯ ಎಲ್ಲಿ ಸಂದಿಲ್ಲವೋ ಅಂತಹ ಪಾತ್ರಗಳನ್ನ ಹೃದಯಂಗಮವಾಗಿ ಚಿತ್ರಿಸುವುದೇ ಭಾರತಿಯವರ ವೈಶಿಷ್ಟ್ಯ.

"ವಾತ್ಸಲ್ಯ ತರಂಗ ಲೀಲಾ" -ಈ ನಾಟಕ ಮೇನಕೆಯನ್ನು ಕುರಿತದ್ದು. ನಿರ್ದಯಿಯಾಗಿ ತಾನು ಹೆತ್ತ ಮಗುವನ್ನ ತೊರೆದವಳು ಮೇನಕೆ! ಇದು ಸಾಮಾನ್ಯವಾಗಿ ಮೊದಲು ಎಲ್ಲರಿಗೂ ಬರುವ ಭಾವನೆ. ಆದರೆ "ವಾತ್ಸಲ್ಯ ತರಂಗ ಲೀಲಾ" ನಾಟಕವನ್ನು ಓದಿದಾಗ ನಮ್ಮ ಭಾವನೆ ಬದಲಾಗುತ್ತದೆ. ಶಿಶುವನ್ನು ಕರೆದೊಯ್ಯಲು ಅಮರ ಪತಿಯ ಆಣತಿಯಿಲ್ಲ, ಬಿಟ್ಟು ಹೋಗಲು ಮನಸ್ಸು ಬಾರದು....ಎಂತಹ ತೊಳಲಾಟ. ಮಗುವನ್ನು ಸಲಹುವುದು ಮಾತೆಯಾದ ನಿನ್ನ ಕರ್ತವ್ಯವಲ್ಲವೇ? ಒಡನೆಯೇ ಇಲ್ಲಿಂದ ಹೊರಡು, ನೀ ಬಂದ ಕೆಲಸವಾಯ್ತಲ್ಲ ಎಂದು ಕೌಶಿಕ ಹೇಳಿದಾಗ ಮೇನಕೆ ಎಷ್ಟು ಕೊರಗುತ್ತಾಳೆ. ಇನ್ನೊಂದು ಅಂಕದಲ್ಲಿ "ಕಡೆಗೆ ಮಗುವನ್ನ ತೊರೆದು ಹೋಗಲು ಆ ಮಾತೆ ಹೇಗೆ ಮನಸ್ಸು ಮಾಡಿದಳು" ಎಂದು ಗೌತಮಿ ಕೇಳಿದಾಗ "ಮುಂದಿನಾ ಹಿತವ ಬಗೆಯುವುದೇ ಸನ್ಮಾತೆಯಾಶಯ" ಎನ್ನುತ್ತಾರೆ ಕಣ್ವ ಋಷಿಗಳು. ಶಕುಂತ ಪಕ್ಷಿಗಳು ರಕ್ಷಿಸುತ್ತಿದ್ದ ಮಗುವನ್ನ ಪಾಲಿಸಿಯು ಕರೆ ತಂದಾಗ ಕಣ್ವರು ಹೇಳುತ್ತಾರೆ: "ಪ್ರೀತಿ ಎಂಬುದು ಜೀವ ಕುಲಕ್ಕೆಲ್ಲ ಒಂದೇ ಸಮ" ಎಂದು. ಪ್ರೀತಿ ಎಂಬುದು ಜೀವ ಕೋಟಿಗೆಲ್ಲ ಸಹಜ ಎನ್ನುವ ಅಂಶವನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ ಭಾರತಿಯವರು. ಮನ ಮುಟ್ಟುವ ಹಾಗೆ ಇಂತಹ ಸಂದರ್ಭಗಳನ್ನ ರಸವತ್ತಾಗಿ ಚಿತ್ರಿಸುವ ಜಾಣ್ಮೆ ಅವರದು.

ರಾಜಮ್ಮನವರು ಕತೆಗಳನ್ನು ಬಹಳ ಸ್ವಾರಸ್ಯವಾಗಿ ಹೇಳುತ್ತಾರೆ. ಮೊಮ್ಮಕ್ಕಳಿಗೆ ಅಜ್ಜಿಯ ಕತೆ ಎಂದರೆ ಪಂಚ ಪ್ರಾಣ. ಅಜ್ಜಿ ಎಂದರೆ ಬಲು ಸಲಿಗೆ. ಮಕ್ಕಳ ಮನಸ್ಸನ್ನು ನೋಯಿಸಬಾರದು ಎನ್ನುತ್ತಾರೆ ಅವರು. ಮನೆ ನಂದ ಗೋಕುಲದಂತೆ ಇರಬೇಕು; ತಾನು ಎಲ್ಲರಿಗೂ ಮಾಡಿ ಬಡಿಸಬೇಕು; ಎಲ್ಲರೂ ಉಂಡು ತಿಂದು ಓಡಾಡಬೇಕು. ಆದರೆ ಇತ್ತೀಚೆಗೆ ಇದಕ್ಕೆ ಅಡ್ಡಿ ಬಂದಿರುವುದು, ಅವರ ಸೂಕ್ಷ್ಮ ದೇಹದ ಪರಿಸ್ಥಿತಿ.

ಭಾರತಿಯವರು ಮನೆ ಮಕ್ಕಳಿಗೆ ಮಾತ್ರ ಅಜ್ಜಿ ಅಲ್ಲ. ನೆರೆಹೊರೆಯವರೆಲ್ಲರ ಪ್ರೀತಿಯ ನಾಮಕರಣವೂ "ಅಜ್ಜಿ" ಅಂತಲೆ. ★

ನಾ ಕಂಡ ಭಾರತಿ

● ಸಿ. ಎನ್. ಶಲ್ವಪಿಳ್ಳೈ ಶರ್ಮ

ಆಗ ನಮ್ಮ ಕನ್ನಡ ಸಂಘವು ಕೇವಲ ಎರಡು ವರ್ಷದ ಎಳೆಗೂಸು. ಯುಗಾದಿ ಕಳೆದೊಡನೆ ಸಂಘಕ್ಕೂ ಮೂರನೆಯ ವರ್ಷ ತುಂಬುತ್ತೆ. ಹುಟ್ಟಿದ ಹಬ್ಬ ಮಾಡಬೇಡವೇ? ಸರಿ! ಎಲ್ಲಾ ಅಣಿಗೈಯಲು ಆ ಸಲವೂ ಕೆಲವರು ಸ್ವಯಂ ಸೇವಕರೇ ನಿಲ್ಲಬೇಕಾಯಿತು. ನನ್ನ ಗೆಳೆಯ ರಾಮಾನುಜನೇ ಸಂಘದ ಕಾರ್ಯದರ್ಶಿಯಾದ. ಅವನ ನೆರವಿಗಾಗಿ ನಾವೊಂದು ಹತ್ತಾರು ಮಂದಿ ನಿಂತೆವು.

ಅಂದೆಮಗೆ, ಮಹೋತ್ಸವವು ಸಂಭ್ರಮದಿಂದ ನಡೆಯಿತು; ಹರಸಲು ಬಂದ ಅತಿಥಿಗಳು ಸಂತೋಷಗೊಂಡರೆ ಸಾಕೆಂಬ ಮನೀಷೆ. ಸಂಬಳ ಸಾರಿಗೆಗೆ ತನ್ನನ್ನೇ ಮಾರಿ ಮಾಡುವ ಕೆಲಸವಲ್ಲವಿದು. ಕೇವಲ ಅಂತರಾತ್ಮನ ಪ್ರೇರಣೆಯೊಂದೇ ಕಾರಣ. ಯಾವೊಂದು ಕೆಲಸಕ್ಕೂ ಬೇಸರಿಕೆಯಿಲ್ಲ, ಹಿಂಜರಿಕೆಯಿಲ್ಲ. ಹಿರಿಯ ಗೆಳೆಯರಾದ ಪ್ರ. ತಿ. ನ. ರ ಆತ್ಮೀಯತೆಯ ಫಲವಾಗಿ ಎಂದಿನಂತೆ ಆ ಸಲವೂ ನಾಡಿನ ರತುನವೊಂದು ನಮ್ಮ ಸೇವೆಯನ್ನು ಸ್ವೀಕರಿಸಲು ಸಮ್ಮತಿಸಿತು. ನಮ್ಮ ಪರವಾಗಿ ಕರೆಯೋಲೆಯನ್ನು ಬರೆದೆವು–ತಿರುಮಲೆ ತಾತಾಚಾರ್ಯ ಶರ್ಮರಿಗೆ. ಮರು ಪತ್ರದಲ್ಲೇ ನಮ್ಮ ಆಹ್ವಾನ ಮನ್ನಿಸಿ, ಒಪ್ಪಿಗೆಯನ್ನು ತಿಳಿಸಿದ್ದರು. ಸಾಧಾರಣವಾಗಿ ದಿನಬೆಳಗಾದರೆ ಶರ್ಮರು ವಿಶ್ವ ಕರ್ನಾಟಕದಲ್ಲೆಲ್ಲಾ ನೆನಪಿಗೆ ಬಂದು ಬಿಡುತ್ತಾರೆ. ಅವರ ಎಲೆಯ ಮರೆಯಲ್ಲಿಯೇ ಅರಳಿರುವ ಮೈಸೂರು ಮಲ್ಲಿಗೆಯರಳೊಂದು, ಇಂದ್ರಿಯಗೋಚರವಾದುದು ಮಾತ್ರ ಅದೇ ಮೊದಲು. "ನನ್ನ ಸಹಧರ್ಮಿಣಿಯೊಂದಿಗೆ ನಿಮ್ಮ ಸತ್ಕಾರವನ್ನು ಪಡೆಯಲು ಸಿದ್ಧನಿದ್ದೇನೆ. ಲಗ್ನಪತ್ರಿಕೆ ಬಂದೊಡನೆ ಹೊರಡುತ್ತೇನೆ." ದೇ ಶರ್ಮರ ಪತ್ರ ಸಾರಂಶ. ಗೆಳೆಯ ಆ. ನ. ಶ್ರೀ. ನಮಗೆಲ್ಲಾ ಸುಚರಿತ್ರೆಯರನ್ನು ಪರಿಚಯ ಮಾಡಿಸಿದ. 'ರಾಜಮ್ಮ' ನಾಮಕರಣದ ಹೆಸರು. 'ಭಾರತಿ' ಕಾವ್ಯನಾಮ. ಅಷ್ಟಕ್ಕೇ ಅವನು ಸುಮ್ಮನಾಗಲಿಲ್ಲ. ಹಬ್ಬದ ದಿನ ರಾತ್ರಿ ನಾಟಕ

ನಮ್ಮ ಗೆಳೆಯರಿಗೆ ಕೇಳಬೇಕೆ? ಎಲ್ಲರೂ ಒಪ್ಪಿದರು. ಒಡನೆ ಪುಸ್ತಕದ ಪ್ರತಿಗಳನ್ನು ಸಂಗ್ರಹಿಸಲಾಯಿತು.

ವಿಶಾಲವಾದ ಹಂದರವು, ಯದುಗಿರಿಯ ಸುತ್ತಲೂ ಬೆಳೆದಿರುವ ಹೊಂಗೆಯ ತಳಿರುಗಳಿಂದಲೂ, ಮಾಂದಳಿರ ತೋರಣಗಳಿಂದಲೂ ಕನ್ನಡ ಸಂಘದ ಮುಂದೆ ಬೆಳಗಿತು. ತರುಣರ ಉತ್ಸಾಹಕ್ಕೆ ನೆರವಾದ ವಯೋವೃದ್ಧರ ನಿಕರವು ಮಂಟಪದಲ್ಲಿ ಹೂ ಹಣ್ಣುಗಳೊಂದಿಗೆ ಕಾದಿತ್ತು. ಮಧ್ಯಾಹ್ನ ಹನ್ನೆರಡರ ವೇಳೆಗೆ ಸರಿಯಾಗಿ ನಮ್ಮೂರಿಗೆ ಮೋಟಾರಿನಲ್ಲಿ ಅತಿಥಿ ದಂಪತಿಗಳ ಆಗಮನ. ಕಾರು ಸಂಘದ ಮುಂದೆಯೇ ನಿಂತಿತು. ನಿಂತೊಡನೆ ಮಂಗಳ ವಾದ್ಯಗಳು ಮೊಳಗಿದವು. ಇಲ್ಲಿ ಇಳಿದವರು ಮೂವರು ಮಾತ್ರ. ಶರ್ಮ ದಂಪತಿಗಳು, ಅವರ ಕುಮಾರಿ ಜಯಲಕ್ಷ್ಮಿ. ಪೂಜ್ಯ ಶರ್ಮರಿಗೆ ಹಾರ ಹಾಕಿ ಸ್ವಾಗತಿಸಲಾಯಿತು. ಭಾರತಿಯವರು ಹಾರವನ್ನಿತ್ತ ಬಾಲಿಕೆಯರನ್ನು ಮುದ್ದಿಸಿದರು. ಅತಿಥಿ ಭವನದ ಕಡೆಗೆ ಎಲ್ಲರೂ ನಡೆದೆವು.

ಶ್ರೀ ವೈಷ್ಣವರ ಸಂಪ್ರದಾಯಾನುಗತವಾಗಿ ಬಂದಿರುವ ರೇಷ್ಮೆ ಸೀರೆಯ ಕಚ್ಚೆ ಉಡುಪು. ಹಣೆಯ ನಡುವೆ ತಿದ್ದಿದ ಕುಂಕುಮ ಬೈತಲೆ. ಕೈಗಳಲ್ಲಿ ಯಥೋಚಿತವಾಗಿ ಬಂಗಾರದ ಬಳೆಗಳು. ಅಂದವಾಗಿ ಹೆಣೆದಿರುವ ವೇಣಿಲತೆ. ಲೋಚನ ಪಾಟವಕ್ಕಾಗಿ ಹಾಕಿದ ಸುಲೋಚನ. ಪಾವುಗೆಯನ್ನು ಮೆಟ್ಟಿದ್ದರೂ ಮರೆಯದೇ ಧರಿಸಿದ್ದ ಕಾಲುಂಗರ – ಇವೆಲ್ಲ 'ಭಾರತಿ'ಯವರ ಕೃತಕಾಲಂಕಾರಗಳಾದರೂ, ಮಾತಿಗೆ ಮುಂಚೆ ಮೊಗದ ಮೇಲೆ ನಲಿದಾಡುವ ಸಹಜವಾದ 'ತಿಳಿನಗೆ', ಧೀರಗಂಭೀರ ಸ್ವಭಾವದೊಂದಿಗೆ ಬೆರೆತು ಕಿವಿಯಲ್ಲಿ ಕೇಳಿರುವ ಹಿಂದಿನ ಸತೀಮಣಿಗಳನ್ನು ನೆನಪು ಕೊಡುತ್ತಿದ್ದವು. ನೋಡಿದೊಡನೆಯೇ 'ತಪಸ್ವಿನಿ'ಗೆ ಸರಿಯಾದ ಮೂರ್ತಿಯಿವರೆಂಬ ಪವಿತ್ರಭಾವನೆ ನನಗಾಯಿತು.

* * *

ಮನೆಯ ಕಡೆ ಕಾಲೆಳೆಯುತ್ತ ಹೊರಟೆ. ಮನವು ಏನನ್ನೋ ಅರಸುತ್ತಿತ್ತು.... ಸಂಜೆ ಐದರ ವೇಳೆಗೆ ಸಡಗರದ ಸಮಾರಂಭ. ಯಾರು ಬೇಕಾದರೂ ಸ್ವಾಗತ ಗೀತೆ ಹಾಡಬಹುದು. ನಾನೇ ಏಕೆ ಈ ಕಾರ್ಯ ನಿರ್ವಹಿಸಬಾರದು! ನಿಜ; ಸಹಜವಾಗಿಯೇ ಆತ್ಮೀಯರಾದವರಿಗೆ 'ಸ್ವಾಗತ' ನೀಡದಿದ್ದಲ್ಲಿ ಆತ್ಮವಂಚನೆಯಾದೀತು. ಒಡನೆ ಮನದೊಳಗೆ ಗೀತೆಗಳ ಭಾವಾವಿರ್ಭಾವ! ಐದಾರು ಗೀತೆಗಳನ್ನು ಆರಿಸಿಯಾಯ್ತು. ಶರ್ಮರ ವಾಣಿಯೆಂದರೆ ಗುಂಡಿನೇಟು. ಅವರ ಪ್ರಧಾನ ಲೇಖನಗಳೆಂದರೆ ಓದಿನೊಡನೆಯೆ ಮೈ ಕೊಡವಿ, ಹುರಿದುಂಬಿಸುವುದು. ಅವರು ಲೇಖನಗಳಿಗೆ ಶೀರ್ಷಿಕೆ ನೀಡುವುದೇ ಒಂದು ಚೆಂದ. ಭಾರತಿಯವರ ಮಾತು ಕವನಲೋಕದಲ್ಲಿ ಇನ್ನೂ ಹೆಚ್ಚು. ಶರ್ಮರ ಮಾತು ಕತ್ತಿಯ ಇರಿತದಂತಿದ್ದರೆ ಭಾರತಿಯವರದು ಗುಲಾಬಿಯನ್ನು ಮೆಲ್ಲಗೆ ಕಣ್ಣಿಗೊತ್ತಿಕೊಂಡಂತೆ. ಶರ್ಮರದು ರಾಜಕೀಯ ರಣರಂಗ;

ಭಾರತಿಯವರದು ಕಲಾರಂಗ. ಆದರೂ ದಂಪತಿಗಳಿಬ್ಬರೂ ಮಾತಾಡಿಕೊಂಡಂತೆ ಒಂದೇ ಸಮನಾಗಿ ತಮ್ಮ ತಮ್ಮ ಕ್ಷೇತ್ರದಲ್ಲಿ ಅಪೂರ್ವ ಸಾಧನೆಮಾಡಿದ್ದಾರೆ.

ಲೌಕಿಕ ಮರ್ಮವ ಕಂಡರಿತು
ಮುಂದಾಳೆನಿಸಿದೆ ಲೋಕದೊಳು ।
'ಪ್ರಭು ಸಂಮಿತೆ' ನೀನಾಗಿರಲು
'ಕಾಂತಾ ಸಂಮಿತೆ' ಭಾರತಿಯು॥

ಹೀಗೆ ವೇದವಾಣಿ, ಕಾವ್ಯವಾಣಿಯರಿಬ್ಬರೂ ಮೈವೆತ್ತು ಬಂದಂತೆ ಶರ್ಮ ದಂಪತಿಗಳು ಕಾಣಿಸಿದರು. ಅದೇ ತಾನೇ ಕನ್ನಡ ಬಾಂಧವರೊಬ್ಬರು ಹೈದರಾಬಾದಿನಿಂದ ಮಾಡಿದ ಸಿಂಹನಾದವು ಎಲ್ಲರ ಕಿವಿಯಲ್ಲೂ ಇನ್ನೂ ಮೊಳಗುತ್ತಿತ್ತು. ಆ ಉಪನ್ಯಾಸದ ಔಚಿತ್ಯದ ವಿಮರ್ಶೆಯಲ್ಲಿ ತೊಡಗಿದ ಶರ್ಮರ ವೀರವಾಣಿಯು ಸ್ವಾಗತ ಗೀತೆಯ ಭಾವನೆಗೆ ಒಂದು ಅಸಾಧಾರಣ ಉದಾಹರಣೆಯಾಗಿ ಎಲ್ಲರ ಮನಸ್ಸಿಗೂ ನಾಟಿತು.

ಭಾರತಿಯವರು ಸರಸ್ವತಿಯ ವರಪುತ್ರಿ. ನವಿರಾಗಿ ಹೆಣೆದಿರುವ ಇವರ ಕೃತಿಗಳೂ, ಇಂಪಾದ ವೀಣಾವಾದನವೂ ಇದಕ್ಕೆ ಸಾಕ್ಷಿ. ಪ್ರಕೃತಿಯ ಬೆಡಗನ್ನು ಒಂದೇ ಸಲ ನೋಡುವ ತಾಣವಾದ ನಮ್ಮೂರಿನ ನರಸಿಂಗನ ಮಲೆಯ ತುದಿಯಲ್ಲಿ ಕುಳಿತು, 'ತಪಸ್ವಿನಿ' ಸೋದರಿಯಂತಿರುವ 'ಮಹಾಸತಿ' ರೂಪಕವನ್ನು ಕವಯಿತ್ರಿಯವರಿಂದಲೇ ಓದಿಸಿ ಕೇಳಿದವು. ಅದೊಂದು ಅಪೂರ್ವ ಅನುಭವ. "ನೀವು ಸ್ತ್ರೀಯಾಗಿರುವುದರಿಂದಲೇ ಈ ಹೃದಯ ವಿದ್ರಾವಕ ನುಡಿಗಳನ್ನಾಡಿದ್ದೀರಿ." ಎಂದು ಕವಿವರ ಪು. ತಿ. ನ. ಹೇಳಿ 'ಮಹಾಸತಿ'ಯನ್ನು ಹೊಗಳಿದುದನ್ನು ಇನ್ನೂ ಮರೆತಿಲ್ಲ. ಸಂಸ್ಕೃತ ಶಾಲೆಯಲ್ಲಿ ನಡೆದ ಶರ್ಮರ ಉಪನ್ಯಾಸದಲ್ಲಿ ಸಭೆಯ ಉಪಾಗ್ರ ಪೀಠವನ್ನು ಅಲಂಕರಿಸಿದ್ದ ಭಾರತಿಯವರನ್ನು ಕಂಡು, ಭಲೆ! ಸಂಸ್ಕೃತ ಜನಾಂಗವೂ ಮಹಿಳೆಯರಿಗೊಂದು ಸ್ಥಾನ ಬಿಟ್ಟುಕೊಟ್ಟಿತೆಂಬ ಹೆಮ್ಮೆ ನನಗಾಯಿತು.

ಶರ್ಮ-ಭಾರತಿಯರಿಬ್ಬರದೂ ಒಂದರ ಪ್ರಭೆಯು ಮತ್ತೊಂದನ್ನು ವಿರೋಧಿಸಿಲ್ಲ, ಒಬ್ಬರ ಗುಣಗಳಿಗೊಬ್ಬರು ಮರುಳಾಗಿದ್ದಾರೆ. ಭಾರತಿಯವರು ತಮ್ಮಣ್ಣನ ಮನದಲ್ಲಿ ತುಂಬು ಗೌರವವನ್ನೂ ಗಳಿಸಿದ್ದಾರೆ. ಗಿರಿ ಏರಿ ಹೋಗುವಾಗ ಶ್ರೀ ಶರ್ಮರು ಪ್ರಾಸಂಗಿಕವಾಗಿ ತಮ್ಮ ಗೃಹಿಣಿಯ ಸೌಜನ್ಯವನ್ನು ಮನಸಾರೆ ಕೊಂಡಾಡಿದುದೂ ಚೆನ್ನಾಗಿ ನೆನಪಿದೆ. ಒಮ್ಮೆ ಭಾರತಿಯವರು ರುಗ್ಣಶಯ್ಯೆಯಲ್ಲಿ ಮಲಗಿದ್ದರಂತೆ. ಹಲವಾರು ದಿವಸ ಆಸ್ಪತ್ರೆಯಲ್ಲೇ ಕಳೆಯಬೇಕಾಯಿತು. ಮನೆಯಲ್ಲಿ ಕೈಲಾದ ಕೆಲಸಗಳನ್ನು ಮಾಡಿ, ಮಕ್ಕಳ ಲಾಲನೆ ಪಾಲನೆಗಳಲ್ಲಿ ಆನಂದವಾಗಿ ಕಾಲ ಕಳೆಯುವ ಲಲನೆಯರಿಗೆ ಸುಮ್ಮನೆ ಮಲಗಿರಲು ಎಷ್ಟು ತೊಂದರೆ, ಬೇಜಾರು! 'ಬೇಸರಿಕೆ ಕಳೆಯಲು ಯಾವ ಪುಸ್ತಕವನ್ನು ತಂದೀಯಲಿ?' ಎಂದು ಕೇಳಿದುದಕ್ಕೆ ಶ್ರೀಮತಿಯವರು

ಗೀತ ಗೋವಿಂದವನ್ನು ತರಹೇಳಿದರಂತೆ. ಎಂಥ ಸಂಗೀತ, ಸಾಹಿತ್ಯಾಭಿಮಾನ! ಅಂತೂ ಅಲ್ಲೇ ರಾಗ–ಸ್ವರಗಳನ್ನು ಜೋಡಿಸಿ ಮುಗಿಸಿಬಿಟ್ಟರಂತೆ. ಗೀತ ಗೋವಿಂದ ವನ್ನೆಲ್ಲಾ ಕಂಠ ಪಾಠ ಮಾಡಿಬಿಟ್ಟರಂತೆ.

ಮಧ್ಯಾಹ್ನ ದೇವಾಲಯದಲ್ಲಿ ಗಾನವು ಮುಗಿದ ಮೇಲೆ ಕೆಲವರು ಊಟದ ಆತುರದಿಂದಲೂ, ಮತ್ತೆ ಕೆಲವರು ಶರ್ಮರೊಡನೆಯೂ ಭವನದ ಕಡೆ ತೆರಳಿದ್ದರು. ನಮ್ಮೂರಿನ ರಾಜ ಬೀದಿಯಲ್ಲಿರುವ ಗೃಹಿಣಿಯರೊಬ್ಬರು ಸುಮಂಗಲೀಮಣಿಗೆ ಕುಂಕುಮವಿತ್ತು ಕೃತಾರ್ಥರಾಗಲು, ಭಾರತಿಯವರನ್ನು ಮನೆಯೊಳಗೆ ಕರೆದರು. ಈ ಕಾರಣ ನಾವೆಲ್ಲ ಸ್ವಲ್ಪ ಹಿಂದಾದೆವು. ಅಲ್ಲಿಂದ ಅತಿಥಿ ಭವನದವರೆಗೂ-ಭಾರತಿ ಯವರು, ಆಗಲೇ ಪಯಣದ ವೇಳೆಯ ಕೊನೆಕೊನೆಯ ಮಾತುಗಳನ್ನು ಆರಂಭಿಸಿ ದ್ದರು. ಅವರ ಬಾಯಿಂದ ಹೊರಟ ಅನೇಕ ಕಿರು ನುಡಿಗಳನ್ನು ಈಗಲೂ ಮರೆತಿಲ್ಲ.

"ಎಷ್ಟೋ ಜನ ಸಂಸ್ಕೃತ ಓದಿದವರನ್ನು ಕಂಡಿದ್ದೇನೆ. ಆದರೆ ನಿಮ್ಮಷ್ಟು ಸರ ಳತೆಯುಳ್ಳವರನ್ನು ಇದುವರೆಗೂ ನೋಡಿರಲಿಲ್ಲ! ಸಂಸ್ಕೃತ ಪಾಂಡಿತ್ಯದ ಆ ಆತ್ಮಾಭಿ ಮಾನ ನಿಮ್ಮಲ್ಲಿಲ್ಲ! ಅಂತೆಯೇ ನೀವು ಶಾಂತರಾಗಿ ಬಾಳಿರಿ. ನನಗೆ ಮಿಗಿಲು ಸಂತೋ ಷವಾಯಿತು."

ಶ್ರೀಮತಿ 'ಭಾರತಿ' ಅವರ ಈ ಹರಕೆ ಸಂಸ್ಕೃತ ಸೇವಕರೆಲ್ಲರಿಗೂ ಅನ್ವಯಿಸು ವುದು.

ಕಾರ್ಯಕ್ರಮ ಮುಗಿದ ಮೇಲೆ ಮನಸ್ಸಿಲ್ಲದಿದ್ದರೂ ಮನೆಮಗಳನ್ನು ಕಳು ಹಿಸಿ ಕೊಡುವಂತೆ ಬುಟ್ಟಿಯ ತಿಂಡಿ, ಅಡಕೆಲೆ, ಫಲಪುಷ್ಪಗಳೊಡನೆ ಭಾರತಿಯವ ರನ್ನು ಬೀಳ್ಕೊಟ್ಟೆವು.

ಕೆಲವಾರು ದಿನಗಳಲ್ಲೇ ಪತ್ರವೊಂದು ಬಂದಿತು. ಲಿಪಿ ಯಾರದಿರಬಹುದೆಂಬ ಸಂದೇಹವಾಯಿತು. ದಂಪತಿಗಳಿಬ್ಬರ ವಿನ್ಯಾಸಗಳೂ ಹೆಚ್ಚು ಕಡಿಮೆ ಒಂದೇ ರೀತಿ.

ಶ್ರೀಮತಿ ಭಾರತಿಯವರು ಬರೆದ ಕುಶಲ ಪತ್ರ ಹೀಗಿದೆ:

> "....ನಾವೆಲ್ಲರೂ ಸೌಖ್ಯ. ಪ್ರಯಾಣ ಸುಗಮ. ಪ್ರತಿದಿನ ಹಲವು ಸಾರಿ ಮೇಲುಕೋಟೆಯ ರಮಣೀಯ ದೃಶ್ಯಗಳು ದೃಕ್ಪಥಕ್ಕೆ ಬರುತ್ತಿವೆ. ಆ ಸವಿನೆನಪು ಮೇಲುಕೋಟೆಯ ಬಳಿಗೆ ಮನವ ಸೆಳೆದೊಯ್ಯುತ್ತಲಿದೆ. ಹಿಂದೆ ಮುಂದೆ ಯಾರಾರನ್ನೋ ಹುಡುಕುತ್ತ ತನಗೆ ತಾನೆ ನಗೆಗೀಡಾಗುತ್ತಲಿದೆ.
>
> ಪ್ರಿಯ ಬಂಧುಗಳೆ! ನಿಮ್ಮೆಲ್ಲರ ಸ್ನೇಹವು ಪವಿತ್ರ ಕ್ಷೇತ್ರದಲ್ಲಿ ದೈವ ದತ್ತವಾಗಿ ನಮಗೆ ದೊರೆತುದು. ಅದು ಬಲು ಪವಿತ್ರ. ಎರಡು ದಿನಗಳಲ್ಲೇ ನಾವೆಷ್ಟು ಪಳಗಿದೆವು. ಅದು ನಿಮ್ಮ ಸರಳ ಜೀವನದ, ಸಾಧು ಸ್ವಭಾವದ, ಅಭಿಮಾನದ ಮಹಿಮೆಯಲ್ಲವೇ? ನಮ್ಮ ಹಿಂದು ಮುಂದು ಸದಾ ಸುಳಿದಾ ಡುತ್ತ ನಲಿದು ನಲಿಸುತ್ತಿದ್ದ ಮಿತ್ರವೃಂದಕ್ಕೆಲ್ಲ ನನ್ನ ಹೃತ್ಪೂರ್ವಕ ಅಭಿ ನಂದನೆಗಳು. ನಾವೆಲ್ಲರೂ ನಾಮಧೇಯಗಳನ್ನರಿತು ಪೃಥವಾಗಿ ನೆನಪಿಡಲು

ಅವಕಾಶವಿಲ್ಲದಿದ್ದರೂ ನಮ್ಮ ಹೃಚ್ಚಿತ್ರದಲ್ಲಿ ಪ್ರತಿಯೊಬ್ಬರನ್ನು ಬಗೆಮ ಒಂದು ಸ್ಥಿತಿಗೊಳಗಾಗುತ್ತಿದ್ದೇವೆ. ಮೇಲುಕೋಟೆ ದರ್ಶನದಿಂದ ಪವಿತ್ರರಾದೆವು. ಶುದ್ಧ ಸ್ನೇಹಭಾವದಿಂದ ಧನ್ಯರಾದೆವು. ಇದೊಂದು ಪುರಾಕೃತ ಪುಣ್ಯವಿಶೇಷ ದಿಂದ ಆದುದೆಂದು ನಮ್ಮ ನಂಬಿಕೆ.

ನಿಮ್ಮೆಲ್ಲರನ್ನು ತ್ವರಿತದಲ್ಲೇ ಕಾಣುವ ಆನಂದ ಸಮಯವು ಮುಂದಿನ ತಿಂಗಳಲ್ಲೊದಗಿದೆ. ಚಿ|| ಜಯಲಕ್ಷ್ಮಿಯ ವಿವಾಹ ಈ ನಯನೋತ್ಸವ. ನಿಮ ಗೆಲ್ಲ ನೆನಪಿರಲಿ. ನನಗೇನೋ ಪೂರ್ಣ ಭರವಸೆಯುಂಟು. ನಿಮಗೂ ನಮ್ಮ ಸಾಮೀಪ್ಯವು ಅಷ್ಟೇ ಆಶಾಯುತವಾದುದಲ್ಲವೇ ? ನನ್ನ ನಂಬಿಕೆಯ ಬಲ ವನ್ನು ನಾನೇನೂ ಪರೀಕ್ಷಿಸಬೇಕಾದುದಿಲ್ಲ ! ನನ್ನ "ತಪಸ್ವಿನಿ"ಯೇ ಸಾಕ್ಷಿ. ನಾವು ಕಳೆದ ಒಂದೊಂದು ಸಮಯವೂ, ಸಂದರ್ಭವೂ, ಆಡಿದ ಒಂದೊಂದು ಮಾತೂ ಸಾರ್ಥಕವಾದುವು. ನಮಗಿಂತ ಭಾಗ್ಯವಂತರುಂಟೇ ? ಭಾಗ್ಯ ವಂತರೇ ಆನಂದವನ್ನು ಬಣ್ಣಿಸಬಲ್ಲರೆ ? ಉಣಬಲ್ಲರೆ ? ಆತ್ಮವನ್ನಂಟಿದ ಈ ಅಪೂರ್ವ ಸಂಬಂಧವು ಬಲು ಆಶ್ಚರ್ಯವಾಗಿದೆ. ನಾನಂತೂ ಮುಗ್ಧಳಾದೆ. ನನ್ನ ಮಗಳು ಈಗೀಗ ಜೀವನದಲ್ಲಿ ಮೊದಲಡಿ ಇಡುತ್ತಿರುವ ಬಾಲೆ. ಅವಳಿಗೆ ಮೇಲುಕೋಟೆಯ ಮಾತೆತ್ತಿದರೆ ಅದೇನು ಪೂಜ್ಯಭಾವನೆ ! ಇನ್ನು ನಮ್ಮ ಶ್ರೀಯುತರ ವಿಚಾರವನ್ನು ನಾನು ಹೇಳುವುದೇನು ? ಶ್ರಮಿಸಿ, ಶ್ರಮಿಸಿ ಬಳಲಿ ಬೇಸತ್ತ ತನುಮನಗಳ ಆನಂದ ಆರೋಗ್ಯಗಳಿಗೆ ಮೇಲುಕೋಟೆಗಿಂತ ಉತ್ತಮ ವಸತಿ ಇನ್ನೆಲ್ಲಿ ? ಯದುಗಿರಿನಾಥನ ಅಡಿದಾವರೆಗಳಿಗೆ ಸಲ್ಲಬೇಕಲ್ಲದೆ ನಮ್ಮ ಕೃತಜ್ಞತೆಯ ಪ್ರಣಾಮಗಳು, ಮತ್ತಾರಿಗೆ ?

ಎಷ್ಟು ನೆನೆದರೂ ಸಾಲದು. ಮನಸ್ಸಿನಲ್ಲಿರುವುದನ್ನೆಲ್ಲ ಬರೆಯಲು ಮಾತು ಸಾಲದು ! ಅಣ್ಣ ತಮ್ಮಂದಿರೇ ! ಮತ್ತೆ ನಿಮ್ಮನ್ನೆಲ್ಲ ನೋಡಬಯಸು ತ್ತಿದ್ದೇನೆ.

ಮತ್ತೊಮ್ಮೆ ನಿಮ್ಮೆಲ್ಲರನ್ನೂ ನೆನೆದು ನಮ್ಮ ನೆನಪಿತ್ತು ಮುಗಿಸು ತ್ತೇನೆ.

ಇಂತು ನಿಮ್ಮೆಲ್ಲರ ಭಗಿನಿ
'ಭಾರತಿ'

ಅಲಿಸಂತರ್ವಾಣಿಯೊರೆವುದೇನೆಂದು.
ಪಾಲಿಸದು ನಿತ್ಯಜೀವನ ಪಾಠ ನಿನಗೆಂದು.
ಕಾಲ ತನ್ನಯ ನಿಯಮ ಅನುಸರಿಪ ತೆರನಂತೆ
ಬಾಳು ತನ್ನಯ ನಿಯಮವೆಸಗಬೇಕಂತೆ.

'ನಿನ್ನ ಬಗೆಯೆನಗೆ ವಿಶ್ರಾಂತಿ ಮಂದಿರವು'

ಊರ್ಮಿಳೆ—ಕಜ್ಜವೇನುಂಟನಿಯ ? ಜೀವಭಾವಮದೆಲ್ಲ
ನೀನೆ; ಬಳಲಿದೆನಿಲ್ಲ; ವೇದನೆಯನರಿಯೆ ;
ಭ್ರಮೆ ಇಲ್ಲ; ಬೇಸರಮೆ ಇಲ್ಲ. ಧರ್ಮವ ಬಗೆದೆ,
ಪ್ರಕೃತಿಯಲಿ, ವಿಶ್ವಪ್ರೇಮದಲಿ ಬೆರೆದೆನು ದೇವ.
ಇನಿತು ಕಾಲದ ವಿಯೋಗವು ದೀರ್ಘಮಾದೊಂದು
ದಿನದಂತೆ ಕಳೆದುದಾವುದೊ ಸುಖದ ಕಲ್ಪನೆಯು
ವಿಸ್ಮೃತಿಯಲಿತ್ತು ಸುಖದುಃಖಮೊಂದೇ ಸಮದಿ.
ಇನಿಯ! ರಣಕರ್ಮದಲಿ ತೊಳಲಿ ಬಳಲಿದೆ ನೀನು.
ಸಂಸ್ಕಾರ ಬಲ; ಕರ್ಮಯೋಗಿಯೆನಿಸಿದೆ ನೀನು.

ಲಕ್ಷ್ಮಣ—ಧರ್ಮದೇವಿಯು ನೀನು. ಧರ್ಮ ಕರ್ಮಗಳ
ಸಂಯೋಗದಲಿ ಜಗದ ಜೀವನವು ಸಾಧ್ವಿ.
ಶಾಂತಿ ವಿಶ್ರಾಂತಿಗಳ ತೊರೆದೆನ್ನ ಜೀವನದ
ಸಂಸ್ಕಾರ ಬಲ ಮಲಿನ, ಜೀವಬಲಿಯಿಂದೆ.
ಸಾಹಸದ ಬಾಳ್ ನಿಚ್ಚವಲ್ಲ. ಸ್ವಚ್ಛತೆ ಇಲ್ಲ.
ನೋವ ನೀಗುತೆ ಜೀವವನು ಕಾವ ಸದ್ವಿಜಯ
ಜೀವನದ ಸಂಸ್ಕಾರ, ಸತ್ವ, ನಿನ್ನದು ದೇವಿ!
ರಕುತಪಾನವ ತೋಳ ಗೆಲುವೊಂದು ಗೆಲುವೆ ?
ನಿನ್ನ ಗೆಲುವೇ ಚೆಲುವು. ಶಾಂತಿ ನೀಡೆನಗೆ.
ನಿನ್ನ ನೈರ್ಮಲ್ಯದಿಂದೆನ್ನ ಮಲಿನವ ನೀಗು
ನಿನ್ನ ಬಗೆಯೆನಗೆ ವಿಶ್ರಾಂತಿ ಮಂದಿರವು
ಮತಿವೆರಸಿ ಹಿತವೀವ ಪ್ರೇಮನಿಧಿ ನೀನು.

('ತಪಸ್ವಿನಿ'ಯಿಂದ)

ತರಂಗ ★★

ನಿನ್ನೊಳು ಜನ್ಮವೆತ್ತಿರೆ ನಿನ್ನಯ ನಾಡಿನೊಳಾಡೆಯಿಂಬಿನಿಂ
ಕನ್ನಡ ವಾಣಿಯಾದರದಿ ನಿನ್ನಯ ವಾಙ್ಮಯ ವಾರಯಲ್ಕರಂ
ನಿನ್ನನು ನೇಹದಿಂ ನೆನೆದು ಕೀರ್ತಿಸೆ ನಿನ್ನಯ ಸೇವೆಗೈಯಲೀ
ಜನ್ಮವು ಜನ್ಮವಲ್ತದುವೆ, ಧರ್ಮದ ಮರ್ಮವದಲ್ತೆ ಮಾತೆಯೇ ||

ಕೃತಿ–ಮೌಲ್ಯ

ತಪಸ್ವಿನಿ: ಒಂದು ವಿವೇಚನೆ

● ಮಾಸ್ತಿ ವೆಂಕಟೇಶ ಅಯ್ಯಂಗಾರ್

ಕವಿವರ ರವೀಂದ್ರನಾಥ ಠಾಕೂರರ ಉಪನ್ಯಾಸವೊಂದು ಕಾವ್ಯಪ್ರೇಮಿಗಳಿಗೆ ಇಷ್ಟವಾದರೂ ಕಾವ್ಯದಲ್ಲಿ ನಿರ್ಲಕ್ಷಿಸಲ್ಪಟ್ಟಿರುವ ಪಾತ್ರಗಳನ್ನು ಸುಂದರವಾಗಿ ವರ್ಣಿಸುತ್ತದೆ; ಆ ಪಾತ್ರಗಳಲ್ಲಿ ಲಕ್ಷ್ಮಣನ ಪತ್ನಿ ಊರ್ಮಿಳಾದೇವಿ ಪ್ರಮುಖಳು. ಸೀತಾರಾಮರೊಡನೆ ತನ್ನ ಪತಿಯೂ ಅರಣ್ಯಕ್ಕೆ ಹೊರಡಲು ಈ ರಾಜಕುಮಾರಿ ಅವನಿಗೆ ಏನು ಹೇಳಿದಳು? ಅವನಿಂದ ಯಾವ ಉತ್ತರವನ್ನು ಪಡೆದಳು? ಅವರು ಹೊರಟು ಹೋದಮೇಲೆ ಸೋರುಮಳೆ ಸುರಿದ ಹುಣ್ಣಿಮೆಯ ರಾತ್ರಿಯಂತೆ ಐಶ್ವರ್ಯವಿದ್ದೂ ಶೋಭಿಸಲಾರದೆ ಹೋದ ಅಯೋಧ್ಯೆಯಲ್ಲಿ ಈ ಮಹಿಳಾಮಣಿ ದಿನಗಳನ್ನು ಹೇಗೆ ನೂಕಿದಳು? ವನವಾಸದಿಂದ ಅವರು ಮರಳಿ ಬಂದಾಗ ಊರ್ಮಿಳೆ ಏನಾಗಿದ್ದಳು? ಲಕ್ಷ್ಮಣನಿಗೆ ಏನು ಹೇಳಿದಳು? ಇದನ್ನೆಲ್ಲ ತಿಳಿಯಲು ನಮಗೆ ಬಹಳ ಕುತೂಹಲವಿದೆ. ಆದರೆ ಈ ವಿಷಯ ಯಾವುದನ್ನೂ ಕಾವ್ಯ ನಮಗೆ ಹೇಳಿಲ್ಲ.

ಇದುವರೆಗೆ ಹೇಳದೇ ಇದ್ದ ತಪ್ಪನ್ನು ಇಂದು ಸರಿಪಡಿಸಲು ಯತ್ನ ನಡೆದಿದೆ. ಲಕ್ಷ್ಮಣನು ವನವಾಸಕ್ಕೆ ತೆರಳಿದಾಗ ಊರ್ಮಿಳೆ ಒಂದು ತಪಸ್ಸನ್ನು ಕೈಗೊಂಡಿದ್ದಳು: ಅವನಿಗೆ ಅಡವಿಯೇ ಅಯೋಧ್ಯೆಯಾದಂದು ಊರ್ಮಿಳೆಗೆ ಅಯೋಧ್ಯೆಯೇ ಅಡವಿಯಾಯಿತು. ಸರಯೂ ನದಿಯ ತೀರದಲ್ಲಿ ಒಂದು ಆಶ್ರಮವನ್ನು ಮಾಡಿಕೊಂಡು ಅವಳು ಹದಿನಾಲ್ಕು ವರ್ಷಗಳನ್ನು ಸಾಧನೆಯಲ್ಲಿ ಕಳೆದಳು. ತಪದ ಭರದಲ್ಲಿ ಅವಳಿಗೆ ದಿನಗಳ ಹರಿವು ತಿಳಿಯಲಿಲ್ಲ. ಅವಳ ಬಾಳು ತಪೋವನದ ಬಾಳಿನಲ್ಲಿ ಕಲೆತುಹೋಯಿತು. ನೊಂದ ಮನಸ್ಸು ನೋವನ್ನರಿಯುವ ದೃಷ್ಟಿಯನ್ನು ಹೊಂದಿತು. ನೊಂದ ಹೃದಯ ನೋವಿನೊಂದಿಗೆ ಬೇಯುವ ಕರುಣೆಯಲ್ಲಿ ಫಳಗಿತು. ನೊಂದ ಜೀವ ನೋವನ್ನು ತಡೆಯುವ ಬಲವನ್ನು ಆರ್ಜಿಸಿತು.

ಆಶ್ರಮದ ಮೃಗಪಕ್ಷಿಗಳ ಕಷ್ಟಸುಖವನ್ನು ತನ್ನದಾಗಿ ಅನುಭವಿಸುತ್ತ ಅಲನೆ ವಿಶ್ವ ಜೀವನದಲ್ಲಿ ತನ್ನ ವ್ಯಕ್ತಿತ್ವವನ್ನು ಮರೆತಳು.

ನಾನೆಂಬ ಅರಿವು ಆವಳಿಗೆ ಮರಳಿ ಬಂದದ್ದು ಲಕ್ಷ್ಮಣನು ಅರಣ್ಯದಿಂದ ಹಿಂತಿರುಗಿ, ಅವಳನ್ನು ಅರಸಿಕೊಂಡು ಬಂದಾಗಲೇ. ಎರಡು, ನಾಲ್ಕು, ಆರು ಎಂಬ ವ್ಯವಹಾರದ ಸಂಖ್ಯೆಗಳನ್ನು ಅವಳು ಮರೆತಿದ್ದಳು. ಸೀತಾರಾಮರೊಡನೆ ಲಕ್ಷ್ಮಣನು ಮರಳಿ ಬಂದ ದಿನ ಅವು ಮತ್ತೆ ಅವಳಿಗೆ ನೆನಪು ಬಂದವು. ಅಯೋಧ್ಯೆಯ ಜನ ಸರಯೂ ನದಿಯಮೇಲೆ ದೋಣಿಗಳಲ್ಲಿ ತಂಡತಂಡವಾಗಿ ಹೋಗುತ್ತಿರಲು ಇದೇನೆಂದು ಊರ್ಮಿಳಾದೇವಿ ಯೋಚಿಸಿದಳು. ಆಗ ಅವಳಿಗೆ ಆ ದಿನವು ತನ್ನ ಪ್ರಿಯ ಬಂಧುಗಳ ಆಗಮನದ ದಿನವೆಂದು ಸ್ಮರಣೆಗೆ ಬಂದಿತು.

ಸೌಭಾಗ್ಯವತಿ ರಾಜಮ್ಮನವರು ಈ ಕಾವ್ಯದಲ್ಲಿ ಲಕ್ಷ್ಮಣನ ಧರ್ಮಕಾಂತೆ ಅವ ನನ್ನೂ, ಅಕ್ಕನನ್ನೂ, ಭಾವನನ್ನೂ ಮರಳಿ ನೋಡಿದ ಸಂದರ್ಭವನ್ನು ವರ್ಣಿಸಿದ್ದಾರೆ. ಇದರಲ್ಲಿ ಹೇಳಿರುವುದೆಲ್ಲವೂ ಇಲ್ಲಿ ಹೇಳಿರುವ ರೀತಿಯಲ್ಲಿಯೇ ನಡೆದಿರಬೇಕೆಂದು ನಮ್ಮ ಮನಸ್ಸೂ ಒಪ್ಪುತ್ತದೆ. ಊರ್ಮಿಳೆ, ಲಕ್ಷ್ಮಣ, ರಾಮ, ಸೀತಾದೇವಿ, ಹನುಮಂತ ಇವರೆಲ್ಲ ಇಲ್ಲಿ ಹಲಕೆಲವು ಮಾತುಗಳಲ್ಲಿ ಸ್ಫುಟವಾಗಿ ಕಣ್ಣೆದುರಿಗೆ ಬರುತ್ತಾರೆ. ಚಿಗರಿಯೊಂದು, ಅದರ ಮರಿಯೊಂದು, ಸರಯೂ ನದಿ, ತಪೋವನ ಇವುಗಳ ಚಿತ್ರಗಳು ಕತೆಯಲ್ಲಿ ಅಂದವಾಗಿ ಸೇರಿವೆ. ಮೈತ್ರಿಯ ಭರದಲ್ಲಿ ಸೇವಕ ತನವನ್ನು ಮರೆತ, ಸೇವಕನ ಸಲಿಗೆಯಲ್ಲಿ ರಾಮನು ದೇವರೆಂಬುದನ್ನು ಮರೆಯುವ ಹನುಮಂತನ ಚಿತ್ರವು, ಇಲ್ಲಿ ಹತ್ತು ಮಾತಿನಲ್ಲಿ ಮೇಲೆದ್ದು ಕಾಣುತ್ತದೆ. ಕೆಲವು ಮಾತಿನಲ್ಲಿ ಬಹಳ ಅರ್ಥ ತೋರುವುದು ಈ ಕೃತಿಯ ಹಿರಿಯ ಗುಣ. "ನಿನ್ನ ತಪ ಮುಗಿದುದೋ?" ಎಂದು ಕೇಳಿದ ಲಕ್ಷ್ಮಣನಿಗೆ ಅವನನ್ನು ಆಗತಾನೇ ಕಂಡ ಊರ್ಮಿಳೆ 'ಈಗಳೇ ಸಿದ್ಧಿ' ಎಂದು ಹೇಳುವಳು. ಊರ್ಮಿಳೆಯ ಜೀವನದ ಸಾರಸೂತ್ರ ಈ ಎರಡು ಮಾತಿನಲ್ಲಿ ಅಡಗಿ ತೋರುತ್ತದೆ. ಶ್ರೀಮತಿ ರಾಜಮ್ಮನವರಿಗೆ ಭಾವಗರ್ಭಿತವಾದ ಇಂಥ ಉಕ್ತಿ ಎಷ್ಟು ಸಹಜವಾಗಿ ಬರುತ್ತ ದೆಂಬುದು ಈ ಕಾವ್ಯದಲ್ಲಿ ಉದ್ದಕ್ಕೂ ಸ್ಪಷ್ಟವಾಗುತ್ತದೆ.

ಕಾವ್ಯದೃಷ್ಟಿಯೆಲ್ಲಕ್ಕೂ ಮೂಲ ಎಲ್ಲ ಜೀವಗಳ ಹೃದಯದಲ್ಲಿರುವ ದಿವ್ಯ ಜ್ಯೋತಿ. ಈ ಜ್ಯೋತಿ ಕೆಲವರಲ್ಲಿ ಹಿರಿದಾಗಿರುತ್ತದೆ; ಕೆಲವರಲ್ಲಿ ಕಿರಿದಾಗಿರು ತ್ತದೆ. ಅನೇಕರಲ್ಲಿ ಮಡಿಕೆ ಮಡಿಕೆಯ ಮಮತೆ ಇದಕ್ಕೆ ತೆರೆಯಾಗಿ ನಿಂತಿರು ತ್ತದೆ. ಸಾವಿರಕ್ಕೆ, ಲಕ್ಷಕ್ಕೆ ಒಬ್ಬರಲ್ಲಿ ಈ ತೆರೆ ತೆಳ್ಳಗಿರುವುದು. ಕವಿತೆ ಚೆನ್ನಾಗಿರುವುದು ಈ ತೆರೆ ತೆಳ್ಳಗಿದ್ದಾಗ. ಅದು ಕೆಡುವುದು ತೆರೆ ದಪ್ಪನಾಗಿ ಬೆಳಕನ್ನು ಮರೆಯಿಸಿದಾಗ. ತನ್ನ ಜೀವನದ ಭಾವಗಳ ಅಲೆ ಅಲೆಯನ್ನು ಒಳಗಣ ಬೆಳಕಿ ನಿಂದ ನೋಡಿ ಅರಿತು, ಆ ಪರಿಶ್ರಮದ ಸಹಾಯದಿಂದ ಇನ್ನೊಂದು ಜೀವನದ ಭಾವದ ಅಲೆಗಳನ್ನು ಕಾಣುವುದೇ ಕವಿಯ ದೃಷ್ಟಿ. ಶ್ರೀಮತಿ ರಾಜಮ್ಮನವರಲ್ಲಿ

ಈ ದೃಷ್ಟಿ ಸುಲಕ್ಷಣವಾಗಿದೆ. ಆದರಿಂದಲೇ ಅವರು ವರ್ಣಿಸುವ ವಿಷಯ, ಅವರು ವರ್ಣಿಸುವ ಹಾಗೆಯೇ ನಡೆದಿರಬೇಕೆಂದು ನಮಗೂ ಭಾಸವಾಗುವುದು. ಅಲ್ಲದೆ ಇವರು ಕಂಡದ್ದನ್ನು ಹೇಳುವುದರಲ್ಲಿ ಎಷ್ಟು ಮಾತು ಅವಶ್ಯಕವೋ ಅಷ್ಟನ್ನು ಮಾತ್ರ ಉಪಯೋಗಿಸಿದ್ದಾರೆ. ಕೇವಲ ಆಕಾರಕ್ಕಾಗಿ, ಗೌರವಕ್ಕಾಗಿ ನಿಲ್ಲುವ ಮಾತುಗಳಿಗೆ ಈ ಕಾವ್ಯದಲ್ಲಿ ಸ್ಥಳವಿಲ್ಲ. ಇಲ್ಲಿ ಸಹಜವಾದ ಕಾವ್ಯದೃಷ್ಟಿಯೂ, ಸರಳವಾದ ಕಾವ್ಯಶಕ್ತಿಯೂ ಸೇರಿ ಸುಂದರವಾದ ಒಂದು ಕಾವ್ಯವನ್ನು ನಿರ್ಮಾಣಮಾಡಿದೆ.

ಈ ಕಾವ್ಯದಲ್ಲಿ ಉಪಯೋಗಿಸಿರುವ ವೃತ್ತ ಬೇರೆ. ಕನ್ನಡದಲ್ಲಿ ಈಗ ತಾನೇ ವಾಡಿಕೆಗೆ ಬರುತ್ತಿರುವ ಬಿಡಿ ವೃತ್ತ. ಕಂಡೂ ಕಾಣದೆ ಇರುವ ನಿಯಮದಿಂದ ಕೂಡಿ ಗದ್ಯವೋ ಎಂಬಂತೆ ತೋರುವ ಈ ವೃತ್ತವು ಚೆನ್ನಾಗಿ ಬಂದಾಗ ಒಂದೆರಡು ಒಡವೆ ಗಳನ್ನು ಮಾತ್ರ ತೊಟ್ಟ ಸುಲಕ್ಷಿಣೆಯಂತೆ, ಪ್ರಭಾತ ಕಲ್ಪವಾದ ಶರ್ವರಿಯಂತೆ ಮನೋಜ್ಞವಾಗಿರುವುದು. ನಿಯಮ ಕಡಿಮೆಯಾದದ್ದರಿಂದ ಇವನ್ನು ಚೆನ್ನಾಗಿ ಬರೆ ಯುವುದು ಕಷ್ಟ. ಇಂಥ ವೃತ್ತವನ್ನು ಬರೆಯುವುದರಲ್ಲಿ ಶ್ರೀಮತಿ ರಾಜಮ್ಮನವರು ಒಟ್ಟಿನಲ್ಲಿ ಅಸಾಧಾರಣವಾದ ಕುಶಲತೆಯನ್ನು ತೋರಿರುವರು. ಕನ್ನಡದ ಬಿಡಿ ವೃತ್ತದ ರೂಪು ನಿಯಮಿತವಾಗುವುದಕ್ಕೆ ಈ ಕಾವ್ಯದಿಂದ ಬಹಳ ಸಹಾಯವಾಗುವುದೆಂಬ ವಿಷಯದಲ್ಲಿ ಸಂದೇಹವಿಲ್ಲ.

ಈ ಕಾವ್ಯಕ್ಕಾಗಿ ಶ್ರೀಮತಿ ರಾಜಮ್ಮನವರಿಗೆ ವಿದ್ಯಾಭ್ಯಾಸದ ಇಲಾಖೆಯಿಂದ ಬಹುಮತಿಯ ಶುಲ್ಕವೊಂದು ದೊರೆಯಿತು. ಇದು ಎಲ್ಲ ದೃಷ್ಟಿಯಿಂದಲೂ ಸಂತೋಷ ಕರವಾದ ವಿಷಯ.

ಕನ್ನಡ ಸಾಹಿತ್ಯವು ನಡೆಯುತ್ತಿರುವ ಹೊಸ ದಾರಿಯನ್ನು ಸ್ವಲ್ಪ ಭಯದಿಂದ ಸ್ವಲ್ಪ ಆಶೆಯಿಂದ ನೋಡುತ್ತಾ ನಿಂತಿರುವವರಿಗೆ ಧೈರ್ಯವನ್ನು ಕೊಡುವ ಸಂದರ್ಭ ಗಳು ಹಲವು ಈ ಮೊದಲು ಕಂಡಿವೆ. ಕನ್ನಡದ ನುಡಿ ಚೇತನವು ಪರಂಜ್ಯೋತಿಗೆ ಮಾಡುವ ಪ್ರಾರ್ಥನೆಗೆ "ಕರುಣಾಳು ಬಾ ಬೆಳಕೆ" ಎಂಬ ಮಾತಿನಲ್ಲಿ ರೂಪು ಕೊಟ್ಟಾಗ 'ಅರೆ ಮೂಕನಾಗಿಹೆನು ಕರಕರೆಯ ಪಡುತಿಹೆನು' ಎಂದು ಕೊರಗಿ ಮಾನವನ ಮೂಕ ಅಳಲನ್ನು ನುಡಿದಾಗ, "ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ" ಎಂದು ನಮ್ಮ ನಾಡ ಸೊಗಸನ್ನು ಹೇಳಿ ವಿಜೃಂಭಿಸಿದಾಗ, "ಅಂದಿನಾ ದೇವರು ಗಳೆಲ್ಲಾ ಮಡಿದ್ಹೋಗಿಹರು" ಎಂದು ದೈವವನ್ನು ಕುರಿತ ಅಲ್ಪ ಭಾವನೆಗಳ ಚರಮ ಗೀತೆಯನ್ನು ರಚಿಸಿದಾಗ, "ಅಡಿಯ ಗೆಜ್ಜೆ ನಡುಗೆ ಹೆಜ್ಜೆಯಿಡುತ ಸುಗ್ಗಿ ಬರುತಿದೆ." ಎಂದು ಉಲ್ಲಾಸದಿಂದ ಹಾಡಿದಾಗ, 'ಬರು ಬುರೂ ಬಸವಣ್ಣ ನಿದೊ' ಎಂದು ಎಳೆಯ ಮಗುವಿನ ಅವ್ಯಾಜ ಮನೋಹರವಾದ ಮಾತುಗಳನ್ನು ವರ್ಣಿಸಿದಾಗ, "ಹಕ್ಕಿ ಹಾರು ತಿದೆ ನೋಡಿದಿರಾ" ಎಂದು ಕವಿ ಕಂಡುದನ್ನು ಸಾಮಾನ್ಯ ದೃಷ್ಟಿಗೆ ಹೃದಯಂಗಮ ವಾಗಿ ವಿವರಿಸಿದಾಗ, ಅದನ್ನು ನೋಡಿ ಯಾರು ತಾನೆ ಉತ್ಸಾಹ ಪಡದೆ ಇರುವರು? ಹೊಸ ಸಾಹಿತ್ಯದ ಹಿರಿಮೆಯನ್ನು ಸೂಚಿಸುವುವೆಂಬ ಕಾರಣದಿಂದ ನಾನು ಈ ವಾಕ್ಯ

ಗಳನ್ನು ಸದಾ ಜ್ಞಾಪಕದಲ್ಲಿಟ್ಟುಕೊಂಡಿದ್ದೇನೆ. ಇನ್ನು ಮೇಲೆ ಇವುಗಳ ಜೊತೆಗೆ, 'ಮನದಿ ಇಂದೇನು ಉತ್ಸಾಹದಂಕುರವು?' ಎಂಬ ಮಾತನ್ನೂ ಸೇರಿಸಿಕೊಳ್ಳುತ್ತೇನೆ. ಈ ಸಂದರ್ಭಗಳಲ್ಲೆಲ್ಲ ಸುಂದರವಾದ ಭಾವ ಸುಂದರವಾದ ಮಾತಿನಲ್ಲಿ ರೂಪುಗೊಂಡಿದೆ. ಇಲ್ಲಿ ಕಾಣುವ ರೀತಿ ಪ್ರಪಂಚದ ಅತ್ಯುತ್ತಮ ಕಾವ್ಯಗಳ ರೀತಿ. ಇದನ್ನು ನೋಡಿದ ಯಾರಿಗಾದರೂ ಸರಸ್ವತಿ ಕನ್ನಡ ನುಡಿಯನ್ನು ಮೇಲಣ ಹಂತಕ್ಕೆ ಕರೆದುಕೊಂಡಳು ಎಂದು ತೋರಬೇಕು. ಇತರ ಭಾಷೆಗಳಲ್ಲಿ ಇಂತಹ ಬರವಣಿಗೆ ಇನ್ನೂ ಹೆಚ್ಚಾಗಿ ಇರಬಹುದು. ನಮ್ಮಲ್ಲಿರುವುದು ಕೊಂಚ. ಆದರೂ ಇದಿಷ್ಟು ಮೇಲಣ ಮೆಟ್ಟಿಲಿನ ಬರವಣಿಗೆ.

ಈ ಮುನ್ನುಡಿಯನ್ನು ಓದಿ "ಏನು ಇಷ್ಟು ಉತ್ಸಾಹ" ಎಂದು ಕೆಲವರು ಕೇಳಬಹುದು. ಕಾವ್ಯವನ್ನು ಓದಿದರೆ ಅವರಿಗೆ ಕಾರಣ ತಿಳಿಯುವುದು. ವನವಾಸ ಹೋಗಿದ್ದ ನಮ್ಮ ನಾಡ ದೈವ, ನಮ್ಮ ನುಡಿ ಶಕ್ತಿ, ನಮ್ಮ ಜನದ ಜೀವ ಇಂದು ಮರಳಿ ಬರುತ್ತಿವೆ. ನಮ್ಮ ಬಾಳು ಸಡಗರದಿಂದ ತುಂಬಿದೆ. ನಮ್ಮ ಕಾವ್ಯ ಸರಯೂ ನದಿಯಂತೆ ಹರುಷಭರದಿಂದ ಹರಿಯುತ್ತಿದೆ. ಬಹುಕಾಲ ತಪಸ್ಸು ಮಾಡಿದ ನಮ್ಮ ಮಾತೃಭೂಮಿ ಇಷ್ಟರಲ್ಲೇ ತನ್ನ ತಪಸ್ಸಿನ ಸಿದ್ಧಿಯನ್ನು ಪಡೆಯುತ್ತಾಳೆ. ಈ ಕಾವ್ಯವನ್ನು ಓದಿ ನಮ್ಮ ಜನರ ಜೀವನದಲ್ಲಿ ಅದರ ಅರ್ಥವನ್ನು ಕುರಿತು ಯೋಚಿಸಿದವರಿಗೆಲ್ಲ ನಿಜವೆಂದು ತೋರುವುದು. ಇದನ್ನು ರಚಿಸಿದವರು ನಮ್ಮ ಸೋದರಿಯೊಬ್ಬರೆಂದು ನೆನೆದವರಲ್ಲೆಲ್ಲ ಇದೇ ಉತ್ಸಾಹವು ಅಂಕುರಿಸುವುದು

(೧೯೩೧ರಲ್ಲಿ "ತಪಸ್ವಿನಿ"ಗೆ ಬರೆದ ಮುನ್ನುಡಿ)

My tribute of deep and heart-felt admiration for the great delicacy and naturalness of her portraiture of 'Urmila.'

May it be her's to give, and ours to gratefully appriciate, many many more of such beautiful moving pictures.

—*D. V. Gundappa*

(ತಾ॥ ೧೪-೧೨-೧೯೩೦ ರಂದು ಶ್ರೀ ಡಿ.ವಿ. ಗುಂಡಪ್ಪನವರು, ಶ್ರೀ ತಿ. ತಾ. ಶರ್ಮರಿಗೆ ಬರೆದ ಪತ್ರದಿಂದ)

ಮಹಾಸತಿ

● ವಿ. ಸೀತಾರಾಮಯ್ಯ

ಸೋದರಿ ತಿರುಮಲೆ ರಾಜಮ್ಮನವರು ಕನ್ನಡ ಸಾಹಿತ್ಯಕ್ಕೆ ಈಗ ಹೊಸತಾಗಿ ಕಾಲಿಟ್ಟವರೇನಲ್ಲ. ಅವರ ಹಲವಾರು ಗೀತೆಗಳೂ 'ತಪಸ್ವಿನಿ' ಎಂಬ ನಾಟಕವೂ ಈಗಾಗಲೆ ಅವರಿಗೆ ಕೀರ್ತಿ ತಂದಿದೆ. ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರ ಪತ್ನಿಯಾದ ಅವರು ನಾಡಿನ ಹಲವಾರು ಉತ್ಸವಗಳಲ್ಲಿ ಭಾಗವಹಿಸಿದ್ದಾರೆ. ವೀಣಾ ವಾದನದಿಂದ ಕೂಡ ಆನಂದವನ್ನು ಊಡಿದ್ದಾರೆ. ದಂಪತಿಗಳಿಬ್ಬರೂ ಖ್ಯಾತರಾಗಿ ನಾಡಸೇವೆ ಮಾಡುವ ಪುಣ್ಯ, ಈ ಇಬ್ಬರ ಒಡಬಾಳಿನ ಒಂದು ಚೆಲುವು. ಮಹಾ ಸತಿ ದೇಕಬ್ಬೆಯನ್ನು ಕುರಿತು ಒಂದು ಸಣ್ಣ ನಾಟಕವನ್ನು ಬರೆದು ಈಗ ಒಂದು ಹೊಸ ಕಾಣಿಕೆಯನ್ನು ತೆರುತ್ತಿದ್ದಾರೆ ಕನ್ನಡಕ್ಕೆ. ತಾಯ್ನುಡಿ ಇವರಿಗೆ ಕನ್ನಡ ಅಲ್ಲ ವಾದರೂ, ತಾಯ್ನುಡಿ ಬೇರೆಯಾದ ಇಂಥ ಹಲವರ ಪ್ರೀತಿಯಿಂದ ಕನ್ನಡಕ್ಕೆ ಬಹು ವಾದ ಕಳೆ, ಸಂಪತ್ತು ಬಂದಿದೆ. ಇವರ ಬದುಕಿನಲ್ಲಿಯೂ, ಇತರ ಕೃತಿಗಳಲ್ಲಿಯೂ ಯಾವ ಗುಣಗಳನ್ನು ಕಂಡಿವೆಯೋ ಅವು ಇವರಲ್ಲಿಯೂ ಕಾಣುತ್ತನೆ. ಸೌಂದರ್ಯ, ಶುಚಿ, ನಿಷ್ಠೆ, ಬಾಳಿನ ತೀವ್ರತೆ, ಲಲಿತವಾಗಿ, ಅರ್ಥವತ್ತಾಗಿ ಬರೆವ ರೀತಿ ಅವು ಈ ನಾಟಕದಲ್ಲಿ ಕಾಣುತ್ತವೆ.

ರವೀಂದ್ರನಾಥ ಠಾಕೂರರು ಕವಿಯ ಅನಾದರ ಎಂಬ ಲೇಖನ ಮಾಲೆಯಲ್ಲಿ ಬಾಣ ಕಾದಂಬರಿಯ ಪತ್ರಲೇಖೆಗೂ, ರಾಮಾಯಣದ ಊರ್ಮಿಳೆಗೂ ಆಗಿರುವ ಅನ್ಯಾಯವನ್ನು ಕುರಿತು ಜನರ ಸಹಾನುಭೂತಿಯನ್ನು ತೆರೆದಿದ್ದಾರಲ್ಲವೆ! ಊರ್ಮಿ ಳೆಯ ಸ್ಥಿತಿ ಚಿತ್ರವನ್ನು ಶ್ರೀಮತಿ ರಾಜಮ್ಮನವರು, 'ತಪಸ್ವಿನಿ'ಯಲ್ಲಿ ೨೦--೨೫ವರ್ಷ ಗಳ ಹಿಂದೆ ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟರು. ಶರ್ಮರು ಪ್ರಾಕ್ತನ ಸಂಶೋಧನದಲ್ಲಿ ನುರಿತವರು. ಅವರು ಶಾಸನಗಳನ್ನು ಓದುತ್ತ, ವಿವರಿಸುತ್ತ, ಅವಕ್ಕೆ ಬೆಲೆಕಟ್ಟುತ್ತ ಇರುವಾಗ ಹೆಗ್ಗಡದೇವನಕೋಟೆಯ ಒಂದು ಶಾಸನದಲ್ಲಿನ

ವೀರಸತಿ ದೇಕಲೆಯ ಕಥೆ ವೀರವ್ವ ಇವರ ಕುಟುಂಬದ ಮನಸ್ಸಿಗೆ ತಟ್ಟಿರಬೇಕು. ಇಂಥ ಮಹಾಸತಿಯರ ಕಥೆ, ಕನ್ನಡ ನಾಡಿನ ಅತಿಶಯಗಳಲ್ಲಿ ಒಂದು. ಕಥೆಯಲ್ಲಿನ ನೋವು, ಮೊನೆ ಅತೀವಾದುವು. ಈ ನಾಟಕಕ್ಕೆ ಪ್ರಸ್ತಾವನೆಯಾಗಿ ಆ ಶಾಸನ ವನ್ನೂ ಅಚ್ಚುಮಾಡಿದ್ದಾರೆ.

ಈ ಪದ್ಯ ನಾಟಕದಲ್ಲಿ ಸಾಲುಗಳ ಓಟ, ಬನಿ ಹಿಂದಿನ ಇವರ ಕೃತಿಗಳಲ್ಲಿನವ ಕ್ಕಿಂತ ಕುದುರಿವೆ. ಮನಸ್ಸಿನ ಆಳ, ಲೋಕಾನುಭವಗಳ ತುಂಬು ನೋಟ, ಪಾತ್ರ ಗಳ ಬಾಯಲ್ಲಿ ನುಡಿಯುತ್ತವೆ.

ಮಹಾಸತಿಯರ ಬದುಕು ದೊಡ್ಡ ನಿರ್ಘರದ್ದು : ಅಷ್ಟೇ ಮಟ್ಟಿಗೆ ಮೃದು, ಕೋಮಲ. ಇವರ ಆತ್ಮಾರ್ಪಣ, 'ಶುಭ ಸಂಭ್ರಮ' ಮನಸ್ಸನ್ನು ಮರುಗಿಸುತ್ತದೆ. ರಾಜಾಜ್ಞೆಯನ್ನು ಮೀರಿದ ಏಚರಸನು ತಲೆದಂಡವನ್ನು ತೆತ್ತನಾದರೂ ಆತನ ಹಿರಿಮೆ ಸಾಮಾನ್ಯವಾದ್ದಲ್ಲ. ಹಿಂದಿನ ದಿನ ಕೆಟ್ಟ ಕನಸುಗಳನ್ನು ಕಂಡು ಕಳವಳಗೊಂಡ ಆತನ ಹೆಂಡತಿಗೆ ಎರಡನೆಯ ದಿನ ತನ್ನ ದಂಡನಾಯಕನ ಬಾಯಿಂದ ಸಂಗತಿ ತಿಳಿದು ಬರುತ್ತದೆ. ತನ್ನ ದುಃಖವನ್ನು ತೋಡಿಕೊಳ್ಳುವಳು. ತನ್ನಂಥವಳಿಗೆ ಉಳಿದ ಭಾಗ್ಯ, ಧರ್ಮ ಒಂದೇ-ಪತಿಯೊಡನೆ ಸದ್ಗತಿಗೆ ನಡೆವುದು. ಹಾಗೆ ನಿಶ್ಚಯಿಸಿ ಗೆಳತಿಯರು, ತಾಯ್ತಂದೆಯರು, ಊರವರು ಎಷ್ಟು ಬಗೆಯಾಗಿ ನಿವಾರಿಸಿದರೂ ತಡೆಯದೆ ಚಿತಾರೋಹಣ ಮಾಡುವಳು. ಆಕೆಗೆ ಅದು ಮಹಾಯಾತ್ರೆ. ಸಾಮಾನ್ಯ ರಿಗೆ ಲಭ್ಯವಲ್ಲದಷ್ಟು ದೊಡ್ಡತನ ಆಕೆಯದು. ಸಾಮಾಜಿಕ ಸಂಪ್ರದಾಯವಾಗಿ 'ಸತೀ' ಹೆಣ್ಣಿನ ಬದುಕಿಗೆ ಎಷ್ಟು ಗಾಸಿಯನ್ನು ತಂದಿತೋ ಅದನ್ನು ಓದಿ ಕೇಳಿದ ಅಂತ ಹವರಿಗೆ ಈ ಚಿತ್ರದ ಕಾಂತಿ ಉಜ್ವಲವಾಗಿ ಕಾಣಿಸುವುದು. ತಾನಾಗಿ ಒಲಿದ, ಆಯ್ದ ಈ ಸಾವಿನ ಹಿರಿಮೆ ನಮ್ಮನ್ನು ಮೂಕರನ್ನಾಗಿಸುತ್ತದೆ. ಆ ಹಿರಿಮೆಯ ಸ್ವರೂಪ ವನ್ನು ಶ್ರೀಮತಿಯವರು ಚೆನ್ನಾಗಿ ಕಾಣಿಸಿದ್ದಾರೆ.

ದೇಕಲೆಯ ಇಬ್ಬರು ಗೆಳತಿಯರು ಮಲ್ಲಬ್ಬೆ, ನೀಲಬ್ಬೆ. ಎರಡು ದೃಷ್ಟಿ, ಎರಡು ಗುಣ ಪಕ್ಷಪಾತ, ಲೋಕಾಭಿಪ್ರಾಯದ ಎರಡು ಮುಖಗಳನ್ನು ಕಾಣಿಸು ವವರು. ನೀಲಬ್ಬೆಯ ತಿಳುವಳಿಕೆ ಹದವಾದ್ದು, ಬಹುತರ ಆಕೆಯ ಪ್ರಜ್ಞೆಯ ನೆಲಸಿ ನಲ್ಲಿ ಈ ನಾಟಕದ ಮುಖ್ಯ ಬೆಲೆ ಕಟ್ಟಿ ನಿಂತೀತು. ಅದಕ್ಕೆ ವಿಶ್ವಾಸ ತಂದೀತು.

ವೀರ ಧರ್ಮವು ತ್ಯಾಗ ಆದರ ಕರ್ಮವು ಸೇವೆ
ವೀರರೌದಾರ್ಯದಲೆ ಜಗದ ಕ್ಷೇಮವಿದೆ

—ಎಂದ ಆಕೆಯ ಮಾತಿನಲ್ಲಿ ವಿವೇಕ ಇದೆ. ಕಲಿಕಾಲ ಕರ್ಣನೆಂದು ಹೆಸರಾದ ಏಚಮರಸನು ತನ್ನ ಕೀರ್ತಿಗೆ ಒಪ್ಪುವಂತಹ ಕಾರ್ಯ ಮಾಡಿದ್ದಾನೆ. ಆತನ ಪವಿತ್ರವಾದ ಸಾವಿಗೆ ಕಾಣಿಕೆ ಎಂಬಂತಿದೆ ದೇಕಲೆಯೇ ಆಡುವ ಈ ಮಾತು :

ಗೆದ್ದರೇನಿದ್ದವರೆ ? ಬಿದ್ದರೇನಳಿದವರೇ ?
ಬಿದ್ದವರ ತ್ಯಾಗದಲಿ ಉದ್ಧಾರವಾಯ್ತು ಜಗ,

'ತ್ಯಾಗ'–ಇಲ್ಲಿನ ಸಾರ ಮರ್ಮದ ಮಾತು. ನೀಲಬ್ಬೆ, ದೇಕಲೆಯರ ಹೃದಯ ಸಾಮರಸ್ಯದ ಪ್ರತೀಕವಾಗಿದೆ ಅದು. ಮಲ್ಲಬ್ಬೆಯ ಮನಸ್ಸು ತುಂಬಾ ಮೃದು. ಅದಕ್ಕೆ ಕರ್ಕಶತೆ ಒಪ್ಪದು, ಸಹಿಸದು. ನೀಲಬ್ಬೆಯ ತಿಳಿವು ಕಲ್ಯಾಣಗರ್ಭವಾದ್ದು. ದೊಡ್ಡ ಮನಸ್ಸಿನ ನೋವನ್ನು ಅರ್ಥ ಮಾಡಿಕೊಂಡು ತಾಳಿಕೊಳ್ಳುವ ಶಕ್ತಿ ಸ್ಥೈರ್ಯ ಉಳ್ಳದ್ದು. ಮಲ್ಲಬ್ಬೆಯ ಅಂತಃಕರಣ ಸಾಧಾರಣ ಮಾನವತೆಯದು. ದೇಕಲೆಯ ಮನಸ್ಸು, ಸೆಲೆ, ವಿಲಾಸ, ಪ್ರೇಮ ಸಂಪತ್ತಿಗಳನ್ನು ನಾಟಕವನ್ನು ಓದಿಯೇ ತಿಳಿಯ ಬೇಕು.

ಮಲ್ಲಬ್ಬೆ, ನೀಲಬ್ಬೆಯರ ಆರಂಭ ಸಂಭಾಷಣೆಯಲ್ಲಿ ಬರುವ ನಿಶಿ–ಶಶಿಯರ ಸ್ವರೂಪ ಬಾಂಧವ್ಯಗಳ ರೂಪಣ ಚೆನ್ನಾಗಿದೆ.

('ಮಹಾಸತಿ'ಗೆ ಬರೆದ ಮುನ್ನುಡಿ; ತಾ॥ ೧೬–೧–೧೯೫೩)

....'ಮಹಾಸತಿ'ಯನ್ನು ಓದಿ ಆನಂದಪಟ್ಟೆ. ನಿಜವಾಗಿ ನಿಮ್ಮ ಶೈಲಿ ಸರಳವಾದುದೂ, ಸ್ಫೂರ್ತಿದಾಯಕವಾದುದೂ, ಗಂಭೀರ ವಾದುದೂ ಆಗಿದೆ. ಅಲ್ಲದೆ ವಿಚಾರ ಪ್ರಚೋದಕವೂ ಆಗಿದೆ.... ದೇಕಬ್ಬೆಯ ಪಾತ್ರವಂತೂ ಎಲ್ಲಕ್ಕೂ ಕಳಸವಿಟ್ಟಂತೆ.

—**ಆಲೂರ ವೆಂಕಟರಾವ್**

(ತಾ॥ ೧೧–೧೧–೧೯೫೪ರಂದು ಶ್ರೀ ಆಲೂರು ವೆಂಕಟರಾಯರು ಶ್ರೀಮತಿ ರಾಜಮ್ಮನವರಿಗೆ ಬರೆದ ಪತ್ರದಿಂದ)

ಸತ್ವಕ್ಷಾತ್ರಗಳ ತನಿರಸ

● ಸಿ. ಕೆ. ವೆಂಕಟರಾಮಯ್ಯ

"ತಪಸ್ವಿನಿ"ಯು ಹೊಸ ಛಂದಸ್ಸಿನಲ್ಲಿ ಬರೆದಿರುವ ಪುಟ್ಟದೊಂದು ರೂಪಕ. 'ಭಾರತಿ' ಎಂಬ ಅಭಿದಾನದಿಂದ ಸ್ವಾರಸ್ಯವಾದ ಅನೇಕ ಕವಿತೆಗಳನ್ನು ರಚಿಸಿರುವ ಶ್ರೀಮತಿ ತಿರುಮಲೆ ರಾಜಮ್ಮನವರು ಇದನ್ನು ಬರೆದಿದ್ದಾರೆ. ಅವರು ಈ ಗ್ರಂಥದಲ್ಲಿ ತೋರ್ಪಡಿಸಿರುವ ಕಲ್ಪನಾ ಸಾಮರ್ಥ್ಯವೂ, ಪ್ರತಿಭೆಯೂ ಶ್ಲಾಘ್ಯವಾದವುಗಳು.

ಶ್ರೀರಾಮಚಂದ್ರನು ಅರಣ್ಯವಾಸವನ್ನು ಮುಗಿಸಿ ಹಿಂದಿರುಗಿದ ದಿವಸ, ಹಿಂದಣ ಹದಿನಾಲ್ಕು ವರ್ಷಗಳ ಕಾಲವೂ ತಪೋನಿರತಳಾಗಿದ್ದ ಧನ್ಯಳಾದ ಊರ್ಮಿಳಾದೇವಿಯನ್ನು ಲಕ್ಷ್ಮಣನು ಕಾಣುವ ಸನ್ನಿವೇಶವು ಇದರಲ್ಲಿ ಚಿತ್ರಿತವಾಗಿದೆ. ರಾಜಧಾನಿಗೆ ದೂರವಾದೊಂದೆಡೆಯಲ್ಲಿ ಊರ್ಮಿಳಾದೇವಿಯ ಆಶ್ರಮ. ತಪಸ್ವಿನಿಯಾಗಿ ಶಾಂತಿಯ ಸುಖದಲ್ಲಿ ಮಗ್ನಳಾಗಿದ್ದ ಊರ್ಮಿಳಾದೇವಿಗೆ ಅಂದು "ಉತ್ಸಾಹವಂಕುರ"; ಅಲ್ಲದೆ, "ಆವುದೋ ಹಳೆಯ ನೆನಪೊಂದು ತೋರುತಿದೆ." ಅಷ್ಟೇ ಅಲ್ಲ, ಅಂದಿನವರೆಗೂ "ಆವುದೋ ಇಚ್ಛೆಯಲಿ, ಪಿರಿಯ ಕಲ್ಪನೆಯ ಸುಖದಲ್ಲಿ ಎಚ್ಚರವನುಳಿದಿರ್ದೆ"ನೆಂದು ಒಪ್ಪಿಕೊಳ್ಳುವ ಆಕೆಗೆ ಅಂದು ತನ್ನ ಇನಿಯನೊಡನೆ ಶ್ರೀರಾಮಚಂದ್ರನು ವನವಾಸದಿಂದ ಹಿಂದಿರುಗಿ ಬರುವದಿನವೆಂಬುದು ತೋರಿಬರುವ ಸನ್ನಿವೇಶವಾದರೂ ಎಷ್ಟು ರಮಣೀಯವಾದುದು! ಸರಯೂ ನದಿಯಮೇಲೆ ಹೋಗುತ್ತಿರುವ ದೋಣಿಗಳನ್ನು ಆಕೆಯು ಎಣಿಕೆ ಮಾಡುವಳು. ಹದಿನಾಲ್ಕು ದೋಣಿಗಳು! "ಅಹುದು, ವನವಾಸವನ್ನು ಕಳೆದು ಶ್ರೀರಾಮನೈತರುವ ದಿನವೆಂದು ಜನರೆಲ್ಲರೋಡುತಿಹರು." ಹದಿನಾಲ್ಕು ವರುಷಗಳನ್ನೂ 'ನಿರಾಯಾಸ'ವಾಗಿ ಕಳೆದಿದ್ದ ಆಕೆಯು ಇನಿಯನ ಆಗಮನ ವಿಚಾರವನ್ನು ಆಗ ನೆನಪಿಗೆ ತಂದುಕೊಂಡು ಅದರ ವಿಷಯವಾಗಿ ಆಲೋಚಿಸುತ್ತಿರುವಳು. ಆ

ವೇಳೆಗೆ ಮರಿಯನ್ನಗಲಿರುವ ಅವಳ ಜಿಂಕೆಯೊಂದು ಅಲ್ಲಿಗೆ ಬರುವುದು. ಕಲಾ ಕೌಶಲದ ದೃಷ್ಟಿಯಿಂದ ಇದು ರಮಣೀಯ ಕಲ್ಪನೆಯೇ ಸರಿ. ಊರ್ಮಿಳಾದೇವಿಯು "ಬಾರೆನ್ನ ಪ್ರೇಮ ಬಂಧುವೇ! ಸೊಬಗಸಿರವೆ! ಬರಲಿಲ್ಲವೋ ಪುಟ್ಟ ಕಂದನಿನ್ನೊ ಬಳಿಗೆ?" ಎಂದು ಕೇಳಿ ಊರ್ಮಿಳಾದೇವಿಯು ವಿಶ್ವಪ್ರೇಮದ ತನ್ನ ವಿಶಾಲ ಹೃದಯವನ್ನೇ ನಮ್ಮೆದುರಿಗೆ ಹಿಡಿದು ತೋರುವಳು. ಈ ಸನ್ನಿವೇಶದಲ್ಲಿ ಮತ್ತೊಂದು ಸೊಬಗೂ ಉಂಟು. "ಎನ್ನೆದೆಯ ಗೀತವೇ! ಎನ್ನ ತನಿಯುಸಿರೆ, ಕರುಳ ಮಮತೆಯ ನೋವನಾಸರಿವೆನೆಂತು?" ಎಂದು ಊರ್ಮಿಳಾದೇವಿಯು ಕೇಳುವುದನ್ನು ನೋಡಿ ನಮ್ಮ ಮನಸ್ಸು ಮೇಣದಂತೆ ಕರಗಿಹೋಗುವುದು. ಅವಳು ತಪಸ್ವಿನಿಯಾದರೂ ದಾಂಪತ್ಯ ಧರ್ಮದ ಪರಿಪಕ್ವಸ್ಥಿತಿಯನ್ನೈದಿ "ಕರುಳ ಮಮತೆಯ" ಭಾಗ್ಯವನ್ನು ಪಡೆಯಲಿಚ್ಛಿಸುವ ಬಯಕೆಯಿಂದಲೂ ಕೂಡಿರುವಳೆಂಬ ಅಂಶವು ಸೂಚಿತವಾಗಿ, 'ಭಲೆ' ಎಂದು ವಾಚಕರು ತಲೆದೂಗುವಂತಾಗುವುದು. ಇತ್ತ ಊರ್ಮಿಳೆಯು ಜಿಂಕೆಯನ್ನು ಸಮಾಧಾನ ವಾಕ್ಯಗಳಿಂದ ಸಂತವಿಡುತ್ತಿರುವಲ್ಲಿ, ಅತ್ತ ಲಕ್ಷ್ಮಣನು ಮುದ್ದು ಚಿಗುರಿಯ ಮರಿಯನ್ನೆತ್ತಿಕೊಂಡು, "ಎಲ್ಲೆಲ್ಲಿ ತಿರುಗಿ ಬಳಲಿದೆಯೋ ಕಂದ?" ಎಂದು ಕೇಳುತ್ತ ಆಶ್ರಮದ ಕಡೆಗೆ ಬರುವನು. ಅದಕ್ಕೆ ತಾಯಿಯನ್ನು ತೋರಿಸುವುದಾಗಿ ಮಾತುಕೊಡುವನು. ಅಷ್ಟರಲ್ಲಿ ಚಿಗುರಿಯ ಮರಿಯು ಊರ್ಮಿಳಾದೇವಿಯ ಬಳಿಯಲ್ಲಿರುವ ತಾಯಿ ಚಿಗುರಿಯನ್ನು ಕಂಡು ಚಂಗನೆ ಧುಮ್ಮಿಕ್ಕಿ ಓಡುವುದು. ಲಕ್ಷ್ಮಣನು ತನ್ನ ಪ್ರಿಯಪತ್ನಿಯನ್ನು ಕಂಡ ಬಳಿಕ ಅವರೀರ್ವರ ಪ್ರೇಮಾಲಾಪವನ್ನು, ಸಂಯಮಿ ಶ್ರೇಷ್ಠರಾದ ಅವರೀರ್ವರ ಪ್ರಿಯ ವಚನಗಳ ಮಧುರಾಲಾಪವನ್ನು—ಹಲವು ಬಾರಿ ಓದಿದರೂ ತೃಪ್ತಿಯಾಗುವಂತಿಲ್ಲ. ಲಕ್ಷ್ಮಣನು: "ಊರ್ಮಿಳಾ! ಬಂದೆನಿದೋ! ನೀಡು ಶಾಂತಿಯ, ಭಿಕ್ಷೆ ಬೇಡುವೆನು." ಎಂದು ಹೇಳುವುದನ್ನು ಕೇಳಿದಾಗ ಪಟಕ್ಕನೆ ನಮ್ಮ ಕಣ್ಣುಗಳಿಂದ ನೀರು ಉರುಳುವುದು. ಮುಂದೆ, ಸೀತಾದೇವಿಯು ಊರ್ಮಿಳಾ ಲಕ್ಷ್ಮಣರನ್ನು "ಧನ್ಯರಿವರೇ ಜಗದಿ" ಎಂದು ವರ್ಣಿಸುವಾಗಲೂ ಹೀಗೆಯೇ ಆಗುವುದು. "ಭಾರತವರ್ಷವು ಇಂತಹ ಅರಳಿದ—ಹೂಗಳಿಂದ ತುಂಬಿದ ಹೂದೋಟವಾಗುವ ದಿನವು ಮತ್ತೆ ಬರುವುದೇ? ಯಂತ್ರರಚನೆಗೆ ಕೈಹಾಕಿ, ಮನುಷ್ಯನು ತಾನೇ ಯಂತ್ರವಾಗಿ ಪರಿಣಮಿಸುತ್ತಿರುವ ಈ ಯಂತ್ರಯುಗದಲ್ಲಿ ಅದು ಸಾಧ್ಯವೇ?" ಎಂದು ನಮ್ಮ ಹೃದಯವು ಪ್ರಶ್ನೆ ಮಾಡುವುದು.

ಲಕ್ಷ್ಮಣನಾದರೋ ಶ್ರೀರಾಮಚಂದ್ರನಿಂದಲೂ ಹೊಗಳಿಸಿಕೊಳ್ಳುವ ಸ್ವಾರ್ಥತ್ಯಾಗದಿಂದ ತುಂಬಿದ ಕ್ಷಾತ್ರತೇಜದ ಕರ್ಮಯೋಗಿ. ಊರ್ಮಿಳಾದೇವಿಯು ಸಂಯಮದಿಂದ ಶಾಂತಿಸುಖವನ್ನು ಪಡೆದು ಆದರ್ಶದಾಂಪತ್ಯಕ್ಕೆ ಸಿದ್ಧವಾಗಿ "ಧೀರಮತಿ"ಯಾಗಿರುವ ಸಾಧ್ವೀರತ್ನ. ಇನ್ನು ಅವರೀರ್ವರ ಸಂಭಾಷಣೆಯು ಮನೋಹರವಾಗಿರುವುದರಲ್ಲಿ ಆಶ್ಚರ್ಯವೆಲ್ಲಿಯದು? ಲಕ್ಷ್ಮಣನು ಅರಣ್ಯವಾಸದ

ಕಥೆಯನ್ನು ಹೇಳುವನು. ಶೂರ್ಪನಖಿಯು "ಕೊಂಕು ಬಯಕೆಯನೊಂದ ತಿಳುಪಿದ"ಳೆಂಬ ಲಕ್ಷ್ಮಣನ ಮಾತನ್ನು ಕೇಳಿ ಊರ್ಮಿಳೆಯೊಡನೆ ನಾವೂ ನಗುವೆವು. ಶೂರ್ಪನಖಿಯು ಮದುವೆಯನ್ನು ಬಯಸಿದಳೆಂಬುದನ್ನು ಕೇಳಿ, ಊರ್ಮಿಳಾದೇವಿಯು "ಆರನೊಲಿದು? ಮರೆಯಲಾದುದೆ ಎನ್ನ" ಎಂದು ಹೇಳುವಳು. ಮರ್ಯಾದೆಯ ಮೇರೆಯನ್ನು ಮೀರದಿರುವ ತಿಳಿಯಾದ ಹಾಸ್ಯವು ಈ ನುಡಿಗಳಲ್ಲಿ ತುಂಬಿದೆ. "ಮರೆವೆನೇ ಜೀವವನು?" ಎಂಬ ಲಕ್ಷ್ಮಣನ ನುಡಿಗಳೂ ಉಚಿತವಾಗಿವೆ. ಲಕ್ಷ್ಮಣನು ಸೀತಾಪಹರಣದ ಸುದ್ದಿಯನ್ನೆತ್ತಿದಾಗ ಊರ್ಮಿಳಾದೇವಿಯು "ಏನಾದಳೆಲ್ಲಿ ಪೋದಳು? ವನದಿ ನೀಗಿದಿರಿ ಲೋಕಮಾತೆಯನು?" ಎಂದು ಕಳವಳಪಡುವುದನ್ನು ನೋಡಿ, ಸೀತಾದೇವಿಯಲ್ಲಿ ಅವಳಿಗಿರುವ ಪ್ರೀತಿ, ಮಮತೆಗಳನ್ನು, ಪೂಜ್ಯತಾಬುದ್ಧಿಯನ್ನೂ ಕೊಂಡಾಡದವರಾರು?

ಸೊಬಗಿನ ಸುಗ್ಗಿಯಂತಿರುವ ಊರ್ಮಿಳಾ ಲಕ್ಷ್ಮಣರ ಸುಖಸಲ್ಲಾಪ ಪೂರಿತವಾದ ಸಂಭಾಷಣೆಯು ಬೆಳೆಯುತಿರುವಲ್ಲಿ, ಸೀತಾರಾಮರು ಬಂದು, ಮರೆಯಾಗಿ ದೂರದಲ್ಲಿ ನಿಂತು "ಅಚ್ಚರಿಯೊಳಚ್ಚರಿ"ಯ ಆ ನೋಟವನ್ನು ನೋಡುವರು. ಶ್ರೀರಾಮಚಂದ್ರನು,

ನೋಡಿವರ ನಿಸ್ವಾರ್ಥ ಜೀವನವ ಸೀತಾ !
ತ್ಯಾಗದೊಂದಗ್ಗಳಿಕೆಯನು ಜಗಕೆ ತೋರಿಸಿದ
ನಿತ್ಯತೃಪ್ತರ ನೋಡು ; ಸತ್ಯ ಸಾಹಸವ
ಹಿರಿಯರಿವರೆಮ್ಮಿಂದೆ

—ಎಂಬ ನುಡಿಗಳನ್ನು ಕೇಳಿ, "ಪ್ರಭು ರಾಮಚಂದ್ರ! ಆದುದರಿಂದಲೇ ನೀನು ಜಗದ್ವಂದ್ಯನು!" ಎಂದು ನಮ್ಮ ಹೃದಯವು ಉಲ್ಲಾಸದಿಂದ ಉಬ್ಬಿಹೋಗುವುದು. "ಸತ್ವಕ್ಷಾತ್ರ"ಗಳು, ಒಂದರೊಳಗೊಂದು ಬೆಳೆದು ಸಿದ್ಧಿಯ ಸತ್ಫಲಭರದಿಂದ ಬಾಗಿರುವಂತೆ ತೋರುತ್ತಿರುವ ಆ ದಂಪತಿಗಳನ್ನು ನೋಡಿ ಸೀತಾದೇವಿಯೂ ಹಿಗ್ಗುವಳು. ಊರ್ಮಿಳಾ–ಲಕ್ಷ್ಮಣರನ್ನು ಕರೆಯಲು ಅವರು ಆಗಿನ ಸಮಯದಲ್ಲಿ ಅಲ್ಲಿಗೆ ಹೋಗುವ ಬಗೆಯೆಂತು? ಆ ವೇಳೆಗೆ ಹಿರಿಯರೆಲ್ಲರೂ ಕಾದಿರುವರೆಂಬ ವಾರ್ತೆಯೊಡನೆ ಅಲ್ಲಿಗೆ ಬಂದ ಆಂಜನೇಯನನ್ನು ಅವರು ಲಕ್ಷ್ಮಣನಲ್ಲಿಗೆ ಕಳುಹುವರು. ಆ ಮೂವರೂ ಬಂದ ಬಳಿಕ ಶ್ರೀರಾಮಚಂದ್ರನು,

"ಗಣ್ಯರಾದೆವು ಹಿರಿಯರೆಂದು ನಿಮ್ಮಿಂದೆ
ಎಲ್ಲಿ? ಮೂವರನೊಮ್ಮೆ ಕಣ್ದಣಿಯೆ ನೋಡುವೆನು

—ಎಂದು ಹೇಳುವನು. ವಿಶ್ವಾತ್ಮಕನ ವಿನೀತಭಾವವು ನಮ್ಮ ಅಳತೆಗೆ ಸಿಕ್ಕಬಲ್ಲುದೇ? ಬಳಿಕ ಆ ಐವರೂ ಒಟ್ಟಿಗೆ ಸೇರಿ ಹಿರಿಯರನ್ನು ಕಾಣಲು ಹೊರಡುವರು.

ಗ್ರಂಥಕರ್ತ್ರಿಯವರು ವಿಶೇಷ ಮನೋಹರವಾಗಿ ಈ ಕಾವ್ಯವನ್ನು ರಚಿಸಿ ಕನ್ನಡಿಗರೆಲ್ಲರಿಗೂ ಮಹೋಪಕಾರ ಮಾಡಿದ್ದಾರೆ. ಈ ಕಾವ್ಯವು " ಸತ್ವಕ್ಷಾತ್ರ"ಗಳ ತನಿರಸದಿಂದ ತುಂಬಿ ಜೇನು ಕೊಡದಂತೆ ಕಂಗೊಳಿಸುತ್ತಿದೆ. ★

(ಲೇಖಕರು 'ತಪಸ್ವಿನಿ'ಗೆ ಬರೆದ 'ಅಭಿನಂದನ' ಲೇಖನ)

... 'Tapasvini'.... I was hoping to mention personally to you, but got no suitable opportunity. Needless for me to say, after so many appreciations, that it is a very fine work, finely conceived and executed.'

—B. M. Srikantia

(ತಾ॥ ೨೯–೧೨–೧೯೩೦ ರಂದು ಶ್ರೀ ಬಿ. ಎಂ. ಶ್ರೀಕಂಠಯ್ಯನವರು, ಶ್ರೀ ತಿ. ತಾ. ಶರ್ಮರಿಗೆ ಬರೆದ ಪತ್ರದಿಂದ)

ಭಾರತಿ ಅವರು ಕಂಡ "ಆರ್ಯ ಕೈಲಾಸಂ"

● **ಡಾ|| ಎಚ್. ಕೆ. ರಂಗನಾಥ್**

"ಕೈಲಾಸಂ ಅಂದರೆ ಸಾಕು, ಆ ಹೆಸರಿಗೆ ಅದೆಂತಹ ಶಕ್ತಿ! ಮೂಕರು ಮಾತನಾಡುತ್ತಾರೆ. ಕಿವುಡರ ಕಿವಿ ಚುರುಕಾಗುತ್ತದೆ. ಮಕ್ಕಳು ಕುಣಿದು ಕೇಕೆ ಹಾಕುತ್ತಾರೆ. ಹೆಂಗಸರು ತಮ್ಮ ಹಿರಿಮೆಯನ್ನು ಕುರಿತು ಹಿಗ್ಗುತ್ತಾರೆ. ಮಂಕರೂ, ಮುತ್ಯಾಳರೂ ಚಟುವಟಿಕೆಯಿಂದ ನಲಿಯುತ್ತಾರೆ. ಮೂದೇವಿಗಳು ಮುಂದಾಳಾಗಲು ಮುಂದೆ ಬರುತ್ತಾರೆ-ಇಂತಹ ವಿಚಿತ್ರ ಪರಿಣಾಮಕ್ಕೆ ಕಾರಣನೆಂದೇ ಆತನನ್ನು ಎಲ್ಲರೂ 'ವಿಚಿತ್ರವ್ಯಕ್ತಿ' ಅನ್ನುತ್ತಿದ್ದರೇನೋ....ಆತನ ಸಹಾನುಭೂತಿಯೆಲ್ಲ ಸಂತಪ್ತರ ಕಡೆಗೆ....ಮಾನವ ಕಲ್ಯಾಣವೇ ಮುಖ್ಯ ಗುರಿಯಲ್ಲದೆ. ಮತ್ತಾವ ಅಪೇಕ್ಷೆಯಾಗಲಿ, ಸಂಕಲ್ಪವಾಗಲಿ, ಸಿದ್ಧಿಯ ಹಂಬಲವಾಗಲಿ (ಆತನಲ್ಲಿ) ಇರಲಿಲ್ಲ....ಆತ ಅಪವಾದ-ಹಾಗೆಯೇ ಆದರ್ಶವಾದಿಯೂ ಹೌದು....ಆತ ಕ್ರಾಂತಿ ಪುರುಷ, ಸಂಕ್ರಾಂತಿಪುರುಷನೂ ಹೌದು....ಸಾಮಾನ್ಯರ ಮಟ್ಟದಿಂದ ಬಹುಮೇಲಿನ ಸ್ಥಾನದಲ್ಲಿರಬೇಕಾದ ಆತ ಧೀರರಲ್ಲಿ ಧೀರನಾಗಿ, ದೀನರಲ್ಲಿ ದೀನನಾಗಿ, ವಿರಾಗಿಗಳಲ್ಲಿ ವಿರಾಗಿಯಾಗಿ, ತನ್ನ ಪ್ರಭಾವವನ್ನು ಸುತ್ತ ಹರಡುತ್ತ, ತನ್ನ ಭಾಗಕ್ಕೆ ಬಂದ ಸೇವಾಧರ್ಮದಲ್ಲಿ ನಿರತನಾಗಿದ್ದವನು ಆತ....ಹಿಡಿದ ಕೆಲಸವನ್ನು ಎಷ್ಟೇ ಕಷ್ಟ ನಿಷ್ಠುರಗಳು ಬಂದರೂ ಬಿಟ್ಟದೇ ಸಾಧಿಸುವ ಹಟದಲ್ಲಿಯೇ ಜೀವಮಾನದ ಮಧ್ಯಭಾಗವೆಲ್ಲಾ ಕಳೆದುಹೋಯಿತು. ಆ ಸಾಧನೆಯಲ್ಲಿ ಯಾವ ಸಾಹಸವಿತ್ತೋ....ಯಾವ ಕಲೆ ಇತ್ತೋ, ಯಾವ ಸುಧಾರಣೆ ಆಯಿತೋ, ಅದನ್ನು ಹಿಡಿದು ನಾಟಕೋದ್ಯಮಿಯೆಂದೋ, ಸಮಾಜ ಸಮತಾವಾದಿಯೆಂದೋ, ತತ್ವ ಪರಿಶೋಧಕನೆಂದೋ, ಹೇಗೆ ಭಾವಿಸಿದರೂ ಎಲ್ಲವೂ ಆತನಿಗೆ ಅನ್ವಯವಾಗುತ್ತದೆ. ಈ ಎಲ್ಲ ದೃಷ್ಟಿಗಳಿಂದ ನೋಡಿದರೂ ಕೈಲಾಸಂ, ಆದರ್ಶ ಪುರುಷ..."

ಜೀವಿತದ ಕಾಲದಲ್ಲಿಯೇ ತನ್ನ ಬಗೆಯ ವೈಚಿತ್ರ್ಯದಿಂದ, ಕಲೆಯ ಹಿರಿಮೆ

ಯಿಂದ, ಬರೆಹದ ಸಾರ್ಥಕತೆಯಿಂದ, ಐತಿಹ್ಯಕ್ಕೆ ಸಂದುಹೋಗಿದ್ದ ಆ ವಿಚಿತ್ರವ್ಯಕ್ತಿ-ಕೈಲಾಸಂ ಅವರನ್ನು ಕುರಿತು ಇಂಥ ನಿರ್ಣಾಯಕ ಮಾತುಗಳನ್ನು ಬರೆದವರು 'ಭಾರತಿ' ಎಂಬ ಕಾವ್ಯನಾಮದ ತಿರುಮಲೆ ರಾಜಮ್ಮನವರು. ಕೈಲಾಸಂ ಅವರನ್ನು, ಅವರನ್ನು ಕಂಡರಿಯದ ಇಂದಿನವರಿಗೆ ಇವು ಅತಿಭಾವುಕತೆಯ ಹೊಗಳಿಕೆ ಎನಿಸಬಹುದಾದರೂ, ಆತನನ್ನು ಕ್ಷಣಕಾಲವಾದರೂ ಕಂಡಿದ್ದವರಿಗೆ ಯಥಾರ್ಥದ ಸಾಕ್ಷಿನುಡಿಗಳು ಇವು.

ಈ ಕಳೆದ ಇಪ್ಪತ್ತು ವರುಷಗಳಲ್ಲಿ, ಕೈಲಾಸಂ ಅವರ ವ್ಯಕ್ತಿತ್ವ, ವಿಚಾರಗಳನ್ನು ಕುರಿತು ಸಾಹಿತ್ಯದ ಹೊಸ ಸೆಲೆಯೊಂದು ಸಂದು ಬಂದಿದೆ. ಆಧುನಿಕ ಕನ್ನಡದ ಮತ್ತಾವ ಸಾಹಿತಿಯ ಬಗೆಗಾದರೂ ಇಂಥ ವಿಸ್ತಾರ, ವೈವಿಧ್ಯಗಳ ಬರೆವಣಿಗೆ ಬಂದಿಲ್ಲ ಎಂದರೆ ಸಲ್ಲುತ್ತದೆ. ಕೆ.ವಿ. ಅಯ್ಯರ್, ಜಿ.ಪಿ. ರಾಜರತ್ನಂ, ಬಿ.ಎಸ್. ರಾಮರಾವ್, ಕಂದಾಡೆ, ರಾಶಿ, ಶ್ರೀಕಾಂತ್, ಸಂಪದ್ಗಿರಿರಾಯರು, ಸೀತೂರಾಂ, ಕೋದಂಡರಾಯರು ಮೊದಲಾಗಿ ಕೈಲಾಸಂ ಅವರನ್ನು ಕಂಡವರು, ಅವರ ಸಹವಾಸ 'ಸೌಖ್ಯ'ವನ್ನು ಉಂಡವರು, ಅವರ ಜೀವನ ನಾಟಕದಲ್ಲಿ ಪಾತ್ರವಹಿಸಿದವರು, "ಕೈಲಾಸಂ ಸಾಹಿತ್ಯ" ಸೃಷ್ಟಿಯಲ್ಲಿ ಪಾಲುಗೊಂಡಿದ್ದಾರೆ. ಈ ಸಾಲಿನಲ್ಲಿಯೇ ತಿರುಮಲೆ ರಾಜಮ್ಮನವರೂ ಇದ್ದಾರೆ. ಕೈಲಾಸಂ ಅವರಲ್ಲಿ ಮತ್ತೊಬ್ಬ ಅಣ್ಣನನ್ನು ಕಂಡುಕೊಂಡು, ಆತನ ಜೀವನ-ದರ್ಶನಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಭಾವುಕತೆಯ ಮೆಟ್ಟಿಲೇರಿ ಆತನ ಆಳವನ್ನು ತಿಳಿದವರು ಆಕೆ.

ಆತನ ಬಗೆಗೆ ಸೀಮೆ ಕಾಣದಂತಹ ಹೆಮ್ಮೆಪಟ್ಟವರು; ಆತನಿಗಾಗಿ ಕಣ್ಣೀರಿಟ್ಟವರು. ಭಾವುಕತೆಯ ತೀವ್ರತೆಯಲ್ಲಿಯೂ ಎದ್ದು ತೋರಿಕೊಳ್ಳುವ ವಿಮರ್ಶೆಯ ನಿಷ್ಪಕ್ಷಪಾತತೆ, ಭಾರತಿ ಅವರು ಕುಂಚಿಸಿದ ವ್ಯಕ್ತಿಚಿತ್ರಕ್ಕೆ ಜೀವಕಳೆಯನ್ನು ತುಂಬಿದೆ. ಆಕೆ ಬರೆದ **'ಆರ್ಯ ಕೈಲಾಸಂ'** ಕೇವಲ ಐವತ್ತೊಂದು ಪುಟಗಳ ಪುಟ್ಟ ಪುಸ್ತಕ, ಅತಿ ವಿಚಿತ್ರ ವ್ಯಕ್ತಿಯೊಬ್ಬನನ್ನು ಅರ್ಥ ಮಾಡಿಕೊಳ್ಳಬಯಸುವವರಿಗೆ ಕೈದೀಪವಾಗಿದೆ.

ಪುಸ್ತಕದಲ್ಲಿ ಒಟ್ಟಾರೆ ಮೂರು-ನಾಲ್ಕು ಅನುಭವಗಳಷ್ಟೇ ವಿಸ್ತೃತಗೊಂಡಿವೆ. ಆದರೆ ಕೈಲಾಸಂ ಅಂತಹ ವಿಚಿತ್ರವ್ಯಕ್ತಿಯನ್ನು ಜೀವಂತ ನಿಲ್ಲಿಸುವಂಥ ಅನುಭವಗಳು ಅವು-ಓದುಗನ ಪಾಲಿಗೆ.

"ಸುಮಾರು ೧೯೧೭-೧೮ನೆಯ ಸಮಯ. ಚಿಕ್ಕಲಾಲ್‌ಬಾಗಿನ ಮನೆಯಲ್ಲಿ (ನಮ್ಮ) ವಾಸ್ತವ್ಯ. ಮನೆಯ ಮೂಲೆಗೆ ತುಳಸೀ ತೋಟದ ನಾಟಕ ಮಂದಿರ. ಅಮೆಚೂರ್ ನಾಟಕ ಸಂಘದವರು ಅಲ್ಲಿ ನಾಟಕಗಳನ್ನು ಅಭಿನಯಿಸುತ್ತಿದ್ದರು....ಒಂದು ರಾತ್ರಿ ಹನ್ನೊಂದು ಗಂಟೆಯ ಹೊತ್ತು....ಮಹಡಿಯ ವರಾಂಡದಲ್ಲಿ ನಿಂತು ನೋಡಿದಾಗ, ನಾಟಕ ಮಂದಿರದಲ್ಲಿ ಬಹಳ ಗದ್ದಲವಾಗುತ್ತಿರುವಂತೆ ತೋರಿತು. ಸ್ಥಳಾಭಾವದಿಂದ ಹೊರಗೂ ಜನರ ಗಲಾಟೆ. ಮನೆ

ಯಲ್ಲಿ ಮುದುಕರಾದ ತಂದೆಯವರ ಹೊರತು ಉಳಿದ ಗಂಡಸರೆಲ್ಲ ಅಲ್ಲಿ 'ಪಾತ್ರ ಧಾರಿಗಳು', ಹೊರಟುಬಿಟ್ಟಿದ್ದಾರೆ. ಆ ಸಮಯದಲ್ಲಿ ಯಾರೋ ಒಬ್ಬ ಗಂಡಾಳು–ಗಟ್ಟಿಮುಟ್ಟಾಗಿದಾನೆ–ವಿಲಾಯತಿಯ ಪೋಷಾಕಿನಲ್ಲಿ ದಡ ದಡನೆ ನಡೆದು ಬಂದು ನಮ್ಮ ಮನೆಯ ಬಾಗಿಲು ತಟ್ಟಿದ. 'ಶಾಮಣ್ಣ ಕಳಿಸಿದಾ ರೇಮ್ಮ' ಎಂದ. 'ಯಾಕೆ ಏನಾಯ್ತು' ಎಂದಾಗ, 'ಯಾರಿಗೂ ಏನೂ ಆಗಿ ಲ್ಲಾಮ್ಮ! ಇವತ್ತು ಹರಿಶ್ಚಂದ್ರ ನಾಟಕ, ಜನ ಜಾಗಾ ಇಲ್ಲದೆ ಬಹಳತೊಂದರೆ ಪಡ್ತಿದಾರೆ. ಯಾರೋ ಹೆಂಗಸರು ಪಾಪ, ಕೂತುಕೊಳ್ಳೋಕೆ ಏನೂ ಇಲ್ಲದೆ ನಿಂತೇ ಇದಾರೆ. ಬೆಂಚುಗಳೂ ಕುರ್ಚಿಗಳೂ ಇಲ್ಲಿ ಇವೆಯಂತೆ-ತೊಗೊಂಡು ಬಾ ಅಂದಿದಾರೆ-ದಯವಿಟ್ಟು ಕೊಡಬೇಕಮ್ಮಾ–ಮಹಡೀ ಮೇಲಿವೆಯಂತೆ!–

'ಹೌದು, ಇಳಿಸುವುದು ಹೇಗೆ?'

'ಏನ್ಕಷ್ಟಾಮ್ಮಾ–ನಾನಿಳಿಸ್ತೇನೆ!'

'ತೊಗೊಂಡು ಹೋಗೋವರು?'

'ಅದಕ್ಕೆ ಬೇರೆ ಆಳು ಬೇಕೆ' ಎಂದವನೇ ನಾವು ನೋಡುತ್ತಿದ್ದಂತೆ ಬೇಗ ಬೇಗ ಮೇಲೆ ಹೋದ. ಒಂದು ದೊಡ್ಡ ಬೆಂಚನ್ನು (ಹನ್ನೆರಡು ಅಡಿ ಉದ್ದ) ಕೆಳಗೆ ಇಳಿಸುವುದಕ್ಕಾಗಿ, ನೀರು ಸೇದುವ ಹಗ್ಗವನ್ನು ಕೇಳಿ ತೆಗೆದುಕೊಂಡು, ಬೆಂಚಿನ ಕಾಲಿಗೆ ಹಗ್ಗವನ್ನು ಕಟ್ಟಿ, ವರಾಂಡದಿಂದ ಬೀದಿಯ ಮೆಟ್ಟಿಲಿಗೆ ಸರಿ ಯಾಗಿ ಇಳಿಸಿದ. ಇನ್ನೊಂದು ಸಣ್ಣ ಬೆಂಚು, ಮೂರು ಕುರ್ಚಿಗಳು ಇವ ಷ್ಟನ್ನೂ ಹಾಗೆಯೇ ಹೊತ್ತು ಕೆಳಗೆ ತಂದಿಟ್ಟ. ಹಗ್ಗವನ್ನು ಬಿಚ್ಚಿ ಬಾವಿಯ ಹತ್ತಿರ ಇಟ್ಟು, ದೊಡ್ಡ ಬೆಂಚನ್ನು ಮೊಗಚಿ ಅದರ ಮೇಲೆ ಸಣ್ಣಬೆಂಚನ್ನೂ, ಒಂದು ಕುರ್ಚಿಯನ್ನು ಹೊಂದಿಸಿದ. ಒಂದು ಕೊನೆಯನ್ನು ಜಗುಲಿಗೆ ಒರಗಿಸಿ ಬಗ್ಗಿ ತಲೆಯಮೇಲಕ್ಕೆ ಹಾಗೆಯೇ ಎಳೆದುಕೊಂಡ. ಎರಡು ಕೈಗಳಲ್ಲೂ ಒಂದೊಂದು ಕುರ್ಚಿಯನ್ನು ತೆಗೆದುಕೊಂಡ. ಈ ಸಾಹಸವನ್ನು ನಾವು ಬೆರಗಾಗಿ ನೋಡುತ್ತಿರುವಂತೆಯೇ,

"ಬರ್ತೇನಮ್ಮಾ–ನಾಳೆಯೇ ನಿಮ್ಮ ಸಾಮಾನು ವಾಪಸು–"

—ಎಂದು ಹೇಳಿ ನಡೆದೇಬಿಟ್ಟ. 'ಸರ್ಕಸ್ಸಿನಲ್ಲಿದ್ದವನೋ ಏನೋ, ಅಲ್ಲಿಬಿಟ್ಟು ನಾಟಕಕ್ಕೆ ಸೇರಿರಬಹುದು' ಎಂದೆನ್ನಿಸಿತು ನಮಗೆಲ್ಲ.

ಮಾರನೇದಿನ ನಮ್ಮ ಅಣ್ಣನನ್ನು—

"ಶಾಮಣ್ಣಾ–ಯಾರಪ್ಪಾ ಆ ಯಮ?" ಎಂದು ಕೇಳಿದೆ.

"ಅವನು ಇಂಗ್ಲೆಂಡಿಗೆ ಹೋಗಿ ಬಂದಿದಾನಮ್ಮಾ. ಬಹಳ ಬುದ್ಧಿವಂತ. ಇವತ್ತೋ ನಾಳೆಯೋ ದೊಡ್ಡ ಉದ್ಯೋಗವಾಗುತ್ತೆ! ಅವರ ತಂದೆ ದೊಡ್ಡ ಜಡ್ಜಿಗಳು–ಅವನ ಹೆಸರು ಕೈಲಾಸಂ" ಎಂದರು.

ಈ ಭದ್ರಕಾಯನ ಹೆಂಗರುಳಿನ ಮಗ್ಗಲು ಚಿತ್ರವನ್ನೂ ಭಾರತಿ ಕೊಟ್ಟಿದ್ದಾರೆ.

"ಒಂದು ಸಲ ಅನಾರೋಗ್ಯದಿಂದ ಮಲಗಿದ್ದ ಸಮಯ....ಕೈಲಾಸಂ ಪ್ರತಿದಿನ ಸಾಯಂಕಾಲ ಬಂದು ಮೂರು ನಾಲ್ಕು ಗಂಟೆಗಳ ಕಾಲ ಹೊಸ್ತಿಲ ಹತ್ತಿರ ನೆಲದಮೇಲೆ ಕುಳಿತು, ಬಾಗಿಲಿಗೆ ಒರಗಿಕೊಂಡು, ರೋಗಿಯ ಚಿಕಿತ್ಸೆಯನ್ನು ಕುರಿತ ವಿಚಾರಗಳನ್ನು ತಿಳಿಯುತ್ತ, ತನ್ನ ಸ್ವಾನುಭವದ ಸಲಹೆಗಳನ್ನು ಕೊಡುತ್ತಿದ್ದ. ನನ್ನಂಥ ರೋಗಿಗೆ, ಎಲ್ಲ ಉಪಚಾರಗಳಿಗಿಂತ ಮೇಲಾಗಿ ಮನಸ್ವಾಸ್ಥ್ಯವು ಅಗತ್ಯವೆಂದು ಆತನಿಗೆ ತೋರಿತು....ಆ ಚಿಕಿತ್ಸೆಯನ್ನು ತಾನೇ ವಹಿಸಿಕೊಂಡ....ಅದೆಷ್ಟೋ ಕತೆಗಳನ್ನು ಹೇಳಿದ; ಕೇಳಿದ. ಉದಾತ್ತ ತತ್ವಗಳನ್ನು ತಿಳಿದೆ, ಆತನ ಮಾತುಕತೆಯಿಂದ. ನನ್ನ ಹಿರಿಯಣ್ಣನಂತೆ, ಆಪದ್ಬಂಧುವಂತೆ ಆ ಸಮಯದಲ್ಲಿ ಕೈಲಾಸಂ ಸಹಾಯ ನನಗೊದಗಿತು.... ಸುಮಾರು ನಾಲ್ಕುತಿಂಗಳ ಕಾಲ, ಯಾವ ಕ್ರಮಕ್ಕೂ ಬಗ್ಗದ ಕೈಲಾಸಂ, ಈ ದಿನಚರಿಗೆ ಅಧೀನನಾಗಿದ್ದ....ಧೂಮಪಾನದ ಅಭ್ಯಾಸವು ಆತನಿಗೆಷ್ಟಿದ್ದಿತೆಂಬುದು ಹೊಸ ಮಾತಲ್ಲ-ನನಗೆ ಅದು ಅಸಹನೀಯವೆಂದರಿತು, ಬರಿಗಯ್ಯಲ್ಲಿ ಬಂದು, ಕಡೆಯವರೆಗೆ ಅದನ್ನು ಸ್ಮರಿಸದೆ, ಹೊರಡುವಾಗ ನಮ್ಮವರಾರಾದರೂ ಕೈಯಲ್ಲಿಟ್ಟರೆ ಆಗ ನಗುತ್ತ "ಇದು ಇಂದಿನ ಡಾಕ್ಟರ್ ಫೀ" ಎಂದನ್ನುತ್ತಿದ್ದ. ವಿನೋದವೆಷ್ಟು ಸಹಜವೋ ತೃಪ್ತಿಯೂ ಕೂಡ ಅದೇ ಮಟ್ಟದ್ದು....ಅಂಥವರು ಕೋಟಿಗೊಬ್ಬರು. ಕೈಲಾಸಂ, ವಜ್ರಕಾಯನೆಂಬುದಕ್ಕಿಂತ, 'ಕುಸುಮ ಹೃದಯಿ.' ಅಂತರಂಗದಲ್ಲಿ ಇಂದಿಗೂ ಆತನನ್ನು ಕಾಣುವುದಕ್ಕೆ ಕಾರಣವಾಗಿದೆ...."

ಕೈಲಾಸಂ ಮುಖದ ಮತ್ತೊಂದು ಚಿತ್ರ ಹೀಗಿದೆ :

"ಅರವತ್ತನೆಯ ವರ್ಷ ಒಂದು ಮಹಾಘಟ್ಟ....ಆಗಲೇ ಕರ್ಣಾಟಕ ಸಾಹಿತ್ಯ ಸಮ್ಮೇಳನ ಮದರಾಸಿನಲ್ಲಿ ನಡೆಯುವುದು ನಿಶ್ಚಯವಾಗಿ, ಕೈಲಾಸಂ ಅಧ್ಯಕ್ಷತೆ ವಹಿಸಿಕೊಳ್ಳುವ ಬಾಧ್ಯತೆಯೊಂದು ಗಂಟುಬಿತ್ತು...ಅಲ್ಲಾದ ವಿತರಣೆಯೆಲ್ಲಾ 'ಇನ್ನೆಂದಿಗೂ ಇಂಥವರನ್ನು ಅಧ್ಯಕ್ಷಸ್ಥಾನಕ್ಕೆ ಆರಿಸಬಾರದು' ಎನ್ನುವ ಮಟ್ಟಿಗೆ, ಆ ಸಲದ ಅಧ್ಯಕ್ಷರು ವಹಿಸಿಕೊಂಡ ಜವಾಬ್ದಾರಿಯಲ್ಲಿ, ಅದನ್ನು ನಿರ್ವಹಿಸಿದ ರೀತಿಯಲ್ಲಿ ಮುಂದಟ್ಟಾಯಿತು. ಬಹಿರಂಗಾಧಿವೇಶನದ ದಿನ ಸಂಜೆ, ಸಭಾಮರ್ಯಾದೆಗಾಗಿ ಸ್ವಲ್ಪಹೊತ್ತು ಅಧ್ಯಕ್ಷರು ಸಭೆಯನ್ನಲಂಕರಿಸಿದ್ದು ಸಾಕಾಗಿ, ಸುಸ್ತಾಗಿ, ಹೊರಗೆ ಬಂದು, ಅದಕ್ಕೆ ಎದುರಿಗಿದ್ದ ಪ್ರತಿನಿಧಿಗಳ ವಸತಿಮಂದಿರದ ಜಗುಲಿಯಮೇಲೆ ಒಂದು ಕಂಬಕ್ಕೊರಗಿಕೊಂಡು ಕುಳಿತಿದ್ದರು "

ಮತ್ತೊಂದು ಚಿತ್ರ :

"ಕಡೆಯಸಲ ನಮ್ಮ ಮನೆಗೆ ಬಂದು ತಂಗಿದಾಗ, ಎರಡು ದಿನ ನಮ್ಮ ಯೋಗ್ಯತಾನುಸಾರ ಆತನನ್ನು ಸತ್ಕರಿಸುವ ಭಾಗ್ಯ ನಮಗೊದವಿತು. ಆಗ ಜೊತೆಯಲ್ಲಿ ತಂದಿದ್ದ ಸಾಮಗ್ರಿಗಳಾದರೋ, ಬಡಜೋಗಿಗಳು ಯಾತ್ರೆಗೆ

ಅಣಿ ಮಾಡಿಕೊಂಡಿರುವ ಸಾಮಗ್ರಿಗಳಾವರೂ ಅವಕ್ಕಿಂತ ಮೇಲು. ನನಗಾಗಿ ಒಂದು ಬಹುಮಾನವನ್ನು ಸ್ವಹಸ್ತದಿಂದ ಸಿದ್ಧಪಡಿಸಿ ತಂದಿದ್ದರು. ಚಿ|| ಶ್ರೀರಂಗನು ನಗುತ್ತಾ ಅದನ್ನು ನನಗೆ ತಂದುಕೊಟ್ಟ. ಭದ್ರವಾಗಿ ಸುತ್ತಿದ್ದ ದಾರಗಳನ್ನು ಬಿಡಿಸಿ, ಆ ಕಟ್ಟನ್ನು ಬಿಚ್ಚಿನೋಡಿದರೆ ಅದರಲ್ಲಿದ್ದು ದೇನು? ಸಿಗರೇಟು ಪ್ಯಾಕುಗಳನ್ನೆಲ್ಲಾ ಜೋಡಿಸಿ ಹೆಣೆದಿದ್ದ ಒಂದು ಚೌಕ."

ಇಂಥ ಹತ್ತು ಹಲವಾರು ಅನುಭವಗಳನ್ನುಂಡ ಭಾರತಿ, ತಮ್ಮ ಆ ಪುಟ್ಟ ಪುಸ್ತಕದಲ್ಲಿ ಅವಕ್ಕೆ ತನ್ನತನದ ಸುಗಂಧಲೇಪಿಸಿ, ತಿಳಿಗನ್ನಡದಲ್ಲಿ ಅರಳಿಸಿ ತೋರಿದ್ದಾರೆ; 'ಆ ವಿಚಿತ್ರವ್ಯಕ್ತಿಯ ಬಹಿರಂಗ, ಅಂತರಂಗಗಳಮೇಲೆ ಹತ್ತು ದಿಕ್ಕುಗಳಿಂದ ಬೆಳಕು ಹಾಯಿಸಿದ್ದಾರೆ. ಕೈಲಾಸಂ, ಭಾರತೀಯ ಸುಸಂಸ್ಕೃತಿಯ ಶ್ರೀಮಂತ ಪ್ರತೀಕವೆಂದು ತಾವು ಭಾವಿಸಲು, ಒಪ್ಪುವಂತಹ ಕಾರಣಗಳನ್ನು ಕೊಟ್ಟಿದ್ದಾರೆ.

"....ಆತನೊಡನೆ ಊಟಕ್ಕೆ ಕುಳಿತರೆ, ಮಹಾಗೋಷ್ಠಿ, ನಗೆಯನರ್ತನ ಎಲೆಯ ಮುಂದೆಯೇ ಆಗುವಂತಾಗಿ, ಮೂರುಗಂಟೆಯಾದರೂ ಊಟ ಮುಗಿಯದೆ, ಊಟ ಮಾಡುವುದಕ್ಕೆ ತೋರದೆ, ಕುಳಿತವರು ಕುಳಿತಂತೆಯೇ! ಇನ್ನು ಬಡಿಸುವವರ ಗತಿಯೋ! ನಿಂತು ಸಾಕಾಗಿ, ಬಾಗಿಲಹಿಂದೆ ಕುಳಿತು, ತೂಕಡಿಸಿ, ಅಲ್ಲಿಯೇ ಬಿದ್ದುಕೊಂಡು, 'ಮಜ್ಜಿಗೇ' ಎಂಬ ಕೂಗು ಕೇಳಿ ಬಂದಾಗ ಬೆಚ್ಚಿ ಬಡಿಸುವ ಗಂಡಾಂತರದಿಂದ ಪಾರಾದಂತೆ ಆಗದವರು ಯಾರು?.... ಅವೇಳೆಯ ಈ ಮರುಳು ಭೋಜನ ಎಷ್ಟು ದಿನ ಸಾಧ್ಯ? ಎಂದೇ ಆತನ ಊಟ ಪ್ರತ್ಯೇಕ ತೆಗೆದಿಡುವುದು: ಆರಿದ ತಂಗಳು, ಅಡಿಯುಬೇಳೆ, ಕಡೆಯ ಶೇಷಾನ್ನ– ಆತನ ಮೃಷ್ಟಾನ್ನ....ಕವಿ ರವೀಂದ್ರರು ಬಂದು ಹೋದಮೇಲೆ, ನಾಟಕಕಾರನಾಗಿ, ಆಟದ ಪಟುವಾಗಿ ಕೈಲಾಸಂ ಕಂಡುಬಂದರೂ, ಹೊಸದೊಂದು ಸುಧಾರಣೆಯ ವ್ಯಾಜವಾಗಿ ರಂಗಭೂಮಿಯ ಪ್ರವೇಶ ಮಾಡಿದಂತಾಯಿತು.... ಒಂದು ಭಾವವೋ, ಒಂದು ರಸವೋ, ಆತನ ಮನಸ್ಸಿನಲ್ಲಿ ಪೂರ್ಣವಾಗಿ ನೆಲೆಸುವಂತೆ ಆತನು ತದೇಕಚಿತ್ತದಿಂದ ತಲ್ಲೀನನಾಗುತ್ತಿದ್ದ ರೀತಿಯನ್ನು ಅನೇಕ ಸಲ ಸಮೀಪವರ್ತಿಗಳು ಕಂಡಿದ್ದಾರೆ....ಸಂಗೀತದಲ್ಲಿ ಕೂಡಾ ಇದೇ ರೀತಿಯು ಆತನಲ್ಲಿ ಸ್ಪಷ್ಟವಾಗಿತ್ತು....ಆತನು ಆ ಕಲೆಯಲ್ಲಿ ತೋರುತ್ತಿದ್ದ ಶ್ರದ್ಧೆಯನ್ನು, ಉತ್ಸಾಹವನ್ನು, ಅದರಲ್ಲಿಯೇ ಜೀವನವನ್ನೆಲ್ಲಾ ಕಳೆದ ಅಭ್ಯಾಸ ಮಾಡಿದವರಲ್ಲಿ ಕೂಡಾ ಕಾಣಲರಿಯದ....ಕಲೆಯ ಚಮತ್ಕಾರ ಚಿಂತನೆಯ ವಿಚಿತ್ರ ಸ್ಫುರಿತದ, ಸ್ಫೂರ್ತಿಯ ಗ್ರಾಹಕ ಯಂತ್ರವಾತನ ಮೇಧಾಶಕ್ತಿ. ಇದು ಹೊಸದು–ಇದು ಹಳೆಯದು; ಇದು ರಮ್ಯ–ಇದು ಸಾಮಾನ್ಯ; ಇದು ವ್ಯರ್ಥಾಲಾಪ–ಇದು ಚಿಂತನ ಯೋಗ್ಯ ಎಂದು ತೂಕಮಾಡಿ ಯೋಗ್ಯತೆಯನ್ನು ಕಂಡುಕೊಳ್ಳುವ ಪ್ರಚಂಡ ಪರೀಕ್ಷಕ–ಕೈಲಾಸಂ........ಕೈಲಾಸಂ ಕಾಯಿಲೆ ಇದ್ದವ

ರಿಗೆ ಒಳ್ಳೆ ನರ್ಸ್........ಕೈಲಾಸಂ ಪಟುತ್ವವನ್ನು ಇನ್ನಾರಿಗೂ ಹೋಲಿಸುವುದಕ್ಕಾಗದು, ಆ ಬುದ್ಧಿಯನ್ನು ಕುರಿತು ಉತ್ಪಾದಕ, ಪ್ರಳಯಾಂತಕ, ಪ್ರಚಂಡ, ಪಿಡುಗು ಇತ್ಯಾದಿಯಾಗಿ ಪ್ರಯೋಗಗಳಾಗಿವೆ....ಈ ಲೋಕ ಬಂಧುವಿಗೆ ಎಲ್ಲಿದ್ದರದೇ ವಸತಿ. ಹಸಿದ ಹೊತ್ತಿಗೆ ಏನು ಸಿಕ್ಕಿದರದೇ ಆಹಾರ. ಎಲ್ಲ ಅನಿಶ್ಚಿತದ ಅತಂತ್ರಜೀವನ; ಅಂತಹ ಅವ್ಯವಸ್ಥೆಯಲ್ಲಿ ಸುಖಿಸುವುದೇ ಆತನ ತೃಪ್ತಿ.... 'ಮಿತ್ರರ ಮನೆಯ ಮಗುವಾಗಿ, ಎಲ್ಲರನ್ನೂ 'ಮಗು' ಎಂದು ಕರೆಯುತ್ತಿದ್ದ ಮಗುವಿನ ಮನಸಿನ, ಮಗು ನಗುವಿನ ಕೈಲಾಸಂ....ಮಹಾ ಸ್ನೇಹಪರನಾದ ಕೈಲಾಸಂ, ಸ್ನೇಹಿತರ ಸಹಾನುಭೂತಿಯನ್ನು ಪಡೆಯುತ್ತಿದ್ದುದೇ ಆತನ ಶಿಷ್ಟಾಚಾರಕ್ಕೆ, ಸೌಹಾರ್ದತೆಗೆ ನಿದರ್ಶನ........(ನಾಟಕಕಾರ) ಕೈಲಾಸಂ, ಹೊಟ್ಟೆಬಾಕತನದ ವಿದೂಷಕನಲ್ಲ. ತೆನಾಲಿ ರಾಮಕೃಷ್ಣನ ಪ್ರಹಸನಾವತಾರದ ವಿಕಟ ಕವಿಯೂ ಅಲ್ಲ. ಅದು ವಿಡಂಬನಮಾರ್ಗ, ಅದರಲ್ಲಿ ಸುಲಭಾಕರ್ಷಕ ಶಕ್ತಿ ಇದೆ...ಹಾಸ್ಯ, ಕರುಣೆಗಳೆರಡೂ ಸೂಕ್ಷ್ಮರೂಪದಲ್ಲಿ ಒಂದರ ಹಿಂದೊಂದು ಅವಿತುಕೊಂಡಿದ್ದು, ಸಮಯಸಾಧಿಸಿ ಇಣಿಕಿ ನೋಡುತ್ತವೆ. ಹಾಸ್ಯವೇ ಪ್ರಧಾನವಾದಾಗ ಕರುಣೆಯ ಕಿಂಚಿತ್ ಸಹಾಯ, ಕರುಣೆಯೇ ಪ್ರಧಾನವಾದಾಗ ಹಾಸ್ಯದ ಕಿಂಚಿತ್ ಪ್ರವೇಶ; ಈ ಸಾಮರಸ್ಯದಲ್ಲಿನ ಪ್ರಯೋಗ ಅದ್ಭುತದಲ್ಲಿ ಪರಿಣಾಮ ಹೊಂದುತ್ತದೆ. ಹಾಸ್ಯ, ಕರುಣ, ಅದ್ಭುತ, ರಸೈಕ್ಯಸಿದ್ಧಿಯ ಈ ಪ್ರಯೋಗವೇ ಕೈಲಾಸಂ ಕಲಾ ನೈಪುಣ್ಯತೆ.....ಯಾವ ಲೋಭಕ್ಕಾಗಲೀ, ಮೋಹಕ್ಕಾಗಲಿ ವಶವಾಗಿ, ಕೈಲಾಸಂ ತನ್ನ ಶಕ್ತಿಯನ್ನು ಕಳೆದುಕೊಳ್ಳಲಿಲ್ಲ. ಎಲ್ಲಿಯೂ ಮರ್ಯಾದೆಯನ್ನತಿಕ್ರಮಿಸಿ ನಡೆದುಕೊಳ್ಳಲಿಲ್ಲ. ಬಾಹ್ಯಚರ್ಯೆಯನ್ನು ಬಿಟ್ಟು ಅಂತರಂಗದ ನೈರ್ಮಲ್ಯದಕಡೆ ನಮ್ಮ ಲಕ್ಷ್ಯವನ್ನು ತಿರುಗಿಸಿದರೆ, ಆಗ ಆತನು ಋಷಿಗಳ ಪರಂಪರೆಯಲ್ಲಿ ಬಂದು, ಸೌಮ್ಯರೀತಿಯ ಒಂದು ತಪೋವೃತ್ತಿಯನ್ನು ಜನರಂಗದಲ್ಲೇ ಇದ್ದು ನಿರ್ವಹಿಸಿದ ಶ್ರೇಷ್ಠ ಮಾನವನೆಂದು ನಿಸ್ಸಂಶಯವಾಗಿ ಯಾರಾದರೂ ಒಪ್ಪಬೇಕು.... .."

ತಪಸ್ವಿನಿಯಂತಹ ದಿವ್ಯ ತೇಜಸ್ವಿನಿಯನ್ನು ಸೃಷ್ಟಿಸಿ ಕನ್ನಡಕ್ಕೆ ಕೊಟ್ಟ ಭಾರತಿಯವರು, ಈ ಪುಟ್ಟ ಪುಸ್ತಕದಲ್ಲಿ ಕೈಲಾಸಂ ವ್ಯಕ್ತಿತ್ವವನ್ನು ಕಡೆದು ಮೂಡಿಸಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಭಾರತಿ ಎಂದೊಡನೆ ಬಗೆಗಣ್ಣ ಮುಂದೆ ಬರುವ ಆ 'ಪುಟ್ಟ' ವ್ಯಕ್ತಿ, ನಿಜವಾಗಿ ಭಾರತೀಯ ಸಾರಸಂಸ್ಕೃತಿಯ ಬೆಳಕನ್ನ ತನ್ನಲ್ಲಿ ತಳೆದುಕೊಂಡಿರುವ ಶ್ರೀಮಂತ ಶಕ್ತಿ. ಆಕೆ ಆದರ್ಶಸತಿ; ಆದರ್ಶಗೃಹಿಣಿ ; ಆದರ್ಶ ಕಲಾವಿದೆ. ಈ ಒಂದೊಂದು ಮಾತಿಗೆ ಒಂದೊಂದು ಸಾಕ್ಷ್ಯಗ್ರಂಥವನ್ನೇ ರಚಿಸಬಹುದೆಂಬುದು ಆಕೆಯ ಪ್ರಭಾವದ ಪರಿಧಿಯಲ್ಲಿ ಬಂದವರ ನಂಬಿಕೆ. ಮೇಲಾಗಿ, ಆಕೆ ಆದರ್ಶ ಸಾಹಿತಿಯೂ ಹೌದು. ಪೊತ್ತದ ಮಾನದಿಂದ ಅವರು ಬರೆದುದು ಕಡಿಮೆ ; ಆದರದು ಬಂಗಾರ. ಎಂದೇ ಭಾರತಿಯವರು ಸೃಷ್ಟಿಸಿದ ಸಾಹಿತ್ಯ, ಕನ್ನಡಕ್ಕೆ ಶೃಂಗಾರ. ★

ಭಾರತೀ ರೂಪಕತ್ರಯೀ

● ಪ್ರೊ॥ ಎಸ್. ಕೆ. ರಾಮಚಂದ್ರರಾವ್

ವಿಶ್ವ ಸಾಹಿತ್ಯದ ಇತಿಹಾಸದಲ್ಲಿ 'ಮೂರು ನಾಟಕ' (ಟ್ರೈಲೊಜಿ) ಎನ್ನುವ ಮಾತಿಗೆ ವಿಶೇಷವಾದ ಬೆಲೆಯಿದೆ. ಹಿಂದೆ ಗ್ರೀಸ್‌ದೇಶದ ಅಥೆನ್ಸ್‌ನಗರದಲ್ಲಿ ಡಯೋನಿಸಸ್ ದೇವತೆಯ ಉತ್ಸವ ಸಂದರ್ಭದಲ್ಲಿ ಮೂರು ದುರಂತ ನಾಟಕಗಳನ್ನು ದೇವರೆದುರು ಅಭಿನಯಿಸುವ ಪದ್ಧತಿಯಿದ್ದಿತು. ಪಾಶ್ಚಾತ್ಯ ನಾಟಕ ಪದ್ಧತಿಯ ಪ್ರವರ್ತಕನೆನಿಸಿದ ಈಸ್ಕೈಲಸ್‌ನ ಪ್ರಸಿದ್ಧವಾದ 'ಮೂರು ನಾಟಕಗಳು' ಈ ಸಂದರ್ಭಕ್ಕೆಂದೇ ರಚಿತವಾದವು. ಮುಂದೆ ಮೂರರ ಪರಿಪಾಠ ಸ್ವತಂತ್ರವಾಗಿಯೇ ಬೆಳೆಯಿತು. ಷೇಕ್ಸ್‌ಪಿಯರ್ ಆರನೆಯ ಹೆನ್ರಿಯನ್ನು ಕುರಿತು ಬರೆದ ಮೂರು ನಾಟಕಗಳು ಪ್ರಸಿದ್ಧವಾದುವು. ಈ ಪ್ರಭಾವದಿಂದ ದೂರವಾದ ನಮ್ಮಲ್ಲಿಯೂ ಕಾಳಿದಾಸನ ಮೂರು ನಾಟಕಗಳು (ಶಾಕುಂತಲ, ವಿಕ್ರಮೋರ್ವಶೀಯ, ಮಾಳವಿಕಾಗ್ನಿಮಿತ್ರ) 'ಕಾಳಿದಾಸತ್ರಯೀ' ಎನಿಸಿಕೊಂಡುದೂ ಸ್ವಾರಸ್ಯವೇ.

ಇವನ್ನು ನೆನಪಿಗೆ ತರುವಂತೆ ಶ್ರೀಮತಿ 'ಭಾರತಿ'ಯವರು ಮೂರು ಕಾವ್ಯ ನಾಟಕಗಳನ್ನು ಹೊರತಂದಿದ್ದಾರೆ. 'ತಪಸ್ವಿನಿ' 'ಮಹಾಸತಿ' 'ವಾತ್ಸಲ್ಯ ತರಂಗಲೀಲಾ' ಇವೇ ಮೂರು. ಮೊದಲನೆಯದು ಮೂವತ್ತೊಂಬತ್ತು ವರ್ಷಗಳ ಹಿಂದೆ ಮೈತುಂಬಿ ಬಂದಿತು; ಮಾಸ್ತಿಯವರು ಈ ರೂಪಕದ ಪರಿಚಯ ಪ್ರಬಂಧವನ್ನೂ ಬರೆದು ಮೆಚ್ಚಿಕೊಂಡರು. ಎರಡನೆಯದು ಕಾಣಿಸಿಕೊಂಡುದು ಹದಿನೈದು ವರ್ಷಗಳ ಹಿಂದೆ; ವಿ. ಸೀ. ಯವರು ಅದಕ್ಕೆ ಮೆಚ್ಚಿಕೆಯ ಮುನ್ನುಡಿಯನ್ನು ಬರೆದರು. 'ತ್ರಯಿ'ಯನ್ನು ತುಂಬಿಸಲು ಶ್ರೀಮತಿಯವರು ತಮ್ಮ ಎಪ್ಪತ್ತನೆಯ ಇಳಿ ವಯಸ್ಸಿನಲ್ಲಿ ಮೂರನೆಯದನ್ನು ಬರೆದು ಮುಗಿಸಿದರು. ಮೂರು ಒಂದೇ ಜಾತಿಗೆ ಸೇರಿದ ರಚನೆಗಳೇ; ಭಾವದ ಬಿಗಿತ, ಮಾತಿನ ಮೋಡಿ, ವೃತ್ತದ ವಿನ್ಯಾಸ, ವಸ್ತುವಿನ ವೈಶಿಷ್ಟ್ಯ ಎಲ್ಲದರಲ್ಲೂ ಸಮನೇ. ಅಭಿವ್ಯಕ್ತವಾಗಿರುವ ರಸಗಳು ಬೇರೆ ಬೇರೆ;

ಧ್ವನಿತವಾಗಿರುವ ತತ್ತ್ವಾರ್ಥದಲ್ಲಿ ವೈವಿಧ್ಯವಿದೆ. ಹೀಗಾಗಿ ಮೂರು ಒಟ್ಟಿಗೆ ಸೇರಿದಾಗ ಬೇಸರವಾಗದು, ಕುತೂಹಲ ಕುಗ್ಗದು. ಒಂದಕ್ಕಿಂತ ಒಂದು ಸೊಗಯಿಸುತ್ತದೆ; ಒಂದಕ್ಕೆ ಇನ್ನೊಂದು ಪೂರಕವೋ ಎನಿಸುತ್ತದೆ.

'ತಪಸ್ವಿನಿ' ರಾಮಾಯಣದ ಒಂದು ಪ್ರಸಂಗ ಊಹಿಸಿಕೊಂಡು ಬರೆದುದು. ರಾಮನೊಂದಿಗೆ ಸೀತೆ ಕಾಡಿಗೆ ಹೋದಳು ; ಅವರಿಬ್ಬರೊಂದಿಗೆ ಕಾಡಿಗೆ ಹೋದ ಲಕ್ಷ್ಮಣನ ಮಡದಿ ಊರ್ಮಿಳೆ ಏನು ಮಾಡಿದಳು ? ರಾಮ-ಸೀತೆಯರು ಪಂಚವಟಿಯಲ್ಲಿ ಸುಖವಾಗಿದ್ದಾಗ: ಸೀತಾಪಹರಣದ ನಂತರ ರಾಮನು ವಿರಹವೇದನೆಯಿಂದ ಕಂಗಾಲಾದಾಗ, ಸೀತಾನ್ವೇಷಣದಲ್ಲಿ ರಾಮನು ಆಸಕ್ತನಾಗಿದ್ದಾಗ, ಯುದ್ಧದನಂತರ ಸೀತೆಯೊಂದಿಗೆ ಪುನರ್ಮಿಲನವಾಗಿ ರಾಮ ಸುಖಪಟ್ಟಾಗ ಲಕ್ಷ್ಮಣ ಏನುಮಾಡುತ್ತಿದ್ದ? ಅವನ ಮನಸ್ಸಿನ ಬೇಗೆ, ಆತಂಕ ಹೇಗಿದ್ದುವು ? ಊರ್ಮಿಳೆಯ ಕನಸನ್ನು ಅವನು ಕಾಣಲಿಲ್ಲವೆ? ಸುಖ ಬಯಸಲಿಲ್ಲವೆ ? ವಾಲ್ಮೀಕಿ ಋಷಿಗಳು ಮೌನವಾಗಿರುವೆಡೆ ನಮ್ಮ ಕುತೂಹಲ ಕೆರಳುತ್ತದೆ. ಬಂಗಾಳಿಯ ಮಹಾಕವಿ ಮೈಕೇಲ್ ಮಧುಸೂಧನ ದತ್ತರು ತಮ್ಮ 'ಮೇಘನಾದವಧ' ಕಾವ್ಯದ ಆರಂಭದಲ್ಲಿಯೇ ಲಕ್ಷ್ಮಣನನ್ನು 'ಊರ್ಮಿಳಾವಿಲಾಸಿ'ಯೆಂದು ಬಣ್ಣಿಸಿದರು. ಈ ವರ್ಣನೆಯ ಸಾರ್ಥಕ್ಯವನ್ನು ಭಾರತಿಯವರ 'ತಪಸ್ವಿನಿ'ಯಲ್ಲಿ ಕಾಣುತ್ತೇವೆ.

'ಭಾರತಿ'ಯವರೇನೂ ಬಂಗಾಳಿಯ ಕಾವ್ಯವನ್ನು ಓದಿಲ್ಲ; ಅದರ ಪ್ರಭಾವವು ಪರೋಕ್ಷವಾಗಿಯೂ ಅವರನ್ನೇನು ಮುಟ್ಟಲಿಲ್ಲ; ಮಧುಸೂದನ ದತ್ತರ ವರ್ಣನೆಯನ್ನೂ ಅವರು ಕೇಳಿರಲಿಲ್ಲ. ಆದರೂ ಕವಿ ಸಹಜವಾದ ಹೃದಯ ಇಬ್ಬರಲ್ಲಿಯೂ ಮಿಡಿಯುತ್ತಿದ್ದು ಲಕ್ಷ್ಮಣನ ಬಗ್ಗೆ ಆಸಕ್ತಿ ಮೂಡಿತು, ಊರ್ಮಿಳೆಯ ವಿಚಾರವಾಗಿ ಅನುಕಂಪ ಹೊರಹೊಮ್ಮಿತು. 'ಭಾರತಿ'ಯವರಿಗೆ ಬಹುಶಃ ಪ್ರಚೋದನೆಯನ್ನು ಒದಗಿಸಿದ್ದು ರವೀಂದ್ರನಾಥ್ ಠಾಕುರರ ವಿಮರ್ಶೆ ; ಇದನ್ನು 'ತಪಸ್ವಿನಿ'ಗೆ ಮುನ್ನುಡಿಯನ್ನು ಬರೆದ ಮಾಸ್ತಿಯವರೂ ಪ್ರಸ್ತಾಪಿಸಿದ್ದಾರೆ. ಕಾವ್ಯ ಪ್ರಪಂಚದಲ್ಲಿ ನಿರ್ಲಕ್ಷ್ಯೆಗೆ ಪಾತ್ರಳಾದ ಊರ್ಮಿಳಾ—ಲಕ್ಷ್ಮಣರ ಅನುಕೂಲದಾಂಪತ್ಯ, ಮಧುರ ಮನೋವೃತ್ತಿಗಳ ಸಂಗಮ, ಪರಸ್ಪರ ಪ್ರೇಮಾದರ ಇವನ್ನು ಕುರಿತೇ ಭಾರತಿಯವರ 'ತಪಸ್ವಿನಿ' ಸಿದ್ಧವಾಗಿದೆ.

ಈ ಕಾವ್ಯ ನಾಟಕದ ವಸ್ತು ಸಣ್ಣದು; ಆದರೆ ಅದರ ವಿನ್ಯಾಸ ಮನೋಜ್ಞವಾಗಿದೆ. ತಪಸ್ವಿನಿಯಲ್ಲಿದ್ದರೂ ಊರ್ಮಿಳೆಯ ಮನಸ್ಸಿನಲ್ಲಿ 'ಉತ್ಸಾಹದಂಕುರವು' ಆದ ದಿನ ಸೀತಾ-ರಾಮ-ಲಕ್ಷ್ಮಣರು ಅಯೋಧ್ಯೆಗೆ ಹಿಂದಿರುಗುವ ದಿನ, 'ಅಗಲಿಕೆಯ ವೇದನೆಯು ಅನುಭವಕೆ ಬರಲಿಲ್ಲ, ...ಶಾಂತಿಯಲಿ ಮನವು ಸ್ಥಿರಕಂಡು ಉನ್ನತಿಯ ಮುಖಮಾಯ್ತು.' ಆದರೂ 'ಇನಿಯನಭಿಮಾನದಲಿ ಸಡಲಿದಂತಿದೆ ಮನವು', ಆಸೆ-ಆತುರಗಳು ಅವಳನ್ನು ಆವರಿಸಿದ್ದವು. ಆಗ ತಾಯಿ ಜಿಂಕೆಯೊಂದು ಓಡಿ ಬರುತ್ತದೆ; ಅದರ ಮರಿಯ ಬಗ್ಗೆ ಆತಂಕಪಡುತ್ತಿದೆಯೆಂದು ಊರ್ಮಿಳೆಯ

ಕಲ್ಪನೆ. ಆಕೆ ಅವನ್ನು ಸಂತೈಸುತ್ತಿರುವಲ್ಲಿಯೇ ಮರಿಯನ್ನೆತ್ತಿಕೊಂಡು ಲಕ್ಷ್ಮಣ ಬರುತ್ತಾನೆ; ತಾಯಿಗಾಗಿ ಮರಿ ಪರಿತಪಿಸುತ್ತಿದೆಯೆಂದು ಲಕ್ಷ್ಮಣನ ಕಲ್ಪನೆ. ಈ ತಾಯಿ ಜಿಂಕೆ-ಮರಿಜಿಂಕೆ ಒಟ್ಟುಗೂಡಿ ಸಂತೋಷಪಟ್ಟಾಗಲೇ ಊರ್ಮಿಳೆ-ಲಕ್ಷ್ಮಣರೂ ಒಟ್ಟುಗೂಡಿ ಸುಖ ಪಡುತ್ತಾರೆ.

ಕಲ್ಪನೆಯು ಕಥೆಗೆ ಎಂಥ ಸುಂದರವಾದ ಹಂದರವನ್ನು ಹೆಣೆದಿದ್ದಾರೆ! ಊರ್ಮಿಳೆ 'ಪ್ರಕೃತಿಯಲಿ, ವಿಶ್ವ ಪ್ರೇಮದಲಿ ಬೆರೆತಿದ್ದಳು'; ಮೃಗಗಳ ಸಹವಾಸದಲ್ಲಿ ಕಾಲವನ್ನು ಕಳೆದು ಬಳಲಲಿಲ್ಲ, ಬೇಸರಪಡಲಿಲ್ಲ, ವೇದನೆಯನ್ನರಿಯಲಿಲ್ಲ. ಲಕ್ಷ್ಮಣನೂ ಕೈಂಕರ್ಯ ಧರ್ಮದಲ್ಲಿ ಮುಳುಗಿ, 'ಹಿರಿದಾದ ಕ್ಲೇಶ ಅವನದಾದರೂ' ಹಂಬಲಿಸಲಿಲ್ಲ ಕಂಬನಿಯ ಸುರಿಸಲಿಲ್ಲ, ಉನ್ಮತ್ತನಾಗಲಿಲ್ಲ, ರಾಮನೂ ಸೀತೆಯೂ ಅವನ ಮನೋದಾರ್ಢ್ಯವನ್ನೂ, ನಿಗ್ರಹವನ್ನೂ, ನಿಃಸ್ವಾರ್ಥ ಜೀವನವನ್ನೂ ಬಣ್ಣಿಸುತ್ತಾರೆ. ಇಬ್ಬರೂ ಧರ್ಮಪರಾಯಣರು, ಅವರವರ ಧರ್ಮವನ್ನು ಅಚ್ಚುಕಟ್ಟಾಗಿ ನಡೆಸಿದರು ; ಕೃತಕೃತ್ಯರಾದರು. ಇಬ್ಬರಲ್ಲಿಯೂ ಧರ್ಮಶ್ರದ್ಧೆ, ಅಚಲ ಪ್ರೇಮ ಇದ್ದಿತಾಗಿ ಲಕ್ಷ್ಮಣನಿಗೆ 'ಭೀತಿಯೇ ? ಸಂಶಯವೇ ?'; ಊರ್ಮಿಳೆ 'ಸ್ಥೈರಣೆಯ ಸತ್ವವನು ಜಗಕೆಸೆದ ಸಾಧ್ವಿ'ಯಾದಳು. ಅವರಿಬ್ಬರನ್ನೂ ಕುರಿತು ರಾಮನು ಆಡುವ ಮಾತು—

"ನೋಡಿವರ ನಿಃಸ್ವಾರ್ಥ ಜೀವನವ ಸೀತಾ!
ತ್ಯಾಗದೊಂದಗ್ಗಳಿಕೆಯನು ಜಗಕೆ ತೋರಿಸಿದ
ನಿತ್ಯತೃಪ್ತರ ನೋಡು, ಸತ್ಯ ಸಾಹಸವ!
ಹಿರಿಯರೆಮ್ಮಿಂದೆ."

ಮುಂದೆ ಊರ್ಮಿಳೆಯ ತಪಸ್ಸನ್ನೂ ಲಕ್ಷ್ಮಣನ ಮನೋದಾರ್ಢ್ಯವನ್ನೂ ಕುರಿತು ರಾಮನು 'ಹಿರಿಯರಾರಿಲ್ಲಿ ?', ಎಂದು ಆಶ್ಚರ್ಯಪಡುತ್ತಾನೆ.

ಸೀತಾ ರಾಮರು ದೂರದಿಂದಲೇ ಊರ್ಮಿಳಾ ಲಕ್ಷ್ಮಣರ ಪುನರ್ಮಿಲನವ ಕಂಡು ಸಂತೋಷಪಡುತ್ತಿದ್ದಾಗ ಇನ್ನೊಬ್ಬ ತ್ಯಾಗಮೂರ್ತಿ, ಸಂಯಮಿ, ವೀರಬ್ರಹ್ಮಚಾರಿ ಹನುಮಂತನು ಅವರ ಬಳಿಗೆ ಹೋಗಲು, ಆ ಮೂವರನ್ನೂ ಒಟ್ಟಿಗೆ ನೋಡುತ್ತ ಸೀತಾರಾಮರು ಮೆಚ್ಚುಗೆಯಲ್ಲಿ ಮೈಮರೆಯುತ್ತಾರೆ. ರಾಮನು—

"ನಿಮ್ಮಿಂದಲೆಮ್ಮ ಸುಖ ನಿಮ್ಮಿಂದಲೆಮ್ಮ ಜಯ
ನಿಮ್ಮಿಂದಲೇ ನಿರಾಪದ ಜೀವನವು ನಮಗೆ.
ಗಣ್ಯರಾದೆವು ಹಿರಿಯರೆಂದು ನಿಮ್ಮಿಂದೆ.
ಎಲ್ಲಿ ! ಮೂವರನೊಮ್ಮೆ ಕಣ್ದಣಿಯೆ ನೋಡುವೆನು"

—ಎನ್ನುತ್ತಾನೆ. ಸೀತೆಗಂತೂ "ಈ ನೋಟನೂಟದಲ್ಲಿ ಮಬ್ಬು ಕವಿಯುತ್ತಿ"ದ್ದಿತಂತೆ. ರೂಪಕದ ಕೊನೆಯಲ್ಲಿ ಸೀತೆಯ ಬಾಯಿಂದ 'ಸಾಕಿನ್ನು ವನವಾಸ, ಏಕಾಂತವಾಸ!' ಎನ್ನುವ ಉದ್ಗಾರ ಹೊರಬರುತ್ತದೆ. ಇದು ಸುಖಾಂತ, ಸಮಾಧಾನ ಮುಕ್ತಾಯ.

ಇದು ಹಳೆಯ ಕಥೆಯೊಂದರ ಒಳಕಥೆ. ಪಾತ್ರಗಳೆಲ್ಲವೂ ಚಿರಪರಿಚಿತವಾದುವೆ. ಊರ್ಮಿಳೆ, ಲಕ್ಷ್ಮಣ, ರಾಮ, ಸೀತೆ, ಹನುಮಂತ. ಇವರ ಸ್ವರೂಪವನ್ನಾಗಲೀಸ್ವಭಾವ ವನ್ನಾಗಲೀ ಈ ರೂಪಕ ಮಾರ್ಪಡಿಸಿಕೊಂಡಿಲ್ಲ. ವಾಲ್ಮೀಕಿಯ ಚೌಕಟ್ಟು ಹಾಗೆಯೇ ಉಳಿದಿದೆ. ಊರ್ಮಿಳೆಯ ಪಾತ್ರವಿಸ್ತಾರ ಮಾತ್ರ ರೂಪಕದಲ್ಲಿ ಬಂದಿರುವ ವಿಶೇಷ.

ಊರ್ಮಿಳೆಯನ್ನು ಮೆಚ್ಚಿಕೊಂಡು, ಆಕೆ ತಮಗಿಂತ ದೊಡ್ಡವಳೆಂದು ಒಪ್ಪಿ ಕೊಂಡ ರಾಮ ಸೀತೆಯರ ದೊಡ್ಡತನವೂ ರೂಪಕದಲ್ಲಿ ಕಣ್ಣಿಗೆ ಕಟ್ಟಿದಂತೆ ಬರುತ್ತದೆ. ಇತರ ಪಾತ್ರಗಳು ಊರ್ಮಿಳೆಯ ಪಾತ್ರಪೋಷಣೆಗೇ ಸಿದ್ಧವಾದುವು; ಆದರೆ ಪ್ರಾಸಂಗಿಕವಾಗಿ ಇವರೂ ತಮ್ಮ ಬೆಳಕಿನಲ್ಲಿ ತಾವೇ ಬೆಳಗುತ್ತಾರೆ. ರೂಪಕದ ಸ್ವಾರಸ್ಯ ಇದು. ಹನುಮಂತನ ಪಾತ್ರ ತೀರ ಸಣ್ಣದಾಗಿ ಸೇರಿದ್ದರೂ, ಹತ್ತು ಮಾತಿನಲ್ಲಿ ಅವನ ಉಜ್ಜ್ವಲವಾದ ವ್ಯಕ್ತಿತ್ವ ಎದ್ದು ಕಾಣುತ್ತದೆ. ಊರ್ಮಿಳೆ-ಲಕ್ಷ್ಮಣರ ಸಂವಾದದಲ್ಲಿ ಇಡೀ ರಾಮಾಯಣದ ಕಥೆಯನ್ನು ಸಂಗ್ರಹವಾಗಿ ಪೋಣಿಸಿರುವ ಜಾಣ್ಮೆಯನ್ನು ಇಲ್ಲಿ ನಾವು ಕಾಣುತ್ತೇವೆ. ಶೂರ್ಪನಖಾ ವೃತ್ತಾಂತವನ್ನು ಲಕ್ಷ್ಮಣ ಊರ್ಮಿಳೆಗೆ ಹೇಳುವಾಗ ತಿಳಿಹಾಸ್ಯದ ತಂಗಾಳಿ ಒಮ್ಮೆ ಬೀಸಿ ಮರೆಯಾಗುತ್ತದೆ.

ಮಾಸ್ತಿಯವರು ಹೇಳಿದ ಹಾಗೆ "ಇಲ್ಲಿ ಸಹಜವಾದ ಕಾವ್ಯ ದೃಷ್ಟಿಯೂ, ಸರಳವಾದ ಕಾವ್ಯ ಶಕ್ತಿಯೂ ಸೇರಿ ಸುಂದರವಾದ ಒಂದು ಕಾವ್ಯವನ್ನು ನಿರ್ಮಾಣ ಮಾಡಿದೆ."

* * *

ಎರಡನೆಯ ರೂಪಕವಾದ 'ಮಹಾಸತಿ'ಯ ವಸ್ತು ಈಚಿನ ಇತಿಹಾಸದಲ್ಲಿ ಬಂದಂಥದು. 'ತಪಸ್ವಿನಿ'ಯಂತೆ ನಮ್ಮ ಇಡೀ ಸಂಸ್ಕೃತಿಯ ಮೂಲ ಸ್ರೋತದಲ್ಲಿ ಸೇರಿ ಬಂದುದಲ್ಲ. ಕನ್ನಡನಾಡಿನ ಒಂದು ಅರಸೊತ್ತಿಗೆಯ ಆಸರೆಯಲ್ಲಿ ಬದುಕಿ ಬಾಳಿ ಉಸಿರೆಳೆದ ಧೀರ ವ್ಯಕ್ತಿಗಳನ್ನು ಕುರಿತ ದಾರುಣ ಕಥೆ. ಮಧ್ಯಯುಗದಲ್ಲಿ ಅಲ್ಲಲ್ಲಿ ಬಳಕೆಯಲ್ಲಿದ್ದ ಸತೀಸಹಗಮನ ಪದ್ಧತಿಯ ಜ್ವಾಲೆಯನ್ನು ನೆನಪಿಗೆ ತರುವಂಥ ಪ್ರಸಂಗವೊಂದನ್ನು ಅವಲಂಬಿಸಿ ಈ ರೂಪಕ ಸಿದ್ಧವಾಗಿದೆ.

ಚೋಳರಾಜನ ಅಧೀನದಲ್ಲಿ ನವಿಲನಾಡಿನೊಡೆಯ ಏಚನ ಹೆಂಡತಿ ದೇಕಬ್ಬೆ (ನುಗು ನಾಡಿನ ಅರಸುಕುವರಿ) ಇಲ್ಲಿನ ಮಹಾಸತಿ. ರಾಜನ ಆಜ್ಞೆಯನ್ನು ಉಲ್ಲಂಘಿಸಿ ಏಚನು ಮಲ್ಲಯುದ್ಧದಲ್ಲಿ ತನ್ನ ದಾಯಾದಿ ಎರೆಯಂಗನನ್ನು ಕೊಲ್ಲಲು, ರಾಜನು ಸಿಟ್ಟಿಗೆದ್ದು ಏಚನಿಗೆ ಮರಣದಂಡನೆ ವಿಧಿಸಿ ಕೊಲ್ಲಿಸಿ ಬಿಡುತ್ತಾನೆ. ಈ ಸುದ್ದಿಯನ್ನು ಕೇಳಿದ ದೇಕಬ್ಬೆ ಸತಿಯಾಗಲು ನಿಶ್ಚಯಿಸಿ, ಏಚನ ದೇಹವನ್ನು ತನ್ನವರು ತಂದು ಚಿತೆಯನ್ನೊಡ್ಡಲು, ಮಹಾವೈಭವದಿಂದ, ದಿಟ್ಟತನದಿಂದ ಒಂದೇ ಮನಸ್ಸಿನಿಂದ ಸಹಗಮನ ಮಾಡಿದಳು. ಆಗಿನ ಕನ್ನಡ ನಾಡಿನಲ್ಲಿ, ಇದು ಎಲ್ಲೆಲ್ಲಿಯೂ ಪ್ರಸಿದ್ಧವಾದ ಪ್ರಸಂಗವಾಗಿದ್ದಿರಬೇಕು. ಮಹಾಕವಿಯೆನಿಸಿದ ಮಲ್ಲ (ಕವಿರಾಜ ಬಾಂಧವಂ) ಇವ

ರಿಬ್ಬರ ಪ್ರಶಸ್ತಿಯನ್ನು ಸೊಗಸಾದ ಒಂದು ಶಾಸನದಲ್ಲಿ ಹಾಡಿದ ; ಮುನಿವರನೆನಿಸಿದ ಸಿಂಗಾಚಾರ್ಯ (ಮಚ್ಚರಿಪರ ಗಣ್ಯಾಚಾರ್ಯಂ) ಇದನ್ನು ಕಲ್ಲಮೇಲೆ ಕಂಡರಿಸಿದ. ಇದು ಹೆಗ್ಗಡದೇವನಕೋಟೆಯ ಹದಿನೆಂಟನೆಯ ಶಾಸನವೆಂದು ಇಂದಿಗೂ ಉಳಿದಿದೆ.

'ಮಹಾಸತಿ' ರೂಪಕಕ್ಕೆ ಇದೇ ವಸ್ತು. ರಣ ಕುತೂಹಲಿಯಾದ ಕಲಿ ಏಚನ ನ್ನಾಗಲೀ ಅವನ ವೈರಸಾಧನೆಯನ್ನಾಗಲೀ ರೂಪಕದಲ್ಲಿ ನಾವು ಪ್ರತ್ಯಕ್ಷವಾಗಿ ನೋಡು ವುದಿಲ್ಲ; ಚೋಳರಾಜನ ಶಾಸನವನ್ನಾಗಲೀ, ಅದು ಏಚನನ್ನು ಬಲಿಗೊಂಡುದನ್ನೂ ನೇರವಾಗಿ ನಾವು ಕಾಣುವುದಿಲ್ಲ. ರೂಪಕದಲ್ಲಿ ಎದ್ದು ಕಾಣಿಸಿಕೊಳ್ಳುವ ವ್ಯಕ್ತಿ ಯೆಂದರೆ ದೇಕಬ್ಬೆಯೊಬ್ಬಳೇ ; ಕತೆಯ ಓಟ ಕುದುರುವುದು ಚಾರನೂ ದಂಡಾಧಿ ಪತಿಯೂ ತರುವ ಸುದ್ದಿಗಳಿಂದ, ನೀಲಬ್ಬೆಯೂ ಮಲ್ಲಬ್ಬೆಯೂ ಏಚನ ಕೆಲಸವನ್ನು ಕುರಿತು ನಡೆಸುವ ಚರ್ಚೆಯಿಂದ, ದೇಕಬ್ಬೆಯ ಸತಿಯಾಗುವ ಚಲವನ್ನು ತಪ್ಪಿಸಲು ಅವಳ ಸಖಿಯರೂ, ಅವಳನ್ನು ಪಡೆದವರೂ (ತಂದೆ ತಾಯಿಯರಾದ ರವಿಗ ಮತ್ತು ಪೊನ್ನಬ್ಬೆಯರೂ), ಬಂಧುಗಳೂ ಮಾಡುವ ಪ್ರಯತ್ನದಿಂದ, ಸತಿಯ ಚಿತಾರೋ ಹಣ ಸಮಯದ ದುರ್ಭರ ಕರುಣ ವೇದನೆಯ ಅಭಿವ್ಯಕ್ತಿಯಿಂದ.

'ಕೊಲ್ಲುತಿರುವ' ಕತ್ತಲೆಯಲ್ಲಿ ರೂಪಕ ಆರಂಭವಾಗುತ್ತದೆ; ಶಾಸನ ಸ್ಥಾಪನೆ ಯಲ್ಲಿ ಪರ್ಯವಸಾನವಾಗುತ್ತದೆ. ಎರಡೂ ಸ್ಥಿತಿಗಳಲ್ಲಿ ದೇಕಬ್ಬೆಯ ಸಖಿಯರು ನೀಲಬ್ಬೆ ಮತ್ತು ಮಲ್ಲಬ್ಬೆಯರೇ ಪಾತ್ರಧಾರಿಗಳು; ಇಬ್ಬರನ್ನೂ ಎರಡೂ ಸಂದರ್ಭ ಗಳಲ್ಲಿ ಕತ್ತಲೆಯ ಅರಿವು ಕಾಡುತ್ತದೆ. ಮೊದಲಲ್ಲಿ ಹೊರಗಿನ ಕತ್ತಲೆ, ಒಳಗಿನ ಆತಂಕ ; ಕಡೆಯಲ್ಲಿ ಒಳಗಿನ ಕತ್ತಲೆ, ಹೊರಗಿನ ಸ್ಥಿರಸ್ಮಾರಕದ ಸಮಾಧಾನ. ದೇಕಬ್ಬೆ ನಿದ್ದೆಯಲ್ಲೇ ಕೆಟ್ಟಕನಸುಗಳನ್ನು ಕಾಣುತ್ತಾಳೆ ; ಎಚ್ಚರವಾದೊಡನೆ ಕೆಟ್ಟ ಸುದ್ದಿ ಬರುತ್ತದೆ. ಕೆಟ್ಟ ಸುದ್ದಿಯೂ ಒಳ್ಳೆಯ ಸುದ್ದಿಯ ಮುಸುಕನ್ನು ಹೊದ್ದೇ ಬರುತ್ತದೆ ; ಮೊದಲು ಚಾರ ತಂದ ಸುದ್ದಿ ಏಚನು ಎರೆಯಂಗನನ್ನು ಮಲ್ಲಯುದ್ಧ ದಲ್ಲಿ ಕೊಂದು ವಿಜಯಿಯಾದನೆಂದು, ಸಂತೋಷದ ಸಂಭ್ರಮ ಕಾವೇರುವ ಮೊದಲೇ ದಂಡಾಧಿಪತಿ ಏಚನ ವಧೆಯ ಸುದ್ದಿಯನ್ನು ತರುತ್ತಾನೆ.

'ಕತ್ತಲೆಯ ಸಾವಲ್ಲ' ಎಂದು ಹೇಳುವ ನೀಲಬ್ಬೆ 'ಬೆಳಕು ಹೆಚ್ಚಾದರೆ ಕತ್ತಲೆ ಯಾಗುವುದು' ಎಂದೂ ಹೇಳುತ್ತಾಳೆ. ಈ ಮಾತುಗಳೇ ರುದ್ರ ರೂಪಕದ ಜೀವಾಳ. ಸತಿಯ ಸಾವಿನಿಂದ ಸಖಿಯರಿಗೆ ಕತ್ತಲೆಯೇ ; ಇನ್ನು ಆ ಒಲವೆಲ್ಲಿ, ಬಲವೆಲ್ಲಿ? ಅವರೆ 'ಸತಿಯ ಸಂಬಂಧದಿಂದ ಅತಿಪ್ರೀತಿಯಾಗುವುದು', ಸಖಿಯರಿಗೆ ಸ್ಮಾರಕ ಸ್ತಂಭವೇ ಭಾಗ್ಯವಾಗುವುದು.

"ಬರಿದೆ ಬಾಳಿದೊಡಾಯ್ತೆ ? ಜಗದ ಕೂಟಪಾಟದಲಿ
ಬಾರದಿಹ ಬಾಳೇಕೆ ?"

ಸತಿಯದು ಸಾರ್ಥಕವಾದ ಬಾಳಂತೆ ; ಈ ದುರಂತದಲಿ ನೀಲೆಯ ಅಭಿಮಾನ ಮೂಡಿದುದು ಸಹಜವೇ.

ಮತ್ತೆ, ಬೆಳಕು ಹೆಚ್ಚಾದರೆ ಕತ್ತಲೆಯಾಗುವುದೂ ದಿಟವೇ. ವೈರಸಾಧನೆಯ ಚಲ ಹೆಚ್ಚಿಯೇ ಅಲ್ಲವೆ ಏಚ ಎರೆಯಂಗನೊಡನೆ ಕಾದದ್ದು ? ಅವನ ವೀರ ಪೌರುಷ ಹೆಚ್ಚಾಗಿದ್ದುದೇ ಅವನ ವಿಜಯಕ್ಕೆ ಕಾರಣವಾಯಿತು. ಈ ವಿಜಯವೇ ಅವನ ವಧೆಯನ್ನು ತಂದಿತು. ಅವನ ವ್ಯಕ್ತಿತ್ವದ ಬೆಳಕು ಶಾಸನದಲ್ಲಿ ಕಾಣುತ್ತದೆ; ಆ ಬೆಳಕು ಹೆಚ್ಚಾಗಿಯೇ ದೇಕಬ್ಬೆಗೆ ಕತ್ತಲೆಯಾಯಿತು. ದೇಕಬ್ಬೆಯ ಬೆಳಕೂ ಹಾಗೆಯೇ. ಆಕೆಯೇನು ಸಾಮಾನ್ಯ ಹೆಂಗಸೆ ? 'ನಾಡ ಭಾಗ್ಯವು ನೀನು, ನಾಡಿಗಾಧಾರವಲ್ತೆ?' ಅವಳ ನಿಶ್ಚಯ ನಿಶ್ಚಲವಾದುದು. ಈ ಬೆಳಕು ಹೆಚ್ಚಿಯೇ ಸಖಿಯರಿಗೂ, ತಾಯಿ ತಂದೆಯರಿಗೂ, ಬಂಧುಗಳಿಗೂ ಕತ್ತಲೆ ಒದಗಿತು. ನೀಲಬ್ಬೆಯ ಮಾತಿನಲ್ಲಿ—

"ದಿನ ದುರ್ದಿನವು ನಮಗೆ ; ಪುಣ್ಯದಿನವಾ ಸತಿಗೆ.
ಮಸಣವರಮನೆಯಾಯ್ತು. ಮನೆ ಮಸಣವಾಯ್ತು
ಚಿತೆಯು ಸುಖತಲ್ಪವಾ ಸತಿಗೆ ತಲ್ಪವು, ನಮಗೆ
ಚಿತೆಯಾಯ್ತು"

ಇದು ದಾರುಣಯಜ್ಞವಂತೆ ; ಮದುವೆಯುತ್ಸವದಿಂದೆ ಪಿರಿದಾಯ್ತಂತೆ ಜನಕೂಟ. ಆದರೆ 'ಮರುಳಾಟವೆಂದೆಯೇ ಅದರ ಸಂಭ್ರಮ.' ಧೀರಮತಿ, ಧರ್ಮಯುತೆ, ಸತ್ಯವತಿಯಾದ ಮಹಾಸತಿಯ ಕೊನೆಯಾಸುದು ಮರುಳಾಟದಲ್ಲಿಯೇ.

ಸತೀಸಹಮರಣವು ದುಷ್ಟ ಪದ್ಧತಿಯೆಂದು ಎಲ್ಲರೂ ಬಲ್ಲರು; ಅದನ್ನು ತೊಡೆದು ಹಾಕಲು ಸೊಂಟಕಟ್ಟಿದ ಮಹನೀಯರನ್ನು ನಾವಿಂದಿಗೂ ಕೃತಜ್ಞತೆಯಿಂದ ನೆನೆಯುತ್ತೇವೆ. ಹೀಗಿರುವಾಗ ಸತೀ ಪದ್ಧತಿಯನ್ನೇ ಎತ್ತಿ ಹಿಡಿಯುವ ಈ ರೂಪಕಕ್ಕೆ ಔಚಿತ್ಯವೆಲ್ಲಿಯದು ? ಕಥಾವಸ್ತು, ರೂಪಕದ ನಾಯಕಿ ದೇಕಬ್ಬೆ ಎಂಥ ಉಜ್ಜ್ವಲ ವ್ಯಕ್ತಿಯೇ ಆಗಲಿ, ಅವಳ ಗುಣಾತಿಶಯ ಎಷ್ಟು ಪ್ರಶಸ್ತವೇ ಆಗಲಿ, ರೂಪಕದ ಕ್ರಿಯೆ ಮುಖ್ಯವಲ್ಲವೆ? ಆ ಪ್ರಸಂಗವು ಧ್ವನಿಸುವ ತತ್ತ್ವದಲ್ಲಿ ಅಲ್ಲವೆ ? ಹೀಗೆಂದು ಆಕ್ಷೇಪ ಬರುವುದು ಸಹಜ.

ಮಲ್ಲಬ್ಬೆಯು ಈ ದೃಷ್ಟಿಯನ್ನೆತ್ತಿಕೊಂಡು 'ಜನರೆನಿತು ಮರುಳಾಗಿಹರಮ್ಮ, ಏನಿವರ ಉತ್ಸಾಹ ! ಇದು ಒಂದು ಸಂಭ್ರಮವೆ ?.... ದುರಭಿಮಾನವಿದೆಲ್ಲ, ದುಷ್ಟ ಪದ್ಧತಿ.... ಅಂಗೀಕರಿಸಬೇಕೋ ? ಶರಣಾಗಬೇಕೋ ?.... ಈ ಕ್ರಮದೊಳಿನಗೊಂದು ಪ್ರಿಯವಲ್ಲ, ಪ್ರಿಯವಲ್ಲ, ಕ್ರೌರ್ಯದ ಮಹಾಭೂತ ಬಾಯ್ತೆರೆದು ಆರ್ಭಟಿಸಿ ಜಗದ ಕರುಣೆಯನೆಲ್ಲ ನುಂಗಿ ತೇಗುತಿದೆ—' ಎಂದು ಮೊದಲಾಗಿ ಮೂದಲಿಸುತ್ತಾಳೆ; 'ಕಿರಿದೆ ಜನ ವಿಶ್ವಾಸ? ಜಗವಿನಿತು ಹೇಯವೇ ? ಇನಿದಲ್ಲವೇ ಬದುಕು? ಎನಿತು ಜನ ಮರುಗುತಿಹರೊಂದು ಜೀವಕ್ಕೆ ?' ಎಂದು ಶಂಕಿಸುತ್ತಾಳೆ.

ನೀಲಬ್ಬೆಯು ಸಮಾಧಾನ ಮಾಡುತ್ತಾಳೆ, ಈ ಮರುಳ ಸಂಭ್ರಮಕ್ಕೂ ಉದ್ದೇಶವಿರಬೇಕೆಂದು ಆಕೆಯ ತರ್ಕ; ನಾವು 'ಸಂಬದಿರಲೇನು, ಇದು ಘನೋದ್ದೇಶವೇ' ಎಂದು ಆಕೆಯ ವಾದ. 'ಅಪ್ರಯತ್ನರು ನಾವು, ಸಮಯಧರ್ಮವಿದೆಲ್ಲ,

ಅಧೀನರಾವೆಲ್ಲ.' ಇವರಲ್ಲಿ 'ಅರ ತಪ್ಪೇನಿಲ್ಲ.' ಇಂತಹ ಸತಿಯೊಬ್ಬಳ ಸಚ್ಚಾರಿತ್ರದಿಂದ ನಮ್ಮ ನಾಡಿಗೆ ಕೀರ್ತಿ ಬಂದಿತು ಎನ್ನುವುದೇ ಜನರ ಸಂಭ್ರಮ, ಉತ್ಸಾಹಕ್ಕೆ ಕಾರಣ ವೆಂದು ಅವಳ ವಿವರಣೆ. 'ತ್ಯಾಗಬಲದ ತುಂಬು ಪ್ರಮಾಣ ಇಲ್ಲಿ ಕಂಗೊಳಿಸಿದೆ.' ತನ್ನ ಸಖಿ ಸತಿಯಾದುದು ಅವಳಿಗೆ ಮರುಕವಿಲ್ಲವೆಂದಲ್ಲ; ಆದರೆ ಮೆಚ್ಚುಗೆಯೂ ಇರುವುದು ಸುಖಕ್ಕೆ ಕಾರಣವಾಗಿದೆ. ಜನರಲ್ಲಿ ಸುಖ, ದುಃಖ ಎರಡೂ ಒಟ್ಟಾಗಿ ಸೇರಿರುವುದೇ ಈ ಪ್ರಸಂಗದ ಸ್ವಾರಸ್ಯ; ಒಂದು ಕಣ್ಣಲ್ಲಿ ಆನಂದಬಾಷ್ಪ, ಇನ್ನೊಂದು ಕಣ್ಣಲ್ಲಿ ದುಃಖಾಶ್ರು.

ಈ ಪ್ರಸಂಗದಿಂದ ಎಲ್ಲರಿಗೂ ಒಂದೇ ಅನುಭವವಾಗದೆಂದು ನೀಲಬ್ಬೆಗೆ ಗೊತ್ತು. ಕೆಲವರು ದಿಗ್ಭ್ರಾಂತರು; ಕೆಲವರಿಗೆ ಕೌತುಕ; ಕೆಲವರು ಶೂನ್ಯಭಾವದಿಂದ ಮೌನ ವಾಗಿದ್ದಾರೆ. ಆದರೆ 'ಮನದ ಬಿರುಗಾಳಿ ಎಬ್ಬಿಸಿ ವಿಚಾರೋದ್ವೇಗ ತರಂಗಗಳುಕ್ಕಿ ಬಗೆವಡವ ಹಾಯತಿವೆ': ಇದು ಮುಖ್ಯವಾದ ವಿಚಾರ. ನಮ್ಮ ನಿಲುವಿನಲ್ಲಿಯೇ ಬೇರೆಯವರ ವರ್ತನೆಯನ್ನು ಪರಿಶೀಲಿಸುವುದು ತಪ್ಪಾಗುತ್ತದೆ. ನಮಗೆ ಅಶುಭ, ಆದರೆ ಸತಿಗೆ ಶುಭ. 'ಹಾನಿಯನೆ ಹವಣಿಸುವ ರೂಢಿಯಿದು ಸಾಧುವಲ್ಲ' ಎಂದರೂ ಮನಸ್ಸೇ ಪ್ರಧಾನ, ಆ ಶಕ್ತಿಯೇ ಸರ್ವಸ್ವ, ಸತಿಯ ಕ್ಷಾತ್ರಬಲ ಈ ಬಲಿದಾನದಲ್ಲಿ ಪೂರ್ಣಗೊಳ್ಳುತ್ತದೆ. ಸತಿಯ ದೃಷ್ಟಿಯಲ್ಲಿ ಇದು 'ಶುದ್ಧಾತ್ಮ ಸಿದ್ಧಿ;' ನಾವು ನೋಡುವ ಧರ್ಮಕರ್ಮಗಳಿಂತ, 'ಮಿಗಿಲಾದ ಧರ್ಮಪಥ ಕಾಣುತಿಹುದೆನಗೆ' ಎಂದು ದೇಕಬ್ಬೆಯೇ ತಂದೆಗೆ ಹೇಳಲಿಲ್ಲವೆ? ಸಹಮರಣವೆನ್ನುವುದು ನೆರೆದವರ ದೃಷ್ಟಿಯಿಂದ. ಸತಿಯ ದೃಷ್ಟಿಯಲ್ಲಿ 'ಆ ಜೀವನ ಅನಂತ, ಸೌಭಾಗ್ಯ ಸಂಭ್ರಮದ ಶುಭ ಮಹೋತ್ಸವ.' ಅಲ್ಲಿ 'ಸಾವಿಲ್ಲ, ನೋವಿಲ್ಲ, ಭವದ ಭಾವನೆ ಇಲ್ಲ, ಮಿತವಿಲ್ಲ, ಚ್ಯುತಿಯಿಲ್ಲ, ಆನಂದ ದಾಶ್ರಯವು ಅಲ್ಲಿಹುದು.' ಇದೆಲ್ಲವೂ ಅಲ್ಲವೆಂದರೂ 'ನಾಡಿಗಿದು ಮರ್ಯಾದೆ; ಕುಲ ಶೀಲ, ಬಲುಹು, ಬಿನ್ನಾಣದೈಸಿರಿಗೆ ದೊರೆ.'

ಸತಿಯ ಮನೋಧರ್ಮವನ್ನು ತಿಳಿಸುವುದೇ ರೂಪಕದ ಉದ್ದೇಶವೆಂದು ತೋರುತ್ತದೆ. ಈ ಉದ್ದೇಶ ಫಲಿಸಿದೆಯೆಂದೇ ಹೇಳಬೇಕು. ರವಿಗನೂ ಪೊನ್ನಬ್ಬೆಯೂ ಮಗಳನ್ನು ಸತಿಯಾಗದಂತೆ ತಡೆಯಲೆತ್ನಿಸಿದಾಗ ದೇಕಬ್ಬೆ ತನ್ನ ನಿಲುವನ್ನು ಸ್ಪಷ್ಟ ಪಡಿಸುತ್ತಾಳೆ. ಮಲ್ಲಬ್ಬೆ ಈ ದುಷ್ಟಪದ್ಧತಿಗಾಗಿ ನೊಂದು ಬೆಂದಾಗ ನೀಲಬ್ಬೆಯು ಸತಿಯ ನಿಲುವನ್ನು ಸಮರ್ಥಿಸುತ್ತಾಳೆ. ದೇಕಬ್ಬೆಯೂ, ನೀಲಬ್ಬೆಯೂ ರೂಪಕದ ಪ್ರಮುಖ ವಕ್ತೃಗಳು; ರೂಪಕದ ರಚಯಿತ್ರಿಯ ಪ್ರತಿನಿಧಿಗಳು ಎನ್ನಬಹುದು. ಎರಡು ವಿಭಿನ್ನ ದೃಷ್ಟಿಗಳ ಮಲ್ಲಯುದ್ಧ ಇವರೆಲ್ಲರ ಸಂಭಾಷಣೆಯಲ್ಲಿ ಹೊರ ಹೊಮ್ಮುತ್ತದೆ.

ಮಲ್ಲಬ್ಬೆ ಸತಿಪದ್ಧತಿಯ ವಿರೋಧಿ; ಆದರೆ ವಿಜನ ವೈರಸಾಧನೆಯನ್ನು ಅನು ಮೋದಿಸುವವಳು. ವಿಜನು ಎರೆಯಂಗನನ್ನು ಕೊಂದುದೂ; ದಾಯಾದಮತ್ಸರ ವನ್ನು ಸಾಧಿಸಿದುದೂ, ಸರಿಯೆಂದವಳ ವಾದ: 'ಕಲಹಕಾರಣಕ್ಕಾಗಿ ಕಾದಿರುವ

ಕಲಿಗಳಿಗೆ ಪ್ರಬಲ ಕಾರಣವೇಕೆ?....ವೀರ ಧರ್ಮವ ಮೀರಿ ನಡೆದನೇ ನಮ್ಮರಸ?' ಆದರೆ ಸತಿಯ ನಿಶ್ಚಲ ನಿಶ್ಚಯವನ್ನು ಮೆಚ್ಚಿಕೊಂಡ ನೀಲಬ್ಬೆಗೆ ಏಚನ ವರ್ತನೆ ಸರಿಯೆನಿಸಲಿಲ್ಲ. 'ಕಲವು ಗೆಲ್ದುದು, ನಾಡಹಿತವೆಸಗಿದಂತಾಯ್ತೆ? ಆರಿಗುಪಕಾರವಿದು?'

ದಾಯಾದ ವೈರವನು ಪೌರುಷದಿ ಗೆಲಬೇಕೆ ?
ನಾಶ ಪರಿಣಾಮದಲಿ ಸನ್ನಿಹಿತವಾಗಿಹುದು
ಈ ವಿಜಯ, ಪೌರುಷದ ವಿತರಣೆ ಇದಲ್ಲ.

ಇದು ಕೇವಲ ರಣಚಾಪಲ್ಯವೆಂದೂ, ಏಚನಿಗೆ ನೆಪವೊಂದು ಬೇಕಿತ್ತಷ್ಟೆ ಎಂದೂ, 'ನಿರ್ವಾಹವಿಲ್ಲದಿರೆ ವೀರರಿಗೆ ರಣಕೇಳಿ' ಎಂದೂ ನೀಲಬ್ಬೆಯ ಅಭಿಪ್ರಾಯ.

ರೂಪಕದಲ್ಲಿ ಈ ಇಬ್ಬಗೆಯ ಅನುವೋದನೆ ಸ್ವಾರಸ್ಯವಾಗಿ ಬಂದಿದೆ. ಮಲ್ಲಬ್ಬೆ, ನೀಲಬ್ಬೆಯರಿಬ್ಬರೂ ಸತಿಯ ಸಖಿಯರು, ತುಂಬ ವಿಶ್ವಾಸಿಗಳು. ಮಲ್ಲಬ್ಬೆ ಏಚನನ್ನು ಮೆಚ್ಚಿಕೊಳ್ಳುತ್ತಾಳೆ, ಸತಿಯ ನಿರ್ಧಾರವನ್ನು ನಿಂದಿಸುತ್ತಾಳೆ. ನೀಲಬ್ಬೆ ಏಚನ ಕೆಲಸವನ್ನು ನಿಂದಿಸುತ್ತಾಳೆ, ಸತಿಯನ್ನು ಮೆಚ್ಚಿಕೊಳ್ಳುತ್ತಾಳೆ. ಮೇಲು ನೋಟಕ್ಕೆ ಇಬ್ಬರ ದೃಷ್ಟಿ ಪರಸ್ಪರ ವಿರುದ್ಧವೆಂದು ತೋರಿದರೂ ನಿಜವಾಗಿ ಅವು ಪೂರಕವೇ. ನ್ಯಾಯಾನ್ಯಾಯ ವಿಚಾರ ಮಾಡುವುದು ಸಜ್ಜನರ, ಸಮರ್ಥರ ಲಕ್ಷಣ; ಆದರೆ ಸಂಕಲ್ಪ ಮಾಡಿದ ನಂತರ ಏನೇ ಅಡ್ಡಿ ಬಂದರೂ ಎಷ್ಟೇ ಗಾಸಿಯಾದರೂ ಅದನ್ನು ನಡೆಸುವುದೂ ಅವರ ಲಕ್ಷಣವೇ. ಏಚನು ಎರೆಯಂಗನೊಂದಿಗೆ ಕಾದಲು ಹೊರಟದ್ದು ದೇಕಬ್ಬೆಗೇನೂ ಸಮ್ಮತವಲ್ಲ; ಬೇಡ ಬೇಡೆಂದು ತಡೆಯುತ್ತಾಳೆ ಆಕೆ. ರಣಚಾಪಲ್ಯವೋ, ವೈರಸಾಧನೆಯೋ ಏಚ ನಿಲ್ಲುವುದಿಲ್ಲ; ಅವನ ನಿರ್ಧಾರ ಬದಲಾಗದು. ದೇಕಬ್ಬೆಗೆ ಆತಂಕ, ನಿದ್ದೆಯಲ್ಲಿ ಅದೇ ಕನವರಿಕೆ–'ಅಡಿಗೆರಗಿ ಬೇಡುವೆನು, ನುಡಿಯ ನಾಲಿಸು ನಲ್ಲ!' ಆದರೆ ಎಚ್ಚರದಲ್ಲಿ ಅವನ ಬಗ್ಗೆ ಚರ್ಚೆಯಿಲ್ಲ; ಅವನು ತೀರಿಕೊಂಡನೆಂದು ಸುದ್ದಿ ಬಂದಾಗಲು ಅವನ ನಿಂದನೆಯಿಲ್ಲ. ಕೆಲಸದ ನಂತರ, ನಿರ್ಧಾರದ ನಂತರ ಚರ್ಚೆ ಸಲ್ಲದು. ಹಾಗೆಯೇ ತಾನು ಸತಿಯಾಗುವ ನಿರ್ಧಾರ ಮನಸ್ಸಿನಲ್ಲಿ ಮೂಡಿದಾಗಲೂ ಅದನ್ನು ನಡೆಸಿಯೇ ನಡೆಸುವೆನೆಂಬ ಹಟ. ಉದಾತ್ತ ವ್ಯಕ್ತಿತ್ವದ ಲಕ್ಷಣ ಇದು. ಯಾವುದು, ಯಾವಾಗ ಚರ್ಚಾಸ್ಪದ ಎನ್ನುವುದು ಔಚಿತ್ಯಜ್ಞಾನದಲ್ಲಿ ಸೇರಿದ್ದು.

* * *

ಮೂರನೆಯ ರೂಪಕವಾದ 'ವಾತ್ಸಲ್ಯ ತರಂಗ ಲೀಲೆ' ಕಾಳಿದಾಸ ಮಹಾಕವಿಯ ಜಗತ್ಪ್ರಸಿದ್ಧ 'ಶಾಕುಂತಲ' ನಾಟಕದ ಹಿನ್ನೆಲೆಯನ್ನು ಬೆಳೆಸುತ್ತದೆ. ಮಹಾಭಾರತದ ಕಥೆಯನ್ನು ಅವಲಂಬಿಸಿ ಶಕುಂತಲೆಯ ಜನನದಿಂದ ಆರಂಭಿಸಿ ಮಗುವನ್ನು ಕಣ್ವ ಋಷಿ ಸಾಕಿಕೊಳ್ಳುವವರೆಗೂ ರೂಪಕ ಸಾಗುತ್ತದೆ. ದೇವಕನ್ನಿಕೆಯಾದ ಮೇನಕೆ ದೇವಸಂಕಲ್ಪದಂತೆ ಬುವಿಗಿಳಿದು ಬಂದು ವಿಶ್ವಾಮಿತ್ರ ಮುನಿಯ ತಪಸ್ಸನ್ನು ಒಡೆದು, ಅವನ ಹೃದಯವನ್ನು ಹೀರಿ, ಅವನ ಒಲವನ್ನು ಹತ್ತಾರು

ವರ್ಷ ಅನುಭವಿಸುತ್ತಾಳೆ ; ಅದರ ಫಲವಾಗಿ ಶಕುಂತಲೆ ಹುಟ್ಟುತ್ತಾಳೆ. ಅಪ್ಸರೆಯ ಒಡಲಿಂದ ಈ ದಿವ್ಯ ಶಿಶು ಹೊರಬಂದ ವೇಳೆ ಮುನಿ ಹತ್ತಿರವಿಲ್ಲ. ಸ್ವರ್ಗದಿಂದ ಭೂಮಿಗೆ ಸ್ವಲ್ಪಕಾಲದ ವಲಸೆಗೆಂದು ಬಂದವಳು, ಇಲ್ಲಿ ಮಗಳನ್ನು ಪಡೆದು ಭೂಮಿಯೊಂದಿಗೆ ತೀರದ ನಂಟನ್ನು ಗಂಟುಹಾಕಿಕೊಂಡಳು. ಇಂದ್ರ ಹೋಗೆಂದರೆ ಹೋದವಳು ಈಗ ಬಾ ಎಂದರೆ ಬಾರದೆ ಉಂಟೆ? ಇಲ್ಲಿಗೆ ಬಂದಾಗ ಅವಳಿಗೆ ಆತಂಕವೇನು ಇರಲಿಲ್ಲ ; ಇಲ್ಲಿಂದ ಹೊರಡುವಾಗ ಮಾತ್ರ ಕಾಲೇ ಬಾರದು, ಮನಸ್ಸೇ ಇರದು. ತಾಯ್ತನದ ಅನುಭವ ಅವಳಿಗಾಗಿದೆ! ಮೇಲಿಂದ ಇಳಿದು ಬಂದ ಸಖಿಯರು ಅವಳನ್ನೆಚ್ಚರಿಸಿದರೂ ಅವಳು ನೆಮ್ಮದಿಯಿಂದ ಅವರೊಂದಿಗೆ ಮೇಲೇರಿ ಹೋಗಲಾರಳು.

ರೂಪಕ ಹೀಗೆ ಆರಂಭವಾಗುತ್ತದೆ. ಪುರಾಣಗಳಲ್ಲಿ ಪ್ರಸಿದ್ಧವಾದರೂ ಇದೊಂದು ವಿಚಿತ್ರರೀತಿಯ ಪ್ರಣಯ. ಕಠೋರ ತಪಸ್ಸಿನಲ್ಲಿ ನಿಂತ ಋಷಿ ಬೇರೆ ಲೋಕದ ತರುಣಿಯ ಬೆಡಗಿಗೆ ಸೋತು, ಸಂಯಮವನ್ನು ಸೂರೆಗೊಟ್ಟು ಕಾಮಿಯಾಗಿ ಅವಳ ಬಲೆಗೆ ಬೀಳುವುದು ಅಪ್ರಾಕೃತವೇ. ಋಷಿಯ ಬ್ರಹ್ಮಚರ್ಯ ಇಷ್ಟು ಲಲಿತವೆಂದು ನಾವು ಬಗೆಯುವುದಿಲ್ಲ. ಇಲ್ಲಿ ದಿಟವಾದ ಪ್ರೇಮವಿಲ್ಲವೆಂದು ಸಂದರ್ಭದಿಂದಲೇ ಸ್ಪಷ್ಟವಾಗುತ್ತದೆ. ಆದರೆ ವಿಧಿ, ಏನುಮಾಡುವುದು! ಎಂಥವರನ್ನೂ ಪರದಾಡಿಸುತ್ತದೆ. ಇಲ್ಲಿ ಪರದಾಟಕ್ಕೆ ಸಿಕ್ಕವನು ವಿಶ್ವಾಮಿತ್ರ ; ಮೇನಕೆಯನ್ನು ಮೋಹಿಸುವ ಮೊದಲು ಮಹರ್ಷಿಯೇ. ಮೋಹಕ್ಕೆ ಸಿಕ್ಕಿದ ನಂತರ ಮಾತ್ರ ಕಾಡಿಗೆ ಕಾಡೇ ಅವನನ್ನು ನೋಡಿ ನಗುತ್ತದೆ. ರೂಪಕದಲ್ಲಿ ಈ ಭಾಗ ಸ್ವಾರಸ್ಯವಾಗಿ ಬಂದಿದೆ. ತಾನು ನಗೆಪಾಟಲಾದೆನೆಂದು ಅರಿವಾದೊಡನೆ ಋಷಿಯ ಮೋಹ ಮರೆಯಾಗಿಬಿಡುತ್ತದೆ ; ಮತ್ತೆ ತಪಸ್ಸಿಗೆ ನಿಲ್ಲುತ್ತಾನೆ. ತನ್ನ ತಪಸ್ಸು ಹೀಗೆ ವ್ಯರ್ಥವಾಯಿತೆಂದು ಪರಿತಪಿಸುತ್ತಾನೆ, ಇನ್ನು ಎಚ್ಚರತಪ್ಪಬಾರದೆಂದು ನಿಶ್ಚಯಿಸಿಕೊಳ್ಳುತ್ತಾನೆ.

ಋಷಿಯ ಪ್ರೀತಿ ಹೀಗೆಯೇ ಎಂದರೆ, ಅಪ್ಸರೆಯ ಪ್ರೇಮವೇನೂ ಅತಿಶಯವಾದುದಲ್ಲ. ತಾನಾಗಿ ಬಯಸಿ ಬಂದವಳೇನಲ್ಲ ಅವಳು. "ನಿರ್ಬಂಧಕ್ಕಾಗಿಯೇ ನಾ ಬಂದೆನಲ್ಲದೆ, ಬೇರೆ ಕಾರಣವೇನು?" ಎನ್ನುತ್ತಾಳೆ ಮೋದಿನಿಯ ಮುಂದೆ. ವಿಶ್ವಾಮಿತ್ರ ತನ್ನನ್ನು ಕೂಡಿಕೊಂಡುದು ಕಾಮಬಲದಿಂದ ಎಂದು ಆಕೆಗೆ ತಿಳಿದಿದೆ. ಆದರೂ 'ಹೃದಯಾನುಬಂಧದಾ ಆಪ್ತಭಾವ'ದ ಮಾತಾಡುತ್ತಾಳೆ. ತಾನು 'ಊಳಿಗದ ತೊತ್ತಾ'ದರೂ ತನ್ನ 'ಭಾಗ್ಯ ವಿಶೇಷ'ವನ್ನು ಆಡಿ ತೋರಿಸುತ್ತಾಳೆ. ಋಷಿಯಿಂದ ತಾನು ಗರ್ಭಿಣಿಯಾದೆ ಎಂದೇ ಅವಳ ಸಂತೋಷ, ಸಮಾಧಾನ. ಅವಳ ಹವ್ಯಾಸದ ಹೆಂಗಳೆಯರು ಇಲ್ಲಾಗಲೀ ಅಲ್ಲಾಗಲೀ ಬಸಿರನ್ನು ಹೊರಲು ಬಯಸುವುದಿಲ್ಲವಷ್ಟೆ? ಏನೋ ಮಾಡಲು ಬಂದು ಇನ್ನೇನನ್ನೋ ಪಡೆದುದೇ ಅವಳ ಭಾಗ್ಯವಿಶೇಷ. ವಿಶ್ವಾಮಿತ್ರನ ತಪೋಭಂಗವಾಯಿತು ; ಇಂದ್ರನ ಆತಂಕ

ತಪ್ಪಿತು. ಇದಕ್ಕೆಲ್ಲ ಮೇನಕೆ ಒಂದು ನಿಮಿತ್ತವಷ್ಟೇ, ಒಂದು ಕಾರ್ಯ ಸಾಧನ ಸಾಮಗ್ರಿ. ತನ್ನ ಕೆಲಸವನ್ನು ಚೆನ್ನಾಗಿ ನಿರ್ವಹಿಸಿದುದಕ್ಕೆ ಪ್ರತಿಫಲ ಬೇಡವೆ? ತಾಯ್ತನದ ಭಾಗ್ಯವೇ ಪ್ರತಿಫಲ. ಇದಕ್ಕಾಗಿ ಅವಳು ಅಂಜದೆ, ಅಳುಕದೆ, ವೃತ್ತಿಯ ಮಿತಿಯನ್ನು ಮೀರಿ ದೊರೆತ ಸಂಭಾವನೆಗೆ ಹಿಗ್ಗಿದಳು. ಇದು ರೂಪಕ ದಲ್ಲಿ ಮೇನಕೆಯ ಪಾತ್ರಕ್ಕೆ ಪುಷ್ಟಿಯನ್ನು ಕೊಡುವ ವಿವರ.

ಇಲ್ಲಿನ ಮೇನಕೆ ಕೇವಲ ದೇವಗಣಿಕೆಯಲ್ಲ; ಸ್ತ್ರೀಸಹಜವಾದ ಮಾತೃ ವಾತ್ಸಲ್ಯದ ಪುತ್ಥಳಿ. ಅವಳ ಸಖಿ ಮೋದಿನಿ ಹೇಳುವಂತೆ (ಅಥವಾ ಸೂಚಿಸುವಂತೆ), ಹೆಂಗಸಿಗಿರುವ 'ಈ ಹಲುಬು-ಹಂಬಲಗಳು' ಅವರಿಗೆ 'ತೀರುವುದಲ್ಲ, ಅವರಾತ್ಮ ಸುಖವಾಗಿ ಅವರು ಜನಿಸಲೇ ಇಲ್ಲ.' ಅದಕ್ಕೆ ಮೇನಕೆಯೊಂದು ಅಪವಾದ. ಅವಳ ಹಲುಬು-ಹಂಬಲಗಳು ತೀರಿದುವು; ಅವಳಿಗೆ ಪ್ರಿಯವೇ ಆಯಿತು. ಆದರೆ ಆದುದಕ್ಕೆ ಅನುಬಂಧವಾಗಿ ಅವಳಲ್ಲಿ ವಾತ್ಸಲ್ಯದ ತರಂಗ ಲೀಲೆಯಾಡಿದುದು ಹೆಚ್ಚಿನದು. ಕಾಮದಲ್ಲಿ ಪಡೆದ ಕೂಸನ್ನು ಕಣ್ಣೆತ್ತಿಯೂ ನೋಡದೆ, ಕಲ್ಲೆದೆಯಾಗಿ ತಪಸ್ಸಿಗೆಂದು ನಡೆದ ವಿಶ್ವಾಮಿತ್ರನಲ್ಲಿ ನಮಗೆ ಕನಿಕರ ಬರುವುದು ಕಷ್ಟ. ಗಂಡಸಿಗೆ ಕರುಳು ಕಡಮೆಯೆಂದರೂ ಹೊಣೆಗಾರಿಕೆ ಇರದೆ? ತಪಸ್ಸಿನಲ್ಲಿ ಮಾನವೀಯ ಮೌಲ್ಯಗಳು ಮರೆಯಾಗಬೇಕೆ? 'ಇದರಲ್ಲಿ ತನ್ನ ತಪ್ಪೇನೂ ಇಲ್ಲ' ಎಂದು ಅವನು ವಾದಿಸುತ್ತಾನೆ. ದೇವತೆಗಳು ಹೂಡಿದ ನಾಟಕದ ನೆಲೆಯಲ್ಲಿ ಇದು ಸ್ವಲ್ಪಮಟ್ಟಿಗೆ ಸರಿಯೇ. ಆದರೆ ಇದು ತಪ್ಪು-ಒಪ್ಪುಗಳ ಪ್ರಶ್ನೆಯಲ್ಲ. ಹಾಗೆ ನೋಡಿದರೆ, ಮೇನಕೆಯದೂ ತಪ್ಪಿಲ್ಲ; ಎಷ್ಟಾದರೂ ಅವಳು 'ಊಳಿಗದ ತೊತ್ತು'. ಸಖಿ ಮೋದಿನಿಯೆಂದಂತೆ "ಈ ನೇಹದಲುದಿಸಿದ, ಶಿಶುವಿಲ್ಲಿ ಬೆಳೆವುದು; ತಂದೆಯೇ ಪಾಲಕನು" ಎಂದು ಹೇಳಿ ಮಗುವನ್ನು ಬಿಟ್ಟು 'ಮಮತೆ ಯನ್ನು ಮಿತಿಗೊಳಿಸಿ' ಹೊರಟೇ ಬಿಡಬಹುದಾಗಿತ್ತು. ಆದರೆ ಹಾಗೆ ಮಾಡದೆ ದೇವನಾಥನು ಕರೆಯ ಕಳುಹಿಸಿದರೂ,

> 'ವಾತ್ಸಲ್ಯ ಬಲವೆತ್ತು, ಶಿಶುವ ಬಿಡೆ ಮನಸಿಲ್ಲ
> ಅಲ್ಲಿ ಕೊಂಡೊಯ್ವುದಕೆ ಅಮರರೊಪ್ಪಿಗೆ ಇಲ್ಲ'

–ಎಂದು ಪರಿತಪಿಸಿದಳು, ಉಭಯ ಸಂಕಟಕ್ಕೆ ಸಿಕ್ಕು ನರಳಿದಳು. ಸಖಿಯರನ್ನು ಕರೆದೊಯ್ದು ಮುನಿಯ ಬಳಿ ಬಂದು ಅಂಗಲಾಚಿದಳು. ಇದು ತಾಯ್ತನದ ಬವಣೆ; ಮೋದಿನಿಯಾಗಲೀ ಸಾನುಮತಿಯಾಗಲೀ ಅರಿಯಲಾರದ ಬವಣೆ; ಅವರು, 'ಎನ್ನೊಳಗಿನಾ ನೋವ ಭಾವಿಸಲಾರರದ ಬವಣೆ.' ಆದರೆ ಈ ಬವಣೆಯಲ್ಲಿ 'ಸುಫಲತೆ' ಯಿದೆ, 'ಸಹಜಪ್ರಿಯ'ವಿದೆ. ಅದಕ್ಕೆ ಎಷ್ಟೇ ಕಷ್ಟವಾಗಲೀ ಸಹಿಸಿಕೊಳ್ಳುವೆನೆಂಬ ವಿಶ್ವಾಸನೂ ಇರುತ್ತದೆ. 'ಧೈರ್ಯವೇ ಬಾ ಇತ್ತ, ಸಂದೇಹವೇ ತೊಲಗು, ಮನವೇ! ಶುಭವ ಹಾರೈಸು' ಎಂದು ಮೇನಕೆ ತನಗೆ ತಾನೇ ಎಂದುಕೊಂಡುದು ಸಹಜವಾಗಿ ಕಷ್ಟದಲ್ಲಿರುವ ಎಲ್ಲ ತಾಯಂದಿರಿಗೂ ಆಗುವ ಅನುಭವವೇ.

ದೇವೇಂದ್ರನು 'ದೇವಾಂಶಸಂಭೂತ ಶಿಶುವಿಗಾವ ಭಯ? ನಿರಪಾಯ ರಕ್ಷಣೆಗೆ ಬೇಕಾದುದೆಲ್ಲವನು ಹವಣಿಸುವೆವಿಲ್ಲಿಂದ' ಎಂದು ಆಶ್ವಾಸನೆ ಕೊಟ್ಟ ನಂತರ, ವಿಶ್ವಾಮಿತ್ರನೂ 'ಶಿಶುವಿನಾ ಮಾತೇನು? ತಪದ ಪೂರ್ಣಾಂಶದಲಿ ಜನಿಸಿರುವ ಶಿಶುವಿಗೆ ಆವ ಭಯವೂ ಇಲ್ಲ. ಪ್ರಮಾದಗಳು ಬಳಿಗೆ ಬರಲಂಜುವುವು' ಎಂದು ಭರವಸೆ ನೀಡಿದ ನಂತರ ಮೇನಕೆಗೆ ಎಲ್ಲಿಯ ಆತಂಕ? 'ನಂಬುಗೆಯು ಬಲವೊಂದೇ ಧೈರ್ಯಾವಲಂಬನಕೆ ಉತ್ತಮ ಸಾಧನವು.' ಆಕೆ ದೇವಲೋಕಕ್ಕೆ ಹೋಗುವುದೆ ಒತ ಎಂದು ಒಡೆಯನಾದ ಇಂದ್ರನೂ ಹೇಳಿದ, ಪ್ರಣಯಿಯಾದ ವಿಶ್ವಾಮಿತ್ರನೂ ಹೇಳಿದ. ಮಗುವಿನ ಹೊಣೆಯನ್ನೆಲ್ಲ ಹೊತ್ತು ತಾನು ಇಲ್ಲಿಯೇ ನೆಲಸಿ 'ತಾಯ್ತನದ ಕರ್ತವ್ಯ ನಿರ್ವಹಿಸಲಾಗದೆ?' ಎನ್ನುವ ಆಲೋಚನೆ ಅವಳಲ್ಲಿ ಬಂದಿತ್ತು; ಅದು ಈಗ ಹರಿದು, 'ದೈವ ರಕ್ಷಿಪುದೆಂಬ ಭರವಸೆ'ಯನ್ನು ತಳೆದು ಮೇನಕೆ ಮಗುವನ್ನು ಮಾಲಿನೀ ನದಿಯ ತೀರದಲ್ಲಿ ಮಲಗಿಸಿ ಹೋದಳು; ನದಿಯೂ ಆಶ್ವಾಸನೆ ನೀಡುತ್ತದೆ. ಮೇನಕೆ 'ಮಮತಾಮಯಿಯಾದ ಮಾತೆ'ಯೆಂದು ಮಾಲಿನಿಗೂ ಗೊತ್ತು. ಹೆಂಗಸು ಹೆಂಗಸಿಗೆ ನೀಡುವ, ನೀಡಬೇಕಾದ, ನೀತಿ ಬೋಧೆ ಇಲ್ಲಿ ಬರುತ್ತದೆ.

"ಸೈರಿಪುದೆ ಹೆಣ್ತನವು. ಅಭ್ಯಾಸಬಲದಿಂದ
ಸೈರಣೆಯ ಸಾಂಗತ್ಯ ದಿನ ದಿನಕೆ ಪಳಗುವುದು.
ದುಃಖಶಮನೋಪಾಯ ಸಾಧನಗಳಿಲ್ಲವೇ ?"

ಈ ವಾತ್ಸಲ್ಯ ಮೇನಕೆಗೆ ಮಾತ್ರ ಸೀಮಿತವಲ್ಲ. ಜಡವೆಂದು ಜನ ಬಗೆಯುವ ನದಿಗೂ ಇದೆ, ಕೀಳು ಜನ್ಮವೆಂದು ಬಗೆಯುವ ಹಕ್ಕಿಗೂ ಇದೆ. ಜಲದೇವತೆ ಶಕುಂತ ಪಕ್ಷಿಗಳಿಗೆ ಮಗುವನ್ನು ಕಾಪಿಡಲು ಸೂಚಿಸುವುದು, ತಾಯಿ ಹಕ್ಕಿ ತನ್ನ ಬಳಗದೊಂದಿಗೆ ಮಗುವಿಗೆ ನೆರಳು ನೀಡಿ, ಜೇನುಣಿಸಿ, ಸಂಜೆಯವರೆಗೂ ನೋಡಿಕೊಳ್ಳುವುದು ರೂಪಕದಲ್ಲಿ ಸ್ವಾರಸ್ಯವಾಗಿ ಬಂದಿರುವ ವಿವರಗಳು. ಇವನ್ನೆಲ್ಲ ಆತಂಕದಿಂದ, ಆಶ್ಚರ್ಯದಿಂದ ನೋಡುತ್ತಿರುವ ದೇವಗಣಿಕೆ, ಮೇನಕೆಯ ಸಖಿ ಸಾನುಮತಿ "ಸುರರೆಂಬ ಹೆಮ್ಮೆಯೇ ಈ ಲೋಕದಲಿ ನಡೆವ ಅದ್ಭುತಗಳರಿಯೆವು" ಎನ್ನುತ್ತಾಳೆ. ಸ್ವರ್ಗದಲಿ ಸಖಿಗೆ ಸ್ವಾಗತವಾಗುತ್ತಿರುವಾಗ ತನಗೆ ಇಲ್ಲಿ ನಯನೋತ್ಸವವಾಯಿತೆಂದು ಸಮಾಧಾನ ಪಟ್ಟುಕೊಳ್ಳುತ್ತಾಳೆ. ಮುಂದೆ ಮಗು ಕಣ್ವಮುನಿಯ ಕೈಸೇರುವವರೆಗೂ ಅವಳು ಇಲ್ಲಿಯೇ ಇದ್ದು, ಅನಂತರ ಮೇಲು ಲೋಕಕ್ಕೆ ಹಿಂದಿರುಗುತ್ತಾಳೆ. ಅವಳಿಂದ ಮೇನಕೆಗೆ ನಡೆದ ವಿದ್ಯಮಾನಗಳೆಲ್ಲ ತಿಳಿದು, ಮಗುವಿನ ವಿಚಾರವಾಗಿ ಅವಳಿಗಿದ್ದ ಶಂಕಾತಂಕಗಳು ಮರೆಯಾಗುವುದೆಂದು ಧ್ವನಿ.

ಹೀಗೆ ಮೇನಕೆಯ ಒಡಲಲ್ಲಿ ಮೂಡಿಬಂದ ವಾತ್ಸಲ್ಯವು ತರಂಗ ತರಂಗವಾಗಿ ಮಾಲಿನೀ ನದಿಯಲ್ಲಿಯೂ, ಶಕುಂತಪಕ್ಷಿಗಳಲ್ಲಿಯೂ, ಕಣ್ವ ಮುನಿಯಲ್ಲಿಯೂ ಲೀಲೆಯಾಡಿ ಕಡೆಗೆ ಆ ಮುನಿಪತ್ನಿ ಗೌತಮಿಯಲ್ಲಿ ದಡಮುಟ್ಟಿತು. ವಾತ್ಸಲ್ಯದ ವಿವಿಧ ಭಾವ ಭಂಗಿಗಳನು ರೂಪಕ ಚೆನ್ನಾಗಿ ಪ್ರತಿಬಿಂಬಿಸಿದೆ; ವಾತ್ಸಲ್ಯದಲ್ಲಿರುವ ಹೃದಯ

ಸಂವಾದ ಇಲ್ಲಿ ಸ್ಪಷ್ಟವಾಗುತ್ತದೆ. ಈ ರೂಪಕದಲ್ಲಿ ವಿಶ್ವಾಮಿತ್ರ, ಮೇನಕೆ, ಕಣ್ವ, ಗೌತಮಿ ಎಲ್ಲರೂ ಸಮಾನ ಪಾತ್ರಗಳೇ ಎನ್ನುವುದೊಂದು ವಿಶೇಷ. ಹೆಂಗಳೆಯರದ್ದೇ ಆದ ನಾಟಕದಲ್ಲಿ ಕಣ್ವ ಮುನಿಯು ಸೇರಿಕೊಂಡಾಗ ಮೇಲೆದ್ದು ಕಾಣುವುದು ಅವನ ಹೆಂಗರುಳೇ. ಇದರಲ್ಲಿ ದುಷ್ಟ ಸ್ವಭಾವದ ವ್ಯಕ್ತಿಯೇ ಇಲ್ಲ. ಮೇನಕೆ ಗಣಿಕೆಯಾದರೂ ಮಾತೃವಾತ್ಸಲ್ಯವುಳ್ಳವಳು ; ಅವಳನ್ನು ಕರೆಯಿಸಿಕೊಂಡ ದೇವೇಂದ್ರನಿಗೂ ಮೇನಕೆಯ ಮಗುವಿನಲ್ಲಿ ಅನುಕಂಪವಿದೆ ; ಕರೆಯಲು ಬಂದ ಸಖಿಯರಿಗೂ ಮೇನಕೆಯ ಮೇಲೆ ಸಂತಾಪ ಅರ್ಥವಾಗುತ್ತದೆ. ಕಡೆಗೆ, ಕಾಡು ಕೈಬೀಸಿ ಕರೆಯಲು ತನ್ನ ತಪಸ್ಸೆಲ್ಲ ವ್ಯರ್ಥವಾಯಿತೆಂದು ಪರಿತಾಪ ಪಟ್ಟು ಮತ್ತೆ ತಪಸ್ಸಿಗೆ ನಿಂತ ವಿಶ್ವಾಮಿತ್ರನಲ್ಲಿಯೂ ಕಾಠಿಣ್ಯವಿಲ್ಲ. ಮೇನಕೆಯನ್ನಾಗಲೀ ಮಗುವನ್ನಾಗಲೀ ಕಣ್ಣೆತ್ತಿಯೂ ನೋಡದೆ, ತನ್ನ ಹೊಣೆಗಾರಿಕೆಯನ್ನೆಲ್ಲ ತಿರಸ್ಕರಿಸಿ ನಿಂತ ವಿಶ್ವಾಮಿತ್ರ ಮೇಲುನೋಟಕ್ಕೆ ನಿಷ್ಠುರನೆಂದು ಕಂಡರೂ, ಮೇನಕೆಯೇ ಅವನನ್ನು 'ಧನ್ಯಾತ್ಮನೀ ಮುನಿಯು' ಎಂದು ಸ್ತುತಿಸುತ್ತಾಳೆ ; ಅವನ 'ವಾಕ್ಸಹಾಯ' ಅವಳಿಗೆ ಬಲವೆನಿಸಿತು. ಕಣ್ವರು ಗೌತಮಿಗೆ ಶಕುಂತಲಾ ಜನನದ ಹಿನ್ನೆಲೆಯನ್ನು ವಿವರಿಸುವಾಗ ವಿಶ್ವಾಮಿತ್ರನ ತಪಸ್ಸು ನಷ್ಟವಾದುದನ್ನು ಕುರಿತು– 'ಆ ನಷ್ಟವೀ ಲಾಭ. ಒಂದೆಡೆಯ ನಷ್ಟ, ಮತ್ತೊಂದು ಲಾಭಕೆ ಮೂಲ' ಎಂದು ಹೇಳಿದುದು ಗಮನಾರ್ಹ.

ಅಂತೂ 'ಭಾರತೀ ರೂಪಕತ್ರಯಿ' ನಮ್ಮನ್ನು ಮೂರು ಲೋಕಗಳಿಗೊಯ್ಯುತ್ತದೆ; ಲಕ್ಷ್ಮಣನ ಮಡದಿ ಊರ್ಮಿಳೆಯ ಉದಾತ್ತ ಆದರ್ಶ, ನಾಡಿನ ಮರ್ಯಾದೆಗಾಗಿ ಸತಿಯು ಮಾಡುವ ಬಲಿದಾನ, ದೇವಮಾನವರ ಸಂಪರ್ಕದಿಂದ ಮಾನವ ಶಿಶು ತಿವಿದೆಬ್ಬಿಸುವ ಮಾತೃವಾತ್ಸಲ್ಯದ ತರಂಗ ಲೀಲೆ. ಅನುಭವದ ಆಳದಿಂದ, ಭಾವನೆಗಳ ಬುಗ್ಗೆಯಿಂದ ಹೊರಬಂದಿರುವ ಈ ಮೂರು ರೂಪಕಗಳೂ ಮನೋಜ್ಞವಾದುವು, ಹೃದ್ಯವಾದುವು. ★

ಕಾವ್ಯಗಂಗೆ

● ಟಿ. ಸುನಂದಮ್ಮ

ನಾಲ್ಕು ದಶಕಗಳ ಅವಧಿಯಲ್ಲಿ ಶ್ರೀಮತಿ "ಭಾರತಿ"ಯವರ ಲೇಖನಿಯಿಂದ ರೂಪುಗೊಂಡ ಮೂರು ನಾಟಕಗಳು 'ತಪಸ್ವಿನಿ', 'ಮಹಾಸತಿ' ಮತ್ತು 'ವಾತ್ಸಲ್ಯ ತರಂಗ ಲೀಲಾ.' ಈ ನಾಟಕಗಳ ವೈಶಿಷ್ಟ್ಯವೆಂದರೆ, ಅವು ಸಾಧಾರಣವಾದ ಗದ್ಯ ಶೈಲಿಯಲ್ಲಿ ಬರೆದುವಲ್ಲ; ಬದಲಿಗೆ ತಮ್ಮದೇ ಆದ ಕಾವ್ಯ ರೂಪಕಗಳು!

ಮೂರು ನಾಟಕಗಳದೂ ಬೇರೆ ಬೇರೆ ವಸ್ತು; ಪೌರಾಣಿಕ, ಐತಿಹಾಸಿಕ, ಮತ್ತು ಭಾವುಕ. ಹೆಣ್ಣಿನ ಮೂರು ಮುಖಗಳ ಚಿತ್ರಣ; ವೈರಾಗ್ಯದ ತುತ್ತ ತುದಿಯನ್ನು ಮುಟ್ಟಿದವಳು ಊರ್ಮಿಳೆಯಾದರೆ, ಪಾತಿವ್ರತ್ಯದ ಆದರ್ಶಕ್ಕೆ ಕನ್ನಡಿ ಹಿಡಿದವಳು ದೇಕಬ್ಬೆ. ಇನ್ನು ಮೂರನೆಯವಳಾದ ಮೇನಕೆ–ದೇವನಾರಿಯಾಗಿದ್ದು ಮಾನವ ಶಿಶುವಿಗೆ ಜನ್ಮ ಕೊಟ್ಟು, ತಾಯ್ತನದ ತನಿಗರುಳ ತೂಗುಯ್ಯಾಲೆಯಲ್ಲಿ ತಳಮಳಿಸಿದ ಒಬ್ಬ ತಾಯಿ;

ಮಹಾ ಕಾವ್ಯಗಳ ರಚನಕಾರರು ಮುಖ್ಯಪಾತ್ರಗಳಿಗೆ ಪ್ರಾಮುಖ್ಯತೆ ಕೊಟ್ಟರು, ಆ ಪಾತ್ರಗಳನ್ನು ಬೆಳೆಸಿದರು, ಬೆಳಗಿಸಿದರು; ಅವರನ್ನು ಆದರ್ಶ ವ್ಯಕ್ತಿಗಳೆಂದು ಎತ್ತಿ ತೋರಿಸಿದರು. ಆದರೆ ಆ 'ಮಹಾವ್ಯಕ್ತಿ'ಗಳ ಸೃಷ್ಟಿಗೆ ಪ್ರೇರಕವಾದ ಪೋಷಕವಾದ, ಅಷ್ಟೇ ಪ್ರತಿಭಾವಂತರಾದ, ಸಂಯಮ ಶೀಲರಾದ, ತ್ಯಾಗಮಯಿಗಳಾದ ಎಷ್ಟೆಷ್ಟೋ ಪಾತ್ರಗಳು ನಿರ್ಲಕ್ಷತೆಯ ತೆರೆಮರೆಯಲ್ಲಿ ಕರಗಿಹೋಗಿವೆ!

ರಾಮಾಯಣದ ಅಂತಹ ಒಂದು ಪಾತ್ರವನ್ನು ಕೇಂದ್ರೀಕರಿಸಿ 'ತಪಸ್ವಿನಿ' ನಾಟಕ ಬರೆದ ಶ್ರೀಮತಿ'ಭಾರತಿ'ಯವರ ಪ್ರಜ್ಞಾವಂತಿಕೆ ನಿಜಕ್ಕೂ ಅತ್ಯಂತ ಅಭಿನಂದನೀಯ.

ಈ ಕಾವ್ಯ ನಾಟಕ ಓದಿದಾಗ ಕಣ್ತುಂಬಿ ಬಂದು, ಊರ್ಮಿಳೆಯ ಬಗೆಗೆ ಅನುಕಂಪದ ಸೆಲೆಯುಕ್ಕಿ "ಪತ್ನಿಯಿಂದಗಲಿಸಿ ತಮ್ಮನನ್ನು ಕರೆದೊಯ್ಯಲೊಪ್ಪಿದ ಶ್ರೀರಾಮ

ನೆಂತಹ ಸ್ವಾರ್ಥಿ?" ಎಂದು ಉದ್ಗರಿಸುವಂತಾಗುವುದು! ಕಾವ್ಯದ ಶ್ರೀರಾಮ ನುಡಿದ ಸಾಲುಗಳಲ್ಲೇ ಹೇಳುವುದಾದರೆ,

"ಹರುಷ ಚಿತ್ತದಿ ಸದಾ ಪರಿಚರ್ಯೆಯನು ಮಾಡಿ,
ಭ್ರಾಂತನಾದೆನ್ನ ಸಂತೈಸಿ, ಎಚ್ಚರಿಸಿ,
ವಿನಯದಲಿ ಕರ್ತವ್ಯಪಥಕೆನ್ನ ಕರೆದೊಯ್ದ
ಸೌಮಿತ್ರಿ. ಮನದ ದೃಢಮೆನಿತು ? ನಿಗ್ರಹಮೆನಿತು ?
ಎನಿತು ಸ್ವಾರ್ಥಿಯು, ಹೃದಯ ದೌರ್ಬಲ್ಯಮೆನಿತೆನಗೆ!"

ಅಷ್ಟೇ ಅಲ್ಲ; ಲಕ್ಷ್ಮಣನ ವ್ಯಕ್ತಿತ್ವದ ಮೇಲೆ 'ಕ್ಷ' ಕಿರಣ ಬೀರಿದಾಗ, ರಾವಣ ಸೀತೆಯನ್ನು ಕೊಂಡೊಯ್ಯಲು ವಿರಹದಿಂದ ಹುಚ್ಚನಂತಾವ ಶ್ರೀರಾಮಚಂದ್ರನ ಪರಿಸ್ಥಿತಿ ನೆನೆಸಿಕೊಂಡಾಗ, ಲಕ್ಷ್ಮಣ ಅಣ್ಣನಿಗಿಂತ ಮಹೋನ್ನತನೆನಿಸುತ್ತಾನೆ.

ವನವಾಸದಿಂದ ಹಿಂದಿರುಗಿದಂದು, ಅಯೋಧ್ಯೆಯಲ್ಲಿದ್ದೂ ಅಡವಿಯಲ್ಲಿದ್ದಂತೆ ತಾಪಸಿಯಾಗಿದ್ದ ಊರ್ಮಿಳೆಯನ್ನು ಲಕ್ಷ್ಮಣ ಸಂಧಿಸಿ ಮಾತನಾಡುತ್ತಿರುವಲ್ಲಿ, ಸೀತೆಯೊಟ್ಟಿಗೆ ಮರೆಗೆ ನಿಂತು ನೋಡಿದ ರಾಮ, ಅವರ ತ್ಯಾಗ ಕುರಿತು ಮೆಚ್ಚಿ, ಇವರು ತಮಗಿಂತ ಹಿರಿಯರೆನ್ನುತ್ತಾನೆ.

ತನ್ನ ದುಃಸ್ಥಿತಿಗೆ, ತನ್ನ ಬಾಳಿನ ಹೊನ್ನ ದಿನಗಳು ಮಣ್ಣಾದುದಕ್ಕೆ ಕಾರಣವಾದ ಸೀತೆಯ ಬಗೆಗೆ ಊರ್ಮಿಳೆಯ ಭಾವನೆಯೆಂತು? ಆಧುನಿಕ ಸಮಾಜದ ರೀತಿಯ ವೈರವೇ, ದ್ವೇಷವೇ, ತಿರಸ್ಕಾರವೇ?

ಲಕ್ಷ್ಮಣ, ಸೀತಾಪಹರಣದ ವಿವರಗಳನ್ನು ಊರ್ಮಿಳೆಗೆ ಹೇಳುತ್ತಾನೆ; (ಹದಿನಾಲ್ಕು ಸಂವತ್ಸರದ ಕಥಾಸಾರವನ್ನು ನಾಲ್ಕು ಪುಟಗಳಲ್ಲಿ ನೀಡಿದ್ದಾರೆ, ಶ್ರೀಮತಿ ಭಾರತಿಯವರು!)

ಲಕ್ಷ್ಮಣ—ಕರೆದೆನು, ಜಾನಕೀದೇವಿ ಎಲ್ಲಿರುವೆ ಬಾರೆಂದು.
ಜಾನಕಿಯ ಉತ್ತರ ಬರಲಿಲ್ಲ.
ಊರ್ಮಿಳೆ—ಏನಾಯ್ತು ಜಾನಕಿಗೆ?
ಲಕ್ಷ್ಮಣ—ಜಾನಕಿಯೇ ಇಲ್ಲ!
ಊರ್ಮಿಳೆ—ಇಲ್ಲವೇ? ಏನಾದಳೆಲ್ಲಿ ಪೋದಳು? ವನದಿ ನೀಗಿದಿರೇ
ಲೋಕಮಾತೆಯನು?"

ಅಂತೆಯೇ ಅಗ್ನಿ ಪ್ರವೇಶದ ಸುದ್ದಿ ತಿಳಿಸಿದಾಗ, "ಅಗ್ನಿ ಸಂಸ್ಕಾರಮೇನಿದು ಲೋಕ ಪಾವನೆಗೆ?" ಎನ್ನುತ್ತಾಳೆ. ಸೀತೆಯನ್ನು ಕಂಡಾಗ, "ಶುಭವು ನೀನೇ? ಜಗದ ಪ್ರಭೆಯು ನೀನೇ ತಾಯೇ" ಎಂದು ಕಾಲಿಗೆರಗುತ್ತಾಳೆ!....ಅದು, ಊರ್ಮಿಳೆಯ ಭಾವನೆ, ಗೌರವ, ಪ್ರೀತಿ- ವೋರಗಿತ್ತಿಯ ವಿಷಯದಲ್ಲಿ!

ಊರ್ಮಿಳೆಯ ಮಹಾ ತ್ಯಾಗದ, ತನ್ನತನವನ್ನೇ ಮರೆತು "ಕದಲದಂತಿದೆ ಕಾಲ" ಎಂದು ನುಡಿಸಿದ ಉನ್ನತ ವೈರಾಗ್ಯದ ಅರಿವು ಸೀತಾದೇವಿಗೂ ಆಗುತ್ತದೆ.

"ಕೂಸುತನದಲಿ ಸಕಲ ಸಿದ್ಧಿಗಳನೊಂದಿರುವೆ; ನಿನ್ನ ತ್ಯಾಗದ ಮುಂದೆ ನನ್ನ ತಪವೆಲ್ಲಿ ತಂಗಿ?" ಎಂದಾಕೆ ನುಡಿದಾಗ ತನ್ನ ಮನದಲ್ಲೇ ತಂಗಿಗೆ ತಲೆಬಾಗಿದ ಳೇನೋ ಎನಿಸದಿರದು!

ಊರ್ಮಿಳೆಯು ಚಿತ್ತವೃತ್ತಿಯ ಕೇಂದ್ರ ಬಿಂದುವಾಗಿರುವ "ತಪಸ್ವಿನಿ"ಯಲ್ಲಿ ವೇದಾಂತ, ಮನೋದಾರ್ಢ್ಯ, ಸ್ವಾತಂತ್ರ್ಯ ಈ ಭಾವಗಳೂ ಬಿಂಬಿತವಾಗಿವೆ. "ಉಭಯ ಜೀವನ ಶೋಧನೆಗೊಂದವಕಾಶವಾಯ್ತು" ಎಂದು ಲಕ್ಷ್ಮಣ ನುಡಿದ ಒಂದು ವಾಕ್ಯ ವೇದಾಂತ ಸಾರವನ್ನೇ ಬೋಧಿಸುತ್ತದೆ.

"ಬಡತನದ ಬಾಳ್ಕೆಯೇನಮಿತ ಹಿತವಾಗಿಹುದು?
ಸವಿದೆವಾ ಸರಳ ಜೀವನದ ಸುಖಸಾರವನು.
ರಾಜ ಮರ್ಯಾದೆಗಳ ಬಿನ್ನಾಣಕೆಡೆಯಿಲ್ಲ.
ರಾಜಭೋಗಗಳಲಿ ಬಯಕೆಯೇ ಇಲ್ಲ.
ಶುದ್ಧವಾದೊಂದು ಸ್ವಾತಂತ್ರ್ಯ ದೊರೆತುದು ನಮಗೆ"

ಲಕ್ಷ್ಮಣನ ಈ ಮಾತುಗಳು ಅಧಿಕಾರ ಪದವಿಗಳ ಚಿನ್ನದ ಪಂಜರದಲ್ಲಿ ಸಿಲುಕಿದವರ ಮನೋಭಾವವನ್ನು, ಅಸಹಾಯಕತೆಯನ್ನು ಎಷ್ಟು ಸರಳವಾಗಿ ಎತ್ತಿ ತೋರಿಸುತ್ತವೆ?

ಲಕ್ಷ್ಮಣ, "ದೇವಿ, ನಿನ್ನ ತಪ ಮುಗಿದುದೋ?" ಎಂದು ಕೇಳಿದಾಗ, ಊರ್ಮಿಳೆಯಿತ್ತ "ಈಗಲೇ ಸಿದ್ಧಿ" ಎನ್ನುವ ಎರಡು ಪದಗಳ ಪ್ರತ್ಯುತ್ತರದಲ್ಲಿ 'ತಪಸ್ವಿನಿ' ನಾಟಕ ಬರೆದ ಧ್ಯೇಯವನ್ನೆಲ್ಲ ಸಿದ್ಧಿಸಿಕೊಂಡಿದ್ದಾರೆ, ಶ್ರೀಮತಿ ರಾಜಮ್ಮನವರು!

* * * *

ಪ್ರಾಕ್ತನ ಸಂಶೋಧನ ನಿಪುಣರಾದ ಪತಿವರ್ಯ ಶ್ರೀ ತಿ. ತಾ. ಶರ್ಮರವರು ಹೆಗ್ಗಡದೇವನ ಕೋಟೆಯ ಒಂದು ಶಾಸನದಲ್ಲಿನ ಕಥೆಯನ್ನು ಹೇಳಿದಾಗ, ಆ ಕಥಾ ನಾಯಕಿ ದೇಕಲೆಯ ಪತಿ ಪ್ರೇಮದಾಳ ಶ್ರೀಮತಿ 'ಭಾರತಿ'ಯವರ ಮನವೊತ್ತಿ, "ಮಹಾಸತಿ" ನಾಟಕ ರೂಪುಗೊಂಡಿತು.

ರಾಜಾರಾಮ ಮೋಹನರಾಯರಂತಹ ಸಮಾಜ ಸುಧಾರಕರ ಸತತ ಪ್ರಯತ್ನ ದಿಂದ ಮುಕ್ತಾಯ ಹೊಂದಿದ 'ಸತಿ' ಪದ್ಧತಿ ಎಷ್ಟು ಅಸಹನೀಯ ಎಂದು ನಮಗನಿ ಸಿದರೂ, 'ಮಹಾಸತಿ' ನಾಟಕದ ಮೂಲದೇವತೆ ದೇಕಬ್ಬೆ ಎಸಗಿದ 'ಸತಿ' ಶ್ಲಾಘನೀಯ ಎಂಬ ಭಾವನೆ ಬರುತ್ತದೆ. ಇದಕ್ಕೆ ಕಾರಣ, ಶ್ರೀಮತಿ 'ಭಾರತಿ'ಯವರ ನುರಿತ ಬರಹ!

ಇವರ ಭಾಷೆ ಬಹು ಬಿಗುವು. ಶ್ರೀ ವಿ. ಸೀತಾರಾಮಯ್ಯನವರು ಮುನ್ನುಡಿ ಯಲ್ಲಿ ಅಂದಂತೆ, "ಈ ಪದ್ಯ ನಾಟಕದಲ್ಲಿ ಸಾಲುಗಳ ಓಟ, ಬನಿ, ಹಿಂದಿನ ಇವರ ಕೃತಿಗಳಲ್ಲಿನವಕ್ಕಿಂತ ಕುದುರಿವೆ. ಮನಸ್ಸಿನ ಆಳ, ಲೋಕಾನುಭವಗಳ ತುಂಬು ನೋಟ, ಪಾತ್ರಗಳ ಬಾಯಲ್ಲಿ ನುಡಿಯುತ್ತವೆ."

ತಲಕಾಡಿನ ರಾಜ "ಮಲ್ಲಯುದ್ಧ ಸಲ್ಲ"ದೆಂದು ರಾಜಾಜ್ಞೆ ಮಾಡಿದ್ದರೂ ವೈರ ಮತ್ತ ಜಟ್ಟಿಗಳು ಎರೆಯಂಗ-ಏಚರು ಹೋರಾಡಿದರು. ಎರೆಯಂಗನನ್ನು ಸದೆಬಡಿದ ಏಚನಿಗೆ ರಾಜನಿಂದ ಮರಣ ದಂಡನೆ! ವೀರಪತ್ನಿ ದೇಕಲೆ ಮಹಾಯಾತ್ರೆಗೈದು ಪತಿಯ ಶವದೊಂದಿಗೆ ಚಿತಾರೋಹಣ ಮಾಡಿದಳು; ಇದು, ಕಥಾವಸ್ತು.

ಇಲ್ಲಿ ಕಾಣುವುದು ಚಿತ್ತಸ್ಥೈರ್ಯದ ಇನ್ನೊಂದು ಮುಖ. ಊರ್ಮಿಳೆಯದು ಪ್ರಶಾಂತ ವೈರಾಗ್ಯದ ಚಿತ್ತೈಕತೆಯಾದರೆ, ದೇಕಲೆಯದು ಘೋರ ನಿರ್ಧಾರದ ವಿರಾಡ್ರೂಪ! ಎಳೆ ವಯಸ್ಸಿನ ಆ ವಿಧವೆಯ ಮನಸ್ಸನ್ನು ತಿರುಗಿಸಲು ವೃದ್ಧ ಮಾತಾಪಿತೃಗಳು, ಆತ್ಮೀಯ ಗೆಳತಿಯರು, ಊಳಿಗದವರು ಮಾಡದ ಪ್ರಯತ್ನವಿಲ್ಲ; ಹೇಳದ ತಿಳುವಳಿಕೆ ಮಾತುಗಳಿಲ್ಲ. ಆದರಾಕೆ ಅಚಲ ಹಿಮಾಚಲ!

ಈ ನಾಟಕದುದ್ದಕ್ಕೂ ವೇದಾಂತ, ಜೀವನ ರಹಸ್ಯಗಳ ಗುಪ್ತಗಾಮಿನಿ ಹರಿದು ಬಂದಿದೆ. ನಾಟಕದ ಪ್ರಾರಂಭದಲ್ಲಿ ಶಶಿ-ನಿಶಿಯರ ಸಂಬಂಧದ ಬಗೆಗೆ ಮಲ್ಲಬ್ಬೆ ನೀಲಬ್ಬೆಯರ ಸಂಭಾಷಣೆ, ಬಾಳಿನ ಕಷ್ಟ ಸುಖಗಳ ಕತ್ತಲೆ ಬೆಳಕಿನಾಟವನ್ನು ನಿರೂಪಿಸುತ್ತದೆ.

* * * *

ಭಾರತಿಯವರು ಬಾಳ ಸಂಜೆಯಲ್ಲಿ ಬರೆದ ನಾಟಕ, "ವಾತ್ಸಲ್ಯ ತರಂಗಲೀಲಾ." ಬರವಣಿಗೆ ಸವಿಜೇನಿನ ಹೆಸರಿನಷ್ಟೇ ಸರಳ, ಸುಲಲಿತ. ಸುಮಧುರ ಕಾವ್ಯ!

ವಿಶ್ವಾಮಿತ್ರ ಮಹರ್ಷಿಯ ಉಗ್ರತಪದಿಂದ ತಮ್ಮ ಪದವಿಗೇ ಅಪಾಯವೆಂದರಿತ ದೇವೇಂದ್ರನಿಂದ, ಆತನ ತಪೋಭಂಗ ಮಾಡಲೆಂದು ಭುವಿಗೆ ಕಳಿಸಲ್ಪಟ್ಟ ಮೇನಕೆ—ಬಂದ ಕಾರ್ಯ ನೆರವೇರಿ, ಹೆಣ್ಣು ಶಿಶುವಿಗೆ ಜನ್ಮವಿತ್ತು, ಒಂದಿರುಗುವಾಗಿನ ಆಕೆಯ ತೊಳಲಾಟ; ತಾಯ್ಮಡಿಲಿನಿಂದ ಬೇರೆಯಾದ ಕೂಸು ಮಾಲಿನೀ ನದಿಯ, ಶಕುಂತ ಹಕ್ಕಿಗಳ, ಕಡೆಗೆ ಕಣ್ವರಾಶ್ರಮದ ವಾತ್ಸಲ್ಯ ತರಂಗದಲ್ಲಿ ತೇಲಿದ ಪರಿ-ಇವು ಈ ಅಪರೂಪ ನಾಟಕದ ಸೃಷ್ಟಿಯುದ್ದೇಶ.

ಇಲ್ಲಿ, ಮೇನಕೆಯ ಬಗೆಗೆ ಓದುಗರಿಗೆ ಅನುಕಂಪ ಮೂಡುತ್ತದೆ. ಬೆಲೆವೆಣ್ಣುಗಳ ಅಸಹಾಯಕತೆ ಮನಕರಗಿಸುತ್ತದೆ.

ಈ ನಾಟಕದಲ್ಲಿ ಪ್ರಕೃತಿದೇವಿಯ ವರ್ಣನೆ, ಭಾಷೆಯ ಮಧು, ಓದುಗರನ್ನು ಮುಗ್ಧಗೊಳಿಸುತ್ತದೆ. ತಾವರೆ ಎಲೆಯಲ್ಲಿ ಮಲಗಿಸಿದ್ದ ಮಗು ಮಾಲಿನೀ ನದಿಯ ರಕ್ಷಾಕವಚದಲ್ಲಿ ಸೇರಿದುದು, ಆಕೆ ಶಕುಂತ ಹಕ್ಕಿಗಳಿಗೆ ಸಂಜೆವರೆಗೆ ಶಿಶು ಸಂರಕ್ಷಣೆಯ ಆದೇಶವಿತ್ತುದು, ಅವು ತಮ್ಮ ಗರಿಗಳಿಂದ ಮಗುವಿಗೆ ನೆರಳು ನೀಡಿ ಜೇನಗೂಡ ಹನಿಯನ್ನು ಅದರ ಬಾಯಿಗೆ ತೊಟ್ಟಿಕ್ಕಿಸುವುದು—ಎಲ್ಲ ಎಂತಹ ಸವಿ ಬರಹ!

"ಅಳಬೇಡ ಕಂದಮ್ಮ ಹಸಿವಾಯ್ತೆ ನಿನಗೆ ?
ಈ ಜೇನ ಸವಿ ಕಂದ!........
ಹಸಿವಡಗಿತೇ ಕಂದ ?

ಆದಕೆ ನಗು ಬಂತೇನು ? ನಗು ಮುದ್ದು ಮರಿಯೆ.
ನಗೆ ಸೊಗಸು. ನಿನ್ನ ಅಳುವಿನ ದನಿಯು ಕೋಮಲ."

ಹಕ್ಕಿಗಳು ನಲ್ಮಾತಿನಲ್ಲಿ "ಪ್ರೀತಿಯೆಂಬುದು ಜೀವಕುಲಕೆಲ್ಲ ಸಮ" ಎನ್ನುವ ನೀತಿಯನ್ನೇ ಸಾರುತ್ತವೆ !

ಮಾಲಿನೀದೇವಿ ಶಿಶುವನ್ನು ಕಣ್ವರ ಕೈಗೊಪ್ಪಿಸಿದಾಗ ಅವರವನ್ನ ಸಂಭ್ರಮ ದಿಂದ ಶಿಷ್ಯರೊಂದಿಗೆ ಆಶ್ರಮಕ್ಕೆ ಕರೆತರುವರು.

"ಕಣ್ವ— ಶುಭ್ರ ಹಸ್ತದಲಿ ಸ್ಪರ್ಶಿಸಲು ಬೇಕು ತಿಳಿಯಿತೇ ?
ಗೌತಮಿ— ಹಸ್ತ ಶುದ್ಧಿಯೇ ಅಲ್ಲ ; ಮನಶುದ್ಧಿಯಿಂದಲೂ
ಸ್ಪರ್ಶಿಸಲು ತಕ್ಕುದು. ಕೈ ತೊಳೆದು ಬರುವೆ."

ಗೌತಮಿಯಾಡಿದ ಮಾತುಗಳಲ್ಲಿ ಎಂತಹ ನೀತಿ ಮುತ್ತು ಅಡಗಿದೆ ! ಮುಕ್ತಾಯಕ್ಕೆ,

"ಆ ಪರಮ ಚೈತನ್ಯ ಲೀಲಾ ವಿನೋದವಿದು,
ವಿಶ್ವವೆಲ್ಲ ತನ್ನ ಸಂಕಲ್ಪ ಬಲದಿಂದ
ಆಡಿಸುತ ಸರ್ವವನು ನಡೆಸುತಿಹುದು"

–ಎಂದು ಕಣ್ವರ ಬಾಯಲ್ಲಾಡಿಸಿರುವ ನುಡಿಗಳಿಂದ ಶ್ರೀಮತಿ ಭಾರತಿಯವರು ವಿಶ್ವ ವೇದಾಂತ ಸಾರವನ್ನೇ ಹಂಚಿದ್ದಾರೆ.

ಶ್ರೀಮತಿ "ಭಾರತಿ"ಯವರ ಕಾವ್ಯಗಂಗೆ 'ತಪಸ್ವಿನಿ'ಯಲ್ಲಿ ಪ್ರಶಾಂತ ಪ್ರವಾಹ ದಂತೆ ಹರಿದು, 'ಮಹಾಸತಿ'ಯಲ್ಲಿ ಧಬಧಬನೆ ಧುಮ್ಮಿಕ್ಕಿ, 'ವಾತ್ಸಲ್ಯ ತರಂಗ ಲೀಲೆ' ಯಲ್ಲಿ ತಿಳಿಗೊಳವಾಗಿ ನಿಂತಿದ್ದಾಳೆ ! ★

....ತಮ್ಮ ವತ್ಸಲಾ 'ತಪಸ್ವಿನಿ'ಯು ನಮ್ಮ ಗೃಹವನ್ನು ಪವಿತ್ರ ಮಾಡಿದ್ದಾಳೆ. ನನ್ನ ಪಕ್ಷಕ್ಕೆ ಅದು ಪರಸುಮಣಿಯಾಗಿದೆ. ತಮ್ಮ ಶತದಳವು ಹೊಸಯುಗದ ಹೂವಾಗಿವೆ. ಆದರ ಕಂಪು ಇತರ ಭಾಷೆ ಗಳಲ್ಲೂ ಹರಿಯುವುದರಲ್ಲಿ ಸಂದೇಹವಿಲ್ಲ. ನುಡಿಗಟ್ಟು – ಜೇನು ತೊಟ್ಟಾಗಿದೆ. ಭಾವಗಳಲ್ಲಿ ಜೀವ ತುಂಬಿದೆ.

—ಶ್ರೀ ಹೊಯಿಸಳ

(ತಾ|| ೧೩–೧೨–೧೯೩೦ ರಂದು ಶ್ರೀ ಹೊಯಿಸಳರು ಶ್ರೀ ತಿ.ತಾ. ಶರ್ಮರಿಗೆ ಬರೆದ ಪತ್ರದಿಂದ)

ಕೊನೆಗೂ ತಪಸ್ವಿನಿಯೇ ?

● ವಸಂತ ಕವಲೀ

ರವೀಂದ್ರನಾಥ ಠಾಕೂರರ ಲೇಖನವೊಂದು ಒಂದುಕಾಲಕ್ಕೆ ತುಂಬ ಪ್ರಸಿದ್ಧಿ ಪಡೆಯಿತು. "ಪ್ರಾಚೀನ ಸಾಹಿತ್ಯ" ಎಂಬ ಶೀರ್ಷಿಕೆಯೊಂದಿಗೆ ಅದು ದಿವಂಗತ ಟಿ.ಎಸ್. ವೆಂಕಣ್ಣಯ್ಯನವರ ಮೂಲಕ ಕನ್ನಡಕ್ಕಿಳಿಯಿತು. ಠಾಕೂರರು ಮೂವರು ಪ್ರಾಚೀನ ಸಂಸ್ಕೃತ ಕವಿಗಳ ಮೇಲೆ ಸ್ವಾರಸ್ಯಮಯವಾದ ಆರೋಪಗಳನ್ನು ಹೊರಿಸಿದ್ದಾರೆ. ಉಪೇಕ್ಷೆಯ ಆರೋಪ, ಪಕ್ಷಪಾತದ ಆರೋಪ. ಸೀತೆಯ ಬಗೆಗಿನ ಪಕ್ಷಪಾತದಿಂದಾಗಿ ವಾಲ್ಮೀಕಿ ಊರ್ಮಿಳೆಯನ್ನು ಉಪೇಕ್ಷಿಸಿರುವನಂತೆ. ಶಕುಂತಲೆಗೆ ವಿಶೇಷ ಪ್ರಾಮುಖ್ಯ ಕೊಡುವುದಕ್ಕಾಗಿ ಕಾಳಿದಾಸ ಅನಸೂಯೆ ಪ್ರಿಯಂವದೆಯರನ್ನು ಉಪೇಕ್ಷಿಸಿರುವನಂತೆ. ಕಾದಂಬರಿ ಮಹಾಶ್ವೇತೆಯರನ್ನು ಮುಂದೆ ತರುವುದಕ್ಕಾಗಿ ಪತ್ರಲೇಖೆಯನ್ನು ಹಿಂದುಳಿಸಿರುವನಂತೆ ಬಾಣ! ಠಾಕೂರರ ಈ ಆರೋಪಗಳಲ್ಲಿ ಸ್ವಾರಸ್ಯವಿದೆಯೆಂದು ಒಪ್ಪಬಹುದೇ ಹೊರತು ಹುರುಳಿದೆಯೆಂದು ನಾನೊಪ್ಪಲಾರೆ.

ಆದರೆ ಠಾಕೂರರು ಮಹಾಕವಿಗಳ ಮೇಲೆ ಮಹಾರೋಪಗಳನ್ನು ಹೊರಿಸಿರುವುದು ವಿನೋದಕ್ಕಾಗಿ ಇರಬಹುದೆಂದು ನಮ್ಮವರಾರೂ ಭಾವಿಸಿಲ್ಲ. ಆ ಅಪಚಾರವನ್ನು ಪರಿಹರಿಸಲು ಕನ್ನಡ ಸಾಹಿತಿಗಳೊಬ್ಬಿಬ್ಬರು ಪ್ರಯತ್ನಿಸಿದ್ದಾರೆ. ಕುವೆಂಪು ಅವರ ಮಹಾಕಾವ್ಯದಲ್ಲೊಂದು ಕಡೆಯಲ್ಲಿ ಆ ಪ್ರಯತ್ನವಿದೆ; ಇನ್ನೊಂದು, ಮಾತೋಶ್ರೀ ರಾಜಮ್ಮನವರ 'ತಪಸ್ವಿನಿ' ನಾಟಕದಲ್ಲಿ.

ಕಾವ್ಯದಲ್ಲಾಗಲಿ, ನಾಟಕದಲ್ಲಾಗಲಿ ಬರುವ ಪ್ರತಿಯೊಂದು ಪಾತ್ರವೂ ನಾಯಕನೋ ನಾಯಕಿಯೋ ಆಗಲು ಸಾಧ್ಯವಿಲ್ಲ. ಮುಖ್ಯ ಪಾತ್ರಗಳು, ಪೋಷಕ ಪಾತ್ರಗಳು, ಗೌಣ ಪಾತ್ರಗಳು ಎಂದಿರಲೇಬೇಕಾಗುತ್ತದೆ. "ಪ್ರತಿಜ್ಞಾಯೌಗಂಧರಾಯಣ" ನಾಟಕದಲ್ಲಿ ಮಂತ್ರಿ ಯೌಗಂಧರಾಯಣನ ಪ್ರತಿಜ್ಞೆ, ಕಾರ್ಯಸನ್ನಾಹ, ಯುದ್ಧ ಸಾಹಸಗಳೆಲ್ಲ ಉದಯನ ವಾಸವದತ್ತೆಯರಿಗಾಗಿ. ಆದರೂ ಆ ನಾಟಕದಲ್ಲಿ ಉದಯನ ವಾಸವದತ್ತೆಯರು ಗೌಣ ಪಾತ್ರಗಳು. "ಸ್ವಪ್ನವಾಸವದತ್ತ" ನಾಟಕದ

ಕತೆಯ ಪ್ರೇರಕ, ಚಾಲಕ ಶಕ್ತಿ ಯೌಗಂಧರಾಯಣನೇ ಆದರೂ ಆ ನಾಟಕದಲ್ಲಿ ಅವನು ಗೌಣ ಪಾತ್ರವಾಗಿ ಉದಯನ ವಾಸವದತ್ತೆಯರೇ ಪ್ರಮುಖ ಪಾತ್ರಧಾರಿಗಳು.

ಲಂಟಾನಾ ಪೊದೆಗಳ ಬೇಲಿಯ ಮಧ್ಯೆ ಗುಲಾಬಿ ಗಿಡಗಳ ಜೇಲಿಯನ್ನು ಹಾಕಿ ಅದರೊಳಗೆ ಚೆಂಡೆ ಹೂಗಿಡಗಳನ್ನು ಬೆಳೆಸುತ್ತಾರೆ– ಪಂಜಾಬಿನ ಸಿಮ್ಲಾ, ಊಥಿ ಯಾನಾ ಮುಂತಾದೆಡೆಗಳಲ್ಲಿ. ಹಾಗಾದರೇನಿಲ್ಲಿ ಮೊದಲು ಲಂಟಾನಾದ ಉಪೇಕ್ಷೆ ಯಾಗಿ ನಂತರ ಗುಲಾಬಿಯ ಉಪೇಕ್ಷೆಯಾಯಿತೇ ?

ಕಾವ್ಯ ನಾಟಕಗಳಲ್ಲಿ ಬರುವ ಪ್ರತಿಯೊಂದು ಪಾತ್ರಕ್ಕೂ ಮಹತಿಯನ್ನಿತ್ತು 'ಎಂದುರೋ ಮಹಾನುಭಾವುಲು' ಎಂಬುದೂ ಶಕ್ಯವಿಲ್ಲ. ಅಂತೆಯೇ ಸೀತೆ ನಾಯಕಿ ಯಾಗಿ ಊರ್ಮಿಳೆ ಗೌಣ ಪಾತ್ರವಾಗುಳಿಯುವುದೂ ಅನಿವಾರ್ಯ.

ಇನ್ನು ಊರ್ಮಿಳೆಗೆ ಸ್ವಲ್ಪ ಮಹತ್ವವಿತ್ತಿದ್ದರೂ ಅವಳೆದುರು ಸೀತೆ ಕಳಾಹೀನ ಳಾಗುತ್ತಿದ್ದಳೆಂಬ ಭಯಕ್ಕಾಗಿ ವಾಲ್ಮೀಕಿ ಅವಳನ್ನು ಉದ್ದೇಶಪೂರ್ವಕವಾಗಿಯೇ ಉಪೇಕ್ಷಿಸಿರುವನೆಂಬ ಠಾಕೂರರ ಆರೋಪ ವಿನೋದಪೂರ್ಣವಾಗಿದೆಯೆಂದು ಹೇಳದೆ ವಿಧಿಯಿಲ್ಲ. ಏಕೆಂದರೆ ಕಾವ್ಯನಾಟಕಗಳ ನಾಯಕಿಯಾಗುವ ಅಂತಸ್ಸತ್ತ್ವವೇ ಊರ್ಮಿಳೆಯ ಪಾತ್ರದಲ್ಲಿಲ್ಲ. ಅವಳ ಸ್ವಭಾವದಲ್ಲಿ ದೋಷಗಳಿಲ್ಲದಿರುವುದೇ ಅವಳ ದೋಷವಾಗಿದೆ. ಅರಿಸ್ಟಾಟಲನು ಹೇಳಿರುವ ದುರಂತ ದೋಷವಿರಲಿ (Tragic flaw) ಯಾವೊಂದು ಸಾಮಾನ್ಯ ದೋಷವೂ ಅವಳಲ್ಲಿ ಕಂಡುಬರುವುದಿಲ್ಲ. He is all fault who has no fault ಎಂಬ ಟೆನಿಸನ್ನನ ಉಕ್ತಿಯನ್ನವಳು ಸಮರ್ಥಿಸು ವಂತಿದೆ. ಸೀತೆಯಲ್ಲಿರುವ ದುಡುಕು ಅವಿಧೇಯತೆಗಳು ಅವಳಲ್ಲಿಲ್ಲ. ರಾಮನು ಕಾಡಿಗೆ ಹೊರಟುನಿಂತಾಗ ಸೀತೆ ತಾನೂ ಅವನೊಡನೆ ಹೊರಡಲಣಿಯಾಗುತ್ತಾಳೆ. ರಾಮ ಬೇಡವೆನ್ನುತ್ತಾನೆ. ಆಗವಳ ಮೊಂಡುತನವೇನು ? ರಾಮನಿಗೆ ನುಡಿದ ಬಿರು ನುಡಿಗಳೇನು ? ನಟುವನಂತೆ ತನ್ನ ಹೆಂಡತಿಯನ್ನು ಅನ್ಯರಿಗೊಪ್ಪಿಸಿ ಕಾಡಿಗೋಡು ತ್ತಿದ್ದಾನಂತೆ ರಾಮ! ಇವನೂ ಒಬ್ಬ ಗಂಡಸೇ ? ಪುರುಷ ರೂಪಿನ ಈ ಸ್ತ್ರೀವಿಗ್ರಹಕ್ಕೆ ತನ್ನನ್ನು ಮದುವೆ ಮಾಡಿಕೊಟ್ಟನಲ್ಲ ತನ್ನ ತಂದೆ ಜನಕರಾಜ! ಎಂದು ಬೇರೆ ಮೂದಲಿಸುತ್ತಾಳೆ. ಇನ್ನು ಕಾಡಿನಲ್ಲಿ ಚಿನ್ನದ ಜಿಂಕೆಯನ್ನು ಕಂಡು ಅದು ತನಗೆ ಬೇಕೇಬೇಕೆಂದ ಅವಳ ಮೊಂಡುತನ; ಮುಂದೆ ರಾಮನ ಧ್ವನಿಯನ್ನನುಕರಿಸಿ 'ಹಾ ಸೀತೆ! ಹಾ ಲಕ್ಷ್ಮಣ!' ಎಂದು ಮಾರೀಚ ಕೂಗಿದಾಗ ರಾಮನ ಸಹಾಯ ಕ್ಕೆಂದು ಲಕ್ಷ್ಮಣನನ್ನಟ್ಟುವಾಗ ಸೀತೆ ಲಕ್ಷ್ಮಣನಿಗಾಡಿದ ಕಠೋರ ನುಡಿಗಳು! ಇವಾವ ದೋಷಗಳೂ ಇಲ್ಲದ ಊರ್ಮಿಳೆಯನ್ನು ಕಾವ್ಯದ ನಾಯಕಿಯನ್ನಾಗಿಸುವುದು ಕಷ್ಟ. ಟೆನಿಸನ್‌ನ ಗ್ಯುನಿವಿಯರ್ ಪಾತ್ರ ನುಡಿದಿರುವಂತೆ ನೆಲಕ್ಕೆ ಸಮೀಪವಾಗಿರುವ ಸೂರ್ಯನಿಂದ–ಉದಯಾಸ್ತಮಾನ ಕಾಲದಲ್ಲಿ–ಬಣ್ಣದ ಬೆಳಕು ಬರುವುದೇ ಹೊರತು ನಡುನೆತ್ತಿಗೇರಿರುವ ಮಧ್ಯಾಹ್ನದ ಸೂರ್ಯನಿಂದಲ್ಲ. ಆಗ ಅವನು ನಿಜವಾಗಿ ಆತಪ-ಉರಿಯುತ್ತಾನೆ, ಉರಿಸುತ್ತಾನೆ.

ತಪ ಎಂಬ ಶಬ್ದಕ್ಕೆ ತಪಸ್ಸು ಮಾಡುವುದೆಂಬುದರ ಜೊತೆಗೆ ಉರಿಯುವುದು ಎಂಬರ್ಥವೂ ಇದೆ. ಊರ್ಮಿಳೆ ಹದಿನಾಲ್ಕು ವರುಷಗಳ ವಿರಹದುರಿಯಲ್ಲಿ ಬೇಯುತ್ತಾಳೆ ಮಾತ್ರ. ಲಕ್ಷ್ಮಣ ಅವಳನ್ನು ತನ್ನೊಂದಿಗೆ ಕಾಡಿಗೆ ಕರೆದೊಯ್ಯಲಿಲ್ಲ. ಅವಳ ತಲೆಯ ಮೇಲೆ ದುಃಖದ ಬೆಟ್ಟ ಕಡಿದುಕೊಂಡು ಬೀಳಲಿಲ್ಲ. ಆದರೆ ಸುಖ, ಮೃಗಜಲವಾಗಿ ಕೆಲ ಕಾಲ ಅವಳ ಕೈಗೆ ಸಿಗಲಿಲ್ಲ, ಅಷ್ಟೆ. ಅಷ್ಟು ಮಾತ್ರಕ್ಕೆ ಅವಳಿಗಾಗಿ ಠಾಕೂರರ ಹೃದಯವೇಕಷ್ಟು ಅನುಕಂಪೆಯಿಂದ ಮಿಡಿಯಬೇಕಾಗಿತ್ತೋ! ಸಾವಿರಾರು ವರ್ಷ ಬದುಕುತ್ತಿದ್ದ ಇಕ್ಷ್ವಾಕುವಂಶೀಯರ ಬಾಳಿನಲ್ಲಿ ಹದಿನಾಲ್ಕು ವರುಷದ ವಿರಹವೇನು ದೀರ್ಘವಾದುದೆ ?

ಅಂತೆಯೆ ರಾಜಮ್ಮನವರ ನಾಟಕದಲ್ಲಿ ಊರ್ಮಿಳೆ ತಪಸ್ವಿನಿಯಾಗಿದ್ದಾಳೆ. ಹದಿನಾಲ್ಕು ವರುಷಗಳ ವಿರಹದುರಿಯಲ್ಲಿ ಬೆಂದ ಅವಳ ಪತಿಪ್ರೇಮ ಪುಟಕ್ಕಿಟ್ಟ ಚಿನ್ನವಾಗಿದೆ. ಅವಳು ತಪೋನಿರತಳಾದ ತಪಸ್ವಿನಿ. ಅಲ್ಲದೆ ಅವಳು ದೀನೆ, ದುಃಖಿತೆ. ಸಂಸ್ಕೃತದಲ್ಲಿ ತಪಸ್ವಿನ್ ಎಂಬ ಶಬ್ದಕ್ಕೆ ದೀನ, ಬಡಪಾಯಿ, ನಿರ್ಭಾಗ್ಯ, ಪಾಪದವ (ಅಯ್ಯೋ ಪಾಪ ಎಂದು ಕರುಣೆಯಿಂದುದ್ಗರಿಸುವಂತೆ) ಎಂಬರ್ಥಗಳೂ ಇವೆ. ಭಾಸನ "ಮಧ್ಯಮ ವ್ಯಾಯೋಗ"ದಲ್ಲಿ ಹಿಡಿಂಬೆಗೆ ಆಹಾರವಾಗಲು ಸಿದ್ಧನಾದ ಹುಡುಗನ ಹೆಸರೇನೆಂದು ಘಟೋತ್ಕಚ ಕೇಳಿದಾಗ, '' **ತಪಸ್ವಿನೀ ಮಧ್ಯಮಃ** '' ಎಂದುತ್ತರ ಬರುತ್ತದೆ ಆತನಣ್ಣನಿಂದ. ಮುಂದೆ ತಾಯಿಯ ಅಪ್ಪಣೆಯಂತೆ ಈ ಮಧ್ಯಮನನ್ನು ಹಿಡಿದುಕೊಂಡಿದ್ದೇನೆಂದು ಘಟೋತ್ಕಚ ನುಡಿದಾಗ "ಗುರು ಶುಶ್ರೂಷುಃ ಖಲ್ವಯಂ ತಪಸ್ವೀ" ಎಂದು ಭೀಮ ಉದ್ಗರಿಸುತ್ತಾನೆ. ರಾಜಮ್ಮನವರ ಊರ್ಮಿಳೆ ಈ ಅರ್ಥದಲ್ಲಿಯೂ ತಪಸ್ವಿನಿ. ಹದಿನಾಲ್ಕು ವರ್ಷಗಳ ತಪಸ್ಸಿನಿಂದ ಅವಳ ಮನಸ್ಸು ಹೃದಯಗಳು ಹದಗೊಂಡಿವೆ. ನಿಗ್ರಹಕ್ಕೊಳಪಟ್ಟಿವೆ. ಅಂತೆಯೆ ವನವಾಸದಿಂದ ಮರಳಿ ಬಂದ ಪತಿಯನ್ನು ಕಂಡಾಗ ಅವಳು ಉದ್ವೇಗಗೊಂಡು ಅವನ ತೋಳ್ಸೆರೆಯಾಗಲು ಧಾವಿಸದೆ ನಿಗ್ರಹದಿಂದಲೆ ವರ್ತಿಸುತ್ತಾಳೆ. ತನ್ನ ಉತ್ಕಂಠೆಯನ್ನೆಲ್ಲ ಅದುಮಿ ಸೀತೆಯ ಪ್ರೇಮವನ್ನು ವಿಚಾರಿಸುತ್ತಾಳೆ. ಅದಕ್ಕುತ್ತರವಾಗಿ ಲಕ್ಷ್ಮಣ ಸೀತಾಪಹರಣದ ಕತೆಯನ್ನೂ, ರಾಮರಾವಣ ಯುದ್ಧದ ಕತೆಯನ್ನೂ ಹೇಳಬೇಕಾಗುತ್ತದೆ. ಕೊನೆಗೂ ನಾಟಕದ ನಾಯಕಿಯಾಗಲು ಹೊರಟ ಊರ್ಮಿಳೆ ಸೀತೆಯ ಕತೆ ಕೇಳುತ್ತ ತಲೆದೂಗುತ್ತ ಮಧ್ಯೆ ಮಧ್ಯೆ ಕುತೂಹಲದಿಂದ ಪ್ರಶ್ನೆಗಳನ್ನು ಕೇಳುತ್ತ ಲಕ್ಷ್ಮಣನ ಉದ್ಬುದ್ಧ ನಿರೂಪಣೆಗಳ ಏಕತಾನತೆಯನ್ನು ಕಡಿಮೆ ಮಾಡಿ ಕತೆಯ ಮುಂದುವರಿಯುವಿಕೆಗೆ ಸಹಾಯಕಳಾದ ಗೌಣ ಪಾತ್ರವಾಗುತ್ತಾಳೆ; ಕೊನೆಗೂ ಊರ್ಮಿಳಾ, ಲಕ್ಷ್ಮಣರು ಸೂತ್ರಧಾರ-ನಟ, ಇಲ್ಲವೆ ಭಾಗವತ ಮೇಳದವರಾಗಿ ಉಳಿದು ಅಪ್ರತ್ಯಕ್ಷವಾಗಿ ರಾಮಸೀತೆಯರೇ ನಾಯಕ ನಾಯಕಿಯರಾಗಿ ಬಿಡುತ್ತಾರೆ! ಮಾತ್ರೋ ಶ್ರೀ ರಾಜಮ್ಮನವರ ನಾಟಕದಿಂದಾಗಿ ವಾಲ್ಮೀಕಿಯ ಮೇಲೆ ಠಾಕೂರರು ಹೊರಿಸಿರುವ ಆರೋಪ ಮಿಥ್ಯಾರೋಪವೆಂಬುದು ಸುಸ್ಪಷ್ಟವಾಗುತ್ತದೆ, ಸಿದ್ಧವಾಗುತ್ತದೆ. ★

ಸಂಗೀತ ಪ್ರಜ್ಞೆ

● ಎಲ್. ಜಿ. ಸುಮಿತ್ರ

ದೇಶ ಸ್ವಾತಂತ್ರ್ಯಗಳಿಸುವುದಕ್ಕೂ ಮುಂಚೆಯೇ ಸಿಡಿಲಿನಂತಹ ವಾಗ್ಝರಿಯಿಂದ ಕರ್ನಾಟಕದಲ್ಲೇ ಹೆಸರಾದ ಶ್ರೀ ತಿ.ತಾ. ಶರ್ಮರ ಪತ್ನಿ, "ತಪಸ್ವಿನಿ"ಯಂತಹ ಕೃತಿ ರಚನೆ ಮಾಡಿದ ಕವಯಿತ್ರಿ, ವೀಣೆ ಶೇಷಣ್ಣನವರ ಶಿಷ್ಯೆ ಎಂದು ಪರಿಚಿತವಾಗಿರುವ ವಿದುಷಿ ಶ್ರೀಮತಿ ತಿರುಮಲೆ ರಾಜಮ್ಮ. ಆಕೆಯನ್ನು ನೋಡಿದೊಡನೆಯೇ ವೀಣೆಯ ನಯ, ನವುರನ್ನು ಮೈಗೂಡಿಸಿಕೊಂಡ ಈಕೆತಾನೆ 'ತಪಸ್ವಿನಿ'ಯನ್ನು ಬರೆಯಬೇಕಾದವರು? ಎಂದು ಅನಿಸದೆ ಇರುವುದಿಲ್ಲ. ಅಂತಹ ಸೌಮ್ಯ ಮುಖಭಾವ. ಈ ಸೌಮ್ಯತೆ, ನಯ, ವಿನಯಗಳು ಅಪೂರ್ವವಾದ ಅವರ ದಿಟ್ಟ ವ್ಯಕ್ತಿತ್ವಕ್ಕೆ ಒಂದು ಮೆರಗು ಅಷ್ಟೆ. ಸಂಗೀತವೆ? ಸಾಹಿತ್ಯವೆ? ಯಾವುದರಲ್ಲೂ ನಿಷ್ಪಷ್ಟವಾದ ಅಭಿಪ್ರಾಯ. ಅದನ್ನು ಖಚಿತವಾಗಿ, ಆದರೆ ನಯವಾಗಿ ಪ್ರತಿಪಾದಿಸುವ ಸಾಮರ್ಥ್ಯ ಇರುವ ತಿರುಮಲೆ ರಾಜಮ್ಮನವರು ಒಂಭತ್ತರ ಗಡಿಯಲ್ಲಿರುವ ಹಿರಿಯರಾದರೂ, ಯಾವ ಆಧುನಿಕ ಹೆಂಗಸಿಗೂ ತಿಳಿವಳಿಕೆಯಲ್ಲಿ ಮಾರ್ಗದರ್ಶಕರಾಗಬಲ್ಲ ಮನೋಭಾವದ ವ್ಯಕ್ತಿ.

ನಾನು ಇಪ್ಪತ್ತು ವರ್ಷಗಳ ಹಿಂದೆ ಕಾಲೇಜಿನಲ್ಲಿ ವಿದ್ಯಾರ್ಥಿನಿಯಾಗಿದ್ದಾಗ ಒಮ್ಮೆ ಅವರನ್ನು ವಿಶ್ವೇಶ್ವರಪುರದಲ್ಲಿ, ಅವರು ನಡೆಸುತ್ತಿದ್ದ ಸಂಗೀತ ಶಾಲೆಯಲ್ಲಿ ನೋಡಿದ್ದೆ. ಸಣ್ಣ ನಡುಮನೆಯ ತುಂಬ ವೀಣೆ ತಂಬೂರಿಗಳು. ಇಷ್ಟೊಂದು ವಾದ್ಯಗಳನ್ನು ಇಟ್ಟುಕೊಂಡಿದ್ದಾರಲ್ಲ ಎಂದು ಆಶ್ಚರ್ಯವಾಯಿತು. ಅನೇಕ ಸಂದರ್ಭಗಳಲ್ಲಿ ಸಂಗೀತವನ್ನು ಕುರಿತು ಅವರು ಆಡಿದ ಹಲವು ಮಾತುಗಳನ್ನು ಕೇಳಿದಾಗ ತಾವು ಚಿಕ್ಕವರಾಗಿದ್ದಾಗಿನ ಸಂಗೀತಕ್ಕೆ ಈಗಿನ ಸಂಗೀತವನ್ನು ಹೋಲಿಸಿ ರಾಜಮ್ಮನವರ ಮನಸ್ಸಿನಲ್ಲಿ ವಿಚಾರ ಮಂಥನ ನಡೆಯುತ್ತಲೆ ಇರುತ್ತದೆ ಎಂದೂ ಅನಿಸಿದ್ದುಂಟು.

"ನನ್ನ ಹತ್ತಿರ ಬಹಳ ಕಾಲ ಪಾಠ ಹೇಳಿಸಿಕೊಂಡವರಿಲ್ಲ. ನೂರಾರು ಜನ ಕಲಿತಿದ್ದಾರೆ, ಸ್ಥಿರವಾಗಿ ನಿಂತವರಿಲ್ಲ. ಎಂದರೆ ಅನೇಕ ಹೆಣ್ಣು ಮಕ್ಕಳು ನನ್ನ ಬಳಿ ಸಂಗೀತ ಕಲಿತಿದ್ದಾರೆ. ಒಂದೋ, ಎರಡೋ ವರ್ಷಗಳು ಪಾಠ ಆದವರೂ ಅನೇಕರು. ನಂತರ ಮದುವೆ ಮಾಡಿಕೊಂಡು ಹೋದವರೇ ಎಲ್ಲ" ಎನ್ನುತ್ತಾರೆ ರಾಜಮ್ಮ.

ಜೀವನದಲ್ಲಿ ಸಂಗೀತಕ್ಕೆ ಮುಖ್ಯ ಸ್ಥಾನ ಕೊಟ್ಟು ತಾವು ಹೇಳಿಕೊಟ್ಟ ವಿದ್ಯೆಯನ್ನು ಮುಂದುವರಿಸಿಕೊಂಡಿರುವ ಶಿಷ್ಯೆಯರಿಲ್ಲವಲ್ಲ ಎಂಬ ನೋವು ಅವರ ಮಾತಿನಲ್ಲಿ ಧ್ವನಿಸುತ್ತದೆ. ಆದರೆ ಅವರು ಹೀಗಾಯಿತಲ್ಲ ಎಂದು ಯಾರನ್ನೂ ದೂಷಿಸಿದವರಲ್ಲ. ಇವರ ಬಳಿ ಕಲಿತ ಹಲವು ತಾಯಂದಿರಿದ್ದಾರಲ್ಲ, ಆ ಮನೆಗಳಲ್ಲೆಲ್ಲ ಉತ್ತಮ ಸಂಗೀತ, ಸಂಸ್ಕೃತಿಯ ಅರಿವಾದರೂ ಬೆಳಗಿರದೆ ಇರುವುದಿಲ್ಲ ಎನಿಸಿತು ನನಗೆ.

ರಾಜಮ್ಮನವರು ಶೇಷಣ್ಣನವರ ಶಿಷ್ಯೆ ಎಂದು ಕೇಳಿ ಗೊತ್ತಿತ್ತು. ಒಮ್ಮೆ ಯಾರೋ ಒಬ್ಬ ಹೆಣ್ಣುಮಗಳು ಒಳ್ಳೆಯ ಸಂಪ್ರದಾಯದಲ್ಲಿ ನುರಿತ ಹೆಂಗಸರ ಬಳಿ ವೀಣೆ ಕಲಿಯಬೇಕೆಂದು ಬಯಸಿ, ಅಂತಹ ಗುರುವನ್ನು ಸೂಚಿಸಿ ಎಂದು ಶ್ರೀ ದೊರೆಸ್ವಾಮಿ ಅಯ್ಯಂಗಾರ್ಯರನ್ನು ಕೇಳಿದರು. ಅವರು ಶ್ರೀಮತಿ ತಿರುಮಲೆ ರಾಜಮ್ಮನವರ ಹೆಸರನ್ನು ಥಟ್ಟನೆ ಸೂಚಿಸಿದರು. "ಶೇಷಣ್ಣನವರ ಪರಂಪರೆಯಲ್ಲಿ ಸಂಗೀತವನ್ನು ಪಾಠ ಮಾಡಿಕೊಂಡವರಾದ ರಾಜಮ್ಮ ಅವರು ಹೇಳಿಕೊಡಲು ಒಪ್ಪಿದರೆ ಶಿಷ್ಯರ ಅದೃಷ್ಟ" ಎಂದರು. ತಮ್ಮ ಗುರುಗಳನ್ನು ಕುರಿತು ಪುಸ್ತಕವನ್ನೂ ಬರೆದಿದ್ದಾರೆ ರಾಜಮ್ಮನವರು.

ಆದರೂ ರಾಜಮ್ಮನವರ ಬಾಯಲ್ಲೇ ಅವರ ಗುರುಪರಂಪರೆಯನ್ನು ತಿಳಿಯಬೇಕೆಂಬ ಕುತೂಹಲದಿಂದ ಕೇಳಿದೆ.

"ಶೇಷಣ್ಣನವರು ಕೊನೆಯಲ್ಲಿ ಪಾಠ ಹೇಳಿದವರು. ಆಕಾಶವಾಣಿಯಲ್ಲಿ ವಿದ್ವಾಂಸರಾಗಿದ್ದಾರಲ್ಲ ವೆಂಕಟಸುಬ್ಬರಾಯರು, ಅವರ ತಂದೆ ವೆಂಕಟಕೃಷ್ಣಯ್ಯನವರು, ಬೆಂಗಳೂರಿನ ವೀಣೆ ಗೋಪಾಲರಾಯರು ಇವರುಗಳಲ್ಲಿ ಮೊದಲು ಪಾಠ. ಒಂದು ಸಂದರ್ಭದಲ್ಲಿ ನಾನು ನುಡಿಸುವುದನ್ನು ಒಪ್ಪಿಕೊಂಡ ತಾಯಪ್ಪನವರು ತಾವಾಗಿ ಇಷ್ಟಪಟ್ಟು ವಾತ್ಸಲ್ಯದಿಂದ ಪಾಠ ಹೇಳಿದರು. ಶೇಷಣ್ಣನವರು ಗುರುವಾಗಿ ಸಿಕ್ಕಲು ಒದಗಿದ ಸಂದರ್ಭವನ್ನು ವಿವರವಾಗಿಯೇ ಬರೆದಿದ್ದೇನೆ" ಎಂದರು ರಾಜಮ್ಮ.

ಇಷ್ಟೆಲ್ಲ ಪರಂಪರೆಯ ಬಲ, ಸ್ವಯಾರ್ಜಿತ ಕೀರ್ತಿ ಇದ್ದರೂ ರಾಜಮ್ಮನವರು ನಿಗರ್ವಿ. "ನಾನೇನೂ ಪ್ರಯೋಗಗಳನ್ನು ನಡೆಸಿಲ್ಲ. ಸಂಶೋಧನೆ ಮಾಡಿಲ್ಲ. ಶಾಸ್ತ್ರಾಭ್ಯಾಸ ಮಾಡಿಲ್ಲ. ನನ್ನ ಗುರುಗಳೆಲ್ಲ ನನ್ನ ಮೇಲೆ ಬಹಳ ವಾತ್ಸಲ್ಯ ತೋರಿಸಿ ನಿರ್ವಂಚನೆಯಿಂದ ಪಾಠ ಹೇಳಿದ್ದಾರೆ. ಅವರ ಔದಾರ್ಯ ಅಂತಹುದು. ಅದು ನನಗೆ ಅನುಗ್ರಹವಾಯಿತು." ಎಂದು ಕೃತಜ್ಞತೆಯನ್ನು ಸೂಚಿಸುತ್ತಾರೆ.

"ಹೆಜ್ಜೆ ಹೆಜ್ಜೆಗೂ ಹೋರಾಟದ ಜೀವನದಲ್ಲಿ ಕೂತು ಅಭ್ಯಾಸ ನಡೆಸುವುದಕ್ಕಾದೀತೇ ?" ಎನ್ನುತ್ತಾರೆ.

ಇಂತಹ ಗಂಭೀರ ಪರಂಪರೆಯಲ್ಲಿ ಸಂಗೀತವನ್ನು ಮೈಗೂಡಿಸಿಕೊಂಡ ರಾಜಮ್ಮ ಸ್ವತಃ ರಾಷ್ಟ್ರಗೀತೆಗಳನ್ನೂ, ಭಾವಗೀತೆಗಳನ್ನೂ ರಚಿಸಿದ್ದಾರೆ.

"ರಾಷ್ಟ್ರೀಯ ಆಂದೋಳನ ಪ್ರಾರಂಭವಾದಾಗಿನಿಂದ ರಾಷ್ಟ್ರ ಗೀತೆಗಳನ್ನು ರಚಿಸಿದ್ದೇನೆ. ಪುಸ್ತಕ ರೂಪದಲ್ಲಿ ಹೊರತಂದಿಲ್ಲ. ಹಿಂದೆ ರಾಜಕೀಯ ಭಯದಿಂದ ಈ ಹಾಡುಗಳನ್ನು ಹಾಡಿದರೆ ಜೈಲಿಗೆ ಹೋಗಬೇಕಾದೀತು ಎಂದು ಯಾರೂ ಹಾಡಲಿಲ್ಲ. ಪತ್ರಿಕೆಗಳು ಪ್ರಕಟಿಸಲಿಲ್ಲ" ಎಂದರು ರಾಜಮ್ಮನವರು.

"ನೂರಾರು ಹಾಡುಗಳನ್ನು ರಚಿಸಿದೆ. ಈಗ ಒಂದು ಐವತ್ತೂ ಕೈಗೆ ಸಿಕ್ಕುವುದಿಲ್ಲ. ಈಗ ಪುಸ್ತಕ ಮಾಡುವ ಹಂಬಲವಿದೆ." ಎಂದ ರಾಜಮ್ಮ "ಈ ಹಾಡುಗಳನ್ನು ಈಗ ಯಾರು ಹಾಡಿ ಅಭ್ಯಾಸ ಮಾಡುತ್ತಾರೆ" ಎಂಬ ಸಂಶಯವನ್ನು ವ್ಯಕ್ತಪಡಿಸಿದರು.

"ಮಟ್ಟು" ಇಲ್ಲದೆ ಕೀರ್ತನೆ ರಚನೆ ಮಾಡಿಯೇ ಇಲ್ಲ. ನಾನು ಸಂಗೀತಕ್ಕೆ ಸಾಹಿತ್ಯಕ್ಕೆ ಸಮಾನ ಬಾಧ್ಯತೆ ಇರುವ ಹಾಗೆ ಕೃತಿ ರಚನೆ ಮಾಡಿದ್ದೇನೆ. ಸಂಗೀತ ಸಾಹಿತ್ಯ ಒಂದಕ್ಕೊಂದು ಸೋತು ಬರುವ ಹಾಗಾಗಕೂಡದು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಕೃತಿ ರಚನೆ ಮಾಡಿದ್ದೇನೆ. ಸಾಮಾನ್ಯ ರೀತಿಯಲ್ಲಿ ಮನಸ್ಸಂತೋಷಪಡುವುದಕ್ಕೆ ಆಗುವಂತಿರಬೇಕು" ಎನ್ನುತ್ತಾರೆ ರಾಜಮ್ಮನವರು.

ಹಿಂದಿನ ಕಾಲದ ಸಂಗೀತ, ಇಂದಿನ ಸಂಗೀತ, ಹಾಡಿಕೆ ರೀತಿ ಪಾಠಕ್ರಮ ಇವುಗಳನ್ನು ಕುರಿತು ಕೆಲವು ಮಾತುಗಳನ್ನು ಹೇಳಿ ಎಂದು ಕೇಳಿದೆ.

"ಈಗ ಸಂಗೀತ ಬಹಳ ವ್ಯಾಪಕವಾಗಿದೆ. ಆಗ ಹೆಂಗಸರಂತೂ ಅಷ್ಟಾಗಿ ಕಲಿಯುತ್ತಿರಲಿಲ್ಲ. ವೇತನ ತೊಗೊಳ್ಳೋ ಗುರುಗಳು ಇರಲೇ ಇಲ್ಲ. ನಾವೇ ಗುರುಗಳ ಮನೆಗೆ ಹೋಗಿ ಕಲಿಯಬೇಕಾಗಿತ್ತು. ಒಂದು ವಿಧದಲ್ಲಿ ಗುರುಕುಲ ಪದ್ಧತಿ ಉಳಿದಿತ್ತು. ಇವರಿಗೆ ಮನೋಧರ್ಮ ಇದೆ; ಸಂಗೀತ ಬರುತ್ತೆ ಎಂಬ ನಂಬಿಕೆ ಬಂದರೆ ಮಾತ್ರ ಪಾಠ ಹೇಳುತ್ತಿದ್ದರು ಗುರುಗಳು.... ಈಗ ಸಂತೆ ಸರಕಾಗಿದೆ ಸಂಗೀತ. ಕಲಿಯುವ ಮೊದಲೇ ಪ್ರದರ್ಶಿಸುವ ಹಂಬಲ. ಇಂತಹ ಪ್ರದರ್ಶನಕ್ಕೆ ಆಗ ಅವಕಾಶವಿರಲಿಲ್ಲ. ಶಿಷ್ಯ ಒಂದು ಮಟ್ಟ ಮುಟ್ಟುವವರೆಗೂ ಅವನು ತನ್ನ ವಿದ್ವತ್ತನ್ನು ಪ್ರದರ್ಶಿಸುವುದಕ್ಕೆ ಗುರುಗಳು ಅವಕಾಶಕೊಡುತ್ತಿರಲಿಲ್ಲ. 'ಪರವಾಗಿಲ್ಲ' ಅನ್ನುವ ಸ್ಥಿತಿ ಸಾಧಿಸಿದಾಗ ಅವನನ್ನು ಹಿಮ್ಮೇಳಕ್ಕೆ ಹಾಕಿಕೊಳ್ಳುತ್ತಿದ್ದರು. ಸ್ವತಂತ್ರವಾಗಿ ಹಾಡಬೇಕಾದರೆ ಗುರುವಿನ ಅನುಜ್ಞೆ ಬೇಕಾಗುತ್ತಿತು. ಗುರುಗಳಲ್ಲಿ ಪೂಜ್ಯ ಭಾವ ಇತ್ತು. ಈಗ ಗುರುಗಳೇ ಶಿಷ್ಯರನ್ನು ಆಶ್ರಯಿಸಬೇಕು" ಎಂದು ಸಿಟ್ಟಿಸಿಟ್ಟರು.

"ಈ ಕೀರ್ತನೆ ಹೇಳಿ ಕೊಡಿ ಅಂತ ಗುರುಗಳನ್ನು ಕೇಳ್ತಿದ್ದೆವೇನಮ್ಮ ? ಈಗ ಅವರು ಕೇಳಿದ್ದನ್ನು ಹೇಳಿಕೊಡಬೇಕು. ನಮಗೆಲ್ಲ ಹದಿನಾರು ಗೀತೆ, ಇಪ್ಪತ್ತು ವರ್ಣ ಪಾಠವಾಗದೆ ಕೀರ್ತನೆ ಹೇಳಿಕೊಡಲಿಲ್ಲ. ಈಗ ಕಚೇರಿಯಲ್ಲಿ ಹಾಡುವುದು

ಒಂದು ವರ್ಣ ತಾನೆ? ಆದ್ದರಿಂದ ಒಂದು ವರ್ಣ ಹೇಳಿಕೊಡಿ ಸಾಕು" ಎಂದು ಅಪೇಕ್ಷಿಸುತ್ತಾರೆ ಶಿಷ್ಯರು,

"ಆಗ ರಾಗಾಲಾಪನೆಯನ್ನು ಪಾಠ ಮಾಡಿಸುತ್ತಿರಲಿಲ್ಲ. ಸ್ವಯಂ ಕಲ್ಪನಾಶಕ್ತಿಯಿಂದ ಹಾಡಬೇಕು. ಮಾರ್ಗ ತೋರಿಸುತ್ತಿದ್ದರಷ್ಟೆ. ಅರ್ಧ ಘಂಟೆ ಹತ್ತು ನಿಮಿಷದ ಪಾಠ ಇತ್ತೆ ಆಗ? ಶೇಷಣ್ಣನವರು ಎರಡು ಘಂಟೆ ಪಾಠ ಹೇಳುತ್ತಿದ್ದರು. ಕಲಿತದ್ದಕ್ಕಿಂತ ಹತ್ತರಷ್ಟು ಸಂಗೀತ ಕೇಳಬೇಕು ಎನ್ನುವುದು ಆಗಿನ ಪದ್ಧತಿ. ದೊಡ್ಡ ದೊಡ್ಡ ವಿದ್ವಾಂಸರುಗಳಿದ್ದರು. ಅವರು ಹಾಡುವುವನ್ನು ಕೇಳುವುದೇ ಒಂದು ಪಾಠ.

"ಆದರೆ ಈಗ ಆ ಸಂಗೀತ ಕೇಳುವುದೇ ಅಪರೂಪ. ಹೀಗಿದೆ ಪರಿಸ್ಥಿತಿ. ಈಗಲೂ ಸಂಗೀತ ಕೇಳುವುವಕ್ಕೆ ಬೇಕಾದಷ್ಟು ಅವಕಾಶವಿದೆ. ಆದರೆ ಪಕ್ವವಾದ ಹಾಡಿಕೆಗಳೇ ಅಪರೂಪ. ಪ್ರತಿಭೆಯಿದೆ. ಆದರೆ ಅದು ಅನುಭವಪೂರ್ವಕವಾಗಿ ಹದಕ್ಕೆ ಬರುವುದಕ್ಕೆ ಮುಂಚೆಯೇ ಪ್ರದರ್ಶನ ಪ್ರಾರಂಭವಾಗುವುದರಿಂದ ಈ ಪರಿಸ್ಥಿತಿ ಏರ್ಪಟ್ಟಿದೆ."

ನೆನಪುಗಳು ಮಾಲೆಮಾಲೆಯಾಗಿ ಮುತ್ತುತ್ತಿದ್ದವು ಅವರನ್ನು. ಅದೇ ಗುಂಗಿನಲ್ಲಿ ಮುಂದುವರಿಸಿದರು. "ನಾಳೆ ಕಚೇರಿಗೆ ಇವತ್ತು ಅಭ್ಯಾಸ ಮಾಡಿಕೊಂಡು ಹಾಡುವ ಆವಶ್ಯಕತೆ ಇತ್ತೆ ಆ ಕಾಲದಲ್ಲಿ? ಸ್ಫೂರ್ತಿಗೆ ಕಾಲದ ಮಿತಿಯನ್ನು ಹೇರಿಸುವುದು ಸಾಧ್ಯವಿರಲಿಲ್ಲ. ಗುರು ಶೇಷಣ್ಣನವರು ಒಂದೇ ರಾಗವನ್ನು - ರಾಗ-ತಾನ-ಪಲ್ಲವಿಯಾಗಿ ನುಡಿಸಿದ್ದುಂಟು.

"ಸಂಗೀತವನ್ನು ಎಷ್ಟೇ ಚೆನ್ನಾಗಿ ಸ್ವಾಧೀನಪಡಿಸಿಕೊಂಡವರಿಗೂ ಒಮ್ಮೊಮ್ಮೆ ಸ್ಫೂರ್ತಿ ಬರುತ್ತಿರಲಿಲ್ಲ."

ಹಳೆಯದನ್ನೆಲ್ಲ ಹೊಗಳಿ ಹೊಸದನ್ನು ತೆಗಳುವ ಮನೋಭಾವದವರಲ್ಲ ರಾಜಮ್ಮನವರು. "ಈಗ ಸಂಶೋಧನೆ ಹೆಚ್ಚಾಗಿದೆ, ವ್ಯಾಪಕವಾಗಿದೆ" ಎಂದು ಮೆಚ್ಚಿ ನುಡಿಯುತ್ತಾರೆ. "ಹಿಂದಿನ ಕಾಲದ ಆ ಮಟ್ಟದಲ್ಲಿ ಸಂಗೀತವನ್ನು ಸ್ವಾಧೀನ ಮಾಡಿಕೊಂಡವರು ಕಮ್ಮಿ" ಎಂದು ಕೊರಗಿದರು.

"ಆ ಕಾಲದಲ್ಲಿ ಹರಿಕಥೆಗಳು ಜಾಸ್ತಿ. ಅನೇಕ ದಾಸರು ಬೀದಿಯಲ್ಲಿ ಮಧುಕರ ವೃತ್ತಿಗೆ ಬರುತ್ತಾ ಹಾಡಿಕೊಂಡು ಬರುವರು. ಈ ಕಾಲದ ತಹವೇ ಬೇರೆ. ಪ್ರತಿಯೊಬ್ಬರಿಗೂ ಸುಗಮ ಸಂಗೀತ ಬೇಕು. ಶಾಸ್ತ್ರೀಯವಾಗಿರೋದನ್ನ ಹಾಡುವವರು ಕಮ್ಮಿ."

ಮಾತು ದಾಸರ ಪದಗಳಿಗೆ ಹೊರಳಿತು. "ಪುರಂದರ ದಾಸರ ಕೃತಿಗಳಲ್ಲಿ ಸಾಹಿತ್ಯ ಪ್ರಧಾನ. ಲೋಕ ಸುಧಾರಣೆ ಮುಖ್ಯ. ಸಂಗೀತಕ್ಕಾಗಿಯೇ ಪ್ರಯತ್ನಪಟ್ಟವರಲ್ಲ ಅವರು. ಆದರೂ ಅವರ ಎಲ್ಲ ಕೃತಿಗಳು ಸಂಗೀತಕ್ಕೆ ಅನುಕೂಲವಾಗಿದೆ. ಪುರಂದರ ದಾಸರು ಸಂಸ್ಕೃತಲ್ಲೂ ರಚಿಸಿದ್ದಾರೆ. ಅವೂ ಸಂಗೀತಕ್ಕೆ ಅನುಕೂಲವಾಗಿದೆ."

"ದಾಸರ ಕೃತಿಗಳನ್ನು ಒಬ್ಬೊಬ್ಬರು ಒಂದೊಂದು ಮಟ್ಟಿನಲ್ಲಿ ಹಾಡುತ್ತಾರಲ್ಲ. ಬೇರೆ ಮಾರ್ಗ ಇಲ್ಲವೆ?" ಎಂದು ಪ್ರಶ್ನಿಸಿದೆ.

"ಪುರಂದರದಾಸರು ಹೆಚ್ಚು ರಾಗಗಳನ್ನು ಬಳಸಿಲ್ಲ. ರಾಗಗಳಿಗಾಗಿಯೇ ಕೀರ್ತನೆಗಳನ್ನು ಮಾಡಿದವರು ತ್ಯಾಗರಾಜರು. ದಾಸರಿಗೆ ಸಾಹಿತ್ಯ ಮುಖ್ಯ. ರಾಗಗಳನ್ನು ನಿರ್ಬಂಧ ಮಾಡುವುದು ಸಾಧ್ಯವಿಲ್ಲ. ಹೊಸ ರಾಗಗಳನ್ನು ಏಕೆ ಹಾಕಬಾರದು ಎಂದು ಅನೇಕರು ಹೇಳುತ್ತಾರೆ. ಅವರವರ ಇಷ್ಟ. ಸಂಗೀತಕ್ಕೆ ಮೂಲ ಕೊಟ್ಟ ಜಯದೇವನ 'ಅಷ್ಟಪದಿ'ಗಳಿಗೇ ಸೂಕ್ತ ರಾಗಗಳು ಸಿಕ್ಕಿಲ್ಲ. ಅವರೂ ಹಳೆಯ ರಾಗಗಳನ್ನು ಉಳಿಸಬೇಕೆಂಬ ಅಭಿಮಾನ ಇದ್ದರೆ ಈ ಕೃತಿಗಳನ್ನು ಹಾಡುತ್ತಿರುವವರ ಬಳಿ ಸಂಗ್ರಹ ಮಾಡಬೇಕು. ಹಳೆಯ ಕಾಲದವರನ್ನು ಹುಡುಕಬೇಕು, ರೆಕಾರ್ಡು ಮಾಡಿಕೊಳ್ಳಬೇಕು. ಆಗ ಪ್ರಚಾರದಲ್ಲಿದ್ದ ರಾಗಗಳನ್ನು ಉಪಯೋಗಿಸಿ ಅವರ ಕೃತಿಗಳ ರಾಗಗಳ ಪರಿಶೀಲನೆಯಿಂದ ಕೆಲವು ಪ್ರಾಚೀನ ರಾಗಗಳಿಗೆ ಒಂದು ಸ್ವರೂಪ ಸಿಕ್ಕುತ್ತೆ. ಉದಾಹರಣೆಗೆ ಯದುಕುಲ ಕಾಂಭೋಜಿ, ಕಾಂಭೋಜಿ ಕೇದಾರಗೌಳ, ಆನಂದ ಭೈರವಿ, ದರ್ಬಾರು, ನಾದನಾಮಕ್ರಿಯ, ಸಾವೇರಿ ಇತ್ಯಾದಿ."

"ಸಂಗೀತದಲ್ಲಿ ಮೈಸೂರು ಪದ್ಧತಿ ಎನ್ನುವುದೊಂದಿಯೆ ?"

"ಇದೆ. ನಾಟ್ಯ, ಸಂಗೀತ ಎರಡರಲ್ಲೂ ಮೈಸೂರು ಪದ್ಧತಿ ಇದೆ. ವೀಣೆಯಲ್ಲಂತೂ ಮೈಸೂರು ಪದ್ಧತಿಗೆ ಸ್ಪಷ್ಟವಾದ ರೂಪ ಇದೆ. ವೀಣೆಯಲ್ಲಿ ಮೈಸೂರು ಪದ್ಧತಿಯಲ್ಲಿ ಮನೋಧರ್ಮಕ್ಕೆ ಹೆಚ್ಚು ಪ್ರಾಧಾನ್ಯ. ಮೀಟು ಕಡಿಮೆ ಮಾಡಿ ವೀಣೆಯಲ್ಲಿ ಸ್ವಭಾವ ಸಿದ್ಧವಾಗಿ ಬಂದ ನಾದವನ್ನೇ ಬಳಸುವುದು ಈ ಪದ್ಧತಿಯ ಮುಖ್ಯ ಲಕ್ಷಣ."

ಶ್ರೀಮತಿ ರಾಜಮ್ಮರೊಡನೆ ಮಾತಾಡುತ್ತಿದ್ದರೆ ಹೊತ್ತು ಹೋದದ್ದೂ ಗೊತ್ತಾಗುವುದಿಲ್ಲ. ಪ್ರಶ್ನೆಯಿಂದ ಪ್ರಶ್ನೆಗೆ ಹೊರಳಿದಂತೆಲ್ಲ ಅವರ ವಿಚಾರಧಾರೆ ಸುಗಮವಾಗಿ ವಿಷಯದಿಂದ ವಿಷಯಕ್ಕೆ ಜಗಿಯುತ್ತದೆ. ಗೊತ್ತಿಲ್ಲದ್ದನ್ನ "ಗೊತ್ತಿಲ್ಲ" ಎಂದು ಸಂಕೋಚವಿಲ್ಲದೆ ಹೇಳುವ ಪ್ರಾಮಾಣಿಕತೆ, ತಾನು ಸಾಧಿಸಿದ್ದು ಹೆಚ್ಚಲ್ಲ ಎನ್ನುವ ಸೌಜನ್ಯ, ಇವುಗಳನ್ನು ಭೇದಿಸಿಕೊಂಡು ಬೆಳಗುತ್ತದೆ ಅವರ ಸಂಗೀತ ಪ್ರಜ್ಞೆ. ★

....ಈಗ 'ತಪಸ್ವಿನಿ'ಯನ್ನು ಕೇಳುತ್ತಿದ್ದೇನೆ. ಅಷ್ಟು ಒಳ್ಳೆಯ ಕನ್ನಡವನ್ನು ಕೇಳಿ ಬಹಳ ದಿನಾಗಳಾಗಿತ್ತು. ಅದರಲ್ಲಿ ಮೂಡಿರುವ ಸದ್ಭಾವವೂ ಬಹಳ ಹಿತವಾಗಿ ಮನಸ್ಸನ್ನು ಪ್ರಸನ್ನಿಸುತ್ತದೆ.

—**ಪು. ತಿ. ನರಸಿಂಹಾಚಾರ್**

(ತಾ|| ೧೭–೪–೬೯ ರಂದು ಶರ್ಮ ದಂಪತಿಗಳಿಗೆ ಬರೆದ ಪತ್ರದಿಂದ)

ಸರಳಶೈಲಿಯ 'ಮಹಾಸತಿ'

● ಈಶ್ವರ ಚಂದ್ರ ●

ಐತಿಹಾಸಿಕ ವಸ್ತುವನ್ನು ಆಧರಿಸಿ ರಚಿತವಾದ ಕೃತಿಗಳು ಮುಖ್ಯವಾಗಿ ಎರಡು ವಿಷಯಗಳಿಗೆ ನಿಷ್ಠವಾಗಿರಬೇಕಾಗುತ್ತವೆ. ಮೊದಲನೆಯದು ಐತಿಹಾಸಿಕ ಸತ್ಯ; ಎರಡನೆಯದು ಆ ಕ್ರಿಯೆ ನಡೆದ ಕಾಲದ ಪರಿಸರದ ಪುನರ್ನಿರ್ಮಾಣ. ಆರಿಸಿಕೊಂಡ ವಸ್ತುವಿನ ಸುತ್ತಮುತ್ತಿನ ಸಮಗ್ರ ಸಾಮಗ್ರಿ ಇತಿಹಾಸದ ಪುಟಗಳಲ್ಲಿ ಯಥಾವತ್ತಾಗಿ ಸಿಕ್ಕರೆ ಐತಿಹಾಸಿಕ ಸತ್ಯಕ್ಕೆ ನಿಷ್ಠವಾಗಿ ಕೃತಿರಚನೆ ಸಾಧ್ಯ. ಪರಿಸರ ನಿರ್ಮಾಣ ಕೂಡ ಇದನ್ನೇ ನೆಚ್ಚಿಕೊಂಡಿದೆ. ಅಂದಿನ ಕಾಲದ ಜನರ ನಡೆ ನುಡಿ, ಜೀವನ ವಿಧಾನ, ರಾಜಕೀಯ ಪರಿಸ್ಥಿತಿ, ಭಾಷೆಯ ಸ್ವರೂಪ, ಐತಿಹಾಸಿಕ ಪಾರಿಭಾಷಿಕ ಪದಗಳ ಅರಿವು ಮುಂತಾದ ಅಂಶಗಳ ಮುಂಬೆಳಕಿನಲ್ಲಿ ಮೂಡಿಬಂದ ಕೃತಿ ತಕ್ಕ ಮಟ್ಟಿಗೆ ಹಿಂದಿನ ಚಿತ್ರವನ್ನು ಪ್ರತಿಬಿಂಬಿಸಬಲ್ಲುದು.

ಪ್ರಸ್ತುತ 'ಮಹಾಸತಿ' ನಾಟಕಕ್ಕೆ ಆಕರ ಹೆಗ್ಗಡದೇವನಕೋಟೆಯಲ್ಲಿ ದೊರೆತ ಶಾಸನ. ದೇಕಬ್ಬೆ ಎಂಬ ರಾಣಿ ತನ್ನ ಮೃತಪತಿಯೊಡನೆ ಚಿತೆಯೇರಿದ ವಿಷಯವನ್ನು ಈ ಶಾಸನ ಸಾರುತ್ತದೆ. ಆದರೆ ಪತಿಯ ಈ ಮರಣ ಸಹಜವಾದ ರೀತಿಯಲ್ಲಿ ಬಂದುದಲ್ಲ, ನವಿಲ ನಾಡಿನ ಒಡೆಯನಾದ ಏಚರ್ಸಬಾತನೇ ದೇಕಬ್ಬೆಯ ಪತಿ. ತಲಕಾಡಿನ ಚೋಳರಾಜ 'ಮಲ್ಲಯುದ್ಧ ಸಲ್ಲ' ಎಂದು ಮಾಡಿದ್ದ ರಾಜಾಜ್ಞೆ ಯನ್ನು ಮೀರಿ ದಾಯಾದಿ ಎರೆಯುಂಗನೊಡನೆ ಕಾದಿ ಸಾಯಿಸುತ್ತಾನೆ ಏಚ. ಆಜ್ಞೆ ಯನ್ನು ಮೀರಿದುದರಿಂದ ರಾಜ, ಏಚನಿಗೆ ಮರಣದಂಡನೆ ವಿಧಿಸುತ್ತಾನೆ. ದಿವಂಗತ ಪತಿಯೊಡನೆ ದೇಕಬ್ಬೆಯೂ ಚಿತೆಯೇರುತ್ತಾಳೆ. ಇವರ ಸ್ಮರಣೆಗಾಗಿ ನಿಲ್ಲಿಸಿದ್ದೇ ಈ ಹೆಗ್ಗಡದೇವನ ಕೋಟೆಯ ಶಾಸನ.

ಶಾಸನದಲ್ಲಿ ಎಷ್ಟೋ ವಿಷಯಗಳು ಮಸುಕಾಗಿಯೇ ಉಳಿದಿವೆ. ಎರೆಯುಂಗ ಮತ್ತು ಏಚರ ನಡುವೆ ಬೆಳೆದ ವೈರದ ಕಾರಣವೇನು? ಮಲ್ಲಯುದ್ಧವಾಡುವುದು

ಶಾಸನ ವಿರುದ್ಧವೇಕೆ? ಚೋಳರಾಜ ಅಂಥದೊಂದು ಶಾಸನ ಮಾಡಲು ಕಾರಣ ವೇನು? ಇಬ್ಬರು ವೀರರು ತಮ್ಮ ಶೌರ್ಯ ನಿರ್ಣಯಕ್ಕಾಗಿ ಕಾದುವುದು ಆ ಕಾಲದಲ್ಲಿ ನ್ಯಾಯಬಾಹಿರವಾಗಿತ್ತೆ? ಮಲ್ಲಯುದ್ಧದಲ್ಲಿ ಎರೆಯಂಗನನ್ನು ಗೆದ್ದ ಏಚನಿಗೂ ಮರಣ ದಂಡನೆ ವಿಧಿಸಿದ್ದು ಚೋಳರಾಜನ ಅವಿವೇಕವಲ್ಲವೆ? ಅಥವಾ ಇಬ್ಬರನ್ನೂ ನಿವಾರಿಸಲು ಆತ ಈ ಹೂಟ ಹೂಡಿದನೋ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಒಂದು ಸಣ್ಣ ಸ್ಮಾರಕ ಶಾಸನದಲ್ಲಿ ನಿರೀಕ್ಷಿಸುವುದು ಸರಿಯಲ್ಲವೇನೋ! ಆದರೆ ಇಂಥ ಶಾಸನದ ಆಧಾರದಿಂದ ರಚಿತವಾದ ನಾಟಕದಲ್ಲಿ ನಿರೀಕ್ಷಿಸುತ್ತಾನೆ ಓದುಗ. ಆದರೆ 'ಮಹಾಸತಿ' ನಾಟಕದಲ್ಲೂ ಇಂಥ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ. 'ಭಾರತಿ'ಯವರ ದೃಷ್ಟಿಯೆಲ್ಲಾ ದೇಕಬ್ಬೆಯ ಮೇಲೇ ಕೇಂದ್ರೀಕೃತವಾಗಿರುವುದ ರಿಂದ ಉಳಿದ ವಿಷಯಗಳ ಮೇಲೆ ಶಾಸನ ಹೇಳಿರುವುದಕ್ಕಿಂತ ಹೆಚ್ಚಿನದೇನನ್ನೂ ಅವರು ಹೇಳಿಲ್ಲ.

ನಾಟಕ ಪ್ರಾರಂಭವಾಗುವ ವೇಳೆಗಾಗಲೇ ಏಚ ಮಲ್ಲಯುದ್ಧಕ್ಕೆ ಹೊರಟು ಹೋಗಿದ್ದಾನೆ. ನಡುರಾತ್ರಿ. ದೇಕಬ್ಬೆಯು ಬೇಗುದಿಯ ಅರೆ ನಿದ್ರೆಯಲ್ಲಿದ್ದಾಳೆ. ಆಗ ಅವಳ ಗೆಳತಿಯರಾದ ಮಲ್ಲಬ್ಬೆ – ನೀಲಬ್ಬೆಯರು ಕತ್ತಲೆ, ಸಾವು, ಭಯಗಳ ವಿಷಯವಾಗಿ ಹತ್ತು ಪುಟಗಳಷ್ಟು ದೀರ್ಘವಾಗಿ ಮಾತನಾಡುತ್ತಾರೆ. ಮಲ್ಲಯುದ್ಧಕ್ಕೆ ಹೋಗದಂತೆ ಏಚನ ಮನವೊಲಿಸಲು ಪ್ರಯತ್ನಿಸಿ ಕೊನೆಗೆ ಸೋತ ದೇಕಬ್ಬೆ ದುಗುಡದಿಂದಲೇ ಬೀಳ್ಕೊಡುವ ದೃಶ್ಯವನ್ನು ನಾಟಕದ ಆರಂಭದಲ್ಲಿ ತಂದಿದ್ದಿದ್ದರೆ ಮುಂದಿನ ಓಟಕ್ಕೆ ಒಂದು ಗಂಭೀರವಾದ ಬಿಗಿ ಬರುತ್ತಿತ್ತು. ಇಂಥ ಅಗತ್ಯವಾಗಿದ್ದ ದೃಶ್ಯವನ್ನು ಕೈಬಿಟ್ಟು, ಕತ್ತಲೆ ಕುರಿತ ದೀರ್ಘ ಸಂಭಾಷಣೆಯ ಅನಗತ್ಯ ದೃಶ್ಯ ವೊಂದನ್ನು ಆರಂಭದಲ್ಲೇ ತಂದು, ನಾಟಕದ ವಾಚನೀಯತೆಯನ್ನು ಲೇಖಕಿ ಕುಂಠಿತ ಗೊಳಿಸಿದ್ದಾರೆನ್ನಬಹುದು.

ಅನಂತರ ಏಚ ಮಲ್ಲಯುದ್ಧದಲ್ಲಿ ಗೆದ್ದನೆಂಬ ಸುದ್ದಿ ಬರುತ್ತದೆ. ಅದರ ಬೆನ್ನಲ್ಲೇ ಏಚನಿಗೆ ಒದಗಿದ ಮರಣದ ವಾರ್ತೆ ಬರುತ್ತದೆ. ಅದನ್ನು ಕೇಳು ತ್ತಿದ್ದಂತೆಯೇ ದೇಕಬ್ಬೆ ತಾನೂ ಪತಿಯೊಡನೆ ಚಿತೆಯೇರುವ ನಿರ್ಧಾರ ಕೈಗೊಳ್ಳು ತ್ತಾಳೆ. ತಂದೆ ತಾಯಿಯರಿಗೆ ಹೇಳಿ ಕಳುಹಿಸುತ್ತಾಳೆ. ಇಲ್ಲಿಂದ ಮುಂದಕ್ಕೆ ಚಿತೆ ಯೇರದಂತೆ ದೇಕಬ್ಬೆಯನ್ನು ಒಡಂಬಡಿಸಲು ಪ್ರಯತ್ನಿಸುವ ಮಾತುಗಳು ಬರುತ್ತವೆ. ನಾಟಕದ ಉಳಿದ ಬಹು ಭಾಗವನ್ನು ಇದೇ ಆಕ್ರಮಿಸುತ್ತದೆ. ಕೊನೆಯಲ್ಲಿ ಮೆರ ವಣಿಗೆಯಲ್ಲಿ ಹೋಗಿ ಚಿತೆಯೇರುವ, ಶಾಸನ ಕೊರೆಸಿ ಸ್ಥಾಪಿಸುವ ದೃಶ್ಯಗಳು ಬರು ತ್ತವೆ. ನಾಟಕದಲ್ಲಿ ನಡೆಯುವ ಗಣನೀಯವಾದ ಕ್ರಿಯೆ ಎಂದರೆ ಇದೊಂದೇ. ನಾಟಕ ಎಂದು ಈ ಕೃತಿಯನ್ನು ಸಮೀಕ್ಷಿಸುವಾಗ ಇಷ್ಟು ಜಡವಾಗಿ ಕಾಣುವ 'ಮಹಾಸತಿ' ಒಂದು ಕಾವ್ಯ ಕೃತಿಯಾಗಿಯೂ ಹೆಚ್ಚಿನ ಪ್ರಭಾವವನ್ನೇನೂ ಬೀರು ವುದಿಲ್ಲ. ನಿರೂಪಣೆಗೆ ಬಳಸಿರುವ ಸರಳ ರಗಳೆಯು ಸಂಪೂರ್ಣ ಹಿಡಿತ ಸಿಗದೆ

(ಅಲ್ಲಲ್ಲಿ ಶಿಥಿಲ ಪಾದಗಳೂ ಉಂಟು), ವಸ್ತುವಿನ ಪೂರ್ಣ ಅನುಕಲ್ಪನೆ ಇಲ್ಲದೆ ಕೃತಿ ಸೊರಗಿದೆ.

ಪತಿಯೊಡನೆ ಚಿತೆಯೇರುವ ಮಹಾಸತಿಯರ ಪ್ರಸಂಗಗಳು ಭಾರತೀಯ ಇತಿಹಾಸದ ಸುದೀರ್ಘ ಪರಂಪರೆಯಲ್ಲಿ ಲೆಕ್ಕವಿಲ್ಲದಷ್ಟು. ಕೇವಲ ಅಭಿಮಾನದ ಕುರುಡಿನಲ್ಲಾದ ಅವಿವೇಕದಿಂದ ಮೃತ್ಯುವನ್ನಪ್ಪಿದ ಪತಿಯೊಡನೆ ಸಹಗಮನ ಮಾಡಿದ ಕನ್ನಡನಾಡಿನ ಒಬ್ಬ ಮಹಿಳೆಯ ಚಿತ್ರ ಈ ನಾಟಕದಲ್ಲಿ ಎಷ್ಟು ಸ್ಫುಟವಾಗಿ ಮೂಡಿಬರಬಹುದಾಗಿತ್ತೋ ಅಷ್ಟುಮಟ್ಟಿಗೆ ಬಾರದೆ ಪೇಲವವಾಗಿ ಉಳಿದುಬಿಡುತ್ತದೆ. ಶೈಲಿಯ ಸರಳತೆಯೊಂದೇ ಈ ಕೃತಿಯಲ್ಲಿ ಗಮನಿಸಬಹುದಾದ ಶ್ಲಾಘ್ಯ ಅಂಶ. ★

....'ಮಹಾಸತಿ'ಯನ್ನು ನಿಧಾನವಾಗಿ, ಚೆನ್ನಾಗಿ ಓದಿದೆ. ವಸ್ತುವು ಚಿಕ್ಕದಾದರೂ ವಿಧಾನ ವಿಶಾಲ, ಭಾವಪೂರ್ಣವಾಗಿದೆ.

—ಕೆ. ವಿ. ಅಯ್ಯರ್

(ತಾ॥ ೬-೩-೧೯೫೭ ರಂದು ಶ್ರೀ ಕೆ. ವಿ. ಅಯ್ಯರ್ ಶ್ರೀಮತಿ ತಿರುಮಲೆ ರಾಜಮ್ಮನವರಿಗೆ ಬರೆದ ಪತ್ರದಿಂದ)

★

....'ಮಹಾಸತಿ'ಯು ತಲುಪಿದೆ. ಅದಕ್ಕಾಗಿ ವಂದನೆಗಳು. ಇದು ನಾನು 'ಪ್ರಬುದ್ಧ ಕರ್ನಾಟಕ'ಕ್ಕೆ ಸಂಪಾದಕನಾಗಿದ್ದು, ಅದರಲ್ಲಿ 'ತಪಸ್ವಿನಿ'ಯು ಪ್ರಕಟವಾದ ಹಿಂದಿನ ದಿನಗಳನ್ನು ಜ್ಞಾಪಕಕ್ಕೆ ತರುತ್ತಿದೆ....ದೇಹದಲ್ಲಿ ಅಶಕ್ತಿ ಇದ್ದರೂ, ಸಂಸಾರದ ಭಾರ ಗುರುವಾಗಿದ್ದರೂ ತಾವು ಸಾಹಿತ್ಯ ಸಂಗೀತಗಳ ಸೇವೆ ನಡಸಿಕೊಂಡು ಬರುತ್ತಿರುವುದನ್ನು ನೋಡಿ ಸಂತೋಷವಾಗಿದೆ.

—ಎ. ಆರ್. ಕೃಷ್ಣಶಾಸ್ತ್ರಿ

(ತಾ॥ ೬-೪-೧೯೫೭ ರಂದು ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು ಶ್ರೀಮತಿ ರಾಜಮ್ಮನವರಿಗೆ ಬರೆದ ಪತ್ರದಿಂದ)

ವೈಶಿಷ್ಟ್ಯಪೂರ್ಣ ಜೀವನ ಚಿತ್ರಣ

● **ಅರಳುಮಲ್ಲಿಗೆ ಪಾರ್ಥಸಾರಥಿ**

'ಕರ್ನಾಟಕ ನಾಟಕ ಪ್ರಹಸನ ಪಿತಾಮಹ' ಕೈಲಾಸಂ ನನ್ನ ಮನಸ್ಸಿಗೆ ಅತಿ ಶ್ರೇಷ್ಠರಾಗಿ ಕಾಣಿಸಿಕೊಳ್ಳುವುದು ಮೂರು ಮುಖ್ಯ ಕಾರಣಗಳಿಂದ. ಒಂದು: ಕರ್ನಾಟಕದ ರಂಗಭೂಮಿಗೆ ದೊರಕಿಸಿಕೊಟ್ಟ ಚೈತನ್ಯ ಚಾಲನೆ ಮತ್ತು ಹೊಸ ಸಾಮಾಜಿಕ ತಿರುವು. ಎರಡು: ದಿನದಿನವೂ ಜನರಾಡುವ ಜೀವಂತ ಭಾಷೆಯ ಯಶಸ್ವೀ ಬಳಕೆ. ಮೂರು: ಸಮಕಾಲೀನ ಸಾಮಾಜಿಕ ಸಮಸ್ಯೆಗಳ ಬಗೆಯೂ ಅತ್ಯಂತ ಕಾಳಜಿ ವಹಿಸಿ, ಆ ಬಗ್ಗೆ ಪ್ರಬುದ್ಧವಾಗಿ ವಿವೇಚಿಸಿ ಅದನ್ನು ಅಭಿವ್ಯಕ್ತಿಸಿದ ಬಗೆ. ಕೈಲಾಸಂ ಎಂದರೆ ಕೃತಿಯೋ, ವ್ಯಕ್ತಿಯೋ ಎಂದು ಸಂದೇಹ ವ್ಯಕ್ತ ಪಡಿಸುವ ಅನೇಕರು ನಿಜಕ್ಕೂ ಕೈಲಾಸಂ ಕೃತಿಗಳ ಬಗ್ಗೆ ವಿಸ್ಮಯ ವ್ಯಕ್ತ ಪಡಿಸಿದ್ದಾರೆ.

ಪ್ರತಿಭಾವಂತ ಕೈಲಾಸಂ ಅವರ ವ್ಯಕ್ತಿತ್ವ, ಕೃತಿ, ಜೀವನ ಚಿತ್ರಣವನ್ನು ಸೂಕ್ಷ್ಮವಾಗಿ, ಸಂಕ್ಷೇಪವಾಗಿ, ಆದರೆ ವ್ಯಾಪಕವಾದ ಹಿನ್ನೆಲೆಯಲ್ಲಿ ಪರಿಶೀಲಿಸಿರುವ, ಕೈಲಾಸಂರೊಡನೆ ವ್ಯವಹರಿಸಿ, ಸ್ವಯಮನುಭವಿಸಿದ ಘಟನೆಗಳನ್ನು, ತಾತ್ವಿಕ ಸಂಘಟನೆಯ ಪಾತಳಿಯ ಮೇಲೆ ಹೊಂದಿಸಿ, ಜೋಡಿಸಿ ರಚಿಸಿರುವ 'ಆರ್ಯ ಕೈಲಾಸಂ' ಲೇಖಕಿ ಭಾರತಿಯವರ ಮಹತ್ವದ ಕೃತಿಗಳಲ್ಲಿ ಒಂದಾಗಿದೆ. ಇಲ್ಲಿ, ಲೇಖಕಿ ತಾವು ಕೈಲಾಸಂ ಬಗೆಗಿಟ್ಟಿದ್ದ ಗೌರವ, ವಿಶ್ವಾಸ, ಅಂತರ್ಯ ಭಾವನೆ ಗಳನ್ನೂ, ಹತ್ತು ಹಲವು ವಲಯಗಳಲ್ಲಿ ವಿಸ್ತರಿಸಿಕೊಂಡಿದ್ದ ಅಣ್ಣತಂಗಿಯರ ಅಭಿಮಾನದ ಭಾವುಕತೆಯನ್ನೂ, ಕ್ರೋಢೀಕರಿಸಿ ಚಿತ್ರಿಸಿದ್ದಾರೆ.

'ಆರ್ಯ ಕೈಲಾಸಂ' ಕೃತಿಯ ಮೂಲ ಉದ್ದೇಶ ಕೈಲಾಸಂ ಬಗೆಗಿನ ಅರ್ಥ ವತ್ತಾದ ಚಿತ್ರಣ ಮೂಡಿಸುವುದಾದರೂ, ಉದ್ದೇಶ ಭಿನ್ನವಾತಾವರಣದಲ್ಲಿ ಘಟನಾ ಪ್ರಧಾನವಾಗಿಯೇ ಉಳಿದಿದೆ. ಭವ್ಯಕಾಯ, ಕುಸುಮ ಹೃದಯಿ, ಸುಧಾರಕ,

ಸಾಹಸಿ, ಕ್ರಾಂತಿ ಪುರುಷ, ಪ್ರಗತಿಗಾಮಿ, ಆಶಾವಾದಿ ಮುಂತಾದ ವಿಶೇಷ ಲಕ್ಷಣಗಳಿಂದ ಕೈಲಾಸಂರವರನ್ನು ಕರೆದಿರುವ ಲೇಖಕಿ, ಕೈಲಾಸಂರವರ ಪೂರ್ಣ ವ್ಯಕ್ತಿತ್ವವನ್ನು ತಮ್ಮ ಅರಿವಿನ ಪರಿಮಿತಿಯಲ್ಲಿ ಪರಿಚಯಿಸಲು ಸಾಕಷ್ಟು ಶ್ರಮ ಪಟ್ಟಿದ್ದಾರೆ. ಕೈಲಾಸಂರೊಡನೆ ತಾವು ಕಳೆದ ಕೆಲವು ಘಟನೆಗಳು, ಪ್ರಸಂಗಗಳನ್ನು ಉತ್ತಮ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ.

'ಕೈಲಾಸಂ ರುದ್ರಜೀವನ ಬರೆಯುವುದಕ್ಕೆ ಒಬ್ಬ ಸಾಫ್ರೋಕ್ಲೆಸನ ರಕ್ತಲೇಖನಿ ಬೇಕು' ಎಂದಿರುವ ಅ.ನ.ಕೃ. ರವರ ಮಾತು ಕೈಲಾಸಂ ಜೀವನದ ಅತಿ ಗಂಭೀರವಾದ ಮುಖವನ್ನು ಕುರಿತು ಆಡಿದ್ದಾದರೆ, 'ಆರ್ಯ ಕೈಲಾಸಂ' ಕೃತಿ ಭಾರತಿಯವರ ಆತ್ಮೀಯತೆ, ಭಾವುಕತೆಗಳ ಮೂಲಕ ಕೈಲಾಸಂರ ವೈಶಿಷ್ಟ್ಯಪೂರ್ಣ ಜೀವನವನ್ನು ಪ್ರಕಟಪಡಿಸಿದೆ.

ಭಾರತಿಯವರು 'ಆರ್ಯ ಕೈಲಾಸಂ' ಬರೆದ ಹಿನ್ನೆಲೆಯಲ್ಲಿರುವ ಅಣ್ಣ ತಂಗಿಯರ ಪವಿತ್ರ ಬಾಂಧವ್ಯದ ಭಾವುಕತೆಯನ್ನು ಕೃತಿಯ ತುಂಬಾ ಹರವಿದ್ದಾರೆ. ಕೈಲಾಸಂ ಲಂಡನ್ನಿನಿಂದ ಹಿಂತಿರುಗಿ ಬಂದ ನಂತರ ತನ್ನ ಆತ್ಮೀಯರಾದ ಸೀತಮ್ಮ ನವರ ಮನೆಯವರಲ್ಲಿ ಒಬ್ಬರಾದರು. ಶ್ರೀಯುತ ತಿ. ತಾ. ಶರ್ಮ, ಶ್ರೀಮತಿ ರಾಜಮ್ಮನವರು, ಆಕೆಯ ಅಣ್ಣಂದಿರಾದ ಕಂದಾಡೆ ಕೃಷ್ಣಯ್ಯಂಗಾರ್ ಮತ್ತು ಶಾಮಣ್ಣ ಕೈಲಾಸಂಗೆ ಅತ್ಯಂತ ಆಪ್ತರಾದರು. ರಾಜಮ್ಮ, ತಂಗಿ 'ರಾಜಿ' ಆದರು. ಶರ್ಮರು 'ರಾಜ' ಆದರು. ಕೈಲಾಸಂರನ್ನು ಈ ಮನೆಗೆ ಆಕರ್ಷಿಸಿದ ಮುಖ್ಯ ಕಾರಣ ರಾಜಮ್ಮನವರ ವೀಣಾವಾದನ. ವೀಣೆ ಶೇಷಣ್ಣನವರ ಅಚ್ಚು ಮೆಚ್ಚಿನ ಶಿಷ್ಯೆಯಾಗಿದ್ದ ರಾಜಮ್ಮ ಕೈಲಾಸಂಗೆ ಸಂತೃಪ್ತಿಯಾಗುವಂತೆ ವೀಣೆ ನುಡಿಸುತ್ತಿದ್ದ ಪ್ರಸಂಗಗಳು ಅವರಿಬ್ಬರನ್ನೂ ಮತ್ತಷ್ಟು ಹತ್ತಿರ ತರುತ್ತಿದ್ದುವು. ಇವರಿಬ್ಬರಿಗಿದ್ದ ಆತ್ಮೀಯತೆಗೆ ನಿದರ್ಶನವಾಗಿ ಇನ್ನೂ ಇರುವ ಕೈಲಾಸಂರವರ 'ಟೊಳ್ಳುಗಟ್ಟಿ' ನಾಟಕದ ಪ್ರಥಮ ಕೈಬರಹದ ಪ್ರತಿ ತಯಾರಾದದ್ದು ನಲವತ್ತೈದು ವರ್ಷಗಳ ಹಿಂದೆ, ರಾಜಮ್ಮನವರಿಂದ.

ನಾಟಕದ ಮೇಲಿನ ಪ್ರೀತಿಗಾಗಿ ಭೂಗರ್ಭ ಶಾಸ್ತ್ರದ ಇಲಾಖೆಯ ಹುದ್ದೆ ಬಿಟ್ಟ ಕೈಲಾಸಂ, ಅಲ್ಲಿಯೇ ಇದ್ದು ನಾಟಕಗಳನ್ನು ಬರೆದಿದ್ದರೆ ಬಹುಶಃ ವಿಶ್ವ ಖ್ಯಾತ ನಾಟಕಕಾರರಾಗುತ್ತಿದ್ದರೇನೋ ?

ಕನ್ನಡದ ರಂಗಭೂಮಿಯ ಮೇಲೆ ಮುಸುಕಿದ್ದ ಅವಾಸ್ತವಿಕತೆಯ ಮೇಲೆ ದಾಳಿಯಿಟ್ಟು, ವಾಸ್ತವಿಕತೆ ಹಾಗೂ ಆಧುನಿಕತೆಗಳ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ವಿಚಾರ ಕ್ರಾಂತಿಯ ವಾತಾವರಣ ನಿರ್ಮಿಸಿದ ಖ್ಯಾತಿ ಕೈಲಾಸಂರದು. ಇಂಗ್ಲೀಷ್ ಭಾಷೆಯಲ್ಲಿಯೂ ಐದು ಪ್ರಮುಖ ನಾಟಕಗಳನ್ನು ರಚಿಸಿದ ಕೈಲಾಸಂ "ಕಲಾವಿದ ಎಷ್ಟರ ಮಟ್ಟಿಗೆ ಅಪ್ರತಿಮ ವ್ಯಕ್ತಿಗಳನ್ನು ಸೃಷ್ಟಿಸುತ್ತಾನೆ ಎಂಬುದರ ಮೇಲೆ ಕಲೆಯ ಮಹತ್ತು ನಿರ್ಧಾರವಾಗುತ್ತದೆ" ಎಂದು ಹೇಳಿ, ತಾವೇ ನಿರ್ಮಿಸಿದ

ಪೌರಾಣಿಕ ಧೀಮಂತ ನಾಯಕರುಗಳ ಮೂಲಕ ಆ ಮಹತ್ತನ್ನು ಸಾಧಿಸಿ ತೋರಿಸಿದ್ದಾರೆ.

ಸಹಾನುಭೂತಿಯ ನಗೆಯನ್ನು ಸ್ವಚ್ಛಂದವಾಗಿ ಚೆಲ್ಲಿಸುವಲ್ಲಿ, ದಿನದಿನವೂ ಜನರಾಡುವ ಜೀವಂತ ಭಾಷೆಯನ್ನು ಯಶಸ್ವಿಯಾಗಿ ಬಳಸುವಲ್ಲಿ, ನಾಟಕಗಳ ಮೂಲಭೂತ ಉದ್ದೇಶಗಳಿಗೆ ಅಳವಡಿಸಿಕೊಳ್ಳುವುದರಲ್ಲಿ ಕೈಲಾಸಂರವರ ಸ್ವೋಪಜ್ಞ ಪ್ರತಿಭೆ ಅದ್ಭುತವಾಗಿ ಕೆಲಸ ಮಾಡಿದೆ.

ಅತ್ಯುತ್ತಮ ದರ್ಜೆಯ ಕಲಾತ್ಮಕತೆ, ಅದ್ಭುತ ಹಾಗೂ ಆಕರ್ಷಕ ಕಲ್ಪನೆ, ಪಾತ್ರ ಪ್ರಸಂಗಗಳ ನಾಟ್ಯಾಯಮಾನದ ಸೂಕ್ಷ್ಮ ಗ್ರಹಣಶಕ್ತಿ, ರಂಗಭೂಮಿಯ ಬಗ್ಗೆ ಪ್ರೌಢ ತಿಳುವಳಿಕೆ, ಪ್ರಬುದ್ಧ ದರ್ಶನ, ಮೊದಲಾದ, ಶ್ರೇಷ್ಠನಾಟಕಕಾರನಿಗಿರ ಬೇಕಾದ ಎಲ್ಲ ಗುಣಗಳನ್ನೂ ಒಗ್ಗೂಡಿಸಿಕೊಂಡ ವ್ಯಕ್ತಿ ಕೈಲಾಸಂ. ಭಾರತಿಯವರು ತಮ್ಮ ಆತ್ಮೀಯ ಭಾವನೆಗಳನ್ನು ಪುಳಕಿತ ರೀತಿಯಲ್ಲಿ ಅಭಿವ್ಯಕ್ತಿಸುವ ಸಲುವಾಗಿ ರಚಿಸಿರುವ ಈ ಕೃತಿ, ಕೈಲಾಸಂ ಜೀವನದ ಭಾವುಕ ಭಾಗಗಳನ್ನೊಳಗೊಂಡ ಅತ್ಯುತ್ತಮ ಸಂಗ್ರಹವಾಗಿದೆ. ಜೀವನದರ್ಶನ, ನೀತಿ, ಮುಂತಾದ ವಿಚಾರಗಳಲ್ಲಿ ಕೈಲಾಸಂ ಎಂತಹ ಪ್ರಬುದ್ಧ ಕೃತಿಕಾರರಾಗಿದ್ದರೆಂಬುದನ್ನು, ತುಂಬಾ ಮೃದುವಾಗಿ, ಸೂಕ್ಷ್ಮವಾಗಿ, ವಿಶೇಷಣಗಳೊಡನೆ ನಿರೂಪಿಸಿರುವ ಈ ಕೃತಿ, ಕೈಲಾಸಂ ಮತ್ತು ಅವರ ಕೃತಿಗಳ ಬಗ್ಗೆ ದೊರಕುವ ಉತ್ತಮ ಸಾಹಿತ್ಯ. ★

'ಮಹಾಸತಿ' ಕೃತಿಯನ್ನು ಕಳಿಸಿದುದಕ್ಕಾಗಿ ಕೃತಜ್ಞ. ಉದಾತ್ತ ಭಾವನೆ, ಸುಲಲಿತ ಮಧುರ ಶೈಲಿಯಿಂದ ಕೂಡಿದ ಈ ಸರಸ ಕೃತಿಯು ನಿಮ್ಮ ಈವರೆಗಿನ ಕೀರ್ತಿಗೆ ಹೆಚ್ಚಳವನ್ನು ತರುತ್ತಿದೆ.

—ಶಂ. ಬಾ. ಜೋಶಿ

(ತಾ॥ ೧೮–೩–೧೯೫೭ ರಂದು ಶ್ರೀಮತಿ ರಾಜಮ್ಮನವರಿಗೆ ಬರೆದ ಪತ್ರದಿಂದ)

ವಾತ್ಸಲ್ಯ ತರಂಗ ಲೀಲಾ

● ಕೆ. ವಾಮನರಾವ್

ವರಕವಿ ಕಾಳಿದಾಸ ರಚಿಸಿರುವ 'ಅಭಿಜ್ಞಾನ ಶಾಕುಂತಲಾ' ಸಂಸ್ಕೃತ ನಾಟಕ ಪ್ರಪಂಚದಲ್ಲಿಯೇ ಅದ್ವಿತೀಯ ಸ್ಥಾನವನ್ನು ಇಂದಿಗೂ ಉಳಿಸಿಕೊಂಡು ಬಂದಿದೆ.

ಶೃಂಗಾರ ರಸ ಪ್ರಧಾನವಾದ ಕಾಳಿದಾಸನ ಈ ನಾಟಕವು, ಏಳು ಅಂಕಗಳಿಂದ ಕೂಡಿದೆ. ಚಂದ್ರವಂಶದಲ್ಲಿ ಪುರೂರವನ ಪೀಳಿಗೆಯಲ್ಲಿ ಬರುವ ದುಷ್ಯಂತ ಮತ್ತು ವಿಶ್ವಾಮಿತ್ರ ಮೇನಕೆಯರಿಗೆ ಮಗಳಾಗಿ ಜನಿಸಿದ ಶಕುಂತಳೆಯದು, ಈ ನಾಟಕದಲ್ಲಿ ಬರುವ ಈ ಎರಡು ಪಾತ್ರಗಳು ಪ್ರಧಾನವಾದುವುಗಳು.

ವಿಶ್ವಾಮಿತ್ರ–ಮೇನಕೆಯರಿಗೆ ಜನಿಸಿದ ಶಿಶುವು ತನ್ನ ಮಾತಾಪಿತೃಗಳಿಂದ ಪರಿತ್ಯಜಿಸಲ್ಪಟ್ಟಾಗ ಆ ಮಗುವು ಶಕುಂತ ಪಕ್ಷಿಗಳಿಂದ ರಕ್ಷಿಸಲ್ಪಡುತ್ತದೆ. ಆಕಸ್ಮಿಕವಾಗಿ ಶಿಶುವಿದ್ದಲ್ಲಿಗೆ ಬಂದ ಕಾಶ್ಯಪ (ಕಣ್ವ)ರು, ಆ ಮಗುವನ್ನು ಶಕುಂತಗಳು ರಕ್ಷಿಸುತ್ತಿರುವುದನ್ನು ಕಂಡು ಆ ಶಿಶುವಿಗೆ 'ಶಕುಂತಳಾ' ಎಂದೇ ನಾಮಕರಣ ಮಾಡಿ ತಮ್ಮ ಆಶ್ರಮದಲ್ಲಿ ಪೋಷಿಸುತ್ತಾರೆ.

ಅಪ್ಸರೆ ಮೇನಕೆ ಶಿಶುವಿಗೆ ಜನ್ಮವೀಯುವ ದಿನದ ಉದಯದಿಂದ ಹಿಡಿದು ಆ ಸಂಜೆಯವರೆಗೆ ಏನೇನು ನಡೆದಿರಬಹುದೆಂಬುದನ್ನೂ, ಆ ತಾಯಿ ಮೇನಕೆಯ ಹೃದಯ ಮಗುವಿನ ಅಗಲಿಕೆಯ ಬಗ್ಗೆ ಹೇಗೆ ಸ್ಪಂದನಗೊಂಡಿರಬಹುದೆಂಬುದನ್ನೂ ತಮ್ಮ ಮಾತೃಹೃದಯದಿಂದ ಊಹಿಸಿ, ಆ ವಿಷಯವನ್ನೇ ಪ್ರಧಾನವಾಗಿರಿಸಿಕೊಂಡು ಮಾ|| ಶ್ರೀ|| ಭಾರತಿ ಅವರು "ವಾತ್ಸಲ್ಯ ತರಂಗ ಲೀಲಾ" ಎಂಬ ಗೀತ ನಾಟಕವನ್ನು ತುಂಬಾ ಮನೋಜ್ಞವಾಗಿ ರಚಿಸಿದ್ದಾರೆ.

"ವಾತ್ಸಲ್ಯ ತರಂಗ ಲೀಲಾ" ನಾಟಕದ ಮೊದಲನೇ ದೃಶ್ಯ, ವಿಶ್ವಾಮಿತ್ರ ಮಹರ್ಷಿಯ ತಪೋವನದಲ್ಲಿ ಶಿಲಾಸನದ ಮೇಲೆ ಚಿಂತಾಮಗ್ನಳಾಗಿ ಕುಳಿತಿರುವ ಮೇನಕೆಯಿಂದ ಪ್ರಾರಂಭವಾಗುತ್ತದೆ. ಇವಳನ್ನು ನೋಡಲು ಇಂದ್ರನಿಂದ ಆಜ್ಞಪ್ತ

ಕಾದ ಮೋದಿನಿಯು ಬರುತ್ತಾಳೆ. ಚಿಂತಾಸಾಗರದಲ್ಲಿ ಮುಳುಗಿರುವ ಮೇನಕೆಯನ್ನು ಮೋದಿನಿಯೇ ಮಾತನಾಡಿಸುತ್ತಾಳೆ.

ಕುಶಲವನ್ನು ಕೇಳಿದ ಮೋದಿನಿಯನ್ನು ಸುರಲೋಕದ ಕ್ಷೇಮವನ್ನು ತಿಳಿಸುವಂತೆ ಮೇನಕೆ ಕೇಳುತ್ತಾಳೆ. ರಾಕ್ಷಸರ ಭಯವಿಲ್ಲದೆ ತಾವು ಸುಖವಾಗಿರುವುದಾಗಿ ಮೋದಿನಿ ತಿಳಿಸುತ್ತಾಳೆ. ಹತ್ತು ವರುಷಗಳು ಸಂದಿತು ನೀನಿಲ್ಲಿಗೆ ಬಂದು; ವಿಶ್ವಾಮಿತ್ರರ ತಪೋಭಂಗವಾಯಿತು; ಇನ್ನು ನೀನು ಸ್ವರ್ಗಲೋಕಕ್ಕೆ ಬರಬಹುದಲ್ಲ ಎಂದು ಮೋದಿನಿ ಕರೆಯುತ್ತಾಳೆ.

ಹತ್ತು ವರುಷಗಳು ಸಾಲದೆಂದು ಮೇನಕೆ ಹೇಳಿದಾಗ, ಮೇನಕೆಯನ್ನಗಲಿ ಅನುಭವಿಸಿದ ಯಾತನೆಯನ್ನು ಮೋದಿನಿ ತಿಳಿಸುತ್ತಾಳೆ. ವಿಶ್ವಾಮಿತ್ರರ ಸಾಮೀಪ್ಯದಲ್ಲಿ ವರುಷಗಳು ಉರುಳಿದ್ದು ಸಾಲದೆಂಬಂತಿದ್ದ ಮೇನಕೆಯನ್ನು ಕಂಡು "ನನ್ನೆಲ್ಲ ನೇಹವನು ಮರೆವಂತೆ ಅನುರಾಗ ಬಂಧನಕೆ ವಶವಾದೆಯೇನಮ್ಮ" ಎಂದು ಮೋದಿನಿ ಕೇಳುತ್ತಾಳೆ. ತಾನು ಇಂದ್ರನ ಆಜ್ಞೆಯನ್ನು ಹೊತ್ತುಬಂದವಳೆಂದೂ ಬಂದಾಗ ಅಳುಕಿನಿಂದಲೇ ಬಂದುದಾಗಿಯೂ (ವಿಶ್ವಾಮಿತ್ರರ ಸಹವಾಸವಲ್ಲವೇ ?, ಆದರೆ ತನ್ನದು ಪುಣ್ಯವೋ ಏನೋ 'ವಿಶ್ವಾಮಿತ್ರರು ತನಗೆ ಮರುಳಾದರು! ಕಾಮಬಲ ಮುನಿವರನ ಸೆಳೆದಿತ್ತು .... ಆದರಣೆಯಿಂದ ಪ್ರಿಯವೆನಗೆ ಮುನಿ ರಮಿಸಿದನು' ಎನ್ನುತ್ತಾಳೆ.

ಮಾನವರ ಸುಖದ ಮುಂದೆ ದೇವತೆಗಳ ಸುಖ ಯಾವ ತಾಳಿಕೆಗೂ ಬಾರದೆಂಬುದನ್ನು ಭಾರತಿ ಅವರು ತುಂಬಾ ಹೃದಯಂಗಮವಾಗಿ ಚಿತ್ರಿಸಿರುತ್ತಾರೆ. ಹಾಗೂ ಆ ಮಾತುಗಳನ್ನು ಮೇನಕೆಯ ಮೂಲಕ ಪರಿಣಾಮಕಾರಿಯಾಗುವಂತೆ ಆಡಿಸಿದ್ದಾರೆ.

"..ಸಹಜ ಪ್ರೇಮಾನುಭವ
ಎಂತುದೋ ಬಲ್ಲೆವೆ ? ಹೃದಯಾನುಬಂಧದಾ
ಆಪ್ತ ಭಾವವದೆಂತೋ. ಆ ದಿವ್ಯತೆಯನರಿವ
ಭಾಗ್ಯ ನಮಗೆಲ್ಲಿಯದು ? ಊಳಿಗದ ತೊತ್ತುಗಳು
ಆಜ್ಞೆಪಾಲಿಪುದೊಂದೆ ಮುಖ್ಯವಾಗಿರುತ
ಪ್ರಿಯವೆಂತೋ, ಅಪ್ರಿಯವು ಅಂತೆಯೇ ನಮಗೆ."

–ಎನ್ನುತ್ತಾಳೆ ಮೇನಕೆ, ತನ್ನ ನಿಸ್ಸಹಾಯಕತೆಯನ್ನು ತನ್ನ ಪ್ರಿಯ ಗೆಳತಿಯೊಡನೆ ತೋಡಿಕೊಳ್ಳುತ್ತ.

ಸ್ನೇಹ ಪೂರ್ಣವಾದ ಸಂಭಾಷಣೆಯಲ್ಲಿ ಮೋದಿನಿ ತಾನು ಬಂದ ಕಾರ್ಯವನ್ನೇ ಮರೆತಿರುತ್ತಾಳೆ. ತರುವಾಯ ಜ್ಞಾಪಿಸಿಕೊಂಡು ಇಂದ್ರನ ಆಜ್ಞೆಯನ್ನು ಮೇನಕೆಗೆ ತಿಳಿಸುತ್ತಾಳೆ.

ಮೇನಕೆ ಇಂದ್ರನ ಆಜ್ಞೆಯನ್ನು ತಿಳಿದು ಮುಂಗಾಣದಾಗುತ್ತಾಳೆ. ಮೇನಕೆ ಈಗ ತುಂಬು ಬಸುರಿ. ಹೆರಿಗೆಯ ಸಮಯ; ಒಡೆಯನ ಆಜ್ಞೆಯಂತೆ ನಡೆಯಲೇಬೇಕು.

ವಿಶ್ವಾಮಿತ್ರರ ತಪೋಭಂಗದ ಆಜ್ಞೆ ಹೊತ್ತು ಬಂದು ಅದರಲ್ಲಿ ಕೃತಕೃತ್ಯಳಾಗಿರುತ್ತಾಳೆ. ಆ ದಾಂಪತ್ಯದ ಕುರುಹು ಗರ್ಭದಲ್ಲಿ ಧಾರಣೆಯಾಗಿದೆ. ಇಂದೋ ನಾಳೆಯೋ ಅದರ ಫಲವನ್ನು ನಿರೀಕ್ಷಿಸುತ್ತಿದ್ದಾಗ ಸಹಸ್ರಾಕ್ಷನು ಅಮರಲೋಕಕ್ಕೆ ಮರಳುವಂತೆ ಮೇನಕೆಗೆ ಹೇಳಿಕಳುಹಿಸಿದ್ದಾನೆ.

ತಾನು ಅಲ್ಲಿಗೆ ಬಂದರೆ ಶಿಶುವನ್ನು ಪಾಲಿಸುವವರಾರು ಹೇಳು ಎಂದು ಮೇನಕೆ ಕೇಳುತ್ತಾಳೆ.

ಅಪ್ಸರೆಯಾದ ನಿನಗೆ ಈ ಭ್ರಾಂತಿ ಏಕೆಂದು ಹೇಳಿ, ತಂದೆಯೇ ಸಲಹುವನೆಂದು ಮೋದಿನಿ ತಿಳಿಸುತ್ತಾಳೆ. ತಾಯಿಯ ಹೊಣೆಯನ್ನು ನರಲೋಕದಲ್ಲಿದ್ದು ಅರಿತ ಮೇನಕೆ, ಅಣ್ಣನಿಗೆ ತನ್ನ ಸ್ಥಿತಿಯನ್ನು ತಿಳಿಸಲು ಬಿನ್ನವಿಸಿಕೊಳ್ಳುತ್ತಾಳೆ.

ಮುನಿವರನ ಆಗಮನದ ಸಮಯವಾದ್ದರಿಂದ, ಮೋದಿನಿಯು ಒಡೆಯನಿಗೆ ಎಲ್ಲವನ್ನೂ ನಿವೇದಿಸಿ ಪುನಃ ಬರುವೆನೆಂದು ಹೇಳಿ ಸುರಲೋಕಕ್ಕೆ ತೆರಳುತ್ತಾಳೆ.

ಇತ್ತ ಏಕಾಂಗಿಯಾದ ಮೇನಕೆಗೆ ಬರಲಿರುವ ತನ್ನ ಕಂದಮ್ಮನ ಯೋಚನೆ ಮುತ್ತುತ್ತದೆ. ಶಿಶುವನ್ನು ಸಲಹೆಂದು ಹೇಳಿದರೆ ಮುನಿವರನು ಎಲ್ಲಿ ಮುನಿಯುತ್ತಾನೋ ಎನ್ನುವ ಭಯದಿಂದ ಅಧೀರಳಾಗುತ್ತಾಳೆ.

ಮುಂದೆ ಎರಡನೇ ಪ್ರವೇಶ ಪ್ರಾರಂಭ. ವನದೇವತೆಯು, ತನ್ನ ಕರ್ತವ್ಯದಲ್ಲಿ ಭ್ರಷ್ಟನಾಗಿದ್ದ ವಿಶ್ವಾಮಿತ್ರನನ್ನು ಎಚ್ಚರಿಸುವ ದೃಶ್ಯ. ವನದೇವತೆಯ ಪ್ರೇರಣೆಯಂತೆ, ಹೂಗಳನ್ನು ಬಿಡಿಸಲು ಬಂದ ವಿಶ್ವಾಮಿತ್ರನನ್ನು ಹೂಗಳು ಅಪಹಾಸ್ಯ ಮಾಡಿ ಗೇಲಿಮಾಡುತ್ತವೆ. ನಗೆ ಕೇಕೆ ಬರುತ್ತದೆಯೇ ವಿನಃ ವ್ಯಕ್ತಿಗಳು ಗೋಚರವಾಗುವುದಿಲ್ಲ. ಕುಪಿತನಾದ ರಾಜರ್ಷಿ ಗೋಚರವಾಗುವಂತೆ ಆರ್ಭಟಿಸುತ್ತಾನೆ.

"ನಿನಗಂಜುವ...ಕಾಲ ಸರಿದು
ನಗುವ ಕಾಲವೆ...ಬಂದಿದೆ.ದು"

–ಎಂದು ಹೇಳಿ ವನದೇವತೆ ಕಾಣಿಸಿಕೊಳ್ಳುತ್ತಾಳೆ.

"....ತಪದ ಮಹಿಮೆಯನೆಲ್ಲ ಈಡಾಡಿ ಮೋಹಾಂಧಕಾರದಲಿ ಬಿದ್ದಿರುವ ನಿನ್ನನ್ನು ಎಚ್ಚರಿಸಲೆಂದು ಹೂವಿನಾಟವಿದು" ಎನ್ನುತ್ತಾಳೆ ವನದೇವತೆ.

ಮುಂದೆ ಕೌಶಿಕನಿಗೆ ಜ್ಞಾನೋದಯವಾಗಿ ದೇವಿಯನ್ನು ಕ್ಷಮಾಪಣೆ ಕೇಳುತ್ತಾನೆ. ಕರ್ತವ್ಯಭ್ರಷ್ಟನಾಗಿದ್ದು ಜೀವನದ ಮುಖ್ಯ ಗುರಿಯನ್ನೆ ಮರೆತಿದ್ದ ತನ್ನನ್ನು ಎಚ್ಚರಿಸಿದ್ದಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ ತಪಕ್ಕೆ ತೆರಳುತ್ತಾನೆ.

ಮೂರನೇ ಪ್ರವೇಶದ ಆದಿಯಲ್ಲಿ ಮೇನಕೆ ಲತಾಗೃಹದ ಮುಂದೆ ಶಿಶುವನ್ನೆತ್ತಿಕೊಂಡು ಪತಿಯನ್ನು ಕಾತರದಿಂದ ನಿರೀಕ್ಷಿಸುತ್ತಿರುವ ದೃಶ್ಯ ನಾವು ಕಾಣುತ್ತೇವೆ. ಸೂರ್ಯೋದಯದ ಸಮಯವಾದರೂ ಪತಿ ಬಾರದೆ ಎಲ್ಲಿಗೆ ಹೋದನೆಂದು ಚಿಂತಿಸುತ್ತಿರುತ್ತಾಳೆ. ಪ್ರತಿದಿನ ಪ್ರಾತಃಕಾಲ ಮುನಿಯ ಬರುವಿಕೆಯು, ಆತನು ಆಯ್ದು ತರುತ್ತಿದ್ದ ಪುಷ್ಪಗಳಿಂದ ಹೊಮ್ಮುತ್ತಿದ್ದ ಸುಗಂಧ, ಮುನಿಯ ಆಗಮನವನ್ನು

ಮುಂಚಿತವಾಗಿಯೇ ತಿಳಿಸುತ್ತಿತ್ತು. ಆದರೆ ಇಂದು ಏಕೋ ಮುನಿಯ ಸುಳಿವಿಲ್ಲ! ಶಿಶು ಜನಿಸಿದ ವಾರ್ತೆ ತಿಳಿದಿದ್ದರೆ "ವೇಗವಡಿಗಳನಿಡುತ ಬಾರನೇ ಸಂಭ್ರಮದಿ?" ಎಂದು ಕೊಳ್ಳುತ್ತಾಳೆ. ಈ ರೀತಿ ಯೋಚನೆಯ ಸುಳಿಯಲ್ಲಿ ಸಿಕ್ಕಿದ್ದ ಮೇನಕೆಯ ಬಳಿಗೆ ಮೋದಿನಿ ಮತ್ತು ಸಾನುಮತಿಯರನ್ನು ಹೊತ್ತು ಸುರವಿಮಾನ ಬಂದಿಳಿಯುತ್ತದೆ–ಮೇನಕೆಯನ್ನು ಕೊಂಡೊಯ್ಯಲು.

ಬಂದ ಈ ಅಪ್ಸರೆಯರು ಮೇನಕೆ ಮತ್ತು ಮಗುವನ್ನು ಕಂಡು ಸಂತೋಷಿಸುತ್ತಾರೆ. "ಪೊಸತು (ತಾಯ್ತನ) ಪದವಿಯಲಿ ಕಳೆತಳೆದು ಶೋಭಿಪ ಶುಭಾಂಗಿ ನೀನು" ಎಂದು ನುಡಿಯುತ್ತಾರೆ. ಈ ಸಂತೋಷದ ಸಮಯದಲ್ಲಿ ಸುರರು ಹೂಮಳೆ ಕರೆಯುಯುತ್ತಾರೆ. ಸಾನುಮತಿ ಮಗುವಿನ ತೇಜಸ್ಸನ್ನು ನೋಡಿ "ನಭದಿಂದ ನೆಲಕಿಳಿದ ಚಂದ್ರಿಕೆ" ಎನ್ನುತ್ತಾಳೆ. ಚಂದ್ರವಂಶದ ಸಸಿ ಈ ಮಗು ಎನ್ನುವ ಮಾತು ಇಲ್ಲಿ ಧ್ವನಿತವಾಗಿದೆ. ಸುರಲೋಕದಲ್ಲಿ ನಿನ್ನನ್ನು ಸ್ವಾಗತಿಸಲು ಸಿದ್ಧತೆ ಆಗುತ್ತಿದೆ, ಹೊರಡು ಎನ್ನುತ್ತಾರೆ. ತನ್ನ ಶಿಶುವಿನ ಸಂರಕ್ಷಣೆಯ ಚಿಂತೆಯನ್ನು ಮಾತೃಹೃದಯದ ಮೇನಕೆ ತೋಡಿಕೊಳ್ಳುತ್ತಾಳೆ.

ಶಿಶು ಪಾಲನೆಗೆ ತಂದೆಯೇ ಬಾಧ್ಯನೆಂದು ಮೋದಿನಿ ಹೇಳುತ್ತಾಳೆ. ತಂದೆ ಹೊಣೆಯನ್ನು ಹೊರದಿದ್ದರೆ ಭೂಲೋಕದ ಯಾರಾದರೂ ಶಿಶುವನ್ನು ಸಲಹುತ್ತಾರೆಂದು ನುಡಿಯುತ್ತಾಳೆ. ಇಲ್ಲಿ ಭಾರತಿ ಅವರು ಮಾನವರ ಮಾನವೀಯ ಗುಣವನ್ನು ಎತ್ತಿಹಿಡಿದಿದ್ದಾರೆ.

ಸಾನುಮತಿ ಕಂಬನಿದುಂಬಿದ ಮೇನಕೆಯನ್ನು ಕಂಡು, "ನರರಿಗದು ಅಭ್ಯಾಸ? ಅನಿಮಿಷರಿಗುಂಟೆ ಕಂಬನಿ ಮಿಡಿವ ಅನುಭವ" ಎನ್ನುತ್ತಾಳೆ. ಇಲ್ಲಿ ಮತ್ತೆ ಮಾನವರ ಹಿರಿಮೆಯನ್ನು, ಅವರ ಹೃದಯದಸ್ಪಂದನ ತೋರುವುದನ್ನೂ ನಾವಿಲ್ಲಿ ಕಾಣುತ್ತೇವೆ.

ತಂದೆಗೆ ಈ ಮಗುವನ್ನು ಒಪ್ಪಿಸೆಂದು ಮೋದಿನಿ ಹೇಳುತ್ತಾಳೆ.

ಮೋದಿನಿಯು ಸುರಪತಿಯ ಮಾತನ್ನು ಮೀರಬೇಡವೆಂದು ಮೇನಕೆಗೆ ಬುದ್ಧಿ ಹೇಳಿ, ಮಗುವು ಸುಖವಾಗಿ ಬೆಳೆಯಲು ನಮ್ಮ ಕೈಲಾದುದನ್ನೆಲ್ಲಾ ಮಾಡುತ್ತೇವೆ ಎಂದು ಭರವಸೆಯ ಮಾತುಗಳಿಂದ ಮೇನಕೆಯನ್ನು ಸಾಂತ್ವನಗೊಳಿಸುತ್ತಾಳೆ.

ಮುಂದೆ ಮೇನಕೆಯು ಇವರ ಮಾತುಗಳಿಗೆ ಒಪ್ಪಲಾರದೆ ಒಪ್ಪಿ ಮಗುವನ್ನು ಒಪ್ಪಿಸಲು ಮುನಿಯನ್ನು ಅರಸುತ್ತಾ ಗೆಳತಿಯರೊಂದಿಗೆ ತೆರಳುತ್ತಾಳೆ.

ಊರ್ಧ್ವಮುಖನಾಗಿ ನಿಂತು ತಪಸ್ಸನ್ನಾಚರಿಸುತ್ತಿದ್ದ ಮಹರ್ಷಿಯನ್ನು ಕಾಣುತ್ತಾರೆ. ಮೇನಕೆಯನ್ನು ಮತ್ತು ಮಗುವನ್ನು ಕೌಶಿಕನ ಬಳಿ ಕಳುಹಿಸಿ ತಾವುಗಳು ದೂರ ನಿಲ್ಲುತ್ತಾರೆ.

ಮೇನಕೆ ಋಷಿಯ ಬಳಿಗೆ ಬಂದು ನಾನಾ ರೀತಿಯ ನುಡಿಗಳಿಂದ ಆತ ತನ್ನ ಕಡೆ ನೋಡುವಂತೆ ಪ್ರಾರ್ಥಿಸುತ್ತಾಳೆ. ಬಹಳ ಸಮಯದ ನಂತರ ಕಣ್ತೆರೆದ ಮುನಿಯು ಹೊರಟುಹೋಗೆಂದು ನಿಷ್ಠುರದ ನುಡಿಗಳನ್ನಾಡುತ್ತಾನೆ.

ತಾನು ನಿರಪರಾಧಿಯೆಂದೂ, ನಿರ್ಬಂಧವಿರುವುದರಿಂದ ತಾನು ಸುರಲೋಕಕ್ಕೆ ಹೋಗಬೇಕಾಗಿದೆಯೆಂದೂ, ಸ್ವಾತಂತ್ರ್ಯವಿಲ್ಲದ ಆಶ್ರಿತೆಯು ತಾನೆಂದೂ, ಮಗುವನ್ನು ತಾವಿಬ್ಬರೂ ಬಿಟ್ಟರೆ ಅನಾಥ ಶಿಶುವಾಗಿ ಲೋಕ ಜರಿಯುವುದೆಂದೂ ಮೇನಕೆ ಹೇಳುತ್ತಾಳೆ.

ಅನಾಥ ರಕ್ಷಕನು ಎಲ್ಲರನ್ನೂ ಸಂರಕ್ಷಿಸುವನೆಂದು ವಿಶ್ವಾಮಿತ್ರ ಹೇಳುತ್ತಾನೆ. ಮಗುವನ್ನು ಕಾಪಾಡಲು ಸಹಾಯಮಾಡಬೇಕೆಂದು ಮೇನಕೆ ಕೇಳಿದಾಗ, ಬಹುಕಾಲದಿಂದಾರ್ಜಿಸಿದ ತಪವೆಲ್ಲ ನಿನ್ನ ತಾಯ್ತನಕ್ಕೆ ಸೂರೆಯಾಯ್ತು, ಅದು ಮಹದನುಗ್ರಹವೆಂದು ತಿಳಿ, ಇದಕಿಂತ ಮಿಗಿಲಾದ ಸಹಾಯ ಯಾವುದು ಎನ್ನುತ್ತಾನೆ.

ಮೇನಕೆ ತನ್ನನ್ನು ರಂಜಿಸಲು ನಿರ್ಮಿಸಿದ, ತನ್ನ ಶಿಶು ಜನಿಸಿದ ಆಶ್ರಮದಲ್ಲಿ ಆ ರಮ್ಯ ತಾಣದಲ್ಲಿ ತಾನು ನೆಲೆಸಲು ಅಪ್ಪಣೆ ಕೇಳುತ್ತಾಳೆ. ಆದರೆ ತನ್ನ ಪುಣ್ಯಾಶ್ರಮವು ಸುರರ ಕ್ರೀಡಾನಿವೇಶನವಾಗಲು ಮುನಿ ಒಪ್ಪುವುದಿಲ್ಲ. ಆದರೂ ನಿನ್ನ ನಿಶ್ಚಯಕ್ಕೆ ನಿನಗಧಿಕಾರವುಂಟೆಂದು ಹೇಳುತ್ತಾನೆ. ಅಲ್ಲಿಯಾದರೂ ನೆಲಸು, ಇಲ್ಲವೆ ಪುಣ್ಯ ತೀರ್ಥಂಗಳಿಂದಲೂ, ಋಷಿಗಳ ಆಶ್ರಮದಿಂದಲೂ ಶಾಂತಿಯ ಆಗರದಂತಿರುವ ಇಲ್ಲಿಯಾದರೂ ನೆಲಸು ಎಂದು ಹೇಳುತ್ತಾನೆ. 'ಸುರರ ಭಯವಿರುವಾಗ ನೀನಾದರೂ ಇಲ್ಲಿ ಹೇಗೆ ಉಳಿಯುತ್ತೀಯೆ?' ಎಂದು ಕೇಳುತ್ತಾರೆ. ತಪದ ಪೂರ್ಣಾಂಶದಿಂದ ಜನಿಸಿರುವ ಶಿಶುವಿಗೆ ಯಾವ ಭಯವೂ ಇಲ್ಲವೆಂದು ಹೇಳಿ, ಸಮಾಧಾನಮಾಡಿ, ನಷ್ಟವಾಗಿರುವ ತನ್ನ ತಪಸ್ಸನ್ನು ಆರ್ಜಿಸಲು ಹೊರಡುವ ಮುಂಚೆ ಮೇನಕೆಗೆ ಶುಭವಾಗಲಿ ಎಂದು ಹರಸಿ ಹೊರಟುಹೋಗುತ್ತಾನೆ.

ಮೇನಕೆಯು ಸುರಲೋಕಕ್ಕೆ ಹೊರಡುವುದೇ ಲೇಸೆಂದು ನಿರ್ಧರಿಸುತ್ತಾಳೆ. ಪತಿಯ, ಗೆಳತಿಯರ ಮತ್ತು ಒಡೆಯನ ನುಡಿಗಳು ಇದೇ ಆಗಿರುತ್ತದೆ.

ತನ್ನ ಗೆಳತಿಯರು ಎರೆದ ಸ್ನೇಹದ ಸುಧೆಯಿಂದ "ಇದಕ್ಕಿಂತ ಹೃತ್ತಾಪಶಮನ ಸಾಧನವುಂಟೆ" ಎಂದಂದುಕೊಂಡು ಗೆಳತಿಯರಿದ್ದೆಡೆಗೆ ಬರುತ್ತಾಳೆ. ಅಲ್ಲಿ ನಡೆದುದೆಲ್ಲವನ್ನು ಹೇಳುತ್ತಾಳೆ. ತಾಯ್ತನದ ಹಂಬಲವನ್ನು ತೋಡಿಕೊಳ್ಳುತ್ತಾಳೆ. ಶಿಶುವನ್ನು ಯಾರ ಕೈಯಲ್ಲಿಟ್ಟು ಹೋಗಬೇಕೆಂಬ ಪ್ರಶ್ನೆ ಮುಂದಾಗಿ ಅಧೀರಳಾಗುತ್ತಾಳೆ. ಸುತ್ತಲೂ ಆಶ್ರಮಗಳೂ ಋಷಿವರ್ಯರೂ ಇರುವರೆಂದೂ ಹೇಳಿದ್ದರೂ ಯಾರೂ ಕಾಣುವುದಿಲ್ಲ.

> "....ಅಗಲಿಕೆಯ ದುಃಖದಾವೇಶವನು
> ಎಂತು ಸಹಿಸುವೆನಮ್ಮ? ತಡೆವೆ ನಾನೆಂತಿದನು
> ಮಾತೃದೇವಿಯ ಪದಪೀಠ ಮಹೋನ್ನತ"

–ಎಂದು ಮೇನಕೆ ಹೇಳುತ್ತಾಳೆ. ಭಾರತದ ಪುಣ್ಯಭೂಮಿಯಲ್ಲಿ ಹುಟ್ಟಿ, ಅದರದೇ ಗುಣವನ್ನು ಹೊತ್ತು, ಮಾತೆಯಾಗಲು ಅನುಭವಿಸುವ ಯಾತನೆ, ಹಾಲೂಡಿ ಪೊರೆಯುವ ಮಾತೆಯರ ವಾತ್ಸಲ್ಯ ಇವುಗಳನ್ನು, ನೋವನರಿಯದೆ ಹೆತ್ತ ಸುರವನಿತೆ

ಯಾವ ತನಗೆ ಹೇಗೆ ತಿಳಿಯಬೇಕೆಂದು ಹಂಬಲಿಸುತ್ತಾಳೆ. ಮಗಳನ್ನು ಪ್ರಕೃತಿ ದೇವಿಯ ಮಡಿಲಲ್ಲಿ ಮಲಗಿಸಿ ಹೊರಡಲು ಉದ್ಯುಕ್ತಳಾಗಿ, ದೈವ ಪ್ರೇರಣೆಯಿಂದ ಯಾರಾದರೂ ಇತ್ತಬಂದು ಮಗುವನ್ನು ಸಲಹುವವರೆಗೂ ಇಲ್ಲಿದ್ದು, ಆ ಶುಭ ಸುದ್ದಿಯನ್ನು ತನಗೆ ಬಂದು ಹೇಳಬೇಕೆಂದು ಸಾನುಮತಿಯನ್ನು ಬೇಡುತ್ತಾಳೆ. ತನ್ನ ಕಷ್ಟ ಕಾರ್ಪಣ್ಯಗಳನ್ನು ಇದುವರೆಗೂ ಮೌನವಾಗಿ ನೋಡುತ್ತಾ ಹರಿಯುತ್ತಲಿದ್ದ ಮಾಲಿನೀ ನದಿಗೆ ಮಗಳನ್ನು ಒಪ್ಪಿಸಲು ನಿರ್ಧರಿಸುತ್ತಾಳೆ. ಕಮಲ ಪತ್ರಗಳನ್ನು ಪುಷ್ಪಗಳನ್ನೂ ತರಿಸಿ ದೇವಿಯನ್ನು ಪ್ರಾರ್ಥಿಸಲುದ್ಯುಕ್ತಳಾಗುತ್ತಾಳೆ.

ಇಲ್ಲಿಂದ ನಾಲ್ಕನೆ ಪ್ರವೇಶ ಪ್ರಾರಂಭ. ಮೇನಕೆ ಮಾಲಿನೀದೇವಿಗೆ ಕುಸುಮಗಳನ್ನರ್ಪಿಸಿ, ಬೇರೆಯವರು ಬಂದು ಮಗುವಿಗೆ ರಕ್ಷಣೆ ಕೊಡುವವರೆಗೂ ಶಿಶುವನ್ನು ನೋಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತಾಳೆ.

ಮಾಲಿನೀ ದೇವಿಯು ಸ್ತ್ರೀರೂಪವಾಂತು ಎದಿರಿಗೆ ಬಂದು ನಿಲ್ಲುತ್ತಾಳೆ. ಮಗುವಿನ ರಕ್ಷಣೆಯ ಭಯ ಬೇಡವೆಂದೂ ತಾನು ನೋಡಿಕೊಳ್ಳುತ್ತೇನೆಂದು ಅಭಯವೀಯುತ್ತಾಳೆ, ಅಗಲಿಕೆಯ ನೋವನ್ನು ಸಹಿಸಬೇಕೆಂದೂ ದೇವಿ ಹೇಳುತ್ತಾಳೆ.

ಮೇನಕೆಯು ಮಗವನ್ನು ತಾವರೆ ಎಲೆಯಲ್ಲಿ ಮಲಗಿಸಿ "ಎಲ್ಲ ದೈವಗಳ ರಕ್ಷಣೆಯು ನಿನಗಿರಲಿ" ಎಂದು ಹಾರೈಸಿ, ಮಾಲಿನೀ ದೇವಿಯ ಅಡಿಗೆರಗಿ ಅಪ್ಪಣೆ ಪಡೆದು, ತುಂಬುಗಂಬನಿಯೊಡನೆ ಮಗಳನ್ನು ಬಿಡಲಾರದೆ ಬಿಟ್ಟು ಹೋದಿನಿಯೊಡನೆ ಹೋಗುತ್ತಾಳೆ. ಈ ದೃಶ್ಯವಂತೂ ಎಂಥವರ ಮನಸ್ಸನ್ನಾದರೂ ಕಲಕಿ ಬಿಡುತ್ತದೆ. ಈ ಪ್ರಕರಣದ ಚಿತ್ರನಿರ್ಮಾಣದಲ್ಲಿ ಕಮಯಿತ್ರಿಯವರ ಕುಂಚ ತುಂಬಾ ಹೃದಯಸ್ಪರ್ಶಿಯಾಗಿ, ಬಣ್ಣ ಬಣ್ಣದ ನೆರುಗಿನಲ್ಲಿ ಮೂಡಿಬಿದೆ. ಭಾರತೀ ಅವರು ಇದೇ ವಿಷಯವನ್ನೇ ಪ್ರಧಾನವಾಗಿರಿಸಿಕೊಂಡು ವಾತ್ಸಲ್ಯದ ತರಂಗ ತರಂಗಗಳನ್ನೇ ಎಬ್ಬಿಸಿ ಸಹೃದಯರ ಹೃದಯ ಮಿಡಿಯುವಂತೆ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ.

ಮುಂದೆ ಕಾಣುವ ನೋಟ ಇನ್ನೂ ಸೊಗಸು. ಉದಯದ ಸಮಯ. ಮಗುವಿನ ರಕ್ಷಣೆಗಾಗಿ ಮಾಲಿನೀದೇವಿ ಯಾರನ್ನೋ ಕರೆಯುವಂತಿದೆ. ಹಕ್ಕಿಗಳ ಬಳಗ ನೀರ್ಕುಡಿಯಲು ನದಿಯ ತೀರಕ್ಕೆ ಬರುತ್ತವೆ. ಜಲಸೇವನೆಗೆ ಬಂದ ಹಕ್ಕಿಗಳಿಗೆ ಮಗುವನ್ನು ಆದಿನ ಸಂಜೆಯವರೆಗೂ ರಕ್ಷಿಸಲು ಮಾಲಿನೀ ದೇವಿ ಅಶರೀರ ವಾಣಿಯಲ್ಲಿ ಹೇಳುತ್ತಾಳೆ.

ಶಕುಂತ ಪಕ್ಷಿಗಳು ಮಗುವನ್ನು ರಕ್ಷಿಸುತ್ತವೆ. ಸಂಜೆಯಾದರೂ ಯಾರೂ ಅತ್ತಕಡೆ ಸುಳಿದಿರುವುದಿಲ್ಲ. ಸಾನುಮತಿ ಶಂಕೆ ಕಾಣುತ್ತಾಳೆ. ಯೋಚನೆಗಳಲ್ಲಿ ಸಾನುಮತಿ ಮುಳುಗಿದ್ದಾಗ ಕಣ್ವಮುನಿಯು ತನ್ನ ಶಿಷ್ಯರೊಡನೆ, ಶ್ಲೋಕಗಳನ್ನು ಪಠಿಸುತ್ತಾ, ಸಂಧ್ಯಾವಿಧಿಗೆ ನದೀ ತೀರಕ್ಕೆ ಬರುವುದನ್ನು ಕಾಣುತ್ತಾಳೆ. ಕಣ್ವರು ತಮ್ಮ ಶಿಷ್ಯರಿಂದ ಮಗುವನಿರುವಿಕೆಯನ್ನು ತಿಳಿಯುತ್ತಾರೆ. ಎಲ್ಲಿಯದು ಈ ಮಗು ಎಂದು ಚಿಂತೆಗೊಳಗಾಗಿದ್ದ ಕಣ್ವರಿಗೆ, ಮಾಲಿನೀ ದೇವಿಯು ಸರರೀರವಾಣಿ ಬಂದು

ಮಗುವಿನ ವೃತ್ತಾಂತವನ್ನೂ, ಶಕುಂತಗಳು ಮಗವನ್ನು ರಕ್ಷಿಸಲು ಪಟ್ಟ ಶ್ರಮವನ್ನೂ ವಿವರಿಸುತ್ತಾಳೆ. ಹಕ್ಕಿಗಳಿಗೆ ದರ್ಶನ ಕೊಟ್ಟು ತನ್ನ ಮಾತನ್ನುಳಿಸಿಕೊಳ್ಳುತ್ತಾಳೆ ಮಾಲಿನೀ ದೇವಿ.

ಕಣ್ವರು ಮೇನಕಾತ್ಮಜೆಯನ್ನೂ, ಕುಶಿಕ ವಂಶಪ್ರಭೆಯನ್ನೂ ರಕ್ಷಿಸಿದ್ದಕ್ಕಾಗಿ ಆ ಹಕ್ಕಿಗಳಿಗೆ ತಮ್ಮ ಕೃತಜ್ಞತೆಯನ್ನು ತೋರಿಸಲೂ ಮತ್ತು ಅವುಗಳ ನೆನಪು ಚಿರ ಕಾಲ ಉಳಿಯಲೂ "ಶಿಶುವಿಗೂ ನಿಮ್ಮದೇ ಹೆಸರಿಟ್ಟು ಕರೆವೆ" ಎಂದು ಹೇಳುತ್ತಾರೆ. ಮಾಲಿನೀ ದೇವಿಗೆ ಒಪ್ಪಿಗೆ ಆಗದೆಂದು ಅರಿತು "ಜನನೀ" ಎಂದು ಕರೆದು ಸನ್ಮಾನಿಸುತ್ತಾರೆ.

ಮಾಲಿನೀ ದೇವಿಯು ವಿಹಂಗಮಗಳ ಕರ್ತವ್ಯಪಾಲನೆ ಮೆಚ್ಚಿ ತನ್ನ ಜಲವೇ ಕ್ಷೀರವಾಗಲಿ ನಿಮಗೆ ಎಂದು ಹಾರೈಸುತ್ತಾಳೆ. ಹೊತ್ತಾಯಿತು, ನೀವಿನ್ನು ಗೂಡುಗಳಿಗೆ ಹೋಗಿ ಎಂದಾಗ, ಕಣ್ವರು ತಮ್ಮಾಶ್ರಮಕ್ಕೆ ಅತಿಥಿಗಳಂತೆ ಬಂದು ಇಂದಿನಿರುಳನ್ನು ಅಲ್ಲಿಯೇ ಕಳೆಯಬೇಕೆಂದು ಬಿನ್ನವಿಸಿಕೊಳ್ಳುತ್ತಾರೆ. ಶಿಷ್ಯ ವಿಭಾವಸುವಿಗೆ ಹಕ್ಕಿಗಳನ್ನು ಆಶ್ರಮಕ್ಕೆ ಕರೆದುಕೊಂಡು ಹೋಗೆಂದು ಹೇಳುತ್ತಾರೆ.

ಸಾನುಮತಿ ಇದನ್ನೆಲ್ಲ ನೋಡುತ್ತಲಿದ್ದು "ಇದೇನು ಸಂಜೆಯೋ ಹರ್ಷ ಮಧುಯುಪ್ಪೋ" ಎಂದು ವಿಸ್ಮಯ ತಾಳುತ್ತಾಳೆ. ತುಂಬು ಮನದಿಂದ, ಇದನ್ನೆಲ್ಲವನು ಅರುಹಲು ಸ್ವರ್ಗಕ್ಕೆ ತೆರಳುತ್ತಾಳೆ.

ಕಣ್ವರು ಈ ದಿನವನ್ನು ಸುದಿನವೆಂದು ಕರೆಯುತ್ತಾರೆ. ಮುಂದಿನಾ ಜನಪದಕೆ ನೀನೆ ಮಹಾತಾಯೆಂದು ಶಿಶುವನ್ನು ಕರೆಯುತ್ತಾರೆ. ತನಗೆ ತಂದೆಯ ಪಟ್ಟವನ್ನು ಕಟ್ಟಿದ ಮಾಲಿನೀ ದೇವಿಗೆ ಧನ್ಯವಾದಗಳನ್ನರ್ಪಿಸಿ, ಉಬ್ಬಿದ ಮನದಿಂದ ಆಶ್ರಮಕ್ಕೆ ನಿರ್ಗಮಿಸುತ್ತಾರೆ.

ಐದನೇ ಪ್ರವೇಶವು ಕಣ್ವ ಮಹರ್ಷಿಗಳ ಆಶ್ರಮದ್ದು. ಎಲ್ಲೆಲ್ಲಿಯೂ ಸಂಭ್ರಮ ಸಂತೋಷಗಳೇ ಕಾಣಬರುತ್ತದೆ. ಕಣ್ವರು ಗೌತಮಿಯನ್ನು ಕರೆದು "ನಿನಗೆ ಅಮೂಲ್ಯ ರತ್ನವನು ತಂದಿಹೆನು, ತೆಗೆದುಕೋ" ಎನ್ನುತ್ತಾರೆ. ಶಿಶುವಿನ ತೇಜಸ್ಸನ್ನೂ, ಪ್ರತಿಭೆಯನ್ನೂ ನೋಡಿ, ಈ ಮಗುವನ್ನು ಎತ್ತಿಕೊಳ್ಳಲು ಹಸ್ತ ಶುದ್ಧಿಯೊಂದೇ ಸಾಲದೆಂದೂ, ಮನಶುದ್ಧಿಯೂ ಬೇಕೆಂದೂ ತಿಳಿದು ಕೈತೊಳೆದು ಬರಲು ಹೋಗುತ್ತಾಳೆ. ಅನಂತರ ಬಂದು ಮಗುವನ್ನು ಎತ್ತಿಕೊಂಡು,

"ತಾಯ ಪದವಿಯು ಎನಗೆ
ಅಪ್ರಯಾಸದಲಾಯ್ತು. ಎನಗೆ ಭಾಗ್ಯವಿಶೇಷ"

—ಎನ್ನುತ್ತಾಳೆ. ಮಗುವಿನ ಹೆಸರೇನೆಂದು ಗೌತಮಿ ಕೇಳಿದಾಗ, ಶಕುಂತಳೆ ಯೆಂದು ಹೇಳಿ ಆ ಹೆಸರು ಬರಲು ಕಾರಣವಾದ ಕಾರುಣ್ಯಪೂರ್ಣ ಕಥೆಯನ್ನು ಕಣ್ವರರುಹುತ್ತಾರೆ. ತೊಟ್ಟಿಲ ಯೋಚನೆಯನ್ನು ಗೌತಮೀ ಪಟ್ಟಾಗ ಸಂಕಲ್ಪ ಮಾತ್ರದಿಂದ ತೊಟ್ಟಿಲನ್ನು ನಭದಿಂದ ತರಿಸುತ್ತಾರೆ. ಇದನ್ನು ಕಂಡ ಎಲ್ಲರೂ

ಆಶ್ಚರ್ಯದಲ್ಲಿ ಮುಳುಗುತ್ತಾರೆ. ಶಕ್ರನು ಶರ್ವರೀ ಧೇನುವನ್ನು ಮಗುವಿನ ಪೋಷಣೆಗೆ ಕಳುಹಿಸುತ್ತಾನೆ.

ಎಲ್ಲರೂ ಶರ್ವರಿಯನ್ನು ಪೂಜಿಸುತ್ತಾರೆ. ಮಗುವಿನ ಮತ್ತು ಶರ್ವರಿಯ ಲಾಲನೆ ಪಾಲನೆಯನ್ನು ಗೌತಮೀ ಮತ್ತು ಶಿಷ್ಯರು ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ.

ಗೌತಮಿಯು ಮಗುವಿನ ಜನ್ಮವೃತ್ತಾಂತವನ್ನು ತಿಳಿಯಬಯಸುತ್ತಾಳೆ. ಬ್ರಹ್ಮರ್ಷಿಪದಕ್ಕಾಗಿ ವಿಶ್ವಾಮಿತ್ರಮುನಿ ಮಾಡಿದ ಉಗ್ರ ತಪಸ್ಸು, ಇದರಿಂದ ಭಯಗೊಂಡ ಸುರರ ಉಪಾಯ, ಮೇನಕೆಯ ಪ್ರವೇಶ, ಮುನಿಯ ಚಿತ್ತ ಚಂಚಲ, ಮೇನಕಯಲ್ಲಿ ಅನುರಾಗದ ಅಂಕುರ, ಹತ್ತು ವರ್ಷ ದಾಂಪತ್ಯ. ಅದರ ಫಲ ಈ ಶಿಶು ಎಂದು ಗೌತಮರು ಸಂಕ್ಷೇಪವಾಗಿ ಶಕುಂತಳೆಯ ಜನ್ಮವೃತ್ತಾಂತವನ್ನು ತಿಳಿಸುತ್ತಾರೆ.

ಕೌಶಿಕರ ತಪೋಧನವಷ್ಟು ಈ ಶಕುಂತಳೆಯ ಲಾಭಕ್ಕೆ ಮೂಲವೆಂದು ಮುನಿವರ್ಯರು ಹೇಳುತ್ತಾರೆ. ಶಿಶುವಿನ ಜನನ ಮತ್ತು ಮುನಿಯ ಜ್ಞಾನೋದಯ ಏಕಕಾಲದಲ್ಲಿ ಸಂಭವಿಸಿತೆಂದು ಹೇಳುತ್ತಾರೆ. ತಾಯಿ ಮಗುವನ್ನು ಬಿಟ್ಟು ಹೋಗಲು ಪಟ್ಟ ದುಃಖ, ತಂದೆಯ ಅಚಲ ನಿರ್ಧಾರ, ಪುಣ್ಯವತಿ ಮಾಲಿನಿಯು ಮತ್ತು ಪಕ್ಷಿ ಸಂಕುಲವು ಮಗುವಿಗೆ ಇತ್ತ ವಾತ್ಸಲ್ಯಪೂರ್ಣ ರಕ್ಷೆ, ಇವುಗಳೆಲ್ಲವನ್ನೂ ಸಾಂಗವಾಗಿ ವಿವರಿಸುತ್ತಾರೆ.

ಇಷ್ಟೆಲ್ಲ ಕಾರ್ಯ ಕಾರಣಗಳು ಪರಮಾತ್ಮನ ಚೈತನ್ಯಲೀಲಾ ವಿನೋದವೆಂದು ಕಣ್ವರು ಹೇಳುತ್ತಾರೆ. ಮುಂದೆ ಭಗವಂತನು ನಡೆಸಬೇಕೆಂದಿರುವ ಲೀಲಾ ನಾಟಕಕ್ಕೆ ನಾಂದಿ ಎನ್ನುತ್ತಾರೆ.

"ಪೂರ್ವ ಸಿದ್ಧತೆಯಾಗಿ ಆ ನಿರ್ಣಯದಂತೆ
ಬದ್ಧಾನುಸರಣೆಯಲಿ ಜಗವೆಲ್ಲ ವರ್ತಿಪುದು"

–ಎಂದು ಹೇಳುತ್ತಾರೆ.

ಭಗವಂತನ ಈ ಲೀಲಾನಾಟಕಕ್ಕೆ ಮಾನವರಂತೆ ಅನಿಮಿಷರೂ ಬಾಧ್ಯರೆಂದು ಶಿಷ್ಯರು ಹೇಳಿದಾಗ, ಗೌತಮರು–

"ದೇವ ಮಾನವರ ಸುಖದುಃಖಸಮ್ಮಿಳಿತದ
ಸೌಹಾರ್ದ ಭಾವದಲೆ ಎಲ್ಲ ಮಹಿಮೆಗಳೂ
ವಿಸ್ತಾರ ವಾಗುವುವು"

–ಎನ್ನುತ್ತಾರೆ. ಹಿಂದಿನ ಯುಗದಲ್ಲಿ ದೇವರನ್ನೊಲಿಸಿಕೊಳ್ಳಲು ಯಜ್ಞಯಾಗದಿಗಳ ಅಗತ್ಯವಿತ್ತು. ಈಗ ಅದಿಲ್ಲ. ಆದರೂ ದೇವತೆಗಳು ಪ್ರಸನ್ನರಾಗಿ ಈ ಪ್ರಪಂಚವನ್ನು ಸುಖವಾಗಿಟ್ಟಿರಬೇಕು. ಇಂದ್ರನೂ ಕೂಡ ಭೂಮಿಗೆ ಬಂದು ತಪಸ್ಸನ್ನಾಚರಿಸಿ, ದಿವ್ಯ ಪದವಿ ಪಡೆದವನೆ.

ಈ ಪುಣ್ಯಭೂಮಿಯ ಭವಿಷ್ಯೋನ್ನತಿಯ ಸಂಕೇತ ಈ ಶಕುಂತಳೆ. ಈ ಮಹದಾನಂದ ಸಮಯದಲ್ಲಿ, ದೇವರನ್ನು ಪ್ರಾರ್ಥಿಸಿ, ಸರ್ವ ಜೀವರ ಶುಭವನ್ನು ಕೋರೋಣ ಬನ್ನಿರೆಂದು ಕಣ್ವ ಮಹರ್ಷಿಗಳು ಶಿಷ್ಯರನ್ನು ಕರೆಯುತ್ತಾರೆ. ದೈವ ಪ್ರಾರ್ಥನೆಯೊಂದಿಗೆ ಈ ಭವ್ಯ ನಾಟಕವು ಮುಕ್ತಾಯವಾಗುತ್ತದೆ.

ಮಾ|| ಶ್ರೀ|| ಭಾರತಿ ಅವರು-ಈ ಕಥಾವಸ್ತುವನ್ನಾರಿಸಿಕೊಂಡು, ಆ ವಸ್ತುವಿನ ಒಂದು ಎಳೆ ತೆಗೆದು, ಭಾವನೆಗಳ ಎರಕಹೊಯ್ದು ಈ ಅಪೂರ್ವ ಕೃತಿಯನ್ನು ನಿರ್ಮಿಸಿ, ತಮ್ಮದೇ ಆದ ಸ್ಥಾನವನ್ನುಳಿಸಿಕೊಂಡು ಬಂದಿರುವ ಶ್ರೀ ತಿರುಮಲೆ ತಾತಾಚಾರ್ಯರ ಧರ್ಮಪತ್ನಿ ಶ್ರೀಮತಿ ತಿರುಮಲೆ ರಾಜಮ್ಮನವರು-ಬರಹ ಬಲ್ಲವರಲ್ಲಿ ಚಿರಪರಿಚಿತರಾಗಿದ್ದಾರೆ. ಮೇನಕೆ ಮಗುವನ್ನು ತ್ಯಜಿಸಿ ಸುರಲೋಕಕ್ಕೆ ಹೋದ ಸಂದರ್ಭ 'ಭಾರತಿ' ಅವರ ಭಾವನೆಗಳಿಗೆ ಚೈತನ್ಯ ನೀಡಿ ಅದಕ್ಕೆ ಹೊಸ ತಿರುವು ಬರುವಂತೆ ಮಾಡಿದೆ. ಎಂಥ ತಾಯಿಯೇ ಆಗಲಿ ಮಗುವನ್ನು ದುಃಖವಿಲ್ಲದೆ ತ್ಯಜಿಸಿದಳೆಂಬುದು ಕವಯಿತ್ರಿ ಭಾರತಿ ಅವರಿಗೆ ಒಪ್ಪದ ಮಾತಾಯಿತು. ಆ ಒಪ್ಪದ ಮಾತಿನಿಂದಲೇ ಈ ರೂಪಕ ನಿರ್ಮಾಣವಾಗಿದೆ. ಪತಿ ಭಕ್ತಿ, ದೈವಭಕ್ತಿ, ಪ್ರೀತಿ, ಪ್ರೇಮ ಮುಂತಾದ ಭಾವನೆಗಳು ತರಂಗವಾಗೆಬ್ಬಿಸುತ್ತದೆ. ಈ 'ವಾತ್ಸಲ್ಯ ತರಂಗ ಲೀಲಾ' ನಾಟಕದಲ್ಲಿ ಇವುಗಳೆಲ್ಲಾ ಮಡುಗಟ್ಟಿನಿಂತು ಪ್ರೇಕ್ಷಕರನ್ನು ತಣಿಸುತ್ತದೆ. "ಭಾಸ್ಕರನು ಕಾಣದ್ದನ್ನು ಭಾರತಿ ಕಂಡರು" ಎಂಬ ನುಡಿ ಈ ನಾಟಕದಲ್ಲಿ ತನ್ನ ಸಾರ್ಥಕತೆಯನ್ನು ಪಡೆದಿದೆ. ಪಾತ್ರಗಳ ನಿರ್ಮಾಣ, ಭಾವನೆಗಳನ್ನು ತುಂಬುವುದರಲ್ಲಿ ಕವಯಿತ್ರಿ ಸಫಲರಾಗಿದ್ದಾರೆಂದು ಧಾರಾಳವಾಗಿ ಹೇಳಬಹುದು. ★

ಸೋದರಿ ತಿರುಮಲೆ ರಾಜಮ್ಮನವರಿಂದ ರಚಿತವಾದ 'ಮಹಾಸತಿ' ನಾಟಕವು, ಸ್ವಾರಸ್ಯವಾಗಿಯೂ, ಕಲಾತ್ಮಕವಾಗಿಯೂ, ಬೋಧಪ್ರದವಾಗಿಯೂ ಇದೆ. ನಾನು ಅದನ್ನು ಓದಿ ಆನಂದಿಸಿದೆ. ಶ್ರೀಮತಿಯವರು 'ತಪಸ್ವಿನಿ' ಎಂಬ ನಾಟಕವನ್ನೂ, 'ಮಹಾಸತಿ' ಎಂಬ ನಾಟಕವನ್ನೂ ಬರೆದು ಕನ್ನಡಿಗರಿಗೆ ಮಹೋಪಕಾರ ಮಾಡಿದ್ದಾರೆ ಎಂದು ಸೂಚಿಸಲು ಅತ್ಯಂತವಾಗಿ ಹರ್ಷಿಸುತ್ತೇನೆ. ಇವೆರಡು ನಾಟಕಗಳೂ ಕನ್ನಡ ಸಾಹಿತ್ಯದಲ್ಲಿ ಶಾಶ್ವತವಾಗಿ ಬೆಳಗುವುದರಲ್ಲಿ ಸಂದೇಹವಿಲ್ಲ.

—ಸಿ. ಕೆ. ವೆಂಕಟರಾಮಯ್ಯ

(ತಾ|| ೬–೯–೧೯೬೭ ರಂದು ಶ್ರೀ ಶರ್ಮ ಅವರಿಗೆ ಬರೆದ ಪತ್ರದಿಂದ)

ರಾಷ್ಟ್ರಭಕ್ತಿ ಗೀತೆಗಳು

● ಸರೋಜ ನಾರಾಯಣರಾವ್

ಶ್ರೀಮತಿ ಭಾರತಿಯವರ ಕೃತಿಗಳಲ್ಲಿ 'ರಾಷ್ಟ್ರಭಕ್ತಿ' ಎಂಬ ದೇಶಭಕ್ತಿ ಗೀತೆಗಳ ಕಿರು ಸಂಕಲನವೂ ಒಂದು. 'ಒಂದೆಳೆಯ ಈ ಹಾರದಲ್ಲಿ ಕೂಡಿರುವ ರಾಷ್ಟ್ರ ಗೀತಾ ಕುಸುಮಗಳು' ಹೃದಯದಾಳದಿಂದ ತಾವಾಗಿ ಅರಳಿ ಬಂದ ಪುಷ್ಪಗಳೇ ಸರಿ. ಸಂಗೀತ ಸಾಹಿತ್ಯಗಳಲ್ಲಿ ಸಮಾನ ಪಾಂಡಿತ್ಯವುಳ್ಳ ಭಾರತಿಯವರ ಗೀತೆಗಳ ಸಾಲುಸಾಲಿನಲ್ಲಿ ದೇಶಭಕ್ತಿ ಮೂಡಿ ನಿಂತಿದೆ.

ಹಾಡು–ಅದು ರಾಗಿ ಬೀಸುವ ಪದವಾಗಲಿ, ಪಾಂಡಿತ್ಯ ಪೂರ್ಣವಾದ ಕೀರ್ತನೆ ಯಾಗಲೀ, ಜೋಗುಳವೇ ಆಗಲಿ ಹಾಡುವವರಿಗೆ, ಕೇಳುವವರಿಗೆ, ಅಲ್ಲದೆ ಆ ಹಾಡಿನ ಕರ್ತೃವಿಗೂ ವಿಶಿಷ್ಟವಾದ ಅನುಭವವನ್ನು ನೀಡುತ್ತದೆ. ಬೇರೆ ಬೇರೆ ರಾಗಗಳು ಬೇರೆ ಬೇರೆ ಭಾವಗಳನ್ನು ಸ್ಫುರಿಸುವ ಹಾಗೆ ಒಂದೊಂದು ರಚನೆಗೂ ಒಂದೊಂದು ಭಾವವನ್ನು ಕೆರಳಿಸುವ ಶಕ್ತಿಯುಂಟು. ಭಕ್ತಿ, ಪ್ರೇಮ, ವೈರಾಗ್ಯಗಳಂತೆ ಸಮಯ ಸ್ಫೂರ್ತಿಯಿಂದ, ಎದೆಯಾಳದಿಂದ ಹೊಮ್ಮುವ ದೇಶಭಕ್ತಿಗೀತೆಗಳಿಗೆ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸುವ ಚೈತನ್ಯವಿರುತ್ತದೆ. ಬಳಲಿದ ಮನವನ್ನು ಇಂಪಾದ ಸಂಗೀತ ಮುದಗೊಳಿಸಬಲ್ಲುದು.

ಜೀವನದಲ್ಲಿ ಸಂಗೀತದ ಪ್ರಭಾವ ಹಿರಿದು. ಹುಟ್ಟಿನಿಂದಲೇ ತಾಯಿಯ ಜೋಗುಳದಿಂದ ಪ್ರಾರಂಭವಾಗುತ್ತದೆ. ಬೆಳೆಯುತ್ತ ಬಂದಂತೆ ಪರಿಸರಕ್ಕೆ ಅನು ಗುಣವಾಗಿ ಸಂಗೀತ ನಮ್ಮ ಮೇಲೆ ಪ್ರಭಾವ ಬೀರುತ್ತಲೇ ಇರುತ್ತದೆ. ಸೂಕ್ತ ರಾಗ, ಭಾವ, ತಾಳಗಳಿಂದ ಹಾಡುವ ದೇಶಭಕ್ತಿ ಗೀತೆಗಳಿಗೆ ಜನಮನ ಹುರಿದುಂಬಿಸುವ, ಸ್ಫೂರ್ತಿ ನೀಡುವ ಶಕ್ತಿಯುಂಟು.

ಭಾರತಿಯವರದು ಪರಿಪಕ್ವವಾದ ಅನುಭವ, ಸುಲಭಶೈಲಿ, ಯಾರೂ ಹಾಡಿ ಕೊಳ್ಳಬಹುದಾದಂತಹ ತಾಳಬದ್ಧವಾದ ರಚನೆ. ಉದಾಹರಣೆಗೆ:

ಜೈ ಭಾರತ ಭುವಿಗೇ ಮಾತೆಗೆ ಜೈ ಪಾವನ ಮೂರ್ತಿಗೆ
ಸನ್ಮಂಗಳವಾಗಲಿ ಸತತಂ
ದೇವ ಧರ್ಮಾವತಾರ ಗೋ ವಿಪ್ರ ಹಿತವಿಚಾರ
ಪಾವನ ಮಹಿಮಾಕೃತಿಗೆ॥

ಅಹಮದಾಬಾದ್ ಕಾಂಗ್ರೆಸ್ಸಿಗೆ ಹೋದಾಗ ರಚಿಸಿ, ಮಹಾತ್ಮರು ಕರ್ನಾಟಕ ಪ್ರಾಂತ್ಯಕ್ಕೆ ಬಂದು ಸಭೆ ನಡೆಸಿದಾಗ ಹಾಡಿದುದಾಗಿ ತಿಳಿಸಿರುವ ಈ ಗೀತೆ ಸರಳ ಸುಂದರ ಶೈಲಿಯಲ್ಲಿದ್ದು ಜನಪ್ರಿಯವಾಗಿದೆ.

"ನಮ್ಮದೀ ಭಾರತವು" ಎಂಬ ಗೀತೆ ೧೯೨೦ನೇ ವರ್ಷದಲ್ಲಿ ಮೊಟ್ಟಮೊದಲು ಮಹಾತ್ಮರನ್ನು ಮದ್ರಾಸಿನ ಸಮುದ್ರ ತೀರದ ಮಹಾ ಸಭೆಯಲ್ಲಿ ಕಂಡು, ಆ ಪರಿಣಾಮವಾಗಿ ಮಾರನೆ ದಿನ ರಚಿಸಿದ ಮೊದಲ ಕೃತಿ. ಇದರಲ್ಲಿ ಬರುವ ಈ ಸಾಲುಗಳನ್ನು ಇಂದಿಗೂ ನಾವೆಲ್ಲ ಮನನ ಮಾಡಬೇಕಾಗಿದೆ.

ಪರಕೀಯ ಸಂಸ್ಕೃತಿಗೆ ಶರಣಾಗುತ ನಾವು
ಇರವೆಲ್ಲ ಸ್ವಾರ್ಥದಾ ನರಕವಾಗಿಪುದೇ
ಭಾರತೀಯರು ನಾವು ನಮ್ಮದೀ ಭಾರತವು
ಧರೆಗಾಗಿ ಜೀವಿಸುವ ಧರೆಗಾಗಿ ಮಡಿವ॥

ಈ ಕೃತಿಗಳು ರೂಪುಗೊಂಡ ಕಾಲವನ್ನು ಗಮನಿಸಿದಾಗ ಅದರ ಹಿನ್ನೆಲೆ ಸ್ಪಷ್ಟವಾಗುತ್ತದೆ. ಗಾಂಧೀಜಿಯವರೆ ಹೇಳಿರುವಂತೆ, ಅವರು ಸ್ತ್ರೀಯನ್ನು ಸೇವೆ ಮತ್ತು ತ್ಯಾಗದ ಪ್ರತೀಕವೆಂದು ತಿಳಿದು ಪೂಜಿಸುತ್ತಿದ್ದರು. ಗಾಂಧೀಜಿಯವರ ತಾಯಿ, ಮಗನ ಮೇಲೆ ಬೀರಿದ್ದ ಪ್ರಭಾವ ಅಗಾಧವಾದುದು. ತಮ್ಮ ಮಗ ವಿದೇಶಕ್ಕೆ ಹೊರಡುವ ಮುನ್ನ ಅವರಿಂದ ಪಡೆದ ಒಂದು ವಚನವು, ಗಾಂಧೀಜಿಯವರಿಗೆ ದಾರಿದೀಪವಾಯಿತು. ಗಾಂಧೀಜಿಯವರು ಇನ್ನೂ ಸಣ್ಣ ವಯಸ್ಸಿನವರಾಗಿದ್ದಾಗ ಅವರ ಕೆಲಸದಾಕೆ ರಂಭಾ, ಅವರಿಗೆ ರಾಮನಾಮವು ಸಂಕಷ್ಟಗಳನ್ನು ದೂರ ಮಾಡುವ ತಾರಕನಾಮವೆಂದು ತಿಳಿಸಿ, ಮುಗ್ಧ ಮನಸ್ಸಿನಲ್ಲಿ ನಂಬಿಕೆಯ ಬೀಜವನ್ನು ನೆಟ್ಟಳು. ಮುಂದೆ ಅದು ಕವಲೊಡೆದು ಹೆಮ್ಮರವಾಗುವುದೆಂದು ಆ ಅಬೋಧ ಹೆಣ್ಣಿಗೆ ತಿಳಿದಿರಲಿಕ್ಕಿಲ್ಲ. ಗಾಂಧೀಜಿ, ಪತ್ನಿ ಕಸ್ತೂರಿಬಾ ಅವರ ಬಗ್ಗೆ ಹೇಳುತ್ತ, "ಸತ್ಯಾಗ್ರಹದ ಮಹಿಮೆ"ಯನ್ನು ತಮಗೆ ತಿಳಿಸಿಕೊಟ್ಟವರೇ ಅವರೆಂದು ಹೇಳುತ್ತಾರೆ. ಅವರು ೧೯೧೫ರಲ್ಲಿ ಭಾರತಕ್ಕೆ ಹಿಂತಿರುಗಿದಾಗಿನಿಂದ ಮಹಿಳೆಯರ ಕಲ್ಯಾಣಕ್ಕಾಗಿ ಶ್ರಮಿಸಿದುದಲ್ಲದೆ, ಮಹಿಳೆಯರನ್ನೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಕರೆ ಇತ್ತರು. ಇಂತಹ ಮಹಾತ್ಮರ ಪ್ರಭಾವಕ್ಕೆ ಒಳಗಾದ ಶ್ರೀಮತಿ ಭಾರತಿಯವರ ಗೀತೆಗಳಲ್ಲಿ ದೇಶಭಕ್ತಿ ತಾನೇ ತಾನಾಗಿ ಮೆರೆದಿದೆ.

೧೯೨೨ರಲ್ಲಿ ಮಹಾತ್ಮ ಗಾಂಧಿಯವರನ್ನು ಬಂಧಿಸಿ ಆರು ವರ್ಷಗಳ ಶಿಕ್ಷೆ ವಿಧಿಸಲಾಗಿತ್ತು. ಭಾರತ ಜನಾಂಗವೆಲ್ಲ ರೋಷ, ದುಃಖಾತಿರೇಕದಿಂದ ಕುದಿದ ಸಮ

ಯುವದು. ಆಗ ಮಹಾತ್ಮರು ತಮ್ಮ ಸಂದೇಶದಲ್ಲಿ ಪಂಚ ವ್ರತಗಳನ್ನು ಸಾರಿದರು. ಆ ಬೋಧಸರಣಿಯನ್ನೊಳಗೊಂಡ ಹಾಡು :

"… ಪರಮಾದರದಲಿ ಧರಿಸುತೆ ಖಾದಿಯ
ಪರಮೋತ್ತಮ ದೇಶೀಯ ವಸ್ತ್ರವ,
ಭಾರತ ಭೂಮಿಯಲಿ ದಾರಿದ್ರ್ಯಕ್ಕೆ ಬರೆ ಕಾರಣವೀ ಸುರಾಪಾನವೆಂದು,
ಕ್ರೂರತನವ ಧರ್ಮ ಹಾನಿ ಮೂಲವೆಂದು ಸಾರುತೆ ಭರದಿ
ಅಹಿಂಸಾ ಮಾರ್ಗದಿ
ಅರಿಗಳನಾದರು ಜರಿಯದೆ ಸರ್ವರು ಸರಿಸಮರೆನ್ನುತೆ ಹರಿಜನರ
ಕರುಣಿಸಿ ಪ್ರೀತಿಸಿ ಭೇದವ ತೊರೆಯುತೆ ತ್ವರಿತದಿ ಶಾಂತಿಯ ನೆಲೆಗೊಳಿಸುತಲಿ …"

—ಹೀಗೆ ಈ ಸಂಕಲನದ ಗೀತೆಗಳಿಗೆಲ್ಲ ವಿಶಿಷ್ಟವಾದ ಹಿನ್ನೆಲೆ ಇದ್ದು, ಈ ಕೃತಿಗಳು ಉಜ್ವಲ ರಾಷ್ಟ್ರ ಭಕ್ತಿಯ ಪ್ರತೀಕವಾಗಿವೆ. ಈ ಕಿರು ಹೊತ್ತಿಗೆಯ ಮುನ್ನುಡಿಯಲ್ಲಿ ಹೇಳಿರುವಂತೆ ಅಡಿಗೆ ಮಾಡಿದವರ ಅಂತಿಮ ಆಸೆ ಊಟ ಬಡಿಸುವುದು. ಬರೆದವರ ಬರಹ ಹೆಚ್ಚು ಹೆಚ್ಚು ಓದುಗರ ಕೈ ಸೇರಿದಾಗಲೇ ಅದರ ಸಾರ್ಥಕತೆ. ತಾಯಿ ಭಾರತಿಯವರ ಎಲ್ಲ ಗೀತೆಗಳು ಪ್ರಕಟವಾಗಿ ಮನೆಮನೆಯಲ್ಲಿ ಮೊಳಗುವಂತಾಗಲಿ. ★

ರವಿಗ—ಕುಲದ ಗೌರವಕೇನು ಕುಂದಿಲ್ಲದಂತೆ ನೀ ಬಾಳ್ವ ಪರಿನಾ ಪೇಳ್ವೆ ; ಅದನೆಯಾಚರಿಸು. ಈ ರೂಢಿ ಮೆಚ್ಚಿ, ಜನಭೀತಿ ಕಾರಣವಾಗೆ, ನಿನ್ನ ಜೀವನ ಅನ್ಯರಿಚ್ಛೆಗೆ ಅಧೀನವೇ ? ನಿನ್ನ ಜೀವಕೆ ನೀನೆ ಅಧಿಕಾರಿ, ಈ ಜನ್ಮ ಇರುವನಕ, ಜಗದ ಸಂಬಂಧವನು ತಾಳಿ, ಬಾಳಿ, ಕೊನೆಗಾಣುವುದೆ ಜನ್ಮದೊಂದುದ್ದೇಶ. ಉದ್ದೇಶ ಭಂಗದಲಿ ಕುಲ ಕೀರ್ತಿ ಬೆಳೆವುದೇ ?

(' ಮಹಾಸತಿ 'ಯಿಂದ)

ವ್ಯಕ್ತಿ ಚಿತ್ರಣ: ಸಮ್ಮೋಹಕ ಶೈಲಿ

● ಬಿ. ಗೋ. ರಮೇಶ್

ತನಗೆ ಮೆಚ್ಚುಗೆಯಾದ, ಗೌರವಕ್ಕೆ ಪಾತ್ರನಾದ ವ್ಯಕ್ತಿಯನ್ನು, ಹಿರಿಯನನ್ನು ತನ್ನ ಅನುಭವಗಳ ಮೂಲಕ ಪರಿಚಯಿಸಿಕೊಡುವ ಕಲೆ ಸಾಮಾನ್ಯವೆನ್ನಲಾಗುವುದಿಲ್ಲ. ಅದಕ್ಕೆ ಹೃದಯವಂತಿಕೆ, ಪೂಜ್ಯತೆ ಇರಬೇಕು. ಬರಿ ಹೊಗಳಿ ಬರೆಯುವುದಲ್ಲ, ಪ್ರಾಮಾಣಿಕತೆಯ ಬರಹವಾಗಬೇಕು. ಹೀಗೆ ಬರೆಯಲಾಗಿರುವ ವ್ಯಕ್ತಿಚಿತ್ರಗಳು ಭಾರತಿಯವರದು. ಪುಸ್ತಕ ರೂಪದಲ್ಲಿ ಅವರ ಎರಡು ವ್ಯಕ್ತಿಚಿತ್ರಗಳು, ರಚನೆಗಳು ಬಹಳ ಹಿಂದೆಯೇ ಹೊರಬಂದಿವೆ.

ಭಾರತಿ ಅವರು ವ್ಯಕ್ತಿಗಳ ಬಗ್ಗೆ ಹೇಳುವಾಗ ಆ ವ್ಯಕ್ತಿಗಳ ದೇಶ, ಕಾಲ, ಸಂಸ್ಕೃತಿ, ನಾಗರಿಕತೆ ಇವುಗಳನ್ನು ಮರೆಯದೆ ಹೇಳುವರು. ಲೇಖಕಿಯರು ಕೈಲಾಸಂ ಹಾಗೂ ಮೈಸೂರಿನ ಸಂಗೀತಕ್ಕೆ ಸ್ಥಾನಮಾನಗಳನ್ನು ಕೊಡಿಸಿದ ವೀಣೆ ಶೇಷಣ್ಣ ನವರನ್ನು ಕುರಿತು ವ್ಯಕ್ತಿಚಿತ್ರಗಳನ್ನು ಬರೆದಿದ್ದಾರೆ. ಹಾಗೆ ಕುರಿತು ಹೇಳುವುದರಲ್ಲಿ ಸೊಗಸಿದೆ. ಅರ್ಥಗರ್ಭಿತ ಪದಗಳೂ, ಭಾವಪೂರ್ಣವಾಕ್ಯಗಳಿಂದ, ಹೇಳುವ ಸರಳತೆ ಯಿಂದ ಮೂಡಿಬಂದಿರುವ ಚಿತ್ರ, ಅವರಲ್ಲಿ ಲೇಖಕಿಗಿದ್ದ ಪೂಜ್ಯಭಾವನೆ, ಸದ್ಗುಣಗಳ ಒಲವು ಇವುಗಳನ್ನು ಎತ್ತಿತೋರಿಸುತ್ತದೆ. ಇತರರಿಗೆ ನೋವು ಉಂಟುಮಾಡಿ ಬರೆಯುವ ಜಾಡು ಇವರದಲ್ಲ. ತೀರ ಹೊಗಳಿ ಅಟ್ಟಕ್ಕೇರಿಸಿ ಎಲ್ಲೋ ಒಂದು ಕಡೆ ವಿಪರ್ಯಾಸಕ್ಕೆ ಗುರಿಮಾಡಿಕೊಳ್ಳುವಂತಹ ಅಪ್ರಾಮಾಣಿಕ ಬರಹವೂ ಅಲ್ಲ. ಯಾವುದನ್ನು ಹೇಳಬೇಕೋ, ಯಾವ ಗುಣಗಳನ್ನೆತ್ತಿ ತೋರಿಸುವಾಗ ಎಷ್ಟು ಮುಖ್ಯ ನಿದರ್ಶನ ಕೊಡಬೇಕೋ ಅಷ್ಟನ್ನು ಕೊಟ್ಟು, ತಾವು ಏಕೆ ಹಾಗೆ ಹೇಳಬೇಕಾಗಿದೆ ಎಂಬುದರ ಪ್ರತಿಪಾದನೆಯಿಂದ ಆ ವ್ಯಕ್ತಿಚಿತ್ರಗಳನ್ನು ಪೂರ್ತಿಗೊಳಸುತ್ತಾರೆ. ಶೇಷಣ್ಣ ನವರ ವಿಷಯ ಬಂದಾಗ ಅವರ ಕಲಾ ಪ್ರತಿಭೆಯನ್ನು ಗುರುತಿಸುವುದು ಮುಖ್ಯ ಹೌದು. ಆದರೂ ಬೇರೆಯವರು ಬೇಸ್ತುಬಿದ್ದಾಗ ಶೇಷಣ್ಣನವರು ನಡೆದುಕೊಂಡು

ಬಿಂಪ ರೀತಿಯನ್ನು ಗುರ್ತಿಸುವುದೂ ಒಂದು ವಿಶೇಷ. ಒಮ್ಮೆ ಶೇಷಣ್ಣನವರಿಗೆ ಪಲ್ಲಕ್ಕಿ ಮೆರವಣಿಗೆ ಎಂಪರಂತೆ. ಆಗ ಶೇಷಣ್ಣನವರು "ಇದು ದೇವರಿಗೆ, ಗುರು ಪೀಠಕ್ಕೆ ಸಲ್ಲತಕ್ಕ ಮರ್ಯಾದೆ. ನನ್ನಂಥವರಿಗಲ್ಲ" ಎಂದರಂತೆ. ಅಲ್ಲದೆ ಆ ಪುರಸ್ಕಾರವನ್ನು ವ್ಯಾಸರಾಯಸ್ವಾಮಿಗಳಿಗೆ ಅರ್ಪಿಸಿದರಂತೆ. ಆಗ ಲೇಖಕಿಯರು ಶೇಷಣ್ಣನವರ ಗೌರವ ಹೆಚ್ಚುತ್ತ ಹೋದುದು ಹೀಗೆ ಎಂದು, ಅವರ ಹೃದಯ ನಾದ ವಿಶ್ವವ್ಯಾಪ್ತಿ ಎನ್ನುತ್ತಾರೆ. ಅದು ಅಷ್ಟೇ ಅರ್ಥಪೂರ್ಣ.

ಇನ್ನು ಶೇಷಣ್ಣನವರ ಖ್ಯಾತಿಯ ಬಗ್ಗೆ ಚಿತ್ರಿಸುತ್ತಾ, "ಶೇಷಣ್ಣನವರ ಸಮಕಾಲೀನರಾಗಿ ಅವರಿಗಿಂತ ಹತ್ತುಪಟ್ಟು ಹೆಚ್ಚಾಗಿ ಸಾಧನೆ ಮಾಡಿದವರಿದ್ದರೂ ಅವರು ಇವರಾಗಿರಲಿಲ್ಲ" ಎನ್ನುವರು. ಈ ರೀತಿ ಬರೆಯುವಾಗ ಇಲ್ಲಿ ತೆಗಳಿಕೆ ಇಲ್ಲ. ಸೂಕ್ಷ್ಮವಾಗಿ ತಿಳಿಸಿ ಬಿಡುವ ಜಾಣ್ಮೆ ಇಲ್ಲಿದೆ. ಅವರು ಸಾಧಿಸಿದ ವಿಜಯ, ಭಕ್ತಿ ವಿಜಯ; ರಾಗ ವಿಜಯ.

"ಹತ್ತು ವೀಣೆಗಳನ್ನು ಏಕಕಾಲದಲ್ಲಿ ಮೀಟಿದಷ್ಟು ನಾದ ಒಂದೇ ವೀಣೆಯಲ್ಲಿ ಒಂದೇ ಬೆರಳಿನ ಒಂದೇ ಮೀಟಿನಲ್ಲಿ. ಒಂದು ಸಲ ಗಾತ್ರ, ಒಂದು ಸಲ ಸೂಕ್ಷ್ಮ; ಒಂದೆಡೆ ತೀವ್ರ, ಒಂದೆಡೆ ಮಂದ, ಅದ್ಭುತ ಪ್ರಯೋಗ ಚಾತುರ್ಯ"—ಇದು ಅವರ ವೀಣಾವಾದನ ಸಾಧನೆಯ ಬಗ್ಗೆ ಕುರಿತು ಹೇಳುವ ರೀತಿ.

ಮತ್ತೊಂದು ಚಿತ್ರ ಹೀಗಿದೆ,

"ಗುರುಗಳ ಹೃದಯವೆಷ್ಟು ವಿಶಾಲವೋ, ಮಾತೆಷ್ಟು ಸುಲಭವೋ ಹಾಗೆಯೇ ಪರಿಣಾಮವೂ ಸಮಯೋಚಿತವಾಗಿ ಅನುಗುಣವಾಗಿರುತ್ತಿತ್ತು. ಸುಲಭಕ್ಕೆ ಅತಿಸುಲಭ. ಬಿಗುವಿಗೆ ಬಂದರೆ ಬಲು ಬಿರುಸು....ಬಿರುಸಾದ ಮಾತು ರೀತಿಗಳ ಅವಕಾಶವೂ ವಿರಳ" ಎಂದು ಮುಗಿಸುತ್ತಾ, ಶೇಷಣ್ಣನವರು ಬಿರುಸಾದರೂ ಬಿರುಸಿಗೆ ಅವಕಾಶ ಮಾಡಿಕೊಳ್ಳುತ್ತಿರಲಿಲ್ಲ ಎಂಬ ಸತ್ಯವನ್ನು ಹೊರಗೆಡಹುತ್ತಾರೆ. ವ್ಯಕ್ತಿಯೊಡನೆ ವಿಶ್ವಾಸ, ನಂಬಿಕೆ ಇದ್ದವರಿಂದ ಮಾತ್ರ ಹೀಗೆ ಬರೆಯಲು ಸಾಧ್ಯ.

ಶೇಷಣ್ಣನವರು ಗತಿಸಿದ ಸಮಯದ ಚಿತ್ರ ಕೊಡುವಾಗ ಭಾರತಿ ಅವರು ಸಾರ್ಥಕವಾದ ಮಾತನ್ನು ಹೇಳುತ್ತಾರೆ, "ಪರಿಶುದ್ಧ ಚೈತನ್ಯವು ಕಲೆಯಾಗಿ ಪರಿಶ್ರಮಿಸಿ ಒಂದು ಪರಮತ್ವವನ್ನು ಕಂಡಿತು." ಗುರು ಸಿಕ್ಕಿದರೆ ಇಂತಹವರು ಸಿಗಬೇಕು ಎಂದು ಕಂಬನಿಗರೆಯುತ್ತಾರೆ.

* * * *

ಕೈಲಾಸಂರನ್ನು ಕುರಿತ ಹಲವಾರು ವ್ಯಕ್ತಿ ಚಿತ್ರಗಳು ಬಂದಿವೆ. ಭ್ರಾತೃ ಭಾವದಿಂದ ಪೂಜ್ಯ ವ್ಯಕ್ತಿಯನ್ನಾಗಿಸಿ ಕೈಲಾಸಂನಲ್ಲಿ ಅಡಗಿದ್ದ ಮಾನಸಿಕ ಸ್ವರೂಪವನ್ನು ಭಾರತಿಯವರು ತಮ್ಮ 'ಆರ್ಯಕೈಲಾಸಂ' ಕೃತಿಯಲ್ಲಿ ತಿಳಿಸಿದ್ದಾರೆ. 'ಭವ್ಯಕಾಯ, ಸುಧಾರಕ-ನಗೆಗಾರ, ಸಾಹಸಿ-ಕಲೆಗಾರ, ಕುಸುಮಹೃದಯಿ, ಶಕ್ತಿ ಪ್ರೇರಕ, ಸಲ್ಲಕ್ಷಣ ಸಂಸ್ಕಾರ ಹೊಂದಿದ್ದವ, ಮಿತ್ರ, ಮಾನವೀಯ ಗುಣಉಳ್ಳವ, ಕ್ರಾಂತಿಪುರುಷ, ಶುದ್ಧ

ಭಾರತೀಯ, ಪ್ರಗತಿಗಾಮಿ, ಆಶಾವಾದಿ, ಆರ್ಯ,– ಇವೇ ಮುಂತಾದ ವಿಶೇಷಣಗಳಿಂದ ಕೈಲಾಸಂ ವ್ಯಕ್ತಿತ್ವವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

"ಯಾರಾದರೂ ಸಿಕ್ಕಿದರೆ ಸಾಕು ಮನಸ್ಸನ್ನೇ ಮುಂದಿಡುತ್ತಿದ್ದ ಬಾಯದು, ಬಿಲದಬಾಯಲ್ಲ, ಕೈಲಾಸಂ ಕೈ ಬರಿಗೈ ಆದರೂ ಮರಗೈ ಅಲ್ಲ, ಬಂಧುವೆನಿಸಿ ಪೊರೆದ ಕೈ" ಎಂಬುದಾಗಿ ಒಂದು ಕಡೆ ಒಂದು ಚಿತ್ರವಿದೆ. ಕೈಲಾಸಂ ಪರಿಚಯ ವಿಲ್ಲದ ಓದುಗನಿಗೆ ಈ ವಾಕ್ಯಗಳೇ ಸಾಕು. ನಂಬುಗೆ, ಪ್ರಾಮಾಣಿಕತೆ, ಒಲವು, ಹೃದಯವಂತಿಕೆಯಿಂದ ಕೂಡಿದ ಈ ವ್ಯಕ್ತಿ ಚಿತ್ರ ವಿಶಿಷ್ಟವಾದದ್ದು. ಕಾರಣ, ಅಲ್ಲಿ ಹೇಳಿರುವ ನಿದರ್ಶನಗಳು. ಹಾಗೆ ಆದಾಗ ಗುರ್ತಿಸಿರುವ ಮಾನಸಿಕ ಸ್ವರೂಪ.

"ಮನುಷ್ಯ ಎಷ್ಟು ಸರಳ ! ಎಂತಹ ನಿಗರ್ವಿ ? ಹೆಸರಿಗೆ ತಕ್ಕಂತೆ ಕೈಲಾಸಕ್ಕೆ ಸಮಾನನೇ ಸರಿ"–ಈ ಮಾತುಗಳೂ ಭಾವಪೂರ್ಣ !

ಭಾರತಿಯವರು ಕೈಲಾಸಂರನ್ನು 'ಆರ್ಯ' ಎಂದು ಹೇಳಿದ್ದಾರೆ. ಆರ್ಯ ನಲ್ಲಿರಬೇಕಾದ ಗುಣಗಳು ಅವರಲ್ಲಿದ್ದವು ಎನ್ನಬಹುದು ಎಂಬ ಶಂಕೆಯಿಂದ ವಿಮುಕ್ತರಾಗಲು ಅವರೇ ಹಲವಾರು ನಿದರ್ಶನಗಳ ಮೂಲಕ ಸಮರ್ಥಿಸುತ್ತಾರೆ. ಆರ್ಯ ಎಂದಾಗ ನಾಗರಿಕ, ಸಭ್ಯ ಎಂಬ ಅರ್ಥ ಮಾಡಿಕೊಳ್ಳಬೇಕು. ಆರ್ಯತನ ಹೊಂದಿದವ ಯಾರೊಬ್ಬರಿಗೂ ತನ್ನಿಂದ ಅಪಮಾನ, ನೋವು ಆಗದಂತೆ ಜಾಗರೂಕತೆಯಿಂದ ಇದ್ದು, ಯಾವ ಪ್ರಮಾದಕ್ಕೂ ಆಸ್ಪದವಿಲ್ಲದಂತೆ ಕಾಯಾ, ವಾಚಾ, ಮನಸಾ ವರ್ತಿಸುವುದೇ ಆರ್ಯಮರ್ಯಾದೆ. ಆದರೆ ಯಾವುದೋ ದೌರ್ಬಲ್ಯ ಮನೆ ಮಾಡಿಕೊಂಡು ವ್ಯಕ್ತಿ ಆರ್ಯನಾಗಿದ್ದವನು ಅನಾರ್ಯನಾಗಿ ತೋರಿದರೂ, ಯಾವುದೋ ಪೂರ್ವಬಲದಿಂದ ಆರ್ಯಮರ್‍ಯಾದೆಯನ್ನರಿತು ಆಚರಿಸಿದಾಗ ಆರ್ಯ ನಾಗಿಯೂ ತೋರಬಹುದು. ಈ ಪೂರ್ವ ಸಮರ್ಥನೆಯಿಂದ ಕೈಲಾಸಂ ಆರ್ಯ ರಾಗಿದ್ದಾರೆ ಲೇಖಕಿಯರ ದೃಷ್ಟಿಯಲ್ಲಿ. ಇದಕ್ಕೆ ಲೇಖಕಿಯರಲ್ಲಿರುವ ದೇಶಪ್ರೇಮ, ಸದ್ಗುಣಗಳತ್ತ ಒಲವು. ಆ ಗುಣಗಳ ಮೂಲ ಸ್ವರೂಪ ಉಳ್ಳ ವ್ಯಕ್ತಿಯಲ್ಲಿನ ಪೂಜ್ಯತೆಗಳೇ ಕಾರಣವೂ ಕೂಡ. ಇದಕ್ಕೆ ಕೈಲಾಸಂ ಅವರ ಏಕಲವ್ಯ ನಾಟಕವನ್ನೆ ಆಧಾರವಾಗಿಟ್ಟುಕೊಳ್ಳುತ್ತಾರೆ ಭಾರತಿಯವರು. ಏಕಲವ್ಯನ ಪ್ರಾಣಿದಯೆ, ಗುರುಭಕ್ತಿ, ನಿರಹಂಕಾರ, ಶೀಲಗಳಿಂದ ಆತ ನಿಷಾದನಲ್ಲ, ಇಂಥ ಗುಣಗಳಿಂದ ನಿಜವಾಗಿಯೂ ಆರ್ಯ ಅವನು. ಇಲ್ಲಿ ಕೈಲಾಸಂ ದೃಷ್ಟಿನೈರ್ಮಲ್ಯವನ್ನು ಗುರುತಿಸಿ ಲೇಖಕಿಯರು ಕೈಲಾಸಂರನ್ನು ಆರ್ಯನೆಂದು ಸಂಬೋಧಿಸುತ್ತಾರೆ. ಅಷ್ಟೇ ಅಲ್ಲ ಕೈಲಾಸಂ 'ಅಜಾತ ಶತ್ರು' ಎಂದಿದ್ದಾರೆ.

ಕೈಲಾಸಂ ಹಾಸ್ಯ ಪ್ರಧಾನ ನಾಟಕಗಳನ್ನು ಬರೆದಾಗ್ಯೂ ಅಲ್ಲಿ ಕರುಣೆಯ ಪ್ರವೇಶದಿಂದ ಕೈಲಾಸಂರ ಮಾನವೀಯ ಗುಣಗಳು, ಅವುಗಳ ಪ್ರಾಮುಖ್ಯತೆ ಹೊರಬಂದಿವೆ. ರೋಗಿಯೊಡನೆ ನಡೆದುಕೊಂಡ ರೀತಿಯಿಂದ ಕೈಲಾಸಂ ಕುಸುಮ ಹೃದಯಿಯಾಗುತ್ತಾರೆ ; ಏನಾದರಾಗಲೀ ಮಾಡಿಯೇ ತಿರುತ್ತೇನೆ ಎಂಬ ಹಟದಿಂದ

ಸಾಹಸಿಯಾಗುತ್ತಾರೆ. ಸಮಾಜದ ಲೋಪವನ್ನೆತ್ತಿತೋರಿಸಿ ಸುಧಾರಕ ಎನಿಸಿಕೊಳ್ಳುತ್ತಾರೆ. ಹೀಗೆ ಈ ವ್ಯಕ್ತಿ ಚಿತ್ರದಲ್ಲಿ ಕೈಲಾಸಂರ ಜಾಗ್ರತ ಸ್ವರೂಪ, ಮಾನಸಿಕ ಪ್ರವೃತ್ತಿ ಎದ್ದು ಕಾಣುತ್ತದೆ.

* * * *

ಭಾರತಿಯವರ 'ಆರ್ಯ ಮರ್‍ಯಾದೆಯ ದಂಪತಿಗಳು' * ಎಂಬ ಒಂದು ಲೇಖನದಲ್ಲಿ ಡಾ|| ಮಾಸ್ತಿ-ಒಂದು ಪರಿಚಯ ನಮಗೆ ಸಿಗುತ್ತದೆ. 'ಶ್ರೀನಿವಾಸ'ರ ವಿಮರ್ಶೆ, ಕತೆಗಳಿಂದ ಪ್ರಭಾವಿತರಾದ ಲೇಖಕಿಯರು ಅವರ ದರ್ಶನಕ್ಕಾಗಿ ಕಾದು ಕಡೆಗೊಮ್ಮೆ ಅವರನ್ನು ನೋಡಿದಾಗ ಹೇಳುವುದಾದರೂ ಏನು? "ಅವರಿಗೆ ಸಾಹಿತ್ಯದಲ್ಲಿದ್ದಷ್ಟೆ ಸಂಗೀತದಲ್ಲೂ ಒಲವಿದೆ ಎಂದು ಆ ದಿನ ಗೊತ್ತಾಯಿತು." ಈ ಲೇಖನದಲ್ಲಿ ಹೆಚ್ಚು ಕಡಿಮೆ ವ್ಯಕ್ತಿ ಚಿತ್ರವೆನ್ನಬಹುದಾದ ಕೆಲ ಅಂಶಗಳು ಇರುವುದರಿಂದ ಇಲ್ಲಿ ಗಮನಿಸಲಾಗಿದೆ. ಒಮ್ಮೆ ಮಾಸ್ತಿಯವರು ಕಾರನ್ನು ಓಡಿಸಿ ಮನೆಯ ಒಳಕ್ಕೆ ಬರುತ್ತಿದ್ದಾಗ ಅವರ ಮಗಳು ಚೆಂಡನ್ನು ತರಲು ಅಡ್ಡವಾಗಿ ಬರುತ್ತಿದ್ದಳು. ಹೇಗೋ ಮಾಡಿ ಕಾರನ್ನು ಸ್ವಸ್ಥಾನಕ್ಕೆ ಸೇರಿಸುವ ಮುನ್ನ ಮಗುವಿನ ಮೇಲೆ ಗದರಿಕೊಂಡಿದ್ದರು. ಅನಂತರ ಮಗುವನ್ನು ಕರೆದು "ಕಾರಿಗೆ ಅಡ್ಡವಾಗಿ ಹಾಗೆ ಬರಬಹುದೇಮ್ಮ" ಎಂದು ಪರಿತಪಿಸಿದರಂತೆ. ಪಶ್ಚಾತ್ತಾಪದಿಂದ ತ್ರಸ್ತರಾದರಂತೆ. ಇದೊಂದು ಸಣ್ಣ ಪ್ರಸಂಗದಿಂದ ಲೇಖಕಿಯರಿಗೆ ಅನಿಸಿದ್ದು ಹೆಚ್ಚು ವಿಚಾರಕ್ಕೊಳ ಮಾಡುವಂತಹ ಮಾತು: "ಎಷ್ಟಾದರೂ ದೊಡ್ಡ ಜೀವ, ಸಣ್ಣವರಿಗೆ ಈ ಸುಲಭತನ ಹೇಗೆ ಬಂದೀತು?"

ಮಾಸ್ತಿ ದಂಪತಿಗಳು ಸತ್ಕರಿಸುತ್ತಿದ್ದ ರೀತಿಯಲ್ಲಿ ವೈಶಿಷ್ಟ್ಯವಿತ್ತು. ಒಮ್ಮೆ ಮಾಸ್ತಿಯವರ ಪತ್ನಿ ಸೌ|| ಪಂಕಜಮ್ಮನವರು ಸತ್ಕಾರಕ್ಕೆ ಅಣಿ ಮಾಡಿಡುತ್ತಿದ್ದಾಗ ಮಾಸ್ತಿಯವರು ಸಹಾಯಕ್ಕೆ ಬಂದರೆ, ಅವರ ಪತ್ನಿ "ಛೀ! ಛೀ! ಸಾವಿರ ರೂಪಾಯಿ ತರುವ ಕೈ ಇದನ್ನು ಮುಟ್ಟುವುದಲ್ಲ" ಎಂದಾಗ, ಮಾಸ್ತಿಯವರು ನಗುತ್ತಾ ಸಹಾಯವನ್ನು ಮುಂದುವರಿಸಿದರಂತೆ. ಅಂದರೆ "ಕೈ ತೊಳೆದು ಬನ್ನಿ" ಎಂದರ್ಥ; ಅಷ್ಟರಲ್ಲಿ ಅವರ ಪತ್ನಿ ಕೈಗೆ ಮಡಿನೀರೇ ಹಾಕಿದರಂತೆ. ಇಲ್ಲಿ ಕಂದಾಚಾರವಾಗಲೀ, ಗೊಡ್ಡುತನವೇ ಆಗಲಿ, ನಂಬಿಕೆ ಮುಖ್ಯ, ಶ್ರದ್ಧೆ ಮುಖ್ಯ. ಇದನ್ನು ಗುರುತಿಸಿದ ಲೇಖಕಿಯರು ಇದನ್ನು ಆರ್ಯ ಸಂಸ್ಕೃತಿ ಎಂದಿದ್ದಾರೆ. ದೈವಭಕ್ತಿ, ಪತಿಭಕ್ತಿಯನ್ನು ಕೊಂಡಾಡಿದ್ದಾರೆ.

ಮಾಸ್ತಿಯವರ ಪತ್ನಿಯವರು ತೀರಿಕೊಂಡಾಗ "ಅವರಿಗೆ ಬಹು ದುಃಖವಾಗಿರಬೇಕು" ಎಂದು ಸಮಾಧಾನ ಹೇಳ ಹೋದವರಿಗೆ ಶ್ರೀನಿವಾಸರು ಅನ್ನುವುದು, "ಮನುಷ್ಯ ಎಷ್ಟು ಆಸೆ ಪಡುವುದು? ಅದನ್ನು ಎಲ್ಲಿಗಾದರೂ ಮುಗಿಸಬೇಕಷ್ಟೆ"

* ಆರ್ಯ ಮರ್‍ಯಾದೆಯ ದಂಪತಿಗಳು (ಶ್ರೀನಿವಾಸ-ಅಭಿನಂದನ ಗ್ರಂಥ: ಪುಟ: ೫೭೯ ಸಂ: ಮಾವಿನಕೆರೆ ರಂಗನಾಥನ್)

ಎಂದು. ಎಂತಹ ಜಿಜ್ಞಾಸೆ, ವಿಚಾರ, ಇಲ್ಲಿ ಯಾವ ಅನ್ಯಾಯವೂ ಇಲ್ಲ. ಜಾತಸ್ಯ ಮರಣಂ ಧ್ರುವಂ ಎಂಬ ಮಾತಿನಂತೆ ಅದು ಸತ್ಯ. ಇಲ್ಲಿ ಭಾರತಿಯವರು ಶ್ರೀನಿವಾಸರನ್ನು ಸ್ಥಿತ ಪ್ರಜ್ಞ ಎಂದು ಸಂಬೋಧಿಸುತ್ತಾರೆ. ಈ ಚಿತ್ರ ಹಿರಿಯಣ್ಣ ಮಾಸ್ತಿಯವರಿಗೆ ಸಲ್ಲುವುದು. ಅನುಭವಗಳಿಂದ ಬಮುಕಿದ ಬಾಳು, ತುಂಬು ಬಾಳು ಬರುವುದೇ ಅಂತಹವರಿಗೆ.

ಹೀಗೆ ಭಾರತಿಯವರು ಶೇಷಣ್ಣ, ಕೈಲಾಸಂ ಹಾಗೂ ನಮ್ಮ ನಾಡಿನ ಹಿರಿಯಣ್ಣ ಮಾಸ್ತಿಯವರನ್ನು ಪರಿಚಯ ಮಾಡಿ ಕೊಟ್ಟಿದ್ದಾರೆ. ಇಲ್ಲಿನ ಸೊಗಸು, ಹೇಳುವ ಜಾಣ್ಮೆ ವ್ಯಕ್ತಿಗಳ ಬಗ್ಗೆ ಓದುವವನಿಗೆ ಗೌರವ ಮೂಡಿಸುವುದೆಂಬುದರಲ್ಲಿ ಸಂಶಯವಿಲ್ಲ. ಅವರು ದೇವುಡು ನರಸಿಂಹಶಾಸ್ತ್ರಿ, ವೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳ ಬಗ್ಗೆಯೂ ಬರೆದಿದ್ದಾರೆ. ವ್ಯಕ್ತಿ ಚಿತ್ರಗಳನ್ನು ಬರೆಯುವ ಕಲೆಗೆ ಇಂತಹ ಪುಸ್ತಕಗಳ ಅಧ್ಯಯನದಿಂದ ಪ್ರಯೋಜನವಿದೆ ಎನ್ನಬಹುದು. ★

ಶ್ರೀಮತಿ 'ಭಾರತಿ' ಅವರ ನೂತನ ಕಾವ್ಯ-ನಾಟಕ 'ಮಹಾಸತಿ' ಯನ್ನು....ಎರಡುಬಾರಿ ಓದಿದಾಗಲೂ ನನ್ನನ್ನು ಮುಗ್ಧನನ್ನಾಗಿ ಮಾಡಿತು ಎನಲೇ? ಅಥವಾ ಮೂಕನನ್ನಾಗಿ ಮಾಡಿತು ಎನ್ನಲೇ?

ನಿಶ್ಚಯವಾಗಿ ಇದೊಂದು ಸತ್ಕಾವ್ಯ. 'ಕಿರಿದರೊಳು ಪಿರಿದು ಮನರ್ಥಮನರಿಯಿಸು' ಜಾಣ್ಮೆ ಈ ಕಾವ್ಯದಿಂದ ವ್ಯಕ್ತ ಪಟ್ಟಿದೆ. ಆದರ್ಶ ಚರಿತ್ರೆ, ಆದರ್ಶ ವ್ಯಕ್ತಿಗಳು, ಆದರ್ಶ ಜೀವನ, ಆದರ್ಶ ತ್ಯಾಗ –ಇವುಗಳ ಪ್ರತೀಕವಾಗಿರುವ 'ಮಹಾಸತಿ' ಆಧುನಿಕ ಪದ್ಯ ಸಾಹಿತ್ಯ ದಲ್ಲಿಯೇ ಒಂದು ಅಮರಕೃತಿ.

'ತಪಸ್ವಿನಿ' ಕಾವ್ಯ ಓದಿ ಮೆಚ್ಚಿದ ನಾನು 'ಮಹಾಸತಿ' ಕಾವ್ಯ ವನ್ನು ತಲೆಯ ಮೇಲಿಟ್ಟುಕೊಂಡು ಧನ್ಯನಾದೆ. ಕನ್ನಡಿಗರ ಪುಣ್ಯ ವಿಶೇಷದಿಂದ ಇಂಥದೊಂದು ಕಾವ್ಯ ದೊರೆಯಿತು. ಇದನ್ನು ನಾಡವರಿ ಗಿತ್ತ ಶ್ರೀಮತಿ 'ಭಾರತಿ' ಅವರ ಬಾಳು ಸಾರ್ಥಕವಾಯ್ತು.

—ಅರ್ಚಿಕ ವೆಂಕಟೇಶ

(ತಾ॥ ೯-೨-೧೯೫೭ ರಂದು ಶ್ರೀ ಶರ್ಮರಿಗೆ ಬರೆದ ಪತ್ರದಿಂದ)

ಕಾವ್ಯಜಾಲದಲ್ಲಿ ಒಂದು ತಂತು

● ಎಚ್. ಎಂ. ರಂಗನಾಥ್

ಭಾರತಿ ರಚಿಸಿರುವ 'ತಪಸ್ವಿನಿ' ಗೀತರೂಪಕವು ಲಯಬದ್ಧ ಛಂದಸ್ಸಿನಿಂದ ಕೂಡಿದ ಒಂದೇ ಧಾಟಿಯಲ್ಲಿ ಹರಿಯುವ ರೂಪಕ. ಹೊಸ ಛಂದಸ್ಸಿನ ಹಿಡಿತದಲ್ಲಿ ಕಥನ ಕಲೆಯು ನಿರರ್ಗಳವಾಗಿ ಮುಂಬರಿದಿದೆ. ಹಿತಮಿತವಾದ ಪದಗಳ ಬಳಕೆ, ಮೇರೆ ಮೀರದ, ಸಂಯಮ ಸಹಿತವಾದ ಕಾವ್ಯ ಯಾರಿಗೆ ತಾನೆ ಸೊಗಸದು !

ಶ್ರೀರಾಮ ಲಕ್ಷ್ಮಣ ಮತ್ತು ಸೀತಾದೇವಿಯರೊಡನೆ ಪಿತೃವಾಕ್ಯ ಪರಿಪಾಲನೆಗಾಗಿ ವನವಾಸಕ್ಕೆ ಹೊರಡುತ್ತಾನೆ. ಅಯೋಧ್ಯೆಯೇ ಕಾನನವಾಗಿ, ಸ್ಮಶಾನದಂತೆ ಕಾಣುತ್ತದೆ.

ಈ ಮೂವರ ನಿರ್ಗಮನವಾದಮೇಲೆ ಸರಯೂ ನದೀತೀರದಲ್ಲಿ ಪರ್ಣಕುಟಿಯೊಂದನ್ನು ರಾಜೋದ್ಯಾನದ ಸೀಮಾಂತರದಲ್ಲಿ ನಿರ್ಮಿಸಿಕೊಂಡು ವಾಸಿಸಲು ತಪಸ್ವಿನಿಯು ಆರಂಭಿಸುತ್ತಾಳೆ.

ರೂಪಕ ಪ್ರಾರಂಭವಾಗುವುದು ಸುಖಾಂತದ ಸೂಚನೆಯಿಂದಲೇ. ಹದಿನಾಲ್ಕು ವರುಷ ಕಳೆದು ಶ್ರೀರಾಮ ಹಿಂತಿರುಗುವ ದಿನ ಸುಪ್ರಭಾತದಲ್ಲಿ ಊರ್ಮಿಳೆ ಕುಟೀರದಂಚಿನಲ್ಲಿ ನಿಂತಿರುತ್ತಾಳೆ.

'ಮನದಿ ಇಂದೇನು ಉತ್ಸಾಹದಂಕುರವು ?' — ಹೀಗೆ ಆರಂಭವಾದ ಮಾತಿನಿಂದ ಮುಂದುವರಿಯುತ್ತದೆ. ಊರ್ಮಿಳಾ ದೇವಿಗೆ ಪ್ರಕೃತಿ ಮಾತೆಯ ಎಲ್ಲ ಕಾರ್ಯಗಳಲ್ಲೂ ಒಂದೊಂದು ಆಧಿಕ್ಯ ಕಾಣುತ್ತಲಿದೆ. ಕಂಡದ್ದೆಲ್ಲ ಸಂತಸ, ಅನಿಸಿದ್ದೆಲ್ಲ ಕಾತರವಾಗಿ ಅಯೋಧ್ಯೆಯ ಜನಪದನು ಸಾಗರದಂತೆ ಹರಿದು ಶ್ರೀರಾಮನನ್ನು ಇದಿರುಗೊಳ್ಳಲು ದೋಣಿಗಳಲ್ಲಿ ಸರಯೂ ನದಿಯನ್ನು ದಾಟುತ್ತಿದೆ.

"ಇನಿತು ಕಾಲವ ನಿಶಾಯಾಸದಲಿ ಕಳೆದೆ ;
ಎಲೆ ಜೀವ ! ಅಗಲಿಕೆಯು ವೇದನೆಯು ಅನುಭವಕೆ
ಬರಲಿಲ್ಲ ; ಸ್ಥೈರಣೆಯೆ ಇನಿದಾಯ್ತು ನಿನಗೆ."

ಯೌವನದ ಹೊಸ್ತಿಲಲ್ಲಿ ಕಾಲಿಟ್ಟ ಹೆಣ್ಣು ಮದುವೆಯಾದ ಹೊಸದರಲ್ಲಿ, ಹದಿನಾಲ್ಕು ವರುಷ ವಿರಹವೇದನೆಯ ಶಿಕ್ಷೆಯನ್ನು ಅನುಭವಿಸುವಂಥ ಘೋರ ಶಾಪ ಮತ್ತೊಂದಿರಲಾರದು. ಆದರೆ ಊರ್ಮಿಳೆ ತಾನು ಕಳೆದ ಹದಿನಾಲ್ಕು ವರುಷದ ಶಿಕ್ಷೆಯನ್ನು 'ವೇದನೆಯು ಅನುಭವಕೆ ಬರಲಿಲ್ಲ' ಎಂಬ ಮಾತಿನಿಂದ ಸಂಯಮದ ಶಕ್ತಿಯಿಂದ ನಿವಾರಿಸಿಬಿಟ್ಟಿದ್ದಾಳೆ.

ಯುವರಾಣಿಯಾಗಬೇಕಾಗಿದ್ದವಳು ಒಂದು ಗಳಿಗೆಯೊಳಗೆ ಆಶ್ರಮವಾಸಿಯಾಗುತ್ತಾಳೆ. ವಿಧಿಯ ಕೈವಾಡ ಅವಳನ್ನು ಅಧೀರಳನ್ನಾಗಿ ಮಾಡಲಿಲ್ಲ. ಅಯೋಧ್ಯೆಯ ಸಾಮಾನ್ಯ ಪ್ರಜೆಯಂತೆ ತಾನೂ ಒಬ್ಬಳಾಗಿ ಬಿಡುತ್ತಾಳೆ. ಪತಿಯೇ ತನ್ನನ್ನು ಸಂತೈಸಲಿಲ್ಲವೆಂದಮೇಲೆ ಮತ್ತಾರು ಕೇಳಬೇಕು! ತನ್ನನ್ನು ನಿರ್ಲಕ್ಷಿಸಿದರೂ ಯಾರನ್ನೂ ದೂರುವ ಗೋಜಿಗೆ ಹೋಗದೆ, ತನ್ನ ಆತ್ಮ ಬಲದಲ್ಲೆ ಅಚಲ ಶ್ರದ್ಧೆಯನ್ನಿಟ್ಟು ಆಶ್ರಮಕ್ಕೆ ತೆರಳುತ್ತಾಳೆ.

ಭಾರತಿಯವರು 'ಕಾಲದೆಣಿಕೆಯೆ ಇಲ್ಲ, ಪದಿನಾಲ್ಕು........ಅಹುದು' ಎಂದು ಹೇಳಿದಾಗ ಅವರು ಹೇಳದ ಆ ಹದಿನಾಲ್ಕು ಸುದೀರ್ಘ ಅವಧಿಯನ್ನು ನಾವು ಊಹಿಸಿಕೊಳ್ಳುತ್ತೇವೆ. ನಮ್ಮ ಚಿತ್ತಫಲಕದ ಮೇಲೆ ಊರ್ಮಿಳೆಯ ಒಂದೊಂದು ದಿನವೂ ಗಜಗಮನದಿಂದ ಸರಿಯುತ್ತದೆ.

ಲಕ್ಷ್ಮಣನ ಆಗಮನದ ನಂತರ ಇನಿಯನಭಿಮಾನದಲಿ ತಾನು ಲೀನಳಾಗಿ ಶೂನ್ಯ ಸ್ಥಿತಿಯಲ್ಲಿರುತ್ತಾಳೆ. ದೂರದ ಆಸೆ, ಆಕಾಂಕ್ಷೆ, ಆತುರ, ಕಾತುರಗಳಿಂದ ಕೂಡಿದ ಅವಳ ಮನಸ್ಸು ಆ ತನಕ ತಾನು ನೆಮ್ಮಿದ್ದ, ನಿರ್ಮಿಸಿದ ಕಲ್ಪನೆ ಚಿತ್ರಗಳನ್ನೆಲ್ಲ ನುಂಗಿಬಿಡುತ್ತಿರುವಂತೆ ತೋರುತ್ತದೆ. ಪತಿ ಬಳಿ ಸಾರುವ ದೃಶ್ಯವನ್ನು ಕಲ್ಪಿಸಿಕೊಂಡಾಗ ಮನಸ್ಸು ವಿಚಲಿತವಾಗಿದೆ. ಜಗವೇ ಆಸೆ ಆತುರಗಳ ಆಗರವಾಗಿದೆ.

ತನ್ನ ವನವಾಸ ಸಮಯದಲ್ಲಿ ಸಂಯಮದಿಂದ ಸಾಧಿಸಿದ ಶಾಂತಿಯು ಊರ್ಧ್ವಮುಖವಾಗಿ, ಅದೊಂದು ಸಿದ್ಧಿ ದೊರೆತಿದೆ. ಅದರಿಂದಲೇ ಆಕೆಯ ಬಗೆಗೆ ನಮಗೆ ಪೂಜ್ಯಭಾವನೆ ಅಂಕುರಿಸುತ್ತದೆ, ಕಡೆಯವರೆಗೂ ಉಳಿಯುತ್ತದೆ.

ಒಂದು ಹೆಣ್ಣಿನ ಆಸೆ ಆಕಾಂಕ್ಷೆಗಳು, ಯಾವ ರೀತಿಯಿಂದ ಮನವನ್ನಾವರಿಸುತ್ತವೆ ಎಂಬುದನ್ನು ಚಿಗರಿಯ ವೃತ್ತಾಂತದಿಂದ ನಮಗೆ ಸ್ಪಷ್ಟ ರೀತಿಯಲ್ಲಿ ನಾಟಕ ಕರ್ತೃಕೊಟ್ಟಿದ್ದಾರೆ. ಮರಿಯನ್ನು ಕಾಣದ ಆ ತಾಯಿ ಜಿಂಕೆಯ ಹಂಬಲದೊಂದಿಗೆ ಕಥಾನಾಯಕಿಯು ತನ್ನ ತನವನ್ನು ರನ್ನಗನ್ನಡಿಯಲ್ಲಿ ಪ್ರೇಕ್ಷಕರಿಗೆ ತೋರಿಸುತ್ತಾಳೆ.

ಸುಖ-ದುಃಖವೆರಡೂ ಬೆರೆತಾಗಲೇ ಜೀವನವು ಬೆಳೆಯುತ್ತದೆ. ಚಕ್ರಗತಿಯಲ್ಲಿ ಏಳು-ಬೀಳುಗಳಾಗುತ್ತವೆ. ಪಾಪ-ಪುಣ್ಯದ ಬಲವೇ ಜೀವನ. ಇಲ್ಲೆಲ್ಲ ನಮ್ಮ ಸಂಸ್ಕೃತಿಯ ಸಾರವನ್ನೊಳಗೊಂಡ ಮಾತುಗಳು ಪ್ರತಿಸಾಲಿನಲ್ಲಿಯೂ ಕಾಣಬಹುದು.

ವನವಾಸ ನೀಳ್ಗತೆಯ ಮುಗಿತಾಯ ಎಂಬಂತೆ ಲಕ್ಷ್ಮಣನು ಕಳೆದ ಚಿಗರಿಯ ಮರಿಯನ್ನು ಹಿಡಿದು ಅದರ ತಾಯನ್ನು ಹುಡುಕಿಕೊಡುವೆನೆಂದು ಬರುತ್ತಾನೆ. ಅದಕ್ಕೆ

ಮಾತು ಬಾರದೆ, ತನ್ನ ನೋವನ್ನು ತೋಡಿಕೊಳ್ಳಲಾರದೆ ತಾಯು ಅಗಲಿಕೆಯನ್ನು ಅನುಭವಿಸುತ್ತಿರುವ ಮರಿಗೆ 'ಇದೆ ನೋಡು ಎಳೆಗರಿಕೆ! ಬಾಯು ತೆರೆ;....ಬಾ ಮಲಗು ಮಡಿಲಲ್ಲಿ.... ನಿನ್ನಂತೆ ಎನ್ನ ಮನ ಕಾತುರವನೊಂದಿಹುದು....ನಿನ್ನಂತೆ.... ಶಾಂತಿಯ ನಾನು ಬಯಸುವೆನು' ಎಂದಾಡಿದಾಗ ತನ್ನ ದುಃಖದ ಉಮ್ಮಳವನ್ನೂ ವಿರಹ ವೇದನೆಯನ್ನೂ ತೋಡಿಕೊಳ್ಳುತ್ತಾನೆ. ಲಕ್ಷ್ಮಣನ ಸಹನೆಯು ಅವನನ್ನು ಹದಿನಾಲ್ಕು ವರುಷ ಪರೀಕ್ಷೆ ಮಾಡಿ, ಒಪ್ಪವಿಟ್ಟ ಅಪರಂಜಿಯನ್ನಾಗಿ ಮಾಡಿದೆ. ತನ್ನ ಮನವನ್ನು ಹಿಡಿತದಲ್ಲಿಟ್ಟುಕೊಂಡಿರುವಂತೆ, 'ಓಡದಿರು, ಮರಿಯೆ! ಒಡಗೂಡಿ ಪೋಗುವ' ಎನ್ನುತ್ತಾನೆ.

ಮರಿಯು ನೆಗೆದೋಡಿ ತಾಯನ್ನು ಸೇರಿದಾಗ ತಾನು ಊರ್ಮಿಳೆಯನ್ನು ಕಾಣುತ್ತಾನೆ. ತನ್ನನ್ನು ವನಕ್ಕೆ ಕಳುಹಿಸಿದಾಗ ಚಪಲೆಯಾಗಿದ್ದವಳು, ಈಗ 'ಧೀರಮತಿಯಾಗಿಹಳು!' ಎಂದೂ, 'ಪರಿಶುದ್ಧೆ, ಬೆಳಗುವ ತಾರೆಯಾಗಿಹಳು!' ಎಂದೂ ಶಾಂತಿ ಭಿಕ್ಷೆ ಬೇಡುವೆನು ಎನ್ನುತ್ತಾನೆ.

ಸಂಯಮ ಕಲಿಸಿದರೆ ಬರುವ ಗುಣವಲ್ಲ. 'ನಾಥ! ಬಾ. ಕುಶಲವೋ?' ಎನ್ನುತ್ತಾಳೆ. 'ನಿನ್ನ ತಪ ಮುಗಿದುದೋ?' ಅವನೆಂದಾಗ, 'ಈಗಳೇ ಸಿದ್ಧಿ' ಎಂದಳು.

'ನಿನ್ನ ಸಿದ್ಧಿಯಲ್ಲಿ ಪರಿಶುದ್ಧನಾದೆ ದೇವಿ!' ಎನ್ನುವಾಗ ಅವರ ಪ್ರೇಮ, ನಿಸ್ಸೀಮ ತ್ಯಾಗ, ಅದರ ಸುಖಾಂತಗಳು ಒಮ್ಮೆಗೇ ಚಿಮ್ಮಿ ನಮ್ಮ ಮನವನ್ನು ಸೂರೆಗೊಳ್ಳುತ್ತವೆ.

'ಉಭಯ ಜೀವನದ ಶೋಧನೆಗೊಂದು ಅವಕಾಶಮಾಯ್ತು' ಎಂದು ಭಾರತದ ನಾರಿಯೊಬ್ಬಳು ಆಡುವುದು ಅತಿಶಯೋಕ್ತಿಯಲ್ಲದಿದ್ದರೂ ತಮ್ಮ ಪರಿಶುದ್ಧ ಆತ್ಮಗಳು ಎಷ್ಟೊಂದು ಬೆಸುಗೆಯಾಗಿವೆಯೆಂದು ನಮಗೆ ಅನ್ನಿಸುತ್ತದೆ.

ವಿಪಿನ ವಾಸದ ಕತೆಯನೊಂದಿನಿತು ಪೇಳೆಂದು ಸತಿ ಕೇಳಿದಾಗ ರಾಮಾಯಣದ ಕಥಾವೃತ್ತಾಂತವು ತಾತ್ಪರ್ಯ ರೂಪದಲ್ಲಿ ನಮ್ಮ ಕಣ್ಮುಂದೆ ಹಾದು ಹೋಗುತ್ತದೆ. ಪಂಚವಟಿಯಲ್ಲಿ ನಡೆದ ಶೂರ್ಪನಖಿಯ ಪ್ರಕರಣವು ತಿಳಿಹಾಸ್ಯದ ಮೆರುಗಿನಲ್ಲಿ ನಮ್ಮ ಮನಸ್ಸನ್ನು ಉಲ್ಲಾಸಗೊಳಿಸುತ್ತದೆ.

ಊರ್ಮಿಳೆ: 'ಶೂರ್ಪನಖಿ ಏನು ಬಯಸಿದಳು?'

ಲಕ್ಷ್ಮಣ: 'ಮದುವೆಯ!'

ಊರ್ಮಿಳೆ: 'ಆರನೊಲಿದು? ಮರೆಯಲಾದುದೆ ಎನ್ನ?'

—ಈ ಮಾತು ಸ್ತ್ರೀ ಸಹಜವಾಗಿ ಬಂದಿದೆ ಎಂಬುದನ್ನು ಗುರುತಿಸುತ್ತೇವೆ.

ಲಕ್ಷ್ಮಣ: ಮರೆವೆನೇ ಜೀವವನು? ಸಾಧ್ಯವೇ?

ಇಂತಿಷ್ಟು ಶೂರ್ಪನಖಿಯ ವೃತ್ತಾಂತವಾದ ಮೇಲೆ, ಜನಸ್ಥಾನದಲ್ಲಿ ಸೀತಾಪಹರಣ, ಮಾರೀಚ ವಧೆ ನಡೆಯುತ್ತದೆ. ಹಿಂದಿರುಗಿದಾಗ 'ಜಾನಕಿಯೆ ಇಲ್ಲ'ವೆಂದು ಲಕ್ಷ್ಮಣ ಹೇಳಿ ಮುಗಿಸುವುದರೊಳಗೇ,

ಊರ್ಮಿಳೆ : ಇಲ್ಲವೇ ? ಏನಾದಳೆಲ್ಲಿ ಪೋದಳು ?
ವನದಿ ನೀಗಿದಿರೆ ಲೋಕಮಾತೆಯನು ?

—ಎಂದೆಲ್ಲ ಕುತೂಹಲ, ಕಾತುರ, ಉಮ್ಮಳವನ್ನು ಒಂದೇ ಉಸಿರಿನಲ್ಲಿ ಆಡಿ ಮುಗಿಸುತ್ತಾಳೆ.

ಶೂರ್ಪನಖಿಗಾದ ಅಪಮಾನದಿಂದಾಗಿ ಯುದ್ಧ ಸಮನಿಸಿತೆನ್ನುತ್ತಾನೆ. ವಿಭೀಷಣ ರಾಜನಾದುದು ಮತ್ತೆ ಅಯೋಧ್ಯೆಗೆ ಹಿಂದಿರುಗಿದುದು ಎಲ್ಲ ವೃತ್ತಾಂತವೂ ಅಲ್ಲಿ ಬರುತ್ತದೆ.

ಕಿಷ್ಕಿಂಧೆ, ಅದರ ವರ್ಣನೆ;

'ಮಿಗಿಲು ರಮ್ಯದ ಬೀಡು, ಗಿರಿಗುಹೆಗಳಾ ನಾಡು; ಪಂಪಾ ಸರೋವರದ ಮಧುವನದ ವೈಸಿರಿಯ, ವಾನರ ನೆಲೆವೀಡು, ಪೆಂಪೆಸೆವ ಕಿಷ್ಕಿಂಧೆ....ರಾಜ ಸುಗ್ರೀವ ಮಂತ್ರಿ ಹನುಮ.'

'ಸಂಶಯಾತ್ಮರಿಗಾಯ್ತು ಶಿಕ್ಷೆ, ಜಾನಕಿಗಲ್ಲ' ಈ ಮಾತು ನೂರಕ್ಕೆ ನೂರು ಸತ್ಯ!

ಧರ್ಮ, ವಿಶ್ವಪ್ರೇಮ, ಭ್ರಾತೃ ಪ್ರೇಮ, ಸುಖ ದುಃಖವೊಂದೇ ಸಮವೆಂಬ ವಿಸ್ಮೃತಿಯ ಭಾವ, ತಪ, ಸಿದ್ಧಿ—ನಾಲ್ಕಾರು ಸಾಧನೆಗಳು ತುಂಬಿ ತುಳುಕುತ್ತಿರುವ ಎರಡು ಸಂಸ್ಕಾರ ಹೊಂದಿದ ಆತ್ಮಗಳನ್ನು ನಾವಿಲ್ಲಿ ಕಾಣಬಹುದು.

ದೂರದಿಂದ ಸೀತಾರಾಮರು ಬರುತ್ತಿರುವರು. ಸೀತೆಗೆ ಆಶ್ಚರ್ಯ! 'ಮತಿಯ ವಿಸ್ಮೃತಿಯಲ್ಲಿ (ಪರಸ್ಪರರ) ನಿಂದೆಯ ಕುತೂಹಲವು ಬೆರೆಯುದಿಹವಚ್ಚರಿಯು!'

ರಾಮ : ಎನ್ನಂತೆ ಹಂಬಲಿಸಿ, ಕಂಬನಿಯ ಸುರಿಸಿದನೆ?
ಉನ್ಮತ್ತನಾದನೇ ಸೌಮಿತ್ರಿ?

ಲಕ್ಷ್ಮಣನ ಎತ್ತರಕ್ಕೆ ನಿಲ್ಲಲಾರದೆ ವಿರಹದಿಂದ ಪರಿತಪಿಸಿ, ಹಲುಬಿ ಹಳುವವನ್ನೇ ಕುರಿತು ವೈದೇಹಿಯೇನಾದಳೆಂದು ಕೇಳಿದುದನ್ನು ನೆನೆಯುತ್ತಾನೆ ಶ್ರೀರಾಮ. ಹದಿನಾಲ್ಕು ವರುಷ ಇನಿಯಳಿಂದ ಅಗಲಿ, ತಮ್ಮ ಸೇವೆಯನ್ನು ಮಾಡಿ, ತನ್ನನ್ನು ಕರ್ತವ್ಯ ಪಥಕ್ಕೊಯ್ದ ತಮ್ಮನ ದೃಢತೆಯನ್ನು ಮೆಚ್ಚಿ ನುಡಿಯುತ್ತಾನೆ.

ಶ್ರೀರಾಮ ಆದರ್ಶ ಮಾನವನಾಗಲು ಏನೇನು ಬೇಕೋ ಅದೆಲ್ಲ ಒದಗಿತು : ಜಗವೆಲ್ಲ ಕೊಂಡಾಡಿತು. ಪಿತೃವಾಕ್ಯಪರಿಪಾಲನೆಯೊಂದೇ ಆದರ್ಶವನ್ನಾಗಿಟ್ಟುಕೊಂಡು, ಮಿಕ್ಕೆಲ್ಲದರ ಪರಿವೆಯೇ ಇಲ್ಲದೆ ನೇರವಾಗಿ ನಡೆಯುವ ಹಂಬಲ ವಿವರಿಸಿಕೊಂಡವನು. ಜನತೆಯಲ್ಲಿ ತಾನು ನಡೆದುದು ಸರಿಯೆನಿಸಿಕೊಳ್ಳುವ ಹಂಬಲದಲ್ಲಿ ನೆಚ್ಚಿದ ಸತಿಯನ್ನೂ ಅಗ್ನಿ ಪರೀಕ್ಷೆಗೊಳಪಡಿಸಿದ್ದನ್ನು ಅನೇಕರು ಒಪ್ಪಲಾರರು.

ಆದರೆ ಲಕ್ಷ್ಮಣನೋ? ತನ್ನ ಅಣ್ಣನ ಪಾದ ಸೇವೆ ಒಂದೇ ಗುರಿ. ಇತರ ಮಾತು ಅವನಿಗೆ ಬೇಡ. ಅಣ್ಣನಿಗೆ ತೊಂದರೆಯಾದರೆ ಜೀವ ತೆರಲು ಸಿದ್ಧ; ಆತನಿಗೆ ದುಃಖವಾದಾಗ ಮಂತ್ರಿಯಂತೆ ಸಂತೈಸಿ, ಸಲಹೆಯಿತ್ತು ಪಥಕೊಯ್ದ ದೀವಟಿಗ!

ಸೀತಾರಾಮರು ಬಂದ ಕರ್ತವ್ಯ ನೆನೆದಾಗ ಹನುಮನು ಬರುತ್ತಾನೆ. ಹಿರಿಯರೂ ಕಿರಿಯರೂ ರಾಜಧಾನಿಯಲ್ಲಿ ಕಾಯುತ್ತಿರುತ್ತಾರೆಂದು ತಿಳಿದು ಲಕ್ಷ್ಮಣ ಊರ್ಮಿಳೆಯನ್ನು ಕರೆಸಿದಾಗ, ಅವರ ಮನಸ್ಸು ಸಂತಸದಿಂದ ತುಂಬಿ ತುಳುಕುತ್ತದೆ. ಅಕ್ಕ ತಂಗಿಯರ ಅಪೂರ್ವ ಮಿಲನದ ದೃಶ್ಯ ನಮ್ಮ ಮನದಲ್ಲಿ ಅಚ್ಚಳಿಯದಂತೆ ಅಚ್ಚೊತ್ತುತ್ತದೆ. ರೂಪಕದ ಈ ಪತಾಕೆಯು ಯಾವ ಕಾವ್ಯಕ್ಕೂ ಕಡಿಮೆಯದಲ್ಲವೆಂಬ ತೀರ್ಮಾನಕ್ಕೆ ಓದುಗ ಮುಟ್ಟಿಬಿಡುತ್ತಾನೆ.

'ನಿನ್ನ ಮನವೇ ತಪೋವನವಾಗದೇ ತಂಗಿ
ಪಿರಿದು ಸಾಹಸವನೆಸಗಿದೆ ನೀನು'

–ಸೀತಾದೇವಿಯ ಈ ನುಡಿ ಆಕೆಗೆ ತಂಗಿ ಊರ್ಮಿಳಾ ದೇವಿಯ ಬಗೆಗಿದ್ದ ಅಭಿಮಾನ, ನಂಬಿಕೆಗಳ ದ್ಯೋತಕವಾಗಿವೆ.

'ಸಾಹಸವ ನಾ ಕಾಣೆ : ತಪವ ನಾನರಿಯೆ'

—ಊರ್ಮಿಳೆಯೆಂದಾಗ ಅವಳ ಮುಗ್ಧತೆ, ನಮ್ರತೆಯ ದರ್ಶನವು ನಮಗಾಗುತ್ತದೆ.

ಮೂವರು ವೈರಾಗ್ಯದಧಿದೇವತೆಗಳಲ್ಲಿ ಒಬ್ಬಳಾಗುವ ಊರ್ಮಿಳಾ ದೇವಿಯನ್ನು ನಾವು ಕಾಣುತ್ತೇವೆ.

ಶ್ರೀರಾಮನು ತಾನು ಅಸ್ವತಂತ್ರ, ಭಕ್ತಾಧೀನನೆಂದಾಗ ಹನುಮಂತನ 'ನಿನ್ನ ಮನವೇ ನಿನ್ನದಲ್ಲ; ಜೀವನವೆಂತು ನಿನ್ನಿಚ್ಛೆಯಂತೆ ನಡೆವುದು ?' –ಎನ್ನುತ್ತಾನೆ. ತನ್ನ ತಮ್ಮ–ನಾದಿನಿಯರನ್ನು ನೋಡುವ ಸಂತಸದಲ್ಲಿ ಆ ಪದಗಳನ್ನೆಲ್ಲ ಮರೆತೆನೆನ್ನುತ್ತಾನೆ ಶ್ರೀರಾಮ.

'ಬಾರಮ್ಮ, ವನವಾಸ ಸಾಕಿನ್ನು ಮನೆಗೆ
ತೋರಮ್ಮ, ಸುಖಶಾಂತಿ ಕಳೆಯ ಜನಪದಕೆ.'

—ಎಂಬ ಸೀತಾದೇವಿಯ ಮಾತಿನಿಂದ ಮುಗಿಯುತ್ತದೆ ರೂಪಕ.

ಮಹಾಕಾವ್ಯಗಳು ಆದರ್ಶ ವ್ಯಕ್ತಿಗಳ ಚಿತ್ರಣ ಕೊಟ್ಟು ಸಮಾಜದ ಉನ್ನತಿಗೆ ಶ್ರಮಿಸುತ್ತಲೇ ನಡೆಯುತ್ತವೆ. ಸಾಹಿತಿ ತನ್ನ ಪಾಡಿಗೆ ಸ್ವತಂತ್ರನಾದರೂ ಆಯ್ದುಕೊಳ್ಳುವ ಕಥೆ ಸಾರ್ವಜನಿಕವಾಗಿ, ಸಾರ್ವಕಾಲಿಕವಾಗಿ ಹಿತವಾಗಿರಬೇಕಾಗುತ್ತದೆ.

ಬಹಳ ವರ್ಷಗಳಿಂದ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೈಯಾಡಿಸಿದ ಇವರು ಹಿಂದೆ ನಿರ್ಲಕ್ಷ್ಯಮಾಡಿದ ಊರ್ಮಿಳಾ ದೇವಿಯ ಕತೆಯನ್ನು ಮನಮುಟ್ಟುವ ರೂಪಕದಲ್ಲಿ ಕನ್ನಡಿಗರ ಮುಂದಿರಿಸಿದ್ದಾರೆ. ನಾಟಕವೇ ಉನ್ನತವಾದ ಸಾಹಿತ್ಯ. ಅದರಲ್ಲಿಯೂ ಗೀತ ರೂಪಕವು ಅತಿ ದುರ್ಗಮ. ಅಂಥದರಲ್ಲಿ ಲಕ್ಷಣವಾದ ಭಾವ, ಶೈಲಿ, ಹಿತ–ಮಿತವಾದ ಮಾತಿನ ಓಘ–ಇವೆಲ್ಲವನ್ನೂ ಸಾಧಿಸಿರುವುದು ಅವರ ಸಾಧನೆಯ ದ್ಯೋತಕ.

ಮೂವತ್ತರ ದಶಕದಲ್ಲಿಯೇ ಬರೆದ ಈ ರೂಪಕವು ಆಗತಾನೇ ಅರಳುತ್ತಿದ್ದ ನವ ಛಂದಸ್ಸಿನ ಪ್ರತೀಕವಾಗಿದೆ.

ಸಂಚಿಯ ಹೊನ್ನಮ್ಮ ಮೊದಲಾದವರು ಆರಂಭಿಸಿದ ಸಾಹಿತ್ಯದ ನಿರಂತರ ಪ್ರವಾಹದೊಂದಿಗೆ ಮಾ|| ಶ್ರೀ|| ಭಾರತಿಯವರದೂ ಒಂದು ನದಿಯಾಗಿ ಪ್ರವಹಿಸಿ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಿ ಅನಂತಕಾಲ ನಿಲ್ಲುತ್ತದೆಂಬ ನಂಬಿಕೆಯನ್ನಿಡಬಹುದು.

'ತಾಯೆ! ಬಾ. ಲೋಕ ಮಂಗಳ ಕಾರಣದ ವಿಜಯ
ಕೀರ್ತಿಯೊಡವೆರಸಿ ಬಾ, ತಾಯೆ! ನಿನಗಾಗಿ
ಹಿರಿ (ಕಿರಿ)ಯರೆಲ್ಲರು ಅಲ್ಲಿ ಕಾತರಿಸಿ ಕಾದಿಹರು
ದರುಶನದ ಸುಖಕಾಗಿ ದಾರಿಯಲಿ ನಿಂದಿಹರು
ಜೀವನದ ಚರಿತೆಯಲಿ, ಇಂದೆ ಶುಭದಿನವು'

—ಎಂದು ಊರ್ಮಿಳಾದೇವಿಗೆ ಸೀತಾದೇವಿಯು ನುಡಿದ ಈ ಹರಕೆಯ ಮಾತನ್ನು ನಾವೂ ಅನುಮೋದಿಸಿ ಕೃತಾರ್ಥರಾಗಬಹುದು. ★

ಕಣ್ವ—ಎಂತಹ ಸುದಿನವಿದು! ವತ್ಸೆ! ಶಕುಂತಲೇ!
ತಾಯ್ತಂದೆಗಳು ದೂರವಾದರೇನಾಯ್ತು?
ಪರಮವಾತ್ಸಲ್ಯದಲಿ ಪ್ರಕೃತಿಯೇ ರಕ್ಷಿಸಿರೆ,
ಎನ್ನರಕ್ಷಣೆಯ ಮಾತೊಂದು ಹಿರಿದೇ? ಮಗುವೆ!
ಈ ಆರ್ಯಮಾತೆಗೆ ಇಂದು ನೀ ಶಿಶುವಾದೆ.
ಮುಂದಿನಾ ಜನಪದಕೆ ನೀನೇ ಮಹಾಮಾತೆ.
ಅದಕಾಗಿಯೆ ನೀನು ಜನಿಸಿರುವೆ ಸತ್ಯವಿದು.
ನಿನ್ನ ಪಾಲಿಪ ತಂದೆಯೆನಿಸೆ ಮನ ಉಬ್ಬುತಿದೆ.
ನಿನ್ನಿಂದ ಪೊಂದುವಾ ಧನ್ಯತೆಗೆ ಎಣೆಯುಂಟೆ?
ಮಾತೆ! ಮಾಲಿನಿ! ನಿನ್ನ ಕೃಪೆಗಾಗಿ ನಿನಗೆ,
ಧನ್ಯವಾದಗಳರ್ಪಿಸುತ ನೆನೆವೆ ದಿನದಿನದಿ
(ನಿರ್ಗಮನ)
(ವಾತ್ಸಲ್ಯ ತರಂಗ ಲೀಲಾದಿಂದ)

ಶೈಲಿ ವಿಶೇಷ

● ಅನಂತಪದ್ಮನಾಭರಾವ್

> ಮರವಣಿಗಂ ಜೀಣಿಗವಂ
> ತರಮಾವುದೋ ಸುಕವಿರಚಿತ ಮೃದುಲಲಿತಪದ
> ಸ್ಫುರಿತ ಸರಸೋಕ್ತಿಗಂ ನಿ
> ಷ್ಠುರ ಕುಕವಿ ಕಟೂಕ್ತಿಗಳ್ಗಮೇನಂತರಮೋ
>
> —**ನಾಗವರ್ಮ,** (ಕಾವ್ಯಾವಲೋಕನಂ)

ಇಂದಿನ ಹಿರಿಯ ತಲೆ ಮಾರಿನ ಬಹುಮುಖ ಪ್ರತಿಭೆಯ ಲೇಖಕಿ ಭಾರತಿ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೈಯಾಡಿಸಿದ್ದರೂ ಇವರ ಶೈಲಿಯನ್ನು ಮುಖ್ಯವಾಗಿ ಗದ್ಯ ಮತ್ತು ಪದ್ಯ ಎಂದು ಎರಡು ವಿಭಾಗ ಮಾಡಬಹುದು. ಈ ಗದ್ಯ ಪದ್ಯಗಳ ಮುಖ್ಯ ವ್ಯತ್ಯಾಸ ಕಾಣುವುದು ಕೂಡ ಛಂದಸ್ಸಿನಲ್ಲಿ. ಇವರ ಮಾನಸಿಕ ಕ್ರಿಯೆಯ ಅಭಿವ್ಯಕ್ತಿಯಲ್ಲಿ ಒಂದು ಭಾಗ ಕಾವ್ಯವಾದರೆ ಮತ್ತೊಂದು ಭಾಗ ಗದ್ಯ. 'ಆರ್ಯ ಕೈಲಾಸಂ' 'ವೀಣೆ ಶೇಷಣ್ಣ'-ಇವೆರಡೂ ಅವರ ಗದ್ಯ ಶೈಲಿಯ ಪ್ರತಿನಿಧಿಗಳಾದರೆ ಉಳಿದವನ್ನೆಲ್ಲ ಪದ್ಯಭಾಗಕ್ಕೆ ಸೇರಿಸಬಹುದು.

ಗದ್ಯವೇ ಆಗಲಿ, ಪದ್ಯವೇ ಆಗಲಿ, 'ಭಾರತಿ' ಅವರ ಶೈಲಿಯ ಮುಖ್ಯ ಲಕ್ಷಣ ಲಲಿತತೆ ಮತ್ತು ದೇಶಿನಿಷ್ಠತೆ. ಶ್ಲೇಷೆ, ಉಪಮೆ, ರೂಪಕ, ಸಾದೃಶ್ಯಗಳಿಗಿಂತ ಇವರ ಒಲವು ಸ್ವಭಾವೋಕ್ತಿಯಕಡೆಗೆ. ಹೀಗಿರುವುದರಿಂದಲೇ ಇವರ ಶೈಲಿ ಸಾಲಂಕೃತ ಪ್ರೌಢ ಶೈಲಿಯೆನಿಸದೆ ಸರಳವಾದ ನೇರ ಶೈಲಿಯೆನಿಸುತ್ತದೆ. ಭಾರತಿ ಅವರ ಶೈಲಿಯಲ್ಲಿ ಆಡಂಬರದ ಶಬ್ದ ಪ್ರಯೋಗದ ದೊಂಬರಾಟಕ್ಕೆ ಎಡೆಯಿಲ್ಲ.

'ಆರ್ಯಕೈಲಾಸಂ' ಚೊಕ್ಕ ನಿರೂಪಣೆಯ ಜೀವನ ಕಥನ. ಸ್ವಾನುಭವದ, ಸ್ವಪರಿಚಯದ ನಿರೂಪಣೆಯಲ್ಲಿ ಭಾರತಿ ಅವರದು ಹಸನಾದ ಶೈಲಿ. ಭಾರತಿ ಅವರ ಅನುಭವವೇ ಕಥನದ ಅಡಿಗಲ್ಲಾಗಿ ನಿಂತಿದೆ. ವ್ಯಕ್ತಿತ್ವ ಚಿತ್ರವನ್ನು ಸ್ಮೃತಿ ಚಿತ್ರ

ನ್ನಾಗಿಸಬಲ್ಲ ಸುಣುಪು ಮಾತುಗಳು ಅವರ ಗದ್ಯಕ್ಕೆ ಒಗ್ಗಿದೆ. ಒಂದೆಡೆ ಕೈಲಾಸಂ ಬಗ್ಗೆ ಹೀಗೆ ಬರೆಯುತ್ತಾರೆ: "ಕೈಲಾಸಂ ಅಂದರೆ ಸಾಕು. ಆ ಹೆಸರಿಗೆ ಅದೆಂತಹ ಶಕ್ತಿ. ಮೂಕರು ಮಾತನಾಡುತ್ತಾರೆ; ಕಿವುಡರ ಕಿವಿ ಚುರುಕಾಗುತ್ತದೆ. ಮಕ್ಕಳು ಕುಣಿದು ಕೇಕೆ ಹಾಕುತ್ತಾರೆ. ಹೆಂಗಸರು ತಮ್ಮ ಹಿರಿಮೆಯನ್ನು ಕುರಿತು ಹಿಗ್ಗುತ್ತಾರೆ. ಮಂಕರು ಮುಟ್ಠಾಳರು ಕೂಡ ಚಟುವಟಿಕೆಯಿಂದ ನಲಿಯುತ್ತಾರೆ. ಮೂದೇವಿಗಳು ಮುಂದಾಳುಗಳಾಗಲು ಮುಂದೆ ಬರುತ್ತಾರೆ." ಇಂಥ ಕಡೆ ಭಾಷೆಯ ಪರಿಣಾಮ ಉದ್ವೇಗಕ್ಕಿಂತ ಹೆಚ್ಚಾಗಿ ಭಾವನೆಯ ಪರವಶತೆಯ ಸ್ತರದಲ್ಲಿ ಕೂಡ ಸಾಧಿಸ ಬಹುದಾದ ಅರ್ಥವ್ಯಕ್ತಿಯನ್ನು ಪಡೆದುಕೊಳ್ಳುತ್ತದೆ.

ಕೈಲಾಸಂ ನೆನಪುಗಳು ಇಲ್ಲಿ ಕರ್ತೃವಿನ ಮನಸ್ಸಿನ ಕ್ರಿಯೆಗಳಲ್ಲಿ ಒಂದಾಗಿದ್ದು ನೆನಪಿನ ಸುರುಳಿ ಬಿಚ್ಚುತ್ತ ಹೋದಂತೆಲ್ಲ ಕಥನ ಮುಂದುವರಿದಿದೆ. ಅಲ್ಲೊಂದು ಇಲ್ಲೊಂದು ಘಟನೆಗಳು ಸುಳಿದು ನಿರೂಪಣೆಗೆ ನೆರವಾಗಿವೆ. ಅನುಭವಗಳ ನಿರೂಪಣೆ ಯಲ್ಲಿ ಕೆಲವೊಂದು ಸಿದ್ಧ ತತ್ವಗಳನ್ನು ಹೆಣೆದು ಅವುಗಳಿಗೆ ಕೈಲಾಸಂ ವ್ಯಕ್ತಿತ್ವವನ್ನು ತಗುಳ್ಚುವುದು ಈ ಕೃತಿಯಲ್ಲಿ ಬಳಕೆಯಾಗಿರುವ ತಂತ್ರ. ಇವುಗಳ ಅತಿರೇಕವೇ ಕೆಲವೆಡೆ ಕೃತಿಯ ಉದ್ದೇಶದಿಂದ ಹೊರವಲಯದಲ್ಲಿಯೂ ಈ ಅಭಿಪ್ರಾಯಗಳು ಸುಳಿದಾಡುತ್ತವೆ. ಇದೇನೇ ಆಗಲಿ ಅವರ ಅನುಭವ, ತಾತ್ವಿಕ ಚಿಂತನೆಯ ನಿರೂಪಣೆ ಯಲ್ಲಿನ ಸರಳತೆ ಮೆಚ್ಚುವಂತಹುದು. ಉದಾಹರಣೆಗೆ ಈ ವಾಕ್ಯವೃಂದವನ್ನು ಗಮನಿಸಬಹುದು: "ಮನುಷ್ಯನ ಪುರುಷಾರ್ಥವೆಲ್ಲಾ ಸ್ವಸುಖವೇ ಅಲ್ಲ; ದೇಹ ಪೋಷಣೆಯೇ ಅಲ್ಲ. ದೇಹ, ಜೀವನಿಗೆ ಒಂದು ಆಶ್ರಯ. ಬಾಡಿಗೆಯ ಮನೆಯಲ್ಲಿದ್ದ ಹಾಗೆ ಹಳೆಯದಾಗುತ್ತ ಕುಸಿದು ಬೀಳುತ್ತದೆ. ಆಗ ಇನ್ನೊಂದು ಆಶ್ರಯವನ್ನು ಹುಡುಕುವುದು. ಅದುವರೆಗೂ ಅನ್ನ ವಸ್ತ್ರಗಳ ಬಾಡಿಗೆ ಕೊಡಬೇಕು. ಹೇಗೆ ಕೊಟ್ಟರೂ, ಯಾವಾಗ ಕೊಟ್ಟರೂ ಒಂದೇ."

ಈ ರೀತಿ ನಡು ನಡುವೆ ಬರುವ ಉದ್ಬುದ್ಧದ ಬೋಧಪರವಾದ ತಾತ್ವಿಕ ವಾಕ್ಯಗಳು ಕೃತಿಯ ಉದ್ದೇಶದ ದೃಷ್ಟಿಯಿಂದಲಾಗಲಿ, ನಿರೂಪಣೆಯ ದೃಷ್ಟಿಯಿಂದ ಲಾಗಲಿ ಮೂಲಕೃತಿಗೆ ಪೋಷಕವಾಗಿಲ್ಲ. ಆದರೂ ನಿಜವಾದ ಜೀವನಾನುಭವದಿಂದ ಬಂದ ನುಡಿಗಳಾಗಿದ್ದು, 'ಬರೆದವರ ಸ್ವಭಾವದ ಛಾಯೆ' ಯನ್ನು ಗುರುತಿಸಬಹುದು ದಾದ್ದರಿಂದ ಇದನ್ನು ಮಹತ್ತರವಾದ ದೋಷವೆಂದೂ ಗಣಿಸಬೇಕಾಗಿಲ್ಲ. ಇಷ್ಟಾ ದರೂ 'ಆರ್ಯ ಕೈಲಾಸಂ' ಕೃತಿಯಲ್ಲಿ ಕೈಲಾಸಂ ಕಥನ ಸರಾಗವಾಗಿ ಹರಿದಿದೆ. ಇದಕ್ಕೆ ಮುಖ್ಯಕಾರಣ ಇದು ಕೈಲಾಸಂ ಕಥನವಷ್ಟೇ ಆಗಿರದೆ ಭಾರತಿ ಅವರ ಕಥನವೂ ಆಗಿದೆ. ಪಾಕ್ಷಿಕವಾಗಿ ಜೀವನ ಚರಿತ್ರೆಯಾದರೆ, ಪಾಕ್ಷಿಕವಾಗಿ 'ಆತ್ಮ ಚರಿತ್ರೆ' ಯೂ ಆಗಿದೆ ಎನ್ನಲಡ್ಡಿಯಿಲ್ಲ.

ಕೈಲಾಸಂನ ಸಂಸ್ಕಾರದ ಬಗೆಗೆ ಲೇಖಕಿಗೆ ತುಂಬ ಅಭಿಮಾನ. "ಕೈಲಾಸಂ ಎಷ್ಟು ವರುಷ ವಿಲಾಯಿತಿಯ ನೀರು ಕುಡಿದಿದ್ದರೇನು? ಅದು ರಕ್ತಗತವಾಗಲಿಲ್ಲ.

ಅನ್ಯಸಂಸ್ಕೃತಿಯ ಪ್ರಭಾವ ಆತನ ಮೇಲೆ ಸಾಕಷ್ಟು ಆಗಿದ್ದರೂ ಜನ್ಮತಃ ಪಡೆದಿದ್ದ ಸಂಸ್ಕಾರವನ್ನು ಕಳೆಗುಂದಿಸುವ ಶಕ್ತಿ ಆ ಸಂಸ್ಕೃತಿಗೆ ಸಾಧ್ಯವಾಗಲಿಲ್ಲ”-ಎನ್ನುತ್ತಾರೆ. ಇಂಥ ಕಡೆ ಕೈಲಾಸಂ ಬಗೆಗೆ ಲೇಖಕಿ ಅಧಿಕಾರ ವಾಣಿಯಿಂದ ನುಡಿದಿದ್ದಾರೆನಿಸುತ್ತೆ.

ಇಲ್ಲದ್ದನ್ನು ಇದ್ದಂತೆ, ಆಗದ್ದನ್ನು ಆದಂತೆ, ಕಾಣದಿದ್ದುದನ್ನು ಕಂಡಂತೆ ಬರೆಯುವ ಪ್ರವೃತ್ತಿ ನಮ್ಮ ಅನೇಕ ಜೀವನ ಚಿತ್ರಗಳಲ್ಲಿ ಕಂಡು ಬರುತ್ತದೆ. ಭಾರತಿ ಅವರ ಕೃತಿಗಳು ಸತ್ಯ, ಇದರಿಂದ ಗಾವುದ ದೂರವಲ್ಲಿವೆ. ಆದರೆ ‘ಆರ್ಯ ಕೈಲಾಸಂ’ ಮಟ್ಟವನ್ನು ‘ವೀಣೆ ಶೇಷಣ್ಣ’ ಏರಲಾರದು. ಇದಕ್ಕೆ ಕಾರಣ ಇದು ಒಂದೇ ಕೂತಿನಲ್ಲಿ ಬರೆದದ್ದು ಅಲ್ಲ. ಆದರೂ ಆಲೋಚನೆಗಳು ಚದುರಿಹೋಗದೆ ಹರಕು ಮುರುಕಾಗದೆ ಉಳಿದುಕೊಂಡಿದೆ. ಏನು ಹೇಳಬೇಕು ಎಂಬುದರ ಬಗೆಗೇ ಅಸ್ಪಷ್ಟತೆ, ಬಳಸು ಮಾತು ಈ ಶಿಥಿಲತೆಗೆ ಕಾರಣವೆನ್ನಬಹುದು.

ಭಾರತಿ ಅವರದು ನಾಟಕಗಳಲ್ಲಿ ಪಳಗಿದ ಕೈ. ವಸ್ತುವಿನ ಆಯ್ಕೆಯಲ್ಲಿ, ಪಾತ್ರ ಪರಿಪೋಷಣೆಯಲ್ಲಿ, ಸನ್ನಿವೇಶ ನಿರ್ಮಾಣದಲ್ಲಿ ಅವರು ತೋರಿರುವ ಚಾತುರ್ಯ ಗಮನಾರ್ಹವಾದುದು. ‘ಸ್ವರ್ಗ ನಿರಸನ’ ಉತ್ತಮ ಮಟ್ಟಕ್ಕೆ ಏರದ ನಾಟಕವಾದರೂ ಭಾರತಿಯವರ ವಸ್ತುವಿನ ಕಲ್ಪನೆಯೇ ಆಶ್ಚರ್ಯಪಡಿಸುವಂತಹುದು. ಸ್ವರ್ಗ ಬಯಸುವವರು ಅನೇಕರು. ಆದರೆ ಬಯಸದವ ಒಬ್ಬನೇ ಒಬ್ಬ ವೀರ. ಅವನ ನಡವಳಿಕೆ, ಆತನ ಬಗ್ಗೆ ಸ್ವರ್ಗ ಕನ್ನಿಕೆಯರು ತೋರುವ ಆದರ ಇವುಗಳ ಸುತ್ತ ನಾಟಕ ಬಳಸಿ ನಿಂತಿದೆ. ಸ್ವತಂತ್ರ ಪ್ರತಿಭೆಯ ಚತುರಮತಿಯಾದ ಕರ್ತೃ ತನ್ನ ಪಾತ್ರಗಳಲ್ಲಿ ಎಂದೂ ಅನವಶ್ಯಕ ಸಂಗತಿಗಳನ್ನು ತುರುಕುವುದಿಲ್ಲ. ಬದಲಾಗಿ ತನ್ನ ಸ್ವಂತಿಕೆಯ ಮುದ್ರೆಯನ್ನು ಆ ಪಾತ್ರಗಳ ಮೇಲೆ ಭಾವಿಸುತ್ತಾರೆ. ತಾವೇ ಆ ಪಾತ್ರಗಳಲ್ಲಿ ಲೀನವಾಗದೆ ಅವರಿಂದ ದೂರದಲ್ಲಿ ನಿಂತು ಅದರ ನಡವಳಿಕೆಗಳನ್ನು ಗಮನಿಸುತ್ತಾರೆ. ಇದರಿಂದಲೇ ಸಮರ್ಥ ಭಾವನೆಗಳು ಮತ್ತು ಸನ್ನಿವೇಶಗಳು ನಿರ್ಮಾಣವಾಗುತ್ತವೆ.

‘ಸ್ವರ್ಗ ನಿರಸನ’ ಬಾಹ್ಯರೂಪದಲ್ಲಿ ನಾಟಕವಾದರೂ ಅದರ ಅಂತಃಸತ್ವ ಕಾವ್ಯವೇ. ಭಾರತಿ ಅವರ ಎಲ್ಲ ನಾಟಕಗಳಿಗೂ ಅನ್ವಯಿಸಬಹುದಾದ ಮಾತು ಇದು. ಮಾತಿಗಾಗಿ ಮಾತನ್ನು ಬೆಳೆಸುವ ವಾಚಾಳಿತನವಿಲ್ಲದ ‘ಹಿತಮಿತ ಮೃದು ವಚನ’ ಲೇಖಕಿಯ ಸಂಗ್ರಹಪ್ರಜ್ಞೆಯನ್ನು ಪ್ರತಿಬಿಂಬಿಸುತ್ತದೆ. ವಸ್ತುವಿನ ಆಯ್ಕೆಯಲ್ಲಿಯೇ ಕೃತಿಕಾರನ ಸಾಮರ್ಥ್ಯದ ಬಹುಭಾಗ ನಿಂತಿರುತ್ತದೆ. ಮಹಾಭಾರತ, ರಾಮಾಯಣಾದಿ ಪುರಾಣ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳದಿದ್ದರೂ ಇಲ್ಲಿ ಆಯ್ಕೆ ಮಾಡಿಕೊಂಡಿರುವ ವಸ್ತು ಬಡಕಲಲ್ಲ. ನಿಸ್ಸತ್ವವಾದುದಲ್ಲ. ಕೆಲವೇ ಪುಟಗಳ ನಾಟಕದ ಪರಿಮಿತ ಹರವಿನಲ್ಲಿ ತರಲು ಅಸಾಧ್ಯವಾದ ಭಾರತ ಸ್ವಾತಂತ್ರ್ಯ ಸಂಗ್ರಾಮದ ಕತೆಯನ್ನೇ ತಂದಿದ್ದಾರೆ. ಸಹಾನುಭೂತಿಯಿಂದ ಓದಬಯಸುವ ಸಹೃದಯರಿಗೆ ಕಥಾ ದೃಷ್ಟಿಯಿಂದ ಒಂದು ವಿಶಿಷ್ಟ ಕಲ್ಪನೆಯನ್ನೇ ಮಾಡಿಕೊಳ್ಳಲು

ಇದರಿಂದ ಸಹಾಯವಾಗಿದೆ. ನಾಟಕದಲ್ಲಿ ಕಂಡುಬರುವ ಕಾವ್ಯಸತ್ವ, ಭಾವಕ್ಕೆ ತಕ್ಕ ಭಾಷೆ, ನಾದ ಮಾಧುರ್ಯ, ಲಯವೈವಿಧ್ಯಗಳಿಗೆ ಈ ಉದಾಹರಣೆ ಗಮನಿಸಬಹುದು.

ಘೋರ ವಿಪ್ಲವವು ಧರೆಗಾಯ್ತೆಂದು
ಆರೋ ಪೇಳಿದರು'

*   *   *

ಶ್ಯಾಮ — ಬಂಧನ ವಾಸವು ತೀರಿತು ನಿನಗೆ...
ಸುಮಾ — ಭವ ಬಂಧನವೇ ತೀರಿತು ನಿನಗೆ
ಭಾಮಿನೀ — ನಿನ್ನ ಕೀರ್ತಿ ಏರಿತು ಈ ದಿವಕೆ
ಭಾನುರೀ — ನಮ್ಮಾದರಣೆಯ ಸ್ವೀಕರಿಸು.

–ಇಂಥ ಕಡೆ ಸಂಭಾಷಣೆ ಒಳ್ಳೆಯ ಪದ್ಯ ಗತ್ತನ್ನೆ ಅನುಸರಿಸುತ್ತದೆ ಎನ್ನಬಹುದು. ಪಾತ್ರಗಳ ಹೆಸರನ್ನು ಬಿಟ್ಟು ಬರಿಯ ಸಂಭಾಷಣೆಯನ್ನಷ್ಟೇ ಓದಿದರೆ ಇದು ನಿಜಕ್ಕೂ ಪದ್ಯವೇ ಆಗಿದೆ. ೪-೪- ಮಾತ್ರೆಗಳ ಕನ್ನಡದ ಸಹಜ ಮಂದಾನಿಲಿಯ ಗೋಚರಿಸುತ್ತದೆ. ಉತ್ತಮ ಶೈಲಿಯ ಲಕ್ಷಣ, ಸ್ಪಷ್ಟತೆಯಂತೆಯೇ ಭಾವ ಮತ್ತು ವಸ್ತುವಿಗೆ ತಕ್ಕ ಭಾಷೆ. 'ಸ್ವರ್ಗನಿರಸನ'ದಲ್ಲಿ ಮೆಚ್ಚಬಹುದಾದ್ದು ವಸ್ತುವಿನ ಆಯ್ಕೆಗಿಂತ ಭಾಷೆಯನ್ನೇ ಎಂದೆನ್ನಬಹುದು.

ಭಾರತಿ ಅವರ ನಾಟಕದ ವಸ್ತು ಪೌರಾಣಿಕವಿರಲಿ, ಚಾರಿತ್ರಿಕವಿರಲಿ, ಸಮಕಾಲೀನವಿರಲಿ, ಪ್ರತಿಯೊಂದು ಸನ್ನಿವೇಶದ ಹಿಂದೆಯೂ ಅವರ ಕವಿ ಮನೋಭಾವನೆಯ ತೀವ್ರ ಸಂವೇದನೆಯಿದೆ. ಕಥಾನಕ ಪ್ರಸಂಗಗಳ ಯಥಾವತ್ತಾದ ನಿರೂಪಣೆಯಿಂದ ಯಾವಾಗ ಮುಕ್ತವಾಗದಿರುವುದು ಅನಿವಾರ್ಯವೋ, ಅಂಥವನ್ನು ಅವಶ್ಯವಿದ್ದಷ್ಟು ಮಾತ್ರ ಹೇಳಿ ಉಳಿದವನ್ನು ಚಿಟಕೆ ಚಪ್ಪರದಲ್ಲಿ ಹಾರಿಸಿಬಿಡುತ್ತಾರೆ. ಇಂಥವನ್ನು ಹೇಳುವಾಗ ಕೂಡ ಕವಯಿತ್ರಿ ಪಾತ್ರಗಳ ಮೂಲಕವೇ ಕಥೆಯನ್ನು ಹೇಳಿರುತ್ತಾರೆ. ಲಕ್ಷ್ಮಣ ಮತ್ತು ಊರ್ಮಿಳೆಯರ ಸಂಭಾಷಣೆಯಲ್ಲಿ ಸೀತಾಪಹರಣದ ಕತೆಯನ್ನೇ ಸಂಕ್ಷೇಪವಾಗಿ ತರಲಾಗಿದೆ. ಲಕ್ಷ್ಮಣ ಹೇಳುತ್ತಾ ಹೇಳುತ್ತಾ ಇದ್ದಂತೆ ಊರ್ಮಿಳೆಯ ಕುತೂಹಲ ಕೆರಳಿ, ಬಳಿಕೇನು? ಮುಂದೇನಾಯ್ತು? ಎಂದು ಮುಗ್ಧಳ ಮನೋರಮೆಯಂತೆ ಪ್ರಶ್ನಿಸುತ್ತಾಳೆ. ಇದರಿಂದ ಕತೆ ಹೇಳುವಾಗ ನಾಟಕದಲ್ಲಿ ಸಾಮಾನ್ಯವಾಗಿ ಬರಬಹುದಾದ 'ಭಾಷಣ ಶೈಲಿ' ಯಿಂದ ಕೃತಿಯು ಮುಕ್ತವಾಗಿದೆ. ಸೀತಾಪಹರಣ, ರಾಮನ ತೊಳಲಾಟ, ಸುಗ್ರೀವನ ಸಖ್ಯ, ಪ್ರಾಸಂಗಿಕವಾಗಿ ಕಿಷ್ಕಿಂಧೆಯ ಉಲ್ಲೇಖ, ಎಲ್ಲವನ್ನೂ ಕವಯಿತ್ರಿ ಚುಟುಕು ಮಾತಿನ ಚುರುಕು ಸಂಭಾಷಣೆಯಲ್ಲೇ ಹುದುಗಿಸಿದ್ದಾರೆ.

ಭಾರತಿ ಅವರ ಸಂಭಾಷಣಾ ಶೈಲಿಯ ಚತುರತೆಯಿರುವುದು ಪಾತ್ರಗಳ ಬಾಯಲ್ಲಿ ಆಡಿಸುವ ಚುರುಕಾದ ಮೊಟುಕು ಪ್ರಶ್ನಾವಳಿಗಳಲ್ಲಿ. ಸಂದೇಹಗಳ ಸರಪಳಿಗಳೇ,

ಸಂಕಲಿಸುವ ಸೂತ್ರಗಳೇ, ಅಭಿಪ್ರಾಯಗಳ ಅನಾವರಣಿಕೆಗಳೇ ಇಂಥ ಕಡೆ ಮಡುಗಟ್ಟಿ ನಿಂತಿರುತ್ತದೆ. ಮಾತು ಜಾರದ ಹುಲ್ಲಿಯ ಮಣಿಯೊಂದನ್ನು ಕುರಿತು ಲಕ್ಷ್ಮಣ ನಾಜಾಳಿತನವನ್ನು ಪ್ರದರ್ಶಿಸುವ ಪ್ರಸಂಗವನ್ನು ಗಮನಿಸಬಹುದು. ಇಲ್ಲಿ ಸರಳತೆ ಆಡು ಮಾತಿನ ಲಯದಲ್ಲಿದ್ದರೂ ಅರ್ಥಸ್ತರತೆಯ ದೃಷ್ಟಿಯಿಂದ ಗಮನಾರ್ಹವಾದ ಮೌಲ್ಯವನ್ನು ಪಡೆಯುತ್ತದೆ.

ಭಾರತಿಯವರ ನಾಟಕಗಳು ಬರಿಯ ಮಾತುಗಳ ಮಾಲೆಯಲ್ಲ. ಸುಳ್ಳು ಅಲಂಕಾರಗಳು, ಅಪ್ರಸ್ತುತ ಪ್ರಶಂಸೆ, ಅಧಿಕವಾಗಾಟೋಪ ಇವುಗಳನ್ನು ಇವರ ಶೈಲಿಯಲ್ಲಿ ಕಾಣಲಾರೆವು. ಬಾಹ್ಯ ಜಗತ್ತಿನ ಸೂಕ್ಷ್ಮ ಸಂವೇದನೆಗಳ ದಾಖಲೆ ಗಳೋ, ಪಾತ್ರದ ಅನುಭವದ ಸೀಮೆಗೆ ಬದ್ಧವಾಗಿರುವ ಮಾತುಗಳೋ ಅಷ್ಟೇ ಬಂದಿದ್ದು ಅಧಿಕ ಪ್ರಸಂಗಿತನಕ್ಕೆ ಆಸ್ಪದವೆಂಬುದೇ ಇಲ್ಲ. ಆದರೆ ಲೋಕ ಸತ್ಯ ವನ್ನು ಪ್ರತಿಬಿಂಬಿಸುವ ಹೇಳಿಕೆಗಳು ಯಾವ ಕವಿಯ ಕಾವ್ಯದಲ್ಲಿಯೇ ಆಗಲಿ, ನಾಟಕ ದಲ್ಲಿಯೇ ಆಗಲಿ ಸುಳಿಯುವುದು ಸ್ವಾಭಾವಿಕ. ಸಮರ್ಥ ಕವಿಯಾದಲ್ಲಿ ಈ ಹೇಳಿಕೆ ಗಳು ಬರಿಯ ಭಾವನಾಮಯವಾಗದೆ ನಿರಂತರತೆಯ ಜೀವನಕ್ಕೆ ಬರೆದ ಭಾಷ್ಯಗಳಂತೆ ಇರುತ್ತವೆ. ಭಾರತಿ ಅವರಲ್ಲಿಯೂ ಇಂಥವು ಹೇರಳ.

ಇಂದಿನ ಸಮಕಾಲೀನ ಸಂಗತಿಗಳು, ಸಮಸ್ಯೆಗಳೂ ಕೂಡ ಪಾತ್ರಗಳ ಬಾಯಲ್ಲಿ ಸುಳಿದಿರುವುದಕ್ಕೆ ಕಾರಣ ಕೃತಿಕಾರ್ತಿಯ ಸಮಕಾಲೀನ ಅರಿವು. ಲಕ್ಷ್ಮಣ ಊರ್ಮಿಳೆಯರ ಸಂಭಾಷಣೆಯಲ್ಲಿ ಅವರ ಸಮಕಾಲೀನವಾದ ಸೀತಾಪಹರಣ ಚರ್ಚೆ ಬಂದರೆ, 'ಮಹಾಸತಿ' ಯಲ್ಲಿ ಹಿಂದಿನ ಘಟನಾವಳಿಗಳ ಅವಲೋಕನವಷ್ಟೇ ಅಲ್ಲದೆ ಪೌರಾಣಿಕ ಸಂಗತಿಗಳು ಕೂಡ ಸಂಭಾಷಣೆಯಲ್ಲಿ ಓಡಾಡುತ್ತವೆ. ಕರ್ಣನ ವೃತ್ತಾಂತ, ಸೋದರ ಕಲಹ ಇತ್ಯಾದಿಗಳ ಚರ್ಚೆ ಇದೆ. ವ್ಯಕ್ತಿತ್ವ ಚಿತ್ರಣದಲ್ಲಿ ತಾನೇ ಪ್ರವೇಶಿಸಿ ಚಿತ್ರಿಸುವುದರ ಬದಲು ಲೇಖಕಿ ಅನ್ಯಪಾತ್ರಗಳ ಮೂಲಕ ಹೇಳಿಸುವಲ್ಲಿ ಆ ಪಾತ್ರಕ್ಕೆ ಒಂದು ಸಾರ್ವಕಾಲಿಕತೆಯನ್ನು ತಂದು ಕೊಡುತ್ತಾರೆ. ಊರ್ಮಿಳೆಯ ಬಗ್ಗೆ ಲಕ್ಷ್ಮಣ ನಾಡುವ ಮಾತುಗಳೇ ಆಗಲಿ, ಲಕ್ಷ್ಮಣನ ಬಗ್ಗೆ ರಾಮನು ಆಡುವ ಮಾತುಗಳೇ ಆಗಲಿ, ಕರ್ಣನ ಬಗ್ಗೆ ದೇವಕಬ್ಬೆ, ನೀಲಬ್ಬೆಯರ ಮಾತುಗಳೇ ಆಗಲಿ ಅವರ ಅಭಿಮಾನದ ಅಭಿಪ್ರಾಯಗಳಷ್ಟೇ ಆಗಿರದೆ ಲೇಖಕಿಯ ಅಭಿಪ್ರಾಯಗಳೂ ಆಗಿವೆ.

ಭಾರತಿ ಅವರ ನಾಟಕದ ಉನ್ನತಿಗೆ ಕಾರಣವೆಂದರೆ ಅವರು ಆತ್ಯಾಸಕ್ತಿಯಿಂದ ಅಭಿಮಾನದಿಂದ ಕಡೆದು ನಿಲ್ಲಿಸುವ ಸ್ತ್ರೀತತ್ವ. ಭಾವುಕತೆ, ಅನುಭಾವ, ವೈಯಕ್ತಿ ಕತೆಯನ್ನು ಮೀರಿನಿಂತ ತತ್ವಗಳೇ ಈ ಪಾತ್ರಗಳ ಜೀವಾಳ. ಬಹುಪಾಲು ಪಾತ್ರಗಳ ಮನೋಭಾವಗಳು ಸಮಾನಾಂತರ ರೇಖೆಗಳಲ್ಲಿಯೇ ಪ್ರವಹಿಸಿರುವುದರಿಂದ ಸ್ವಲ್ಪ ವಾಸ್ತವ ಜಗತ್ತಿಗೆ ಅತೀತವೇನೋ ಎನ್ನಿಸುತ್ತಾರೆ. ವಿಚಾರ ಘರ್ಷಣೆ, ಅಭಿಪ್ರಾಯ ಭೇದ, ಎಲ್ಲವೂ ಸ್ತ್ರೀ ತತ್ವದ ನೆರಳಿನಲ್ಲಿ ಮರೆಯಾಗಿವೆ. ನೇರ ನಿಷ್ಠೆಯಿಂದ ಈ ತತ್ವ ನಾಟಕದ ಕತೆಯ ದಿಕ್ಕನ್ನು ಅನುಸರಿಸಿ ಮಧ್ಯಮಗತಿಯಲ್ಲಿ ನಡೆದು ಇದ್ದಕ್ಕೆ

ದ್ಧಂತೆಯೇ ಆವೇಶದಲ್ಲಿ ಮುಕ್ತಾಯವನ್ನು ಪಡೆಯುವುದನ್ನು 'ಮಹಾಸತಿ'ಯಲ್ಲಿ ಗುರುತಿಸಬಹುದು. ಮಾತುಗಳಲ್ಲಿ ಕೂಡ ಯಾವ ಸಂಕೀರ್ಣತೆಗೂ ಎಡೆಗೊಡದೆ ನೇರವಾಗಿಯೇ ಪಾತ್ರಗಳು ವ್ಯವಹರಿಸುತ್ತವೆ. ಇದಕ್ಕೆ ಕಾರಣ ಭಾರತಿಯವರ ಮನೋಭೂಮಿಕೆಯಲ್ಲಿಯೇ ಸಂಕೀರ್ಣ ಸಂಗತಿಗಳಿಗೆ ಆಸ್ಪದವಿಲ್ಲ.

ಇಷ್ಟಾದರೂ ಈ ಪಾತ್ರಗಳಲ್ಲಿ ಭರವಸೆಯಿದೆ. ಆತ್ಮಗೌರವವಿದೆ. ಉದಾತ್ತತೆಯ ನಿರ್ವಹಣೆಯಿದೆ. ಹೆಣ್ಣು ಪಾತ್ರಗಳಾದರೋ ಆಶ್ಚರ್ಯಕರ ರೀತಿಯಲ್ಲಿ ಬುದ್ಧಿವಂತರು. ಆದರೆ ಅವುಗಳ ಕೌಶಲ, ಚುರುಕುತನಗಳು ಒಂದು ಬೌದ್ಧಿಕ ನಿರ್ವಾತದಲ್ಲಿ ಬಂಧಿತವಾಗಿರುವುದರಿಂದ ಅವು ಬದುಕಿದ್ದೂ ಅಚೇತನವೇನೋ ಎನ್ನಿಸುವುದುಂಟು. ಪಾತ್ರಗಳ ಸಾಮಾಜಿಕ ಪ್ರಜ್ಞೆ, ಆವರಣಕ್ಕೆ ಹೊಂದಿಕೊಳ್ಳುವ ಸ ೂಕ್ಷ್ಮ ಮನೋಭಾವ, ಇವು ಕೂಡ ಸರಳವಾಗಿದ್ದು ಲೇಖಕಿಯ ಮನೋಭಾವವೇ ಸರಳವಾದುದರಿಂದ ಇದನ್ನು ಆಕ್ಷೇಪಿಸುವಂತೆಯೂ ಇಲ್ಲ.

ಭಾರತಿ ಅವರ ಶೈಲಿಯಲ್ಲಿ ವರ್ಣನೆಯ ಅಧಿಕ ಪ್ರಸಂಗಗಳು ಕಡಿಮೆ. ಆದರೆ ಬಂದಿರುವ ಒಂದೆರಡು ವರ್ಣನೆಗಳು ರಮ್ಯವಾಗಿದೆ. ಮಹಾಸತಿಯಲ್ಲಿ ಬರುವ ಕತ್ತಲೆಯ ವರ್ಣನೆ ನಿಜಕ್ಕೂ ದಿಗಿಲು ಬಡಿಸುವಂತಹುದು.

(೧) ನೆಟ್ಟದಿಟ್ಟಿಸುತಿಹಳು ಇರುಳುವೆಣ್ಣಿನ ನಾರಿ
ಸದ್ದಿಲ್ಲದಿರಲು ಭಯ. ಸದ್ದಾದರೊಂದು ಭಯ

(೨) ಬಿತ್ತ ಕಿರಳಿತೋ, ಮರುಳ ಮತ್ತೊ, ಕತ್ತಲೆಗೆ
ಮುಗಿವುದೋ, ಇಲ್ಲವೋ ಕಾಣೆನೀ ಇರುಳೊಂದು

ಈ ಕತ್ತಲೆಯಿಂದ ಮುಕ್ತರಾಗುವುದೆಂತು ? 'ಕಣ್ಮುಚ್ಚಿ ಮಲಗಿದರಾಯಿತು' ನೀಲಬ್ಬೆಯ ಉಪಾಯ. ಆದರೆ ಮಲ್ಲಬ್ಬೆ 'ಮನವೆ ಕಪ್ಪಾಗಿರಲು ಕಣ್ಮುಚ್ಚಲೇನಾಯ್ತು' ಎಂದಾಗ ಓದುಗ ಒಂದು ಕ್ಷಣ ಸ್ತಬ್ಧನಾಗಬೇಕಾಗುತ್ತದೆ. ಇವರುಗಳ ಮನವೇಕೆ ಕಪ್ಪಾಯ್ತು ? ಏನು ಕಾರಣ ? ಇತ್ಯಾದಿಗಳು ಪ್ರಶ್ನಾವಳಿಯಾಗಿ ಮೂಡಿ ಬರುರಿಂವುದದ ನಾಟಕದ ಓಟ ಸರಳವಾಗಿ ಮುಂದುವರಿಯುತ್ತದೆ.

ಭಾರತಿ ಅವರು ಬಳಸಿರುವ ಛಂದಸ್ಸು ಸರಳ ರಗಳೆಯಾದರೂ ಲಲಿತ ರಗಳೆಯ ರೂಪವೇ ಹೆಚ್ಚು. ಸರಳ ರಗಳೆಯಂತೆ ಒಂದು ಸಾಲಿನಿಂದ ಮತ್ತೊಂದು ಸಾಲಿಗೆ ಇರುವ ಸಂಬಂಧದ ಕೊಂಡಿಯನ್ನು ಕಳಚಿಕೊಂಡು ಆಯಾ ಸಾಲಿನ ಅಂತ್ಯದಲ್ಲಿ ಪೂರ್ಣವಿರಾಮ ಬಂದಿರುವುದರಿಂದ ಇದು ಲಲಿತ ರಗಳೆಯೇ ಆಗಿದೆ. ಹೀಗಿರುವುದರಿಂದಲೇ ಚಿಕ್ಕ ಚಿಕ್ಕ ಮಾತುಗಳು ಚೊಕ್ಕವಾಗಿ ಅಭಿವ್ಯಕ್ತವಾಗಲು ಸಾಧ್ಯವಾಗಿದೆ.

೫ ೫ ೫ ೫
ನಿನ್ನಂತೆ। ಎನ್ನಮನ। ಕಾತರವ। ಹೊಂದಿಹುದು।
೫ ೫ ೫ ೫
ನಿನ್ನಂತೆ। ಅಗಲಿಕೆಯ। ನೋವ ನಾ। ನುಣುತಿಹೆನು

ೞ ೞ ೞ ೞ
ನಿನ್ನಂತೆ। ಮನಕೆ ಶಾಂ। ತಿಯನಾನು। ಬಯಸುವೆನು ।
ೞ ೞ ೞ ೞ
ನಿನಗಾಗಿ। ಎನಗಾಗಿ। ಅರಸುವೆನು। ಶಾಂತಿಯನು.

ಭಾರತಿ ಅವರ ಶೈಲಿಯಲ್ಲಿ ಆದಿ ಅಂತ್ಯ ಪ್ರಾಸಗಳಿಗಿಂತ ಅಂತಃಪ್ರಾಸಕ್ಕೆ ಹೆಚ್ಚು ಗಮನ. 'ಮಹಾಸತಿ'ಯಲ್ಲಿ ಇದಕ್ಕೆ ಅನೇಕ ಉದಾಹರಣೆಗಳು ದೊರೆಯುತ್ತವೆ.

(೧) ರುದ್ರರಸ ಕುಡಿ ಕ ಡಿದು ಉನ್ಮತ್ತಳಾಗಿರುವ
ಕಿಡಿಗಣ್ಣ ಭಾಮಿನಿಯು ಮುಡಿಗೆದರಿ ಬಂದಿಹಳು

(೨) ಗೆದ್ದರೇನಿದ್ದಪರೆ ಬಿದ್ದರೇನಳಿದ ಪರೆ
ಬಿದ್ದವರ ತ್ಯಾಗದಲಿ ಉದ್ಧಾರವಾಯ್ತು ಜಗ

ಭಾರತಿ ಅವರದು ಅಲಂಕಾರ ಶೈಲಿಯಲ್ಲ, ಆದ್ದರಿಂದ ಇಲ್ಲಿ ಅಲಂಕಾರಗಳು ವಿರಳ. ಎಲ್ಲವನ್ನೂ ವಾಚ್ಯ ಮಾಡುವ ಪ್ರವೃತ್ತಿಯೇ ಇವರ ಬರಹದ ಮೂಲ ಧೋರಣೆಯಾದುದರಿಂದ ಅಲಂಕಾರಗಳನ್ನು ಕಾಣಲಾರೆವು. ಅಲ್ಲಲ್ಲಿ ಕಂಡು ಬರುವ ಕೆಲವು ರೂಪಕಗಳು ನಾಲ್ಕು ಕಾಲ ಮನಸ್ಸಿನಲ್ಲಿ ನಿಲ್ಲಬಲ್ಲವುಗಳಾಗಿವೆ. ಪತಿಯನ್ನು ಕಳೆದುಕೊಂಡ ದೇಕಬ್ಬೆ 'ಕಳವಳದ ಕಾವಳದ ಕಾಡಿನಲಿ ಅಲೆಯುತಿವೆ' ಎಂಬುದು ಆಕೆಯ ಮನಃಕ್ಲೇಶವನ್ನು ಚಿತ್ರಿಸುವ ರೂಪಕ. ಕತ್ತಲೆಯ ಕರಾಳತೆ ಕವಯಿತ್ರಿಯ ಕಣ್ಗೆ 'ಕಪ್ಪನಪ್ಪಿದ ನೆಲಕೆ ನೆರಳ ಮಸಿ ಬಳಿಯುತಿದೆ' ಎಂಬಂತೆ ಕಾಣುತ್ತದೆ. ದೇಕಬ್ಬೆ ಸತಿ ಪದ್ಧತಿ ಅನುಸರಿಸಿದಳು, ಮಹಾಸತಿಯಾದಳು ಆಕೆಯ 'ಶೀಲದಾಶ್ರಯ ದಲ್ಲಿ ಪ್ರೇಮ ಶಾಶ್ವತವಾಯ್ತು' ಎಂದು ಕವಿಯಿತ್ರಿ ಹೇಳುವಾಗಂತೂ ಕವಿಯಿತ್ರಿ ಕೆಲವು ಶಾಶ್ವತ ಕ್ಷಣಗಳನ್ನು ನಿರ್ಮಿಸಿದ್ದಾಳೆನಿಸುತ್ತೆ.

ಭಾರತಿ ಅವರ ಶೈಲಿಯಲ್ಲಿ ಕೆಲವು ಗಮನಾರ್ಹ ಅಂಶಗಳಿರುವಂತೆ ಕುಂದೂ ಇಲ್ಲದಿಲ್ಲ. ತಪಸ್ವಿನಿಯಲ್ಲಿನ ಸರಳ ರಗಳೆ ಕೆಲವೆಡೆ ಐಕ್ಯ ಮತ್ತು ಸುಸಂಬದ್ಧತೆ ಗಳಿಲ್ಲದೆ ಭಾಷೆಯ ಬಳಕೆ ಮತ್ತು ಲಯದಲ್ಲಿ ಶೈಥಿಲ್ಯ ಕಂಡು ಬರುತ್ತದೆ. ಒಮ್ಮೊಮ್ಮೆ ಗದ್ಯ ಭಾವನೆಯ ಆವೇಶವು ಮೇರೆವರಿದಾಗ ಪದ್ಯತನವು ಸುಳಿದು ಬಿಡುವಂತೆ ಪದ್ಯದಲ್ಲಿ ಗದ್ಯದ ಸೊಗಡೂ ಸುಳಿಯುವುದುಂಟು.

ಹೆಣ್ಣು ಹೃದಯಗಳ ಅರಿವನ್ನು ಹೆಣ್ಣು ಹೃದಯವೇ ಪ್ರತಿಬಿಂಬಿಸಿರುವುದು ವಾಸ್ತವ ಅಂಶದಿಂದ ಮಹತ್ವಾದುದೆಂದರೆ 'ಭಾರತಿ' ಅವರ ಶೈಲಿಯನ್ನು ಪರಿಚಯಿಸಿ ದಂತಾಯಿತು ಎನ್ನಬಹುದು.

ಕರುಣರಸ ಗಂಗೆ

● ವೈ. ಕೆ. ಸಂಧ್ಯಾ

ಶ್ರೀಮತಿ 'ಭಾರತಿ' ಅವರು ಈಗಾಗಲೇ ಹಲವಾರು ನಾಟಕಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಚಿರನೂತನ ಕಾಣಿಕೆಯನ್ನಿತ್ತಿರುವರು. ಭಾರತೀಯ ನಾರಿಯರ ಹಿರಿಮೆ, ಕನ್ನಡ ಸಂಸ್ಕೃತಿಯ ದರ್ಶನವೇ ಈ ನಾಟಕಗಳ ಮುಖ್ಯ ಉದ್ದೇಶ ಎಂದರೂ ತಪ್ಪಾಗಲಾರದು. ಇವರು ನಾಟಕಗಳಿಗೆ ಆಯ್ದುಕೊಂಡಿರುವ ವಸ್ತು ಪೌರಾಣಿಕ, ಐತಿಹಾಸಿಕ ಪ್ರಸಿದ್ಧವಾದವು.

ಒಂದು ಹೆಣ್ಣಿನ ಮನಸ್ಸನ್ನು ಸಮರ್ಪಕವಾಗಿ ಅರಿಯಲು, ಇನ್ನೊಂದು ಹೆಣ್ಣಿಗೆ ಮಾತ್ರ ಸಾಧ್ಯ. ಈ ನಾಟಕಗಳಲ್ಲಿ ಸ್ತ್ರೀಯರ ಕತೆಯನ್ನು ಒಬ್ಬ ಸ್ತ್ರೀಯೇ ಮನಮುಟ್ಟುವಂತೆ ತೆರೆದಿಟ್ಟಿರುವುದು ಇಲ್ಲಿನ ವಿಶೇಷ. ಭಾರತಿಯವರು ಹೆಣ್ಣಿನ ಜೀವನವನ್ನು ಸಹಾನುಭೂತಿಯಿಂದ ಚಿತ್ರಿಸುತ್ತಾರೆ. ಇವರ ನಾಟಕಗಳಲ್ಲಿ ಕರುಣರಸವು ಸ್ಥಾಯಿಯಾಗಿದ್ದು ಮಿಕ್ಕ ರಸಗಳು ಪೋಷಕವಾಗಿ ಬರುತ್ತವೆ.

ಭಾರತಿ ಅವರ ನಾಟಕಗಳಲ್ಲಿ ಕರುಣ ರಸದಅವಲೋಕನೆಗೆ ಮೊದಲು, ಕರುಣ ರಸದ ಬಗ್ಗೆ ಅವರದೇ ಆದ ಭಾವನೆಯನ್ನು ಅರಿಯುವುದಗತ್ಯ. "ಯಾರಿಗೆ ಏನಾದರೇನು, ನಮ್ಮ ಪಾಡು ನಮಗೆ ಎಂದಿರುವ ಉದಾಸೀನ ಭೂಷಣರಿಗಿಂತ ಅಯ್ಯೋ ಪಾಪ ಎನ್ನುವಷ್ಟು ಜನ್ಮ ಸಾಫಲ್ಯ ಹೊಂದುವವರು ಸ್ವಲ್ಪ ಮೇಲು. ದಯೆಯೇ ಹುಟ್ಟುಗುಣವಾಗಿ ಕರಗಿ ಕರಗಿ ಏನೂ ಮಾಡಲಾಗದೆ 'ಅಯ್ಯೋ ದೇವರೆ, ಹೇಗಾದರೂ ಇದರಿಂದ ಪಾರುಮಾಡು' ಎಂದು ಭಾರವನ್ನು ಇಳಿಸಿಕೊಳ್ಳುವ ಕೈಲಾಗದ ಸಾಧು ಪ್ರಾಣಿಗಳು ಇನ್ನೂ ಒಂದು ಕೈ ಮೇಲು. ಆದರೆ ಅನುಕಂಪದ ಉದ್ದೇಶ ಈ ಬಗೆಯವರಿಂದ ನೆರವೇರದು. ಅದನ್ನು ಪೂರೈಸಲು ಕೆಲವರ ಬಗೆಯನ್ನು ಹೊಕ್ಕು ತಟ್ಟಿ ಎಬ್ಬಿಸುತ್ತದೆ, ಪ್ರೇರೇಪಿಸುತ್ತದೆ. ಅನುಕಂಪವೆಂಬುದು ಅವರನ್ನು ಸುಮ್ಮನಿರಗೊಡುವುದಿಲ್ಲ. ಪ್ರಯತ್ನಿಸು ಪ್ರಯತ್ನಿಸು ಎಂದು ಆತ್ಮಬೋಧೆಯಾಗುತ್ತಿರುವಾಗ ಕರ್ತವ್ಯ

ವನ್ನರಿತು ವರ್ತಿಸುವವರು ಸಮರ್ಥರಾದವರು. ದುಃಖ ಪರಿಹಾರ ಮನುಷ್ಯನಿಗೆ ದುಸ್ಸಾಧ್ಯವಾಗಿದ್ದರೂ ದುಃಖೋಪಶಮನ ಸಾಧ್ಯವಾದೀತು. ಯಾವುದಾದರೊಂದು ವಿಧದಲ್ಲಿ ದುಃಖವೆಂಬುದು ಸ್ವಂತ ಅನುಭವಕ್ಕೆ ಬಂದಿದ್ದರೆ ಮಾತ್ರ ಈ ಉಪಶಮನದ ಪ್ರಯತ್ನ ಅವರಿಂದ ಸಾಗುತ್ತದೆ. ಇತರರು ಭಾವಿಸುವುದಕ್ಕಿಂತ ಚೆನ್ನಾಗಿ ಅವರು ಅನ್ಯರ ದುಃಖವನ್ನು ಗ್ರಹಿಸುವುದು ಮಾತ್ರವಲ್ಲ, ಅದರಲ್ಲಿ ಭಾಗಿಗಳೂ ಆಗುವರು."

ಈ ನಾಟಕಗಳಲ್ಲಿನ ಪಾತ್ರಗಳ ನಡವಳಿಕೆಯಲ್ಲಿಯೋ, ಪ್ರಸಂಗಗಳ ನಿರ್ಮಾಣದಲ್ಲಿಯೋ, ಸನ್ನಿವೇಶ ನಿರೂಪಣೆಯಲ್ಲಿಯೋ ಹೆಣ್ಣು ಹೃದಯದ ಅನುಕಂಪ ಮಿಡಿದು ಸಹೃದಯ ಸ್ಪಂದನವುಂಟುಮಾಡುವುದನ್ನು ಕಾಣಬಹುದು. 'ಭಾರತಿ' ಅವರೇ ಒಂದೆಡೆ ಹೇಳಿರುವಂತೆ 'ಬರೆದು ನಿದ್ದವಾದುದೇನೇ ಇರಲಿ' ಅದರಲ್ಲಿ ಬರೆದವರ ಸ್ವಭಾವದ ಛಾಯೆ ಕಾಣಬೇಕು.' ಹೀಗೆ 'ಹೆಣ್ಣು ಸ್ವಭಾವ'ದ ಛಾಯೆ ಪಾತ್ರಗಳುದ್ದಕ್ಕೂ ಒಡಮೂಡಿದೆ.

*   *   *   *

'ಮಹಾಸತಿ' ನಾಟಕದಲ್ಲಿ ವೀರನಾರಿ ದೇಕಬ್ಬೆಯು ತನ್ನ ಪತಿ ನವಿಲನಾಡಧಿಪತಿ ಏಚನು ಮರಣ ಹೊಂದಿದಾಗ ವೀರಸತಿಗೆ ಉಚಿತವಾದ ಸಹಗಮನವನ್ನು ಮಾಡುತ್ತಾಳೆ. ಈ ನಾಟಕದಲ್ಲಿ ಆರಂಭದಿಂದ ಕಡೆಯವರೆಗೂ ಕರುಣರಸವು ನಿರರ್ಗಳವಾಗಿ ಹರಿದಿದೆ. ಈ ನಾಟಕದ ನಾಯಕಿ ದೇಕಲೆ ಅನುಭವಿಸುವ ನೋವು, ಬಂಧುಜನಗಳ ದುಃಖ ಓದುಗರ ಹೃದಯವನ್ನು ಮಿಡಿಸುತ್ತದೆ. ದೇಕಲೆಯ ನುಡಿಯಲ್ಲಿ ಸಿಂಹಾವಲೋಕನ ಕ್ರಮದಿಂದ ನಮಗೆ ಕತೆಯ ಕಿರುಪರಿಚಯವಾಗುತ್ತದೆ. ಅವಳಾಡುವ ಒಂದೊಂದು ಮಾತೂ ಮರುಕದ ಚಿಲುಮೆಯನ್ನು ಉಕ್ಕಿಸುತ್ತವೆ.

'ಬೆಂದುದೀ ಕರುಳು
ಮುದ್ದುಗುವರಿಯ, ಕೋಮಲೆಯ, ದುರ್ಗತಿಯನಿಂದು
ನೋಡಲಾಗದ ತೆರದಿ ಈ ಕಂಗಳಿಂಗಿದೊಡೆ
ಕೊರಗೊಂದೆ ಕಾಡುವುದು'

—ಎಂಬ ಸಂಕಟ ಅವಳ ತಾಯಿಯದಾಗುವುದು.

'ಪ್ರಾಪ್ತವಾದುದನೆಲ್ಲ ಅನುಭವಿಸುವುದೇ ಬದುಕು
ಈ ಸಾಹಸವ ಮಾಣು'

—ಎಂದು ಅವಳ ತಂದೆ ಪರಿಪರಿಯಾಗಿ ಅವಳ ಮನಸ್ಸನ್ನು ಬದಲಾಯಿಸಲು ಪ್ರಯತ್ನಿಸಿ ಹತಾಶನಾಗುವನು. ಅವರಾಡುವ ಒಂದೊಂದು ಮಾತೂ ಹೆತ್ತಕರುಳಿನ ನೋವಿನ ಚುರುಕನ್ನು ಮುಟ್ಟಿಸುತ್ತದೆ. ತಂದೆ, ತಾಯಿ ಎಷ್ಟೆಷ್ಟೋ ವೇದಾಂತ ಹೇಳುವರು. ಅದಕ್ಕೆಲ್ಲ ಅವಳದು ಒಂದೇ ಮಾತು: 'ಕುಲಸತಿಯು ನಾನು, ಕುಲಗೌರವವ ಕಾಯುವೆನು.' ಹೆತ್ತವರ, ಮಗಳ ಸಂಭಾಷಣೆ ಕರುಣಾಪೂರಿತವಾಗಿದೆ.

'ಇನ್ನೇನನೆಸಗದಿರು ಕಾಲ್ಪಿಡಿದು ಬೇಡುವೆನು' ಎಂದು ಜನನಿಯೇ ಬೇಡಿಕೊಂಡರೂ 'ಗಂಡನಿಲ್ಲದ ಜನ್ಮ ವ್ಯರ್ಥ' 'ಜನದ ಕಣ್ಗೀಜನುಮ ಭಾರವಾಗುವುದಿನ್ನು' ಎಂದು ದೇಕಬ್ಬೆ ಅಚಲಳಾಗಿ ನುಡಿಯುವಳು. 'ತ್ಯಾಗ ವೀರಜನ್ಮಕ್ಕೆ ಒಪ್ಪು', 'ಎನಗೆ ಸಾವು ಶರಣ್ಯ; ಇಂದದಕೆ ಸನ್ಮಾನ', 'ಸತಿಪಥ ನಿರೋಧ ಒಪ್ಪದು ನಿಮಗೆ, ಅನುಮತಿಯ ನೀಡೆನಗೆ' ಎಂದು ಪತಿಯನ್ನು ಹಿಂಬಾಲಿಸಲು ತಾಯಿಯ ಅಪ್ಪಣೆಯನ್ನು ಬೇಡುತ್ತಾಳೆ. ಅವಳ ತಾಯಿ ಕಲ್ಲು ಕರಗುವಂತೆ ನೂರು ರೀತಿಯಲ್ಲಿ ಬೇಡಿ ಸೋತು ಕಣ್ಣೀರು ಗರೆಯುವಳು.

ರುದ್ರಭೂಮಿಯ ದೃಶ್ಯದಲ್ಲಿ ಕರುಣೆಯ ಸೆಲೆ ಒಡೆಯುವುದು. ಏರುಜವ್ವನೆ, ಕಡು ಚೆಲುವೆ ಸತಿ ಹೋಗುವುದನ್ನು ನೋಡಲು ತುಂಬ ಜನ ಸೇರಿದ್ದಾರೆ. 'ಅವನಿತ್ತ ಅವನೊಯ್ದ, ಅವನಿಚ್ಛೆಗೆದುರಿಲ್ಲ' ಎಂದು ದೇಕಬ್ಬೆಯ ತಾಯಿ ತನಗೆ ತಾನೇ ಸಮಾಧಾನ ತಂದುಕೊಳ್ಳುತ್ತಾಳೆ. ತಂದೆ ಮೌನವಾಗಿ ರೋಧಿಸುವನು. ಸಖಿಯರು ತಮ್ಮ ಪ್ರಿಯರಾಣಿಯ ಅಗಲಿಕೆಗಾಗ ಕೊರಗುವರು. ಕಡೆಯ ದರ್ಶನ ಪಡೆದು ಎಲ್ಲರೂ ಹೊರಟ ಮೇಲೆ ಪತಿವ್ರತಾ ಶಿರೋಮಣಿ ದೇಕಲೆಯು ಕಡೆಯದಾಗಿ ಜನ್ಮ ಭೂಮಿಗೆ ವಂದಿಸಿ ಚಿತೆಗೆ ಹಾರುವಳು.

'ಆಕೆಗೆ ಅದು ಮಹಾಯಾತ್ರೆ, ಸಾಮಾನ್ಯರಿಗೆ ಲಭ್ಯವಲ್ಲದಷ್ಟು ದೊಡ್ಡತನ ಆಕೆಯದು. ಸಾಮಾಜಿಕ ಸಂಪ್ರದಾಯವಾಗಿ 'ಸತೀ' ಹೆಣ್ಣಿನ ಬದುಕಿಗೆ ಎಷ್ಟು ಗಾಸಿಯನ್ನು ತಂದಿತೋ ಅದನ್ನು ಓದಿ ಕೇಳಿ ಅರಿತವರಿಗೆ ಈ ಚಿತ್ರದ ಕಾಂತಿ ಉಜ್ವಲವಾಗಿ ಕಾಣಿಸುವುದು. ತಾನಾಗಿ ಒಲಿದು ಆಯ್ದ ಈ ಸಾವಿನ ಹಿರಿಮೆ ನಮ್ಮನ್ನು ಮೂಕರನ್ನಾಗಿಸುತ್ತದೆ. ಆ ಹಿರಿಮೆಯ ಸ್ವರೂಪವನ್ನು ಭಾರತಿಯವರು ಚೆನ್ನಾಗಿ ಕಾಣಿಸಿದ್ದಾರೆ.'

ಕವಿ ವಾಲ್ಮೀಕಿಯಿಂದ ಉಪೇಕ್ಷಿತಳಾದ ಊರ್ಮಿಳೆಯನ್ನು ಭಾರತಿಯವರು 'ತಪಸ್ವಿನಿ'ಯಾಗಿ ಚಿತ್ರಿಸಿ, ಅವಳ ವ್ಯಕ್ತಿತ್ವದ ದೈವೀ ದರ್ಶನವನ್ನು ಮಾಡಿಸಿದ್ದಾರೆ. ಶ್ರೀರಾಮಚಂದ್ರನು ಅರಣ್ಯವಾಸವನ್ನು ಕೈಗೊಂಡ ಮೇಲೆ, ಅವನ ವನವಾಸದ ಅವಧಿ ಹದಿನಾಲ್ಕು ವರ್ಷ ಪರ್ಯಂತರವೂ ಊರ್ಮಿಳಾದೇವಿ ಅಯೋಧ್ಯೆಯಲ್ಲಿ ಕಠೋರ ತಪಸ್ಸಿನಲ್ಲಿ ತೊಡಗುವಳು. ಶ್ರೀರಾಮ ವನವಾಸ ಮುಗಿಸಿಕೊಂಡು ಹಿಂತಿರುಗಿದ ದಿವಸ ತಪೋನಿರತಳಾಗಿದ್ದ ಊರ್ಮಿಳೆಯನ್ನು ಲಕ್ಷ್ಮಣನು ಕಾಣುವ ಸನ್ನಿವೇಶ ಇದರಲ್ಲಿ ಚಿತ್ರಿತವಾಗಿದೆ. ಈ ಅಪೂರ್ವ ಮಿಲನದ ಸನ್ನಿವೇಶ 'ತಪಸ್ವಿನಿ'ಯಾಗಿ ರೂಪುಗೊಂಡಿದೆ.

ಊರ್ಮಿಳೆಯ ಸಂಯಮಭರಿತ ಜೀವನದಲ್ಲಿ, ತಪೋನಿಷ್ಠೆಯಲ್ಲಿ ಕಾಲಸರಿದದ್ದು ಅವಳ ಗಮನಕ್ಕೆ ಬಾರಲಿಲ್ಲ. ಅವಳ ಬಾಳು ಆಶ್ರಮದ ಪ್ರಶಾಂತ ಬಾಳಿನಲ್ಲೇ ಕಲಿತುಹೋಯಿತು, ನೊಂದ ಮನಸ್ಸು ನೋವನ್ನರಿಯುವ ದೃಷ್ಟಿ ಹೊಂದಿತು. ನೊಂದ ಹೃದಯ ನೋವಿನೊಂದಿಗೆ ಬೇಯುವ ಕರುಣೆಯಲ್ಲಿ ಪಳಗಿತು. ನೊಂದ

ಜೀವ ನೋವನ್ನು ತಡೆಯುವ ಬಲವನ್ನು ಆರ್ಜಿಸಿತು. ಆಶ್ರಮದ ಮೃಗ ಪಕ್ಷಿಗಳ ಕಷ್ಟ ಸುಖವನ್ನು ತನ್ನದಾಗಿ ಅನುಭವಿಸುತ್ತ ಅಲನೆ ವಿಶ್ವಜೀವನದಲ್ಲಿ ತನ್ನ ವ್ಯಕ್ತಿತ್ವ ವನ್ನು ಮರೆತಳು. ರಾಮನು ಅಯೋಧ್ಯೆಗೆ ಹಿಂತಿರುಗುವ ದಿನ ಸರಯೂ ನದಿಯ ಮೇಲೆ ಹೋಗುತ್ತಿರುವ ಹದಿನಾಲ್ಕು ದೋಣಿಗಳನ್ನು ಎಣಿಸಿ, ಅಂದು ಶ್ರೀರಾಮ ನೈತರುವ ದಿನವೆಂದು ನೆನೆಯುವಳು. ಆ ವೇಳೆಗೆ ಸರಿಯಾಗಿ ಒಂದು ತಾಯಿ ಜಿಂಕೆ ತನ್ನ ಮರಿಯನ್ನು ಕಾಣದೆ ಸುತ್ತಮುತ್ತಲೂ ಅರಸುತ್ತ, ಆತಂಕದಿಂದ ಕಣ್ಣಗಳನ್ನರಳಿಸಿ ನೋಡುತ್ತ ಊರ್ಮಿಳಾದೇವಿಯ ಬಳಿಗೆ ಬರುತ್ತದೆ. ಅವಳು ಅದನ್ನು ಕಂಡು ಅದರ ಬವಣೆಯನ್ನು ಕ್ಷಣ ಮಾತ್ರದಲ್ಲಿ ಅರಿತುಕೊಂಡು—

'ಬಾರೆನ್ನ ಪ್ರೇಮ ಬಂಧುವೇ! ಸೊಬಗಿನಿರವೆ!
ಬರಲಿಲ್ಲವೋ ದುಷ್ಟ ಕಂದ ನಿನ್ನ ಬಳಿಗೆ?
ಮರುಗದಿರು; ಮರುಗದಿರು; ಅರಸಿ ಕರೆಸುವೆನು.
ಅಂಜಲೇನಾಗಿಹುದು? ಕೈಮೀರಿ ಪೋದುದೇ?
ನೀಗು ದುಗುಡುವ ಕಂದ! ತೊಳಲುವುದು ತರವಲ್ಲ'

—ಎಂದು ನಾನಾ ಮಾತುಗಳಿಂದ ಅದನ್ನು ಸಂತೈಸುತ್ತಾಳೆ.

'ಕರುಳ ಮಮತೆಯ ನೋವ ನಾನರಿಪೆನೆಂತು?' ಎನ್ನುವಾಗ ಅವಳ ಕಂಠ ಕಂಪಿಸಿರಬೇಕು. ತನಗೆ ಆ ನೋವು ತಿಳಿಯುವುದಾದರೂ ಹೇಗೆ ಎಂಬ ಮಾತೃ ವಾತ್ಸಲ್ಯದ ಕೊರಗು ಅವಳನ್ನು ಕ್ಷಣ ಕಾಡಿಸಿರಬೇಕು. ಮದುವೆಯಾದ ತಕ್ಷಣ ದಲ್ಲೇ ಸನ್ಯಾಸಿಯ ಬದುಕನ್ನು ಭರಿಸಬೇಕಾಗಿ ಬಂದು, 'ಕರುಳು ಮಮತೆ'ಯ ಭಾಗ್ಯ ಅವಳಿಗಿಲ್ಲ ಎಂದು ಕೊರತೆಯೆನಿಸಿ ಅವಳ ಬಗ್ಗೆ ಮರುಕ ಉಂಟಾಗುತ್ತದೆ. ಈ ಸಂದರ್ಭದಲ್ಲಿ ಅವಳ ತಾಯ್ತನದ ಹಂಬಲ ಉತ್ಕಟವಾಗಿ ಅಭಿವ್ಯಕ್ತವಾಗುವುದು. ಇತ್ತ ತಾಯನ್ನರಸುತ್ತ ಕಂಗಾಲಾಗಿ ಓಡಿಬರುತ್ತಿರುವ ಜಿಂಕೆಮರಿಯನ್ನು ಲಕ್ಷ್ಮಣನು ಎತ್ತಿಕೊಂಡು ಬರುವನು. ಅವನು ಅದನ್ನು ಬಹು ವಾತ್ಸಲ್ಯದಿಂದ ಕಾಣುವನು,

'ಎಲ್ಲೆಲ್ಲಿ ತಿರುತಿರುಗಿ ಬಳಲಿದೆಯೊ ಕಂದ?
ತಾಯೂರೊ ನಿನಗೆ? ಬೀಡೆಲ್ಲಿಹುದೋ ಕಾಣೆ.'

—ಎಂದು ಬಹು ಮರುಕದಿಂದ ಮೃದುವಾಗಿ ಕೇಳುವನು.

'ಅಲೆವ ಆಯಾಸವೋ? ಅಗಲಿಕೆಯ ನೋವೋ?
ಭಯವೋ? ಹಸಿದಿಹೆಯೋ? ವಿಶ್ರಾಂತಿಯೊಳಪೇಕ್ಷೆಯೊ?
ಇಂತೆಂದು ನುಡಿಯೆ ಬಾರದ ಮೂಗು ಜೀವಿ!
ನಿನ್ನಂತರಂಗದ ನೋವನೆಂತು ಅರಿದಪೆನೋ.'

—ಎಂದು ಹಲವು ರೀತಿಯಲ್ಲಿ ಅದನ್ನು ಆದರಿಸಿ ಉಪಚರಿಸುವೆನು.

'ನಿನ್ನಂತೆ ಎನ್ನ ಮನ ಕಾತರವನೊಂದಿಹುದು.
ನಿನ್ನಂತೆ ಅಗಲಿಕೆಯ ನೋವ ನಾನುಣುತಿಹೆನು'

–ಎಂದು ತನ್ನ ಮನದ ದೀರ್ಘ ವಿರಹವನ್ನು ಏನೂ ಅರಿಯದ ಕಂದಮ್ಮನಲ್ಲಿ ತೋಡಿಕೊಳ್ಳುವನು. ತಾನೂ ಶಾಂತಿಯ ನೆಲೆಯನ್ನು ಹುಡುಕುತ್ತಿರುವುದಾಗಿ ತಿಳಿಸುವನು. ಅಣ್ಣನ ಹಿಂಬಾಲಕನಾಗಿ ಸ್ವಾರ್ಥತ್ಯಾಗದಿಂದ ಅತ್ಯಂತ ಸಂಯಮಿಯಾಗಿದ್ದ ಲಕ್ಷ್ಮಣ, ತಪಸ್ವಿನಿಯಾಗಿದ್ದ ಊರ್ಮಿಳೆ ಈ ನವದಂಪತಿಗಳ ದೀರ್ಘ ಅಗಲಿಕೆಯ ಬಗೆಗೆ 'ಅಯ್ಯೋ ಪಾಪ' ಎನಿಸದೆ ಇರದು.

o o o

ಮಹಾ ಭಾರತದಲ್ಲಿ ಶಾಕುಂತಲಾ ವೃತ್ತಾಂತ ಸಂಕ್ಷೇಪವಾಗಿ ಬಂದಿದೆ. ಕಾಳಿದಾಸನು 'ಶಾಕುಂತಲಾ' ಸೃಷ್ಟಿಸಿ ಶೃಂಗಾರ ಕರುಣಾರಸಗಳ ಗಂಗೆ ಯಮುನೆಯರನ್ನು ಹರಿಸುತ್ತಾನೆ. ಈ ಪುರಾಣಾಂಶದಿಂದಲೇ 'ವಾತ್ಸಲ್ಯ ತರಂಗ ಲೀಲಾ' ಮೈವೆತ್ತಿದೆ ಎನ್ನಬಹುದು.

ಬ್ರಹ್ಮರ್ಷಿ ಪದವಿಗಾಗಿ ಘೋರ ತಪಸ್ಸನ್ನೆಸಗಿದ ವಿಶ್ವಾಮಿತ್ರನ ತಪೋಭಂಗದ ಫಲ ಶಕುಂತಲೆಯ ಜನನ. ಆಗತಾನೇ ಹುಟ್ಟಿದ ಹಾಲು ಹಸುಳೆಯನ್ನು ಏಕಾಕಿಯಾಗಿ ಬಿಟ್ಟುಹೋದ ಆ ತಂದೆತಾಯಿಗಳ ನಡವಳಿಕೆಯಿಂದ ಸ್ವಾಭಾವಿಕವಾಗಿ ಮಗುವಿನ ಬಗ್ಗೆ ನಮ್ಮ ತುಂಬುಅನುಕಂಪ ಹರಿಯುವುದು. ಆ ಎಳೇ ಮಗುವಿನ ಬಗ್ಗೆ ನಮಗೆ ವ್ಯಾಕುಲ ಉಂಟಾಗುತ್ತದೆ.

ತಪೋಭಂಗದ ಅರಿವಾಗಿ ತಂದೆ ಮಗುವನ್ನು ತಿರಸ್ಕರಿಸುತ್ತಾನೆ. ಆದರೆ ತಾಯಿ ಮೇನಕೆ ಹಾಗೆ ಮಾಡಲು ಸಾಧ್ಯವೇ? ಅವಳ ಹೆತ್ತ ಕರುಳತಡೆಯುವುದೇ? ಆದರೆ ಸನ್ನಿವೇಶದ ಒತ್ತಡದಿಂದ ಅವಳು ಮಗುವನ್ನು ಬಿಟ್ಟು ಹೊರಡಲೇಬೇಕಾಗುತ್ತದೆ. ಒಡೆಯನ ಆಜ್ಞೆಯನ್ನು ಮೀರಲಾರಳು. ಕರುಳು ಕುಡಿಯನ್ನೂ ತ್ಯಜಿಸಲಾರಳು. ಹೀಗೆ ಇಬ್ಬಗೆಯ ನೋವಿನಲ್ಲಿ ಸಿಕ್ಕಿ ನರಳುವಳು. ಈ ಎರಡು ಶಕ್ತಿಗಳ ನಡುವೆ ಅವಳು ನುಜ್ಜುಗುಜ್ಜಾಗುವಳು. ಒಮ್ಮೆ ಆ ಶಕ್ತಿ, ಇನ್ನೊಮ್ಮೆ ಈ ಶಕ್ತಿ ಹೆಚ್ಚಿ ಎರಡರ ಮಧ್ಯೆ ತೂಗಾಡುವಳು. ಕೊನೆಗೆ ಪ್ರಭುವಿನ ಕಡೆಯ ಸೆಳೆತವೇ ಹೆಚ್ಚಾಗಿ ಕಣ್ಣೀರು ಸುರಿಸುತ್ತ ಮನಸ್ಸನ್ನೆಲ್ಲ ಮಗುವಿನಲ್ಲೇ ಬಿಟ್ಟು ದೇವಲೋಕಕ್ಕೆ ಮರುಳುತ್ತಾಳೆ. ಮೇನಕೆಯ ಮನಸ್ಸಿನ ತುಮುಲವನ್ನು 'ವಾತ್ಸಲ್ಯ ತರಂಗ ಲೀಲಾ' ಸಮರ್ಪಕವಾಗಿ ಒಡಮೂಡಿಸುತ್ತದೆ. ಭಾರತಿ ಅವರು ಅವಳ ಮಾನಸಿಕ ಹೋರಾಟವನ್ನು, ತಾಯ್ತನದ ಹೊಣೆಯನ್ನು ಅನುಭವವೇದ್ಯವಾಗುವಂತೆ ಬಣ್ಣಿಸಿದ್ದಾರೆ.

ವಿಶ್ವಾಮಿತ್ರನಿಗೆ ಮೇನಕೆ ಮಗುವನ್ನು ಒಪ್ಪಿಸುವ ದೃಶ್ಯ ಕರುಳು ಮಿಡಿಸುವುದು :

'ಮುನಿ ಎತ್ತ ಪೋದನೋ?
ಬರಲಿಲ್ಲ ವೇತಕೋ? ಆತನಿಗೆ ತಿಳಿಸದೆಯೇ
ನಾನೆಂತು ಪೊರಮಡಲಿ? ಶಿಶುವ ಪೊರೆವದಕಾಗಿ
ಬೇಡಿದರು ತಪ್ಪಲ್ಲ'.

—ಎಂದು ಮುನಿಯ ಹಾದಿ ಕಾದು ತಡಕಾಡುವಳು. 'ಕನಿಕರಿಸು, ನಾ ನಿರಪರಾಧಿ' ಎಂದು ಬೇಡುವಳು,

'ಆರ್ಯಾ! ನಿರ್ಬಂಧವೆನಗಿಹುದು ಅನಿವಾರ್ಯವದು,
ಸ್ವಾತಂತ್ರ್ಯವಿಲ್ಲದಾ ಆಶ್ರಿತೆಯು ನಾನು.
ಈ ಮಗುವು ಅಪರಾಧವೇನಗೈದುದು ನಮಗೆ ?
ಈರ್ವರೂ ಕೈ ಬಿಡಲು ತರವೇ ?'

—ಎಂದು ಬೇಡುವಳು.

'ವಾತ್ಸಲ್ಯ ಬಲವೆತ್ತು ಶಿಶುವ ಬಿಡೆ ಮನಸಿಲ್ಲ,
ಅಲ್ಲಿ ಕೊಂಡೊಯ್ಯುವದಕೆ ಅಮರರೊಪ್ಪಿಗೆ ಇಲ್ಲ.'

—ಎನ್ನುವಳು.

ವಿಶ್ವಾಮಿತ್ರನ ಮುಂದೆ ಆರ್ತಳಾಗಿ ಬೇಡುತ್ತ ನಿಂತ ಮೇನಕೆಯ ಚಿತ್ರಣ ಕಣ್ಣಿಗೆ ಕಟ್ಟಿದಂತಾಗುವುದು. ಅವಳ ದಾರುಣ ಸ್ಥಿತಿಗೆ ಎಂಥವರಾದರೂ ಮರುಗಲೇ ಬೇಕು. ಆದರೆ ವಿಶ್ವಾಮಿತ್ರ ಮಾತ್ರ ಅಚಲನಾಗೇ ಇರುವನು.

ಕಡೆಯಲ್ಲಿ ಮೇನಕೆ ತನ್ನ ಮಗುವನ್ನು ವನದೇವಿಯ ಮಡಿಲಿಗೆ ಹಾಕಿ ಪ್ರಾರ್ಥನೆಗೈದು ಹಿಂದೆ ನೋಡುನೋಡುತ್ತ,

'ಇನ್ನೆಂದು ನೋಡುವೆನೋ; ಅಗಲಿ ಪೋಗುವೆನೀಗ,
ಸುಖ ಸಂತಸಗಳಲಿ ಬಾಳು ತರಳೇ!'

–ಎಂದು ಮಗಳ ಶುಭ ಕೋರಿ ತೆರಳುವಳು.

ಭಾರತಿಯವರ ನಾಟಕಗಳು ಇಂದಿನ ಆಧುನಿಕ ಪ್ರಜ್ಞೆಯ ಓದುಗರಿಗೆ ಅಷ್ಟಾಗಿ ರುಚಿಸದೆ ಇರಬಹುದು. ಆದರೆ ಅವರು ಬರೆದ ಕಾಲ, ಬೆಳೆದ ಪರಿಸರ, ಚಿತ್ರಿಸಬಯಸಿದ ಉದಾತ್ತತೆ ಇವುಗಳನ್ನು ಗಮನಿಸಿದ ಸಹೃದಯ ಓದುಗ ಆಸಕ್ತಿ ವಹಿಸುತ್ತಾನೆ ಎನಿಸುತ್ತದೆ. ★

ತಾಯಿ-ಮಗು

● ಶೇಷನಾರಾಯಣ

ವಾತ್ಸಲ್ಯ ತರಂಗ ಲೀಲಾ ಒಂದು ಪುಟ್ಟ ರೂಪಕ. ಲೇಖಿಕೆಯವರು ಒಂದೇ ದಿನದ ಉದಯ-ಅಸ್ತಮಾನಗಳಲ್ಲಿ ನಡೆದಿರ ಬಹುದೆನ್ನಲಾವ ಘಟನೆಯನ್ನು ಸರಳ ರಗಳೆಯಲ್ಲಿ ಇಲ್ಲಿ ನಿರೂಪಿಸಿದ್ದಾರೆ.

'ಶಾಕುಂತಲಾ' ನಾಟಕದ ಕಥೆಯೆ ಇಲ್ಲಿನ ವಸ್ತು. ಕಾಳಿದಾಸನ ಮೇರುಕೃತಿಯಾದ ಈ ನಾಟಕ ವಸ್ತುವನ್ನು ಹಲವರು ಹಲವು ರೀತಿಯಲ್ಲಿ ಕಂಡಿದ್ದಾರೆ, ಬಳಸಿಕೊಂಡಿದ್ದಾರೆ.

ಆದರೆ ಮೂವತ್ತನಾಲ್ಕು ಪುಟಗಳ ಈ ಕಿರು ರೂಪಕದಲ್ಲಿ ಶ್ರೀಮತಿ ಭಾರತಿಯವರು ಕಥೆಯನ್ನು ಹೆಣೆದಿರುವ ರೀತಿ ತುಂಬಾ ಸೊಗಸು. ವಿಷಯ ಪ್ರವೇಶದಲ್ಲಿ ಅವರೇ ಹೇಳಿರುವಂತೆ ಎಲ್ಲರ ಹೃದಯಗಳಲ್ಲಿ ಈ ವಾತ್ಸಲ್ಯ ತರಂಗ ತರಂಗವಾಗಿ ಎದ್ದು ವರ್ತುಲಾಕಾರವಾಗಿ, ವಿಶಾಲವಾಗಿ ಹೊಮ್ಮುತ್ತ ಹೋಗುತ್ತದೆ.

ತನ್ನ ತಪೋಭಂಗವಾಯಿತೆಂದು ವಿಶ್ವಾಮಿತ್ರ, ಹುಟ್ಟಿದ ಒಡನೆಯೆ ಮಗುವನ್ನು ತಿರಸ್ಕರಿಸುತ್ತಾನೆ. ಯಾವ ಉದ್ದೇಶಕ್ಕಾಗಿ ಮೇನಕೆ ಸುರಲೋಕದಿಂದ ಭೂಮಿಗೆ ಬಂದಿದ್ದಳೊ, ಅದು ನೆರವೇರಿತೆಂದು, ಮತ್ತೆ ಸ್ವಸ್ಥಾನಕ್ಕೆ ಹಿಂದಿರುಗಲು ಸುರಪತಿಯಿಂದ ಆಜ್ಞೆ ಬರುತ್ತದೆ.

ಈ ಗಣಿಕೆಯರು ಸುರಲೋಕದವರು. ಗಡ್ಡ ಮೀಸೆ ಬಿಟ್ಟ ತಪೋಧಾರಿಗಳ ಮುಂದೆ ನಯವಾಗಿ ಕುಣಿದು ಅವರ ಚಿತ್ತ-ಚಾಂಚಲ್ಯವನ್ನು ಉಂಟುಮಾಡುವುದು ತಾನೆ ಈ ವೈಯಾರಿಯರ ಕೆಲಸ.

ಆ ಕೆಲಸವನ್ನು ಮೇನಕೆ ಯಶಸ್ವಿಯಾಗಿ ಮಾಡಿ ಮುಗಿಸಿದಳು. ವಿಶ್ವಾಮಿತ್ರನಂಥ ಉಗ್ರಮುನಿಯ ಮನಸ್ಸನ್ನು ಸೂರೆಗೊಂಡಳು. ಅವನ ಉದ್ದೇಶವನ್ನು ಭಂಗಗೊಳಿಸಿದಳು. ಮುನಿಯೊಂದಿಗೆ ರಮಿಸಿದಳು. ಮತ್ತೆ ತನ್ನ ತಾಣಕ್ಕೆ ಹಿಂದಿರುಗ

ಬೇಕು ; ಆಗ ಪ್ರಕೃತಿ ಸಹಜವಾದ ಘಟನೆ ಇಲ್ಲಿಯೂ ನಡೆಯಿತು. ಮೇನಕೆ ಗರ್ಭವತಿಯಾಗಿದ್ದಳು. ಅವಳು ಸುಂದರ ಮಗುವಿನ ತಾಯಿಯಾದಾಗ ವಿಶ್ವಾಮಿತ್ರ ಕಣ್ತೆರೆದ. ತನ್ನ ತಪ್ರೋಭಂಗವಾಯಿತೆಂದು ಹಲುಬಿದ ; ಪಶ್ಚಾತ್ತಾಪ ಪಟ್ಟ. ಮಗುವನ್ನು ತೊರೆದು ಹೊರಟು ಹೋದ.

ಈ ಸಂದರ್ಭದಲ್ಲಿಯೆ ಮೇನಕೆಯ ಸಖಿ ಮೋದಿನಿ ಆಶ್ರಮಕ್ಕೆ ಬರುತ್ತಾಳೆ. 'ನಿನ್ನ ಕೆಲಸ ಮುಗಿಯಿತು. ಸುರಪತಿಯಿಂದ ಆಜ್ಞೆ ಬಂದಿದೆ. ಸುರಲೋಕಕ್ಕೆ ಹಿಂದಿರುಗು' ಎನ್ನುತ್ತಾಳೆ. ಆಗ ಈ ತಾಯಿಯಾದವಳು ಏನೆನ್ನಬೇಕು ? ಅವಳ ಮನಸ್ಸಿನ ತುಮುಲ ಎಂಥಾದ್ದು ?

ಮೇನಕೆ: ಸಮಯವನು ತಿಳಿಸಮ್ಮ.
ಮುಂದೇನು ? ಪೇಳೆನೆಗೆ. ಶಿಶುವ ಸಲಹಲಿ ಬೇಕು

ಮೋದಿನಿ: ನಿನಗೆಂತುದೀ ಭ್ರಾಂತಿ. ಈ ನೆಲದಲುದಿಸಿದ
ಶಿಶುವಿಲ್ಲೆ ಬೆಳೆವುದು, ತಂದೆಯೇ ಪಾಲಕನು.

ಮೇನಕೆ: **ಎನ್ನ ತಾಯ್ತನದ ಹೊಣೆ ಏನು ?**

ಮೋದಿನಿ: ಮುಗುದೆ,
ನಿನ್ನ ತಾಯ್ತನದ ಮಮತೆಯು ನಿನ್ನ ಜಿಡವಾಗೆ
ಶಿಶುವ ಸಲಹುವುದೊಂದೆ ನೆಪವಾಗೆ, ಅದಕಾಗಿ
ಸುರಲೋಕವನು ಮರೆತು, ಸುಖಿಸಮ್ಮ ಈ ನೆಲದಿ.

ತಂದೆ ಮಗುವನ್ನು ಪಾಲಿಸುತ್ತಾನೆ. ನಿನಗೆ ಯಾಕೆ ಈ ವಾತ್ಸಲ್ಯ? ಈ ಭ್ರಾಂತಿ? ಮಗುವಿಗಾಗಿ ಸುರಲೋಕವನ್ನು ತೊರೆಯುತ್ತೀಯಾ? ಎಂದು ಪ್ರಶ್ನೆ ಹಾಕುತ್ತಾಳೆ ಮೋದಿನಿ.

ಈಗ ಮೇನಕೆ ಒಬ್ಬಳಲ್ಲ. ಒಂದು ಮಗುವಿನ ತಾಯಿ. ಆಗ, ಮಗುವನ್ನು ತೊರೆಯುವ ಸಂದರ್ಭ ಒದಗಿ ಬರುತ್ತಿರುವಾಗ, ಈ ತಾಯಿಯ ಹೃದಯದಲ್ಲಿ ಏನು ಕೋಲಾಹಲ ಉಂಟಾಗಿರಬೇಕು? ಪಾಪ, ಮೋದಿನಿಗೆ ಈ ವಿಷಯ ಹೇಗೆ ತಿಳಿಯಬೇಕು? ಅವಳೂ ಮಗುವಿನ ತಾಯಾಗಿದ್ದರೆ ಈ ಸುಖಾನುಭವ ಅವಳಿಗೂ ಉಂಟಾಗುತ್ತಿತ್ತು. ಸುರಲೋಕದ ಹೆಣ್ಣಾದರೇನು? ತಾಯ್ತನ ತಾಯ್ತನವೇ. ಅದರ ಸುಖ, ಆ ಅನುಭವ ಎಲ್ಲರಿಗೂ ಒಂದೇ.

ಮೇನಕೆ ಮಗುವನ್ನೆತ್ತಿಕೊಂಡು ಮುನಿಯ ಬಳಿ ನಡೆಯುತ್ತಾಳೆ. ಆದರೆ ಆ ನಿಷ್ಕರುಣಿ ಕಣ್ಣು ತೆರೆದೂ ಈ ಮುದ್ದು ಮಗುವನ್ನು ನೋಡುವುದಿಲ್ಲ; ತಿರಸ್ಕರಿಸುತ್ತಾನೆ. ಆಗ ಮೇನಕೆ ಹೇಳುತ್ತಾಳೆ;

ತಾಯ್ತಂದೆಗಳು ತೊರೆದ ಈ ಹಸುಳೆಗಿನ್ನಾರು
ದಿಕ್ಕು ? ಒಪ್ಪಿಸುವುದಾರಿಗೆ ? ಆರ ಕೈಲಿಡಲಿ.

....

ಒಂಟಿಯಲಿ
ಬಿಡಲೆಂತು ? ಅಗಲಿಕೆಯ ದುಃಖವಾವೇಶವನು
ಎಂತು ಸಹಿಸುವೆನಮ್ಮ ? ತಡೆವೆ ನಾನೆಂತಿದನು ?
ಮಾತೃದೇವಿಯ ಪದವಿ ಪೀಠ ಮಹೋನ್ನತ.
ಅದಕೆ ಕಾರಣ ಮಾತೆಯರು ವಹಿಸಿ ಸಹಿಸುವ
ದುಃಖಭಾರವೆ ಮೂಲಕಾರಣವಿರಬಹುದು.
ನೋವನರಿಯದೆ ಪೆತ್ತ ಸುರವನಿತೆಯಾದೆನಗೆ
ಇಂತಿರಲು, ದುಸ್ಸಹದ ಯಾತನೆಯ ಅನುಭವಿಸಿ,
ಮಕ್ಕಳನ್ನು ಪೆತ್ತು ನೋವೆಲ್ಲವನು ಮರೆಯುತ
ಪಾಲೂಡಿ ಪೊರೆಯುವ ಮಾತೆಯರ ವಾತ್ಸಲ್ಯ
ಅವರ ಕರುಳಿನ ಮಮತೆ ಭಾವನೆಗೆ ನಿಲುಕುವುದೇ ?

....

ಹೇಗೆ ಹಲುಬಿದರೇನು ? ಮೇನಕೆ ಇಲ್ಲಿ ನಿಲ್ಲುವ ಹಾಗಿಲ್ಲ, ಮಗುವನ್ನು ತೊರೆದು ಅವಳು ಹೋಗಲೇಬೇಕು.

ಅವಳು ತೊರೆದ ಮಗುವನ್ನು ಚೆಲುವಾದ ಶಕುಂತ ಹಕ್ಕಿಗಳು ಕಾಪಾಡುತ್ತವೆ. ಮಗುವಿಗೆ ಬಿಸಿಲು ತಾಗಬಾರದು ಎಂದು ಗರಿಗೆದರಿ ನೆರಳುಮಾಡಿ ನಿಲ್ಲುತ್ತವೆ. 'ಅಳ ಬೇಡ ಕಂದಮ್ಮ, ಹಸಿವಾಯ್ತೆ ನಿನಗೆ? ತಾಯ ಹಾಲಿಲ್ಲ, ಎಂತಹ ತಾಯಿಯೊ ಅವಳು ? ಈ ಜೇನ ಸವಿ ಕಂದ' ಎನ್ನುತ್ತ ತೊಟಕು ತೊಟಕಾಗಿ ಮಧುವನ್ನು ಮಗುವಿನ ಬಾಯಿಗೆ ಉಣಿಸುತ್ತವೆ.

ಮುಂದೆ ಕಣ್ವರೂ ಅವರ ಶಿಷ್ಯರೂ ಹಾದಿಯಲ್ಲಿ ಬರುತ್ತ ಈ ಅದ್ಭುತ ದೃಶ್ಯವನ್ನು ನೋಡುತ್ತಾರೆ. ಮಗುವನ್ನು ತಮ್ಮ ಆಶ್ರಮಕ್ಕೆ ಒಯ್ಯುತ್ತಾರೆ. ಶಕುಂತ ಹಕ್ಕಿಗಳು ರಕ್ಷಿಸಿದ ಈ ಮಗುವಿಗೆ ಶಕುಂತಲೆ ಎಂದು ನಾಮಕರಣ ಮಾಡುತ್ತಾರೆ.

ತಾಯಿಯ ಅಳಲು, ಅವಳ ವಾತ್ಸಲ್ಯ ಹೃದಯ ಸೂರೆಗೊಳ್ಳುವಂತೆ ಈ ಪುಟ್ಟ ರೂಪಕದಲ್ಲಿ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ.

ಅಪ್ರಕಟಿತ ಕೃತಿಗಳು-ವೈಶಿಷ್ಟ್ಯ

● **ಜಯಕೃಷ್ಣ**

ಕನ್ನಡದಲ್ಲಿ ಕತೆಗಾರ್ತಿಯರು, ಕಾದಂಬರಿ ಲೇಖಕಿಯರ ಸಂಖ್ಯೆಗೆ, ಕನ್ನಡ ಕವಯಿತ್ರಿಯರಿಲ್ಲ. ಇರುವವರನ್ನೂ ನೆನಪಿನಿಂದ ಹುಡುಕಿ ಹೆಸರಿಸಿದರೆ (ಹೊಸಗನ್ನಡದಲ್ಲಿ) ಕೈ ಬೆರಳಿನಷ್ಟು ಮಂದಿ ಇದ್ದಾರು. ಹಾಗೆ ಹುಡುಕ ಹೋದಾಗ, ನೆನಪಾದ ಕವಯಿತ್ರಿ, ಶ್ರೀಮತಿ ತಿರುಮಲೆ ರಾಜಮ್ಮನವರು. (ಕಾವ್ಯನಾಮ : ಭಾರತಿ).

ಶಾಸನ ಪರಿಶೋಧನೆ, ಪತ್ರಿಕೋದ್ಯಮ, ಕನ್ನಡಿಗರನ್ನು ಎಚ್ಚರಿಸುವುದರಲ್ಲಿ, ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರ ಪತ್ನಿ ಶ್ರೀಮತಿ ರಾಜಮ್ಮ. ನಾಡ, ನುಡಿಯ ಸೇವೆಯಲ್ಲಿ ಸಾಕಷ್ಟು ಎಡರುತೊಡರುಗಳನ್ನು ಎದುರಿಸಿದ ಈಕೆ ತಮ್ಮ ಹತ್ತೊಂಬತ್ತನೆಯ ವಯಸ್ಸಿನಲ್ಲಿ ಮೊದಲ ಕವನ ಬರೆದರು. ಸಂಪ್ರದಾಯಸ್ಥರ ಮನೆಯ ಹೆಣ್ಣು ಮಗಳು ಇವರು. ಇವರ ತಾಯಿಯ ತಂದೆ, ಮಹಾಮಹೋಪಾಧ್ಯಾಯರು, ಪ್ರಕಾಂಡ ಪಂಡಿತರು. ಸಾಹಿತ್ಯ, ಸಂಗೀತವನ್ನು ಅನುವಂಶೀಯವಾಗಿ ಪಡೆದಿದ್ದ ಶ್ರೀಮತಿ 'ಭಾರತಿ'ಯವರ ವಿದ್ಯಾಭ್ಯಾಸ ಆರನೇ ತರಗತಿಗೇ ಮುಗಿದು, ಮದುವೆಯೂ ಆಯಿತು. ಆಗಿನಿಂದಲೂ, ಶ್ರೀ ಶರ್ಮರು, ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅದರಿಂದಾಗಿ ಅಡಿಗಡಿಗೂ ಸಂಸಾರದಲ್ಲಿ ವ್ಯತ್ಯಯಗಳು ಉಂಟಾಗುತ್ತಿದ್ದವು. ಇದನ್ನು ಸರಿತೂಗಿಸಿಕೊಂಡು, ಕಲಿದ್ದ ಆರಂಭ ಹಂತದ ವಿದ್ಯಾಭ್ಯಾಸದ ನೆರವಿನಿಂದಲೇ, ತಮ್ಮ ಕವಿ ಹೃದಯಕ್ಕೆ ತಂಪೆರೆದು ಪೋಷಿಸಿಕೊಂಡು ಬಂದರು ಶ್ರೀಮತಿ ರಾಜಮ್ಮನವರು.

ಇದುವರೆಗೂ ಅವರು, "ರಾಷ್ಟ್ರಭಕ್ತಿ", "ರಾಷ್ಟ್ರಶಕ್ತಿ" ಎಂಬ ಎರಡು ಪದ್ಯ ಸಂಕಲನವನ್ನು ಪ್ರಕಟಿಸಿದ್ದಾರೆ. ಸುಮಾರು ೭೦ ಹಾಡುಗಳು ಪ್ರಕಟವಾಗದೆ ಕಾಗಿವೆ. ಇದಲ್ಲದೆ 'ಜ್ವಾಲಾಮುಖಿ' ಮತ್ತು 'ವೇದನ ನಿವೇದನ' ಎಂಬ ನೀಳ್ಗವನಗಳಿವೆ. ಪ್ರಸ್ತುತ ಲೇಖನ ಅವರ ಅಪ್ರಕಟಿತ ಕೃತಿಗಳನ್ನು ಕುರಿತದ್ದಾಗಿದೆ.

ಅವರ ಬಿಡಿ ಕವನಗಳನ್ನೋದಿದಾಗ, ಅವರ ಅತಿಪ್ರಿಯವಾದ ಕಾವ್ಯವಸ್ತು, ರಾಷ್ಟ್ರ, ಜನತೆ, ಸ್ವಾತಂತ್ರ್ಯ ಮತ್ತು ಜಗತ್ತಿನ ಆಗುಹೋಗುಗಳಿಗೆ ಕಾರಣವಾದ ಆ ಚೈತನ್ಯ. ಅವರನ್ನು ಈ ಬಗ್ಗೆ ಪ್ರಶ್ನಿಸಿದಾಗ, ಅವರು ಕೊಟ್ಟ ಉತ್ತರ: "ನಾವು ಓದೋವಾಗ, ನಮಗೆ ನೀತಿ ಪಾಠಗಳು, ರಾಷ್ಟ್ರ ಭಕ್ತರ ಕತೆಗಳು, ದೈವ ಭಕ್ತರ ಕತೆಗಳು ಇವನ್ನೆಲ್ಲ ಪದೇ ಪದೇ ಹೇಳ್ತಾಯಿದ್ರು. ಆಗಿಂದ ದೇಶ ಸ್ವಾತಂತ್ರ್ಯ, ದೇವರು, ಅನ್ನೋದರಲ್ಲಿ ಶ್ರದ್ಧೆ ಬೆಳೀತಾಬಂತು. ಮುಂದೆ ಮಹಾತ್ಮ ಗಾಂಧಿಯವರ ಪ್ರಭಾವವಂತೂ, ನಮ್ಮಲ್ಲಿ ಹೊಸ ಶಕ್ತೀನ ತುಂಬಿತು." ಅವರ ಮಾತಿಗೆ ನಿದರ್ಶನ ಅವರ ಒಂದು ರಚನೆ: "ಸ್ವರ್ಣ ಗರ್ಭವತೀ ಕ್ಷಿತೀ ಕರ್ಣಾಟ ಜನ ವಸತಿ." ಭಾರತಿ ಅವರ ರಚನೆಗಳ ಭಾಷೆ ನೂರಕ್ಕೆ ಎಂಬತ್ತು ಪಾಲು ಸಂಸ್ಕೃತ. ಅದಕ್ಕೆ ಕಾರಣ ಅವರ ಅನುವಂಶೀಯ ಪ್ರತಿಭೆಯೊಂದಿಗೆ, ಅವರು ಓದಿದ ಪುರಾಣ ಗ್ರಂಥಗಳು, ಬೆಳೆದು ಬಂದ ಪರಿಸರ, ಇವುಗಳ ಪ್ರಭಾವವೂ ಸೇರಿರುವುದೇ.

ಶ್ರೀಮತಿ ಭಾರತಿಯವರ ಕವಿ ಹೃದಯವನ್ನು ತುಂಬಿರುವುದು, ಸ್ವಾತಂತ್ರ್ಯ ಪೂರ್ವ ಭಾರತ, ಆ ಕಾಲದಲ್ಲಿ ಇಡೀ ಭಾರತವನ್ನೇ ಹಬ್ಬಿದ್ದ ಸ್ವಾತಂತ್ರ್ಯ ಆಂದೋಳನ. ಹಾಗೆಂದು ಅವರ ಭಾವನೆಗಳು, ಅನಿಸಿಕೆಗಳು, ತೀವ್ರ ಕ್ರಾಂತಿಕಾರಿಯಲ್ಲ. ಹೆಜ್ಜೆ ಹೆಜ್ಜೆಗೂ ಬಿಡುಗಡೆಯನ್ನು ಬಯಸುತ್ತಿದ್ದ, ಬೆಳಕನ್ನು ಎದಿರು ನೋಡುತ್ತಿದ್ದ ಭಾರತೀಯರನ್ನು, ಬಿಡುಗಡೆಗೆ, ಬೆಳಕಿಗೆ ಸಜ್ಜುಗೊಳ್ಳು, ಎಂದು ನುಡಿವ ಧೀರ ನುಡಿಗಳು. ಬಾಪೂ ನಿರ್ದೇಶಿಸಿದ್ದ ದಾಂಡಿಯ ಉಪ್ಪಿನ ಸತ್ಯಾಗ್ರಹ ಸಮಯದಲ್ಲಿ ಬಾಪೂ ವಾಣಿಯನ್ನೇ ಬರೆದ ಕೃತಿ "ವೀರವಾಣಿ" 'ಕ್ವಿಟ್ ಇಂಡಿಯಾ' ಚಳುವಳಿಯ ಸಮಯದಲ್ಲಿ ರಚಿಸಿದ ಕೃತಿ 'ಅಪೂರ್ವ ಸಂಧಿ.' ರಾಷ್ಟ್ರಶಕ್ತಿಯ ಮಹತ್ವವನ್ನು ವೈಭವವನ್ನು ಕುರಿತು ಹೇಳುವ ಗೀತೆ, "ರಾಷ್ಟ್ರಶಕ್ತಿ". ಸ್ವಾತಂತ್ರ್ಯದ ಅರುಣೋದಯದ ಮುನ್ನ ಹೆಪ್ಪುಗಟ್ಟಿದ್ದ ಕತ್ತಲೆಯ ತಿರುಳನ್ನು ಕಂಡು, "ಎಲ್ಲ ಸುತರೂ, ಸೆರೆಮನೆಗಳಿಗೆ ಹೋಗಿದ್ದಾರೆ, ನಾಡು ಕಾಡಾಗಿದೆ. ಈ ಕಾಡಿನಲ್ಲಿ ಯಾರನ್ನು ಹುಡುಕುತ್ತ ಬಂದೆ," ಎಂದು, 'ಅಲೆವೆ ಏತಕಮ್ಮ' ಎಂಬ ಕವನದಲ್ಲಿ ಭಾರತಾಂಬೆಯನ್ನು ಕೇಳಿ ಸಂತೈಸುತ್ತಾರೆ.

ಇಡಿ ಮಾನವ ಕುಲದ ಶಾಂತಿಯನ್ನು, ಸಹಬಾಳ್ವೆಯನ್ನು ಬಯಸುವುದನ್ನು ಅವರ ಇನ್ನೊಂದು ಕವನ "ಸಮರದಾಹವದೆಂದು ಸಂಪ್ರಾಪ್ತ ವಾಗದಾ ಅಮರ ವರ-ವನೆಮಗೆ ಕರುಣಿಸುವುದು ದೇವ" ಎಂಬ ನುಡಿಯಲ್ಲಿ ಕಾಣಬಹುದು. ಇದನ್ನು ಸಾನ್‌ಫ್ರಾನ್ಸಿಸ್‌ಕೋ ಶಾಂತಿ ಸಮ್ಮೇಳನದ ಸಂದರ್ಭದಲ್ಲಿ ಬರೆದದ್ದು. ಇದರಲ್ಲಿ ಕವಯಿತ್ರಿ ಅಮರತ್ವವನ್ನು ತನಗಾಗಲಿ ತನ್ನ ದೇಶಕ್ಕಾಗಲೀ ಬೇಡಿಕೊಂಡಿಲ್ಲ, ಭೀಕರ ಯುದ್ಧದಲ್ಲಿ ಜಗತ್ತು ಪುಟ್ಟ ಆಟಿಕೆಯಾಗುತ್ತದೆ ಎಂಬುದನ್ನು ತಿಳಿದ ಆ ಕವಿ ಹೃದಯ, ಜಗತ್ತು ವಿನಾಶದ ಭಯದಿಂದ, ವಿಧ್ವಂಸದ ಓಡಿತದಿಂದ ಎಂದೆಂದೂ ದೂರವಿರಲಿ. ಈ ನೆಲ ಶಾಂತಿಯ ಅಮರ ಸಾಧನವಾಗಲಿ ಎಂದು ಬಯಸಿ ಅಮರತ್ವವನ್ನು ವರವಾಗಿ ಕೇಳಿದ್ದಾರೆ.

ಭಕ್ತಿ, ಶ್ರದ್ಧೆ ಹಾಗೂ ವಿವೇಚನೆಗಳ ಬೆಳಕಿನಲ್ಲಿ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಮತ್ತು ಭಾಗವತ ಇವುಗಳನ್ನು ಓದಿ ಅನುಭವಿಸಿ ತಮ್ಮ ಜೀವನದಲ್ಲಿ, ತಮ್ಮ ಪರಿಸರದಲ್ಲಿ, ತಮಗೊದಗಿದ ಕ್ಷೇತ್ರದಲ್ಲಿ ಆ ಪುರಾಣಗಳು ಸಾರುವ ದಿವ್ಯಚೇತನದ ಭವ್ಯ ನೆಲೆಯನ್ನು ಕಾಣಲು ಹೊರಟಿದ್ದಾರೆ ಶ್ರೀಮತಿ 'ಭಾರತಿ' ಅವರು. ರಾಮಾಯಣದ ವ್ಯಕ್ತಿಗಳಂತೆ ಈ ಯುಗದ ವ್ಯಕ್ತಿಗಳೂ ನಡೆದುಕೊಳ್ಳಲಿ. ಭಾರತದ ಕಾಲದ ಯೋಧರಂತೆ ನಮಗೂ ಶಕ್ತಿ ಸಾಹಸ ಬರಲಿ. ಭಾಗವತ ಜೀವಿಗಳಂತೆ, ನಾವು ದೈವದಲ್ಲಿ ತಾದಾತ್ಮ್ಯವನ್ನು ಕಾಣೋಣ ಎಂಬ ಆಸೆ ಅವರದು. ಅದರಿಂದಾಗಿಯೇ ಅವರ ಬಹುಪಾಲು ಕೃತಿಗಳು ಜನಜೀವನವನ್ನು ಕುರಿತಾಗಿದೆ. ಅದರಲ್ಲಿನ ತಪ್ಪು ಒಪ್ಪುಗಳ ವಿವರಣೆಯಾಗಿದೆ. ಯುಗಧರ್ಮದ ಒತ್ತಡ ಬಲವತ್ತರವೆಂದು ತಿಳಿದಾಗ, ತಮ್ಮ ಆಸೆ ಕೈಗೂಡುವುದೋ, ಇಲ್ಲವೋ ಎಂಬ ಸಂದೇಹ ಸುಳಿದಾಗ, ನಿರಾಶೆ ಸುತ್ತುವರಿದಾಗ,

"ಇಂದಿನಾ ಬಾಳಿನಲಿ ಒಂದು ಶತಮಾನ
ಒಂದೇ ನಿರೀಕ್ಷೆಯಲಿ ಸಂದುದೆಮ್ಮಯಕಾಲ
ಮುಂದಿನಾ ಸಂತತಿಯು ಪಾಡೇನಹುದೋ."

–ಎಂದು ಆತಂಕದಿಂದ ನಿಟ್ಟುಸಿರಿಡುತ್ತಾರೆ. ಎಲ್ಲಕ್ಕು ಕಾರಣನಾದ ಪರವಸ್ತುವಿನ ಬಗೆಗೆ ತಮಗೆ ಅನುಮಾನ ಬಂದಾಗ

"ಕಲ್ಲಲ್ಲವೆಂದೆನುತ ಕೈಮುಗಿದುದೆಲ್ಲ
ಸಲ್ಲಿತೆಲ್ಲಿಗೆ ಪೇಳು ಬಲ್ಲೆ ನೀನಲ್ಲವೆ ?"

–ಎಂದು ತಾವೇ ಮಗುವಾಗಿ ತಮ್ಮ ಅರಿವನ್ನು ತಾಯಾಗಿಸಿ ಕೇಳುತ್ತಾರೆ.

"ಕೆಟ್ಟ ಕನಸು" ಎಂಬ ಕವನ, ಬಂಗಾಲದಲ್ಲಿ ಭೀಕರ ಕ್ಷಾಮ ತಲೆದೋರಿದಾಗ ಬರೆದದ್ದು. ಅಲ್ಲಿ ಕವಿ ಹೃದಯ,

"ರೋಗವಿಲ್ಲದೆ ಸಾವಯೋಗ ಬಂದೊದಗಿತು.
ಸಾಗಿ ಬರುತ್ತಿತ್ತು ಸಾಲಾಗಿ ಶವದ ರಾಶಿ."

–ಎಂದು ವೇದನೆ ಪಟ್ಟಿದೆ.

"ಆರ್ಯ ಜನನಿ" ಎಂಬ ಕವನ ಪ್ರಕೃತಿ ಮಾತೆಯನ್ನು ಕುರಿತದ್ದು. ಆ ಜಗದ್ಧಾತ್ರಿಯ ಪಾಲನ-ಹಾರಣ ರೂಪಗಳ ಸಂದರ್ಶನವನ್ನು ನಮಗೆ ಇಲ್ಲಿ ಕೊಡುತ್ತಾರೆ.

"ಸ್ವಾತಂತ್ರ್ಯ ಸೂರ್ಯದೇವ" ಎಂಬ ಕವನದಲ್ಲಿ ಭಾರತ ಸ್ವಾತಂತ್ರ್ಯವನ್ನು ಕಳೆದುಕೊಂಡ ಬಗೆಯನ್ನು ಹೇಳುತ್ತ,

"ವಸ್ತುಗುಣವರಿಯದೆ ವಿಜಾತೀಯ ರೂಢಿಗಳ
'ಅಸ್ತು' ಎಂದೊಲಿದು ಅನುಕರಿಸಿದುದೇ"....

–ಎಂದು ಹೇಳಿದ ಮಾತು, ಈ ದಿನಕ್ಕೂ ಒಪ್ಪುವಂತಹುದಾಗಿದೆ. ಅಂದಿನ ಭಾರತೀಯರ ಮನಸಿನ ಚಂಚಲತೆಯನ್ನು, ನಿರ್ವೀರ್ಯತೆಯನ್ನು ಚಿಂತಿಸಿ, ಕೊನೆಗೆ "ಮರಿ

ಮೋಡಗಳೊಡೆದು ಸ್ವರ್ಣಾಂಬರವ ತಳೆದು ಸ್ವಾತಂತ್ರ್ಯ ಸೂರ್ಯದೇವ, ಕಲಿಪರ್ವಗೆ ಸಾಕ್ಷಿಯಾಗಿ ಆಗಮಿಸದೇ" ಎಂಬ ಆಶಾ ಭಾವನೆಯನ್ನೂ ಸೂಚಿಸಿದ್ದಾರೆ.

'ಭಾರತಿ' ಅವರ ನೀಳ್ಗವನಗಳಲ್ಲಿ ಮೊದಲನೆಯದು : 'ಜ್ವಾಲಾಮುಖಿ' ಅಗ್ನಿಪರ್ವತಗಳು ಸಿಡಿದೆದ್ದಾಗ 'ಪ್ರಕೃತಿ ಮಾತೆಯ ಭೀಕರ ರೂಪ' ಅದೆಂದು ಕಲ್ಪಿಸಿಕೊಂಡು, ಶಾಂತಳಾಗೆಂದು ದೇವಿಯಲ್ಲಿ ಬೇಡುವ ಕವಿತೆ ಇದು. ಇವರಲ್ಲಿ ೩೭ ಪದ್ಯಗಳವೆ. ಪ್ರತಿ ಪದ್ಯಕ್ಕೂ ಆದಿಪ್ರಾಸವಿದ್ದು ನಾಲ್ಕು ಸಾಲುಗಳಿಂದ ಕೂಡಿದೆ.

ಇದೇ ಬಗೆಯ ರಚನೆ 'ವೇದನ–ನಿವೇದನ' ಇದರ ವಸ್ತು ದೈವದ ಅಸ್ತಿತ್ವವನ್ನು ನಂಬಿ, ಒಳಿತು–ಕೆಡಕುಗಳಲ್ಲಿ ಶ್ರದ್ಧೆ ಹೊಂದಿರುವ, ಭಕ್ತಿ ಸ್ತೋತ್ರಗಳಿಂದ ಆದಿ ಮೂಲನನ್ನು ಸ್ತುತಿಸಿದ ಜೀವ, ದೇವನಿಂದ ಯಾವ ಬಗೆಯ ಪ್ರತಿಸ್ಪಂದನವನ್ನೂ ಕಾಣದೆಂದಾಗ ರೋಸಿ ನುಡಿದ ಮಾತುಗಳು. ಶ್ರೀಮತಿ ಭಾರತಿ ಅವರೇ ಹೇಳಿರುವಂತೆ, "ಬಲೀಯ ಗರ್ವಿತ ಕ್ಲೇಶದಲ್ಲಿ ಬೆಳೆದ ಜೀವಿಯ ಚಿತ್ತವಿಕಲ್ಪ ವಿಲಾಸವಿದು." ಕವಯಿತ್ರಿ ಆ ಸರ್ವ ಶಕ್ತನನ್ನು ತನ್ನ ಸಂದೇಹಗಳಿಗೆ ಒರೆಹಚ್ಚಿ ನೋಡುವ ಯತ್ನವಿದೆ ಇಲ್ಲಿ. ಇದು ದಾಸ ಸಂಪ್ರದಾಯದಲ್ಲಿ ಕಾಣಬರುವ 'ನಿಂದಾಸ್ತುತಿ' ಎಂದೂ ಹೇಳಬಹುದು.

ಈ ನೀಳ್ಗವನದಲ್ಲಿ ಅರವತ್ತೈದು ಪದ್ಯಗಳಿವೆ.

ಆದಿಮೂಲನನ್ನು ನಿನಗೆ ಹಿತರು, ಹಗೆಗಳೆಂಬ ಭೇದವಿದೆಯೇ ಎಂದು ಕೇಳಿ, ಎಲ್ಲಿರುವೆ, ಏನೆಸುಗುತಿರುವೆ, ಎಂದು ಅಧಿಕಾರಯುತ ಅನ್ವೇಷಣೆ ಆರಂಭಿಸುತ್ತಾರೆ. ಸಹಜವಾಗಿ ಸಲ್ಲಬೇಕಾದ ದಯೆ ತೋರಲು ಇನ್ನೂ ಯೋಚನೆ ಏಕೆ ಎಂದು ತಮ್ಮ ಹಕ್ಕನ್ನು ಪ್ರತಿಪಾದಿಸುತ್ತಾರೆ.

"ಹಿಂದಿನಾ ಸತ್ವವನು ಶೀಲವನು ಭಕ್ತಿಯನು
ಇಂದು ನೀ ಬಯಸಿದರೆ ಸರಿಯೆ ನಿನ್ನ ಬಯಕೆ
ಹಿಂದಿನಾಯುಷ್ಯವನು ಶಕ್ತಿಯನು ನೀಡಿಹೆಯಾ
ಅಂದಿನಂತೊಡನಿದ್ದು ಧೈರ್ಯ ತುಂಬುವೆಯಾ ?'

—ಎಂದು ಹಿಂದಿನ-ಇಂದಿನ ವ್ಯತ್ಯಾಸಗಳನ್ನು ಗುರ್ತಿಸಿ, ಅದಕ್ಕೆ ಪರಿಹಾರ ಕೇಳುತ್ತಾರೆ. ಇಂದಿನ ಯುಗ ಬರಡಲ್ಲ ಬಂಜೆಯಲ್ಲ. ಇಲ್ಲಿ ಎಷ್ಟೋ ಮಹಾಪುರುಷರು, ಸಿದ್ಧರು ಹುಟ್ಟಿದರೂ, ಅವರನ್ನೆಲ್ಲ ಕಾಲಗರ್ಭ ತನ್ನಲ್ಲಿ ಅಡಗಿಸಿಕೊಂಡಿರುವುದರ ಬಗ್ಗೆ ನೋವು. ಅದನ್ನು ಅವರು ಹೀಗೆ ತೋಡಿಕೊಳ್ಳುತ್ತಾರೆ:

"ಬಾಲ ಹಂತಕನಾದ ದ್ರೌಣಿಯಿಂದಿಳೆಗಾದ
ಮೇಲೇನು ? ಪರಮಹಂಸ ವಿವೇಕ ರವೀಂದ್ರ
ಬಾಲ ಗಂಗಾಧರ ಮಹಾತ್ಮ ಮೋಹನದಾಸ
ರೀಲೋಕಕೆಸಗಿದಪಕಾರವೇನು ?

ಅವರ ಈ ಮಾತುಗಳಲ್ಲಿ, ವರ್ತಮಾನ ಯುಗದ ಮಹಾಪುರುಷರ ಬಗ್ಗೆ ಅವರಿಗಿರುವ ಗೌರವ, ಅವರ ಅಳಿವಿನ ಬಗ್ಗೆ ಕವಯಿತ್ರಿಗೆ ಇರುವ ಆತಂಕ, ಎಲ್ಲ ವ್ಯಕ್ತವಾಗಿವೆ.

ಹೀಗೆಯೇ ಬುದ್ಧ, ಶಂಕರರ ಬಗ್ಗೆ ಕಾಲದ ವಂಚನೆಯನ್ನು ಅವರು ಬಿಂಬಿಸುತ್ತಾರೆ. ಕಲಿಯುಗದ ಈ ಸಂದರ್ಭದಲ್ಲಿ ವಿಜ್ಞಾನ ತನ್ನ ನಾಲಿಗೆಯನ್ನು ಚಾಚುತ್ತಿದೆ. ಈ ಬಗೆಗೆ ಜೀವಿ ಆತಂಕಗೊಂಡಿರುವುದನ್ನು,

"ಹರಡು ವಿಜ್ಞಾನ ನಾನಾ ಪ್ರಭಾವದಲಿ
ಕುರುಡುತನ ಕಳೆದಾಯ್ತು, ವಿಶ್ವಾಸ ಬಲಿಯುತಿದೆ.
ಅರಿವು ಚಿಗುತಿದೆ ಬಗೆಯ ಭಾವ ಹೊಸದಾಗುತಿದೆ
ಉರಿಸಲು ದೈವವನು ಮುನ್ನಹುದೇನೋ"

—ಎಂದು ಅತ್ಯಂತ ಕಳಕಳಿಯಿಂದ ಸೂಚಿಸುತ್ತಾರೆ.

ಬೇಡಿ, ಬೇಸತ್ತು ಸ್ತುತಿಸಿ, ಸಾಕೆನಿಸಿದ, ಕವಿಹೃದಯ ದೈವಕ್ಕೆ ಒಂದು ಎಚ್ಚರ ಕೊಡುತ್ತದೆ. ಈ ಕೆಳಗಿನ ಪದ್ಯದಲ್ಲಿ,

"ಇನಿತಿದಕು ಕಿವಿಗೊಡದೆ ನಿರ್ಲಕ್ಷ್ಯವನು ತೋರೆ
ನಿನ್ನ ಭದ್ರತೆಗೆ ಮೋಸವು ನಿಶ್ಚಯದೇ ಕೇಳು.
ಬನ್ನಗಳ ಭರಿಸೆ ನಿನ್ನದು ಖಂಡಿತದ ಮಾತು
ಸನ್ನಾಹವೇನಾದರೆಸಗು ಜಾಗ್ರತನಾಗು"

—ದೈವಕ್ಕೆ 'ಜಾಗ್ರತನಾಗು' ಎಂದು ಕವಿವಾಣಿ ಹೇಳಿದಾಗ, ಉದ್ಧಟತನವಿಲ್ಲ, ಉತ್ಪ್ರೇಕ್ಷೆ ಇಲ್ಲ. ಬದಲಾಗಿ ಅತ್ಯಂತ ಶ್ರೇಷ್ಠವಾದ ಜೀವನದ ಅತ್ಯಾವಶ್ಯಕಗಳಾದ ಭಕ್ತಿ ಶ್ರದ್ಧೆಗಳು ಎಲ್ಲಿ ನಶಿಸಿ ಹೋಗುವುವೋ ಎಂಬ ಆತಂಕವಿದೆ. ಈ ಕೆಳಗಿನ ಪದ್ಯದಲ್ಲಿ ಮುಂದಿನ ಪೀಳಿಗೆಯ ಚಿತ್ರವಿದೆ:

"ಸ್ನೇಹಬಲ ಸಡಿಲುತಿದೆ, ಮೋಹವಾವರಿಸುತಿದೆ.
ಸೌಹಾರ್ದವಿಲ್ಲ ನಿರ್ಲಕ್ಷ್ಯ ಧೋರಣೆ ದರ್ಪ
ಊಹೆಗೇ ನಿಲುಕದೀ ವಿಪರೀತ ಸ್ವಾತಂತ್ರ್ಯ
ಸಾಹಸದ ನಿಜಗುಣವ ಸಹಿಪುದೆಂತು ?"

—ಇದರ ನಿವಾರಣೆಯನ್ನೂ ಸೂಚಿಸುತ್ತ,

"ಸೋತವರ ಸುಖಕಾಗಿ ನೀ ತೋರಬೇಕಿಂದು
ಆತುರದಿ ರಕ್ಷಿಸುವ ಕಾತರದಿ ನಿನ್ನಲ್ಲಿ
ಪ್ರೀತಿಯನು ಮುಡುಪಿಟ್ಟು, ಕ್ಷೇಮವನು ಹಾರೈಸು
ರೀತಿ ನೀತಿಗಳಿಗೆ ಈ ಯುಗವೇ ಮೊದಲೆನಿಸು"

—ಎಂದು ಹೇಳುತ್ತಾರೆ, ಕಟ್ಟ ಕಡೆಗೆ ಕರುಣಾಳುವಿಗೆ ಶರಣಾಗು,

ಕೆರಳಿದರು, ಕರಗಿದರು ಜರೆದರೂ ನಿನ್ನನೇ
ಶರಣೆಂಬ ಮಕ್ಕಳನು ರಕ್ಷಿಸೈ ಕರುಣಾತ್ಮ.
ಪರಮ ಶಾಂತನು ನೀನು ಕ್ಷಮೆಯಾಣ್ಮ ಹೇ ಸ್ವಾಮಿ.
ಧರೆಗೆ ಸಂತತ ಪುಷ್ಟಿ ತುಷ್ಟಿಗಳ ಪಾಲಿಸು.

—ಎಂದು ಬೇಡಿ ಮುಗಿಸುತ್ತಾರೆ.

'ಭಾರತಿ' ಅವರಿಗೆ ಸಂಗೀತ ಸಾಹಿತ್ಯಗಳಲ್ಲಿ ಸಾಕಷ್ಟು ಪರಿಶ್ರಮವಿರುವುದರಿಂದ ಅವರ ಕೃತಿಗಳು ಅರ್ಥದೊಂದಿಗೆ, ನಡೆಯಲ್ಲಿಯೂ ಕ್ರಮ ಬದ್ಧವಾಗಿವೆ. ತನಗಾಗಿ, ಏನನ್ನೂ ಬಯಸದೆ, ಸ್ವಾರ್ಥದ ಸೋಂಕೇ ಇಲ್ಲದೆ, ನಾಡ ಹಿತ, ದೇಶ ಹಿತ, ಜಗದ ಹಿತವನ್ನೇ ಅನುಲಕ್ಷಿಸಿ ರಚಿತವಾಗಿರುವ ಈ ರಚನೆಗಳು ನಿಜಕ್ಕೂ ಶ್ಲಾಘನೀಯ. ಅವುಗಳು ನಾಡೆಲ್ಲ ಹರಡಿ, ಅವುಗಳ ಸಾರವನ್ನು ಸವಿಯುವ ಹೊಣೆ ಕನ್ನಡಿಗರದು. ಏಕೆಂದರೆ 'ಭಾರತಿ' ಅವರದು ಶುದ್ಧ ಭಾರತೀಯ ದೃಷ್ಟಿ. ಸಂಸ್ಕೃತಿ, ಸಂಪ್ರದಾಯ, ರಾಷ್ಟ್ರೀಯತೆಗಳ ಅಡಿಪಾಯದ ಮೇಲೆ, ನಿರ್ಮಿಸಿರುವ ಭಾವನೆಗಳ ಮಂಟಪ. ಇವರ ಕವನಗಳು ಪ್ರಾಸಗಳಿಂದ ಕೂಡಿದ್ದು, ಸಂಗೀತದ ಚೌಕಟ್ಟಿನಲ್ಲಿ ಅಳವಡಿಸಲು ಅನುಕೂಲವಾಗಿವೆ. ಸಾಲುಗಳನ್ನು ಸಂಗೀತದ ಶಾಸ್ತ್ರೀಯತೆಗೆ ಅನುಸಾರವಾಗಿ ಮತ್ತೆ ಮತ್ತೆ ಹಾಡಿದರೂ ಅರ್ಥಕ್ಕೆ ಯಾವ ಕೆಡಕೂ ಉಂಟಾಗುವುದಿಲ್ಲ. ಇಂತಹ ಉತ್ತಮ ಮಟ್ಟದ ಹಾಡುಗಳನ್ನು ಮತ್ತೆ ಮತ್ತೆ ಕೇಳುವಂತಾಗಬೇಕು, ಆಗಲೇ ಅದರ ಉದ್ದಿಶ್ಯ ಸಫಲಗೊಳ್ಳುವುದು.

ನಮ್ಮ ಜೀವನರಂಗ ಕಲುಷಿತವಾಗದೆ ಜನಪದವು ಆರೋಗ್ಯದಿಂದ ಬದುಕಬೇಕಾದರೆ ಸಾಹಿತ್ಯದ ವಾತಾವರಣ ಪರಿಶುದ್ಧವಾಗಿರಬೇಕು. ಧರ್ಮ ಬದ್ಧವಾದ ಒಂದು ಜೀವನ ಕ್ರಮವನ್ನು ವಿವೇಚಿಸಿ, ವಿಚಾರ ಮಾಡುವ ಸಾಹಿತ್ಯ ಸ್ತ್ರೀಯರ ಕುಶಲ ಹಸ್ತಗಳಿಂದ ಬಂದರೆ ಅವರ ಆಶಯಗಳು ನಿಜವಾಗಿಯೂ ಸಫಲವಾಗುವುವು.

—ಭಾರತಿ

'ಸಿಂಗಾರಕಾಯ್ತು ನಿಮ್ಮಯ ಜನ್ಮ'

ವನದೇವಿ— ಮೂಢ ; ಕೌಶಿಕ ಬರುವ ಸಮಯವಾಯ್ತಲ್ಲವೆ ?
ಸೂರ್ಯಕಿರಣಗಳಿಮ್ಮ ಮೇಲೆ ಬೀಳುವ ಮೊದಲೆ,
ಅವನಾ ಮಲಿನ ಹಸ್ತ ಸ್ಪರ್ಶವೆಮಗಾಗುತಿದೆ.
ಪೂರ್ಣ ವಿಕಸಿತವಾಗಿ, ಸೌರಭ ಬಿಡುವ ಮುನ್ನ
ಸುಂದರ ಸುಮಗಳಾಯ್ದು, ಕೊಂಡೊಯ್ವನವನು.

ಈಶ್ವರಾರ್ಪಿತದಿಂದ ಸಾರ್ಥಕವ ನೊಂದುವ
ನಿಮ್ಮ ಜನ್ಮ ವಿಶೇಷ ಬೇರೊಂದು ಪರಿಯಾಯ್ತು.
ಎನ್ನ ಪ್ರಿಯತರುಲತಾ ವೃಂದಗಳೇ ಕೇಳಿ.
ದೇವ ಶಿರ ಶಿಖರವೇ ನಿಮ್ಮ ಪೀಠವೆನಿಪ್ಪ,
ನೈಜ ಪಾವಿತ್ರ್ಯತೆಗೆ ಭಂಗವಾಗುತಲಿದೆ.
ದೇವ ಪೂಜೆಗೆ ಮುನ್ನ ದೇವದಾಸಿಯ ಮುಡಿಯ
ಸಿಂಗಾರಕಾಯ್ತು ನಿಮ್ಮಯ ಜನ್ಮ. ಛೀ! ಛೀ!
ನಾ ಸಹಿಸಲಾರೆನಿದ. ತಪದ ಮಹಿಮೆಯನೆಲ್ಲ
ಈಡಾಡಿ ಮೋಹಾಂಧಕಾರದಲ್ಲಿ ಬಿದ್ದಿಹನು
ಈ ಪ್ರದೇಶಕೆ ಅವನೆ ಸ್ವಾಮಿ ಎಂದೆನುವಿರಾ!

ಅದು ಸರಿಯೇ. ಆದರೂ ಕೇಳಿ ಮಕ್ಕಳಿರಾ!
ಅವನ ತಪಸಿನ ಅಂಶ ಉಳಿದಿಹುದು ನಮ್ಮಲ್ಲಿ,
ಅದರ ಸದ್ವಿನಿಯೋಗ ನಮ್ಮ ಸಂತೃಪ್ತಿ,
ಇದನು ಭಾವಿಸದಿರುವ ಆ ಮಂದಭಾಗ್ಯನಿಗೆ,
ನಾವೆ ಸೂಚಿಸಬೇಕು, ಅವನ ಪತನ ಸ್ಥಿತಿಯ,
ಅವನೊಳಿಹ ನಮ್ಮಯ ಕೃತಜ್ಞತೆಗೆ, ಇದರಿಂದ
ಕುಂದಿಲ್ಲ: ಬದಲಾಗಿ ಆ ಸಾನುಭೂತಿಯನೆ,
ಪರಿಶೀಲನಾ ಕ್ರಮದಿ ತಿಳಿಸಿದಂತಾಗುವುದು.

("ವಾತ್ಸಲ್ಯ ತರಂಗ ಲೀಲಾ"ದಿಂದ)

ತರಂಗ ★★★

ಜಯವಂ ಪಾಲಿಸು, ಸತ್ಯವಂ ನುಡಿಸು, ಸಂತಾನಕ್ಕೆ ಸತ್ಯವೆಯಂ
ಬಯಸಲ್ಬುದ್ಧಿಯ ನೀಡು, ನಾಡ ಜನರೊಳ್ ಭೇದಂಗಳೀಡಾಡು ಶಾಂ
ತಿಯನೆಲ್ಲೆಲ್ಲಿಯುಂ ಬೀರು, ಧರ್ಮಪಥಕೆ ಕೈದೋರು ಮನ್ಮಾತೆ, ಶ್ರೀ
ಜಯ ಕರ್ನಾಟಕ ದೇವಿ! ನೀಡು ಭರದಿಂ ಸಂಪೂರ್ಣ ಸ್ವರಾಜ್ಯಮಂ ||

ಭಾರತಿ: ಕೃತಿಸಂಪದ

'ಭಾರತಿ ರಚಿಸಿದ ಲೇಖನ–ಗ್ರಂಥಾವಲೋಕನ–
ಏಕಾಂಕ ನಾಟಕಗಳು–ಹಾಡುಗಳು'

ಸಂಗೀತ ಸ್ವರೂಪ

ಧರ್ಮ, ಜ್ಞಾನ, ಸತ್ಯ ಸಂಪದಗಳಿಂದ ಪ್ರಶಸ್ತಿಯೊಂದಿದಂತೆ ಆರ್ಯಾವರ್ತವು ಆನಂದದಲ್ಲೂ ಜಗತ್ತಿಗಾದರ್ಶವಾಗಿರುವುದು. ಅಂದರೆ ಅದೆಂತಹ ಆನಂದ? ಆನಂದವೆಂದರೇನು? ಅದು ಹೇಗಿರುವುದು?

ಮೊದಲನೆಯ ಪ್ರಶ್ನೆಗೆ ಸುಖದ ಪರವಶತೆ ಅಥವಾ ಪರಿಣಾಮವೇ ಆನಂದವೆಂದು ಹೇಳಬಹುದು. ಎರಡನೆಯದು ಅಷ್ಟು ಸುಲಭವಲ್ಲ. ಆನಂದ ಸ್ವರೂಪವನ್ನು ಹೀಗೆಯೆ ಎಂದು ನಿರೂಪಿಸಲು ಸಾಧ್ಯವಿಲ್ಲ. ಆದರೆ ಅದನ್ನು ನಿತ್ಯ, ಅನಿತ್ಯ ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಪರಿಣಾಮದಲ್ಲಿ ಹಿತವೆನಿಸದ, ಸ್ಥಿರವಲ್ಲದ, ಕೆಲವರಿಗೆ ಮಾತ್ರ ಲಭಿಸುವ. ಆನಂದವೇ ಅನಿತ್ಯವೆನಿಸುವುದು.

ನಿತ್ಯಾನಂದವು ಭೇದವರಿಯದ, ಎಲ್ಲರಿಗೂ ಬೇಕಾದ, ಪ್ರಾಣಿ ಕೋಟಿಗಳೆಲ್ಲ ಸಮಾನಾಧಿಕಾರದಿಂದ ಅನುಭವಿಸಬಹುದಾದ, ಇಂತೆಂದು ಬಗೆಯಲಾಗದ, ಶಾಶ್ವತವಾದ, ನಿರತಿಶಯಾನಂದವು, ಬ್ರಹ್ಮಾನಂದವು. ಇದು ಕಣ್ಣಿಗೆ ಕಾಣಿಸದು, ಕದ್ದೊಯ್ಯಲಾಗದು. ಇದಕ್ಕೆ ಸಾದೃಶ್ಯವೆಂದರೆ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸಾಟಿಯಾದುದೆಂದರೆ, ಪರಮಾತ್ಮನ ಸಾಕ್ಷಾತ್ಕಾರ ಅಷ್ಟು ಸುಲಭವೇ? ಅಹುದು. ಈಶ್ವರ ನಿರ್ಮಾಣದಲ್ಲಿನ ವಿಶ್ವಾನಂದದ ಒಂದೇ ಒಂದು ಶಕ್ತಿಗೆ ಮಾತ್ರವಿದು ಶಕ್ಯ; ಅದಾವುದು? ನಾದಾನಂದ. ಈಶ್ವರನೇ ನಾದಬ್ರಹ್ಮನೆಂಬ ಅಭಿಧಾನದಿಂದ ಸುಖದ ಸಂಪೂರ್ಣತೆಯ ಸಹಜ ಸ್ವಭಾವವನ್ನು, ಆನಂದದ ಅನಂತ ಸ್ವರೂಪನು ನಾದ ಪ್ರಪಂಚದಲ್ಲಿ ತುಂಬಿ ಗಾನಮೂರ್ತಿಯಾಗಿರುವನು.

ಆನಂದವೇ ಮೂರ್ತಿವೆತ್ತುದು ಗಾನ. ಈಶ್ವರನು ಗಾನರೂಪಿ. ಅಂದರೆ ಆನಂದವೇ ಈಶ್ವರ. ಈಶ್ವರನೇ ಗಾನವು. ಗಾನವೇ ಆನಂದವು. ಕಡೆಗೆಲ್ಲವೂ ಒಂದೇ. ಪರಬ್ರಹ್ಮವೆಂದರೂ, ನಾದಬ್ರಹ್ಮನೆಂದರೂ, ಆನಂದ ಬ್ರಹ್ಮನೆಂದರೂ ಈಶ್ವರನಿಗೇ ಅನ್ವಯಿಸುತ್ತದೆ.

ತನ್ನನ್ನರಿವ ಸುಲಭೋಪಾಯವನ್ನು, ಧರೆಯರಿವ ವಿಶ್ವಾಸದಿಂದ, ಆನಂದವನ್ನು ವಿಶ್ವಕ್ಕೆ ದೊರಕಿಸುವ ಉದ್ದೇಶ್ಯದಿಂದ ಭಗವಂತನು ಗಾನಲೋಲನಾಗಿ ಕಲಿಯುಗದಲ್ಲಿ ಕೈವಲ್ಯನೀಡುವನೆಂಬುದು ಬಲ್ಲವರ ಮತವು. ಸೃಷ್ಟಿಯ ಸೌಂದರ್ಯ ಶೋಧನದ ಉಪಾಸನೆಯಲ್ಲಿ ಮಾನಸ, ವಶೀಕರಣ ಸಿದ್ಧಿಯನ್ನು ಪಡೆದ ಲಲಿತ ಕಲೆಗಳಲ್ಲಿ ಗಾನ ಕಲೆಯು ಬಹು ಪ್ರಾಮುಖ್ಯತೆ ಹೊಂದಿರುವುದು. ಅದರ ಕೋಮಲ ಸ್ವಭಾವವೂ, ಸುಲಭ ಸ್ವರೂಪವೂ ಆಧ್ಯಾತ್ಮಿಕ ಶಕ್ತಿಯೂ ಇದಕ್ಕೆ ಕಾರಣವಾಗಿದೆ.

ಸಂಗೀತಕ್ಕೆ ನಾದವೇ ಆಧಾರವೆಂದೂ, ಶಂಕರನೂ ಪಾರ್ವತಿಯೂ ಅಧಿದೇವತೆಗಳೆಂದೂ, ಈಶ್ವರನ ಪಂಚಮುಖಗಳಿಂದ 'ಸ ರಿ ಗ ಮ ಪ ದ ನಿ' ಎಂಬ ಸಪ್ತಸ್ವರೋತ್ಪತ್ತಿಯಾಯಿತೆಂದೂ, ಆ ಬಳಿಕ ಸರಸ್ವತೀ ಚತುರ್ಮುಖರೂ, ಮಹರ್ಷಿಗಳೂ, ಗಂಧರ್ವರೂ, ಭರತಶಾಸ್ತ್ರಜ್ಞರೂ, ಗೀತವಾದ್ಯ ನೃತ್ಯಗಳ ಮೂಲಕ ಸಂಗೀತವನ್ನು ವಿಸ್ತರಿಸಿದರೆಂದೂ ಆರ್ಯರ ಸಿದ್ಧಾಂತ. ಅದರ ಉತ್ಪತ್ತಿ, ಸ್ಥಿತಿ, ವಿಸ್ತಾರಗಳನ್ನು ಕುರಿತು ಶಾರ್ಙ್ಗದೇವ, ರಾಮಾಮಾತ್ಯ, ವೆಂಕಟಮುಖಿಯೇ ಮೊದಲಾದ ಸಂಗೀತ ಶಾಸ್ತ್ರಜ್ಞರು ಲಕ್ಷಣ ಸಿದ್ಧಾಂತಗಳನ್ನು ಮಾಡಿ ಜಗತ್ತಿಗೆ ವಿಶದಪಡಿಸಿದ್ದಾರೆ.

ಗಾನಮಹಿಮೆಯನ್ನು ಬಣ್ಣಿಸುವುದು ಪರಮಾತ್ಮನ ಗುಣ ಕಥನದಂತೆ ಆದ್ಯಂತ ರಹಿತವಾದುದು. ಸೂರ್ಯ ಪ್ರಭೆಯನ್ನು ಇಷ್ಟೆಂದು ನಿರ್ಧರಿಸುವುದು, ಸಾಗರದ ನೀರನ್ನಳೆವುದು, ಪರ್ವತದ ಭಾರವನ್ನು ತೂಗಿ ನೋಡುವುದು ಅಮಾನುಷಿತವಾದಂತೆ ಗಾನ ಪ್ರಭಾವವೂ ಅದ್ಭುತವೂ, ಅಗಾಧವೂ, ಅಮಾನುಷಿತವೂ ಆಗಿದೆ. ತುಂಬುರ, ನಾರದ, ಪ್ರಹ್ಲಾದ, ವಾಲ್ಮೀಕಿ, ಆಂಜನೇಯಾದಿ ಭಕ್ತ ಶಿಖಾಮಣಿಗಳೇ– ಈ ಸಂಗೀತ ಸಾಮ್ರಾಜ್ಯದ ಚಕ್ರೇಶ್ವರರು. ಈಶ್ವರನಿತ್ತ ನಾದಾನಂದವನ್ನು ವಿಶ್ವಮಯವಾಗಿ ಮಾಡಿ ಈಶ್ವರನಿಗೇ ಸಮರ್ಪಿಸಿ, ಮೃದು ಮಧುರ ಭಾವನಿರ್ಮಿತ ರಾಗರತ್ನ ಮಾಲಿಕೆಯಿಂದಾತನನ್ನು ಅಲಂಕರಿಸಿ ಸಂಗೀತದ ಸಾರ್ಥಕ್ಯವನ್ನು ಮಾಡಿ ಕೃತಕೃತ್ಯರಾದ ಭಾಗವತೋತ್ತಮರ ಜೀವಿತವಿಂದಿಗೂ ಜಗತ್ತಿಗಾದರ್ಶವಾಗಿದೆ. ಸಂಗೀತದ ಸಹಜ ಸ್ವರೂಪವನ್ನರಿತ ಭಕ್ತರಿಗೆ ಪೃಥ್ವಿಯೇ ವಶವಾಗಿತ್ತು. ಅವರಿಗೆ ಬೇರೊಂದು ಕೈವಲ್ಯದ ಕಲ್ಪನೆಯೇ ಇರಲಿಲ್ಲ. ಅವರು ಈ ಸುಂದರ ಸೌಭಾಗ್ಯ ಸೀಮೆಯನ್ನು ಸಂಗೀತದ ಅಕ್ಷಯ ಸ್ವರ್ಗವನ್ನಾಗಿ ಮಾಡಿದರು. ಅವರಿಗೆ ಸಂಗೀತವು ಸತ್ಯಶೋಧದ ಸಾಧನವಾಗಿತ್ತು. ಬೇರೊಂದು ಸುಖವನ್ನು ಬಯಸದೆ, ಆಶೆಯನ್ನು ಜಯಿಸಿ, ಆತ್ಮಾನಂದದ ಮಂದಿರದಲ್ಲಿ ಪರಮಾತ್ಮನನ್ನು ಬಂಧಿಸಿ, ಜೀವಾತ್ಮನನ್ನು ಆತನಲ್ಲಿ ಬೆರೆಸಿ, ಜೀವನ್ಮುಕ್ತರಾದ ಮೀರಾಬಾಯಿ, ತುಕಾರಾಮ, ತುಲಸೀದಾಸ, ಕಬೀರ, ಪುರಂದರದಾಸ, ರಾಮದಾಸ, ಕನಕದಾಸ, ತ್ಯಾಗರಾಜಾದಿ ಭಾಗವತ ಪ್ರಮುಖರ ಮತ್ತು ಸಾಧು ಶಿಖಾಮಣಿಗಳ ಜೀವನಾಧಾರವೆನಿಸಿದ್ದ ಸಂಗೀತವು ಇಂದಾವ ಸ್ಥಿತಿಯಲ್ಲಿರುವುದು? ಅವರ ಜೀವಿತದಲ್ಲಿನ ಸುಖಮಯ ಸಮಯವೆಲ್ಲಿ?

ಅಂದಿನ ಆತ್ಮಾನಂದವೆಲ್ಲಿ? ಅಂದಿನ ಗಾನಮೂರ್ತಿಯ ಶೃಂಗಾರ ವೈಭವವೆಲ್ಲಿ? ಅವರು ಸೃಷ್ಟಿಸಿದ ಅಕ್ಷಯ ಸ್ವರ್ಗದಲ್ಲಿ, ಹರುಷವನ್ನರಿಯದ ಹತಭಾಗ್ಯರು ಹಸನ್ಮುಖರಾಗಿದ್ದರು, ಶತ್ರುಗಳು ದ್ವೇಷಭಾವವನ್ನುಳಿದು ಮಿತ್ರರಾಗುತ್ತಲಿದ್ದರು. ಭೋಗಿಗಳು ಯೋಗಸಾಧನ ಸಿದ್ಧಿಯನ್ನು ಪಡೆಯುತ್ತಲಿದ್ದರು. ಆ ಭೋಗಿಗಳ ಧ್ಯೇಯವು, ಭಕ್ತಿಯೋಗವು, ಮುಕ್ತಿಮಂದಿರವು, ರೋಗೋಪಶಮದ ಸಂಜೀವನವು, ಪಾಪ ಭುವಿಯ ಪಶ್ಚಾತ್ತಾಪವೂ ಆಗಿತ್ತು. ಆ ಪಾವನ ಸಂಗೀತವು ಇಂದೇನಾಗಿದೆ?

ಮೀರಾಬಾಯಿ ಅಂತರಾತ್ಮದ ಆನಂದ ಪೀಠದಲ್ಲಿ ಮಂಡಿಸಿದ ಗೋವರ್ಧನ ಧಾರಿಯ ಮಂದಸ್ಮಿತ ಮುಖಾರವಿಂದವಿನ್ನೆಲ್ಲಿ? ತುಲಸೀದಾಸನ ಆತ್ಮಾರಾಮನ ಆನಂದದ ದಿವ್ಯಜ್ಯೋತಿ ಎಲ್ಲಿ? ಇಲ್ಲ. ಇನ್ನು ಆ ವೇಣುಗೋಪಾಲನ ನೃತ್ಯ ಲೀಲಾ ವಿನೋದವಿಲ್ಲ. ತುಕಾರಾಮ ಪುರಂದರ ವಿಠ್ಠಲನ ವದನದಿಂದ ನಾದಬಿಂದು ಕಳಾರಹಿತವಾಗಿದೆ. ಕನಕನ, ಕೇಶವನ ವದನದಲ್ಲಿ ಮುಗುಳ್ನಗೆ ಇಲ್ಲ. ಕಬೀರ, ರಾಮದಾಸ, ತ್ಯಾಗರಾಜರ ದಾಶರಥಿಯ ನಯನಗಳಲ್ಲಿಂದ ಭಕ್ತಾನಂದದ ಪ್ರೇಮಾಶ್ರುಗಳಿಲ್ಲ. ಆ ಸ್ವರ್ಗವೇನಾಯಿತು? ಸಂಗೀತದ ಈ ಶೋಚನೀಯ ಸ್ಥಿತಿಗೆ ಕಾರಣವೇನು?

ಧರೆಯ ಭಕ್ತಿಭಾವದ, ಪರಮಾತ್ಮನ ಆನಂದದ, ಅಧ್ಯಾತ್ಮನಿಧಿಯೆನಿಸದ ಸಂಗೀತವು ಸ್ವಾರ್ಥ ತ್ಯಾಗಿಗಳ ದೈವಿಕ ಶಕ್ತಿಯಿಂದ ಸಾರ್ಥಕ್ಯವನ್ನೊಂದುವುದಲ್ಲದೆ ಆತ್ಮಗೌರವದ ಮೇರೆಯನ್ನು ಮೀರಿದ ಪ್ರತಿಷ್ಠಾಪಕರ ಕೀರ್ತಿಯಿಂದಲ್ಲ. ಶಾಂತಿ ಪೂರ್ಣವಾದ, ಸತ್ಯ ಜೀವಿತದ, ಉದಾರ ಹೃದಯದ ವಿಶ್ವಾನಂದ ವಿಹಾರಮೂರ್ತಿಯನ್ನು ಅಹಂಭಾವದ, ವಿದ್ಯಾಲೋಭದ, ಉದರ ಪೋಷಣೆಯ ಜೀವನದಲ್ಲಿ ಕಾಣಲೆಂತು? ಸಂಗೀತದ ಸಾಧನವು ಉದರ ಪೋಷಣೆಗಲ್ಲ. ಸ್ವಪ್ರಯೋಜನದಿಂದ ಸಂಗೀತದ ಸಾರ್ಥಕ್ಯವಿಲ್ಲ, ದೈವಿಕ ಭಾವವನ್ನು ಬಗೆಯದ ಭಕ್ತಿರಹಿತವಾದ ಡಾಂಭಿಕ ವೃತ್ತಿಯನ್ನು ವಹಿಸಿದ ಗಾನವು ಈಶ್ವರರಹಿತವಾದುದು. ಸಂಗೀತಕ್ಕೆ ತಾವು ಸ್ವಾಧೀನರಾಗದೆ, ಅದರ ಸ್ವರೂಪವನ್ನರಿಯಲೆತ್ನಿಸದೆ, ಮನಬಂದಂತೆ ಅದನ್ನು ಉಪಯೋಗಿಸಿ ರೂಪುಗೆಡಿಸುವುದು ಮಹತ್ಪಾಪಕ್ಕೆ ಕಾರಣ. ಯೋಗಿಗಳಿಗಾನಂದವಿತ್ತ ರಾಗಾಮೃತವು ಭೋಗಾಸ್ತಕರ ಭೋಗ್ಯವಸ್ತುವಾಗಿ, ಭಗವಂತನಿಗೆ ದೂರವಾಗುವುದೆಂದರೆ ಇದಕ್ಕೂ ಹೆಚ್ಚಿನ ಅನ್ಯಾಯ, ಅಧರ್ಮ, ಪಾಪ ಮತ್ತೇನಿರುವುದು? ಮನುಷ್ಯ ಮಾತ್ರರಿಗಲ್ಲದೆ, ಜೀವಜಂತುಗಳಿಗೆ ಸಹ ಇದು ದಾರುಣಯಾತನೆಯಾಗಿದೆ. (ನಾಗರ ಹಾವು ಸಂಗೀತ ಶಾಸ್ತ್ರವನ್ನು ಚೆನ್ನಾಗಿ ಬಲ್ಲುದೆಂದೂ, ಅದರ ಅಕ್ರಮವನ್ನು ಸಹಿಸದೆಂದೂ ಹಿರಿಯರ ಹೇಳಿಕೆ.)

ಪ್ರಕೃತದಲ್ಲಿ ಸಂಗೀತವು ಒಬ್ಬಿಬ್ಬರು ಮಹಾನುಭಾವರಲ್ಲಿ ಸಾರ್ಥಕ್ಯವನ್ನು ಹೊಂದುತ್ತಿರುವುದಾದರೂ ಪರಿಸ್ಥಿತಿ ಉತ್ತಮವಾಗಿಲ್ಲ. ಸಂಗೀತ ಶಿಕ್ಷಣದ ಅವ್ಯವಸ್ಥೆಯೂ, ಅಕ್ರಮವೂ, ಅನ್ಯದೇಶದಿಂದಾಗಮಿಸಿದ ಅವಾಂತರ ವಾದ್ಯ ವಿಶೇಷಗಳ

ಪ್ರಚಾರವೂ ಆರ್ಯರ ಪುರಾತನ ಗಾನಕಲೆಯ ಅವನತಿಗೆ ಸೂಚನೆಯಾಗಿದೆ. ಧಾರ್ಮಿಕ ಸಂಸ್ಥೆಗಳಲ್ಲಿ, ವಿದ್ಯಾಪೀಠಗಳಲ್ಲಿ ಎಲ್ಲಿಯೂ ಸಂಗೀತ ಶಿಕ್ಷಣದ ವ್ಯವಸ್ಥೆ ಇಲ್ಲ. ಧರ್ಮದ ಮಾತೃಸ್ಥಾನವೆನಿಸಿದ ಭಾರತ ಭೂಮಿಯಲ್ಲೇ ಧಾರ್ಮಿಕ ವಿದ್ಯೆಯಾದ ಸಂಗೀತದ ಅಧಃಪತನವಾಗುತ್ತಿರುವುದು ಎಷ್ಟು ಶೋಚನೀಯ!

ದೇಶಬಾಂಧವರೇ! ಗಾನಕಲೆಯ ಪುನರುಜ್ಜೀವನವಾಗುವುದು ದೇಶದ ಶುಭ ದೇಳಿಗೆಗೆ ಸಹಾಯ, ಧರ್ಮಕ್ಕೆ ಬೆಂಬಲ. ಸಂಗೀತದ ಸಾರ್ಥಕತೆಯನ್ನು ಕುರಿತು ಚಿಂತಿಸಿ ಗಾನವನ್ನು ಪ್ರಚಾರವಲ್ಲಿ ತಂದಿರುವ ನಾಟಕ ಕರ್ತೃಗಳೂ, ಕೀರ್ತನಕಾರರೂ, ರಕ್ಷಣಾಧಿಕಾರಿಗಳೂ ಎಚ್ಚೆತ್ತು ಸಂಗೀತದ ನಿಜಸ್ವರೂಪವನ್ನು ನಿರ್ಮಿಸುವ ಪ್ರಯತ್ನಕ್ಕೆ ಮನಗೊಟ್ಟು, ಅವನ್ನುದ್ಧರಿಸಬೇಕು. ಇದು ದೇಶಸೇವೆ, ಈಶಸೇವೆ, ಧರ್ಮಕಾರ್ಯ. ★

—1925

ಸ್ವಾತಂತ್ರ್ಯದ ಪರಿಣಾಮವಾಗಿ ಸಮಾನತೆಯ ದೊಡ್ಡ ಸ್ಪರ್ಧೆಯೇ ನಡೆಯುತ್ತಿದೆ. ಪುರುಷರಿಗೆ ಸಮಾನವಾಗಿ ಉನ್ನತ ಪದವಿಗಳನ್ನು ಪಡೆದ ವಿದ್ಯಾವತಿಯರೂ ಉದ್ಯೋಗನಿರತರೂ ಎಣಿಕೆಗೆ ಸಾಧ್ಯವಾಗದಷ್ಟು ಅಧಿಕವಾಗುತ್ತಿದ್ದಾರೆ. ಈ ಪ್ರಾಬಲ್ಯದಿಂದ ವಿಚಾರ ಕ್ರಾಂತಿಯೊಂದು ಹುಟ್ಟಿಕೊಂಡು ಅನುಭವಿಗಳ ಮನಸ್ಸುಗಳನ್ನು ಕಲಕುತ್ತಿದೆ. ಆರ್ಯನಾರಿಯರು ತಮ್ಮ ಸತೀತ್ವ ಮಾತೃತ್ವ ಸ್ಥಾನಮಾನಗಳನ್ನು ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ ಪರಸ್ಪರ ಸೌಹಾರ್ದದಿಂದ ಸುಭದ್ರ ಜೀವನ ಸಾಗಿಸಬೇಕಾದರೆ ಸಮಾನ ಬಾಧ್ಯತೆ ಸಮಾನ ಸೌಕರ್ಯ ಲಭ್ಯವಾಗುವಂತಹ ಒಂದು ಕ್ರಮ ಅಗತ್ಯವಲ್ಲವೇ? ಸ್ತ್ರೀಯರ ಪ್ರಜ್ಞೆ ಅವರ ಚಟುವಟಿಕೆಗಳು ಈ ವಿಚಾರದಲ್ಲಿ ಎಷ್ಟು ತೀಕ್ಷ್ಣವಾಗಿರಬೇಕೋ, ಪ್ರಯತ್ನಗಳೂ ಹೇಗೆ ಸಾಗಬೇಕೋ ಅದೆಲ್ಲ ಯಶಸ್ವಿಯಾಗಿ ಪರಿಣಾಮವಾಗಬೇಕಾದರೆ ಅವರ ಜ್ಞಾನ ಸಂಪತ್ತು ಹೆಚ್ಚಬೇಕು. ವಿಚಾರ ಶಕ್ತಿ ಪ್ರಬಲವಾಗಬೇಕು.

—ಭಾರತಿ

ಮರೆಯಲಾಗದ ಬಾಪೂ

ನೆನಪು ನಮ್ಮ ಜೀವನದ ಸಹಜೀವಿ, ಅನುಯಾಯಿ. ಅನೇಕ ಸಂದರ್ಭಗಳಲ್ಲಿ ಅದು ನಮ್ಮನ್ನು ಎಚ್ಚರಿಸಿ ಕಾಪಾಡುತ್ತದೆ. ನಮ್ಮ ಜೀವನವು ಭದ್ರವಾಗಿ, ಶುದ್ಧವಾಗಿ ಒಂದು ಸ್ಥಿರಗತಿಗೆ ಮುಟ್ಟಲು ನೆನಪು ಸಹಕಾರಿ; ಸುಖವೋ ದುಃಖವೋ ಪ್ರಾಪ್ತವಾದಾಗ ವಿವೇಕದಿಂದ ವರ್ತಿಸುವಂತೆ ನಮ್ಮ ಮನಸ್ಸನ್ನು ಸುಧಾರಿಸಲು ನೆನಪು ಉಪಕಾರಿ. ಯಾರೇ ಆಗಲಿ ತಮ್ಮ ಜೀವನದಲ್ಲಿ ಉಂಟಾದ ಹಿತಾಹಿತ ಘಟನೆಗಳನ್ನು ಮರೆಯಲು ಸಾಧ್ಯವಿಲ್ಲ. ಅಪೂರ್ವ ಸಂದರ್ಭಗಳು ಜೀವನದ ಅಪೂರ್ವ ಭಾಗ; ಅದು ಹಿತವಾಗಿ ಅನುಕೂಲವಾಗಿ ಒದಗಿ ಬಂದಾಗ ಮನಸ್ಸು ಉದಾರವಾಗಿ 'ನನ್ನ ಜನ್ಮ ಸಾರ್ಥಕ, ಧನ್ಯ, ಕೃತಾರ್ಥ' ಎಂದು ಅಂದುಕೊಳ್ಳುತ್ತದೆ. ನಾಲಿಗೆಯು ತಾನಾಗಿ ಹಾಗೆ ನುಡಿಯುತ್ತದೆ. ಆ ಅನುಭವವನ್ನು ಪದೇಪದೇ ನೆನೆದು ನುಡಿವುದು ಮಾತ್ರವಲ್ಲ, ಬರೆಯಬೇಕಾದ ಸಂದರ್ಭವೂ ಬರುವುದುಂಟು. ನನ್ನ ಸಾಮಾನ್ಯ ಜೀವನದಲ್ಲಿ ಇಂತಹ ಮಾತುಗಳನ್ನು ಬರೆಯುವ ಅಗತ್ಯವಾದೀತೆಂದು ಎಂದೂ ಬಗೆದಿರಲಿಲ್ಲ. ಅವರವರ ಜೀವನ ವಿಮರ್ಶೆಗೆ ಅವರೇ ಬಾಧ್ಯರೆಂಬ ಮಾತು ಸತ್ಯವಾದರೆ ನಾವು ಸ್ವಾನುಭವವನ್ನು ಕುರಿತು ಹೀಗೆ ಬರೆವುದು ಆಶ್ಚರ್ಯವಾಗದು. ನಾನು ಸಾಮಾನ್ಯಳು ನಿಜ. ನನ್ನ ಬಗೆಯಲ್ಲಿನ ನೆನಪು ಅಸಾಮಾನ್ಯವಾಗಿ "ನನ್ನೀ ಜೀವನದ ಭಾಗ್ಯ ವಿಶೇಷವಿದು" ಎಂದು ಹೇಳುತ್ತಿದೆ. "ನಾನು ನಿನ್ನನ್ನು ಬೆಳಸಿದೆ, ಉಳಿಸಿದೆ. ದುಃಖದಲ್ಲಿ ಹರ್ಷವನ್ನು ಬೆರಸಿದೆ. ವಿಪತ್ತಿನಲ್ಲಿ ಧೈರ್ಯವನ್ನು ನೀಡಿದೆ. ಎಂತಹ ದೆಶೆಯಲ್ಲೂ ನಿನ್ನ ಜೀವನವು ನಿನಗೆ ಸಹ್ಯವಾಗುವಂತೆ ಮಾಡಿದೆ. ನನಗೆ ಕೃತಜ್ಞತೆಯೂ ಸಲ್ಲಬೇಡವೆ?" ಎಂದು ಮುಂದೆ ನಿಲ್ಲುತ್ತಿದೆ. 'ಅದೇನು ಭಾಗ್ಯ, ಅದಾವ ನೆನಪು? ಇದುವರೆಗೆ ಅದು ಹೇಗಿತ್ತು? ಇಂದೇನಾಯಿತು? ಇದುವರೆಗೆ ಕಾಲು ಶತಮಾನಕ್ಕೆ ಮೀರಿ, ನನ್ನಲ್ಲಿ ಬೆರೆತು ಆನಂದಾಶ್ರುಗಳನ್ನು ಸುರಿಸಿ ಎಂತಹ ದುಃಖಾಶ್ರುಗಳನ್ನು ತುಂಬುತಿದೆ ಆ ನೆನಪು. ದುಃಖಮಯ ಸಮಯದಲ್ಲಿ ಈ ಕೈಗಳನ್ನು ಪವಿತ್ರ ಸ್ಮೃತಿ ಅನುಗೊಳಿಸಿದೆ. ಮರೆತ ದಿನಗಳು ಮುಂದೆ ಬರುತ್ತಿವೆ. ಎಂದೆಂದಿನ

ಮಾತುಗಳನ್ನೋ ಅಂತರಂಗವು ಮಿಡಿಯುತ್ತಿದೆ. ಆ ನಾನಾ ಸಂದರ್ಭಗಳ ದೃಶ್ಯವೋ ಕಣ್ಣೆದುರಿಗೆ ಕಾಣುವಂತಾಗಿದೆ. "ನಿನ್ನ ಜೀವನದ ಆರಂಭ ನಿನ್ನ ೨೦ ನೆಯ ವರ್ಷ" ಎಂದು ನೆನಪು ಹೇಳುತ್ತಿದೆ.

೧೯೨೦ನೆಯ ವರ್ಷ, ೨೦ನೆಯ ಶತಮಾನ. ಅನೇಕ ಸುಧಾರಣೆಗಳಿಂದ, ಅನೇಕ ಸಮಸ್ಯೆಗಳಿಂದ, ಅನೇಕ ಸಂಕಟಗಳಿಂದ ಆವೃತವಾಗಿತ್ತು ಭಾರತ. ಪರದಾಸ್ಯದ ಮಹಾ ಪೀಡೆಯು ಜನಾಂಗವನ್ನು ಅಂಟಿ ಸರ್ವ ಶೂನ್ಯರಾಗಿದ್ದರು ಭಾರತೀಯರು. ಆಗಲೇ ಬಂಧಮುಕ್ತರಾಗಿ ಬಂದರು ಲೋಕಮಾನ್ಯ ಬಾಲಗಂಗಾಧರ ತಿಲಕರು. ದಕ್ಷಿಣಾಫ್ರಿಕದಿಂದ ಮಹಾತ್ಮ ಗಾಂಧಿಯವರು ಭಾರತಕ್ಕೆ ಹಿಂತಿರುಗಿದ್ದ ತರುಣದಾ ಸಮಯ. ಆಲೀ ಸೋದರರ ಬಂಧನ, ತಿಲಕರ ನಿಧನ, ಗಾಂಧೀಜಿಯವರ ವಾಗ್ದಾನ ಇವೆಲ್ಲ ಆದ ಸಮಯವದು. ಭಾರತದಲ್ಲಿ ಸ್ವರಾಜ್ಯ ಸ್ವಾತಂತ್ರ್ಯ ಎಂಬ ಕೂಗು ನವ ಶಕ್ತಿ ಮೂಡಿಸಿತು. ಪ್ರಳಯದ ಮೊದಲಡಿಗಳನ್ನು ಕಾಲ ಪುರುಷನು ಮೆಟ್ಟಿದನು. ಪ್ರಚಂಡ ಮಾರುತನು ಮಹಾತೂರ್ಯಧ್ವನಿಯೂದಿ ಬೂದಿ ಮುಚ್ಚಿದ್ದ ಭಾರತದ ಅಗ್ನಿಪುತ್ರ ಪುತ್ರಿಯರನ್ನೂ ಪ್ರಜ್ವಲಿಸುವ ಪ್ರಯತ್ನ ಮಾಡಿದನು. ವೀರಯುಗದಾದಿಯದು. ಆ ಪರಿಸ್ಥಿತಿಗೆ ಮಹಾ ಸತ್ಯ ತತ್ವದ, ಸತ್ಯ ಶೋಧದ ಪರಮ ಸ್ವರೂಪವೊಂದು ಕಾರಣವಾಯಿತು. ಮುಲುಕು ಹಾಕುತ್ತಿದ್ದ ರಾಷ್ಟ್ರಚೈತನ್ಯವೇ ಬೆಚ್ಚಿ ಎಚ್ಚೆತ್ತುದಾಗ, ನವಯುಗದ ಸುಧಾರಕರೆಲ್ಲ ಕಣ್ತೆರೆದರು. ನಾಗರೀಕರು, ವಿದ್ಯಾವಂತರು, ಶ್ರೀಮಂತರು, ಬಡವರು, ಪತಿತರು, ಪಾಮರರು, ದೀನರು, ಅನಾಥರು ಎಲ್ಲರ ಪಾಲಿನ ಬಂಧುವು ಆಗಮಿಸಿದನು. ಅನ್ಯರ ಆಕ್ರಮಣದಿಂದಾದ, ಅಧೋಗತಿಯಿಂದ ಮೇಲೆತ್ತುವ ದಾಸ್ಯ ದುಃಖಮಯ ಜೀವನದಿಂದ ಭಾರತವನ್ನು ಪಾರು ಮಾಡುವ ಉದ್ಧಾರಕರ್ತನೀತನೇ ಎಂದು ನಿರ್ಧರಿಸಿದರು.

ಲೋಕಮಾನ್ಯರಿಗೆ ಅವಸಾನ ಕಾಲದಲ್ಲಿ ಗೀತಾವಾಕ್ಯಗಳಿಂದ ಸ್ವರಾಜ್ಯವನ್ನು ಪಡೆವುದಾಗಿ ವಾಗ್ದಾನವಾದುದಾರಿಂದ? ಆಗ ನಾಯಕ ಸೂತ್ರಗಳನ್ನು ವಹಿಸಿ ಕೊಂಡವರು ಯಾರು? ಮಾನವ ಜೀವನದಲ್ಲಿ ಸಮಾನ ಹಿತವನ್ನೂ, ಎಲ್ಲ ಜೀವ ಕ್ಷೇಮವನ್ನು ಹಾರೈಸಿದ, ಯಾರೊಬ್ಬರ ನೋವನ್ನೂ, ಯಾವ ಜೀವದ ಹಿಂಸೆಯನ್ನೂ ಸಹಿಸದ ವಿಶ್ವಪ್ರೇಮಿಯೊಬ್ಬನೆ. ಭಾರತೀಯರ ದಾಸ್ಯ ವಿಮೋಚನೆಯೊಂದೇ ಅಲ್ಲ, ವಿಶ್ವ ಜೀವನದ ಎಲ್ಲ ಸಮಸ್ಯೆಗಳಿಗೆ, ಎಲ್ಲ ಸಂದೇಹಗಳಿಗೆ, ಯುಗ ಯುಗದಿಂದ ಯಾರಿಂದಲೂ ದೊರೆಯದಿದ್ದ ಸಮಾಧಾನ ಸಂದೇಶಗಳು ಯಾರ ವಾಣಿಯಿಂದ ಬಂದಿತೋ ಆ ಮಹಾತ್ಮನೊಬ್ಬನೇ. ಆತನ ದರ್ಶನಕ್ಕೆ, ವಾಣಿಯನ್ನಾಲಿಸುವದಕ್ಕೆ ಬಯಸದವರಾರು? ಅಂದಿನ ಪರಿಸ್ಥಿತಿಯ ಪ್ರಭಾವವು ನಾನಾ ರೂಪವನ್ನು ತಳೆದಿತ್ತು. ನನ್ನ ಜೀವನದ ಮೇಲೆ ಅದೆಂತು ಪರಿಣಾಮವಾಯಿತೆಂಬುದನ್ನು ನಾನೆಂದಿಗೂ ಮರೆಯಲಾರೆ. ಅದೂ ಬಹು ಸಮರ್ಪಕ ರೀತಿಯಲ್ಲೇ ಆಯಿತು.

ಸಾಮಾನ್ಯ ಕುಟುಂಬದಲ್ಲಿ ಗೃಹ ಶಿಕ್ಷಣವನ್ನೇ ಹೆಚ್ಚಾಗಿ ಪಡೆದ, ಪ್ರಾಚೀ

ಸಂಪ್ರದಾಯವನ್ನೇ ಹೆಚ್ಚಾಗಿ ನಂಬಿದ ೨೦ ವರ್ಷದ ಮುಗ್ಧ ಯುವತಿಯ ಲೋಕಾನುಭವ ಎಷ್ಟು ಮಾತ್ರ? ಅಂದಿನ ಜಾಗೃತಿಯಲ್ಲಿ ವಿದ್ಯಾವತಿಯರ ರೀತಿಯೆ ಬೇರೆ, ಆದರ್ಶವೇ ಬೇರೆ, ಸಾಮಾನ್ಯರ ನೀತಿ ನಂಬಿಕೆಗಳೇ ಬೇರೆ. ಇಂದಿನಂತೆ ದೇಶ ವಿದೇಶಗಳ ವರ್ತಮಾನವರಿಯುವ ಕುತೂಹಲವು ಅಷ್ಟಾಗಿ ಎಲ್ಲರಿಗೂ ಇರಲಿಲ್ಲ. ದಿನಚರಿಯಲ್ಲಿ ಅದು ಮುಖ್ಯವಾದುದು ಈಗ. ಆದರೂ ಆಗ ದಿನ ದಿನಕ್ಕೆ ಹೊಸ ಹೊಸ ರೂಪದಲ್ಲಿ ಆಗುತ್ತಿದ್ದ ವಿಚಾರ ಕ್ರಾಂತಿಯು ಯಾರ ಮನವನ್ನೂ ಹೋಗದೆ ಬಿಡಲಿಲ್ಲ. ಅದನ್ನು ಬಲಪಡಿಸುತ್ತಿದ್ದವು, ಮದರಾಸಿನಿಂದ ನನಗೆ ಬರುತ್ತಿದ್ದ ನಮ್ಮವರ ಪತ್ರಗಳು.

೧೨-೮-೧೯೨೦ ರ ಪತ್ರದಲ್ಲಿ: ಇಂದು ಗಾಂಧೀ ಮಹಾತ್ಮರು ಇಲ್ಲಿಗೆ ಬರುತ್ತಾರೆ. ಸಂಜೆಗೆ ಸಮುದ್ರ ತೀರದಲ್ಲಿ ಮಹಾಸಭೆ. ಮಹಾತ್ಮರ ದರ್ಶನ ಭಾಗ್ಯ ನಿನಗಿಲ್ಲವಾಯಿತಲ್ಲಾ ಎಂಬುದೇ ಮನಸ್ಸಿಗೆ ಕೊರತೆ, ಸಭೆಗೆ ಹೋಗಿ ಬಂದು ನಾಳೆ ವಿವರಗಳನ್ನು ಬರೆಯುತ್ತೇನೆ.

ಮುಂದಿನ ಪತ್ರದಲ್ಲಿ: ಮಹಾತ್ಮರ ದರ್ಶನ ಮಾಡಿ ಅವರ ದಿವ್ಯ ವಾಣಿಯನ್ನು ಕೇಳಿ ನಾನೆಂತಹ ಸ್ಥಿತಿಗೆ ವಶನಾದೆನೆಂಬವನ್ನು ವರ್ಣಿಸಲಾರೆ. ಜೀವನದಲ್ಲಿ ಒಂದು ಧ್ಯೇಯವನ್ನು, ಒಂದು ಸನ್ಮಾರ್ಗವನ್ನು ನಾವಿನ್ನು ನಿರ್ಧರಿಸಬೇಕಾಗಿದೆ. ಸೇವೆಗೆ ಅಸುವಾಗೆಂದು ಅಂತರಾತ್ಮನ ಬೋಧೆ ಯಾಗುತ್ತಿದೆ. ನಾನೇನು ಮಾಡಲಿ ?

ಆದರ ಮುಂದಿನ ಪತ್ರ ೧೮-೮-೧೯೨೦ ರಂದು: ೨೨ ನೆಯ ತಾರೀಖು ಗಾಂಧೀಜೀ ಅಲ್ಲಿಗೆ ಬರುತ್ತಾರೆ, ಆ ಸಂದರ್ಭ ಮರೆತೀಯೆ. ಶ್ರೀಮತಿ ಶ್ರೀರಂಗಮ್ಮನವರ ಸಹಾಯದಿಂದ ನೀನಾತನನ್ನು ನೋಡುವುದು ಸಾಧ್ಯ ವಾದೀತು. ಆತನು ಪ್ರತ್ಯಕ್ಷ ದೈವ. ಹೋಗಿ ನೋಡು. ನೀನು ಮೊದಲಿ ನವಳಾಗಿರುವುದಿಲ್ಲ. ನಿನಗೆ ಹೊಸ ಜನ್ಮವೇ ಬಂದಂತಾಗುವುದು.

ಆಜ್ಞೆಗಿಂತ ಹೆಚ್ಚಾಗಿ ಆಶೆ ಬಾಧಿಸಿತು. ಚಾಮರಾಜಪೇಟೆಯ ಐದನೆ ರಸ್ತೆಯ ಕೊನೆಯಲ್ಲಿದ್ದ ಮನೆಗೆ ಧಾವಿಸಿ ಹೋದೆ, ಉರಿಬಿಸಿಲಿನ ಮಧ್ಯಾಹ್ನದಲ್ಲಿ. ಅವರಿಗೂ ಅದೇ ಆತುರ, ಆಶೆ. ಆದರೆ ಒಂದು ಗಾಡಿಯಿಲ್ಲ. ಬೇರೆ ಸಹಾಯವಿಲ್ಲ. ಮಳೆಯು ಮೊದಲಾಯಿತು. ಯತ್ನವಿಲ್ಲ, ಆಶೆ ಉತ್ಸಾಹಗಳೆಲ್ಲಾ ಭಂಗವಾದವು. ಗಾಂಧೀಜೀ ದಂಡಿನಲ್ಲಿ ತಂಗಿ ಐದು ಗಂಟೆಗೆ ಸಭೆ ಮಾಡಿ ಮುಗಿಸಿ ಅಂದೇ ಹೊರಟು ಬಿಟ್ಟರು. ಅಂದು ಬಿ.ಎ. ಶ್ರೀರಂಗಮ್ಮನವರು ಹೇಳಿದ ಸಮಾಧಾನ, ಅಲ್ಲಿಯೇ ದಿನ ಕಳೆದುದು ಮೊದಲಿನ ನೆನಪು.

ಅನತಿ ಕಾಲದಲ್ಲೇ ಮದರಾಸಿನಲ್ಲಿ ಸಂಸಾರ ಹೂಡಿದುದಾಯ್ತು. ತಿಲಕ ಸ್ವರಾಜ್ಯ ನಿಧಿಗಾಗಿ ವರ್ಷದಲ್ಲಿ ಒಂದು ಕೋಟಿ ದ್ರವ್ಯವನ್ನು ಕೂಡಿಸಲು ಪ್ರತಿಜ್ಞೆ ಮಾಡಿ ಗಾಂಧೀಜಿ ಸಂಚಾರವನ್ನು ಕೈಕೊಂಡ ಸಮಯ. ಮದ್ರಾಸಿಗೆ ಬಂದೇ

ಬಂದರು. ಸಮುದ್ರ ತೀರದಲ್ಲಿ ಪ್ರಚಂಡ ಸಭೆ. ಆ ಜನಸಮೂಹ, ಆಷ್ಟು ಎತ್ತರದ ವೇದಿಕೆ, ಆ ವ್ಯವಸ್ಥೆ ನನಗೆ ಹೊಸ ನೋಟ. ದಿಗ್ಭ್ರಮೆಯಾಯ್ತು. ಉಪನ್ಯಾಸ ವೇದಿಕೆಯ ಮೇಲೆ ಉಪನ್ಯಾಸಕರೆಷ್ಟು ಮಂದಿಯೋ! ಆ ದೂರದ ದರ್ಶನದಿಂದ ತೃಪ್ತಿಯಾಗಲಿಲ್ಲ. ಹೊರಡುವ ಸಮಯ. ನೂಕು ನುಗ್ಗಲು. ಜನರು ದಾರಿಗಳಲ್ಲಿ ಕಾರಿಗೆ ಅಡ್ಡವಾಗಿ ಮಲಗಿಬಿಟ್ಟರು. ಎಲ್ಲರೂ ಸಾವಕಾಶವಾಗಿ ನೋಡುವಂತೆ ಬಲು ನಿಧಾನವಾಗಿ ಕಾರು ಸಾಗುತ್ತಿತ್ತು. ಅಭಿಮಾನಿಗಳಾದ ಅಣ್ಣನೂ, ಪತಿಯೂ ಹೇಗೋ ಮುಂದೆ ನುಗ್ಗಿ ಕಾರಿನ ಪಕ್ಕಕ್ಕೆ ನನ್ನನ್ನು ಕರೆದೊಯ್ದರು. ಏನಾದೇನಾಗ? ಈತನು ಮಾನವನೇ? ಕ್ಷೇತ್ರವೇಕೆ? ತೀರ್ಥವೇಕೆ? ದೇವತೆಗಳಿಂದಲೂ ಪೂಜಾರ್ಹ ನಾದ ಈತನ ದರ್ಶನಕ್ಕೆ ಸಮಾನವಿನ್ನಾವುದು? ಎಂದಾಡಿದರೂ ಆಶ್ಚರ್ಯವಿಲ್ಲ. ದರ್ಶನ ಮಾತ್ರದಿಂದ ಪ್ರಭಾವ ಮುದ್ರೆ ಒತ್ತುವುದೇ ಮಾಹಾತ್ಮ್ಯದ ಒಂದು ನಿದರ್ಶನ. ಸ್ಫೂರ್ತಿಯು ಅಂದಿನಿಂದ ನನಗೆ ಸಂಗಾತಿ. "ಭಾರತೀಯರು ನಾವು, ನಮ್ಮದೀ ಭಾರತವು, ಧರೆಗಾಗಿ ಜೀವಿಸುವ, ಧರೆಗಾಗಿ ಮಡಿವ" ಎಂಬ ಮಾತುಗಳು ರಾಗವಾಗಿ ಹಾಡಿಕೊಳ್ಳುವಂತೆ ಆಯಿತು. ಮರುದಿನವೇ ಮಹಾತ್ಮರ ಮೊದಲ ಸಂದೇಶದ ಹಾಡು ಸಿದ್ಧವಾಯಿತು. ಎಂತಹ ನೆನಪು!

ಜಲಿಯನ್‌ವಾಲಾ ಬಾಗ್ ಘೋರ ದುರಂತಗಳಾದ ಮೇಲೆ ಭಾರತದ ಭಾವೀ ಸಾರ್ವಭೌಮನಿಗೆ ದೇಶಪರ್ಯಟನದಲ್ಲಾದ ಪರಾಭವ, ಧಿಕ್ಕಾರ; ಗಾಂಧೀಜಿಯವರ ಪ್ರಚಾರಕ್ಕೆ ಪ್ರವಾಸಕ್ಕೆ ದೊರೆತ ಸನ್ಮಾನ, ಎಂಟು ತಿಂಗಳಲ್ಲೇ ಕೋಟಿ ಧನ ಸಂಗ್ರಹ, ಇವೆಲ್ಲ ಒಟ್ಟಿಗೆ ನಡೆದ ಸಮಯ. ಅಸಹಕಾರ ಚಳುವಳಿಯ ಆರಂಭ, ಅಹಮದಾಬಾದಿನ ರಾಷ್ಟ್ರೀಯ ಮಹಾಸಭೆ. ಪತ್ರಿಕೆಗಳಲ್ಲೊಂದು ಸುದ್ದಿ ಪ್ರಕಟವಾಗಿತ್ತು: ಮಹಾಸಭೆಯ ಅಂಗವಾಗಿ ಅಖಿಲ ಭಾರತ ಸಂಗೀತ ಸಮ್ಮೇಳನವು ನಡೆಯುತ್ತದೆ; ಕಲಾವಿದರೆಲ್ಲರಿಗೂ ಆಹ್ವಾನ. ಇದನ್ನು ಓದಿದ ಮೇಲೆ ಸುಮ್ಮನಿರಲಾಗಲಿಲ್ಲ. ಇನ್ನೂ ಎರಡು ತಿಂಗಳ ಅವಕಾಶವಿದೆ, ನೀನು ಹೋಗುವುದಾದರೆ ಬೇಕಾದ ಏರ್ಪಾಟು ಮಾಡುತ್ತೇನೆ ಎಂಬ ಮಾತಷ್ಟೇ ಸಾಕಾಯಿತು.

ಉದ್ಯೋಗವಿಧಿಗನುಸಾರವಾಗಿ ಪೆನುಗೊಂಡೆ, ಗುತ್ತಿ ಅತ್ತಕಡೆಯ ಸಂಚಾರ. ಹೊರಡುವ ಮುನ್ನ ರಾಜಾಜಿಯವರಿಂದ ಬಾಪೂಜಿಯವರಿಗೆ ಕೊಡಲು ಒಂದು ಪತ್ರವನ್ನು ಪಡೆಯಲಾಯ್ತು. ಪತ್ರವು ಹೀಗಿತ್ತು:

> "ಈ ಪತ್ರವನ್ನು ತಂದಿರುವ ತರುಣಿ ದೇಶಾಭಿಮಾನಿ, ಕಲಾವಿದೆ, ಚೆನ್ನಾಗಿ ವೀಣೆಯನ್ನು ನುಡಿಸುತ್ತಾಳೆ, ನಿಮ್ಮನ್ನು ನೋಡ ಬಯಸುತ್ತಾಳೆ. ಹಾಡಿಸಿ ಕೇಳುವುದಾದರೆ ಸಂತೋಷ, ಅವಕಾಶವಿಲ್ಲವಾದರೆ ನಿಮ್ಮ ಸ್ವಂತ ಪುತ್ರಿಯಂತೆ ತಿಳಿದು ಹರಸಬೇಕು."

ಪತ್ರವನ್ನು ಜೋಪಾನ ಮಾಡಿದೆ.

ಗುತ್ತಿಯ ಛತ್ರದಲ್ಲಿ ವಾಸ, ಬೆಟ್ಟದ ಮೇಲಿನ ಶಾಸನಗಳೊಂದಿಗೆ ಪಾಠ,

ನಾಳೆಯ ಪ್ರಯಾಣದ ಮಾತು. ಊಟ, ಉಪಹಾರ, ಕಾಫಿಯ ಕೂಜಾ ಕೈಲಿದೆ. ಬೆಟ್ಟವೇರುತ್ತಾ ಮನಸ್ಸು ಅಹಮದಾಬಾದಿಗೆ ಹೋಗುತ್ತಿದೆ. ಮುಖ ನೋಡಿದ ಕೂಡಲೆ ಮನೋಗತವು ಅರ್ಥವಾಯಿತು.

"ಈ ಗುಲಾಮ ನೌಕರಿ ಇದ್ದರೆಷ್ಟು, ಹೋದರೆಷ್ಟು! ಈ ಸಮಯವನ್ನು ನಾನೇಕೆ ವ್ಯರ್ಥ ಮಾಡಲಿ? ನಾಳೆ ಹೊರಡುವುದು ಖಂಡಿತ. ಪ್ರಯಾಣಕ್ಕೆ ಸಿದ್ಧಳಾಗು."

ಮರುದಿನ ಕಡೆಯ ಜಾವದ ಚಳಿಯಲ್ಲಿ ಬೊಂಬಾಯಿಗೆ ಹೊರಡುವ ರೈಲನ್ನು ಹತ್ತಿದ ಸಮಯ, ಅಂತಹ ಸಮಯವಿನ್ನು ಜೀವನದಲ್ಲಿ ಉಂಟೇ ?

ಅಂದು ನಮ್ಮೊಂದಿಗೆ ಬಂದ ಪ್ರಯಾಣಿಕರು ನಿಜ ಬಂಧುಗಳಾಗಿ ಮುಂದೆ ನಿಲ್ಲುತ್ತಾರೆ. ಆ ಜಯಘೋಷ, ಆ ವೀರ ಭಾಷಣಗಳು, ದಿಕ್ಕು ತೋರದೆ ಬೊಂಬಾಯಿನಲ್ಲಿ ಅಹಮದಾಬಾದಿಗೆ ಹೊರಡುವ ರೈಲು ಗುರ್ತಿಸಲಾರದೆ ತಳಮಳ ಗೊಂಡದ್ದು, ಆ ಸಮಯದಲ್ಲಿ ಒದಗಿ ಬಂದ ಸಹಾಯ ಇವೆಲ್ಲಾ ಮರೆಯುವುದೆಂತು!

ಸಬರ್ಮತಿ ತೀರದ ವಸತಿ, ನಿರ್ಮಲೋದಕ ಸ್ನಾನ, ಶ್ರದ್ಧಾನಂದ ಸ್ವಾಮೀಜೀ ಪರಿಚಯ, ಅವರಿತ್ತ ಸಂದೇಶ, ದಾರಿಯಲ್ಲಿ ಆಕಸ್ಮಿಕವಾಗಿ ಕಾರಿಗೆ ಸಿಕ್ಕುವಂತಾಗಿದ್ದ ಪ್ರಮಾದದಿಂದ ಸ್ವಾಮೀಜೀ ಕಾಪಾಡಿ ಜೀವದಾನ ಮಾಡಿದುದು, ಎಂತಹ ಭಾಗ್ಯ! ರಾಷ್ಟ್ರಮಹಾಮಂಟಪದ ನೋಟ. ತುಂಡುಬಟ್ಟೆಯುಟ್ಟು ಬಂದ ದರಿದ್ರ ನಾರಾಯಣನ ಆರಾಧಕ, ಆ ನಿರ್ಮಲ ತೇಜಕ್ಕೆ ಬೆರಗಾದುದು, ಸಭೆಯು ಅರ್ಪಿಸಿದ ಭಕ್ತಾಂಜಲಿ, ಅಂದು ನಿರ್ಧರಿಸಿದ ಸತ್ಯಾಗ್ರಹ ಕಾರ್ಯಕ್ರಮಕ್ಕೆ ಅವಿರೋಧವಾಗಿ ದೊರೆತ ಒಪ್ಪಿಗೆ; ಇದೆಲ್ಲಾ ಎಂತಹ ಪಾಮರರಿಗಾದರೂ ಉದಾತ್ತ ಕಲ್ಪನೆಗೆ ಕಾರಣವಲ್ಲವೇ? ಭಾರತದ ದೃಢಸಂಕಲ್ಪ, ಆ ತ್ಯಾಗ, ಬಲಿದಾನ ಇವೆಲ್ಲಾ ಸಮಯ ವಿಶಿಷ್ಟತೆಯ ಸಂಬಂಧವಾದುದಲ್ಲದೆ ಮತ್ತೇನು.

ಗಾಂಧೀಜಿ ಎರಡನೆಯ ದಿನ ಕರ್ಣಾಟಕ ಪ್ರಾಂತ್ಯಕ್ಕೆ ಬಂದರು. ಕೌಜಲಗಿ ಶ್ರೀನಿವಾಸರಾಯರು ಏರ್ಪಡಿಸಿದ ಕಾರ್ಯಕ್ರಮದಂತೆ "ಜೈ ಭಾರತ ಭೂಮಿಗೆ" ಹಾಡಲು ನನಗೆ ಅವಕಾಶವಾಯಿತು. ಉತ್ಸಾಹದಿಂದ ಗಾಂಧೀಜೀ ಕೇಳಿದರು. ಆ ಸಮಯದಲ್ಲಿ ಅವರಿಗೆ ನಮಸ್ಕರಿಸಿ ಪತ್ರವನ್ನು ಕೈಲಿಡಲು ಆಗಲಿಲ್ಲ. ಸಂಜೆ ಪ್ರಾರ್ಥನಾ ಸಮಯಕ್ಕೆ ಭಜನೆಯ ಕೂಟದೊಂದಿಗೆ ಅವರ ನಿವಾಸಕ್ಕೆ ಹೋದೆವು. ಯಾರಿಗೂ ತಿಳಿಸಲಿಲ್ಲ. 'ದರ್ಶನ್, ದರ್ಶನ್' ಎಂದು ಜನರ ಗುಂಪಿನೊಂದಿಗೆ ಒಳಕ್ಕೆನುಗ್ಗಿದೆ. ಐವತ್ತು ವರ್ಷದ ಮಾನ್ಯ ಮಹಿಳೆಯೊಬ್ಬರು ಯೋಗಿನಿಯಂತೆ ಕುಳಿತು ನೂಲು ತೆಗೆಯುತ್ತಿದ್ದರು. ನಾನಂದುಕೊಂಡುದು ಅವರೇ ಕಸ್ತೂರಿ ಬಾ ಎಂದು. ಕೀರ್ತನ ಕೇಸರಿಯವರಿದ್ದರು. ಅವರನ್ನು ಕೇಳಿದೆ. 'ಬಾ ಆಶ್ರಮದಲ್ಲೇ ಇದ್ದಾರೆ, ಇಲ್ಲಿಗೆ ಬಂದಿಲ್ಲ, ಅವರು ಶ್ರೀಮತಿ ಸರಳಾಬಾಯಿ ಚೌಧುರಾಣಿ' ಎಂದು ತಿಳಿಸಿ ಅವರಿಗೆ ನನ್ನ ವಿಚಾರವನ್ನು ಹೇಳಿದರು. ಅತಿ ವಾತ್ಸಲ್ಯದಿಂದ ಆ ತಾಯಿ ಹತ್ತಿರ ಕುಳ್ಳಿರಿಸಿ

ಕೊಂಡರು. ನನ್ನಲ್ಲಿದ್ದ ಪತ್ರವನ್ನು ಅವರ ಕೈಲಿಟ್ಟೆ. 'ಬಾಪೂ ಈಗಲೇ ಬರುತ್ತಾರೆ. ನಾನು ತಿಳಿಸುತ್ತೇನೆ' ಎಂದರು. ಬಂದೇ ಬಂದರು ಬಾಪೂಜೀ. ಸರಳಾದೇಯವರು ನನ್ನ ಕೈಹಿಡಿದು ಹತ್ತಿರಕ್ಕೆ ಕರೆದುಕೊಂಡು ಹೋದರು. 'ದೂರದ ಮೈಸೂರಿನಿಂದ ಬಂದಿರುವ ಈ ತರುಣಿಯನ್ನು ನೋಡಿ ಬಾಪೂಜೀ. ಈ ಪತ್ರವನ್ನು ತಂದಿದ್ದಾಳೆ' ಎಂದರು. ಬಾಪೂಜಿ ಪತ್ರ ಬಿಚ್ಚಿ ನೋಡಿದರು, ನಕ್ಕರು. ಅದೆಂತಹ ತಿಳಿನಗೆ, ಇನ್ನದನ್ನು ನೋಡುವುದೆಲ್ಲಿ? ಅದಕ್ಕೂ ಹೆಚ್ಚಾಗಿ ಅವರು ನಕ್ಕುದನ್ನು ಮುಂದೆ ನೋಡಿದೆ. ಆದರೂ ಆ ಮೃದುಹಾಸ, ಆ ನಯನ ಕಾಂತಿ ಇನ್ನೂ ಮರೆಯಾಗಿಲ್ಲ. ಅವರಿಗಿಷ್ಟವಾದುದೋ ಇಲ್ಲವೋ ನಾನಂತೂ ಅವರ ಚರಣಮುಟ್ಟಿ ಕಣ್ಣುಗಳಿಗೊತ್ತಿಕೊಂಡೆ.

ಆರ್ಯರು ಹರಸುವಂತೆ ಸೌಭಾಗ್ಯದ ಹರಕೆ ಸಂದಿತಾಗ. ಬಾಪೂ ಹೇಳಿದರು: 'ಬೆಳಿಗ್ಗೆ ನಾಸಿಕೆಯನ್ನು ನೋಡಿದೆ, ಹಾಡುವುದನ್ನು ಸಹ ಕೇಳಿದೆ' ಎಂದು.

ಈ ಪರಿಚಯ ಮುಂದೆ ಹೇಗೆ ಬೆಳೆಯಿತೆಂಬುದು ಹೆಮ್ಮೆಯ ಮಾತು. ಅದಾದ ಮೇಲೆ ಅನೇಕ ಘಟನೆಗಳು ದೇಶದಲ್ಲಿ ನಡೆದುಹೋದುವು. ಬಾಪೂಜೀ ಮಹೋಪವಾಸಗಳು, ಅವರ ಬಂಧನ, ಅನಾರೋಗ್ಯ, ಶಸ್ತ್ರಚಿಕಿತ್ಸೆ ಮುಂತಾದವು.

ಬೆಳಗಾವಿಯಲ್ಲಿ ರಾಷ್ಟ್ರ ಮಹಾಸಭೆಯನ್ನು ಕನ್ನಡನಾಡು ನೆರೆಸಿದ ಸಮಯ. ೧೯೨೪ನೆಯ ಡಿಸೆಂಬರ್ ತಿಂಗಳ ಕೊನೆ. ನನ್ನ ಮೊದಲ ಮಗು ಜಯ ಮೂರು ತಿಂಗಳು, ಹದಿನೈದು ದಿನಗಳ ಕೂಸು. ಮಹಾಸಭೆಯ ಕೆಲವು ಹೊಣೆಗಳನ್ನು ವಹಿಸಿದ್ದ ಪತಿಯು ಊರೂರು ತಿರುಗುತ್ತಾ ತಿಂಗಳಿಗೆ ಮೊದಲೇ ಬೆಳಗಾವಿಯನ್ನು ಸೇರಿದರು. ಆಗ ಕರ್ಣಾಟಕ ಸಂಗೀತ ಪರಿಷತ್ತೂ ಕೂಡಿತು. ವೀಣೆ ಶೇಷಣ್ಣನವರೇ ಮೊದಲಾಗಿ ಮೈಸೂರಿನ ಪ್ರಖ್ಯಾತ ಕಲಾವಿದರೆಲ್ಲರಿಗೂ ಆಹ್ವಾನವಿತ್ತು. ಬೆಂಗಳೂರಿನ ಪ್ರಖ್ಯಾತ ತಾಯಪ್ಪನವರು ಆಹ್ವಾನವನ್ನು ಮನ್ನಿಸಿ ಮನೆಗೆ ಬಂದು ಸೂಚಿಸಿದ ಸಂತೋಷವು ಅತಿಶಯವಾಗಿತ್ತು. ಆದರೆ ನನಗೆ ಮಾತ್ರ ಅಂದು ಬಂದ ಪತ್ರ ಅಷ್ಟು ಸಮಾಧಾನವಾಗಲಿಲ್ಲ.

೨೨-೧೨-೧೯೨೪
ಬೆಳಗಾಂ

"ಪತ್ರ ಬರೆಯಲು ಸಹ ಬಿಡುವಿಲ್ಲದಷ್ಟು ಕೆಲಸ. ಮಹಾಸಭೆಗೆ ಬರಲು ನಿನಗೆಷ್ಟು ಆಸೆಯೋ, ನೀನು ಬರುವ ವಿಚಾರ ನನಗೂ ಅಷ್ಟೇ ಅಗತ್ಯವಾದುದು. ಆದರೆ ಈಗಿನ ಸಂದರ್ಭ? ಎಳೆಗೂಸು, ನೀನಿನ್ನೂ ಬಾಣಂತಿ. ಕೂಸಿಗಾಗಲೀ, ನಿನಗಾಗಲೀ ಇಲ್ಲಿನ ಚಳಿ ಸಹಿಸುವಂತಿಲ್ಲ. ನಿನ್ನ ಆರೋಗ್ಯದ ದೃಷ್ಟಿಯಿಂದ ನಾನು ಬರೆದಿದ್ದೇನೆ. ನಿನ್ನ ನಿರ್ಧಾರವೇ ನಿರ್ಧಾರ. ನನಗದು ಸಮ್ಮತ. ನೀನು ಏನು ಹೇಳುವೆ?"

ಏನೂ ತೋರದೆ, 'ನನಗಾಗಿ ಸ್ವಲ್ಪ ಅನುಕೂಲ ವಸತಿಯನ್ನು ಮಾಡಿ

ಕೊಡಲು ಸಾಧ್ಯವಾಗದೇ' ಎಂದಷ್ಟು ಮಾತ್ರ ಬರೆದು ಸುಮ್ಮನಾದೆ.

೨೫ನೆಯ ತಾರೀಖು ಸಂಜೆಯಲ್ಲಿ ಬಂತು ತಂತೀ ವಾರ್ತೆ.

'ನಾಳೆಯೇ ರಾಜಮ್ಮ ಪ್ರಯಾಣ ಮಾಡಬೇಕು. ಬಾಪೂಜೀ ಬಂದಿದ್ದಾರೆ. ಪ್ರಾರ್ಥನೆಗೆ ದಿನವೂ ಆಕೆ ಹಾಡಲು ಏರ್ಪಡಿಸಿದೆ.'

—ಮುದವೀಡು ಕೃಷ್ಣರಾಯ

ಆ ತಂತೀ ವಾರ್ತೆಯೊಂದಿಗೆ ಕೂಡಲೇ ಸುಲ್ತಾನ್‌ಪೇಟೆಯ ಔಷಧಾಲಯಕ್ಕೆ ಹೋದೆ. ಪುತ್ರವತ್ಸಲರೆನಿಸಿದ್ದ ಡಾಕ್ಟರ್ ಗುಂಡಣ್ಣನವರ ಕೈಗವನ್ನು ಕೊಡಲು, ತಲೆದೂಗುತ್ತಾ, ಉತ್ಸಾಹ, ಸಂತೋಷ ಸೂಚಕ ಹಾಸ್ಯನ ನಗೆಯಿಂದ 'ಲೋಕ ಸೇವೆಗೆ ಸಮಯವೇನು, ಅಸಮಯವೇನು ಹೊರಡು ಹೊರಡು' ಎಂದು ತಾವೇ ಎದ್ದು ಸ್ವಹಸ್ತದಿಂದ ಮೂರು ಸೀಸೆಗಳಲ್ಲಿ ಔಷಧವನ್ನು ಸಿದ್ಧಮಾಡಿ, 'ಇಗೋ, ಇದು ಬೆಳಿಗ್ಗೆಗೆ, ಇದು ಮಧ್ಯಾಹ್ನಕ್ಕೆ, ಇದು ಸಂಜೆಗೆ. ಏನೂ ಆಗುವುದಿಲ್ಲ. ಮಹಾತ್ಮರ ಸಾನ್ನಿಧ್ಯ. ಶುಭಮಸ್ತು, ಹೋಗಿ ಬಾ' ಎಂದರು.

ಮೂರನೆಯ ದಿನ ದೊಡ್ಡ ಪರಿವಾರದೊಂದಿಗೆ ಪ್ರಯಾಣ ಮಾಡಿದೆ. ಎಳೆ ಗೂಸು, ಅಷ್ಟೇ ಪ್ರಿಯವಾದ ವೀಣೆ, ಈ ರಕ್ಷಣೆ, ಆ ಗೊಂದಲದಲ್ಲೂ ಮಿತ್ರರ ಸಹಾಯದಿಂದಾಗಿ ಪ್ರಯಾಣವು ಹಿತಕರವಾಗಿಯೇ ಇತ್ತು. ಒಂದುದಿನ ಮುಂಚಿತವಾಗಿಯೇ ಬೆಳಗಾಂ ಸೇರಿದೆ. ಪ್ರಾರ್ಥನೆಯ ಸಮಯದಲ್ಲಿ ಬಾಪೂಜೀ ನನ್ನನ್ನು ದೃಷ್ಟಿಸಿ ಗುರುತಿಸಿದರು. ಎರಡು ದಾಸರ ಪದಗಳನ್ನು ಹಾಡುವಂತೆ ತಿಳಿಸಿದರು. ವೈಭವದಿಂದ ಸಭೆ ನಡೆಯಿತು.

ಹಿಂದೆ ನೋಡಿದ್ದ ಸಭೆಗೆ ಬಾರದಿದ್ದವರಲ್ಲಾ ಬಂದಿದ್ದರು. ನೆಹರೂ ತಂದೆ ಮಕ್ಕಳು, ಸರೋಜಿನಿ, ಆಕೆಯ ಮಕ್ಕಳು, ಚಿತ್ತರಂಜನದಾಸರು, ಅಲೀ ಸೋದರರೂ, ಎಲ್ಲ ಪ್ರಮುಖ ನಾಯಕರೂ ಸೇರಿದ್ದರು. ಅನಿಬೆಸೆಂಟರು ಸಹ ಬಂದರು. ಎಂತಹ ಮಂಗಳ ವೇದಿಕೆ, ಅದೆಂತಹ ನೋಟ. ಅಧಿಷ್ಠಾನ ದೇವತೆ ಮಹಾತ್ಮಾಜೀ. ಜನರ ಆನಂದಕ್ಕೆ ಪಾರವೇ ಇಲ್ಲ. ಕಡೆಯ ದಿನ ಎಲ್ಲ ಕಲಾವಿದರಿಗೂ ಆಹ್ವಾನವಿತ್ತು–ಗಾಂಧೀಜಿ ಸಾನ್ನಿಧ್ಯದಲ್ಲಿ ಹಾಡುವುದಕ್ಕೆ. ಆದರೆ 'ಶಿಬಿರಕ್ಕೆ ಯಾರು ಕಾವಲು, ನೀನೇ ಕಾವಲಿರು. ಹೇಗೂ ಪ್ರಾರ್ಥನೆಗೆ ಹೋಗುವೆಯಲ್ಲ' ಎಂದು ಗುರುಗಳ ಆಜ್ಞೆ. ಅಂದು ಮೂರು ಗಂಟೆಯ ಕಾಲ ಸಂಗೀತವನ್ನು ಕೇಳಲು ಸಮಯವನ್ನೊದಗಿಸಿಕೊಂಡರು ಬಾಪೂಜೀ. ಶೇಷಣ್ಣನವರಿಗೆ ಒಂದು ಗಂಟೆಯ ಹೊತ್ತು, ಬಹುಶ್ರದ್ಧೆಯಿಂದ ಉಲ್ಲಾಸದಿಂದ ಕೇಳಿದರಂತೆ. ಆದರೂ ಕಡೆಯಲ್ಲಿ ಒಂದು ಚೀಟಿ. "ಇವರೆಲ್ಲಾ ಬಂದರು ಸರಿಯೇ. ಪ್ರಾರ್ಥನೆಗೆ ಬಂದು ಹಾಡುವ ತಂಗಿಯೇಕೆ ಬಂದಿಲ್ಲ. ಸಂಜೆಯ ಪ್ರಾರ್ಥನೆಗೆ ಅರ್ಧಗಂಟೆ ಮುಂಚಿತವಾಗಿ ಆಕೆಯನ್ನು ಕರೆದು ತನ್ನಿ. ನಾನು ಆಕೆಯ ಸಂಗೀತವನ್ನು ಕೇಳುತ್ತೇನೆ." ಹಿಂತಿರುಗಿ ಶಿಬಿರಕ್ಕೆ ಬಂದ ಗುರುಗಳಿಗೆ ಒಂದು

ರೀತಿಯ ಹೆಮ್ಮೆಯಿಂದ ಕೂಡಿದ ಕೃತಕ ಕೋಪ. “ಇಷ್ಟು ಜನವೂ ಸಾಲದು. ನಾನು ಸಾಲದು, ಹೆಂಗಸಿನ ಮೇಲೆ ಅದೆಷ್ಟು ಪಕ್ಷಪಾತ. ಆಗಲಿ ಹೋಗಿ ಬಾಪ್ಪಾ, ಬೇಕಾದರೆ ನನ್ನ ವೀಣೆಯನ್ನೇ ತೆಗೆದುಕೊಂಡು ಹೋಗು” ಎಂದರು.

ಹೊತ್ತಿಗೆ ಸರಿಯಾಗಿ ಬಾಪೂ ಆಸೀನರಾಗಿ ಕುಳಿತರು. ಚರಕವನ್ನು ಮೆಲ್ಲಗೆ ತಿರುಗಿಸುತ್ತಾ ಕೇಳುತ್ತಿದ್ದರು. ದಾಸರ ಪದಗಳೆಂದರೆ ಅವರಿಗೆ ಬಲು ಇಷ್ಟ. ‘ರಾಮ ನಾಮ ಜಪಿಸಿದವರಿಗುಂಟೆ’ ಎಂದು ಹಾಡಿದಾಗ ಅವರಿಗಾದ ಆನಂದವೆಷ್ಟೋ! ಮುಕ್ಕಾಲು ಗಂಟೆ ತನ್ಮಯರಾಗಿ ಕುಳಿತು ಕೇಳಿದರು. ಎಲ್ಲ ಮುಗಿದಮೇಲೆ ಹೊರಟು ಬರುವಾಗ ಮಗುವನ್ನು ಕಾಲಬಳಿ ಮಲಗಿಸಿದೆ, ಪ್ರೀತಿಯಿಂದ ಶಿರವನ್ನು ನೇವರಿಸಿದರು. ನಾನೂ ನಮಸ್ಕರಿದೆ. ಮೌನದಿಂದ ಮನಸ್ಸಿನಲ್ಲೇ ಹರಸಿದಂತೆ ತೋರಿತು.

* * * *

ಆಮೇಲೆ ಮೂರುವರ್ಷಗಳ ಮಾತು. ಆರೋಗ್ಯನಿಮಿತ್ತ ಬಾಪೂ ನಂದೀ ಬೆಟ್ಟದ ಮೇಲಿದ್ದು ಆಮೇಲೆ ಕುಮಾರಾ ಪಾರ್ಕಿನಲ್ಲಿ ರಾಜರ ಅತಿಥಿಗಳಾಗಿ ಒಂದು ತಿಂಗಳಿದ್ದರು. ಆಗ ಬೆಂಗಳೂರಿನ ಜನತೆ ಸಂಭ್ರಮಾನಂದವೆಷ್ಟು? ಬೆಂಗಳೂರು ದೇಶೀಯ ವಿದ್ಯಾಶಾಲೆಯಲ್ಲಿ ಸ್ವದೇಶೀ ಪ್ರದರ್ಶನ ಮಹಾ ವೈಭವದಿಂದ ನಡೆಯಿತು. ನಾನಾ ಪ್ರಾಂತಗಳಿಂದ ನೂಲುವ ಸ್ಪರ್ಧೆಯಲ್ಲಿ ಗೆದ್ದವರು ಬಂದಿದ್ದರು. ಅತ್ಯುತ್ತಮ ಖಾದಿಯನ್ನು ನಯನಾಕರ್ಷವಾಗಿ ಕಾಣುವಂತೆ ತೆಗೆದಿದ್ದರು. ಮಹಾತ್ಮರೇ ಪ್ರದರ್ಶನವನ್ನು ತೆರೆದರು. ಸೊಗಸಾದ ಜರಿಯ ಖಾದಿಯನ್ನು ನೋಡಿ, ‘ಇದೆಲ್ಲಾ ಯಾರ ಮದುವೆಗೆ?’ ಎಂದರು. ಬಾಪೂ ಆ ಶಾಲೆಗೆ ಎಷ್ಟು ಸಲ ಬಂದರೋ. ಅವರಿಂದಲೇ ಆ ಶಾಲೆ ರಾಷ್ಟ್ರಭಾವದ ಉಗಮ ಸ್ಥಾನವಾಗಿ ನಾಡಿಗೇ ಅಲಂಕಾರ ಪ್ರಾಯವಾಗಿರುವುದು. ಗಾಂಧೀಜೀ ಹೊರಟುಹೋಗುವ ಮುನ್ನ ಅಲ್ಲಿ ವ್ಯಾಯಾಮಶಾಲೆಯ ಸ್ಥಾಪನೆ ಅವರ ಸ್ವಹಸ್ತದಿಂದ ಆಯಿತು.

ಗಾಂಧೀಜಿ ಬೆಂಗಳೂರಿನಲ್ಲಿದ್ದಾಗ ದೇಶನಾಯಕರನೇಕರು ಅವರ ಜೊತೆಯಲ್ಲಿದ್ದರು. ರಾಜಾಜಿ, ಗಂಗಾಧರರಾವ್ ದೇಶಪಾಂಡೆ ಅವರು ಸದಾ ಸಂಗಡಲೇ ಇರುತ್ತಿದ್ದರು. ಜಮನಲಾಲ್ ಬಜಾಜ್, ಮಾಳವೀಯ, ರಾಜೇಂದ್ರಬಾಬು ಎಲ್ಲರೂ ಬಂದಿದ್ದರು, ಮಹದೇವಭಾಯಿ ಕಾರ್ಯದರ್ಶಿಗಳು, ಸಂಗೀತ ಪ್ರಿಯರು. ವಾರಕ್ಕೆ ೨-೩ ಸಲವಾದರೂ ಮನೆಗೆ ಬಂದು ಹೋಗುತ್ತಿದ್ದರು.

‘ವೈಷ್ಣವ ಜನತೋ’ ಬಾಪೂಜಿಗೆ ಬಲು ಇಷ್ಟವಾದ ಹಾಡು, ಕನ್ನಡ ಭಾಷೆಯಲ್ಲಿ ದಾಸರ ಕೃತಿಗಳ ಧಾಟಿಯಲ್ಲಿ ಅದನ್ನು ಕೇಳಬೇಕೆಂದು ಅವರು ಬಯಸಿದರಂತೆ. ಹಾಗೆ ಮಾಡಿಕೊಡಬೇಕೆಂದು ಮಹಾದೇವಭಾಯಿಯವರು ಕೇಳಿದರು. ನನಗೆ ಹಿಂದೀ ಪರಿಚಯವಿಲ್ಲ. ಆ ಸಾಹಿತ್ಯವನ್ನೇ ಭಾಷಾಂತರ ಮಾಡಿಸಿ ತಂದುಕೊಟ್ಟರು. ಬಾಪೂಜಿಯವರ ಸಂತೋಷಕ್ಕಾಗಿ ಮಾಡುವ ಕೆಲಸ ಆಗುವುದಿಲ್ಲವೆಂದು ಯಾರು ತಾನೇ ಹೇಳಲು ಸಾಧ್ಯ! ಹಾಡು ಕನ್ನಡದಲ್ಲಿ ಸಿದ್ಧವಾಯಿತು. ಅದನ್ನು ಅವರಿಗೆ ಕೇಳಿಸು

ವುದು ಹೇಗೆ? ಸಂದರ್ಭವು ಅನುಕೂಲವಾಗಿರಲಿಲ್ಲ. ಭಾಯಿಯೂ, ಇತರರೂ ಆಗಾಗ ಬರುವುದೂ, ಸಂಗೀತವನ್ನು ಕೇಳುವುದೂ ಇದು ಹೇಗೋ ಬಾಪೂಜೀ ಕಿವಿಗೆ ಬಿತ್ತು. 'ನಾನು ಕೇಳಬೇಡವೇ?' ಎಂದು ಪ್ರಶ್ನೆ ಹೊರಟಿತು. ಭಾಯಿಯವರು "ಪ್ರಾರ್ಥನೆಗೆ ಒಂದು ದಿನ ಬರುವುದಕ್ಕಾಗುವುದಿಲ್ಲವೇ?" ಎಂದರು. ಮನೆಯಲ್ಲಿ ಎಲ್ಲರಿಗೂ ವಿಚಾರ, ಹೇಗೆ ಮಾಡುವುದು? ನವಮಾಸ ಪೂರ್ಣವಾಗಿದೆ, ಆಗುವುದಿಲ್ಲ ಎನ್ನುವುದಾದರೂ ಹೇಗೆ?

ಮನೆಯವರಂತೆ ಪಳಗಿದ್ದ ಮಿತ್ರರು ಕೆಲವರಿದ್ದರು. ಡಾಕ್ಟರ್ ಕುನ್ನಿಕಣ್ಣನ್ ರವರು ಇದನ್ನು ಕೇಳಿ, 'ಎಲ್ಲಿಯಾದರೂ ತಪ್ಪಿಸುವುದುಂಟೇ? ಹೋಗುವುದೇ ಸರಿ, ನಾನು ಕಾರನ್ನು ತರುತ್ತೇನೆ. ಬರುವುದಾಗಿ ಹೇಳಿ ಕಳುಹಿಸಿ' ಎಂದರು. ಮಾರನೆಯ ದಿನವೇ ಹೋಗುವ ಏರ್ಪಾಡಾಯಿತು. ಮೊದಲು ಕಸ್ತೂರಿ ಬಾ ಇದ್ದಲ್ಲಿಗೆ ಹೋದೆವು. ಆಗಲೇ ಅವರನ್ನು ಕಂಡದ್ದು. ಬಾಪೂ ಚರಕವನ್ನು ಮುಂದಿಟ್ಟುಕೊಂಡು ಕೆಲವು ಕಾಗದಗಳನ್ನು ಮುಂದೆ ಹರವಿಕೊಂಡಿದ್ದರು. ಮಹಾದೇವ ಭಾಯಿಯವರು ಅವನ್ನೆಲ್ಲಾ ಜೋಡಿಸಿ ತೆಗೆದಿಡುತ್ತಾ ಸುದ್ದಿ ತಿಳಿಸಿದರು. ಸಂತೋಷದಿಂದ ಬಾಪೂ ಸಿದ್ಧವಾದರು. ಮಿತ್ರರನೇಕರು ನಮ್ಮ ಜೊತೆಯಲ್ಲಿ ಬಂದರು. ಅಲ್ಲಿದ್ದ ಪರಿವಾರವೂ ನೆರೆಯಿತು. ಆ ಗೋಷ್ಠಿಯಲ್ಲಿ ಸಮಾನ ವಿಶ್ವಾಸದಿಂದ ಎಲ್ಲರೂ ಒಂದೇ ಭಾವದಿಂದ ಭಕ್ತಿಯಿಂದ ಕುಳಿತಿದ್ದ ದೃಶ್ಯ ಪಾವಿತ್ರ್ಯತೆಗೆ ಒಂದು ಉದಾಹರಣೆಯಾಗಿತ್ತು. ವೀಣೆಯ ಸೂಕ್ಷ್ಮ ನಾದಕ್ಕೆ ಸ್ವಲ್ಪವೂ ತೊಂದರೆಯಾಗದಷ್ಟು ಜಾಗರೂಕತೆಯಿಂದ ನಿಶ್ಯಬ್ದವಾಗಿ, ನಾಜೋಕಾಗಿ ಮಹಾತ್ಮರು ಚರಕವನ್ನು ತಿರುಗಿಸುತ್ತಿದ್ದರು. ಅದೆಂತಹ ಕೌಶಲ! ವೀಣೆಯ ಮೇಲಿನ ದೃಷ್ಟಿ ಹಾಗೆಯೇ ಇದೆ. ಒಂದೆರಡು ಹಾಡುಗಳಾಯಿತು, ಮಧ್ಯಮ ಕಾಲಕ್ಕೆ ಆರಂಭಿಸಿದಾಗ, ಅವರು ಕುತೂಹಲದಿಂದ ಅದೇನು ಎಂದು ಕೇಳಿದರು. ಯಾರೋ ತಿಳಿಸಿದರು-ರಾಜಾಜಿಯೇ ಇರಬಹುದು-'ಅದು ತಾನಂ, 'ಈ ವಾದ್ಯದಲ್ಲಿ ಆ ಕೆಲಸ ಬಲು ಸೊಗಸು.'

ಬಾಪೂಜೀ "ಹೌದು, ಹೌದು, ಬಲು ಸೊಗಸು" ಎಂದರು. 'ವೈಷ್ಣವ ಜನತೋ' ಮಾತು ಬಂತು. ನಾನದನ್ನು ಮಾಯಮಾಳವಗೌಳದಲ್ಲಿ ಹಾಡಿದೆ. ಆ ರಾಗ ಅವರಿಗೆ ಅಷ್ಟಾಗಿ ರುಚಿಸಲಿಲ್ಲ. 'ಇದನ್ನು ಇನ್ಯಾವುದಾದರೂ ಬೇರೆ ರಾಗ ದಲ್ಲಿ ಹಾಡುವುದಕ್ಕಾಗುವುದಿಲ್ಲವೇ?' ಎಂದರು. ನನಗೆ ಮಾತ್ರವಲ್ಲ ಎಲ್ಲರಿಗೂ ಆಶ್ಚರ್ಯವಾಯಿತು ಆ ಮಾತನ್ನು ಕೇಳಿ. 'ಆಗುತ್ತದೆ' ಎಂದಷ್ಟೇ ಉತ್ತರ ಹೇಳಿದೆ ಅದಕ್ಕೆ. ಒಂದೇ ಒಂದು ನಗೆಯಲ್ಲಿ ಆ ಮಾತು ತೇಲಿಹೋಯಿತು. ಕಡೆಯಲ್ಲಿ "ವಂದೇ ಮಾತರಂ." ಅದನ್ನು ಕೇಳಿ ಪರವಶರಾಗಿ "ಈಗ ಒಂದೇ ಹಾರಿಗೆ ಬಂಗಾಳ ವನ್ನು ಮುಟ್ಟಿದೆ." ಎಂದರು. ಬಾಪೂಜೀ ಹೊರಡುವಾಗ, "ನಾಳೆಯೂ ಬರಬೇಕು" ಎಂದರು. ಮಹಾದೇವ ಭಾಯಿ ಸೂಕ್ಷ್ಮವಾಗಿ ಕಿವಿಯಲ್ಲಿ ಸಂದರ್ಭವನ್ನು ತಿಳಿಸಿದರು. "ಪರವಾಗಿಲ್ಲ, ಅಂತಹ ಪ್ರಮಾದ ವಿಚಾರವೇನಲ್ಲ" ಅಂದುಬಿಟ್ಟರು ಬಾಪೂ. ರಾಜಾಜಿ

ಅವನ್ನು ಕೇಳಿ "ಹೋಗಲಿ ನಾಳೆ ಬಂದುಬಿಡಿ. ಸೋಮವಾರ ಮೌನದಿನ" ಎಂದರು.

ಮಾರನೆಯ ದಿನ ಹೋದಾಗ ಹರೀಂದ್ರನಾಥರೂ, ಕಮಲಾದೇವಿಯೂ ಬಂದರು. ಹರೀಂದ್ರರ ಕೈಲಿ ತಂಬೂರಿ. ಉದ್ದೇಶ ತಿಳಿಯಲು ಮಾತು ಬೇಕಾಗಿರಲಿಲ್ಲ. ಬಾಪೂಜೀ ಮೊದಲು ಕಾಲು ಗಂಟೆ ನನಗೆ ಅವಕಾಶ ಕೊಟ್ಟರು. ಆಮೇಲೆ ನಿಲ್ಲಿಸಲು ಸಂಜ್ಞೆ. ಹರೀಂದ್ರರಿಗೆ ಹಾಡಲು ಸೂಚನೆ, ನೆನಪಿಗೆ ಬಂತು. 'ವೈಷ್ಣವ ಜನತೋ' ಗೀತೆಯನ್ನು ಶ್ರೀರಾಗಕ್ಕೆ ಹೊಂದಿಸಿ ಹಾಡಿದುದನ್ನು ಬಾಪೂ ಸರಿಯಾಗಿದೆಯೆಂಬ ಅರ್ಥ ಬರುವಂತೆ ತಲೆಯಲ್ಲಾಡಿಸಿ ಸಮಾಧಾನವನ್ನು ಮುಖದಲ್ಲಿಯೂ ಸೂಚಿಸಿದರು. ಎಂತಹ ಇಂಗಿತ ಕುಶಲಿ ಎಂದೆಲ್ಲರೂ ಬೆರಗಾದರು. ನನ್ನ ಸರದಿ ಮುಗಿಯಿತು. ಹರೀಂದ್ರರ ಸರದಿ ಅರ್ಧಗಂಟೆಯಾಯಿತು. ಅವರ ಈ ಆಟವನ್ನು ಮುಗುಳು ನಗೆಯಿಂದ ಎಲ್ಲರೂ ನೋಡುತ್ತಿದ್ದರು. ಬಾಪೂ ನಗೆಯಂತೂ ಮೊದಲಿಂದ ಕೊನೆಯವರೆಗೆ ಒಂದೇ ಸಮನಾಗಿತ್ತು. ಆ ತಮಾಷೆಗೆ ಅವರಿಗೇ ನಗು. ಒಂದು ಹಳೆಯ ಕಡತದಿಂದ ಒಂದು ಕಾಗದ ತೆಗೆದು ಬರೆಯತೊಡಗಿದರು. ಸಂಜ್ಞೆಯಿಂದ ಕಮಲಾದೇವಿಯನ್ನು ಹತ್ತಿರ ಕರೆದು ಕೈಗೆ ಕೊಟ್ಟರು, ಅದರಲ್ಲಿ ಈ ಒಕ್ಕಣೆ ಇತ್ತು.

> "ನನ್ನ ಮುಂದೆ ನಿಪುಣರಿಬ್ಬರು ತಮ್ಮ ಕಲಾ ಕೌಶಲವನ್ನು ತೋರಿದ್ದಾರೆ. ಪತಿಯ ಕೌಶಲಕ್ಕೆ ಸತಿಯೊಬ್ಬಳು ಹಿಗ್ಗುತ್ತಿದ್ದಾಳೆ. ಸತಿಯ ಕೌಶಲಕ್ಕೆ ಪತಿಯೊಬ್ಬನು ಹೆಮ್ಮೆ ಪಡುತ್ತಿದ್ದಾನೆ. ಆದರೆ ಈ ವಿಧಾನವು ಅದಲು ಬದಲಾಗಿ ಪರಿಣಮಿಸಬಹುದೋ ಏನೋ, ಈ ಮಾತುಗಳನ್ನು ಕನ್ನಡಕ್ಕೆ ಭಾಷಾಂತರಿಸಿ ನನ್ನ ಸಹೋದರಿಗೆ ತಿಳಿಸು."

ಆ ಪತ್ರವು ಬಹು ಭದ್ರವಾಗಿಡುವ ಅಮೂಲ್ಯ ವಸ್ತುವೆನಿಸಿತು. ಇದಾದ ಒಂದು ವಾರದ ಮೇಲೆ ನನ್ನ ಹಿರಿಯ ಮಗ ಶ್ರೀರಂಗನು ಹುಟ್ಟಿದನು. ಆ ಸುದ್ದಿ ತಿಳಿಯುತ್ತಲೇ, "ನಾನಾಗಲೇ ಹೇಳಲಿಲ್ಲವೇ ಆಕೆಯು ನಮಸ್ಕರಿಸಿದಾಗ ನಿನಗೆ ಪುತ್ರೋತ್ಸವವಾಗುವುದೆಂದು" ಎನ್ನುತ್ತಾ "ನನಗೆ ಬಹಳ ಸಂತೋಷವಾಯಿತೆಂದು ತಿಳಿಸು," ಎಂದರಂತೆ. ಕಸ್ತೂರಿ ಬಾ ಬಂದು ನೋಡಿಕೊಂಡು ಹೋಗುತ್ತೇನೆ ಎಂದರಂತೆ. ಬಾ ನನ್ನ ಮೇಲಿಟ್ಟ ಮಮತೆಯದೆಷ್ಟು!

ಇನ್ನೊಮ್ಮೆ ಹೊತ್ತಿಗೆ ಮುಂಚೆಯೇ ಹೋದೆವು. ಎಲ್ಲರ ಕೊಠಡಿಗಳಲ್ಲಿ ಎಲ್ಲರ ವಸ್ತುಗಳನ್ನೂ ನೋಡಿದೆವು, ಬಾ ಇದ್ದ ಕೊಠಡಿ ಬಾಗಿಲಲ್ಲೇ ಇತ್ತು. ಅಲ್ಲಿದ್ದ ವಸ್ತುಗಳೇನು! ಸಣ್ಣದೊಂದು ಹಾಸಿಗೆ, ಒಂದೆರಡು ಪಾತ್ರೆಗಳು, ಒಂದು ಬಟ್ಟೆಯ ಗಂಟು. ರಟ್ಟಿನಲ್ಲಿ ಮಾಡಿದ ಸೋಪಿನ ಪೆಟ್ಟಿಗೆ, ಅದರಲ್ಲಿ ಸಣ್ಣದೊಂದು ಮುರುಕಲು ಕನ್ನಡಿ, ಮರದ ಬಾಚಣಿಗೆ, ಕುಂಕುಮದ ಪುಡಿ ಒಂದು ಪೊಟ್ಟಣದಲ್ಲಿ, ಇವಿಷ್ಟೇ ಆಕೆಯ ವಸ್ತುಗಳು. ಅವನ್ನು ನೋಡುತ್ತಿದ್ದಾಗ ಬಾ ಬಂದರು. ಆಗಲೇ

ಪಾಕಶಾಲೆಯಿಂದ ಬಂದಿದ್ದರು. ಕೈಯ್ಯಲ್ಲಿ ಬಿಸ್ಕತ್ತುಗಳನ್ನು ತಂದಿದ್ದರು. ಅವನ್ನು ನನ್ನ ಕೈಲಿಡುತ್ತಾ 'ನಾನೇ ಮಾಡಿದ್ದೇನೆ' ಎಂದರು. ಒಂದು ಬಗೆಯ ಸಂಕೋಚವಾದರೂ 'ಯಾರು ಹೆಚ್ಚು? ಬಾಪೂಜಿಯೇ, ಈಕೆಯೇ ?' ಎಂದೆನಿಸಿತು. ಆಗ ಬಾ, ತಾವೇ ಮೇಲಕ್ಕೆ ಕರೆದುಕೊಂಡು ಹೋದರು. ತಿರುಗಿ ಬರುವಾಗ ತಾವೇ ಕೈಹಿಡಿದು ಇಳಿಸಿಕೊಂಡು ಬಂದು ಕಾರು ಹತ್ತುವವರೆಗೆ ಜೊತೆಗೆ ಬಂದರು. ಅದೆಂತಹ ದಿವ್ಯ ಪ್ರೇಮ. ಸ್ವಂತ ತಂಗಿಯಂತೆ ನನ್ನನ್ನು ಭಾವಿಸಿದರು. ಬಾಪೂಜೀ ಮಹಾತ್ಮರೆನಿಸಿದುದು ಇಂತಹ ಸತಿಯನ್ನು ಕೈ ಹಿಡಿದುದರಿಂದಲೇ ಎನ್ನಲು ಸಂದೇಹವೇನು ?

ಬಾಪೂಜೀ ಅಲ್ಲಿದ್ದಷ್ಟು ದಿನವೂ ದೇಶನಾಯಕರು ಯಾರು ಯಾರು ಅದೆಷ್ಟು ಸಲ ಮನೆಗೆ ಬಂದು ಹೋದರೆಂಬುವನ್ನು ಹೇಳಲಾರೆ. ಆಗ ತೋರಲಿಲ್ಲ, ಈಗ ತೋರುತ್ತಿದೆ–ಎಂತಹ ಅವಕಾಶ ಜೀವನಕ್ಕೆ ಒದಗಿತ್ತೆಂಬುದು.

* * * *

ಹರಿಜನ ನಿಧಿಗಾಗಿ ಬಾಪೂಜೀ ೧೯೩೪ರಲ್ಲಿ ಪುನಃ ಬೆಂಗಳೂರಿಗೆ ಬಂದಿದ್ದರು. ಬಾ ಆಗ ನಿರ್ಬಂಧದಲ್ಲಿದ್ದರು. ಬೆಂಗಳೂರು ಪುರಸಭೆಯವರು ಮಾನಪತ್ರವರ್ಪಿಸುವಾಗ ಆ ಪ್ರಸ್ತಾಪವಿತ್ತು. ಅದಕ್ಕೆ ಬದಲು ಹೇಳುವಾಗ ಕಸ್ತೂರಿ ಬಾ ವಿಚಾರ ಬಂದಾಗ ಬಾಪೂ ಗಂಟಲು ಬಿಗಿದು, ಕಣ್ಣಲ್ಲಿ ನೀರು ಬಂತು. ಈ ವಯಸ್ಸಿನಲ್ಲಿ ಇಷ್ಟು ಮಹತ್ತನ್ನು ಸಾಧಿಸಿರುವ ಮಹಾ ವಿರಾಗಿಗೆ ಇಂತಹ ಪ್ರೇಮವೇ....! ಬಾ ಆದರೂ ಎಂತಹ ಸತಿ, ಬಾಪೂ ಹಾಗೆ ವರ್ತಿಸಿದುದರಲ್ಲಿ ಅತಿಶಯವೇನಿಲ್ಲ. ಹೀಗೆ ವಿಮರ್ಶೆ ಮಾಡಲು ನಾನು ಯಾರು? ನನ್ನ ಬಾಧ್ಯತೆಯೇನಿದರಲ್ಲಿ? ಹಾಗೆ ಹೇಳುವಂತೆಯೂ ಇಲ್ಲ. ನಾನು ಅವರಿಗೆ ಹತ್ತಿರದವಳೇ ಆದೆನೆನ್ನಬೇಕು. ಒಮ್ಮೆ ನಮ್ಮವರು ಕುಮಾರ ಪಾರ್ಕಿಗೆ ಬಾಪುವನ್ನು ನೋಡಲು ಹೋದರು. ಅವರನ್ನು ನೋಡಿದ ಕೂಡಲೇ ಬಾಪೂ ಕೇಳಿದರಂತೆ: "ಏನು ನೀನೊಬ್ಬನೇ ಬಂದೆ? ನನ್ನ ತಂಗಿಯೆಲ್ಲಿ?" ಇದೇ ಪ್ರಶ್ನೆ ಅವರು ಒಬ್ಬರೇ ಹೋದಾಗಲೆಲ್ಲಾ ಕೇಳಿಯೇ ಕೇಳುತ್ತಿದ್ದರು. ನನಗಾದರೂ ಇದು ಅಭಿಮಾನದ ಸಂಗತಿಯೇ ಆಯಿತು.

ಮಾರನೆಯ ದಿನ ಬಹು ಗಲಭೆ. ಪ್ರಾರ್ಥನೆಯ ಬಯಲಿಗೆ ಬಂದ ಬಾಪೂ ವಾಪಸಾಗುವುದೇ ದುಸ್ತರವಾಯಿತು. ಅನೇಕರು ದರ್ಶನಕ್ಕೆಂದು, ಹಸ್ತಾಕ್ಷರಗಳಿಗೆಂದು ಮುತ್ತಿದ್ದರು. ಹೇಗೋ ಉಪಾಯದಿಂದ ಮಹಡಿಯ ಮೇಲಕ್ಕೆ ಅವರನ್ನು ಕರೆದುಕೊಂಡು ಹೋಗಬೇಕಾಯಿತು. ಆ ಸಮಯದಲ್ಲೂ ಮರೆಯದೆ ಅಲ್ಲಿದ್ದ ನಮ್ಮ ಕುಶಲವನ್ನು ವಿಚಾರಿಸಿಕೊಂಡು 'ಕುಳಿತು ಕೊಳ್ಳಿ' ಎಂದರು. ಹರಿಜನ ನಿಧಿಗೆ ಅನೇಕರು ಒಡವೆ ವಸ್ತುಗಳನ್ನೂ, ಹಣವನ್ನೂ ಅರ್ಪಿಸಿದರು. ನಮ್ಮೊಂದಿಗೆ ಬಂದಿದ್ದ ನಮ್ಮ ಅಕ್ಕನು ಒಂದು ಸಣ್ಣ ವಸ್ತುವನ್ನು ನನ್ನ ಮಗನ ಕೈಲಿಟ್ಟು ಬಾಪೂಜಿಗೆ ಅರ್ಪಿಸಲು ಹೇಳಿದರು. ಅದನ್ನವನು ಕೊಟ್ಟಾಗ ಮಗುವಿನ ಶಿರವನ್ನು ಸವರುತ್ತಾ: "ನೀನೂ ನಿನ್ನ ತಂದೆಯಂತೆ ಒಳ್ಳೆಯ ಭಾಷಾಂತರ

ಕಾರನಾಗುವಿರಾ ?" ಎಂದರು ನಗುತ್ತಾ. ಹೊರಡುವ ಮುಂಚೆ ಬಾಪೂ ಧ್ಯಾನಕ್ಕೆ ಕುಳಿತರು. ಅವರನ್ನು ಬೀಳ್ಕೊಡಲು ಅನೇಕರು ಕಾದಿದ್ದಾರೆ. ಸಹಸ್ರ ರೂಪಾಯಿ ಗಳನ್ನು ಸುರಿದು ಅವರ ಸಹಿಯನ್ನು ಪಡೆಯಲು ಕೆಲವರು ಸಿದ್ಧರಾಗಿದ್ದಾರೆ. ಅದನ್ನೆಲ್ಲ ಅರಿತು ಇವರೆಂತಹ ಹುಚ್ಚರು ಎಂದು ಭಾವಿಸುವಂತೆ ತೋರಿದರು ಬಾಪೂ. 'ಈ ಸಿಥಿಗೆ ಎಷ್ಟು ಕೊಟ್ಟರೂ ಸ್ವೀಕರಿಸಲು ನಾನು ಸಿದ್ಧ' ಎನ್ನುತ್ತಿದ್ದಾರೆ ಬಾಪೂ. ಕಡೆಗೆ ನಮ್ಮ ಕಡೆ ತಿರುಗಿ ನೋಡುತ್ತಾ,

"ನಿಮಗೇನು ಬೇಡವೇ ?" ಎಂದರು.

"ನಮಗಿನ್ನೇನು ಬೇಕು ?"

"ಏಕೆ, ಏನನ್ನಾದರೂ ಕೇಳಬಾರದೇ ?"

" ಏನನ್ನು ಕೊಡುವಿರಿ ?"

"ಹಾಗಾದರೆ, ಬೇಕು ಅನ್ನಿ, ಕೊಡುವೆನು."

ಅಂದು ಸ್ವಹಸ್ತದಿಂದ ನಿಧಾನವಾಗಿ ಒಪ್ಪವಾಗಿ ಬರೆದುಕೊಟ್ಟ ಶ್ಲೋಕವಿದು:

ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿಶ್ಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ ॥

* * * *

ಕಟ್ಟಕಡೆಯ ದರ್ಶನ. ಮೂರನೆಯ ಸಲ ಬಾಪೂ ಬಂದಾಗ ಎರಡು ದಿನ ಮಾತ್ರ ಇದ್ದರು. ನಮ್ಮವರು ನೋಡಲು ಹೋದರೆ ಹಿಂದಿನದೇ ಪ್ರಶ್ನೆ: "ನನ್ನ ತಂಗಿ ಎಲ್ಲಿ ? ನಾನಿನ್ನು ಬರುವ ವಿಚಾರ ಹೇಗೋ ಏನೋ, ನಾಳೆ ಕರೆದುಕೊಂಡು ಬಂದರೆ ಕಡೆಯದಾಗಿ ಸ್ವಲ್ಪ ಹೊತ್ತು ಸಂಗೀತವನ್ನು ಕೇಳಬಹುದು ?" ಅವರು ಹೀಗೆ ತಾವಾಗಿ ಅಪೇಕ್ಷಿಸಬೇಕೆ ? ಐದು ಗಂಟೆಗೆ ಸರಿಯಾಗಿ ಕರೆದುಕೊಂಡು ಬರಬೇಕೆಂದು ಹೇಳಿದರು. ನನ್ನನ್ನು ಹೊತ್ತಿಗೆ ಸರಿಯಾಗಿ ಕರೆತರುವೆನೆಂದು ಅಲ್ಲಿ ಒಪ್ಪಿಕೊಂಡ ಮಹನೀಯರು ಬರಲೇ ಇಲ್ಲ. ಬಾಪೂಜೀ ಮಹಾ ಕಾಲ ನಿಯಮ ಪಾಲಕರು. ಆ ಭಯದಿಂದ ಹೇಗೋ ಪ್ರಯತ್ನ ಮಾಡಿ ಆತುರವಾಗಿ ಹೋದು ದಾಯಿತು. ಸಾವಕಾಶವಾಯಿತು. ಬಾಪೂ ಹೇಳಿದರು: "ಹೊತ್ತು ಮಾಡಿಕೊಂಡು ಬಂದಿರಿ. ನಾನು ಸ್ನಾನಕ್ಕೆ ಹೋಗಬೇಕು."

ತಪ್ಪು ನಮ್ಮದು. ಏನು ಮಾಡುವುದು ? ಕಣ್ಣಲ್ಲಿ ನೀರು ತುಂಬುವುದಷ್ಟೇ ಉಳಿದಿತ್ತು ನನ್ನ ಸ್ಥಿತಿ. ಬಾ ಕನಿಕರದಿಂದ ನನ್ನ ಹತ್ತಿರಕ್ಕೆ ಬಂದು ಬೆನ್ನ ಮೇಲೆ ಕೈಯಾಡಿಸುತ್ತಾ, 'ತಂಗೀ, ಅವರು ಸ್ನಾನ ಮಾಡಿ ಬರಲಿ, ನಾನು ಒಪ್ಪಿಸುತ್ತೇನೆ. ನೀನು ಅಸಮಾಧಾನ ಪಡಬೇಡ, ಬಾ' ಎಂದು ಕುಶಲವಾರ್ತೆಯ ಮೂಲಕ ನನ್ನನ್ನು ಸಮಾಧಾನ ಮಾಡಲು ಪ್ರಯತ್ನಿಸಿದರು.

'ಮಕ್ಕಳು ಹೇಗಿದ್ದಾರೆ ? ಯಾರೂ ಬರಲಿಲ್ಲವೇ ?'

'ಕರೆತರಲಿಲ್ಲ.'

'ಆಗ ಹುಟ್ಟಿದ ಮಗುವಿಗೆ ಈಗ ಆರೇಳು ವರ್ಷಗಳಲ್ಲವೇ ?'

'ಹೌದು, ಈಗ ಅವನಿಗೆ ಒಬ್ಬ ತಮ್ಮನಾಗಿದ್ದಾನೆ.'

ನಾನಷ್ಟಕ್ಕೆ ಸುಮ್ಮನಾಗದೆ, "ಅವನ ಹೆಸರು ಬಾಪೂ" ಎಂದೆ. ಬಾ ಅದನ್ನು ಕೇಳಿ ಚೆನ್ನಾಗಿ ನಕ್ಕರು. ಆಮೇಲೆ ಸ್ನಾನ ಮುಗಿಸಿ ಬಾಪು ಬಂದರು. ಕೂಡಲೇ ಕಸ್ತೂರಿ ಬಾ ಹೇಳಿದರು: 'ಈ ಹೆಂಗಸು ಮಗನಿಗೆ ಬಾಪೂ ಎಂದು ಹೆಸರಿಟ್ಟಿದ್ದಾಳೆ.'

'ಠೀಕ್, ಠೀಕ್' ಎಂದು ಅವರು ನಕ್ಕರು. ನಗೆಯ ಕಡೆಯ ನೋಟವದು. ಆ ಸಮಯ ಸಾಧಿಸಿ ಬಾ: "ಕುಳಿತುಕೊಳ್ಳಿ, ನಿಮ್ಮ ಮಾತಿನಂತೆ ಬಂದು ಕಾದಿದ್ದಾರೆ. ಒಂದು ಹಾಡನ್ನು ಕೇಳಬಹುದಲ್ಲವೇ ?" ಎಂದರು. ಮರುಮಾತಿಲ್ಲದೆ ಬಾಪೂ ಕುಳಿತು ಬಿಟ್ಟರು. ಯಾವ ಸೂಚನೆಯೂ ಬೇಕೆನಿಸದೆ ವೀಣೆಯನ್ನು ತೆಗೆದುಕೊಂಡಾಯಿತು.

ಬಾಪೂ ಬಲು ಸಮಾಧಾನದಿಂದ ಕೇಳಿದರು. ಕಾಲು ಗಂಟೆಯಾಯಿತು. ಆ ವೇಳೆಗೆ ಅವರನ್ನು ಎಲ್ಲಿಗೋ ಕರೆದುಕೊಂಡು ಹೋಗಲು ಕೆಲವರು ಬಂದರು. ಅವರ ದರ್ಶನಕ್ಕೆಂದು ಲೋಕಸುಂದರಿ ರಾಮನ್ ಮತ್ತೂ ಇನ್ನೂ ಇತರರು ಕಾದಿದ್ದರು. ಮಹಾತ್ಮರು ಎದ್ದು, 'ಈಗ ಸಮಾಧಾನವಾಯಿತೋ, ಇಲ್ಲವೋ, ನಾನಿನ್ನು ಹೊರಡಬಹುದಲ್ಲವೇ ?' ಎಂದರು.

ಮನಸ್ಸಿಗಾದ ಸಂಕೋಚದಿಂದಾಗಿ ಮೌನವೊಂದೇ ಉತ್ತರವಾಯಿತು. ಬಾಗಿಲವರೆಗೆ ಬಂದು ಬಾ ನಮ್ಮನ್ನು ಕಳುಹಿಸಿದರು. ಬಾ ಇಂದು ಸತೀಲೋಕದಲ್ಲಿ ಯಾವ ಪೀಠವನ್ನು ಅಲಂಕರಿಸಿರುವರೋ ? ಅರುಂಧತಿ ಮಗ್ಗುಲಲ್ಲೇ ? ಅದಕ್ಕೂ ಮೇಲಿನ ಲೋಕದಲ್ಲೇ ?

ಇನ್ನು, ಇಂದು ಬಾಪೂಜೀಯ ಮಾತೇನು ? ಅವರಿಲ್ಲವೆಂದು ಹೇಗೆ ಹೇಳುವುದು ? ನನ್ನ ಮನಸ್ಸು ಅದನ್ನು ಒಪ್ಪದು. ಬಾಪೂ ಇಂದು ಭಾರತದ ಜೀವಜೀವದಲ್ಲಿ, ವಿಶ್ವಪ್ರೇಮದಲ್ಲಿ ಲೀನವಾಗಿದ್ದಾರೆ. ಆತನು ಅನಂತ ಕಾಲವಾಸಿ. ಕಸ್ತೂರಿ ಬಾ ಶಾಶ್ವತ ಸುಮಂಗಲಿ ಎಂತೋ, ಅಂತೆಯೇ ಬಾಪೂ ಚಿರಂಜೀವಿ. ಬಾಪೂ ಎಂಬ ಪದವೆಷ್ಟು ಹಿತವಾಗಿದೆ. ದಿನವೂ ಜ್ಯೋತಿಯನಿಟ್ಟು ಮಣಿದು ದೈವ ಪ್ರಾರ್ಥನೆ ಮಾಡುತ್ತಾ ಸ್ಮರಿಸುವಾಗ ರಾಮ, ಕೃಷ್ಣ, ಬುದ್ಧ, ಸೂರ್ಯ ಭಗವಾನರೊಂದಿಗೆ ಈ ಪ್ರಾರ್ಥನಾ ಪದವನ್ನೂ ಹಾಡುವುದು ನನಗೆ ರೂಢಿಯಾಗಿದೆ :

ಕರ್ಮವೀರನೇ ಜೀವನ್ಮುಕ್ತನೇ
ಧರ್ಮರೂಪನೇ ನಮೋ ನಮೋ
ಮರ್ಮವರಿತು ಸನ್ಮಾರ್ಗವ ತೋರಿದ

ಕರ್ಮಚಂದ್ರ ಮೋಹನದಾಸ ನಮೋ
ಅಹಿಂಸಾ ಸಹನಾ ತತ್ವಮಯ
ಮಹಾ ಸತ್ವಮಯ ಪ್ರೇಮದಯಾ
ಮಹಿಮ ಕೃತಾರ್ಥಚರಿತ ಪರಿಪೂರ್ಣ
ಮಹಾತ್ಮಾ ಜಯ ತೇ ನಮಸ್ತೆ

1948

ನೀನೇ ಸರ್ವ ಬಲ

ರಾಗ: ಮಣಿರಂಗು ರೂಪಕ ತಾಳ

ಸ್ವರ್ಣ ಗರ್ಭವತೀ ಕ್ಷಿತೀ ಕರ್ಣಾಟ ಜನವಸತೀ ||ಪಲ್ಲವಿ||
ನಿತ್ಯವಿಭವ-ನಿಜ ವಿಲಾಸ-ನಿರುಪಮ ಸೌಂದರ್ಯವತೀ
ಸತ್ಯವಿಜಯ ಕೀರ್ತಿಯ ಸುಸ್ಥಿರದ ಜಗಜ್ಯೋತೀ ||ಅನುಪಲ್ಲವಿ||

೧

ಭರತ ಸೂತ್ರನಾಡಿಸಿದ-ಪರಮ ಸಾಹಸ ಕುಶಲೀ
ಸ್ವರಾಜ್ಯ ಸ್ಥಾಪನಾ-ಸಂಭ್ರಮ ಕುತೂಹಲೀ
ಧರಣೀಶರ ದಿಗ್ವಿಜಯದ-ಕವಿಜನರಭ್ಯುದಯದ
ಚರಿತೆಯಿಲ್ಲ ನಿನ್ನ ಕೃಪಾ ಮೂಲ ನೀನೇ ಸರ್ವಬಲ||

೨

ಜ್ಞಾನ ಭಕ್ತಿ ವೈರಾಗ್ಯ-ಲೀನ ಬ್ರಹ್ಮಾನುಭವದಿ
ಮಾನಸೋನ್ನತಿಯ ಮಹಾ-ಕೈವಲ್ಯ ನಿರುಕಿಸಿದೆ
ದೀನ ದಯಾ ಸಂತೃಪ್ತಿಲಿ-ಮಾನಾಭಿಮಾನ ನಿಲಿಸಿ
ಆನಂದ ಸಾಮ್ರಾಜ್ಯದ-ಅಧಿದೇವತೆ ವಿಜಯಿಸೌ||

೩

ವಿಪ್ರ ಸಂದೇಶ ಧರ್ಮ-ವಿಹಿತ ತತ್ವ ಸಾರಪೆರಿದು
ಸಪ್ರಮಾಣ ಪ್ರಬುದ್ಧ-ಶುದ್ಧ ಸಂಸ್ಕೃತಿಯಿಸಿದು
ಸ್ವಪ್ರಯತ್ನ ಪ್ರಯೋಗ-ಸಾಧನ ಪರಿಣಾಮ ಹಿತವ
ಅಪ್ರಮಾದ ಸಿದ್ಧಿಯ-ಅನಂತಶಕ್ತಿ ಭರಿಸಿದ||

ಸ್ತ್ರೀ ವಿದ್ಯಾಭ್ಯಾಸ

ವಿದ್ಯೆಯ ಮಹಿಮೆಯನ್ನು ಕುರಿತು ಕವಿಗಳು ವೇದಾಂತಿಗಳು ಸಿದ್ಧಾಂತಿಗಳು ಮೊದಲಾಗಿ ಅಭಿಮಾನ ಶ್ರದ್ಧೆ ಗೌರವಗಳಿಂದ ಪ್ರಶಂಸೆ ಮಾಡಿದ್ದಾರೆ. ಆ ಪ್ರಶಂಸೆಗಳ ಮೂಲಗುರಿಯೆಲ್ಲ ಮನುಷ್ಯ ಮಾತ್ರರಿಗೆ ವಿದ್ಯೆ ಅಗತ್ಯ ಎಂಬ ಅಭಿಪ್ರಾಯವನ್ನು ಸಮರ್ಥಿಸುವುದೇ ಆಗಿದೆ. ಕಳ್ಳರು ಕದಿಯಲಾಗದ, ಕಣ್ಣಿಗೆ ಕಾಣದ ಗುಪ್ತ ಧನ ವಿದ್ಯೆ. ಇದು ರೂಪವನ್ನು, ಕೀರ್ತಿಯನ್ನು ಕೊಡುವ ಪರಮ ದೈವ, ಆತ್ಮ ಸಂಸ್ಕಾರವನ್ನುದ್ದೀಪಿಸುವ ಪರಮ ಗುರು. ಪ್ರತಿ ಕ್ಷಣ ನಮ್ಮ ನಡೆ ನೀತಿಗಳನ್ನು ತಿದ್ದಿ ಮನುಷ್ಯರನ್ನಾಗಿ ಮಾಡಿ ಕರ್ತವ್ಯಕ್ಕೆ ಅನುಗೊಳಿಸುವ ಈ ಭಾಗ್ಯದ ಆಶ್ರಯದಲ್ಲೇ ಮಾನವರ ಜೀವನಗಳು ಸುಮುಖವಾಗಿ, ಸುಗಮವಾಗಿ, ಸಾಗಬೇಕಾಗಿದೆ. ಮಾನವ ಮಾತ್ರರಿಗೆ ಅಗತ್ಯವೆಂದು ಹೇಳುವಾಗ ಇದರಲ್ಲಿ ಸ್ತ್ರೀ, ಪುರುಷರೆಂಬ ವರ್ಗ ವ್ಯತ್ಯಾಸಗಳಿಲ್ಲ. ಆತ್ಮ ಸಂಸ್ಕಾರ, ಆತ್ಮ ಬೋಧೆ ಹೇಗೆ ಸಹಜ ಸಿದ್ಧವೋ ಹಾಗೆಯೇ ವಿದ್ಯಾಧಿಕಾರವಾದರೂ ಸಹಜ ಸಮಾನ.

ಕೆಲವು ಶತಮಾನಗಳ ಹಿಂದೆ ಆದಾವ ನಿಮಿತ್ತವೋ ಸ್ತ್ರೀ ವಿದ್ಯಾಭ್ಯಾಸವನ್ನು ಕುರಿತು, ಭಯ ಸಂದೇಹಗಳು ಪುರುಷ ಸಮಾಜವನ್ನು ಹಿಡಿಸಿ, ಅಕ್ಷರಸ್ಥರ ಸಂಖ್ಯೆಯೇ ಇಲ್ಲದಂತೆ ಮಾಡಿತ್ತು. ಇದರಿಂದ ಪುರುಷಾಧಿಕಾರದ ಪ್ರಾಬಲ್ಯ, ಸ್ತ್ರೀ ಕುಲದ ಅಧೀನ ಜೀವನ, ಇವೇ ಕೆಲವು ಕಾಲದವರೆಗೆ ಸಮಾಜ ವ್ಯವಸ್ಥೆಯಾಗಿ ನಡೆದು ಬಂತು. ಕಾಲ ಪರಿಸ್ಥಿತಿ ಒಂದೇ ರೀತಿಯಲ್ಲ. ಒಂದೇ ನೀತಿಯೂ ಅಲ್ಲ. ಬದಲಾಗುತ್ತ ಹೋಗುವುದೇ ಅದರ ವಿಶಿಷ್ಟತೆ. ಯಾವ ಪುಣ್ಯಾತ್ಮರ ಅಭಿಮಾನದಿಂದಲೋ ಪ್ರಯತ್ನಗಳಿಂದಲೋ ಸ್ತ್ರೀಯರು ವಿದ್ಯಾಭ್ಯಾಸರಂಗವನ್ನು ಪ್ರವೇಶ ಮಾಡಿ ಸುಶಿಕ್ಷಿತರಾಗುವ ಸಮಯ ಬಂತು. ಇದು ಸ್ತ್ರೀ ಕುಲದ ಪ್ರಗತಿಗಾದ ಪರಮ ಅನುಗ್ರಹವೆಂದೇ ಹೇಳಬೇಕು.

ಯಾವ ಅಮೃತ ಘಳಿಗೆಯಲ್ಲಿ ಹೆಣ್ಣು ಮಕ್ಕಳಿಗೂ ಅಕ್ಷರಾಭ್ಯಾಸ ಆರಂಭವಾಯಿತೋ, ಅದು ಕ್ರಮವಾಗಿ ಏನೇನು ಸಾಧಿಸಲಾಯಿತೋ ಅದೆಲ್ಲ ಒಂದು ದೊಡ್ಡ

ಚರಿತ್ರೆಯೇ ಆಯಿತು. ಇಂದು ಒಂದು ನವಯುಗವು ಸೃಷ್ಟಿಯಾಗಿದ್ದರೆ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಮಾನ್ಯತೆ, ಸಮಾನಾಧಿಕಾರಕ್ಕೆ ಬಲ ಬಂದಿರುವುದಾದರೆ, ಅದಕ್ಕೆ ಮೂಲಕಾರಣ ಸ್ತ್ರೀ ಶಿಕ್ಷಣ. ಸ್ತ್ರೀ ಕುಲದ ಜಾಗೃತಿ ಅತ್ಯುನ್ನತ ಮಟ್ಟದಲ್ಲಿ ಯಶಸ್ಸನ್ನಾರ್ಜಿಸುತ್ತ ಜಗದಾಶ್ಚರ್ಯಕರವಾದ ಶಕ್ತಿ ಸಾಹಸಗಳನ್ನು ಪ್ರಕಟಿಸುತ್ತಿದೆ. ತನಗಿದ್ದ ಆತಂಕಗಳನ್ನೆಲ್ಲ ಪ್ರತಿಭಟಿಸಿ ಕಿತ್ತೊಗೆದು ಮುನ್ನುಗ್ಗುತ್ತಿದೆ. ಅವರು ಪ್ರವೇಶ ಮಾಡದ ಕ್ಷೇತ್ರವೇ ಇಲ್ಲ. ಮಾಡಲಾಗದ ಕೆಲಸವೇ ಇಲ್ಲ. ಈ ಪ್ರಗತಿಯು ಮುನ್ನಡೆ ರಾಷ್ಟ್ರದ ವಿಚಾರವಂತರ ದೀರ್ಘಾಲೋಚನೆಗೆ ಎಡೆಮಾಡುತ್ತಿದೆ. ಇಂದೇನೋ ಹೀಗೆ ಸಾಗುತ್ತಿದೆ, ಮುಂದೇನು ?–ಎಂಬ ಪ್ರಶ್ನೆ ಮುಂದೆ ನಿಲ್ಲುತ್ತದೆ. ಸ್ತ್ರೀ–ಪುರುಷ ವರ್ಗದ ಸೃಷ್ಟಿಯ ಉದ್ದೇಶ ಇಂದಿನ ಮುನ್ನಡೆ ರಭಸವಾದರೂ ಕಷ್ಟ. ಎರಡು ಪ್ರಮಾದಕ್ಕೆ ಕಾರಣವಾಗಬಹುದು. ಎರಡಕ್ಕೂ ಮಧ್ಯಸ್ಥವಾದ ಸಾಮಾನ್ಯ ನಡತೆ ಮೇಲಲ್ಲವೆ ? ಅವಿದ್ಯೆಯಿಂದ ಸ್ತ್ರೀಕುಲವು ಪಟ್ಟ ಪಾಡಿನ ಮಧ್ಯ ಕಾಲವನ್ನು ಬಿಟ್ಟು ಇನ್ನೂ ಹಿಂದಕ್ಕೆ ಹೋದರೆ ಪೂರ್ಣ ವಿದ್ಯಾವತಿಯರಾಗಿದ್ದು ಸನಾತನ ಧರ್ಮದ ಪತಾಕೆಯನ್ನೆತ್ತಿ ಹಿಡಿದ ಸಾಧ್ವೀಮಣಿಯರನ್ನು ಕಾಣುತ್ತೇವೆ. ಪೂರ್ಣ ಪ್ರಸಿದ್ಧರೂ ಆಗಿ ಸತೀತ್ವ, ಮಾತೃತ್ವ ಪದವಿಗಳನ್ನು ಸಾರ್ಥಕವಾಗಿರಿಸಿದ ಧೀರಮತಿಯರ ಸ್ಮರಣೆಯೆ ಸಾಕು. ನಾವು ಪುನೀತರಾಗುತ್ತೇವೆ. ಅಂದಿಗೂ ಜೀವನ ರಂಗದಲ್ಲಿ ಅನೇಕ ಸಮಸ್ಯೆಗಳಿದ್ದವು. ಆದರೆ ಸ್ವಶಕ್ತಿಯಿಂದ ಅವನ್ನು ನಿವಾರಿಸಿಕೊಳ್ಳುವ ದಕ್ಷತೆ ಅವರಲ್ಲಿತ್ತು. ಇಂದಾದರೋ ಹಲವು ಪರಿಹಾರವಾಗದ ಸಮಸ್ಯೆಗಳು ಏಳುತ್ತಿವೆ. ಸ್ತ್ರೀಯರಿಗೆ ಗೃಹಶಿಕ್ಷಣವೇ ಪ್ರಧಾನವಾಗಿದ್ದು ಅವರನ್ನು ಸದ್ಗೃಹಿಣಿಯರನ್ನಾಗಿ, ಸನ್ಮಾತೆಯರನ್ನಾಗಿ, ಆದರ್ಶನಾರಿಯರನ್ನಾಗಿ ಮಾಡಿದರೆ ಸಾಕು. ಅದಕ್ಕಿಂತ ಹೆಚ್ಚಾಗಿ ಅವರು ಸಾಧಿಸಬೇಕಾದ್ದೇನೂ ಇಲ್ಲ ಎಂದು ಈಗ ಯಾರೂ ಭಾವಿಸುವಂತೆಯೂ ಇಲ್ಲ. ಇಂದು ನೂತನ ಸಮಾಜ ರಚನೆಯಾಗಬೇಕಾಗಿದೆ. ಮನೆಗಿಂತ ಹೊರಗಿನ ಪ್ರಪಂಚ ಜ್ಞಾನ, ಹೊರಗಿನ ವ್ಯವಹಾರ ಇದು ಸರ್ವರಿಗೂ ಅಗತ್ಯ. ಎಲ್ಲ ಕ್ಷೇತ್ರಗಳ ಸುಧಾರಣೆಯಾಗಬೇಕು. ಎಲ್ಲಾ ಸಲಕರಣೆಯಾಗಬೇಕು. ವಿದ್ಯಾ ಸಾಮರ್ಥ್ಯ ಬಹುಮುಖವಾಗಿ ಕರ್ತವ್ಯವನ್ನು ನಿರ್ವಹಿಸಿ ಸಮಾಜವನ್ನು ಕಟ್ಟಬೇಕು. ಈ ವಾದ ಇಂದಿನ ಪರಿಸ್ಥಿತಿಗೆ ಅನುಗುಣವಾಗಿ ಒಪ್ಪತಕ್ಕದ್ದೇ ಆಗಿದೆ. ಸ್ತ್ರೀಶಿಕ್ಷಣಕ್ಕೆ ಪ್ರತ್ಯೇಕ ವಿಧಾನವಾಗಲಿ ಅಲ್ಲಿಂದ ಮುಂದಿನ ಕರ್ತವ್ಯಕ್ಕೆ ಪ್ರತ್ಯೇಕ ರಂಗವಾಗಲಿ ಅಗತ್ಯವೆಂದೆನಿಸಿಲ್ಲ.

ಇಷ್ಟೆಲ್ಲಾ ಸಾಧ್ಯವಾಗಿದ್ದರೂ ನಮ್ಮ ಸಮಾಜದ ಹೊಸ ರೂಪ ಹೇಗಿರಬೇಕು ಎಂಬ ಮುಖ್ಯ ವಿಚಾರ ಮಾತ್ರ ನಾನಾ ಸಮಸ್ಯೆಗಳನ್ನು ಮುಂದಿಡುತ್ತಾ ಬಗೆ ಬಗೆಯ ತತ್ವಗಳನ್ನು ಪ್ರತಿಪಾದಿಸುತ್ತಾ, ಯಾವ ಸಿದ್ಧಾಂತಕ್ಕೂ ಬರಲಾಗದೆ, ಯಾವ ವ್ಯವಸ್ಥೆಯನ್ನೂ ಮಾಡಲಾಗದೆ, ಬಿಡಿಸಲಾಗದ ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದು, ತೊಳಲುತ್ತಿದೆ. ಜೀವನರಂಗ ವಿಶಾಲವಾಗುತ್ತಿದೆ. ಬುದ್ಧಿಶಕ್ತಿಯೂ ಬೆಳೆಯುತ್ತಿದೆ. ವಿಚಾರ

ವಂತರು ತಮಗೆ ತೋರಿದ್ದನ್ನು ಹೇಳುತ್ತಾರೆ. ಶಕ್ತಿ ಸಾಹಸಗಳಿದ್ದವರು ತಮಗೆ ಬೇಕಾದ್ದನ್ನು ಹೇಗಾದರೂ ಸಾಧಿಸುತ್ತಾರೆ. ಸಮಾಜದ ನಿರ್ಬಂಧಕ್ಕೆ ಹೆಚ್ಚಾಗಿ ಬಾಧ್ಯರಾಗಿ ಬದುಕಬೇಕಾದ ಮಧ್ಯಮವರ್ಗದ ಜೀವನ ಸುಧಾರಣೆ ಯಾವ ಮಟ್ಟದಲ್ಲಿ ಸವರಣೆಯಾಗಿದೆ ಎಂಬ ಪ್ರಶ್ನೆ ಇಂದು ಕಠೋರವಾಗಿ ಮುಂದೆ ನಿಂತಿದೆ. ಸ್ತ್ರೀಯರು ಮೇಲು ಮಟ್ಟದಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾರೆ. ಪುರುಷರಿಗೆ ಸಮಾನವಾಗಿ ದುಡಿಯುತ್ತಿದ್ದಾರೆ. ಹಣ ಸಂಪಾದನೆ ಮಾಡುತ್ತಿದ್ದಾರೆ. ಈ ವಿಧದಲ್ಲಿ ಅಧಿಕಾರ, ಅಧೀನತೆ ಈ ಮಾತುಗಳಿಗೆ ಸ್ಥಳವೇ ಇಲ್ಲ. ವ್ಯಕ್ತಿ ಸ್ವಾತಂತ್ರ್ಯದ ಪೂರ್ಣ ಪ್ರಯೋಗಕ್ಕೆ ಅವಕಾಶಗಳು ಯಥೇಚ್ಛವಾಗಿದೆ. ಇದಕ್ಕೆಲ್ಲ ಮೂಲ ಬಲ ವಿದ್ಯಾರ್ಜನೆ, ಸ್ವಶಕ್ತಿ, ಸ್ವಯಂ ನಿರ್ಣಯ, ಸ್ವಾವಲಂಬನೆ ಇದೇ ಮುಖ್ಯ ಗುರಿಯಾಗಿರುವಂತೆ ವಿದ್ಯಾರ್ಜನೆಯ ವಿಶಿಷ್ಟ ಪ್ರಭಾವ ವ್ಯಾಪಿಸುತ್ತಿದೆ. ಈ ರಭಸ, ಈ ಧೋರಣೆ ಹೀಗೆಯೇ ಮುಂದುವರೆದರೆ ನಮ್ಮ ಭಾರತ ಧರ್ಮ ಯಾವ ಹೊಸ ಚೈತನ್ಯವನ್ನು ಹೊಂದಿ ಸುಭದ್ರವಾದ ಸಮಾಜ ಹೇಗೆ ರೂಪುಗೊಳ್ಳಬಹುದೋ, ಅದು ಭಾವನೆಗೆ ನಿಲುಕದಷ್ಟು ಅಭೇದ್ಯ ವಿಚಾರವಾಗಿದೆ.

ಈ ವಿಚಾರಗಳ ಗೊಂದಲ ಗೋಳದಲ್ಲಿ ಸಿಕ್ಕಿ ಯಾರೂ ಸುಮ್ಮನೆ ಕುಳಿತಿಲ್ಲ. ಹತ್ತೂ ಕಡೆಗಳಿಂದ ನಮ್ಮ ಧರ್ಮ, ನಮ್ಮ ಸಂಸ್ಕೃತಿ, ಜೀವನ ಪ್ರಗತಿ, ಎಂಬ ಉದ್ಧಾರದ ಮಾತುಗಳು ಕೇಳಿ ಬರುತ್ತಿವೆ. ಜಗತ್ತು ಇನ್ನೂ ಬೆಳೆಯಬೇಕು, ಇನ್ನೂ ಎಷ್ಟೋ ಸಾಧಿಸಬೇಕು, ದೇಶದ ಸಂಪತ್ತು ಹೆಚ್ಚಬೇಕು. ಇದೆಲ್ಲರ ಆಶಯ. ಇದು ಎಲ್ಲರ ಅವಿರೋಧವಾದ ಆಶಯ. ಇದಾಗಬೇಕಾದರೆ ನಮ್ಮ ಮನಸ್ಸು ಬೆಳೆಯಬೇಕು. ನಾವು ದೃಢಾಂಗರಾಗಬೇಕು. ಸೌಹಾರ್ದ ಜೀವನ ನಡೆಸಬೇಕು. ಈ ಸೌಹಾರ್ದ, ಭಾವೈಕ್ಯತೆ ಇವು ಜೀವನಗಳ ಸುಖಸರಸ್ವಾಗಿದ್ದರೆ ನಮ್ಮ ನಡೆ ಹಿಂದು ಮುಂದನ್ನು ನೋಡಿಕೊಂಡು ಸಾಗಬೇಕು. ನಮ್ಮ ಮಿತಿ ಇದೆಂಬುದನ್ನು ಮೊದಲು ಲಕ್ಷ್ಯದಲ್ಲಿಡಬೇಕು. ಮನುಷ್ಯ ಜೀವನದಲ್ಲಿ ಶೀಲಕ್ಕೆ ಅಗ್ರಪೂಜೆ ಸಲ್ಲಬೇಕಾದರೆ ರಭಸ, ಧೋರಣೆ ಇವುಗಳಿಗೆ ಸಂಯಮದ ಕಡಿವಾಣ ಹಾಕಬೇಕು.

ಕಾಲಜ್ಞಾನಿಗಳಾದ ಪುರಾತನಾರ್ಯರು ನುಡಿದ ಶಾಶ್ವತ ತತ್ವಗಳಲ್ಲಿ ವಿದ್ಯೆ ಅಂದರೆ ಆತ್ಮವಿಕಾಸದಿಂದ ಪ್ರತಿಕ್ಷಣ ವೃದ್ಧಿಯನ್ನೈದುವ ಜ್ಞಾನ ಸಂಪತ್ತು. ಜನ್ಮದ ಉದ್ಧಾರಕ್ಕೆ ಅದೇ ದಿವ್ಯ ಚೈತನ್ಯ. ಅದು ನಿರ್ಭಯ ನಿರುಪದ್ರ ಜೀವನಕ್ಕೆ ಜೀವನ್ಮುಕ್ತಿಗೆ ಪರಮಾಶ್ರಯ-ಎಂದು ತೀರ್ಮಾನಿಸಿದ್ದರು. ವಿದ್ಯೆ ಸಾಧಿಸಿದಷ್ಟು ವಿನೀತರಾಗಬೇಕು, ವಿಚಾರವಂತರಾಗಬೇಕು. ಯುಕ್ತಾಯುಕ್ತ ವಿವೇಚನೆ ಮಾಡದೆ ನುಡಿಯುವುದಾಗಲಿ, ನಡೆಯುವುದಾಗಲಿ ವಿಳಿಗೆಯ ಲಕ್ಷಣವಲ್ಲ. ವಿದ್ಯಾವಂತರಾದೆವೆಂದು ಹಿಗ್ಗಿನಿಂದ ನುಗ್ಗಲಾಗದು. ಹಿರಿಯರನ್ನು ಹೀಯಾಳಿಸಿ ಟೀಕೆ ಮಾಡುವುದು ಪ್ರತಿಭಟಿಸಿ ಅವರನ್ನು ನೋಯಿಸುವುದು ಇವೇ ವಿದ್ಯಾಭ್ಯಾಸದ ಪರಿಣಾಮವಾದರೆ ನಮ್ಮ ಹೆಣ್ಣು ಮಕ್ಕಳಿಗೆ ಗೃಹ ಶಿಕ್ಷಣವೇ ಸಾಕು. ಅಕ್ಷರ ಶಿಕ್ಷಣವಿಲ್ಲದೆ ನಮ್ಮ

ಪೂಜ್ಯ ಅಜ್ಜಿ ಮುತ್ತಜ್ಜಿಯರು ಗೃಹಾಂಗಣರಾಗಿ ದೃಢಾತ್ಮರಾಗಿ ಮಕ್ಕಳನ್ನು ಪಡೆದು ಜೀವನಾನುಭವದಿಂದ ಸುತ್ತಮುತ್ತಲಿನವರಿಗೆ ತೋರುತ್ತಿದ್ದ ಸಹಾನುಭೂತಿ ಬೋಧೋಪದೇಶಗಳು ವಿದ್ಯೆಯ ಮಹತ್ವದಿಂದ ವಂಚಿತವಾಗಿತ್ತೆಂದು ಹೇಳಬಲ್ಲೆವೇ? ಅವರ ಆದರ್ಶವನ್ನು ಅಲ್ಲಗಳೆದು ಗುರಿ ಇಲ್ಲದೆ ನುಗ್ಗುತ್ತ ತರುಣವರ್ಗ ಯಾವ ಭವಿಷ್ಯವನ್ನು ರೂಪಿಸಿಕೊಂಡಿದೆ? ನಿತ್ಯ ಜೀವನದಲ್ಲಿ ಯಾವ ತೃಪ್ತಿಯನ್ನು ಕಾಣುತ್ತಿದೆ?

"ಕರ್ತವ್ಯ" ಎಂಬ ಪದದ ಮುಂದೆ "ಜಾಗೃತಿ" ಎಂಬ ಪದವನ್ನು ಜೋಡಿಸಿಕೊಂಡು ಮುನ್ನಡೆದರೆ ವಿದ್ಯೆ ತನ್ನ ಪ್ರಭಾವವನ್ನು ಸತ್ಪರಿಣಾಮವಾಗಿರಿಸಿದೆ ಎಂದು ಹೇಳಲು ಆಸ್ಪದವಾದೀತು. ವಿದ್ಯೆ ಆತ್ಮ ವಿಕಾಸಕ್ಕೆ, ಪರೋಪಕಾರಕ್ಕೆ, ಸತ್ಕೀರ್ತಿಗೆ ಕಾರಣವಾಗಬೇಕಾದರೆ ಹೆಣ್ತನಕ್ಕೆ ಶೋಭಾಯಮಾನವಾದ ವಿನಯ, ವಿಧೇಯತೆ, ಔದಾರ್ಯ, ತ್ಯಾಗ, ಕ್ಷಮಾಶೀಲ ವರ್ತನೆ, ಬಾಲ್ಯದಿಂದ ಅಭ್ಯಾಸಕ್ಕೆ ಬರಬೇಕು. ಇದೇ ಆರ್ಯ ವಿದ್ಯೆ, ಸನಾತನಾದರ್ಶ ವಿದ್ಯೆ, ಆತ್ಮವಿದ್ಯೆ. ಇದನ್ನು ಆದಷ್ಟು ಹೊಂದಲು ಪ್ರಯತ್ನ ಮಾಡದಿದ್ದರೆ ನಾವು ಯಾವ ಧರ್ಮವನ್ನೂ ನಿಲ್ಲಿಸಲಾರೆವು. ಯಾವ ಸಮಾಜವನ್ನೂ ಕಟ್ಟಲಾರೆವು. ವಿದ್ಯೆ ಕರ್ತವ್ಯ ಪ್ರೇರಣೆಗೆ, ಕರ್ತವ್ಯ ಲೋಕ ಶಿಕ್ಷಣೆಗೆ ಎಂಬ ಧ್ಯೇಯ ನಮ್ಮ ನಿತ್ಯ ಗೇಯವಾಗಿದ್ದರೆ ಸ್ತ್ರೀಯರು ಪುರುಷರಿಗೆ ಸಮಾನವಾಗಿ ಅವರಿಗಿಂತ ಅಧಿಕವಾಗಿ ವಿದ್ಯಾಸಾಮರ್ಥ್ಯವನ್ನು ಪಡೆದರೂ ಅದು ಸಹಜ ರೀತಿಯಲ್ಲಿ ಸಾರ್ಥಕವಾಗುತ್ತದೆ. ಯಾವ ಪ್ರಮಾಣದಲ್ಲಿ ಇವರ ವಿದ್ಯಾಭ್ಯಾಸ ನಡೆಯಬೇಕು ಎಂಬ ವಿಚಾರ ವಿಮರ್ಶೆಗಳು ಹುಟ್ಟುವುದಕ್ಕೇ ಆಗ ಆಸ್ಪದವಿರುವುದಿಲ್ಲ. ಸ್ತ್ರೀ ತನ್ನ ಮಹಿಮೆಯಿಂದ ಆದಿಶಕ್ತಿಯಂತೆ, ವಾಗ್ದೇವಿಯಂತೆ, ಭಾಗ್ಯದೇವಿಯಂತೆ, ಭೂಮಾತೆಯಂತೆ ತನ್ನ ಘನತೆಯನ್ನು ಕಾಪಾಡಿಕೊಳ್ಳಬೇಕು. ಲೋಕಾಮರ್ಯಾದೆಯೂ ಅದೇ ಭಾವದಲ್ಲಿ ಆಕೆಗೆ ಲಭಿಸಬೇಕು. ★

—1971

ಸಂಗೀತ-ಸಾಹಿತ್ಯಗಳ ಅನ್ಯೋನ್ಯತೆ

ದೈವೀಸಂಪತ್ತಿನಿಂದ ಕೂಡಿದ ಈ ಶಾಸ್ತ್ರಗಳೆರಡೂ ಭಗವತೀ ಸರಸ್ವತಿಯ ನೇತ್ರಗಳಂತೆ. ಅವುಗಳ ಕರ್ತವ್ಯ ಬೇರೆಬೇರೆಯಲ್ಲ. ಇದು ಬಲ, ಇದು ಎಡ, ಈ ಶಕ್ತಿ ಹಿರಿದು, ಇದರ ಶಕ್ತಿ ಕಿರಿದು, ಎಂದು ಅವುಗಳ ಶಕ್ತಿಯನ್ನಳೆಯಲು ಸಾಧ್ಯವೇ? ಇಲ್ಲಿ ಶಕ್ತಿಗಳ ಸಮ್ಮಿಳಿತವಾಗಿ ವಿಶ್ವವಿಲೋಕನವಾಗುತ್ತಿದೆ. ಆ ವಿಲೋಕನದ ಉದ್ದೇಶವಾದರೋ ಪರವಸ್ತುವನ್ನು ಕಂಡುಹಿಡಿಯುವುದು, ಲೋಕ ಹಿತವನ್ನು ಬಯಸುವುದು, ಆ ಮೂಲಕ ಆತ್ಮೋದ್ಧಾರವನ್ನು ಮಾಡಿಕೊಳ್ಳುವುದು, ಇದೇ ಆ ದೃಷ್ಟಿಪ್ರಸಾರದಲ್ಲಡಗಿರುವ ತತ್ವ. ಈ ಗುರಿಯನ್ನು ಸಮತ್ವಯೋಗ ವೆಂದರೂ ಒಪ್ಪುತ್ತದೆ. ಈ ಶಾಸ್ತ್ರಗಳ ಸ್ವಭಾವಗಳನ್ನು ಚೆನ್ನಾಗಿ ಗ್ರಹಿಸಿದ ಅನುಭವಿಗಳು ಸಂಗೀತವನ್ನು ಅಪಾರ ಮಧುರನೆಂದರು. ಸಾಹಿತ್ಯವನ್ನು ಆಲೋ ಚನಾಮೃತವೆಂದರು. ಒಂದು ಆನಂದ ಸಾಮ್ರಾಜ್ಯ; ಇನ್ನೊಂದು ಜ್ಞಾನ ಸಾಮ್ರಾಜ್ಯ. ಎರಡರಲ್ಲೂ ತಮ್ಮದೇ ವಿಶಿಷ್ಟವಾದ ಲಯ ಭಾಗ್ಯ ಉಂಟು. ಒಂದು ನಾದ ತನ್ಮಯ, ಮತ್ತೊಂದು ಅಕ್ಷರ ತನ್ಮಯ. ಈ ತನ್ಮಯತೆಯಲ್ಲಿ ಪರಸ್ಪರವಾಗಿ ಆ ಶಕ್ತಿಗಳು ವಿನಿಮಯ ವಿಧಾನದಲ್ಲಿ ಪೂರಕಗಳು. ಇದನ್ನು ಸಹಾನುಭೂತಿ, ಮೈತ್ರಿ, ಅನ್ಯೋನ್ಯ ಎಂದು ಹೇಗೆ ಹೇಳಿದರೂ ಪರಿಣಾಮ ಒಂದೇ. ಇವುಗಳ ಬಾಂಧವ್ಯ ಅಷ್ಟು ನಿಕಟವಾಗಿದೆ. ಒಂದನ್ನುಳಿದು ಮತ್ತೊಂದು ಬದುಕಲಾರ ದೇನೋ ಅನ್ನುವ ಮಟ್ಟಿಗೆ ಅವುಗಳ ಅನ್ಯೋನ್ಯತೆ ಬೆಳೆದುಬಂದಿದೆ. ಈ ಅನ್ಯೋನ್ಯತೆ ಸತಿಪತಿಗಳ ಸಂಬಂಧದಂತೆ. ಆ ಹೋಲಿಕೆಯೇ ಸರಿ ಅನ್ನುವಂತೆ ಜನಪದಕ್ಕೆ ಉತ್ಸಾಹ ಚೈತನ್ಯಗಳನ್ನು ತುಂಬುತ್ತಾ ಈ ಶಾಸ್ತ್ರಗಳು ವರ್ಧಿಸುತ್ತಿವೆ. ದಾಂಪತ್ಯ ದಲ್ಲಿನ ಅಪೂರ್ವ ಪೂರ್ಣತಾಸಿದ್ಧಿಯನ್ನು ಈ ಶಾಸ್ತ್ರಗಳ ಹೊಂದಿಕೆಯಿಂದ ನಾವು ಗ್ರಹಿಸಬೇಕು.

ನಾದಭಾಗ್ಯವೊಂದನ್ನೇ ಹಿಡಿದು ಸಂಗೀತವು ತನ್ನ ಉದ್ದೇಶವನ್ನು ಪೂರ್ಣ ಮಾಡಿಕೊಳ್ಳಲು ಆಗುವುದಿಲ್ಲ. ಆನಂದವಲ್ಲಿ ಕೇವಲ ಮುಗ್ಧತೆಯೇ ನೈಜವಾದರೆ

ಪೂರ್ಣ ತೇಜಸ್ಸಾಗಲಿ, ವಿಕಾಸವಾಗಲಿ ಅಲ್ಲಿ ಕಾಣುವುದಿಲ್ಲ. ಸ್ವಯಂಪೂರ್ಣತೆಗೆ ಅವಕಾಶವೆಂದರೆ ರಾಗ, ಸ್ವರಗಳನ್ನು, ವಿಸ್ತರಿಸುವುದರಲ್ಲಿ ಮಾತ್ರ. ರಾಗಾಲಾಪನೆಗೆ ಒಂದು ಮೇರೆ ಇದೆ. ಸ್ವರ ಕಲ್ಪನೆಗೂ ಒಂದು ಗೆರೆ ಇದೆ. ಇಲ್ಲಿ ತೋರುವುದು ಒಂದು ರೀತಿಯ ಅಸಹಾಯಶೂರತ್ವ. ಒಂದು ವಿಜೃಂಭಣೆ. ಅಷ್ಟರಲ್ಲೇ ಮುಗಿಯಿತೇ? ಪೂರ್ಣವೈಭವವಾಗಲಿ, ವಿಜಯವಾಗಲಿ, ಅಷ್ಟರಿಂದಲೇ ಸಂಗೀತಕ್ಕೆ ದೊರೆಯಿತೇ? ಮುಂದೆ ಸಾಗಬೇಕಾದರೆ, ಪೂರ್ಣ ಯಶಸ್ವಿಯಾಗಬೇಕಾದರೆ, ಸಾಹಿತ್ಯವನ್ನಾಶ್ರಯಿಸದೆ ಗತ್ಯಂತರವಿಲ್ಲ. ಅರ್ಥವಿಲ್ಲದ "ತದರಿನತೋಂ" ಅಕ್ಷರಾಭ್ಯಾಸದ ಅವಾಂತರವನ್ನು ಎಷ್ಟು ಹೊತ್ತು ಸಹಿಸಲಾದೀತು? ಎಂತಹ ಪ್ರತಿಭಾ ಸಂಪನ್ನರಾದರೂ ಆ ವಿಧವಾಗಿಯೇ ಜನಸಾಮಾನ್ಯರನ್ನೊಲಿಸಲು ಸಾಧ್ಯವಿಲ್ಲ. ಸಂಗೀತ ಸರ್ವಜನಾದರಣೀಯವಾದ ಕಲೆ ಮಾತ್ರವಲ್ಲ, ಸರ್ವ ಜೀವಲೋಕಕ್ಕೇ ಬೇಕಾದ ಕಲೆ. ಅದಕ್ಕೆ ಒಂದು ಪರಿಮಿತಿಯನ್ನು ವಿಧಿಸಲಾಗದು. ಅದರ ಪ್ರಗತಿಗೆ ಪಥಗಳನೇಕ.

ಹಾವಭಾವ ವಿಲಾಸಗಳಿಂದ ಮುಂದೆ ಸಾಗುವಾಗ, ಸಾಹಿತ್ಯದ ಸಹಚರ್ಯೆಯಲ್ಲಿ ಕ್ರಮವಿಡಿದು ಸಂಗೀತವು ತನ್ನ ಉದ್ದೇಶವನ್ನು ಪೂರೈಸಿಕೊಳ್ಳಬೇಕು. ಎರಡು ಶಾಸ್ತ್ರಗಳಲ್ಲಿಯೂ ಪಾರಂಗತರಾದ ಮಹಾನುಭಾವರನೇಕರು ಅವುಗಳ ಅನ್ಯೋನ್ಯತೆಗೆ ಅನುಕೂಲವಾದ, ಸಮಾನತೆಗೆ ತಕ್ಕುದಾದ, ಸಮಯ ಶೀಲವನ್ನು ಸಾರುವಂತಹ, ಉತ್ತಮ ರಚನೆಗಳನ್ನು ಯಥೇಚ್ಛವಾಗಿ ಒದಗಿಸಿದ್ದಾರೆ. ಅವುಗಳನ್ನು ಉಪಯೋಗಿಸುವಾಗ ಕೆಲವು ಮುಖ್ಯಾಂಶಗಳನ್ನು ಸಾಧಕರು ಲಕ್ಷ್ಯದಲ್ಲಿರಿಸುವುದು ಅಗತ್ಯ. ಎಲ್ಲಿಯೂ ಔಚಿತ್ಯವನ್ನು ಮೀರಬಾರದು. ಎರಡು ಶಾಸ್ತ್ರಗಳ ಮರ್ಯಾದೆಯ ಮೇಲೂ ಲಕ್ಷ್ಯವಿಟ್ಟು ಜಾಗರೂಕತೆಯಿಂದ ತನ್ನ ಪ್ರಯೋಗದ ನೈಪುಣ್ಯತೆಯನ್ನು ತೋರಬೇಕು. ಆ ನೈಪುಣ್ಯತೆಯಲ್ಲಿ ಸಾಮಾನ್ಯ ವಸ್ತುವೂ ಮೇಲು ಮಟ್ಟಕ್ಕೆ ಬಂದೀತು. ಅಲಕ್ಷ್ಯ ಭಾವವಾಗಲಿ, ಅಜಾಗರೂಕತೆಯಾಗಲಿ, ಆವರಿಸಿದರೆ ಅತ್ಯುತ್ತಮ ವಸ್ತುವೂ ಕೆಳಮಟ್ಟಕ್ಕೆ ಇಳಿದೀತು. ಪಾಂಡಿತ್ಯದ ರಭಸದಲ್ಲಿ ಅರ್ಥಪ್ರಮಾದಗಳೆಷ್ಟೋ ಆಗಬಹುದು. ಆ ಪ್ರಮಾಣದಲ್ಲಿ ಭಾವಶೂನ್ಯವಾಗಬಹುದು. ಎರಡೂ ಹೀಗಾದ ಮೇಲೆ ಇನ್ನು ರಸದ ಮಾತು ನೀರಸ. ಒಂದೆರಡು ಉದಾಹರಣೆಗಳಿಂದ ಇದು ಸ್ಪಷ್ಟವಾಗುವುದಾದರೆ ಈ ಲೇಖನದ ಉದ್ದೇಶ ನೆರವೇರಿದಂತೆ.

ರಾಗಭಾವ ಸ್ವರಕಲ್ಪನೆಗಳ ವಿನ್ಯಾಸಕ್ಕೆ ವಿರಾಮಸ್ಥಾನಗಳನ್ನು ವಾಗ್ಗೇಯಕಾರರು ಅನುಕೂಲ ಸಂದರ್ಭಗಳಲ್ಲಿ ಇಟ್ಟಿದ್ದಾರೆ. ಅವನ್ನು ಗುರುತಿಸದೆ ಅವರವರ ಇಷ್ಟಾನುಸಾರ ವಿನ್ಯಾಸಕ್ಕೆ ಸಾಧಕರು ತೊಡಗುವುದುಂಟು. "ಸಾಕೇತಸದನಾ! ಜಾರ ಚೋರ ಭಜನ ಜೇಸಿತಿನಾ" ಎಂದು ಪ್ರಶ್ನೆ ಮಾಡುತ್ತಿರುವ ಸಾಹಿತ್ಯವನ್ನು ತೆಗೆದುಕೊಂಡು ಸ್ವರಾವರ್ತಗಳನ್ನು ಹಾಕುತ್ತಾ "ಜಾರ ಚೋರ" ಎಂದು ನಿಂತು

ಮಾತಿಗೂ ಉಚ್ಚರಿಸುತ್ತಿದ್ದರೆ ಆ ಸ್ವಾಮಿ ಮಾಮನೋರಮಣನಿಗೆ ಪ್ರೀತಿ ಯಾಯಿತೇ! ಅದಕ್ಕೇ ಮಾರುನುಡಿಯುವುದಿಲ್ಲವೋ ಏನೋ.

ಇದು ನೋಡಿ—

"ದಾಂತಲು ವರಕಾಂತಲು ಜಗಮಂತ ನಿಂಡಿಯುಂಡಗ ಎಂತನಿನೇ ವರ್ಣಿಂತುನು ಶಬರೀ ಭಾಗ್ಯ."

ವರಕಾಂತಲು ಎನ್ನುವಾಗ ತಾಳದ ಪ್ರತಿಷ್ಠೆಗಾಗಿ ವಕಾರವನ್ನು ದೀರ್ಘ ಮಾಡಿ, ಏನೋ ಸಾಧಿಸಿದಂತೆ ಸಮಾಧಾನಪಟ್ಟುಕೊಂಡರೆ ಅಲ್ಲಿ ಆದದ್ದೇನು, "ವರಕಾಂತಲು ಜಗಮಂತ." ಇದಕ್ಕಿಂತ ಅನರ್ಥವಿನ್ನೇನು ಬೇಕು? ಸಾಹಿತ್ಯಕ್ಕೆ ಸಂದ ಈ ಸಂಭಾವನೆಯಲ್ಲಿ ಸಂಗೀತಕ್ಕೂ ಒಳ್ಳೆಯ ಮರ್ಯಾದೆ ಬಂದಂತಾಯಿತು. ಅಶುದ್ಧ ಪ್ರಯೋಗಗಳಿಗಂತೂ ಲೆಕ್ಕವೇ ಇಲ್ಲ.

"ಮನವಾಲಗಿಂಚರಾದಟೇ" ಬದಲು,

"ಮನವ್ಯಾಳ" ಪ್ರಯೋಗವೇ ಎಲ್ಲೆಲ್ಲೂ ಕೇಳಿಬರುತ್ತಿದೆ. ಈ ವ್ಯಾಳ ಎಲ್ಲಿಂದ ಬಂತು? (ವ್ಯಾಳ ಎಂದರೆ ಸರ್ಪ)—

ಶಂಕರಾಭರಣ ರಾಗದ 'ಮರಿಯಾದ ಗಾದುರ' ಕೃತಿ—ಹಿಂದಿನ ಕಾಲಕ್ಕೆ ಅದನ್ನು ಹಾಡದವರೇ ಇಲ್ಲ. ಆ ಪ್ರಯೋಗಗಳನ್ನು ಕುರಿತು ತಿಳಿದವರಲ್ಲಿ ಎಷ್ಟೋ ಚರ್ಚೆಗಳೂ ನಡೆದುವು. ಮರಿಯಾ--ಅಲ್ಲಿಗೊಂದು ವಿರಾಮ, ದಗಾ–ಒಂದು ಆದುರ–ವಿರಾಮ, ಪೂರ್ಣವಿರಾಮ. ಇದು ಏನು ದಗೆ? ಬೇಸಿಗೆಯ ದಗೆಯೇ, ಇಲ್ಲ ಸಂಗೀತ ಸಾಹಿತ್ಯಗಳೆರಡಕ್ಕೂ ದಗೆಯೇ? ಇಲ್ಲಿ ಮರ್ಯಾದೆಗೇ ದಗಾ! ಅರ್ಥಾಭಾಸದ ಇಂಥ ಪ್ರಕರಣಗಳೆಷ್ಟೋ!

ಕಾನಡಾರಾಗದ ಶ್ರೀ ನಾರದ ಕೃತಿ—

"ಶ್ರೀ ನಾರದನಾ–ದಸರಾ–ಸೀರುಹ ಭೃಂಗ" ಹೀಗೆ ಹಾಡುವುದೇ ಸಾಮಾನ್ಯ ವಾಡಿಕೆ.

"ಶ್ರೀ ನಾರದ ನಾದ ಸರಸೀರುಹ ಭೃಂಗ" ಎಂಬ ಉತ್ತಮ ಸಂಬೋಧನೆ ಯಲ್ಲಿ ದಸರಾ ಹೇಗೆ ಸೇರಿಕೊಂಡಿತೋ! ಮೈಸೂರು ದಸರಾ ಮಹೋತ್ಸವಕ್ಕೆ ಪ್ರಸಿದ್ಧಿ: ಆ ಧ್ವನಿ ಇಲ್ಲಿ ಹೀಗೆ ಪ್ರತಿಬಿಂಬಿಸಿತೋ ಹೇಗೆಯೋ? ಇಷ್ಟು ಸಾಕು.

ಸಂಗೀತ ಸಾಹಿತ್ಯಗಳ ಅನ್ಯೋನ್ಯತೆಗೆ ಭಂಗ ಬರುವಂತಹ ಸಮಯಗಳು ಕೆಲವಿರಬಹುದು. ನಿಪುಣರು ಹಾಗಾಗದಂತೆ ಸವರಣೆಮಾಡಿ ದೋಷಗಳು ಕಾಣದಂತೆ ಜಾಗರೂಕತೆಯನ್ನು ವಹಿಸುತ್ತಾರೆ. ಇದು ಪರಸ್ಪರ ಮರ್ಯಾದೆಯನ್ನುಳಿಸುವ ಮಾರ್ಗ. ಇಂತಹ ಸವರಣೆಯೊಂದು ಚತುರೋಪಾಯ.

ಸಾಹಿತ್ಯದ ಪ್ರತಿಷ್ಠೆಯಲ್ಲಿ ಸಂಗೀತವು ಅದಕ್ಕೆ ಅಧೀನವಾಗಿರಬೇಕಾಗುತ್ತದೆ. ಅದರ ಪ್ರಭಾವ ಸಂಕುಚಿತವಾಗಬೇಕಾಗುತ್ತವೆ ಎಂದು ವಾದಿಸುವವರುಂಟು. ಇದೊಂದು ಭ್ರಮೆ. ಸತಿಪತಿಗಳ ಬಾಂಧವ್ಯದಲ್ಲಿ ಸ್ವೇಚ್ಛಾವಿಹಾರಕ್ಕೆ ಅಭ್ಯಂತರ

ಗಳೂ ಉಂಟು. ಹಾಗೆಂದೇ ಈ ಶಕ್ತಿಗಳು ಪರಸ್ಪರವಾಗಿ ಸಹಾನುಭೂತಿಯಿಂದ ಕೆಲವೆಡೆ ತಮ್ಮ ಶಕ್ತಿಯನ್ನು ಮಿತಗೊಳಿಸಬೇಕಾಗುತ್ತದೆ. ಸಂಯಮದಿಂದ ನಡೆದುಕೊಳ್ಳಬೇಕಾಗುತ್ತದೆ. ಅದು ಅವುಗಳ ನೈಜ ಕರ್ತವ್ಯವೆಂದೂ, ಧರ್ಮವೆಂದೂ ಏಕೆ ಭಾವಿಸಬಾರದು? ಸಾಹಿತ್ಯದ ಒಂದು ಅಕ್ಷರಕ್ಕೆ ಸಂಗೀತದ ಹತ್ತು ಸ್ವರಗಳ ಅಗತ್ಯವೇನು? "ಅಲ್ಲಿಯೇ ನಿಲ್ಲು, ಮುಂದಕ್ಕೆ ಬರಬೇಡ" ಎಂದು ಸಾಹಿತ್ಯವು ಆಜ್ಞೆ ಮಾಡಿದರೆ ವಿಧೇಯವಾಗಿ ಸಂಗೀತವು ಅದಕ್ಕೆ ಮಣಿಯಲೇಬೇಕು. ಪ್ರತಿಕೂಲವಾಗಿ ಅತಿಕ್ರಮಿಸಬಾರದು.

ಅರ್ಥಗಾಂಭೀರ್ಯದಿಂದ, ಭಾವಬಂಧುರತೆಯಿಂದ ಕೂಡಿದ ಸಾಹಿತ್ಯದ ಬೋಧಾತ್ಮಕ ರಚನೆಯೊಂದು ಸಂಗೀತದ ಸಹಾಯವನ್ನಪೇಕ್ಷಿಸಿದರೆ, ಅನುಗುಣವಾದ ಇಂಗಿತಗಳಿಂದ ಅನುಸರಣೆಯಲ್ಲಿ ಸಂಗೀತವಾದರೂ ರಂಜಿಸುತ್ತದೆ. ಸಾಹಿತ್ಯ ರಚನೆಯ ಚೌಕಟ್ಟನ್ನು ಹಾದು ಮುಂದೆ ಹೋಗಬೇಕಾದ ಅಗತ್ಯವೇನೂ ಇಲ್ಲ. ಹಾಗೆ ಮಾಡಿದರೆ ಅದು ಬರಿಯ ಘೋರಣೆಯಾದೀತು. ಪ್ರಸಂಗವಾದೀತು. ನಿಯಮೋಲ್ಲಂಘನೆಗಿಂತ ನಿಯಮಾನುಸರಣೆಯೇ ಶ್ರೇಯವಲ್ಲವೇ?

ಕಾವ್ಯವಾಚನ ಮಾಡುವಾಗ, ಶ್ಲೋಕಗಳನ್ನು ಹಾಡುವಾಗ, ಸಾಹಿತ್ಯದ ಮರ್ಯಾದೆಯನ್ನು ಪೂರ್ಣಲಕ್ಷ್ಯದಲ್ಲಿಡಬೇಕು. ಸಂಗೀತದ ಅತಿ ವಿಸ್ತಾರಕ್ಕೆ ಅಲ್ಲಿ ಅವಕಾಶ ಸಲ್ಲದು. ಹಾಗೆ ವಿಸ್ತರಿಸುತ್ತಾ, ಹೋದರೆ ಸಾಹಿತ್ಯದ ಭಾವಗಳು ಅಲ್ಲಲ್ಲಿಗೇ ಕಡಿದು ಹಾಕಿದಂತಾಗುತ್ತದೆ. ಈ ಭಾಗದಲ್ಲಿ ನಿಯಮಪಾಲನೆ ಅಗತ್ಯ.

ಸಾರಾಂಶವಿಷ್ಟೇ. ಸಂಗೀತ ಸಾಹಿತ್ಯಗಳ ಅನ್ಯೋನ್ಯತೆ ಸಮಯಶೀಲಕ್ಕೆ ಬದ್ಧವಾಗಿರುವುದು, ಅವು ಪರಸ್ಪರವಾಗಿ ಒಗ್ಗಿಕೊಳ್ಳಬೇಕು. ಪ್ರತ್ಯೇಕವಾಗಿ ತಮ್ಮ ತಮ್ಮ ಪ್ರಾಶಸ್ತ್ಯವನ್ನುಳಿಸಿಕೊಳ್ಳಲು ಎರಡು ಶಾಸ್ತ್ರಗಳಿಗೂ ಸಾಕಷ್ಟು ಅವಕಾಶಗಳಿದ್ದೇ ಇವೆ. ಸಂಗೀತದ ಪ್ರಾಶಸ್ತ್ಯವೇ ಮುಂದಾದಾಗ ಸಾಹಿತ್ಯವು ಹತ್ತು ಮಾತುಗಳಲ್ಲಿ ಹೇಳುವುದನ್ನು ನಾಲ್ಕು ಮಾತುಗಳಲ್ಲೇ ಮುಗಿಸಿದರಾಯಿತು. ಸಾಹಿತ್ಯದ ಪ್ರಾಶಸ್ತ್ಯವೇ ಮುಂದಾದಾಗ ಸಂಗೀತವು ಆ ಅಕ್ಷರಗಳೊಳಗೇ ತನ್ನ ಸ್ವರೂಪವನ್ನು ಅಡಗಿಸಿಕೊಂಡರೆ ಸಾಕಾಯಿತು. ಅಲ್ಲಿ ಪರಸ್ಪರ ಭಾವಗಳು ಪೂರ್ಣವಾಗುತ್ತವೆ. ಅರ್ಥವು ಪುಷ್ಟಿಗೊಳ್ಳುತ್ತದೆ. ಗಂಗಾ, ಯಮುನಾ ತರಂಗ ಧ್ವನಿಗಳ ಸಂಗಮವಾಗುತ್ತದೆ. ಇದೆಲ್ಲ ಆಗುವುದು ನಿಪುಣರ ಪ್ರಯೋಗ ಕೌಶಲದಲ್ಲಿದೆ. ಆ ಸಿದ್ಧಿಯಲ್ಲಿದೆ. ಉಭಯ ಶಕ್ತಿಗಳ ಕ್ಷೇಮಕ್ಕೆ ಅದು ಬಾಧ್ಯವಾಗಿರುತ್ತದೆ. ★

—1967

ಶ್ರೀರಾಮನ ಪತ್ನೀಪ್ರೇಮ

ಶ್ರೀರಾಮಚಂದ್ರನು 'ಸಮಸ್ತ ಕಲ್ಯಾಣ ಗುಣಾಭಿರಾಮ'ನೆಂಬ ಹೆಸರಾಂತವನು. ಮಾತಾಪಿತೃಗಳ ಭಕ್ತಿ, ಗುರುಭಕ್ತಿ, ಭ್ರಾತೃ ಪ್ರೇಮ, ಪ್ರಜಾನುರಾಗ, ಧರ್ಮಶ್ರದ್ಧೆ, ಸತ್ಯ ಪರಾಕ್ರಮ, ಉದಾರ ಶೀಲತೆ, ಕರ್ತವ್ಯನಿಷ್ಠೆ ಮುಂತಾಗಿ ಉನ್ನತ ಗುಣಗಳಿಗೆ ಆದರ್ಶನೆಂದರೆ ಶ್ರೀರಾಮನೇ. ಸ್ವಭಾವತಃ ಧೀರನೂ, ಶಾಂತನೂ, ಮಿತಭಾಷಿಯೂ ಆಗಿ ಲೋಕಾಭಿರಾಮನೆನಿಸಿದ್ದ ರಾಮನ ಗುಣಗಳು ಲೋಕಾದರಣೀಯವಾಗಿದ್ದಂತೆ ಆತನ ಕೃತಿಯೂ ಲೋಕಮೋಹಕವಾಗಿ ಆಕರ್ಷಣೀಯವಾದುದು. ಈತನ ಚರಿತ ವಾದ ರಾಮಾಯಣ ಮಹಾಕಾವ್ಯವನ್ನು 'ಸೀತಾಯಾಶ್ಚರಿತಂ ಮಹತ್' ಎಂದು ಕರೆದಿರುವರು. ರೂಪ, ಗುಣ, ಶೀಲಗಳಿಂದ ಈ ನಾಯಕ ನಾಯಕಿಯರು ಒಬ್ಬರ ನ್ನೊಬ್ಬರು ಮೀರಿಸಿದ್ದಾರೆ. ಇವರ ಪರಸ್ಪರಾನುರಾಗವು ಹೇಗೆ ಅಂಕುರವಾಗಿ ಬೆಳೆದು ಪಕ್ವವಾಯಿತು. ಹೇಗೆ ಪರಿಣಾಮ ಹೊಂದಿತು ಎಂಬುದು ಎಷ್ಟು ಸ್ಪಷ್ಟವಾಗಿ, ಸುಲಭವಾಗಿ ಕಾಣಬರುವುದೋ ಅಷ್ಟೇ ಅಭೇದ್ಯವೂ, ಗಹನವೂ ಆಗಿದೆ.

ಲೋಕಮಾತೆಯಾದ ಜನಕನಂದಿನಿಯ ಪತಿಪ್ರೇಮ ಪೂರ್ಣ ಮಹಿಮಾ ಯುತವಾದುದು. ಆಕೆಯ ಸತೀತ್ವವನ್ನು ಕುರಿತು ಪ್ರಶ್ನಿಸುವ ಧೈರ್ಯವನ್ನು ರಾಮನ ವಿನಾ ಮತ್ತಾರೂ ಮಾಡಲಿಲ್ಲ. ಸೀತೆಗೆ ಜೀವನವೆಲ್ಲಾ ಶ್ರೀರಾಮನೇ. ಆಕೆಯ ಪತಿ ಪ್ರೇಮವನ್ನು ಯಾವ ಅಳತೆಗೋಲಿನಿಂದಾಗಲಿ ಅಳೆಯಲಾಗದು. ಆ ಪ್ರೇಮಕ್ಕೆ ಎಲ್ಲೆಕಟ್ಟೆಂಬುದೇ ಇಲ್ಲ. ಪತಿಯ ಸಹಧರ್ಮಚಾರಿಣಿಯಾಗಿ ನಡೆದುಕೊಳ್ಳುವುದೇ ತನ್ನ ಜೀವನದ ಪರಮ ಸೌಭಾಗ್ಯ. ಈ ಸೌಭಾಗ್ಯವನ್ನು ಸೀತೆಯು ಬಹುವಾಗಿ ಬಯಸಿದಳು. ತಂದೆಯಾದ ಜನಕರಾಜನೂ ಶ್ರೀರಾಮನಿಗೆ ಹೀಗೆಂದು ಹೇಳಿಯೇ ಸೀತೆಯ ಪಾಣಿಗ್ರಹಣ ಮಾಡಿಸಿರುವನು.

"ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ।
ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ"

ಇದು ಅಕ್ಷರಶಃ ನಿಜವಾಗುವಂತೆ ಸೀತೆಯು ಶ್ರೀರಾಮನನ್ನು ಛಾಯೆಯಂತೆ

ಅನುವರ್ತಿಸಿದಳು. ಇದಕ್ಕೆ ಸರಿತೂಗಿಸುವ ಪ್ರೇಮವನ್ನೇ ಪ್ರತಿ ಪುರಸ್ಕಾರವಾಗಿ ಶ್ರೀರಾಮನಿಂದ ನಿರೀಕ್ಷಿಸಬಹುದೇ? ಅಲ್ಲಿಯೂ ಪ್ರೇಮವು ಪೂರ್ಣ ಪ್ರಭಾವದಿಂದ ಪ್ರಜ್ವಲಿಸಿತೇ? ಈ ಪ್ರಶ್ನೆಗಳಿಗೆ ಉತ್ತರವು ಸುಲಭವಾಗಿಲ್ಲ. ತನ್ನ ಪ್ರಾಣಕ್ಕಿಂತ ಪ್ರಿಯಳಾದವಳೆಂದು ಸೀತೆಯನ್ನು ಕುರಿತು ಶ್ರೀರಾಮನ ಬಾಯಲ್ಲಿ ಎಷ್ಟೋ ಸಲ ಬಂದಿದೆ. ಇಂತಹ ಪ್ರೇಮವು ಅಂಕುರವಾದುದೆಂತು? ವಿವಾಹ ಕಾಲಕ್ಕೆ ಇಬ್ಬರೂ ಸಣ್ಣ ವಯಸ್ಸಿನವರು! ಪರಸ್ಪರಾವಲೋಕನ ಸಂದರ್ಭದಲ್ಲಿ ಪ್ರೇಮಕಟಾಕ್ಷವು ಆ ಸಮಯಕ್ಕೆ ಇದ್ದಿತೆಂದು ಭಾವಿಸುವಂತಿಲ್ಲ. ಸ್ವಲ್ಪಕಾಲಾನಂತರವೇ ಪರಸ್ಪರ ಪ್ರೇಮವು ಬೆಳೆದು ಬಂದಿರಬೇಕು. ಮದುವೆಯಾಗಿ ಅಯೋಧ್ಯೆಗೆ ಬಂದು ಹನ್ನೆರಡು ವರ್ಷಗಳು ಕಳೆದಮೇಲೆ ಶ್ರೀರಾಮನ ಪಟ್ಟಾಭಿಷೇಕ ಪ್ರಯತ್ನ ನಡೆಯುವುದು. ಆಗ ರಾಮನಿಗೆ ಇಪ್ಪತ್ತೆಂಟು ವರ್ಷಗಳು. ಇವರ ದಾಂಪತ್ಯ ಪ್ರೇಮವು ಈ ಕಾಲಾವಧಿಯಲ್ಲಿ ಕ್ರಮೇಣ ಬೆಳೆಯುತ್ತ ಪ್ರೌಢಾವಸ್ಥೆಗೆ ಬಂದಿತ್ತೆಂದು ಆಗ ನಡೆದ ಪ್ರಸಂಗಗಳಿಂದ ಸ್ಪಷ್ಟವಾಗುತ್ತದೆ. ಪಟ್ಟಾಭಿಷೇಕ ಪ್ರಯತ್ನಗಳು ವಿಫಲವಾಗಿ ರಾಮನು ಅರಣ್ಯವಾಸವನ್ನು ಕೈಗೊಂಡು ತೆರಳುವ ಮುನ್ನ ಸೀತೆಗೆ ಕೆಲವು ಹಿತೋಪದೇಶಗಳನ್ನು ಮಾಡಿ ಅನುಮತಿಯನ್ನು ಕೇಳುವ ಸಂದರ್ಭದಲ್ಲಿ ಸೀತೆಯು ಸುಲಭಸಾಧ್ಯಳಾಗದೆ ತನ್ನ ಪ್ರೇಮಾಧಿಕಾರ ಬಲವನ್ನು ಪ್ರಯೋಗಿಸಿ ತಾನೂ ಜೊತೆಯಲ್ಲಿ ಬರುವುದಕ್ಕೆ ರಾಮನನ್ನು ಒಡಂಬಡಿಸಲು ಪ್ರಯತ್ನಿಸುವಳು. ರಾಮನು ವರ್ಣಿಸುವ ವನವಾಸದ ಕಷ್ಟವನ್ನು ಸೀತೆಯು ಗಣಿಸುವುದೇ ಇಲ್ಲ. "ಧರ್ಮಪತ್ನಿಯಾದ ತನ್ನನ್ನು ಎಂತಹ ಕಷ್ಟದೆಶೆಯಲ್ಲೂ ರಕ್ಷಿಸುವುದೇ ನಿನ್ನ ಧರ್ಮ. ಅರಣ್ಯವಾಸದಲ್ಲಿ ನನ್ನನ್ನು ರಕ್ಷಿಸಲಾರದಷ್ಟು ಅಧೀರನೇ ನೀನು? ನಿನ್ನನ್ನು ಬಿಟ್ಟು ಒಂದು ನಿಮಿಷವಾದರೂ ಜೀವಿಸುವವಳು ನಾನಲ್ಲ. ವಿವಾಹ ಕಾಲದಲ್ಲಿ ನನ್ನ ತಂದೆಯು ನಿನಗೆ ಹೇಳಿದುದೇನು? ನೀನು ಮಹಾಧೀರನೆಂದಲ್ಲವೇ ನನ್ನನ್ನು ನಿನಗೆ ಧಾರೆಯೆರೆದುದು" ಎಂದು. ಅಲ್ಲಿಗೂ ರಾಮನು ಸಮ್ಮತಿಸದಿರಲು ಮಹಾರೋಷದಿಂದ,

"ಕಿಂತ್ವಾಮನ್ಯತ ವೈದೇಹಃ ಪಿತಾ ಮೇ ಮಿಥಿಲಾಧಿಪಃ
ರಾಮಜಾಮಾತರಂ ಪ್ರಾಪ್ಯ ಸ್ತ್ರೀಯಂ ಪುರುಷ ವಿಗ್ರಹಂ"

"ರಾಮಾ! ದೇಹಸೌಂದರ್ಯವಲ್ಲದೆ ನಿನ್ನಲ್ಲಿ ಮತ್ತೇನೂ ಸಾರವಿರುವಂತೆ ಕಾಣುವುದಿಲ್ಲ. ಲೋಕವೆಲ್ಲವೂ ಇದಕ್ಕೆ ಮರುಳಾಗಿದೆ. ಸ್ವಲ್ಪವಾದರೂ ನಿನ್ನಲ್ಲಿ ಪೌರುಷವಿಲ್ಲ. ವಿದೇಹವಂಶದಲ್ಲಿ ಜನಿಸಿ, ಮಿಥಿಲಾಧಿಪತಿಯೆನಿಸಿರುವ ನನ್ನ ತಂದೆಯು, ಕೈಹಿಡಿದ ಹೆಂಡತಿಯನ್ನು ಕಾಪಾಡಲಾರದ ನಿನ್ನಲ್ಲಿ ಏನೆಂದು ಅಭಿಪ್ರಾಯಪಡುವನು? ಪುರುಷವೇಷಧಾರಿಯಾದ ಹೆಂಗಸೊಬ್ಬಳು ತನ್ನ ಮಗಳನ್ನು ಮದುವೆ ಮಾಡಿಕೊಂಡಂತೆ ತಿಳಿದುಕೊಳ್ಳುವನು! ನಿನ್ನಲ್ಲಿ ದಿವ್ಯ ತೇಜಸ್ಸಿರುವುದೆಂದು ಲೋಕವೆಲ್ಲ ಭ್ರಮೆಗೊಂಡಿದೆ?" – ಎಂದು ಹೀಯಾಳಿಸುವಳು. ಹೀಗೆ ಆಕ್ಷೇಪಿಸುವಷ್ಟು ಸಲಿಗೆಯ ಸ್ವಾತಂತ್ರ್ಯದಿಂದ ರಾಮನನ್ನು ಗೆಲ್ಲುವಳು. ಈ ಸೋಲು ರಾಮನಿಗೆ

ಪ್ರಿಯವಾಗಿಯೇ ಇತ್ತು. ಈ ಸಂದರ್ಭದಲ್ಲಿ ರಾಮನ ಮನೋಸ್ಥಿತಿಯೂ ಸೀತೆಯಂತೆಯೇ ಇತ್ತು. "ಸೀತಾ, ನೀನು ಜೊತೆಯಲ್ಲಿದ್ದರೆ ಅರಣ್ಯವಾಸವೇ ನನಗೆ ಸ್ವರ್ಗವಾಗಿರುವುದು. ಬರುವುದಕ್ಕೆ ಸಿದ್ಧಳಾಗು" ಎಂದು ಸಮ್ಮತಿಸುವನು. ಶ್ರೀರಾಮನು ಸೀತೆಯನ್ನು ಸಂಭಾಷಿಸುವ ರೀತಿಯಲ್ಲಿ ಈ ಸಂದರ್ಭದಲ್ಲಿ ಯಾರೂ ಪ್ರಶ್ನಿಸುವಂತಿಲ್ಲ.

ಇಷ್ಟು ಕಾಲ ರಾಜಭೋಗಗಳಲ್ಲಿ ಪಕ್ವವಾಗಿದ್ದ ಪ್ರೇಮವು ವನವಾಸ ಸಾಮೀಪ್ಯತೆಯಿಂದ ತನ್ನ ಪ್ರಭಾವವನ್ನು ಭದ್ರವಾಗಿ ಸ್ಥಾಪಿಸಿತು. ಇಲ್ಲಿ ಸಮ ಪ್ರಮಾಣದಲ್ಲಿ ಈ ಪ್ರಭಾವವು ಪ್ರಜ್ವಲಿಸಿತೇ ? ಸೀತೆಯ ವಿಚಾರದಲ್ಲಿ ಈ ಪ್ರಶ್ನೆಯ ಅಗತ್ಯವಿಲ್ಲ. ಅನೇಕ ಕರ್ತವ್ಯಭಾರಗಳನ್ನು ಹೊತ್ತ ರಾಮನಿಗೆ ತನ್ನ ಸತಿಯ ಪ್ರೇಮಭಾರವನ್ನು ವಹಿಸುವುದು ಇತರ ಕರ್ತವ್ಯಗಳಂತೆಯೇ ಅಭ್ಯಾಸವಾಗಿತ್ತು. ರಾಮನು ಪಾಲಿಸುತ್ತಿದ್ದ ವ್ರತಗಳಲ್ಲಿ ಏಕಪತ್ನೀವ್ರತವೂ ಮುಖ್ಯವಾದುದು. ಈ ವ್ರತಕ್ಕೆ ಅವನ ಜೀವಮಾನದಲ್ಲಿ ಎಲ್ಲಿಯೂ ಲೋಪವಾಗಿಲ್ಲ. ಪತ್ನೀ ಪ್ರೇಮದಲ್ಲಿ ಇಷ್ಟು ಗಮನವಿದ್ದರೂ ಶ್ರೀರಾಮನು ಕೆಲವು ಪ್ರಸಂಗಗಳಲ್ಲಿ ತನ್ನ ಇತರ ಕರ್ತವ್ಯಗಳನ್ನೇ ದೊಡ್ಡದನ್ನಾಗಿ ಮಾಡಿಕೊಂಡು ಮಾತಾಡಿರುವುದುಂಟು. ತಂದೆಯಾದ ದಶರಥನ ಮುಂದೆ, "ನಿನ್ನ ಸತ್ಯವಾಕ್ಯಗಳನ್ನು ಅನುಸರಿಸುವುದಕ್ಕಾಗಿ ನಾನು ಏನನ್ನಾದರೂ ಕೊಡಬಲ್ಲೆ. ಕಡೆಗೆ ಪ್ರಾಣಕ್ಕಿಂತ ಪ್ರಿಯಳಾದ ಸೀತೆಯನ್ನಾದರೂ ಬಿಡಬಲ್ಲೆ" ಎಂದು ಹೇಳುವಾಗ ಸತ್ಯಕ್ಕೆ ನಿಷ್ಠೆಯೇ ಹಿರಿದಾಗಿ ಸೀತೆಯ ಮೇಲಿನ ಪ್ರೇಮಭಾವ ಕಿರಿದಾಯಿತು! ಸತ್ಯಧರ್ಮಗಳ ಪರಿಪಾಲನೆಯಲ್ಲಿ, ಉದಾರಶೀಲಕ್ಕೆ ಸಾಕ್ಷಿಯಾಗಿ ಶಿಷ್ಟರಕ್ಷಣೆಯೇ ಆತನಿಗೆ ಮುಖ್ಯವಾಯಿತು. ವಂಶ ಕೀರ್ತಿಯನ್ನು ರಕ್ಷಿಸುವುದೇ ಧ್ಯೇಯವಾಯಿತು. ಇನ್ನೆಲ್ಲವೂ ಎರಡನೆಯದಾಯಿತು. ಪತ್ನೀ ಪ್ರೇಮವು ಪ್ರಬಲವಾಗಿದ್ದರೂ, ಅದರಲ್ಲಿ ಸಂಯಮವು ಬರುತ್ತಿತ್ತು. ರಾಮನನ್ನು ಕರ್ತವ್ಯಬದ್ಧನನ್ನಾಗಿಸಲು ಪ್ರೇರಿಸುತಿತ್ತು. ಶರಭಂಗಾಶ್ರಮದಲ್ಲಿ ಋಷಿಗಳಿಗೆ ಭಾಷೆ ನೀಡುವನು 'ನಾನು ರಾಕ್ಷಸರನ್ನು ಹತಮಾಡುವೆನು' ಎಂದು. ಸುತೀಕ್ಷ್ಣಾಶ್ರಮದಲ್ಲಿ ಮಾತು ಕೊಡುವನು: "ಕಾಡು ಮೃಗಗಳ ಕಾಟವನ್ನು ನಿಲ್ಲಿಸುವನೆಂದು." ಈ ಭಾಷೆಗಳು ಸೀತೆಗೆ ವ್ಯಾಕುಲ ತಂದಿತು. ಸೀತೆಯು ಸಮಯವನ್ನರಿತು ಆ ವಿಚಾರವನ್ನು ಪ್ರಸ್ತಾಪಿಸುತ್ತಾ ಹೀಗೆ ಋಷಿಗಳಿಗೆ ವಚನವಿತ್ತು ರಾಕ್ಷಸರನ್ನು ವಧಿಸುವುದು, ಕಾಡು ಮೃಗಗಳ ಬೇಟೆಯಾಡುವುದು ಪ್ರಮಾದವಲ್ಲವೇ ? ಇದು ಹಿಂಸೆಯಾಗದೇ ? ಅಕಾರಣವಾಗಿ ರಾಕ್ಷಸರ ವೈರವನ್ನು ಕಟ್ಟಿಕೊಳ್ಳುವಂತಾಗುವುದಲ್ಲಾ ! ವ್ರತಸ್ಥನಾಗಿ ವನವಾಸಿಯಾಗಿರುವ ನಿನಗೆ ರಾಜಧರ್ಮ ಸರಿಯೇ – ನಾವು ವನವಾಸವನ್ನು ನಿರುಪದ್ರವವಾಗಿ ಇದರಿಂದ ಕಳೆಯಲು ಸಾಧ್ಯವೆ ?" ಎಂದು ಮುಂತಾಗಿ ಪ್ರಶ್ನಿಸುತ್ತಾಳೆ. ಅದಕ್ಕೆ ರಾಮನು ಉತ್ತರ ಕೊಡುತ್ತಾನೆ:

"ಸತ್ಯ ಸಾಧನೆಗಾಗಿ, ಧರ್ಮಪಾಲನೆಗಾಗಿ, ಶಿಷ್ಟ ರಕ್ಷಣೆಗಾಗಿ ಮಾಡುವ

ಕರ್ತವ್ಯದಲ್ಲಿ ಹಿಂದು ಮುಂದುಗಳ ಆಲೋಚನೆಯನ್ನು ಕಟ್ಟಿಕೊಂಡು ಕರ್ತವ್ಯದಿಂದ ಹಿಮ್ಮೆಟ್ಟುವುದು ಧೀರತನದ ಲಕ್ಷಣವಲ್ಲ. ಈ ಕರ್ತವ್ಯದಲ್ಲಿ ತಮ್ಮನಾದ ಲಕ್ಷ್ಮಣ ನನ್ನಾಗಲೀ, ಪ್ರಿಯೆಯಾದ ನಿನ್ನನ್ನಾಗಲೀ ತ್ಯಜಿಸಬೇಕಾದರೂ, ತ್ಯಜಿಸಿಯೇನು ?" ಈ ಮಾತುಗಳಿಂದ ಸೀತೆಗೇನಾಗುವುದು ಎಂಬುದನ್ನು ಕೂಡ ರಾಮ ಯೋಚಿಸಲಿಲ್ಲ.

ಚಿತ್ರಕೂಟವನ್ನು ಬಿಟ್ಟು ದಂಡಕಾರಣ್ಯಕ್ಕೆ ಬಂದ ಮೇಲೆ ಒಂದೊಂದಾಗಿ ಪ್ರಮಾದಗಳು ಒದಗಿ ಬಂದವು. ರಾಮನ ವಿರುದ್ಧ ರಾಕ್ಷಸರ ಹಾವಳಿ ಜಾಸ್ತಿ ಯಾಯ್ತು. ಸೀತೆಯ ರಕ್ಷಣೆಯ ಕಾರ್ಯ ಹಿರಿದಾಯ್ತು. ಹೀಗೆ ಹನ್ನೆರಡು ವರ್ಷ ಗಳನ್ನು ಕಳೆದು ಕೊನೆಗೆ ಪಂಚವಟೀ ಲೋಕದಲ್ಲಿ ವನವಾಸದ ಅವಧಿಯನ್ನು ಮುಗಿ ಸಲು ರಾಮ ನಿರ್ಧರಿಸಿದ. ಇಲ್ಲಿಯೇ ಶೂರ್ಪಣಖಿ ಪ್ರಕರಣ, ಜನಸ್ಥಾನದ ರಾಕ್ಷಸ ವಧಾ ಪ್ರಕರಣ ಇವೆಲ್ಲ ನಡೆದುಹೋಯಿತು. ಮಾಯಾಮೃಗ ದರ್ಶನವಾಯಿತು. ಸೀತೆಯ ಒಂದು ಬಯಕೆಯನ್ನು ಸಲ್ಲಿಸುವುದಕ್ಕಾಗಿ ಶ್ರೀರಾಮ ಹೆಚ್ಚು ಯೋಚಿಸದೆ ಮೃಗದ ಬೆನ್ನು ಹಿಡಿದ. ಲಕ್ಷ್ಮಣನು ಸೀತೆಯ ರಕ್ಷಣೆಗಿದ್ದರೂ, ಸೀತಾಪಹರಣ ವಾಯಿತು. ಇದುವರೆಗಿನ ರಾಮನ ಸ್ವರೂಪ ಬೇರೆ. ಆತನು ಧೀರ, ಗಂಭೀರ ಪ್ರವೃತ್ತಿಯ ಬದಲಾಗಿ, ಭೀತಿ, ಸಂಶಯಗಳಿಂದ ಆವೃತನಾಗುತ್ತಾನೆ. ಅರಣ್ಯ ಕಾಂಡದಲ್ಲಿ ಸೀತಾಪಹರಣವಾದ ಮೇಲೆ ಶ್ರೀರಾಮನ ಪ್ರಲಾಪದಿಂದ ಅವನಿಗೆ ಸೀತೆ ಯಲ್ಲಿದ್ದ ಅಗಾಧ ಪ್ರೇಮವನ್ನು ಪ್ರಕಟಪಡಿಸಿದೆ. ಅದು ವಿರಹೋನ್ಮತ್ತನಾದ ರಾಮನ ಪ್ರಲಾಪದ ಪ್ರಳಯವಾಗಿ ಪ್ರಕಟವಾಗುತ್ತದೆ. ಪ್ರತ್ಯಕ್ಷದಲ್ಲಿ ಸೀತೆಯೊಂದಿಗೆ ನಡೆದುಕೊಂಡಾಗಿನ ಸಂಯಮವು ಸಡಿಲವಾಗಿ ವಿಪರೀತವಾಗಿ ಕಂಡು, ಸೀತಾ ವಿಯೋಗದ ಭ್ರಾಂತಿ ಹದಮೀರಿ ಹೋಗಿದೆ!

ಇಲ್ಲಿ ಶ್ರೀರಾಮನ ಆಚರಣೆಯ ನಿಜತ್ವ ಪರಿಶೀಲನೆ ಬೇಡ. ಶ್ರೀರಾಮನಂತಹ ವೀರಾಗ್ರಣಿ ಹೆಂಡತಿಗಾಗಿ ಹೀಗೆ ಪ್ರಲಾಪಿಸುವುದು, ಕಂಗೆಡುವುದು ಶೋಭಿಸುವುದೇ? ಇದಕ್ಕೆ ಸೀತೆಯ ಮಹಿಮಾತಿಶಯವೇ ಕಾರಣವಿರಬಹುದು. ಪ್ರಲಾಪದೊಂದಿಗೆ ಶ್ರೀರಾಮ ಸೀತಾನ್ವೇಷಣೆಯನ್ನು ಪ್ರಾರಂಭಿಸಿದ. ಮಾನವರು ಜೀವನದಲ್ಲಿ ಬಂದು ಒದಗಬಹುದಾದ ಕಷ್ಟ ಪರಂಪರೆಗಳಲ್ಲಿ ಹೇಗೆ ಕರ್ತವ್ಯವನ್ನು ಮುಂದು ಮಾಡಿ ದುಃಖವನ್ನು ಹೇಗೆ ದಮಿಸಬೇಕೆಂಬುದನ್ನು ಶ್ರೀರಾಮನು ಬೋಧಿಸುವಂತಾಯ್ತು. ಸೀತಾನ್ವೇಷಣೆಯ ನಿಮಿತ್ತ ರಾವಣ ವಧೆಯವರೆಗೆ ರಾಮನ ಕರ್ತವ್ಯ ನಡೆಯಿತು. ಮಹತ್ಕಾರ್ಯಗಳು ನಡೆದವು. ಮಹಾವ್ಯಕ್ತಿಗಳ ಪರಿಚಯ ರಾಮನಿಗಾಯ್ತು. ಇಷ್ಟೆಲ್ಲಾ ನಡೆಯುವಾಗ ಪರೋಕ್ಷದಲ್ಲಿದ್ದರೂ, ಸೀತೆಗೆ ರಾಮನು ಕ್ಷಣಮಾತ್ರ ವಾದರೂ ಕಣ್ಮನಗಳಿಂದ ದೂರವಾಗಿರಲಿಲ್ಲ.

ರಾವಣನು ಹತನಾದ ಮೇಲೆ ಶ್ರೀರಾಮನು ಸೀತೆಯನ್ನು ಕರೆತರುವಂತೆ ವಿಭೀ ಷಣನಿಗೆ ಹೇಳುವನು. ಸೀತೆಗಾಗಿ ಪ್ರಲಾಪಿಸಿ ಆಕೆಯ ರಕ್ಷಣೆಗಾಗಿ ಬಹು ಕ್ಲೇಶ ಗಳನ್ನು ಸಹಿಸಿದನು. ಲಂಕೆಗೆ ರಾಮ ಬಂದು ಮಾಡಿದುದೇನು ? ಘೋರ ಯುದ್ಧ

ವನ್ನು ಪೂಡಿಪನು. ರಾವಣ ವಧೆ ಮಾಡಿದನು. ಇದು ಅವನ ಪೌರುಷದ ವಿಜಯ ವಾಯ್ತು. ರಾಜಧರ್ಮವಾಯ್ತು. ಸೀತೆಗೆ ಪತಿಯಾಗಿ ಹೊತ್ತ ಕರ್ತವ್ಯವೇ ನಷ್ಟುಂದಾ ಯಿತೆ? ಲಂಕೆಯ ಪ್ರವೇಶ ಮಾಡಿದ ಕ್ಷಣದಿಂದ, ಯುದ್ಧ ಮುಗಿಯುವವರೆಗೆ ಅವಳ ಕ್ಷೇಮವನ್ನು ವಿಚಾರಿಸಿದನೇ? ಚಿಂತಿಸಿದನೆ? ಇಂದ್ರಜಿತು ಮಾಯಾ ಸೀತೆಯನ್ನು ವಧಿಸಿದಾಗ ರಾಮ, ಲಕ್ಷ್ಮಣರು ಬಹುವಾಗಿ ಶೋಕಿಸುವರು. ರಾಮನ ಈ ಆಚರಣೆ ಸಹಜವೇ? ಬರಿಯ ನಟನೆಯೆ? ಮುಂದೆ ಸೀತೆಯನ್ನು ಕಂಡಾಗ ರಾಮನ ನಡೆ ನುಡಿ ಪರಿವರ್ತಿತವಾದಂತಿದೆ! ಏಕೆ?

ಶ್ರೀರಾಮನ ಮಾತಿನಂತೆ ವಿಭೀಷಣ ಸೀತೆಯನ್ನು ಕರೆ ತರುತ್ತಾನೆ. ಸಾಧ್ವಿ ಸೀತಾದೇವಿ ತನ್ನೆಲ್ಲ ಕಷ್ಟವನ್ನು ಮರೆತು ಮಂಗಲ ಸ್ನಾನ ಮಾಡಿ ಪತಿಯ ದರ್ಶನ ಕ್ಕಾಗಿ ಕಾತುರದಿಂದ ಬಂದರೂ ಸಂಕೋಚದಿಂದ ರಾಮನ ಮುಂದೆ ನಿಲ್ಲುತ್ತಾಳೆ. ಅಂತಹ ಸಮಯದಲ್ಲಿ ರಾಮನಾಡಿದ ಮಾತುಗಳು ಪಾಮರರಿಗೂ ಒಪ್ಪುವಂಥದಲ್ಲ. ಆ ಮಹಾ ಸೇನೆಯ ಎದುರಿನಲ್ಲಿ, ಮಹಾವೀರರ ಸಮ್ಮುಖದಲ್ಲಿ ಸತಿಯನ್ನು ಭಂಗಿಸಿ ರಾಮನಾಡಿದ ಮಾತುಗಳು ಪರಮಾಶ್ಚರ್ಯವನ್ನುಂಟುಮಾಡಿದೆ. ಯಾವುದೋ ಅಸಮಾಧಾನ, ಅರ್ಥವಿಲ್ಲದ ಕೋಪ, ಅಕಾರಣ ಸಂದೇಹ ಇವು ರಾಮನ ಮೇಲೆ ಪ್ರಭಾವ ಬೀರಿದವು. ಆಗ ಜಾನಕಿಯನ್ನು ಕುರಿತು "ಎಲೆ ಕಲ್ಯಾಣಿ! ನಿನ್ನನ್ನು ಪಡೆಯಬೇಕೆಂಬ ಆಸೆಯಿಂದಲೇ ನಾನಿಷ್ಟು ಪ್ರಯತ್ನಗಳನ್ನು ಮಾಡಿದೆನೆಂದು ನೀನೆಣಿಸಬೇಡ. ನಿನ್ನ ದೆಸೆಯಿಂದುಂಟಾದ ಅವಮಾನವನ್ನು ಪರಿಹರಿಸುವುದಕ್ಕಾಗಿ, ವಂಶ ಕೀರ್ತಿಯನ್ನು ಉಳಿಸುವ ಉದ್ದೇಶಕ್ಕಾಗಿ ಇಷ್ಟೆಲ್ಲವನ್ನೂ ಪಡಬೇಕಾಯ್ತು. ನಾನಿನ್ನು ಸ್ವತಂತ್ರನು. ನೀನು ಬಹುಕಾಲ ಪರಗೃಹದಲ್ಲಿದ್ದು, ದುಷ್ಟ ರಾಕ್ಷಸನ ಕಾಮದೃಷ್ಟಿಗೆ ಬಿದ್ದಿರುವೆ. ಮೊದಲಿನಂತೆ ನಿನ್ನ ಭಾವಿಸಲು ನನಗಿನ್ನು ಸಾಧ್ಯ ವಾಗದು. ಈ ದಶದಿಕ್ಕುಗಳಲ್ಲಿ ಯಾವ ದಿಕ್ಕನ್ನಾದರೂ ಸರಿಯೇ ಹಿಡಿದು ಹೋಗ ಬಹುದು. ಬಂಧು ಮಿತ್ರರಲ್ಲಿ ಯಾರ ಆಶ್ರಯವನ್ನು ಬೇಕಾದರು ಪಡೆಯಬಹುದು" ಎಂದು ಶ್ರೀರಾಮ ನುಡಿಯುತ್ತಾನೆ.

ರಾಮಬಾಣದಂತೆಯೇ ಅವನ ಮಾತುಗಳು ಸೀತೆಯ ಹೃದಯವನ್ನು ಭೇದಿಸಿತು. ರಾಮನ ನಿಷ್ಠುರ ನಡತೆಯನ್ನು, ಸೀತೆ ನಿರ್ದೋಷಿಯಾಗಿ, ನಿರಪ ರಾಧಿಯಾಗಿ, ಮುಗ್ಧೆಯಾಗಿ ಹೇಗೆ ತಾಳಿಕೊಂಡಳು! ಇದು ರಾಮನ ಪ್ರೇಮದ ಅನರ್ಥಕಾರಿ ರೂಪವೇ? ಮುಂದೆ ಅಗ್ನಿ ಪ್ರವೇಶ ಮಾಡಿ ಪುನೀತೆಯೆಂದು ಅಗ್ನಿ ದೇವನಿಂದ ಹೇಳಿಸಿಕೊಂಡ ಸೀತೆಯನ್ನು ರಾಮ ಸ್ವೀಕರಿಸುವನು. ಇದಕ್ಕೆಲ್ಲ ರಾಮನ ಭೀತಿ, ಸಂಶಯವೇ ಕಾರಣವೇ? ಆದರೂ ರಾಮನನ್ನು ಆಗ್ರಹಿಸಿ ದೋಷಾರೋಪಣೆ ಮಾಡಲಿಲ್ಲ.

ಈ ಆಕ್ಷೇಪ ಬಂದಾಗ, ಶ್ರೀರಾಮನೇ ಸಮಾಧಾನ ಹೇಳುವನು. ತನ್ನ ಕುಲದ ಮರ್ಯಾದೆಗಾಗಿ, ರಾಜಮರ್ಯಾದೆಗಾಗಿ, ಹಾಗೆ ಮಾಡಬೇಕಾಯ್ತೆಂದು. ಅವನ್ನು

ರಕ್ಷಿಸಿಕೊಳ್ಳುವುದು ಉಚಿತವೆಂದು ತಿಳಿದುಕೊಂಡರೂ ಮುಂದೆ ರಾಮ ಸೀತೆಯನ್ನು ಕಂಡ ಬಗೆಯನ್ನು ನೋಡೋಣ.

ಸಾಕೇತ ಸಾಮ್ರಾಜ್ಯದ ಪ್ರಭುವಾಗಿ ಶ್ರೀರಾಮ ಮೆರೆದನು. ಶ್ರೀರಾಮ ಸೀತೆಯರ ಅನ್ಯೋನ್ಯದ ಸಹ ಜೀವನ ಎಷ್ಟು ಅಪೇಕ್ಷಣೀಯವಾಗಿತ್ತೊ ಅಷ್ಟೇ ಅಪಾಯಕಾರಿಯಾಗಿತ್ತು. ಶ್ರೀರಾಮನ ಸುಖದುಃಖ ಎಲ್ಲಕ್ಕೂ ಸೀತೆಯೂ ಸಮಭಾಗಿಯಾಗಿದ್ದಳು. ಆದರೆ ಯಾವ ಕಾರಣದಿಂದಲಾದರೂ ರಾಮನಿಗೆ ಸಂಶಯ ತೋರಿದಾಗ, ಭೀತಿ ಸುಳಿದಾಗ ಅದರ ಫಲವನ್ನು ರಾಮನಿಗಿಂತಲೂ ಮಿಗಿಲಾಗಿ ಅನುಭವಿಸುತ್ತಿದ್ದುದು ಸೀತೆ. ಶ್ರೀರಾಮನ ಧರ್ಮನಿಷ್ಠೆ, ಸತ್ಯ ಪ್ರತಿಷ್ಠೆಗಳ ಪರಮಾವಧಿಯು ಹೀಗೆ ಹಿಂಸಾರೂಪವಾಗಿ ಸೀತೆಯ ಮೇಲೆ ಪರಿಣಾಮ ಹೊಂದಿ ಅವಳು ದುಃಖಭಾಗಿನಿಯಾಗಬೇಕಾದ ದೃಷ್ಟಾಂತಗಳು ಒಂದೆರಡಲ್ಲ. ಆಕೆಯ ಪರೀಕ್ಷಾ ಪ್ರಸಂಗ ಅಗ್ನಿ ಪರೀಕ್ಷೆಗೇ ಮುಗಿಯಲಿಲ್ಲ. ಮುಂದೆ ಅಕಾರಣವಾಗಿ ಏನೊಂದನ್ನು ವಿಚಾರಿಸದೆ ಶ್ರೀರಾಮ ಪೂರ್ಣ ಗರ್ಭಿಣಿಯಾದ ಸೀತೆಯನ್ನು ಪರಿತ್ಯಾಗ ಮಾಡಿದನು. ಇಲ್ಲಿ ರಾಮನ ಆದರ್ಶನಿಷ್ಠೆ ನಿಷ್ಠುರವಾಗಿ ಎಲ್ಲರ ಹೃದಯಗಳಲ್ಲಿ "ಇದು ನ್ಯಾಯವೇ?" ಎಂಬ ಆಂದೋಳನವೆಬ್ಬಿಸುತ್ತದೆ. ಮುಂದಿನ ಮಹಾ ಸಂಕಟವನ್ನು ಭಾವಿಸಲಾರದೆ ಪತಿ ಪ್ರೇಮವನ್ನೇ ನಂಬಿ ಆತನ ಶ್ರೇಯಸ್ಸನ್ನೇ ಹಾರೈಸಿ ಲಕ್ಷ್ಮಣನೊಂದಿಗೆ ಮುನಿಪತ್ನಿಯರನ್ನು ಕಾಣಲು ಮಂಗಲ ವಾದ್ಯಗಳ ಸಹಿತ ರಥವೇರುವ ಸೀತೆಯ ಚಿತ್ರ ನಮ್ಮ ಕಣ್ಮುಂದೆ ನಿಲ್ಲುತ್ತದೆ. ನಿಜವನ್ನರಿತ ಸೌಮಿತ್ರಿಯೊಂದಿಗೆ ನಮ್ಮ ದುಃಖವೂ ಬೆಳೆಯುತ್ತದೆ. ರಜಕನೊಬ್ಬನ ಮಾತು ಪ್ರಧಾನವಾಗಿ ಮಹಾಸಾಧ್ವಿಯೂ, ವಂಶಪಾವನೆಯೂ ಆದ ಧರ್ಮಪತ್ನಿಗೆ ಕ್ರೂರ ಶಿಕ್ಷೆಯನ್ನು ವಿಧಿಸಿದ ಶ್ರೀರಾಮನ ನ್ಯಾಯಶೀಲತೆಯನ್ನು ಸಂಭಾವಿಸಬಹುದೆ? "ತಾನೂ ಒಬ್ಬ ಪ್ರಜೆಯಲ್ಲವೇ? ಪ್ರಜೆಯಂತೆ ನನ್ನನ್ನು ಕಾಪಾಡುವುದು ರಾಜಧರ್ಮವಲ್ಲವೇ?" ಎಂದು ಸೌಮಿತ್ರಿಯೊಂದಿಗೆ ಸೀತೆ ಕೇಳದಾಗ ನಮ್ಮ ಹೃದಯಗಳು ಕಲಕಿಹೋಗುತ್ತದಲ್ಲವೇ? ಆದರೆ ಶ್ರೀರಾಮನೇನು ಉತ್ತರಿಸಿಯಾನು? ಇದಕ್ಕೆ ರಾಮ ಉತ್ತರವನ್ನು ಕೊಟ್ಟಿಲ್ಲ. ಈ ವಿಚಾರ ಮರ್ಮಭೇದಕವಾಗಿದೆ. ಗುರುಹಿರಿಯರನ್ನು ಕೇಳದೆ, ಯಾರೊಂದಿಗೂ ಆಲೋಚಿಸದೆ, ಸ್ವತಂತ್ರ ಧೋರಣೆಯಿಂದ ಶ್ರೀರಾಮನು ಈ ನಿಶ್ಚಯಕ್ಕೆ ಬಂದುದು, ರಾಜಧರ್ಮವೆಂದು, ವಂಶಗೌರವ ರಕ್ಷಣೆಗಾಗಿಯೆಂದೂ ಅನುಮೋದಿಸಲಾಗದು. ಸೀತೆಯು ತನಗಾಗಲಿ, ತನ್ನವರಿಗಾಗಲಿ, ತನ್ನ ಪ್ರಜೆಗಳಿಗಾಗಲಿ, ಯಾವ ಅಪಕಾರವನ್ನೂ ಬಗೆಯದ ನಿಷ್ಪಾಪಿ. ಹಾಗಾದರೆ ರಾಮನೇಕೆ ಹಾಗೆ ಮಾಡಿದ? ರಾಮನು ಕ್ರೂರಿಯೇ? ಇಂತಹ ಶಿಕ್ಷೆಗೆ ಸೀತೆ ಅರ್ಹಳೇ? ಇದರಿಂದ ರಾಮನಿಗೆ ಸುಖ ಬಂತೇ? ಮಹತ್ತನ್ನು ಸಾಧಿಸಿದನೇ? ರಾಮನ ಉದ್ದೇಶವೇನಿತ್ತು? ಆತನಿಗೆ ಅರ್ಥವಾಗದೆ ಇದೆಲ್ಲವೂ ನಡೆಯಿತೇ? ಆತ್ಮವಿಶ್ವಾಸದಿಂದ ವಂಚಿತನಾದನೆಂದು ಶ್ರೀರಾಮನನ್ನು ಕುರಿತು

ಹೇಳುವುದು ಸಾಧ್ಯವೇ ? ಸೀತೆಯನ್ನು ಬೇಡದಿದ್ದರೆ ತ್ಯಜಿಸಿದ ನಂತರ ಸುರಕ್ಷಿತ ಸ್ಥಳಕ್ಕೆ ಕಳುಹಿಸಿ, ತ್ಯಾಗದ ಸುಖದಿಂದ ನಿಶ್ಚಿಂತವಾಗಿರಬಹುದಿತ್ತಲ್ಲ! ಜನಕ ರಾಜನಿರಲಿಲ್ಲವೇ? ಮತ್ತ್ಯಾರು ಇಷ್ಟ ಬಂಧುಗಳೂ ಅವಳಿಗೆ ಇರಲಿಲ್ಲವೇ ? ಅನಿರೀಕ್ಷಿತ ವಾಗಿ ಅನಾಥೆಯಂತೆ ಸೀತೆಯನ್ನು ಕಂಡು, ಕಾಡುಪಾಲು ಮಾಡಿದ ರಾಮನ ಧರ್ಮ ರಕ್ಷಣೆಯನ್ನು ನಾವು ಸಮರ್ಥಿಸಲಾಗುವುದೇ ? ರಾಮನಿಗೆ ಸೀತೆಯ ಮೇಲೆ ಪ್ರತೀಕಾರ ಬುದ್ಧಿಯಿತ್ತೇ ? ಅಂಥದೇನನ್ನೂ ಸೀತೆ ಮಾಡಿರಲಿಲ್ಲ! ಶ್ರೀರಾಮನು ಸೀತೆಯನ್ನು ಕ್ರೋಧದಿಂದ ತ್ಯಜಿಸಿದನೆಂದು ತೋರಲು ಯಾವ ಪುರಾವೆ, ಸೂಚನೆ, ಆಧಾರವಿಲ್ಲ! ದುಷ್ಟ ಪ್ರಕೃತಿ ರಾಮನದಲ್ಲ. ಹಾಗಾಗಿದ್ದರೆ ಭರತನನ್ನು, ಅವನ ತಾಯಿಯನ್ನು ಸುಮ್ಮನೆ ಬಿಡುತ್ತಿದ್ದನೆ?

ಅವಿಚಾರದಿಂದ ದುಡುಕಿ ಈ ರೀತಿಯಲ್ಲಿ ಸೀತೆಯನ್ನು ತ್ಯಾಗಮಾಡಿದನೇ ? ಅಥವಾ ಪೂರ್ಣ ವಿಚಾರಮಾಡಿ ತ್ಯಾಗಮಾಡಿದನೇ? ಹಾಗಿದ್ದರೆ ಅದರ ಉದ್ದೇಶವೇನಿರ ಬಹುದು! ಇದೆಂಥ ರಹಸ್ಯ! ಬಯಲಾಗುವುದೆಂದಿಗೆ ? ಇದು ದೇವ ರಹಸ್ಯವೇ ? ದೈವದ ಸಂಕಲ್ಪವನ್ನು ಪ್ರಶ್ನಿಸಬಾರದೆಂದು ನಾವು ಸುಮ್ಮನಾಗಬೇಕೆ ? ಅಥವಾ ಸೀತಾವತಾರದ ಕೆಲಸ ಮುಗಿದುಹೋಯಿತು. ಮುಕ್ತಾಯ ಹೇಗಾದರೇನು ಎಂದು ಸುಮ್ಮನಾಗುವುದೇ ? ಶ್ರೀರಾಮನು ಮಾನವನಾಗಿ ಹುಟ್ಟಿ ಮಾನವ ಧರ್ಮಕರ್ಮ ಗಳನ್ನು ಬೋಧಿಸಿದವನು. ಹಾಗೆಂದು ಅವನ ಈ ಘಟ್ಟದ ಕಾರ್ಯವನ್ನು ಅನುಕರ ಣೀಯ ಧರ್ಮವೆಂದು, ಆದರ್ಶವೆಂದು ನಾವು ಅನುಸರಿಸಲಾದೀತೆ? ಹಾಗೆಯೇ ಸೀತೆ ಯಂತೆ ಇಂಥ ಕಷ್ಟಪ್ರಸಂಗಗಳಲ್ಲಿ ಕ್ಷಮಿಸಿದಂತೆ, ಸಹಿಸಿದಂತೆ ಎಲ್ಲ ಸತಿಯರೂ ಸಹಿಸುವರೇ ? ಕ್ಷಮಿಸುವರೇ ? ಈ ಎಲ್ಲ ಆಕ್ಷೇಪಣೆಗಳಿಗೆ ಅವರಿಬ್ಬರೂ ನಿರುತ್ತರ ರಾಗಿದ್ದಾರೆ.

ಈ ವಿಚಾರವು ಬೆಳೆದು ಬೆಳೆದು ಅವನ ಮುಂದೆಯೇ ನಿಂತಿರಬಹುದು. ಶ್ರೀರಾಮನೇ ಸಮಾಧಾನ ಹೇಳಿರಬಹುದು. ಆದರೆ ನಮಗೆ ಸಮಾಧಾನವಾದರೂ, ರಾಮನಿಗೆ ಸಮಾಧಾನವಾಯಿತೇ ? 'ಸೀತೆಯನ್ನು ಮರೆತುಬಿಡು' ಎಂದು ಅವನ ಮನಸ್ಸು ಹೇಳಿತೆ ? ನಿಜವಾಗಿ ರಾಮಚಂದ್ರ ಸೀತೆಯನ್ನು ತ್ಯಜಿಸಿದನೇ, ಹಾಗಾದರೆ ಅವನು ಅವಳಿಗಾಗಿ ಮುಂದೆ ನೊಂದುದಾದರೂ ಏಕೆ ? ಮನಸ್ಸಿನಲ್ಲಿ ಸೀತೆ ಉಳಿದು ಕೊಂಡಳೇ ? ಹಿಂದೆ ಅಗ್ನಿಪರೀಕ್ಷೆಗೆ ಗುರಿಯಾದುದು ಸೀತೆಯ ಶರೀರ. ಅವನು ಪರಿತ್ಯಾಗ ಮಾಡಿದುದು ಸೀತೆಯ ಶರೀರವನ್ನೇ. ಆದರೆ ಮುಂದೆ ಅಶ್ವಮೇಧ ಯಜ್ಞಕ್ಕೆ ಸೀತೆಯ ಶರೀರಾಕೃತಿಯ ಸ್ವರ್ಣಪ್ರತಿಮೆಯೇ ಬೇಕಾಯ್ತು. ಆದರೇ ನಾಯ್ತು. ಸೀತೆಯ ಪತ್ನೀಪದವಿಗೆ ಕಳಂಕವಿಲ್ಲ. ಶರೀರ ಮಾತ್ರ ತ್ಯಾಜ್ಯವೇ ? ಮನಸ್ಸಿನಿಂದ ಸೀತೆಯನ್ನು ದೂರಮಾಡಲು ಶ್ರೀರಾಮ ಶಕ್ತನಾದನೇ ?

ಸೀತೆಯು ದೂರವಾದಂತೆ, ಆಕೆಯ ಸ್ಮರಣೆ ರಾಮನಿಗೆ ನಿತ್ಯ ಜಪವಾಯ್ತು. ಸೀತೆಯ ಪ್ರತ್ಯಕ್ಷತೆಗಿಂತ ಪರೋಕ್ಷತೆಯಲ್ಲಿ ಸೀತೆಯ ಮಹಿಮೆ ರಾಮನಿಗೆ ಗೋಚರ

ವಾಯಿತು. ಸೀತೆಯ ರೂಪ, ಗುಣ, ಸದಾಕಾಲ ಹೃದಯದಲ್ಲಿ ಜಾಗೃತವಾಗಿ ಆಕೆಯಲ್ಲಿನ ಪ್ರೇಮಕ್ಕೆ ಯಾವ ರೀತಿಯನ್ನು ತಾಕಲೂ ರಾಮ ಇಚ್ಛಿಸಲಿಲ್ಲ. ಶಕ್ತನಾಗಲಿಲ್ಲ. ಸೀತೆಯ ಈ ಮಹಿಮೆಗೆ ರಾಮ ಸೋಲಬೇಕಾಯಿತು. ಅದು ದೌರ್ಬಲ್ಯವಾಯಿತು. ಯಾವ ಪವಿತ್ರಪ್ರೇಮ ಶ್ರೀರಾಮಚಂದ್ರನ ಸರ್ವವಿಧ ಶಕ್ತಿ, ಪ್ರಯತ್ನ, ವಿಜಯಗಳಿಗೆ ಮೂಲಭೂತವೆನಿಸಿತ್ತೋ, ಯಾವ ಸ್ನೇಹ ಅವನಿಗೆ ರಕ್ಷಾಕವಚವಾಗಿತ್ತೋ ಆ ಸೀತೆ ಈಗ ಇಲ್ಲವಾದಾಗ ಶ್ರೀರಾಮನ ಚೈತನ್ಯವೇ ಕುಗ್ಗಿಹೋಯಿತು. ಶ್ರೀರಾಮನಂತಹ ಧೀರವೀರನನ್ನು ಕವಲಿಸಿತು. ಸೀತೆಯ ಸ್ವರೂಪವನ್ನು ನೆನೆನೆನೆದು, ಅವಳ ನಡೆಯನ್ನು ಸ್ಮರಿಸಿಕೊಂಡು ಶ್ರೀರಾಮ ಪಶ್ಚಾತ್ತಾಪದಲ್ಲಿ ಕರಗಿಹೋದನು.

ಆನಂತರ ಮುಂದೆ, ವಾಲ್ಮೀಕಿ ಮಹರ್ಷಿಗಳು, ಸೀತೆಯನ್ನೂ, ಅವಳ ಮಕ್ಕಳನ್ನೂ ರಾಮನಿಗೆ ಒಪ್ಪಿಸಲು ಅಯೋಧ್ಯೆಗೆ ಕರೆತಂದರು. ಸೀತೆಯಾದರೋ ತಾಪಸಿಯಂತೆ ಬಂದು ತುಂಬಿದ ಸಭೆಯಲ್ಲಿ ನಿಂತಳು. ಮತ್ತೆ ಶ್ರೀರಾಮನು ಲೋಕಾಪವಾದಕ್ಕೆ ಗುರಿಯಾಗದಂತೆ ಆಕೆಯನ್ನು ಸ್ವೀಕರಿಸಲು ಸಿದ್ಧನಾದ. ಸೀತೆಯು ತನ್ನ ಪರಿಶುದ್ಧತೆಯನ್ನು ಕುರಿತು ಪ್ರಮಾಣ ಮಾಡಬೇಕಾಯಿತು. ಎಂತಹ ಶೀಲವಂತೆಗೆ ಇದೆಂತಹ ತೇಜೋವಧೆ! ಪರಮಸಾಧ್ವಿಗೆ ಎಂತಹ ಪರೀಕ್ಷೆ. ಸೀತೆಗೆ ಜೀವಿತವು ಸಾಕಾಯಿತು. ಇಲ್ಲಿ ಸೀತೆಯು ದುಃಖಾಪಮಾನಗಳ ಸಹನ ಶಕ್ತಿಯ ಪರಮ ಸ್ವರೂಪಿಯಾಗಿದ್ದಾಳೆ. ಆಕೆ ಕ್ಷಣಾಗ್ರಹಕ್ಕೆ ಒಳಗಾಗಿದ್ದರೂ ಮಹಾಪ್ರಳಯವಾಗಬಹುದಿತ್ತು. ಸೀತೆಯ ಸಹಜ ಸಂಯಮ ಲೋಕವನ್ನು ಕಾಪಾಡಿತು. ಆ ಚಿರದುಃಖಿನಿ, ಸಂಯಮಿ, ಲೋಕಮಂಗಳೆಯಾಗಿ, ಸರ್ವ ಭದ್ರತೆಗಾಗಿ ತನ್ನ ಜೀವಿತವನ್ನೇ ಅರ್ಪಿಸಲು ನಿಶ್ಚಯ ಮಾಡಿದಳು. ಸೀತೆ ಕಡೆಯದಾಗಿ ನುಡಿದಳು :

"ವಾಙ್ಮನಃ ತವುಭಿಃ ಪತ್ಯಾ ವ್ಯಭಿಚಾರೋ ಯಥಾನಮೇ ।
ತಥಾ ವಿಶ್ವಂಭರೇ ದೇವೀಮೊವಾಂತರ್ಧಾತುಮರ್ಹಸಿ ॥"

"ಕಾಯಾ, ವಾಚಾ, ಮನಸಾ ನಾನು ಪರಿಶುದ್ಧೆಯಾಗಿದ್ದರೆ ತಾಯಿ ಭೂದೇವಿ ನನ್ನನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಳ್ಳಲಿ" ಎಂದಾಗ ಭೂಮಿ ಬಿರಿದು ಸೀತೆಯನ್ನು ಸ್ವಾಗತಿಸಿತು. ಭೂದೇವಿ ಸಿಂಹಾಸನ ನೀಡಿ ಸೀತೆಯನ್ನು ಸೆಳೆದುಕೊಂಡಳು. "ಮಗಳೇ, ನಿನ್ನನ್ನು ಉಚಿತ ರೀತಿಯಲ್ಲಿ ಸಂಭಾವಿಸಿ ರಕ್ಷಿಸಲು ಯಾರೂ ಶಕ್ತರಿಲ್ಲ. ಬಹುವಾಗಿ ನಿನ್ನಿಂದಲೇ ನೀನು ರಕ್ಷಿತಳಾದೆ. ನಿನ್ನ ಸಹನೆ, ಔದಾರ್ಯ, ಪ್ರೇಮ ಲೋಕಾತೀತವಾದುದು. ಅದಕ್ಕೆ ಪುರಸ್ಕಾರವನ್ನು ಬಯಸಬಾರದು. ರಾಮ, ನಿನಗೆ ಸೀತೆ ದಕ್ಕುವಂಥವಳಲ್ಲ" ಎಂದು ಭೂದೇವಿ ಹೇಳಿ ಮಗಳೊಡನೆ ಮರೆಯಾದಳು.

ಅನಂತರದಲ್ಲಿ ಶ್ರೀರಾಮ ಚಿರಪಶ್ಚಾತ್ತಾಪದಲ್ಲಿ, ಚಿರವಿಯೋಗದಲ್ಲಿ ಸೀತೆ

ಯನ್ನು ಪ್ರತಿಷ್ಠಿಸಿ ತನ್ನ ಜೀವಿತವನ್ನು ಕೊನೆಗಾಣಿಸಬೇಕಾಯ್ತು. ಶ್ರೀರಾಮನ ದೈವತ್ವವನ್ನು ಸಾರಲು ಅವನ ಉತ್ತಮೋತ್ತಮ ಗುಣಗಳು ಸಾಕಷ್ಟಿವೆ. ಶ್ರೀರಾಮ ಚಂದ್ರ–ಆದರ್ಶರಾಜ, ದೇವ. ಆದರೆ ಅದೇ ಪ್ರಮಾಣದಲ್ಲಿ ಅವನ ಪತ್ನೀಪ್ರೇಮ ನೆನಪಿಗೇಕೆ ಬರುವುದಿಲ್ಲ? ಈ ಪ್ರಶ್ನೆಗೆ ತ್ರೇತಾ, ದ್ವಾಪರಗಳು ಉರುಳಿ ಕಲಿ ಯುಗಕ್ಕೆ ಬಂದರೂ ಉತ್ತರ ದೊರೆತಿಲ್ಲ!

ಜಗದ್ಗುರು ಪ್ರಭಾವ

ರಾಗ: ಶ್ರೀರಂಜಿನಿ ಆದಿತಾಳ

ವಿಧಿ ವಿನೋದ ವೈಭವ
ವೈಭವ ಸುಂದರ ಸ್ವಭಾವ ||ಪಲ್ಲವಿ||

೧

ಸತ್ಯ ಸಂಘದ ಭೃತ್ಯ ಭಾವದಿ| ನಿತ್ಯಾನಂದವನೀವ
ನಿತ್ಯ ತೃಪ್ತಿಲಿ ನಿಜ ಸುಖವರಿವ
ಚಿತ್ತದಿ ಮುಕ್ತಿ ಭವನವ ರಚಿಸುವ ||

೨

ಜ್ಞಾನ ಬಲದ ಮಾನಸ ಮಹಿಮೆಯ, ಭಾನುತೇಜದಲಿ ತೋರುವ
ಧ್ಯಾನ ಹೃದಯದ ಗಾನ ವಿಲಾಸದಿ
ಆನಂದದ ನಿಜರೂಪವನೆಸೆವ ||

೩

ಬಗೆಯ ಭಾವ ತರಂಗದಿ ಸುಂದರ| ಜಗವ ನಿರ್ಮಿಪ ವಿಧಾನದ
ಜಗದಿ ಜೀವನ ಸೊಬಗೆನೆಸುವ| ಬಗೆಯರುಹುತ ಜಗದ್ಗುರು ಪ್ರಭಾವ||

ಪು. ತಿ. ನ. ಅವರ ಕೃತಿ: 'ಅಹಲ್ಯೆ'

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ರೀತಿಯ ವ್ಯವಸಾಯವಾಗಿ, ಹುಲುಸಾದ ಬೆಳೆಯಾಗುತ್ತಿದೆ. ಇದರಿಂದಾಗುತ್ತಿರುವ ಆತ್ಮಸಂತೃಪ್ತಿಗೆ ಉತ್ತಮ ಕೃಷೀವಲರು ಕೆಲವರು ಕಾರಣರಾಗಿದ್ದಾರೆ. ಆ ಸಾಲಿನಲ್ಲಿ ಬಂದವರು ಶ್ರೀ ಪು. ತಿ. ನ. ಅವರು. ಅವರ ಕೃತಿಗಳು ವಿದ್ವಾಂಸರ ಮನ ಒಲಿಸುತ್ತಿವೆ. ಅವುಗಳಲ್ಲೆಲ್ಲಾ 'ಅಹಲ್ಯೆ'ಯು ಉತ್ತಮ ಶ್ರೇಣಿಯಲ್ಲಿ ಸೇರುತ್ತದೆ. ಅವರ ಮಟ್ಟವು ಅವರ ಇತರ ಕೃತಿಗಳಿಗಿಂತಲೂ ಮೇಲಿನದು. ಈ ಸುಂದರ ಕಾವ್ಯವನ್ನು ಪು. ತಿ. ನರಸಿಂಹಾಚಾರ್ಯರು ಅನ್ಯ ಲಕ್ಷಣ ಸಂಪ್ರದಾಯವನ್ನು ಹಿಡಿದು ಗೀತ ನಾಟಕವಾಗಿ ರಚಿಸಿದ್ದಾರೆ.

ಶುಭ ಮುಹೂರ್ತದಲ್ಲಿ ಶ್ರೀಯುತರು ಈ ಕೃತಿ ರಚನೆಗೆ ಕೈ ಇಟ್ಟಂತಿದೆ. ಯಾವ ಕಾಲದ ವ್ಯಕ್ತಿಯನ್ನವರು ಚಿತ್ರಿಸಲು ಬಗೆದರೋ, ಆ ಪ್ರಯತ್ನದಲ್ಲಿ ತಮ್ಮ ದೃಷ್ಟಿಯನ್ನವರು ಆ ಯುಗದ ಕಡೆ ತಿರುಗಿಸಿದ್ದಾರೆ. ಆ ವ್ಯಕ್ತಿಯ ಸ್ವರೂಪವನ್ನು ಧ್ಯಾನಿಸಿದ್ದಾರೆ. ಸಂದರ್ಶನ ಮಾಡಿದ್ದಾರೆ. ಅಂದಿನ ಪರಿಸ್ಥಿತಿಯನ್ನು ಚೆನ್ನಾಗಿ ಪರಿಕಿಸಿ ಮೂಲ ವಸ್ತುವಿಗೆ ಕುಂದು ಬಾರದಂತೆ, ಸತ್ಯಕ್ಕೆ ಸೋಲಾಗದಂತೆ, ಭಾವನಾ ಶಕ್ತಿಗೆ ನಿಲುಕುವ ಮಟ್ಟಿಗೆ, ವಸ್ತು ವಿಷಯಗಳನ್ನು ವಿಸ್ತರಿಸಿದ್ದಾರೆ. ಮಸಕು ಮಸುಕಾಗಿದ್ದ ಅಹಲ್ಯೆಯ ಸ್ವರೂಪವೂ, ಆಕೆಯ ಚರಿತ್ರೆಯೂ, ಆಕೆಯನ್ನು ಧ್ಯಾನಿಸಿದ ವಿಶ್ವಾಸಿಯಾದ ಕವಿಯ ಅಂತಃಚಕ್ಷುವಿಗೆ ಒಂದು ದಿವ್ಯಾಕೃತಿಯಾಗಿ ಕಂಡಿತು. ಒಂದು ಪೂರ್ವ ಸಂಘಟನೆಯನ್ನು ತಿಳಿಸಿತು. ಅದು ಗುಪ್ತಧನವಲ್ಲವೆಂದು, ಎಲ್ಲರಿಗೂ ಲಭಿಸುವಂತೆ ಸ್ಫೂರ್ತಿಯು ನೆರವಾಗಿ ಕೃತಿ ಸಿದ್ಧವಾಯಿತು.

ಅಹಲ್ಯಾ ವೃತ್ತಾಂತವು ನಮಗೆ ಹೊಸದಲ್ಲವಾದರೂ ಆಕೆಯ ವಿಚಾರವನ್ನು ವಿಶದವಾಗಿ ತಿಳಿಯಬೇಕೆಂಬ ಕುತೂಹಲ ಮಾತ್ರ ನಮ್ಮನ್ನು ಬಿಟ್ಟಿಲ್ಲ. ಆ ಕಥೆ ಅಷ್ಟು ಅಸ್ಪಷ್ಟ, ಸಂದಿಗ್ಧ, ಸಂಶಯಾತ್ಮಕ, ಸಮಸ್ಯಾಪೀಡಕ. ಪಾಪ ಪುಣ್ಯ, ಧರ್ಮಾಧರ್ಮಗಳ ಅಳವರಿಯಲು ಇಳಿದಂತೆ ತಳವೇ ಕಾಣದಂತಾಗುತ್ತದೆ. ಅಂತಹ

ವಿಲಕ್ಷಣ ಚರಿತೆಯದು. ಬಹು ಸಂತೋಷವಾಗಿ ವಿಶ್ವಾಮಿತ್ರ ಮಹರ್ಷಿಯು ರಾಮ ಲಕ್ಷ್ಮಣರಿಗೆ ಅವುದೋ ಒಂದು ವ್ಯಾಜದಿಂದ ಆ ಕಥೆಯನ್ನು ತಿಳಿಸುವರು. ಅಷ್ಟ ರಿಂದಲೇ ಅಹಲ್ಯೆಯ ಪರಿಚಯ ಸಾಕಾಗುವುದಿಲ್ಲ. ಅತ್ಯಂತವಾಗಿ ಆಕೆಯ ವೃತ್ತಾಂತ ವನ್ನರಿಯಲು ಸಹಜವಾಗಿ ಒಂದು ಆಶೆಯು ಉಂಟಾಗುತ್ತದೆ. ಆಕೆಯ ಸ್ಮರಣೆಯಾ ದಾಗ ಅವುದೋ ಸಂಶಯವೂ, ಹಿಂದೆಯೇ ಒಂದು ಪ್ರಶ್ನೆಯೂ ಏಳುತ್ತದೆ. ಅವು ಮನಸ್ಸನ್ನು ಕಲಕುತ್ತವೆ. ಅದೇಕೆ ಹೀಗಾಗಬೇಕು? ಅಹಲ್ಯೆಯ ಮೇಲೆ ನಮ ಗೇಕೆ ಇಂತಹ ಅಭಿಮಾನ? ದೋಷವನ್ನಾರೋಪಿಸಲು ನಮಗೆ ಇಷ್ಟವಿಲ್ಲ; ಆಕೆ ಯಲ್ಲಿ ಅಸಮಧಾನ ಪಡುವುದಕ್ಕೂ ಮನಸ್ಸು ಒಪ್ಪುವುದಿಲ್ಲ. ಗೌತಮನೇ ಕನಿಕರಿ ಸಿದ ಮೇಲೆ ನಮಗಿನ್ನು ಕೋಪಕ್ಕೆ ಅವಕಾಶವೆಲ್ಲಿ? ಆದರೆ ನಮಗೆ ಸಮಾಧಾನ ವಾಯಿತೇ? ಎರಡು ಯುಗಗಳ ಹಿಂದಿನ ಮಾತು. ಇನ್ನೂ ಸಮಾಧಾನದ ಪ್ರಯ ತ್ನವೇ ಸಾಗುತ್ತಿದೆ. ಈ ಅನುಮಾನ, ಪ್ರಶ್ನೆ, ಸಮಸ್ಯೆಗಳೇ ಸಾಹಿತ್ಯ ಜೀವನ ವ್ಯವ ಸ್ಥೆಗೆ ಉಪಕಾರ ಮಾಡುವ ಪರಿಣಾಮಕಾರಿಗಳಾಗಿವೆ. ಈ ಅವಕಾಶವನ್ನೇ ಕವಿ ಪುರೋಹಿತರು ಸದುಪಯೋಗ ಮಾಡಿಕೊಂಡರು. ಅಹಲ್ಯೆಯನ್ನು ಕುರಿತು ಮನಸ್ಸಿನಲ್ಲುಂಟಾದ ಆಂದೋಳನ ನಮಗಿಂತ ಶತಾಧಿಕವಾಗಿ ಕವಿಗಾಯಿತು. ಅನೇಕ ಪ್ರಶ್ನೆಗಳೆದ್ದವು. ಸರ್ವ ಸಾಹಸದಿಂದ ಒಂದು ಸಮಾಧಾನವನ್ನು ಹೊಂದುವುದೇ ಕವಿಯ ಪ್ರಯತ್ನ. ಈ ಪ್ರಯತ್ನ ಬಹುಮಟ್ಟಿಗೆ ಸಫಲವಾದಾಗ ಕಾವ್ಯ ಸತ್ಕೃತಿ ಯಾಗುವುದು. ಇದು ದನಿದ್ದಂತೆ ಬಣ್ಣಿಸುವುದು ಅತಿಶಯವಲ್ಲ. ಕವಿಯ ಜಾಣ್ಮೆ ಪ್ರತಿಭೆಯ ಅಪೂರ್ವ ಸೊಬಗು ತೋರುವುದು, ಅಸಂಬದ್ಧ, ಅತಂತ್ರ, ಅಸಂತುಷ್ಟ ವಿಷಯಗಳ ವಿವೇಚನೆಯಲ್ಲಿ. ಆ ಸಮಸ್ಯೆಗಳನ್ನು ಬಿಡಿಸುವ ಸಾಮರ್ಥ್ಯದಲ್ಲಿ. ತೊಡ ಕಿರುವುದನ್ನು ನೋಡದೆ ಹಾಗೆಯೇ ನುಸಳಿ ಹೋಗುವುದು ಜಾಣ್ಮೆಯಲ್ಲ; ಅಲ್ಲಿ ಪರಿಣತೆ ಇಲ್ಲ, ಆಚರಣೆಗೆ ಉದ್ದೇಶವೂ ಇಲ್ಲ, ಸಿದ್ಧಿಯೂ ಇಲ್ಲ. ಈ ಕೃತಿ ಅಂತಹ ಅಪಕ್ವಪಾಕವಲ್ಲ. ಈ ಅಹಲ್ಯೆ ಪತಿತಳಲ್ಲ. ಪತಿತಪಾವನೆ. ತಂಪು ಬಗೆಯ ತನ್ವಿ ಯಾಕೆ. ಸೊಂಪಿನ ಸಾರವಾಕೆ. ಅಸಮಾನ್ಯ ಪಾತ್ರವದು. ಗೌತಮನಂತಹ ಮಹಾತ್ಮನ ಮಡದಿ, ತಪೋವನ ವಾಸಿನಿ. ಇಂಥವಳು ದುಷ್ಕಾಮಕ್ಕೆ ಬಲಿಯಾಗುವುದೆಂತು, ಇಂದ್ರನಂತಹದೇವೋತ್ತಮನು, ಧರ್ಮ ಪೋಷಕನು, ಮುನಿಪತ್ನಿಯಲ್ಲಿ ಅನುರಕ್ತ ನಾಗುವುದೆಂದರೇನು? ಕೇವಲ ಅಸಮರ್ಪಕವಾದ ವಿಪರೀತ ಘಟನೆಯಲ್ಲವೆ? ಇದರ ಉಗ್ರತಮ ಸ್ವರೂಪವು ಕವಿಗೆ ಹಿತವಾಗಲಿಲ್ಲ. ಒಂದು ಸೌಮ್ಯ ಸ್ವರೂಪವನ್ನಾತನು ಗ್ರಹಿಸಿದನು.

ಪಾತ್ರಗಳ ಸ್ವರೂಪ ಸ್ವಭಾವ ನಿರ್ಣಯ ಮಾಡುತ್ತಾ ಒಂದು ಸಮಾಧಾನವು ಕವಿಗೆ ಉಂಟಾಯಿತು. ಒಂದು ದೊಡ್ಡ ತತ್ವ ನಿರೂಪಣಕ್ಕಾಗಿ ಈ ಕಥೆ ನಡೆದಿರಬೇಕು. ಅಹಲ್ಯೆಗೆ ಇಂದ್ರನ ಸಂಬಂಧ ಒಂದು ಅನಿವಾರ್ಯ. ಅದು ವಿಧಿ ಪ್ರೇರಣೆ. ಅದೊಂದು ವಿಷಮ ಪರೀಕ್ಷೆ. ಉತ್ತಮ ಜನ್ಮದಲ್ಲಿ ಕ್ಷಣಿಕ ಚಾಪಲ್ಯದ ಪಾಪಾ

ಚರಣೆಯಾಗಲು ಗುರುತರವಾದ ಕಾರಣ, ಪ್ರಕೃತಿಯ ವಕ್ರಸಂಧಾನ ಎಂದು ಮನದಲ್ಲುಂಟಾದ ಮಥನ ಕ್ರಿಯೆಯಿಂದ ವಸ್ತುವೀ ರೀತಿಯಲ್ಲಿ ತೇಲಿ ಬಂತು.

ಪ್ರಕೃತಿಯ ರೀತಿ ನೀತಿ ಅತಿ ಸೂಕ್ಷ್ಮ; ಅತಿ ಗಹನ. ಆ ಶಕ್ತಿ ಪ್ರಯೋಗಕ್ಕೆ ಎಲ್ಲಿಯೂ ತಡೆಯಿಲ್ಲ. ರಾಗಿಗಳೇನು? ವಿರಾಗಿಗಳೇನು? ಸುರರೇನು? ನರರೇನು? ಎಲ್ಲರೂ ಆ ಶಕ್ತಿಗೆ ಅಧೀನರೇ. ಆ ಶಕ್ತಿ ರಸಮಯ, ರಾಗಮಯ. ರುದ್ರ ನೀರಸ ವೃತ್ತಿಯವಕ್ಕೆ ಸಹಿಸದು. ಅಂತಹ ಚಿತ್ತವೃತ್ತಿಯನ್ನು ಸಹ ಜಗ್ಗಿಸಿ ಬಗ್ಗಿಸಿ ಗೆಲ್ಲುವ ಚಪಲ ಒಂದು ಚೇಷ್ಟೆಯಾಗಿದೆ, ಪ್ರಕೃತಿಗೆ ಸ್ನೇಹ ಪ್ರೇಮ ಮೋಹ ಭ್ರಾಂತಿಗಳ ಸೆಳವು ಆ ಚೇಷ್ಟೆಯ ಪ್ರಭಾವ. ಆ ಪ್ರಭಾವಕ್ಕೆ ಸಹಜವಾಗಿ ಜೀವಗಳು ಸಿಕ್ಕಿ ಬೀಳುತ್ತವೆ. ಆ ಸೆಳೆತಕ್ಕೆ ಜಗ್ಗದ ದಾರ್ಢ್ಯಗಳ ಅತ್ಯಪೂರ್ವ. ಸುಲಭವಾಗಿ ಆಕರ್ಷಿತರಾಗುವವರೇ ಹೆಚ್ಚು. ಇದನ್ನು ಭ್ರಮಿತ ವಿಕಾರವೆಂದು ಹೇಳಬಹುದು. ಅದೊಂದು ವಿಚಿತ್ರಾವಸ್ಥೆ. ಈ ಆಕರ್ಷಣೆಯಿಂದಲೇ ಅದರಲ್ಲಿ ಜೀವಕ್ಕೆ ಆತ್ಮೀಯ ಭಾವ ಉಂಟಾಗುತ್ತದೆ. ಅದು ಅತ್ಯಂತ ಪ್ರಿಯವಾಗುತ್ತದೆ. ಈ ಭಾವ ಪರಸ್ಪರವಾದುದು. ಇಂತಹ ಆಪ್ತ ಸಂಬಂಧ ಎಲ್ಲ ಜೀವನಕ್ಕೆ ಆಸರೆಯಾಗಿದೆ. ಈ ಆಸರೆಗೆ ಆಧಾರವಾದ ಸ್ನೇಹ, ಪ್ರೇಮ, ಮಮತೆಗಳಿಗೆ ಪ್ರತಿ ಪುರಸ್ಕಾರಾಶಯ ಉಂಟು.

ತಪೋನಿಷ್ಠನಾದ ಗೌತಮನಿಂದ ಅಹಲ್ಯೆ ಇಂತಹ ಪುರಸ್ಕಾರವನ್ನು ನಿರೀಕ್ಷಿಸುತ್ತಾಳೆ. ನವತಾರುಣ್ಯ, ಜೀವನದ ನವನವೋದಯದ ರಾಗಕ್ಕೆ ಕಿವಿ ನಿಮಿರುತ್ತಿದೆ. ಚಿತ್ತ ಚಿಗುರುತ್ತಿದೆ. ಆಕೆಗೆ ಪತಿಯೊಲವು ಬೇಕು. ಆತನ ಸವಿಮಾತು ಬೇಕು. ಪ್ರೇಮ ತೃಷೆಯಲ್ಲಿ ರಸನೆಯಾರಿತ್ತು. ರಾಗಪ್ರದಕ್ಕಾಗಿ ಆಗ ಹಂಬಲಿಸುತ್ತಾಳೆ. ಇದು ಸದಾಶಯ. ಈ ರಾಗಲೋಭ ಗೌತಮನನ್ನು ಅಷ್ಟಾಗಿ ಕಾಡಲಿಲ್ಲ. ಅಹಲ್ಯೆಯೊಂದಿಗೆ ಸಂಸಾರ ಹೂಡಿ ಒಬ್ಬ ಮಗನನ್ನು ಪಡೆದಮೇಲೆ ಯೋಗ ಲೋಭಕ್ಕೆ ಆತ ಮನ ತೆತ್ತನು. ತಪವು ಆತನ ಧ್ಯೇಯ. ಅದಕ್ಕಾಗಿಯೇ ಬಂದವನಾತನು. ಸ[illegible] ರಾಗ ಭಂಗವು ಆತನ ಉದ್ದೇಶವಲ್ಲ. ಆತನ ಲಕ್ಷ್ಯವು ಅತ್ತಕಡೆ ಇರಲಿಲ್ಲ ಮಾತ್ರ. ಇಲ್ಲಿ ಗೌತಮನ ಮೇಲೆ ದೋಷಾರೋಪಣೆಗೆ ಅವಕಾಶವಿಲ್ಲ. ಆದರೆ ಪಾಪದ ಪ್ರವೇಶ ಎಂತಾಯ್ತು? ಯಾರು ಕಾರಣರು?

ಇದರಲ್ಲಿ ಇಂದ್ರನೂ ಒಂದು ಪ್ರಧಾನ ಪಾತ್ರ. ಆತನೆಂತವನು? ಅಕಾರಣವಾಗಿ ಆತನು ಗೌತಮನ ಆಶ್ರಮಕ್ಕೆ ಬರುವನೇ? ಇಂದ್ರನ ಬರುವಿಕೆಗೆ ಗೌತಮನ ಉಗ್ರ ಯೋಗನಿಷ್ಠೆಯು ಕಾರಣವಾಯಿತು. ರಾಮಾಯಣದಲ್ಲಿಯೂ ಈ ಸೂಚನೆ ಇದೆ. ಇಂದ್ರನು ದುಷ್ಟನಲ್ಲ, ಯೋಗಿಗಳಲ್ಲಿ ಆತನಿಗೆ ಪೂಜ್ಯಭಾವ ಉಂಟು. ಗೌತಮನ ವಿಚಾರದಲ್ಲೂ ಮರ್ಯಾದೆ ಮೀರಿದ ಮಾತು ಆತನ ಬಾಯಲ್ಲಿ ಎಲ್ಲಿಯೂ ಬಂದಿಲ್ಲ. ಆತನ ಪ್ರವೇಶಕ್ಕೆ, ಮೂರು ಲೋಕಗಳನ್ನೂ ಗೆಲ್ಲುವ ಬಲಕ್ಕಾಗಿ ಗೌತಮನು ಕೈಕೊಂಡ ಯೋಗವೇ ಕಾರಣವಾಯಿತು. ಅಹಲ್ಯೆಯನ್ನು ನೋಡುವವರೆಗೆ ಆತನಿಗೆ ಮತ್ತಾವ ಅಭಿಪ್ರಾಯವೂ ಇರಲಿಲ್ಲ.

ಆದಿಯಿಂದ ಭುವಿಗೂ ದಿವಿಗೂ ಒಂದು ಸಂಬಂಧ ಬೆಳೆದುಬಂದಿದೆ. ದಾನವರ ಸ್ವಾಮಿತ್ವವನ್ನು ಭುವಿಯವರು ಒಪ್ಪಿಕೊಂಡು ಅವರಿಗೆ ವಿಧೇಯರಾಗಿದ್ದಾರೆ. ಮಳೆ ಗಾಳಿ ಬಿಸಿಲುಗಳನ್ನೊಂದಿದ ಕೃತಜ್ಞತೆಗಾಗಿ ಯಜ್ಞ ಯಾಗಾದಿಗಳಿಂದಲೂ, ತಪಸ್ಸಿನಿಂದಲೂ ದೇವತೆಗಳನ್ನು ತೃಪ್ತಿಗೊಳಿಸುತ್ತಾರೆ. ಹವಿಯುಣಿಸಿನಿಂದ ತೃಪ್ತರಾಗಿ ಆಗಸದ ಆಡುಂಬೊಲದಲ್ಲಿ ಸತತ ಬಿನದಿಗಳಾಗಿರುವವರು ಸುರರು. ಅವರಿಗೆ ಬಯಕೆಗಳ ಬಾಧೆಯಿಲ್ಲ. ಅವರ ಹುಟ್ಟು ಸಂತಸಕ್ಕೆಂದೇ ಆಯಿತು. ಅವರಿಗೆ ಯಾವ ಕಟ್ಟೂ ಇಲ್ಲ. ಅವರ ವೈಭವಕ್ಕೂ, ಭೋಗಕ್ಕೂ ಯಾವ ಬಗೆಯಲ್ಲೂ ಬಾಧೆ ತಟ್ಟದಂತೆ ಬೆಂಗಾವಲಿಗೆ ವಸಂತ, ಮದನ ಇವರು ಸಿದ್ಧರಾಗಿರುತ್ತಾರೆ. ಸುರಸುಖ ಸಂರಕ್ಷಣ ದಕ್ಷರಾಗಿ ಬೇಹುಗಾರರು ಎಲ್ಲ ಕಡೆಯ ವಿದ್ಯಮಾನಗಳನ್ನೂ ಪರಿಶೀಲಿಸುತ್ತಾ ಸಂಚರಿಸುತ್ತಾರೆ. ಈ ಉದ್ಯಮದಲ್ಲಿ ಅಪ್ಸರೆಯರು ಕೂಡಾ ಭಾಗವಹಿಸುತ್ತಾರೆ. ರಂಭೆಯು ಗೌತಮನ ಯೋಗ ಸಾಧನೆಯ ವಿಚಾರವರಿತು ಅದನ್ನು ಕೆಡಿಸ ಬಂದು ಭಂಗ ಹೊಂದುವುದೇ ಕತೆಗೆ ಮೊದಲು. ಇದು ಮುಂದಿನ ಆಭಾಸ ಪ್ರಕರಣಕ್ಕೆ ಒಂದು ಆಧಾರವಾಯಿತು. ರಂಭೆಯನ್ನು ಸಂತೈಸಿ ಇಂದ್ರನು ಗೌತಮ ವ್ರತ ಭಂಗಕ್ಕಾಗಿ ಮಾರನನ್ನು ಕರೆಸುವನು. ಈ ಕಲ್ಪನೆಯೆಲ್ಲಾ ಸಮರ್ಪಕವಾಗಿ ಬಂದಿದೆ.

ಇಂದ್ರನು ಅಹಲ್ಯೆಯನ್ನು ನೋಡುವುದು ಅದೇ ಮೊದಲು. ಆಕೆಯನ್ನು ನೋಡಿ ಆ ಸೌಂದರ್ಯಕ್ಕೆ ಆತನು ಆಶ್ಚರ್ಯ ಪಡುವನು. ರಸ ಚಿಮ್ಮುವ ರಾಗದ ಹಂಬಲಕ್ಕೆ ಮನಸೋಲುವನು. ಆಕೆಯ ಶುಷ್ಕ ಜೀವನಕ್ಕೆ ಮರುಗುವನು. ಅಹಲ್ಯೆಯಾದರೋ ಪತಿಯ ಅನುರಾಗಾಸಕ್ತೆ. ಅದರಿಂದ ವಿರಹಿಣಿಯಾಗಿ ಮೌನ ವ್ಯಥಿತ ಉದಾಸೀನದಲ್ಲಿ ಕಾಲ ನೂಕುತ್ತಿದ್ದಾಳೆ. ಹುಮ್ಮಸ್ಸಿಲ್ಲದೆ, ನೆಮ್ಮದಿ ತಾಳದೆ ಕಾಲದೊಂದಿಗೆ ಹೋರಾಡುತ್ತಿದ್ದಾಳೆ. ಆಶ್ರಮದಲ್ಲಿ ಮಗನ ಲಾಲನೆ ಪಾಲನೆಗಳಲ್ಲಿ ನಿರತಳಾಗಿ ನಿತ್ಯ ಹೋಮಾಗ್ನಿಯನ್ನು ಸೇವಿಸುವ ನೆಪದಲ್ಲಿ ಪತಿಯನ್ನು ಅರ್ಚಿಸುತ್ತಾಳೆ. ಅದೊಂದು ಪದ್ಧತಿಯಾಯಿತ್ತಲ್ಲದೆ ಭಕ್ತಿ ಶ್ರದ್ಧೆಗಳ ಪ್ರತಿಷ್ಠೆ ಆಕೆಯ ಮನಸ್ಸಿನಲ್ಲಾಗಲಿಲ್ಲ. ಪತಿಯು ಮಾಡುತ್ತಿದ್ದ ಸಾಧನೆಯಲ್ಲೂ ಆಕೆಯ ನಂಬಿಕೆಯ ಬಿಗಿ, ಧೈರ್ಯದ ಬಲ ಸಾಲದು. ಆಕೆಯ ಅಂತರಂಗದ ಒಂದು ಮೂಲೆಯಲ್ಲಿ ಕಂಡೂ ಕಾಣದಂತೆ ರಾಗದ ಕಿರು ಹಣತೆಯೊಂದು ಮಿನುಗುತ್ತಿದೆ. ಮಾಟಗಾತಿಯಾದ ಪ್ರಕೃತಿಯು ಅದಕ್ಕೆ ತೈಲವೆರೆಯುತ್ತಿದ್ದಾಳೆ. ಅದನ್ನು ನಂದಿಸಲು ಅಹಲ್ಯೆಗೆ ಸಂಯಮ, ಶಿಕ್ಷಾಬಲ ಸಾಲದು. ಒಣ ಹಂಬಲಿನ ಆಂದೋಲನವಾಗುತ್ತಿದೆ ಮನಸ್ಸಿನಲ್ಲಿ. ಮಾರನು ಬಂದು ಗೌತಮನ ರಾಗವನ್ನೆಚ್ಚರಿಸಿ, ಆತನ ಹುಚ್ಚನ್ನು ಹಾಸ್ಯಮಾಡುತ್ತಾ ತನ್ನ ಬಿಲ್ವಿದ್ಯಾ ಚಾತುರ್ಯವನ್ನೆಲ್ಲಾ ಪ್ರಯೋಗಿಸಿ ಬಾಣ ಹೂಡುವನು. ಆ ಸಮಯದಲ್ಲಿ ಅಗ್ನಿಪೂಜೆಗೆ ಬಂದ ಅಹಲ್ಯೆ ವ್ರತಮುಗಿಸೆಂದು ಬೇಡುವಳು. ಪ್ರೇಮಯಾಚನೆ ಮಾಡುವಳು. ಬಹು ಸಭ್ಯರಾಗವು ಇಲ್ಲಿ ಕಳೆಕಟ್ಟಿದೆ.

'ಏನು ಹೇಳಲಿ ನಿನ್ನ ಸ್ವಾರ್ಥಕೆ? ಎಂಥ ಮರವೆಯೋ ಇನಿಯ?' ಎಂಬ ಪೀನ ವಾಣಿಯು ಜತೆಗೆ ಮಾರನು ಬಿಲ್ಲುಮೀಟುವುದು ಸೇರಿತು. ಮರುಳ ತನಸಿ, 'ಜಂಭನಾರಿ' ಪ್ರೇಮಕೃಪಣ ಎಂಬ ಸಂಬೋಧನೆ ಗೌತಮನನ್ನು ಚುಚ್ಚಿತು. ಇವನ್ನು ನೋಡುತ್ತಾ ನಿಂತಿದ್ದ ಇಂದ್ರನಿಗೂ ಬಾಣ ತಗಲಿತು. ರಾಗವಿಕಾಸ ವಿಕಾರಕ್ಕೆ ತಿರುಗಿತು.

ಅಹಲ್ಯೆ ಪತಿ ಸಾನ್ನಿಧ್ಯದಿಂದ ಹಿಂದಿರುಗಿದ ಮೇಲೆ ಇಂದ್ರನು ಆಕೆಯನ್ನು ಹೊಂದುವುದಕ್ಕಾಗಿ ಮಾಡುವ ತಂತ್ರದಿಂದ ಸಿಡಿಲು ಮಿಂಚು ಗುಡುಗುಗಳ ಆರ್ಭಟ, ಪ್ರಕೃತಿಯ ಭೀಕರ ದರ್ಶನ ಇವೆಲ್ಲಾ ಅಹಲ್ಯೆಗೆ ಭೀತಿಯನ್ನು ಹುಟ್ಟಿಸುತ್ತವೆ. ರಂಭೆಗಾದ ಪರಿಭವಕ್ಕೆ ಇಂದ್ರನೆಲ್ಲಿ ಕೋಪಿಸುವನೋ ಎಂದು ಮೊದಲೇ ಕಳವಳ ಗೊಂಡಿದ್ದ ಅಹಲ್ಯೆ ಇದರಿಂದ ಮತ್ತೂ ಭೀತಳಾಗಿ ಇಂದ್ರನ ಅನುಗ್ರಹಕ್ಕಾಗಿ ನೋಂಪಿಯನ್ನಾಚರಿಸುತ್ತಾಳೆ. ಇದಕ್ಕಾಗಿಯೇ ಹಂಚಿಕೆ ಮಾಡಿ ಹೊಂಚಿದ್ದ ಇಂದ್ರನು ಪ್ರಸನ್ನನಾಗುವನು. ಪ್ರಕೃತಿಯಲ್ಲಿ ಇದ್ದಕ್ಕಿದ್ದಂತೆ ವ್ಯತ್ಯಾಸವಾಗುವುದು. ಕವಿಯ ಹೊಣೆಗಾರಿಕೆ, ಹೆಣೆಗಾರಿಕೆ ಎಲ್ಲಾ ಈ ಪ್ರದೇಶದಲ್ಲಿ ತುಂಬಿದೆ. ಬಹು ಜಾಗರೂಕತೆಯಿಂದ ಈ ಪ್ರಧಾನಾಂಕವು ಸಿದ್ಧವಾಗಿದೆ.

ಇಂದ್ರನು ಅಹಲ್ಯೆಯನ್ನು ಹೊಂದುವ ಆಕಾಂಕ್ಷೆ ಸಾಧ್ಯವೇ? ಅವನು ಬಂದ ಕೆಲಸವೇನು? ಇಲ್ಲಿ ಆದುದೇನು? ಅದಕ್ಕೆ ಕಾರಣ ಹೀಗಿದೆ: ದಿನದ ಭೋಗದಲ್ಲಿ ಹಸಿವಿಲ್ಲ, ತೃಷೆಯಿಲ್ಲ. ಆ ಕಾಮದಲ್ಲಿ ಆಸೆ ಹಿಂಗಿಹೋಗಿದೆ. ಪ್ರೇಮದ ಹಂಬಲ ಅಣಗಿದೆ. ಒಲವು ಬಲವಂತವಾಗಿ ಅನುಭವಿಸುವಂತಾಗಿದೆ. ಆಸೆ ಹಂಬಲ ಒಣಗಿದ ರಾಗಾನುಭವ ರಸಹೀನವೃತ್ತಿಯ ಒಂದು ವಿಲಕ್ಷಣ ಪದ್ಧತಿಯಾಗಿ ನಂದನವನ ವಿಹಾರ ಬೇಸರವಾಗಿದೆ. ಸುರಸುಂದರಿಯರ ಸೇವೆ ಸಾಕಾಗಿದೆ. ತಿರೆಗಿಳಿದಂದ ಮಾರನು, "ಬೇಸರದೀ ಬಿಡುಗಣ್ಣರನುಳಿದೆನೋ, ಸೊದೆ ಕುಡಿದೂ ಮತ್ತೇರದು, ಇಲ್ಲಿ ನೂರಂಬೆಸೆದರು ಕೆರಳದು ಕಾಮ-ಏನು ಭೋಗಿಯೋ ಕಾಣೆ ಸುತ್ರಾಮ." ಎಂಬ ಮಾತುಗಳು ಇದಕ್ಕೆ ಪುಷ್ಟಿ ಕೊಡುತ್ತದೆ. ಅಹಲ್ಯೆಯ ಹಂಬಲ, ಆ ವೈಸ್ಯತೆ, ಆ ಮೊರೆ ಇವೆಲ್ಲಾ ದಿವದ ಶೀವಿಯನ್ನು ಅಣಕಿಸಿದಂತಾಗಿ ನಿಜ ರಾಗದ ಪ್ರಭೆಯು ಆಕೆಯಲ್ಲಾತನಿಗೆ ಕಾಣುವುದು. ಇದರಿಂದ ಧರ್ಮಾಧರ್ಮ ವಿವೇಚನೆಗೆ ಅವನು ಪ್ರಯತ್ನಿಸುವುದೇ ಇಲ್ಲ. ರಾಗ ಲೋಭದಿಂದ ವಶನಾಗಿ "ಹಲವು ಮಾತಿಂದೇನು? ಮದನ, ಒಲಿದನೆಂದರೆ ಸಾಲದೇ?" ಎನ್ನುವ ಮಾತಿನಲ್ಲಿ ಇಂದ್ರನ ಮನಸ್ಥಿತಿಯನ್ನು ಹಿಸಬಹುದು.

ಎಂತಹ ಅನಿವಾರ್ಯವಾಗಲಿ, ಯಾವ ಕಾರಣವಾಗಲಿ ಎಷ್ಟು ಸೂಕ್ಷ್ಮವಾಗಿ ಭೇದಿಸಿದರೂ ಅಹಲ್ಯಾ-ಇಂದ್ರರ ಸಂಬಂಧದಲ್ಲಿ ಸತ್ಯ ಸಮರ್ಥನೆ ಇಲ್ಲ. ಯಾರ ಸಮಾಧಾನವೂ ಅದನ್ನು ಪುಷ್ಟೀಕರಿಸುವಂತಿಲ್ಲ. ಅಧೈರ್ಯವೆಲ್ಲಿ ತಲೆ ಹಾಕಿತೋ ಅಲ್ಲಿ ಅವಿವೇಕ ಪ್ರತಿಷ್ಠೆಯಾಯಿತು. ಧರ್ಮಕ್ಕೆ ಧಕ್ಕೆ ತಗುಲಿತು. ಕ್ಷಣ ಮಾತ್ರ

ದಲ್ಲಿ ಅಹಲ್ಯೆಗೆ ಜ್ಞಾನೋದಯವಾಯಿತು. ಗೌತಮನ ಭೀತಿಯಿಂದ ಆಕೆ ನಡುಗಿದಳು. ಇಂದ್ರನಿಗೂ ತಾನು ಮೇಲಿನವ, ತನ್ನ ಬಾಧ್ಯತೆ ಇಂಥದು ಎಂಬ ಹೆಮ್ಮೆ ಇದ್ದರೂ, ಆ ಭೀತಿ ಅವನನ್ನೂ ತಾಗದಿರಲಿಲ್ಲ.

ಅದೇ ಸಮಯಕ್ಕೆ ಗೌತಮನೂ ವ್ರತಬಿಟ್ಟು, ರಾಗಕ್ಕೆ ಮನತೆತ್ತು ಮಡದಿಯನ್ನು ನೋಡಬರುವನು. ಬಂದುದೇನಾಯ್ತು ? "ಜಗಜಗವೇ ನಗುವಂತಾಯ್ತು, ಆತ್ಮ ಸಂಯಮ ಪೆಚ್ಚ." ವ್ರತಗೆಟ್ಟು ಬಂದು ಆತನು ಪಾಪ ಕೋಪಕ್ಕೆ ಶಾಪತಾಪಕ್ಕೆ ಸಿಕ್ಕಾದನು. ಆದರೂ ಗೌತಮನು ಬಲು ದೊಡ್ಡವನು. ಪತಿತರನ್ನು ಕಾಲಿನಿಂದ ತುಳಿವವನಲ್ಲ. ಮೇಲೆತ್ತುವಂತಹ ಉದಾರಿ. ಒಂದೇ ನೋಟದಲ್ಲಿ ಇಬ್ಬರನ್ನೂ ದಗ್ಧ ಮಾಡುವಂಥ ಸಾಮರ್ಥ್ಯವಿತ್ತಾದರೂ ಆತನು ಕಿಂಚಿತ್ ಕೋಪದಿಂದ ಶಪಿಸಿದುದು ಕೂಡ ವಿಧಿಯಿಲ್ಲದ ಕರ್ತವ್ಯವಾಗಿತ್ತು. ಅಲ್ಲಿಯೂ ಸಂಯಮಧನನಾದ ಆತನು ಮಿತಿಯರಿತು ಶಪಿಸಿದನು. ಆ ಶಾಪವು ಕೂಡಾ ಒಂದು ಅನುಗ್ರಹ ರೂಪದಲ್ಲಿಯೇ ಆಯಿತು. ಈ ಘಟನೆಯು ಎಂತಹ ಅಚಾತುರ್ಯ ಎಂಬುದನ್ನು ಗ್ರಹಿಸಿ ಪಶ್ಚಾತ್ತಾಪದಿಂದ ಮರುಗಿದನು. ತಾನದಕ್ಕೆ ಎಷ್ಟು ಮಾತ್ರ ಕಾರಣನೆಂಬುದನ್ನು ಆತನು ಊಹಿಸದಿರಲಿಲ್ಲ. "ಮರುಗುವೆ ನಾನೀ ಹೆಣ್ಣಿಗೆ, ಒಲಿದಳು ದೇವತೆಗೆ. ರಾಗ ಭ್ರಾಂತಿಯೊಳಿಳಿದಳು, ನನ್ನಯ ಮೂಢತೆಗೆ. ವಿಧಿನಿಯಮವ ಮೀರಿದವರಾರ್ ? ಈ ಚೇತನವಿಂತು ಶುದ್ಧಿಗೆ ಬಗೆ ತವಿಸುತ್ತಿದೆ ; ಮಮ ಶಾಪವನಾಂತು" ಎಂದು ಆತನು ಹೇಳುವುದನ್ನು ಕೇಳಿ, 'ಗೌತಮ, ನಿಜವಾಗಿ ನೀನು ಮಹಾತ್ಮನು' ಎಂದು ಯಾರು ತಾನೇ ಹೇಳರು ? ಇಂತಹ ಕರುಣಾಸ್ಪದ ಕ್ಷಮಾಪೂರ್ಣ ಗುಣವು ಆತನ ಧೀಶಕ್ತಿ ಸಂಗ್ರಹಕ್ಕೆ ಸಹಾಯಕವಾಯಿತು. ಪತಿತೋದ್ಧಾರದ ಒಂದು ಉದಾತ್ತ ಕಲ್ಪನೆ ಈ ಕಥೆಯ ಮೂಲತತ್ತ್ವ. ತಪದ ಧ್ಯೇಯ ಪತಿತರನ್ನು ಪುನೀತರಾಗಿಸುವುದು. ತಪಸಿನ ಸಾರ್ಥಕತೆ ಉದಾರತೆ. ಇದು ಈ ಶಾಪಾನುಗ್ರಹದಲ್ಲಿ ಎದ್ದು ಕಾಣುತ್ತದೆ. ತಪವು ಪಾಪ ಸಂಹಾರಕ್ಕಲ್ಲದೆ ಪಾಪಿಗಳ ಸಂಹಾರಕ್ಕಲ್ಲ. ಶಾಪವು ಒಂದು ಶಿಕ್ಷೆ, ಒಂದು ಸಾಧನ ಮಾತ್ರ. ತಪಸ್ವಿಗಳ ಪರಮಾಶ್ರಯದಲ್ಲಿ ಪತನವಿಲ್ಲ, ಪತಿತರಿಲ್ಲ.

ಮುಂದಿನ ಎರಡು ಅಂಕಗಳಲ್ಲಿ ಅಲ್ಲಿಂದ ಮುಂದಿನ ಕಥಾಭಾಗವನ್ನು ವಿಸ್ತಾರವಾಗಿ ಕವಿಗಳು ಹೊಂದಿಸಿದ್ದಾರೆ. ಅಹಲ್ಯಾ, ಗೌತಮರ ಪುನಸ್ಸಮಾಗಮಕ್ಕೆ ಮಾಡುವ ಸಿದ್ಧತೆಯೆಲ್ಲಾ ಬಹು ಸಮರ್ಪಕವಾಗಿದೆ. ಸಲ್ಲಾಪಗಳೆಲ್ಲಾ ಸವಿಯಾಗಿವೆ, ಅಂದು ಮಲಗಿದ ಮಾರನು ಪುನಃ ಏಳುವನು. ಒಲವನ್ನೆಚ್ಚರಿಸ ಬರುವನು. ಬಂದ ಕಡೆಯೆಲ್ಲಾ ನಲಿವ ಬೀಸುವನು, ಚೆಲುವ ಬೀರುವನು. ಮನ ಮುಗ್ಧವಾಗುವಂತೆ ಈ ಸನ್ನಿವೇಶಗಳನ್ನು ಪುರೋಹಿತರು ಜೋಡಿಸಿದ್ದಾರೆ. ತನ್ನಷ್ಟಕ್ಕೆ ತಾನೇ ಯಾವುದೂ ಪೂರ್ಣವಲ್ಲ' ವೆಂಬ ಹಿರಿಯ ತತ್ತ್ವವನ್ನಿಲ್ಲಿ ಪ್ರತಿಪಾದಿಸಿದ್ದಾರೆ. ದಾಂಪತ್ಯದ ಅಪೂರ್ಣ ಪೂರ್ಣತಾಸಿದ್ಧಿ ಇಲ್ಲಿ ಬಲಗೊಂಡಿದೆ.

ಅಹಲ್ಯೆಯನ್ನು ಪುನಃ ನೋಡುವುದು ಕಡೆಯ ಪ್ರವೇಶದಲ್ಲಿ. ರಾಮ-ಲಕ್ಷ್ಮಣರು ತಪೋವನದ ಕಡೆ ಬರುವುದು, ಅಹಲ್ಯೆಯ ಆರ್ತನಾದವಾಲಿಸುವುದು, ಕಡೆಗೆ ಎಲ್ಲರೂ ಕಲೆಯುವುದು. ಎಲ್ಲವೂ ಬಲು ಹಿತವಾಗಿದೆ. 'ನೆನೆವಡೆ ಪೈಲಿಗೆಯಾದೆನೆ' ಎಂಬ ಒಂದು ಮಾತೇ ಸಾಲದೆ ಪಾಪ ಕರಗುವುದಕ್ಕೆ. ಕರಕರಗಿ ಶುದ್ಧವಾದ ಅಪರಂಜಿಯಾಗಿ ಹೊರಗೆ ಬಂದಳು ಪರಮ ಸಾಧ್ವಿ ಅಹಲ್ಯೆ. ಸುಂದರ ಭಾವ, ಜಾಣ್ನುಡಿಗಟ್ಟು, ಹೊಸ ಬೆಳಕು ತುಂಬಿದ ಈ ಕೃತಿಯಲ್ಲಿ ಸಿಡಿಲಿನ ಆರ್ಭಟವಿಲ್ಲ, ಮಿಂಚಿನ ಮೋಹಕತೆಯುಂಟು. ನೈಜವಾದ ಅಂತಃಸ್ಫೂರ್ತಿಯ ಪ್ರಯೋಗ ಕೌಶಲವು "ಭಲೆ! ಭಲೆ! ಇದಲ್ಲವೇ ರಚನೆ! ಇದಲ್ಲವೇ ಶಕ್ತಿ, ಇದಲ್ಲವೇ ಸೌಂದರ್ಯ" ಎಂದು ಹೇಳಿಸುತ್ತದೆ. ಹೃದಯರಾಗ ಮಿಡಿಯಿತು, ಚದುರ ನುಡಿಯು ಕುಣಿಸಿತು, ಮಧುರಭಾವ ಬಳುಕಿತು, ತುಳುಕಿ ತೇಲಿಬಂತು ಕೃತಿ. ವರ್ಣನೆಯು ಕರ್ಣರಸಾಯನವಾಯ್ತು. ನುಡಿಯ ನಡೆ ಸಿಂಗಾರ, ನಾಡ ಮನ ಬಂಗಾರವಾಯ್ತು. ರಾಗಯೋಗ ಸಂಗಮದ ತಪೋರಂಗದ ನಿವಾಸಿಗಳ ದಿವ್ಯಾತ್ಮಗಳ ಸಂದರ್ಶನ ಮಾಡಿಸಿತು ಪುರೋಹಿತರ ಈ ಕೃತಿ. ಕಾವ್ಯಗಂಗೆ ಹರಿಯಿತಿಲ್ಲಿ, ಕಾವ್ಯಾನಂದದ ನಿಜಾನುಭವವಾಯಿತಿಲ್ಲಿ. ನನ್ನ ಬಗೆಯಾದರೂ ಹಿಗ್ಗಿತು.

—1945

ಸಮಾನತೆಯ ಸ್ಪರ್ಧೆ ಎಲ್ಲ ಕ್ಷೇತ್ರಗಳಲ್ಲಿ ರಭಸದಿಂದ ಮುಂದುವರಿಯುತ್ತಿದೆ. ನಾಗರಿಕ ಜೀವನದ ಆಕರ್ಷಣೆ ಅತ್ಯಂತ ಮೋಹಪರವಶತೆಗೆ ಕಾರಣವಾಗುತ್ತಿದೆ. ಆರ್ಯಸಂಸ್ಕೃತಿಯ ಗುರುತುಗಳೆಲ್ಲಾ ಮಾಸಿ ಹೋಗುವಂತೆ ಅನ್ಯ ಸಂಸ್ಕೃತಿ ತನ್ನ ಪ್ರತಿಷ್ಠೆಯನ್ನು ಮೆರೆಸುತ್ತಿದೆ.

—ಭಾರತಿ

ಗೀತಕಾರ ಜಯದೇವ

"ವಾಗ್ದೇವತಾ ಚರಿತ ಚಿತ್ರಿತ ಚಿತ್ತಸದ್ಮಾ
ಪದ್ಮಾವತೀ ಚರಣ ಚಾರಣ ಚಕ್ರವರ್ತೀ
ಶ್ರೀ ವಾಸುದೇವ ರತಿ ಕೇಳಿ ಕಥಾಸಮೇತ–
ಮೇತಂ ಕರೋತಿ ಜಯದೇವ ಕವಿಃ ಪ್ರಬಂಧಂ."

ಜಯದೇವ ಕವಿ ಹನ್ನೆರಡನೆಯ ಶತಮಾನದವನು. ಬಂಗಾಳದ ಸೇನ ಮನೆತನದ ಲಕ್ಷ್ಮಣನ ಆಸ್ಥಾನಕವಿ. ಇವನ ಸ್ಥಳ ಬಿಂದುಬಿಲ್ವ; ಬ್ರಾಹ್ಮಣ; ಭೋಜದೇವ, ರಾಮಾಂಬಾ ದೇವಿಯರು ತಂದೆತಾಯಿಗಳು. ಹೆಂಡತಿ ಪದ್ಮಾವತಿ. ನಾಲ್ಕು ಕೃತಿಗಳನ್ನು ರಚಿಸಿದ್ದಾನೆ. 'ಗೀತಗೋವಿಂದ' ಅವರಲ್ಲೊಂದು. ಶ್ರೀ ವಾಸುದೇವ ರತಿ ಕೇಳಿ (ರಾಧಾ ಮಾಧವ) ಕಥೆಯನ್ನು ರಚಿಸಿದ್ದಾನೆ. 'ಅಷ್ಟಪದಿ' ಎಂದೂ ಇದರ ಹೆಸರು. ಇದನ್ನು 'ಪ್ರಬಂಧ' ವೆಂದು ಜಯದೇವನೇ ಹೇಳಿದ್ದಾನೆ. ಇದು ಶೃಂಗಾರರಸ ಭೂಯಿಷ್ಠವಾಗಿದೆ.

"ತಾನಾದಿ ಸ್ವರ ಗೀತಾನಾಂ
ಕ್ರಮಾದೂರ್ಧ್ವಮಧೋಗತಿಃ"

—ಎಂದರೆ ಪ್ರಬಂಧವೆಂದು ಹಲವರೂ;

"ಚತುರ್ಭಿಃ ಪಂಚಭಿಃ ಷಡ್ಭಿಃ
ಸ್ವರೈಃ ರಾಗ ನಿರೂಪಣಂ"

—ಇದು ಪ್ರಬಂಧವೆಂದು ಹಲವರು ಹೇಳುತ್ತಾರೆ. ಗೀತಗೋವಿಂದ ಪ್ರಬಂಧವು,

ಅಷ್ಟಭಾಷಾ ಪದ್ಯೈರ್ಯುಕ್ತಂ
ಶಬ್ದಝಂಕಾರ ಸಂಯುತಂ
ಸ್ವರರಾಗೈಃ ಪ್ರಗಾಯಂತಿ
ಗೀತಮಿತ್ಯಭಿಧೀಯತೇ॥

ಅಂದ ಮೇಲೆ ಇದು ಸಂಗೀತಕ್ಕೆ ಸಂಬಂಧಪಟ್ಟ ಕಾವ್ಯ. 'ಪದ್ಮಾವತೀ

ಚರಣ ಚಾರಣ ಚಕ್ರವರ್ತೀ' ಎಂದು ಹೇಳಿರುವುದನ್ನು ನೋಡಿದರೆ ಇವನು ತನ್ನ ಹೆಂಡತಿಗೆ ನಾಟ್ಯವನ್ನು ಕಲಿಸಿ ಭರತಶಾಸ್ತ್ರಕೋವಿದನೆನಿಸಿ ಚಕ್ರವರ್ತಿಯೆನಿಸಿದ. ಇವರಿಂದ ತಾನು ಕೈಕೊಂಡ ಕೃತಿಕರ್ಮಕ್ಕೆ ಜಯದೇವನು ಎಷ್ಟುಮಟ್ಟಿನ ಅಧಿಕಾರಿಯಾಗಿದ್ದಾನೆಂಬುದನ್ನು ಅರಿಯಬಹುದು.

ಕವಿಗಳು ಕೃತಿಕರ್ತರಾಗಬಹುದು; ಆದರೆ ಅವರು ಗೀತಕಾರರಾಗಲಾರರು. ಗೀತರಚನಕಾರನು ಕವಿಯೂ ಆಗಿರಬೇಕು; ಸಂಗೀತಕಲಾನಿಪುಣನೂ ಆಗಿರಬೇಕು. ಜಯದೇವನು ಕವಿ ಕಲಾವಿದನಲ್ಲದೆ ಭರತಶಾಸ್ತ್ರಕೋವಿದನೂ ಹೌದು. ಆದ ಕಾರಣವೇ ಆತನ ಗೀತಗೋವಿಂದ ಕಾವ್ಯವು ಸುಮಾರು ಸಾವಿರ ವರ್ಷಗಳಿಂದಲೂ ಸರ್ವಜನಾದರಣೀಯವಾಗಿದೆ. ಅಮೃತ ಕಾವ್ಯವೆನಿಸಿದೆ.

ಜಯದೇವನನ್ನು ಗೀತಕಾರನೆನ್ನುವುದಕ್ಕಿಂತ ಗೀತಾಚಾರ್ಯನೆಂದರೆ ಚೆನ್ನಾಗಿ ಒಪ್ಪುವುದು. ಗೀತರಚನೆಯಲ್ಲಿ ಎಷ್ಟು ಕೌಶಲವಿರಬೇಕೆಂಬುದಕ್ಕೆ ಆತನೇ ಗುರು. ಆತನ ಗೀತಗೋವಿಂದವೇ ಸಾಕ್ಷಿ. ಸಂಗೀತ, ಸಾಹಿತ್ಯ, ಅಭಿನಯಗಳಿಗೆ ಸೋದರ ಸಂಬಂಧವನ್ನು ಕಲ್ಪಿಸಿ ಒಂದನ್ನೊಂದು ಅನುಸರಿಸಿರುವ ರೀತಿಯನ್ನು ಜಯದೇವನ ರಚನೆಯಲ್ಲಲ್ಲದೆ ಮತ್ತೆಲ್ಲಿಯೂ ನೋಡಲಾಗದು. ಶ್ರವಣ, ನಯನ, ಹೃದಯಾಕರ್ಷಣ ಮಾಡುವ ಅತ್ಯುನ್ನತ ಆನಂದ ಪದವಿಯನ್ನಧಿಷ್ಠಿಸಿ ಈ ಅನುಭವವನ್ನು ಸರ್ವರಿಗೂ ನೀಡಲು ಆತನು ಬಯಸಿದ್ದಾನೆ. ಮೈಮರೆತು ಹಾಡಿದ್ದಾನೆ. ಹಾಡಿ ಕುಣಿದು ಕುಣಿಸಿ ಶ್ರೀಕೃಷ್ಣನನ್ನೊಲಿಸಿದ್ದಾನೆ. ಸಾಮಾನ್ಯವಾಗಿ ಗಾನಪಂಥದವರು ಒಂದು ಇಷ್ಟ ದೈವವನ್ನು ನಂಬಿ ಉಪಾಸಿಸುವರು. ರಾಮನನ್ನು ಕೆಲವರೂ, ಕೃಷ್ಣನನ್ನು ಕೆಲವರೂ, ಶಿವ ಶಿವೆಯರನ್ನು ಕೆಲವರೂ ಮರೆಹೊಕ್ಕಿರುವರು. ಈ ಸಾಧನೆಯಲ್ಲಿ ಭಕ್ತಿ ಪ್ರೇಮಗಳು ಪ್ರಧಾನವಾಗಿವೆ. ಎರಡರ ಗುರಿಯೂ, ಪರಿಣಾಮವೂ ಒಂದೇ. ಭಕ್ತಿಕಾಣಿಕೆಯಾಗಿ ಅನೇಕ ರಾಗಮಾಲಿಕೆಗಳನ್ನು ರಚಿಸಿದರೊಬ್ಬರು, ತನ್ನಲ್ಲಿದ್ದ ಜ್ಞಾನ ವಿದ್ವತ್ತುಗಳನ್ನೆಲ್ಲಾ ಧಾರೆಯೆರದರಿನ್ನೊಬ್ಬರು. ದೈನ್ಯ ಹಂಬಲಗಳನ್ನೇ ಆಶ್ರಯಿಸಿ ಕರುಣಾರಸವನ್ನು ಹರಿಸಿದರು ಮತ್ತೊಬ್ಬರು. ಇದಕ್ಕೂ ಮೀರಿ ಪ್ರೇಮಾರ್ತಳಾಗಿ ಮೀರಾ ಆತ್ಮಾರ್ಪಣವನ್ನೇ ಮಾಡಿದಳು. ಜಯದೇವನಾದರೂ ಹಾಗೆಯೇ. ಶ್ರೀಕೃಷ್ಣನಿಗಾಗಿ ಜೀವಿತವನ್ನೇ ಅರ್ಪಿಸಿದನು. ಆತನ ಮಾತು, ಮನಸ್ಸು ದೃಷ್ಟಿ ಎಲ್ಲವೂ ಕೃಷ್ಣನಲ್ಲಿ ಲಗ್ನವಾಗಿತ್ತು. ಜಯದೇವನು ಕೃಷ್ಣನನ್ನೇ ಏಕೈಕ ದೈವವನ್ನಾಗಿ ನಂಬಿದುದು ಕಲಾದೃಷ್ಟಿಯಿಂದ ಸಮಂಜಸವಾಗಿದೆ. ಪ್ರೇಮಾವಲಂಬನಕ್ಕೆ ಕೃಷ್ಣನೇ ಸರಿಯೆಂದು ವೈಷ್ಣವ ಪಂಥದವರು ನಿಶ್ಚಯಿಸಿದಂತಿದೆ. ಜಯದೇವನು ವೈಷ್ಣವರ ಆಚಾರ್ಯನೆಂದು ಹೆಸರಾದವನು. ರಾಸವಿಹಾರಿಯಾಗಿ ಮುರಳೀಧರನಾಗಿ ಸ್ವತಃ ಹಾಡಿ ಕುಣಿದು ನಲಿದವನು ಕೃಷ್ಣ. ಸತ್ಯ ಪರಾಕ್ರಮಿಯಾದ ರಾಮನು ಗಾನಪ್ರಿಯನಹುದೋ ಅಲ್ಲವೋ, ಸ್ವತಃ ಹಾಡಿದವನಂತೂ ಅಲ್ಲ. ರಾಮನಲ್ಲಿ ಮಾತು, ನಗೆ, ವಿಲಾಸ, ಎಲ್ಲವೂ ಮಿತ: ಕೃಷ್ಣನಲ್ಲಿ ಅಪರಿಮಿತ. ಜಯದೇವನ

ಗಾನವನ್ನು ಕೇಳುತ್ತಾ, ನರ್ತನವನ್ನು ನೋಡುತ್ತಾ ಪರವಶನಾಗಲು ರಾಮನಿಗೆ ಅವಕಾಶವಾದರೂ ಎಲ್ಲಿ? ರಾಧಾ ಮಾಧವರ ವಿಲಾಸದಂತೆ ಸೀತಾರಾಮರ ವಿಪಿನ ವಿಲಾಪವನ್ನು ವರ್ಣಿಸಲು ಜಯದೇವನಂತಹ ಸರಸ ಕಲಾ ಕುತೂಹಲಿಗೆ ಸೊಗಸು ವುದೇ? ಈ ರಸಿಕ ಶಿಖಾಮಣಿಯು ರಾಧಾಮಾಧವರನ್ನು ತನ್ನಿಷ್ಟಬಂದಂತೆ ಆಡಿಸುವ ಅಧಿಕಾರವನ್ನು ವಹಿಸಿಕೊಂಡಿದ್ದಾನೆ. ಈ ಅಧಿಕಾರ ಪ್ರಯೋಗವು ಒಂದು ಮಹಾ ಸಿದ್ಧಿಯಲ್ಲಿ ಕೊನೆಗೊಂಡು ಸೌಂದರ್ಯವೇ ಮೂರ್ತಿವೆತ್ತು ಬಂದಂತೆ ಗೀತ ಗೋವಿಂದವು ರಚಿತವಾಯಿತು.

ಗೀತರಚನೆಗೆ ತೊಡಗಿದವರನೇಕರು. ಅವರೆಲ್ಲಾ ಅಭಿನಯಕ್ಕೆ ಅದನ್ನಳ ವಡಿಸಲು ಶಕ್ತರಾಗಲಿಲ್ಲ. ಹಾಗೆ ಬಯಸಲೂ ಇಲ್ಲ, ಅಸಾಧಾರಣ ಪ್ರತಿಭಾ ಸಂಪನ್ನ ನಾಗಿ ಜಯದೇವನು ಬಹು ಸಮರ್ಪಕವಾಗಿ ಆ ಪ್ರಯತ್ನದಲ್ಲಿ ಜಯಶೀಲನಾಗಿದ್ದಾನೆ. ಇದಕ್ಕಾಗಿ ಎಷ್ಟು ಕಾಲ ಶ್ರಮಿಸಿದನೋ ಎಂದೆನಿಸುವುದು ಆಶ್ಚರ್ಯವಲ್ಲ. ಆದರೆ ಆತನು ಅಂತಹ ಕ್ಲೇಶ ಜೀವಿಯಲ್ಲ. ಹತ್ತಾರು ಭಾಷೆಗಳ ಶಬ್ದಕೋಶಗಳನ್ನು ಹರವಿಕೊಂಡು ಹುಡುಕಿ ಪದಗಳನ್ನಾರಿಸಿ ತಿಕ್ಕಿ ತಿಣಿಕಿ, ಜೋಡಿಸಿ ಮಹಾಪ್ರಯತ್ನ ದಿಂದ ಒಂದು ಸೃಷ್ಟಿಯನ್ನು ಮಾಡಿದ್ದರೆ ಇಂತಹ ಸುಂದರ ಗೀತೆಗಳಾಗುತ್ತಿರಲಿಲ್ಲ. ನಾನಾ ಪದಸಮೂಹದ ಒಂದು ಕಂತೆಯಾಗಿರುತ್ತಿತ್ತು. ಅಂತಹ ಅವಾಂತರಕ್ಕೆ, ತಾಪತ್ರಯಕ್ಕೆ ಜಯದೇವನು ಕನಸಿನಲ್ಲೂ ಎಡೆಗೊಡುವನಲ್ಲ. ಸರಳ ಹೃದಯಿ ಯಾದ ಆತನ ಕಾವ್ಯ ಮಾರ್ಗವು ನಿಷ್ಕಂಟಕ. ಸುಗಮ, ಸುಪ್ರಶಸ್ತ ರಾಜಮಾರ್ಗ.

ಗೀತರಚನೆ ಹೇಗಿರಬೇಕು? ಯಾವ ಲಕ್ಷಣಗಳಿಂದ ಕೂಡಿದ್ದರೆ ಗೀತವೆನಿಸಿ ಕೊಳ್ಳುವುದು. ಆ ರಚನೆಗೆ ತೊಡಗಿದವರೆಲ್ಲಾ ಯಾವ ನ್ಯೂನತೆಯೂ ಇಲ್ಲದೆ ಸಮರ್ಪಕವಾಗಿ ಗೀತೆಗಳನ್ನು ಸಿದ್ಧಮಾಡಿರುವರೇ? ಅವುಗಳ ಸೌಲಭ್ಯವೆಷ್ಟು? ವ್ಯಾಪ್ತಿಯೆಷ್ಟು? ಸಂಗೀತಕ್ಕೆ ಉಪಯುಕ್ತ ರಚನೆಯೆಂದರೆ ಅದು ಶ್ರುತಿ ಲಯಬದ್ಧ ವೆಂಬುದು ಸಿದ್ಧವಾದ ಮಾತು. ಇತರ ಸಲಕರಣೆಗಳೆಲ್ಲವೂ ಅದನ್ನನುಸರಿಸಬೇಕು. ಇದಕ್ಕೆ ಒದವಿದ ಸಾಹಿತ್ಯವು ಹೇಗಿದ್ದರೆ ಪರಸ್ಪರ ಅನುಕೂಲವಾದೀತು? ಈ ಅನು ಕೂಲ, ಅಂದರೆ ಹೊಂದಿಕೆಯು ತನ್ನದೇ ಆದ ಒಂದು ವಿಶಿಷ್ಟ ರೀತಿಯಲ್ಲಿದೆ. ಇತರ ಕಾವ್ಯರಚನಾ ಪದ್ಧತಿಯಿಂದ ಭಿನ್ನವಾಗಿದೆ. ಆ ನಿಯಮವೇ ಬೇರೆ, ಈ ಸೌಕರ್ಯವೇ ಬೇರೆ. ಗಣ, ಪ್ರಾಸಗಳ ನಿಯಮಕ್ಕಿಂತ ಯತಿಲಯಗಳ ನಿಯಮಕ್ಕೆ ಲಕ್ಷ್ಯವಿರ ಬೇಕು. ಅವುಗಳನ್ನನುಸರಿಯೇ ಸಾಹಿತ್ಯವು ರೂಪುಗೊಳ್ಳಬೇಕು. ಲಘು ದೀರ್ಘಾ ಕ್ಷರಗಳು ಹೇಗೆ ಹೇಗೆ ಯಾವ ಪರಿಮಿತಿಯಲ್ಲಿ ಬರಬೇಕೆಂಬುದನ್ನರಿಯದೇ ಆದ ರಚನೆ ಯಲ್ಲಿ ತೊಡಕುಗಳು ಹೆಚ್ಚು. ಗಣಗಳು ಲಯಕ್ಕೆ ಹೊಂದಿರಬೇಕು. ಯತಿಸ್ಥಾನಕ್ಕೆ ಭಂಗ ಬರಕೂಡದು, ದೂರಾನ್ವಯವು ಸೇರದು. ಅನುಕ್ರಮವಾಗಿ ಪಾದಗಳು ಅಲ್ಲಲ್ಲಿಗೇ ಅರ್ಥಪೂರ್ಣವಾಗಿ ಹಿಂದೆ-ಮುಂದೆ ತಿರುಗಿಸಿ ಹಾಡುವ ಸೌಲಭ್ಯವು ಗೀತ ದಲ್ಲಿ ಬಹು ಮುಖ್ಯ. ವಸ್ತುವಿನ ಪೂರ್ಣಾಕೃತಿಯಲ್ಲಿ ಪ್ರತಿಯೊಂದು ಭಾಗವೂ

(ಪಲ್ಲವಿ, ಅನುಪಲ್ಲವಿ, ಚರಣಾದಿ) ಬೇರೆ ಬೇರೆಂಯಾಗಿಯೂ, ಒಟ್ಟಾಗಿಯೂ ರಂಜಿಸುವ ಕೌಶಲವೇ ಗೀತಕಾರರಿಗೆ ಅತ್ಯಗತ್ಯ. ಯಾವ ಅಂಶದಲ್ಲಿಯಾಗಲೀ ಕೊರತೆಯುಂಟಾ ದರೆ ಗೀತವು ಅಂದಗೆಡುವದು. ಏನಾದರೂ ಹೆಚ್ಚು ಕಡಿಮೆಯಾಗಿ ವಿಷಮ ಗಣ ಗಳಿಂದಲೋ ಪಾದಾಂತ್ಯದಲ್ಲಿ ಪದಾರ್ಥವನ್ನು ಳಿಸಿಯೋ, ಅರ್ಥಾಂತರದಲ್ಲಿ ವಿರಾಮಕ್ಕೆ ನಿಲ್ಲುವಂತೆಯೋ ರಚಿಸಿದ ವಸ್ತುವು ಸ್ವತಂತ್ರ ಮನೋಧರ್ಮದ ವಿಸ್ತಾರ ಸಂಚಾರಕ್ಕೆ ಅಡ್ಡಿಯಾಗುವುದಲ್ಲದೆ ಅನುಕೂಲವಾಗಲಾರದು. ಸಂಗೀತ ಸಾಹಿತ್ಯಗಳ ಸಾಮರಸ್ಯ ವನ್ನು ಸಾರ್ಥಕವಾಗಿಸುವುದೇ ಗೀತರಚನೆಯ ಮುಖ್ಯೋದ್ದೇಶ. ಈ ಸಾಮರಸ್ಯವು ಇಷ್ಟು ಸೂಕ್ಷ್ಮವಾಗಿದ್ದು ಎಂತಹವರನ್ನಾದರೂ ಎಡವಿಸುವುದೆನ್ನಲು ಅಲ್ಲಲ್ಲಿ ಉದಾ ಹರಣೆಗಳುಂಟು. ಸಾಮಾನ್ಯರ ಮಾತು ಹಾಗಿರಲಿ. ಭಾಗವತ ಪ್ರಮುಖರೆಂದೆನಿಸಿ ರಾಗ ಹೃದಯವನ್ನೇ ಮುಂದುವರಿದವರ ರಚನೆಯಲ್ಲೂ ಅಚಾತುರ್ಯವಾಗಿದೆ.

"ಚೆಲುವು ಮೀರ-ಗನುಮಾರೀ-ಚುನಿಮಮಣಚೀ ವೇಳ." ಯತಿ ಸ್ಥಾನ ದಲ್ಲಿ ಎಂತಹ ಆಭಾಸ–

ಪುಲ ಕಾಂಕಿ ತುಡ್ಯೆಯಾನಂದಾಶ್ರುವುಲು
ನಿಂಪು ಚು ಮಾಟಲಾಡವೆನನಿ–

ಒಂದು ಭಾವವನ್ನು ಎರಡು ಪಾದಗಳಲ್ಲಡಗಿಸಿ ಪದ ಭಂಗಮಾಡಿ ಪುನಸ್ಕರ ಣಕ್ಕೆ ಅವಕಾಶವಿಲ್ಲದೆ ಎಂತಹ ಅವ್ಯವಸ್ಥೆ. ಅರಿತು ಹಾಡುವ ಗಾಯಕರಿಗೇ ವೇದ್ಯ. 'ರಾಮ ನೀ ಸಮಾನಮೆವರು' 'ಕರಿನರು ಲಕು' 'ಏಲಾವತಾರ' ಇತ್ಯಾದಿ ಕೀರ್ತನೆ ಗಳಲ್ಲೂ ಈ ಲೋಪವಾಗಿದೆ. ರಾಗ ರಸ ಮಾಧುರ್ಯದಲ್ಲೇ ಲೀನವಾಗಿ ಇಂತಹ ಲೋಪಗಳಾಗಿರಬಹುದು. ಪರಿವಶರಾದ ಭಕ್ತರಲ್ಲಿದು ಉಪೇಕ್ಷಣೀಯ. ಕಲಾಭಿ ಮಾನವು ವಸ್ತುವಿನ ವಿಶೇಷ ಚೆಲ್ವಿಗೆ ಮನಸೋತು ಸಣ್ಣದಾದ ಲೋಪಗಳನ್ನು ಮರೆಮಾಚುವಂತಾಗಿದೆ. ಇವು ಚಂದ್ರನಲ್ಲಿರುವ ಕಳಂಕಕ್ಕೆ ಸಮಾನ. ಆ ಸಂದರ್ಭ ವನ್ನು ಹೇಗೆಯೋ ಹಾರಿಸಿ ಹಾಡುವುದೇ ರೂಢಿಯಲ್ಲಿದೆ. ವಸ್ತುವನ್ನು ನಿರಾಕರಿಸಲು ಯಾರಿಗೂ ಮನಸ್ಸಿಲ್ಲ. ಇಂತಹ ಅಚಾತುರ್ಯಗಳು ಜಯದೇವನ ರಚನೆಯಲ್ಲೇನಾ ದರೂ ಹುಡುಕಿದರೆ ಸಿಗಬಹುದೇ? ಆತನು ಪದಗಳನ್ನು ಧಾರಾಳವಾಗಿ ಬಳಸಿದ್ದಾನೆ. ಭಾವವನ್ನು ಉದ್ದೇಶಿಸಿ ರಸಪ್ರವಾಹವನ್ನೇ ಹರಿಸಿದ್ದಾನೆ; ಧಾಟಿಯಲ್ಲಿ ಓಟ ವಿದ್ದರೂ ಒಂದು ಸಂಯಮಕ್ಕೆ ಒಳಗಾಗಿದೆ. ಎಲ್ಲಿಯೂ ತೊಡಕಿಲ್ಲ. ಎಲ್ಲೆಂದರಲ್ಲಿ ವಿರಾಮಕ್ಕೆ ಅವಕಾಶ. ಅಲ್ಲಲ್ಲಿಗೇ ಅರ್ಥಪೂರ್ಣ. ಉಸಿರಿಗೆ ಸಂಪೂರ್ಣ ಸ್ವಾತಂತ್ರ್ಯ, ಅತಿರಭಸವಿಲ್ಲ. ಅತಿಮಂದವಲ್ಲ. ತೀವ್ರ ಮಂದಗತಿಗಳೆರಡಕ್ಕೂ ಸಮಾನವಾಗಿರುವ ಶಯ್ಯೆ, ಭಾವದಲ್ಲಿ ಎಷ್ಟು ಔದಾರ್ಯವೋ ಮಾತಿನಲ್ಲಿ ಅಷ್ಟು ಸಂಯಮ. ದೋಷೈಕ ದೃಷ್ಟಿಯಿಂದ ಲೋಪವನ್ನಾರೋಪಿಸೋಣವೆಂದು ಪರೀಕ್ಷಿಸಹೋದರೂ ಆ ಪ್ರಯತ್ನವು ವಿಫಲವಾಗುವುದು, ತಾನು ಮಹಾ ಕವಿಯೆಂದು, ಕಲಾವಿದನೆಂದು, ಅಭಿನಯಪಟುವೆಂದು ಆತನು ತನ್ನ ಪ್ರೌಢಿಮೆಯನ್ನು ಪ್ರಕಟಿಸಲು ಉದ್ದೇಶಿಸಿದ್ದರೆ

ನಿಜವಾಗಿಯೂ ಈಗಿನ ಗೀತಗೋವಿಂದವು ಲಭ್ಯವಾಗುತ್ತಿರಲಿಲ್ಲ, ಆತನ ಉದ್ದೇಶವೆಲ್ಲಾ, ಆಕಾಂಕ್ಷೆಯೆಲ್ಲಾ, ಭಗವಂತನಲ್ಲಿ ಆತ್ಮಾನುಸಂಧಾನ ಒಂದೇ. ಮಾತು, ಮನಸ್ಸು, ದೃಷ್ಟಿ, ರಸ, ಜೀವನ ಸಂಬಂಧವಾದುದೇನೆಲ್ಲವೂ ಕೃಷ್ಣಮಯ. ಅದೊಂದೇ ಭಾವ. 'ಸೌಂದರ್ಯೈಕನಿಧೇ' ಎಂದು ಕರೆಯುತ್ತಾನೆ. 'ಹರಿಮೇಕರಸಂ ಚಿರಮಭಿಲಷಿತ ವಿಲಾಸಂ' ಎಂಬಲ್ಲಿಯೂ ಅದೇ ಭಾವ, ಶ್ರೀಕೃಷ್ಣನು ಸೌಂದರ್ಯೈಕನಿಧಿಯಾಗಿ ಆತನಿಗೆ ಕಾಣಿಸಿಕೊಂಡಿದ್ದಾನೆ, ಏಕೈಕ ರಸವಾಗಿದ್ದಾನೆ.

ವಿಶ್ಲೇಷಾಮನುರಂಜನೇನ ಜನಯನ್ನಾನಂದ ಮಿಂದೀವರ
ಶ್ರೇಣೀ ಶ್ಯಾಮಲ ಕೋಮಲೈರುಪನಯನಂಗೈರನಂಗೋತ್ಸವಂ
ಪ್ರಚ್ಛನ್ನಂ ವ್ರಜಸುಂದರೀಭಿರಭಿಃ ಪ್ರತ್ಯಂಗ ಮಾಲಿಂಗಿತೈಃ
ಶೃಂಗಾರಸ್ಸಖಿ ಮೂರ್ತಿಮಾನಿವ ಮುಧೋ ಮುಗ್ಧೋ ಹರಿ ಕ್ರೀಡತಿ||

ಶೃಂಗಾರವೇ ಕೃಷ್ಣಾಕೃತಿಯಲ್ಲಿ ಆತನ ಮುಂದೆ ನಿಂತಿದೆ, ಭಾವತನ್ಮಯನಾದ ಭಕ್ತನ ಹೃದಯವು ಒಂದೊಂದು ಮಾತಿನಲ್ಲಿ, ಒಂದೊಂದು ಸಾಲಿನಲ್ಲಿ, ಒಂದೊಂದು ಚರಣದಲ್ಲಿ, ಆಯಾ ಪ್ರಮಾಣದಲ್ಲಿ ವ್ಯಕ್ತವಾಗುತ್ತ ಬಂದಿದೆ. ಒಂದೊಂದು ಗೀತವೂ ಒಂದು ಮಹಿಮಾಕಾರವಾಗಿ ನಿಲ್ಲುತ್ತದೆ. ಜಯ.ದೇವನು ಇವುಗಳನ್ನು ಯಾವ ರೀತಿಯಲ್ಲಿ ಹಾಡುತ್ತಿದ್ದನೋ ಅವುಗಳ ಆದಿಕ್ರಮವು ಈಗ ದೊರೆಯುವಂತಿಲ್ಲ. ಒಂದೊಂದು ಗೀತಕ್ಕೆ ಒಂದೊಂದು ರಾಗದ ಹೆಸರನ್ನು ಸೂಚಿಸಿದ್ದಾನೆ. ಅವೆಲ್ಲಾ ಪ್ರಾಚೀನ ರಾಗಗಳೂ ಅಂದು ವಿಶೇಷವಾಗಿ ವಾಡಿಕೆಯಲ್ಲಿದ್ದಿರಬಹುದು. ಮಾಳವ, ಸೌರಾಷ್ಟ್ರ, ಘೂರ್ಜರೀ, ಕರ್ಣಾಟಕ, ವಸಂತ, ರಾಮಕ್ರಿಯೆ, ಶಂಕರಾಭರಣ ಇತ್ಯಾದಿ ಹೆಸರುಗಳಿವೆ. ಈ ರಾಗಗಳನ್ನೇ ಬಳಸಬೇಕೆಂಬ ನಿರ್ಬಂಧವಂತೂ ಈಗಿಲ್ಲ. ಮೂಲವು ನಿರ್ಮೂಲವಾಗಿದ್ದರೂ ರಸಭಾವಗಳಿಗನುಗುಣವಾಗಿ ರಾಗಗಳನ್ನು ಹೊಂದಿಸುವುದಕ್ಕೆ ರಚನೆ ಅನುಕೂಲವಾಗಿರುವುದರಿಂದ ಒಂದೊಂದು ಗೀತವನ್ನೂ ಅನೇಕ ರಾಗಗಳಲ್ಲಿ ಹಾಡಬಹುದು. ಈ ಸ್ವಾತಂತ್ರ್ಯವನ್ನು ಅವರವರ ಇಷ್ಟಾನುಸಾರವಾಗಿ ಉಪಯೋಗಿಸಿಕೊಳ್ಳುವಂತೆ ಜಯದೇವನು ಅನುಗ್ರಹಿಸಿದ್ದಾನೆ. ತಾಳದ ವಿಚಾರಕ್ಕಂತೂ ಯಾರು ಉಸಿರೆತ್ತುವಂತಿಲ್ಲ. ಜಯದೇವನು ಲಯಬ್ರಹ್ಮ. ಈ ನಿರ್ಣಯವು ಇನ್ನೆಲ್ಲಿಯೂ ಕಾಣುವುದಿಲ್ಲ. ಒಂದಕ್ಕಿಂತ ಒಂದು ಅತಿಶಯವಾಗಿ ತೋರುತ್ತವೆ. ಅಲ್ಲಲ್ಲಿ ತಡೆತಡೆದು ಹಿಂದು ಮುಂದಕ್ಕೆ ಸುಳಿದಾಡುತ್ತಾ ಗಾನಝರಿಯು ಮುಂದೆ ಸಾಗುತ್ತದೆ. ಆ ಕ್ರಮವನ್ನೇ ಅಭಿನಯವೂ ಅನುವರ್ತಿಸುತ್ತಿದೆ. ಹೃದಯದಲ್ಲಿ ತಳೆದ ಭಾವ ಅಭಿನಯದಲ್ಲಿ ಮುದ್ರಿತವಾಯಿತು. ಅಕ್ಷರಗಳಲ್ಲಿ ಸ್ಫುಟವಾಯಿತು. ಜಯದೇವನ ಗೀತಗಳನ್ನು ಉಚ್ಚರಿಸಿದರೆ ಸಾಕು, ಈ ಸಂಬಂಧಗಳು ಒಂದನ್ನೊಂದು ಹೆಣೆದುಕೊಂಡು ಬಂದುಬಿಡುವುವು. ಕುಣಿಕುಣಿದು ಬಂಧ ಬಂಧುರವಾಗಿ ಬರುವ ಪದಗಳಲ್ಲಿ ಅಂತಹ ಲಯ ಭಾಗ್ಯವು ತುಂಬಿ ತುಳುಕುತ್ತಿದೆ.

ಲಲಿತಲವಂಗ ಲತಾಪರಿಶೀಲನ
ಕೋಮಲ ಮಲಯ ಸಮೀರೇ
ಮಧುಕರ ನಿಕರ ಕರಂಬಿತ ಕೋಕಿಲ
ಕೂಜಿತ ಕುಂಜ ಕುಟೀರೇ !
ವಿಹರತಿ ಹರಿರಿಹ ಸರಸವಸಂತೇ ॥

–ಇವನ್ನು ಹಾಡುವಾಗ ನಾಲ್ಕು ವಿರಾಮ ಸ್ಥಾನಗಳಲ್ಲಿ ಇಷ್ಟಬಂದಂತೆ ಸಂಚಾ ಮಾಡಬಹುದು.

ಲಲಿತ ಲವಂಗ ಲತೆಯ ಪರಿಶೀಲನೆ
ಕೋಮಲ ಮಲಯ ಸ್ಪರ್ಶ
ದುಂಬಿಗಳ ಮೊರೆತ ಕೋಕಿಲರವ.

–ಇವೆಲ್ಲವನ್ನೂ ಸಾವಕಾಶವಾಗಿ, ಬೇರೆ ಬೇರೆಯಾಗಿಯೂ, ಒಟ್ಟಾಗಿಯೂ ಸುಖಾನುಭವ ಮಾಡುತ್ತಾ ಕುಂಜಕುಟೀರದಲ್ಲಿ ಯಥೇಚ್ಛವಾಗಿ ವಿಹರಿಸುತ್ತೇವೆ– ಗೀತದ ಮೂಲಕ. ಆ ವಿಹಾರವೆಲ್ಲ ಗಾನವಿಹಾರದಲ್ಲಿ ಬೆರೆತು ನಮ್ಮನ್ನು ಅನಿರ್ವಚ ನೀಯವಾದ ಒಂದು ಸ್ಥಿತಿಗೆ ಕೊಂಡೊಯ್ಯುತ್ತವೆ. ಆ ಸರಸ ವಸಂತಾನುಭವವೇ ನಮಗಾಗಿ ಬಿಡುವುದರಲ್ಲಿ ಸಂದೇಹವಿಲ್ಲ.

"ಮಾಧವಿಕಾ ಪರಿಮಳ ಮಿಳಿತೇ
ನವ ಮಲ್ಲಿಕಾಯಾತಿ ಸುಗಂಧೌ
ಮುನಿಮಾನಸಮಪಿ ಮೋಹನಕಾರಿಣಿ
ಕರುಣಾಕಾರಿಣ ಬಂಧೌ"

–ಇಂದು ಜಯದೇವನ ಕಾವ್ಯನುಗಂಧವಾದರೂ ಹೀಗೆಯೇ ಪರಿಣಾಮಕಾರಿ ಯಾಗಿದೆ. ವಿರಕ್ತರು ಕೂಡ ಜೀವಾತ್ಮ ಪರಮಾತ್ಮ ಸಂಬಂಧದಿಂದ ಇವನ್ನು ಆಘ್ರಾಣಿಸುತ್ತಿರಲು ರಸಿಕರಿಗೆ ಸಂಕೋಚಕ್ಕೆ ಕಾರಣವಾದರೂ ಎಲ್ಲಿ ?

ನಿಯಮಕ್ಕೆ ಆತನು ಬದ್ಧನಾಗಿರಲು ಬಯಸಿದನೋ, ಇಲ್ಲ ನಿಯಮವೇ ಆತನಿಗೆ ತಾನಾಗಿ ವಶವಾಗಿರಲು ಬಯಸಿತೋ ಹೇಗೋ! ಲಲಿತಪದ ಸಮೂಹಕ್ಕೆ ಸುಂದರ ಭಾವಕ್ಕೆ, ಅರ್ಥಪುಷ್ಟಿಗೆ ಆತನ ವಾಕ್ಕು ನೆಲೆಮನೆಯಾಗಿದೆ. ಇವುಗಳೊಂದಿಗೆ ತಾನೂ ಸೇರಬಯಸಿ ಅಂತ್ಯಾಕ್ಷರ ಪ್ರಾಸವು ಸ್ವತಃ ಬಂದು ಹೊಕ್ಕಂತೆ ರಮಿಸುತ್ತಿದೆ. ಈ ಮೂಲಕ ಗಾನಾಭಿನಯಗಳ ಅಭೀಷ್ಟವು ಪೂರ್ಣವಾಯಿತು. ಸಂಗೀತ ಸಾಹಿತ್ಯಗಳು ಒಂದನ್ನೊಂದು ಮೀರಿ ಗೌರವ ಪರಿಣತ ರೀತಿಯಲ್ಲಿ ಉಪಯುಕ್ತವಾಯಿತು.

"ಚಂದನ ಚರ್ಚಿತ ನೀಲಕಳೇಬರ
ಪೀತವಸನ ವನಮಾಲೀ
ಕೇಳಿಚಲನ್ಮಣಿಕುಂಡಲ ಮಂಡಿತ
ಗಂಡಯುಗಸ್ಮಿತಶಾಲೀ

ಹರಿರಿಹ ಮುಗ್ಧ ವಧೂ ನಿಕರೇ ವಿಲಾಸಿನಿ
ವಿಲಸತಿ ಕೇಳಿಪರೇ..."

ರಾಸಲೀಲಾ ಕೌತುಕದ ವನಮಾಲಿಯನ್ನು ಎಂತಹ ಮನೋಹರ ಸರಣಿಯಲ್ಲಿ ಬಣ್ಣಿಸಿದ್ದಾನೆ? ಪದ್ಯವಾಗಿ ಉಚ್ಚರಿಸೋಣವೇ? ಗೀತವಾಗಿ ಹಾಡೋಣವೇ? ಕೃಷ್ಣನಿಗೆ ಎರಡೂ ಪ್ರಿಯವೇ ಆದೀತು. ಇಂತಹ ಸರಣಿಯು ಕಾವ್ಯದ ಉದ್ದಕ್ಕೂ ಲೀಲಾಜಾಲವಾಗಿ ರಚಿತವಾಗಿದೆ. ಯಾವ ಸಂದರ್ಭವನ್ನೇ ನೋಡಲಿ, ಏನಾದರೊಂದು ಅತಿಶಯವಿಲ್ಲದೆ ಇಲ್ಲ. ಅದೆಲ್ಲ ವಿಭ್ರಮಾಯತ್ತ ವಿಹಿತ ವಿಲಾಸ; ವಿಚಿತ್ರ ಪರಿಹಾಸ, ನಿರ್ಮಲ ಮಂದಹಾಸ.

ಕರತಲ ತಾಳ ತರಳವಲಯಾವಳೀ
ಕಲಿತ ಕಲಸ್ವನ ವಂಶೇ
ರಾಸರಸೇ ಸಹ ನೃತ್ಯಪರಾ
ಹರಿಣಾಯುವತಿ ಪ್ರಶಶಂಶೇ"

ಕೈಲಿ ಹಿಡಿದ ತಾಳಗಳ, ತೋಳ ಬಳೆಗಳ ಕಿಂಕಿಣಿಯ ಕಲಸ್ವನವು ನಮ್ಮ ಕಿವಿಗಳನ್ನೂ ಸೋಕುತ್ತದೆ. ಲಘು ದೀರ್ಘ ವಿಶೇಷ ಗುಣಗಳಲ್ಲಿ ಅನುರಣಿತ ಧ್ವನಿ ರಂಜಿಸಿದೆ. ಸುಧಾ ಮಧುರ ಧ್ವನಿಯೆಂದೆನುವ ಬಣ್ಣನೆ ಸತ್ಯೋಕ್ತಿಯಾಯಿತು.

ಕುಪಿತಳಾದ ರಾಧೆಯು ಕೃಷ್ಣನನ್ನು ತಿರಸ್ಕರಿಸುವ ಖಂಡಿತ ವಾಣಿಯಲ್ಲಿಯೂ ಕೋಮಲಭಾವವೇ !

ಯಾಹಿ ಮಾಧವ ಯಾಹಿ ಕೇಶವ
ಮಾವದ ಕೈತವ ವಾದಂ
ತಾಮನುಸರ ಸರಸೀರುಹ ಲೋಚನ
ಯಾ ತವ ಹರತಿ ವಿಷಾದಂ

ನಾನಾ ಹಾವ ಭಾವ ವಿಲಾಸಗಳಿಂದ ಆಪಾದ ಮಧುರವಾಗಿರುವ ಈ ಕಾವ್ಯ ಮಹಿಮೆಯನ್ನು ಯಾವ ಅಳತೆಗೋಲಿನಿಂದಾಗಲೀ ಇಷ್ಟೆಂದು ವರ್ಣಿಸಲಾಗದು. ನಮ್ಮ ಸಾಮಾನ್ಯ ಬುದ್ಧಿ ಬಲದಿಂದ ಮಹಾನುಭಾವರ ಶಕ್ತಿಯನ್ನು ಪರೀಕ್ಷಿಸುವುದು, ವಿವರಿಸಲೆತ್ನಿಸುವುದು ಹುಚ್ಚುತನ. ಕೆಲವು ನಿಮಿಷಗಳ ಅವಧಿಯಲ್ಲಿ ಅವರ ಪ್ರಭಾವವನ್ನು ರೂಪಿಸುವ ಪ್ರಯತ್ನವಂತೂ ಇನ್ನೂ ಹುಚ್ಚುತನ. ಜಯದೇವನನ್ನು ಇನ್ನೊಬ್ಬ ಜಯದೇವನೇ ಪರಿಚಯಮಾಡಿಕೊಡಬೇಕು. ಕೃಷ್ಣನನ್ನು ಸಾಕ್ಷಾತ್ಕಾರ ಮಾಡಿಕೊಂಡುದು ಮಾತ್ರವಲ್ಲ, ತನ್ನ ಯೋಗ್ಯತೆಯನ್ನು ಆತನು ಚೆನ್ನಾಗಿ ಕಂಡುಕೊಂಡಿದ್ದಾನು, ತನ್ನ ಕೃತಿಯ ಸಾಮರ್ಥ್ಯವನ್ನು ತಾನೇ ಹೀಗೆಂದು ವಿನಯವಾಗಿ ಹೇಳಿಕೊಂಡಿದ್ದಾನೆ, 'ಸಂದರ್ಭ ಶುದ್ಧಿಂ ಗಿರಾಂ' ಎಂಬ ಮಾತಾದರೂ ರಚನೆಯ ಔಚಿತ್ಯವನ್ನು ಗಂಭೀರವಾಗಿ ಸಾರುತ್ತಿದೆ. ಆತನ ರಚನೆಯನ್ನೇ ಸಮರ್ಥಿಸುತ್ತದೆ.

ಯದಿ ಹರಿ ಸ್ಮರಣೇ ಸರಸಂ ಮನೋ
ಯದಿ ವಿಲಾಸ ಕಲಾಸು ಕುತೂಹಲಂ।
ಮಧುರ ಕೋಮಲ ಕಾಂತ ಪದಾವಳಿಂ
ಶೃಣು ತದಾ ಜಯದೇವ ಸರಸ್ವತೀಂ."

"ಅಯ್ಯಾ ಈ ಕೃತಿಯಲ್ಲಿ ಕಾವ್ಯಗುಣಗಳಿಲ್ಲ ಇವೆ. ಶ್ರೀಕೃಷ್ಣನಲ್ಲಿ ಭಕ್ತಿ ಇದ್ದರೆ, ವಿಲಾಸ ಕಲೆಯಲ್ಲಿ ಕುತೂಹಲವಿದ್ದರೆ ಓಜಸ್ಸು, ಪ್ರಸಾದ, ಔಜ್ವಲ್ಯಗಳಿಂದ ಕೂಡಿರುವ ಜಯದೇವನ ವಾಣಿಯನ್ನು ಕೇಳಿ."

ಶೃಂಗಾರ ವಿಲಾಸ ಕೃತಿಯೆಂದ ಇದನ್ನು ದೂರವಾಗಿಡಲು ಯಾರಾದರೂ ಬಯಸಿದರೆ ಅದು ಸರಿಯಲ್ಲ. ವಿವಾಹ ಕರ್ಮಾಂಗವೇ 'ಸಪ್ತ ಪದಿ.' ಗಾರ್ಹಸ್ಥ್ಯ ಅಥವಾ ಪುಂ ಸ್ತ್ರೀಯೋಗವೇ 'ಅಷ್ಟ ಪದಿ.' ವಾನಪ್ರಸ್ಥಾಶ್ರಮವೇ ನವಪದಿಯೆಂದು ಭಾವಿಸಿ ಜಯದೇವನು ರಾಧಾ ಮಾಧವರ ಸಮಾಗಮಕ್ಕೆ 'ಅಷ್ಟಪದಿ' ಎಂದು ಹೆಸರಿಟ್ಟು ನಿಲ್ಲಿಸಿ 'ನವಪದ'ವನ್ನು ಇತರರಿಗೆ ಬಿಟ್ಟಿರುವ ಹಾಗಿದೆ.

ಇದು ಪ್ರಬಂಧವೋ, ನಾಟಕವೋ, ಸಂಗೀತ ಸಾರ ಹೃದಯವೋ, ಅಭಿನಯ ಸರ್ವಸ್ವವೋ, ಎಂದು ಸಂದೇಹಪಡುತ್ತಾ ಎಲ್ಲವೂ ಅಹುದು ಎಂದು ನಮಗೆ ನಾವೇ ಸಮಾಧಾನ ಹೊಂದುತ್ತೇವೆ. ಜಯದೇವನು ಸರಸ ಸಾಹಿತಿಯಾಗಿ, ಸೌಮ್ಯ ಸಾಧಕನಂತೆ ಕಾಣುವನೊಂದು ಸಲ; ನಾದಯೋಗಿಯಂತೆ ತನ್ಮಯವಾಗಿ ತೋರುವನೊಂದು ಸ್ಥಿತಿಯಲ್ಲಿ. ನಟ ಸಾರ್ವಭೌಮನಂತೆ ವಿರಾಜಿಸುವನು ಹಿಂದೆಯೇ. ರಾಧೆಯಾಗಿ ವಿಹರಿಸಿ ವಿರಹವನ್ನು ತಾಳಿ ಕೃಷ್ಣನಿಂದ ಪ್ರಣಯವನ್ನು ಯಾಚಿಸಿದನು, ಸಖಿಯಾಗಿ ರಾಯಭಾರವನ್ನು ಮಾಡಿದನು, ಕಡೆಗೆ ರಾಧಾಮಾಧವರ ಸಮಾಗಮವನ್ನೂ ಮಾಡಿಸಿ ಜಯಗೀತವನ್ನೂ ಹಾಡಿದನು. ಜಯದೇವನ ಪರಿಚಯವು ಕಾವ್ಯದ ಮೂಲಕವೇ ಆಗಬೇಕು. ಆತನಿಗೆ ಸಾಕ್ಷಾತ್ಕಾರವಾದ ಶೃಂಗಾರ ಸೌಂದರ್ಯ ಆನಂದಗಳ ಒಂದು ಕಿರಣವಾದರೂ ನಮಗೆ ಗೋಚರವಾದರೆ ನಾವೂ ಧನ್ಯರಾದೇವು. ಕಡೆಯದಾಗಿ ದಶಾವತಾರದ ಮಂಗಳ ಸ್ತುತಿಯಿಂದ ಜಯದೇವನನ್ನು ಸ್ಮರಿಸಿ ವಿರಮಿತ್ತೇನೆ.

ವೇದಾನುದ್ಧರತೇ ಜಗನ್ನಿವಹತೆ
ಭೂಗೋಳಮುದ್ಬಿಭ್ರತೇ
ದೈತ್ಯಂ ದಾರಯತೇ ಬಲಿಂ ಛಲಯತೇ
ಕ್ಷತ್ರಕ್ಷಯಂ ಕುರ್ವತೇ,
ಪೌಲಸ್ತ್ಯಂ ಜಯತೇ ಹಲಂ ಕಲಯತೇ
ಕಾರುಣ್ಯಮಾತನ್ವತೇ
ಮ್ಲೇಛ್ಛಾನ್ ಮೂರ್ಛಯತೇ ದಶಾಕೃತಿ
ಕೃತೇ ಕೃಷ್ಣಾಯ ತುಭ್ಯಂ ನಮಃ

—1953

ವಾಸುದೇವಾಚಾರ್ಯರ 'ನೆನಪುಗಳು'

ಶ್ರೀ ಕಾನಕಾನಹಳ್ಳಿ ವಾಸುದೇವಾಚಾರ್ಯರು ಕೇವಲ 'ಸಂಗೀತಶಾಸ್ತ್ರ ರತ್ನ'ವಾಗಿದ್ದರೆ ಅವರ ನೆನಪುಗಳು ಅವರೊಂದಿಗೇ ಜೀರ್ಣವಾಗುತ್ತಿತ್ತು. ಹಾಗಾಗದೆ ಆ ನೆನಪುಗಳು ಅಕ್ಷರಗಳಲ್ಲಿ ಸ್ಥಾಪಿತವಾಗುವಂತೆ ಮಾಡಿದ್ದು ಅವರ ಸಾಹಿತ್ಯದ ಪರಿಪಕ್ವ ಪರಿಶ್ರಮ. ಆ ಪರಿಶ್ರಮಕ್ಕಾಗಿ ಬಾಲ್ಯದಲ್ಲಿ ಅವರೆಂತಹ ಕಷ್ಟ ಕಾರ್ಪಣ್ಯಗಳಿಗೆ ಒಳಗಾಗಬೇಕಾಯಿತೆಂಬುದನ್ನು ಅವರೇ ಸ್ಪಷ್ಟಪಡಿಸಿದ್ದಾರೆ. ಸಂಸ್ಕೃತ ಪಾಠಶಾಲೆಯಲ್ಲಿ ಅವರ ಸಂಸ್ಕೃತ ಅಧ್ಯಯನ, ಹಿರಿಯರಾದ ತಾತನವರ ನಿರ್ಬಂಧಕ್ಕಾಗಿ ನಡೆಯಿತು. ಸ್ವಭಾವತಃ ಅವರ ಅಭಿರುಚಿ ವಾಲುತ್ತಿದ್ದುದು ಸಂಗೀತದ ಕಡೆಗೆ. ಸೋದರಮಾವ ಪದ್ಮನಾಭಾಚಾರ್ಯರು ಇದನ್ನು ಕಂಡುಕೊಂಡು ಆಸ್ಥಾನ ವಿದ್ವಾಂಸರಾದ ಸುಬ್ಬರಾಯರಲ್ಲಿ ಸಂಗೀತದ ಅಭ್ಯಾಸಕ್ಕೆ ಅನುವು ಮಾಡಿಕೊಟ್ಟರು. ಅವರ ತಾತ ಮೊಮ್ಮಗನನ್ನು ಪ್ರಸಿದ್ಧ ಪುರಾಣಿಕನನ್ನಾಗಿ ಮಾಡಲು ಉದ್ದೇಶಿಸಿದ್ದರು. ಸಂಗೀತದ ಗೀಳು ಆ ಉದ್ದೇಶಕ್ಕೆ ಅಡ್ಡಿಯಾಗುವುದೆಂದು ಅವರಿಗೆ ತೋರಿತು. ಆ ಗೀಳನ್ನು ಬಿಡಿಸಲು ಅವರು ಹಟತೊಟ್ಟರು. ಮೊಮ್ಮಗನೂ ತಾತನಷ್ಟೇ ಹಟಮಾರಿ. ಸಂಗೀತವನ್ನು ಹೇಗಾದರೂ ಕಲಿಯಲೇಬೇಕೆಂಬ ಹಟ ಸಾಧನೆಗೆ ತೊಡಗಿ ತಾತನಿಗೆ ತಿಳಿಯದಂತೆ ಕದ್ದು ಕಲಿಯುತ್ತಿದ್ದ. ಈ ಕಳ್ಳತನದ ಸುಳಿವು ಹೇಗೋ ತಾತನಿಗೆ ತಿಳಿಯಿತು. ಆ ಫಲವಾಗಿ ಮೊಮ್ಮಗ ನೀರು ಸೇದುವ ಹಗ್ಗದ ಹೊಡೆತದ ರುಚಿಯನ್ನೂ ತಿಳಿಯುವಂತಾಯಿತು. ಆದರೂ ದೈವಾನುಗ್ರಹ, ಸಂಗೀತಾಭ್ಯಾಸಕ್ಕೆ ನೆರವು ನೀಡಿತು. ಆರು ವರ್ಷಕಾಲ ತಿರುವೈಯ್ಯಾರಿನಲ್ಲಿ ಪಟ್ಟಂ ಸುಬ್ರಹ್ಮಣ್ಯಯ್ಯರಲ್ಲಿ ಶಿಷ್ಯತ್ವವನ್ನು ವಹಿಸಿ ಹಟವನ್ನು ಗೆದ್ದರು. ಮೊದಲೆರಡು ಅಧ್ಯಾಯಗಳಲ್ಲಿ ಆಚಾರ್ಯರ ಬಾಲ್ಯ, ವಿದ್ಯಾಭ್ಯಾಸ, ಇವುಗಳನ್ನು ಕುರಿತಾದ ವಿಚಾರಗಳನ್ನು ತಿಳಿಯುವಾಗ ಅವರ ಮನೆತನದ ಪ್ರಸ್ತಾಪಗಳು ತಿಳಿಯುತ್ತವೆ. ಬಡಕುಟುಂಬ, ರಾಜಾಶ್ರಯ, ಇವು ಸಂಕುಚಿತ ಜೀವನಕ್ಕೆ ಸಾಕಷ್ಟು ಕಾರಣವಾದರೂ, ಅಂದಿನವರ ಮನೋಧರ್ಮ ಉನ್ನತ ಮಟ್ಟದಲ್ಲಿದ್ದು ಅವರು ಮಾನವೀಯತೆಯ ಮರ್ಯಾದೆಗೆ ಪೂರ್ಣ ಲಕ್ಷ್ಯ

ವನ್ನು ಕೊಟ್ಟಿದ್ದರು. ಅವರಿಲ್ಲಿ ದೊಡ್ಡ ಬಾಳನ್ನೇ ನಡೆಸಿದರು, ಹಾಗೆ ಬಾಳಿದ ದೊಡ್ಡವರನ್ನೆಲ್ಲಾ ಸ್ಮರಿಸಿಕೊಳ್ಳುತ್ತಾ ಶ್ರೀ ಆಚಾರ್ಯರು ತಮ್ಮಲ್ಲಿ ತಾವೇ ವಿಚಾರ ಮಾಡುತ್ತಾ ಕಾಲ ಪರಿಸ್ಥಿತಿಯನ್ನು ಕುರಿತು "ಕಾಲ ಚೆನ್ನಾಗಿರುವುದಕ್ಕೆ ಚೆನ್ನಾಗಿಲ್ಲದಿರುವುದಕ್ಕೆ ಹೊಣೆಗಾರರು ಯಾರು? ನಾವೇ ಅಲ್ಲವೇ? ಕಾಲ ಉರುಳುತ್ತಲೇ ಇದೆ, ಅದು ನಿಯತಿ ನಿಯಮ. ಅದಕ್ಕೊಂದು ರೂಪುಕೊಡುವವರು ನಾವು- ಆ ಕಾಲದಲ್ಲಿ ಒಂದಾಗಿ ಜೀವಿಸುವವರು. ಜನರ ನೀತಿ ನಡವಳಿಕೆ, ಆಚಾರ, ವ್ಯವಹಾರ ಸ್ಥಿತಿ ಗತಿ, ಜೀವನ ವೃತ್ತಿ, ಆವಿಷ್ಕಾರ, ಪರಿಷ್ಕಾರ, ಇವುಗಳನ್ನು ಅನುಸರಿಸಿ ಕಾಲ ಚಕ್ರಕ್ಕೆ ಒಂದು ಆಕೃತಿ ಬರುತ್ತದೆ" ಎಂದು ಹೇಳಿರುವುದು ಎಷ್ಟು ಸಮಂಜಸವಾಗಿದೆ.

ವಯಸ್ಸಾದಂತೆ ಹಿಂದಿನ ನೆನಪುಗಳು ಬರುವುದು ಸಾಮಾನ್ಯ. ಸಮಾನ ವಯಸ್ಕರು ಪರಸ್ಪರವಾಗಿ ತಮ್ಮ ಅನುಭವಗಳನ್ನು ಕುರಿತು ಮಾತನಾಡಿಕೊಳ್ಳುವುದುಂಟು; ಆಚಾರ್ಯರಿಗೆ ಸಮಾನ ವಯಸ್ಕರಾಗಿ ಅವರಷ್ಟು ದೀರ್ಘಕಾಲ ಬದುಕಿದ ಮಿತ್ರರು ಯಾರಾದರೂ ಇದ್ದರೋ ಇಲ್ಲವೋ. ತುಂಬು ಬಾಳನ್ನು ನಡೆಸಿದ ಅನುಭವದ ಕೆಲವು ಸ್ವಾರಸ್ಯಗಳನ್ನು ನೆನೆದು, ಆ ರಸನಿಮಿಷಗಳನ್ನು ರಮಣೀಯವಾಗಿ ವಿವರಿಸಿದ್ದಾರೆ. ಮೈಸೂರು ರಾಜಮನೆತನದ ಮೂರು ನಾಲ್ಕು ತಲೆಮಾರಿನ ಆಡಳಿತದ ವಿತರಣೆಯನ್ನು ಚೆನ್ನಾಗಿ ಬಲ್ಲವರಾಗಿ,ಆ ವೈಭವಗಳನ್ನು ಕಣ್ಣಿಗೆ ಕಟ್ಟಿದಂತೆ ನಿರೂಪಿಸಿದ್ದಾರೆ. ಚಾಮರಾಜ ಒಡೆಯರ ಕಾಲದ ಕೆಲವು ಸಂದರ್ಭಗಳಿಂದ ಆ ಪ್ರಭುಗಳ ಸ್ವಭಾವವನ್ನು, ಅಚ್ಚೊತ್ತಿದಂತೆ ಅವರ ರಸಿಕತೆ, ಕಲಾಭಿಮಾನ, ರಾಜಪುರುಷರಿಗೆ ತಕ್ಕ ಔದಾರ್ಯ. ಘನತೆ ಇವುಗಳೆಲ್ಲವನ್ನೂ ತಿಳಿಯುತ್ತೇವೆ. ಅಂದಿನ ಜನ ಜೀವನವನ್ನೂ ಇಂದಿನ ಜೀವನ ಗತಿಯನ್ನೂ ನೋಡಿದ ಆಚಾರ್ಯರು ಕಾಲ ಕಾಲಕ್ಕೆ ಮಳೆ ಬೆಳೆಗಾಗಿ ಸುಭಿಕ್ಷವಾಗಿದ್ದ ಕಾಲದ ಜೀವನ ಸುಖವನ್ನು ನೆನೆದು ಅದೊಂದು ಹಂಬಲದಂತಾಗಿ, ಇಂದಿನ ದುರ್ಭಿಕ್ಷವನ್ನು ಕಂಡು ಮರುಗಿದಂತಿದೆ. ಆ ಹಂಬಲ ಈ ಮರುಕ ಹೀಗೆ ಗ್ರಂಥಸ್ಥವಾಗಬೇಕಾಯಿತು. ೪೯ ನೆಯ ಪುಟದ ಕಡೆಯಲ್ಲಿ ಹೇಳಿರುವ ಮಾತುಗಳಿಂದ ಅವರ ಹಂಬಲವನ್ನು ಊಹಿಸಬಹುದು.

ಇದರಲ್ಲಿ ಬಂದಿರುವ ಸಂದರ್ಭಗಳು ಬಹುವಾಗಿ ಸರಸ ಸಲ್ಲಾಪಗಳ, ವಿನೋದ ಪ್ರಸಂಗಗಳ ರಸದೌತಣಗಳು. ಶ್ರೀ ಆಚಾರ್ಯರು ನಗೆಗಾರರಾಗಿದ್ದರೋ ಇಲ್ಲವೊ. ಅವರ ಚಹರೆಯಿಂದ ಸಹಜವಾಗಿ ಪರಿಹಾಸ ಮನೋಧರ್ಮದವರೆಂದು ಸುಲಭವಾಗಿ ಹೇಳಬಹುದಾಗಿತ್ತೆ? ಎಂಬ ಸಂದೇಹದ ಪ್ರಶ್ನೆಗೆ ಅವಕಾಶ ಉಂಟು. ವಿದ್ಯಾರ್ಥಿ ದೆಸೆಯಿಂದಲೇ ಅವರು ಕುಚೋದ್ಯದಲ್ಲಿ ಪಳಗಿದ್ದರೆಂಬುದನ್ನು ತಿಳಿದ ಮೇಲೆ ನಮ್ಮ ಸಂದೇಹ ನಿವೃತ್ತಿಯಾಗುತ್ತದೆ. ಸಹಪಾಠಿ ರಾಮಾಚಾರ್ಯರೊಂದಿಗೆ ರಂಗನಾಥ ದರ್ಶನಕ್ಕೆ ಶ್ರೀರಂಗಪಟ್ಟಣಕ್ಕೆ ಹೊರಟು .ಕಿವುಡ ಮೂಕರಂತೆ ನಟಿಸಿ ಜೊತೆಗೆ ಬರುತ್ತಿದ್ದ ಪ್ರಯಾಣಿಕರನ್ನು ಕೆಣಕಿ, ಕಡೆಗೆ ಅದೊಂದು ವಿನೋದವಾಗಿ

ತೇಲಿದ ಪ್ರಸಂಗದಿಂದ ಮೊದಲಾಗಿ ಅನೇಕ ಹಾಸ್ಯ ಪ್ರಸಂಗಗಳಲ್ಲಿ ಆಚಾರ್ಯರು ಪ್ರಮುಖ ಪಾತ್ರವನ್ನೇ ವಹಿಸಿದ್ದಾರೆ. ಆ ಪ್ರಸಂಗಗಳಲ್ಲಿ ಪಾಲುಗೊಂಡವರೆಲ್ಲಾ ಹೆಚ್ಚು ಕಡಿಮೆ ರಸಿಕ ರಾಜರೇ ಆಗಿದ್ದರು. ವೈಣಿಕ ಪ್ರವೀಣ ಸುಬ್ಬಣ್ಣನವರ ವ್ಯಕ್ತಿತ್ವವಾದರೋ ಅಸಾಧಾರಣ. ಉತ್ತರ ದೇಶದಿಂದ ಬಂದಿದ್ದ ಗವಾಯಿಗೆ ಬುದ್ಧಿ ಕಲಿಸಿದ ಉದಾಹರಣೆಯೊಂದು ಸಾಕು. ಸಾಮಾನ್ಯವಾಗಿ ಆಚಾರ್ಯರೂ ಸುಬ್ಬಣ್ಣನವರೂ ಇಂತಹ ನಗೆಯ ಪ್ರಸಂಗಗಳಲ್ಲಿ ಹೆಚ್ಚಾಗಿ ಬೆರೆಯುತ್ತಿದ್ದರು. ಅಲ್ಲಿ ಇವರದು ಬಲು ಚುರುಕಾದ ಬುದ್ಧಿ ಪ್ರಯೋಗಗಳು. ಮಲೆನಾಡಿನ ಪ್ರವಾಸದಲ್ಲಿ ವಸತಿಯ ಸೌಕರ್ಯಕ್ಕಾಗಿ ಹೂಡಿದ ಹೂಟವೋ, ಆ ಗಂಧದ ಪಟ್ಟೆ, ಸುಳ್ಳು ತಲೆ ಶೂಲೆ, ಈ ನಾಟಕಕ್ಕೆ ಮೆಚ್ಚಿಕೊಂಡ ಆ ಪ್ರಭುವರ್ಯರೋ, ಕಡೆಗೆ ರಾಮಕೃಷ್ಣ ರಾಯರಿಗೆ ಆದ ಅಹಂಕಾರ ಖಂಡನೆಯಲ್ಲಿ ಪರಿಣಾಮಗೊಂಡಿತು. ವಿನೋದ ಪ್ರಸಂಗಗಳೆಲ್ಲ ಸತ್ಪರಿಣಾಮವೇ ಆಗಿದ್ದು, ಸೌಜನ್ಯತೆಗೆ ಯಾವ ವಿಧದಲ್ಲೂ ಅಪಮಾನವಾಗದಿರುವುದೇ ಸಭ್ಯಲಕ್ಷಣ. ಇದು ಅಂದಿನವರ ಜೀವನ ಚರ್ಯೆಯಲ್ಲಿ ಸಾಮಾನ್ಯವಾಗಿ ಬಳಗಿ ಬಂದಿತ್ತು. ಅಂದರೆ ದೊಡ್ಡ ಮನುಷ್ಯರು ಅನಿಸಿಕೊಂಡಿದ್ದವರಲ್ಲಿ ಯಾರನ್ನು ದೊಡ್ಡ ಮನುಷ್ಯರೆಂದೆನ್ನಬೇಕು. ದೊಡ್ಡಮನಸಿನಿಂದ ದೊಡ್ಡ ಗುಣದಿಂದ ಯಾರು ಹಾಗೆ ಕರೆಸಿಕೊಂಡಿದ್ದರೋ ಅವರಲ್ಲಿ ಒಳ್ಳೆಯ ಸಂಸ್ಕೃತಿ ಇದ್ದವರೆಲ್ಲ ನಿಜವಾಗಿ ಮಹಾನುಭಾವರು. ದರೋಗ ಚೆಲುವಯ್ಯನಂತಹ ಸ್ವಾಮಿ ನಿಷ್ಠ, ದೈವಭಕ್ತ, ದಯಾರ್ದ್ರ, ಆದರ್ಶಜೀವಿ, ಮೈಸೂರಿನ ಸಾಮಾನ್ಯ ಪ್ರಜೆ. ಆದರೆ ಅವನ ವ್ಯಕ್ತಿತ್ವ ಅಸಾಮಾನ್ಯ, ವೀರಲಕ್ಷಣಗಳಿಂದೊಪ್ಪುವ ಇವನ ಆಕೃತಿಯೇ ಅದನ್ನು ತಿಳಿಸುತ್ತದೆ.

ಹಾಸ್ಯವೂ ಕರುಣೆಯೂ ಏಕವಾಗಿ ಪೌರುಷವಂತ ಜೀವನವನ್ನು ನಡೆಸಿದ ಆ ಕಾಲದವರ ಸರಸ ಸಲ್ಲಾಪಗಳೆಲ್ಲ ಮೇಲುಮಟ್ಟದಲ್ಲಿದ್ದುವಲ್ಲದೆ ಚೆಲ್ಲುಚೆಲ್ಲಾಟಗಳಾಗಿರಲಿಲ್ಲ. ಸಹಜವಾಗಿ ನಡವಳಿಕೆಯಲ್ಲೇ ಒಂದು ಸರಸ ರೀತಿಯು ಅವರಿಗೆ ಅಭ್ಯಾಸವಾಗಿತ್ತು. ಆ ನಗೆಯು ಆ ಸ್ಫೂರ್ತಿಯು ಔದಾರ್ಯ ಕ್ಷಮೆಗಳನ್ನು ಮೆರೆಸುವ ಸರ್ಮದ್ಯುತಿಯಲ್ಲದೆ ಕುತ್ಸಿತ ಕುಚೋದ್ಯದ ಅಪಹಾಸ್ಯವಲ್ಲ. ಮರಿ ಪಂಡಿತರ ಕವನ, ಪುಟ್ಟಾರಿ ಶಾಸ್ತ್ರಿಗಳ ಪಗಡೆ ಆಟ, ದೇವಪಾರ್ಥಿವರ ಗಾಳಿಪಟವಾಟ-ಇವೆಲ್ಲ ಸುತ್ತಲಿದ್ದವರಿಗೆ ಸರಸ ಕಲಾಪಗಳು. ಅಂತಹವರಿಗೂ ಪ್ರೋತ್ಸಾಹವು ಧಾರಾಳವಾಗಿ ಸಿಗುತ್ತಿತ್ತು. ಚದುರಂಗದ ಆಟದಲ್ಲಿ ಎಂತಹ ನಿಪುಣರಿದ್ದರೆಂಬುದಕ್ಕೆ ಚಾಮಪ್ಪಾಜಿಯವರ ಮಗಳ ಉದಾಹರಣೆಯನ್ನು ಓದಿದಾಗ ಆಶ್ಚರ್ಯವಾಗುತ್ತದೆ. ಹಾಸ್ಯ ವಿಸ್ಮಯ ಆಶ್ಚರ್ಯಗಳ ಅಧಿಕಾರಕ್ಕೆ ನಾವು ವಶರಾಗಲೇಬೇಕು. ಒಂದುವೇಳೆ ನಾವು ಅವಶರಾಗುವುದಿಲ್ಲ, ನಗುವುದೇ ಇಲ್ಲ, ಎಂದು ಶಪಥ ಮಾಡಿದರೂ ಅದು ಭಂಗವಾಗುವುದು ಖಂಡಿತ. ಆಗಿನ ನಾಟಕ ಕಂಪನಿಗಳ ವಾಚನಕ್ಕೆ ಮೊದಲಿಟ್ಟಾಗ ಈ ಮಾತಿನ ಸತ್ಯವು ಗೊತ್ತಾದೀತು. ಹನುಮಂತರಾಯರ ಮಗ ಪೋಲಿಸ್ ರಂಗನ ನಾಯಿಂದನ ವೇಷ, ಕಂಪನಿ ಅಡಿಗೆಯಾತ ಶಾಮರಾಯನ ಯಮಧರ್ಮರಾಜನ ಪಾತ್ರ, ಆ

ಪ್ರಶ್ನೋತ್ತರಗಳು, ರಂಗಸ್ಥಳದಲ್ಲಾದ ಆಕಸ್ಮಿಕಗಳು ಇನ್ನೂ ಒಂದು ಎಂತಾ ಚಿತ್ರಗಳು ಕಣ್ಣ ಮುಂದೆ ಸ್ಪಷ್ಟವಾಗಿ ನಿಲ್ಲುತ್ತವೆ. ಯಾವ ಸಂದರ್ಭವನ್ನಾಗಲಿ ಯಾವ ವ್ಯಕ್ತಿಯನ್ನಾಗಲಿ ಹಗುರಮಾಡಿ ನಮ್ಮ ದೃಷ್ಟಿಯಿಂದ ದೂರ ಮಾಡುವಂತಿಲ್ಲ. ಮಹಾರಾಜರನ್ನು ಬಿಟ್ಟು ಇನ್ನು ಯಾರಿಗೂ ಎದ್ದು ಕೈಮುಗಿಯದೆ ಕೂತಲ್ಲೇ ಗೌರವ ಸಲ್ಲಿಸುತ್ತಿದ್ದ ರಾಮಕೃಷ್ಣಪ್ಪನವರು ಸಿರಸ್ತೇದಾರರಾಗಿದ್ದರೂ ಅವರ ಆತ್ಮಗೌರವ, ಅವರ ಧರ್ಮಬುದ್ಧಿಯಿಂದ ನಿಸ್ಪೃಹ ಚಕ್ರವರ್ತಿಗಳು ಬೆಟ್ಟದ ಬಸವನಿಗೆ ಕ್ಷೀರಾಭಿಷೇಕ ಮಾಡಿಸಿದ ಶಿವಪಾದಸ್ವಾಮಿಗಳು, ಅವರು ಪ್ರಾಣಕ್ಕಿಂತ ಪ್ರಿಯವಾಗಿ ಸಾಕಿದ್ದ ದಿನಕ್ಕೆ ಎರಡು ರಸಬಾಳೆ ಗೊನೆಗಳನ್ನು ತಿಂದು ಎರಡಡಿ ಎತ್ತರದ ಸುಪ್ಪತ್ತಿಗೆಯ ಮೇಲೆ ಮಲಗುತ್ತಿದ್ದ ಅವರ ಬಿಳಿ ಎತ್ತು—ಈ ಸಂಗತಿಗಳು ವಿಸ್ಮಯವೋ ಆಶ್ಚರ್ಯವೋ ಏನು? ಇವರ ಜೊತೆಗೆ ಮಹದೇವಸ್ವಾಮಿಗಳೂ ಬರುತ್ತಾರೆ. ಅವರು ಬೆಂಗಳೂರಿನ ಒಬ್ಬ ಅವಧೂತರೆಂದು ಕೇಳಿದ್ದೇವೆ.

ಹಿಂದಿನ ಪ್ರಭುಗಳು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಡೆದ ಕೆಲವು ಘಟನೆಗಳನ್ನು ಇವರಲ್ಲಿ ಉಲ್ಲೇಖಿಸಿದ್ದಾರೆ. ಆಳರಸರ ಆತ್ಮಗೌರವದ ಸೂಕ್ಷ್ಮದರ್ಶಿತ್ವ ಸಾಂಬಯ್ಯನವರ ಮೀಸೆಯ ವಿನಾಶಕ್ಕೆ ಕಾರಣವಾದ ಸಂಗತಿ, ಹಾಗೆಯೇ ಜೊಪ್ಪಕೊಂಡದರಸರ ಸರಿಗೆ ಪಂಚೆಯ ವಿಚಾರಕ್ಕೆ ಚಾಮಭೂಪಾಲರು ಮಾಡಿದ ಯುಕ್ತಿ ಇವುಗಳಿಂದ ವ್ಯಕ್ತವಾಗುತ್ತದೆ. ಈ ಸೂಕ್ಷ್ಮ ವಿಚಾರಗಳಲ್ಲಿ ಅವರು ಜಾಗರೂಕರಾಗಿದ್ದರೆಂಬುದನ್ನು ಚೆನ್ನಾಗಿ ಮನಗಾಣಬಹುದು. ಇತರರ ವಿಚಾರಕ್ಕಾದರೂ ಅದೇ ಘನತೆ ಸ್ನೇಹಪರತೆ ಇದ್ದುದರಿಂದಲೇ ಅವರು ಆದರ್ಶಪ್ರಭುಗಳಾದರು. ಉತ್ತರ ದೇಶದ ಜ್ಯೋತಿಷ್ಕರು ಅರಸರ ಕೈ ನೋಡಿ "ಇದು ಕಟ್ಟಿಗೆ ಮಾರಿ ಜೀವಿಸುವವನ ಕೈ" ಎಂದಾಗ ಅವರ ಮಾತಿನ ಸತ್ಯವನ್ನು ಪುನಃ ಪರೀಕ್ಷಿಸಿ ತಿಳಿದು ಆ ಜ್ಯೋತಿಷ್ಕರ ಯೋಗ್ಯತೆಗೆ ಮೆಚ್ಚಿಕೊಂಡರಲ್ಲದೆ ಕೋಪಿಸಿಕೊಳ್ಳಲಿಲ್ಲ. ಅರಸರ ದಯೋರೋಗಕ್ಕಾಗಿ ನೀಡಿದ ದಾನವನ್ನು ಪರಿಗ್ರಹಿಸಲು ಸೋಮಯಾಜಿಗಳು ಎಡಗೈ ನೀಡಿದಾಗಲೂ ಅರಸರು ಆಗ್ರಹಗೊಳ್ಳಲಿಲ್ಲ. ಇಂತಹ ವಿಚಿತ್ರ ವಿಸ್ಮಯ ಕೌತುಕದ ಪ್ರಸ್ತಾಪಗಳನೇಕವಾಗಿ ಆ ಕಾಲದಲ್ಲಿ ನಡೆದುವು.

ಅಸಾಮಾನ್ಯವಾದ, ಅಪೂರ್ವವಾದ ಆ ಕೆಲವು ಸಂದರ್ಭಗಳಲ್ಲಿ ಇದ್ದ ಶ್ರೀ ಆಚಾರ್ಯರು ಮನತಣಿಸಿದ್ದಾರೆ. ನಮಗೆ ಆ ಪುಣ್ಯವಿಲ್ಲವಾಗಿ ಇಷ್ಟಾದರೂ ಲಭ್ಯವಾಗಲಿ ಎಂದು ಆ ವಿಷಯ ನಿವೇದನೆಯ ಮೂಲಕ ನಮ್ಮ ಮನ ತಣಿಸಿದ್ದಾರೆ. ತಾವು ಕಂಡುದನ್ನು ನಾವು ಕಾಣುವಂತೆ ತಮ್ಮ ಕಲಾ ಶಕ್ತಿಯನ್ನು ಲೇಖನದಲ್ಲಿ ಪ್ರಯೋಗಿಸಿ ಇಂತಹ ಅಪೂರ್ವ ರೀತಿಯ ರಚನೆಯಲ್ಲಿ ಕೃತಕೃತ್ಯರಾದ ಆಚಾರ್ಯರಿಗೆ ಕನ್ನಡ ನಾಡಿನವರು ಎಷ್ಟು ಕೃತಜ್ಞರಾಗಿದ್ದರೂ ಸ್ವಲ್ಪವೇ. ನಿಜವಾಗಿ ನಮ್ಮ ಅಂದಿನ ಆ ಮಹಾನುಭಾವರ ನೈಜ ಉದಾತ್ತ ಮಾನವೀಯತೆಯನ್ನು ತಿಳಿಯಲು

ಈ ಪುಸ್ತಕದಿಂದ ಮಹೋಪಕಾರವಾಯಿತು. ಆಚಾರ್ಯರು ಸಲ್ಲಿಸಿದ ಕಡೆಯ ಸೇವೆ ಯಾದರೂ ಇದು ಸಾರ್ಥಕ ಸೇವೆ.

ಈ ಪುಸ್ತಕದಲ್ಲಿ ಮೂವರು ಕನ್ನಡ ಶ್ರೇಷ್ಠ ಪುರುಷರ ಚಿತ್ರಗಳಿವೆ. ಹಾಸ್ಯರಸ ಪ್ರಧಾನ ಗ್ರಂಥಗಳಲ್ಲಿ ಅತ್ಯುತ್ತಮವಾದ ಈ ಗ್ರಂಥವನ್ನು ಕನ್ನಡಿಗರು ಆದರದಿಂದ ಓದಿ ಹರ್ಷಿಸುವರೆಂದು ಆಶಯ.

—1963

ಪರಮಾತ್ಮನ ಲೀಲಾಗೃಹ

ರಾಗ : ಜಿಲ್ಲಾ ಜುಂಜೋಟಿ ಆದಿತಾಳ

ಕೈವಲ್ಯದ ಸೋಪಾನಗಳಿದುವೈ
ಜೀವಿತ ಪುರುಷಾರ್ಥದ ಪರಿಯೈ ||ಪಲ್ಲವಿ||

ನಾನಾ ಭೋಗದ–ಬೀರವ ನುಳಿದು
ದೀನ ಹೀನ ಜನ–ಬಂಧುವೆನಿಸುವ
ಮಾನಿತ ಪದವಿಯಾ–ಪರದಿರವೈ ||೧||

ಶ್ರಮ ಸಹಿಷ್ಣುತಾ–ಸುಖ ಜೀವಿತದ
ವಿಮಲಾತ್ಮರ ಸಮ ಭಾವದ ಭುವಿಯು
ಪ್ರೇಮಬಾಷ್ಪ ಮುಕ್ತಾ ಫಲವೈ ||೨||

ಶೋಕದಿ ಶಿಕ್ಷೆಯನೊಂದಿದ ಮನದ
ಶೋಕಾನಂದದ ಶಾಂತ ಮಹಿಮೆಯ
ಲೋಕದಂದ ವೈಕುಂಠವದೈ ||೩||

ನೋವನರಿಯದ ಸೇವಾ ತಪಕೆ
ದೇವತೆಗಳು ತಲೆಬಾಗಿಪ ಪಾವನ
ಭಾವಕೆ ಸುಲಭ ಸಾಯುಜ್ಯವದೈ ||೪||

ದುರಿತವ ನೀಗುವ ಕರುಣಾಮಯದ
ಧರೆಯಾನಂದ ದೀನ ಹೃದಯವೆ
ಪರಮಾತ್ಮನ ಲೀಲಾಗೃಹವೈ ||೫||

ಉನ್ಮತ್ತ ಭಾಮಿನಿ

ದೃಶ್ಯ ೧

(ವೃದ್ಧ ಯತಿಯೊಬ್ಬನು ನಿಧಾನವಾಗಿ ನಡೆದು ಬಂದು ಮರದಡಿಯಲ್ಲಿ ಕುಳಿತು ಸುತ್ತ ದೃಷ್ಟಿಸಿ ನೋಡುತ್ತಾ, ಕಿವಿಗೊಟ್ಟು ಏನನ್ನೋ ಆಲಿಸುವನು.)

ಯತಿ—ನಮೋ! ಸರ್ವಶಕ್ತ, ನಮೋ ನಮಃ (ಕುಳಿತು) ಇಷ್ಟು ನಿಶ್ಶಬ್ದದ ಈ ಸಂಜೆಯಲ್ಲಿ, ಇಂತಹ ವಿಜನ ಪ್ರದೇಶದಲ್ಲಿ, ಏನೋ ಕೇಳಿಸುತ್ತಿದೆಯಲ್ಲಾ! ಯಾರೋ ಅಳುವ ಧ್ವನಿ. ಅಹುದು. ಅದೇನು ಆಶ್ಚರ್ಯ, ಯಾರಾದರೂ ಗತಿಸಿ ಸಂಸ್ಕಾರಕ್ಕೆ ಕರತರುವ ಸೂಚನೆ ಇರಬಹುದು. ಬಂಧುಗಳು ಶೋಕಿಸುತ್ತಾ ಹಿಂದೆ ಬರುತ್ತಿರುವರೇನೋ. (ಸ್ವಲ್ಪ ಮುಂದೆ ಬಗ್ಗಿ ನೋಡಿ) ಓಹೋ ಅಳುವು ಹತ್ತಿರದಲ್ಲೇ ಕೇಳಿಸುತ್ತಿದೆ. ದೊಡ್ಡವರ ದನಿಯಲ್ಲ, ಮಕ್ಕಳು ಅಳುವಂತಿದೆ. ಹೌದು. ಮಕ್ಕಳು. ಅವಾರು! ಆ ಮಕ್ಕಳ ತಾಯಿಯಿರಬೇಕು. ಆದರೆ ಇಲ್ಲೇಕೆ ಬರುತ್ತಿರುವರು? ಈ ಹೊತ್ತಿನಲ್ಲಿ ಒಂಟಿಯಾಗಿ; ಅಬಲೆ, ಏನು ಧೈರ್ಯ, ಅಬ್ಬ! ಏನು ಸಾಹಸ? ಇದೇನೋ ವಿಶೇಷವಿರಬೇಕು. ಅಗೋ ಸಮೀಪಕ್ಕೆ ಬರುತ್ತಿದ್ದಾರೆ. ಮುಂದೆ ಸಾಗದೆ ಇಲ್ಲಿಂದಲೇ ಹಿಂತಿರುಗುವಂತೆ ಮಾಡಬೇಕು. ನಾನೇ ಮುಂದಾಗುವುದು ಒಳ್ಳೆಯದು.

(ಛಿದ್ರವಸನದ ಉನ್ಮಾದಿನಿಯು ಇಬ್ಬರು ಮಕ್ಕಳೊಂದಿಗೆ ಪ್ರವೇಶ ಮಾಡುವಳು. ಒಂದು ಮಗು ಕಂಕುಳಲ್ಲಿ, ಮತ್ತೊಂದು ಮಗು ಅವಳ ಬಟ್ಟೆಯನ್ನು ಹಿಡಿದೆಳೆಯುತ್ತಾ "ಹಸಿವು ಅಮ್ಮಾ" ಎಂದು ಗೋಳಿಡುತ್ತಿದೆ.)

ಯತಿ— ಅಬ್ಬ! ಎಂತಹ ನೋಟ. ಎದೆ ಬಿರಿಯುವಂತಿದೆ. ದುಃಖ ರೋಷಗಳಿಂದ ಸಂತ್ರಸ್ತಳಾದ ಈ ಭಾಮಿನಿ ಯಾರೋ ನುಡಿಸಿ ನೋಡುವ....ನೀನಾರು ತಾಯಿ!

ಭಾಮಿನಿ—(ದುರುಗುಟ್ಟಿ ನೋಡುವಳು.)

ಯತಿ—ನಿನಗೇನಾಯಿತು ? ಮಾತನಾಡಲಾಗುವುದಿಲ್ಲವೇ ?

ಮಕ್ಕಳು—ಅಮ್ಮಾ ! ಅನ್ನಾ, ಅನ್ನಾ.

ಯ —ನಿಮಗೆ ಅನ್ನಬೇಕೆ ? ನಾನು ಕೊಡಿಸುವೆನು. ತಾಯಿ ! ಊರ ಬಿಟ್ಟು ಈ ದಾರಿಯಲ್ಲಿ ಬಂದರೆ ಅನ್ನ ದೊರೆಯುವುದೇ ? ಸಂಜೆ ಮಬ್ಬಿನಲ್ಲಿ ಈ ಎಳೆ ಮಕ್ಕಳೊಂದಿಗೆ ನೀನಿತ್ತ ಬರಲು ಕಾರಣವೇನು ?

ಭಾ—ಅದನ್ನು ತಿಳಿದು ನಿನಗೇನಾಗಬೇಕು ?

ಮಕ್ಕಳು — ['ಹಸಿವು' ಎಂದು ಅರಚುತ್ತಾ ಬಿದ್ದುಕೊಳ್ಳುವುವು.]

ಯತಿ — ಕೋಪಿಸಬೇಡ, ನಿನ್ನ ಕಾರಣವು ಸಾಧುವಾಗಿದ್ದರೆ ನಿನಗೆ ನನ್ನ ಕೈಲಾದ ಸಹಾಯ ಮಾಡುವೆ.

ಭಾ — ಹಾಗೋ.... ಆದರೆ ನಿನ್ನ ಸಹಾಯವು ಇಷ್ಟು ಮಾತ್ರ ಸಾಕು, ನಮ್ಮನ್ನು ತಡೆಯದೆ ನಮ್ಮ ಪಾಡಿಗೆ ನಮ್ಮನ್ನು ಬಿಟ್ಟುಬಿಡು.

ಯ — ಉತ್ತಮರ ಮಗಳಂತೆ ತೋರುವೆ. ನೀನು ಈ ದಾರಿಯಲ್ಲಿ ಬರಬಹುದೆ? ಬರಬಾರದೆಂಬುದು ನಿನಗೆ ತಿಳಿಯದೆ ? ಏನೂ ಅರಿಯದ ಮಕ್ಕಳನ್ನು ಕರೆದುಕೊಂಡು ಈ ಹೊತ್ತಿನಲ್ಲಿ ಮಸಣದ ಮಾರ್ಗದಲ್ಲಿ ನಿನಗೇನು ಕೆಲಸ ?

ಭಾ — ನೀನಾರು ? ನಮ್ಮನ್ನಾಕ್ಷೇಪಿಸುವುದೇಕೆ ?

ಯ — ಆಕ್ಷೇಪಿಸುವುದು ಮಾತ್ರವಲ್ಲ, ನಿನ್ನ ಕೆಲಸವನ್ನು ನಿರೋಧಿಸಲೂ ಬೇಕು. ಅಬಲೆ ನೀನು. ಅತ್ಯಂತ ಸಾಹಸಕ್ಕೆ ತೊಡಗಿರುವೆ.

ಭಾ — ಊರು ಸುಡುಗಾಡಿಗೂ ಕೇಡಾಗಿದೆ ನನ್ನ ಪಾಲಿಗೆ.

ಯ — ಅದಕ್ಕಾಗಿ ?

ಭಾ — ನಾಡ ಕಾಯುವ ದೈವವೂ ನನ್ನ ಕೈಬಿಟ್ಟಿದೆ.

ಭು — ಅದಕ್ಕೆ ಪ್ರತಿಯಾಗಿ ನೀನು ಮಾಡುವುದೇನು ?

ಭಾ — ಕಾಡ ಕಾಯುವ ದೈವವನ್ನು ಬೇಡ ಬಂದೆ.

ಯ — ಕಾಡ ಕಾಯುವ ದೈವ ನಿನ್ನ ಕಾಪಾಡುವುದೋ ?

ಭಾ — ಎಲ್ಲರನು ಸಮದಿ ಕಾಯುವ ದೈವಕಿಂತಲೂ ಎಲ್ಲರನು ಸಮದಿ ಕೊಲ್ಲುವ ದೈವ ದಯೆ ಲೇಸು.

ಯ — ಆ ದೈವವಾವುದೋ.

ಭಾ — ರುದ್ರ, ಮಹಾರುದ್ರ, ಅಲ್ಲಿರುವನಂತೆ.

ಯ — ಅರೆ ಹುಚ್ಚಿಯಂತಿರುವೆ, ಆದರೂ ನುಡಿ ಲೇಸು, ಶಾಂತಳಾಗು ಮಗಳೇ ! ನೀನಲ್ಲಿ ಹೋಗಬಾರದು.

ಭಾ — ನಾನು ಹೋಗಲೇಬೇಕು.

ಯ — ನಿನ್ನ ಕಥೆಯೇನು ಹೇಳು, ಏಕಿಷ್ಟು ಸಂತಾಪ ?

ಭಾ — ಇದುವರೆಗೂ ನನ್ನ ಕಡೆ ನೋಡಿದವರಿಲ್ಲ. ಏನೆಂದು ನುಡಿಸಿದವರಿಲ್ಲ,

ನನ್ನ ಕಥೆಯನ್ನು ಕೇಳಲು ನೀನು ಸಿದ್ಧಳಾಗಿರುವೆಯಾ ?

ಯ — ಅಗತ್ಯವಾಗಿ ಕೇಳುವೆನು. ಆದರೆ ಸ್ವಲ್ಪ ನನ್ನ ಮಾತನ್ನು ಕೇಳು. ನೋಡು, ಈ ಮಕ್ಕಳೆಷ್ಟು ಬಳಲಿದ್ದಾರೆ. ನಿನ್ನ ಬಳಲು ನಿನಗೆ ಲಕ್ಷ್ಯವಿಲ್ಲ. ಇಲ್ಲಿಯೇ ಸಮೀಪದಲ್ಲಿ ನನ್ನ ಕುಟೀರವಿದೆ. ಅಲ್ಲಿ ಬಂದು ಸ್ವಲ್ಪ ದಣಿವಾರಿಸು, ಅನುಮಾನಿಸಬೇಡ, ನಾನು ವೃದ್ಧನು, ನಿನಗೆ ಒಳ್ಳೆಯದನ್ನು ಬಗೆದು ಹೇಳುವೆನಲ್ಲದೆ ಮತ್ತೇನೂ ಇಲ್ಲ. ಹಸಿವಿನ ಬಾಧೆಯನ್ನು ಮೊದಲು ನಿವಾರಿಸು, ಆಮೇಲೆ ಮುಂದಿನ ಮಾತು ಕಥೆ ಎಲ್ಲ ನಡೆಯಲಿ.

ಭಾ — ನನಗೆ ಉಪಕಾರ ಮಾಡಲು ಬಗೆವ ತಂದೆಯೇ ! ಎಷ್ಟು ದಿನ ನೀನು ನಮ್ಮ ದಣಿವಾರಿಸಬಲ್ಲೆ, ಅನ್ನವಿಡಬಲ್ಲೆ ? ಇಂದು ನಾಳೆಗೆ ತೀರುವುದಲ್ಲವಿದು. ಮತ್ತೆ ಮತ್ತೆ ಈ ಹಸಿವು, ಈ ದಣಿವು, ಈ ದುಃಖ, ಈ ಪಾಪ ನಮ್ಮನ್ನು ಕಾಡುತ್ತಲೇ ಬರುವುವು. ನಮ್ಮ ಬದುಕಿನ ಆಸರೆಯೇ ಅವುಗಳಿಗೆ ತಪ್ಪಿ ಹೋಗಬೇಕು.

ಯ — ನೀನು ತಪ್ಪಿಸಿದರೇನಾಯ್ತು ? ಜಗದಿಂದ ನೀನು ಬೇರೆಯಾದರೆ ನಿನ್ನ ಅನುಭವದ ಪಾಲು ನಿನಗಿಲ್ಲದಂತಾಯ್ತು. ಇದಕ್ಕೂ ಹತ್ತು ಪಾಲು, ನೂರು ಪಾಲು ಬಾಧೆಗಳನ್ನು ಮೌನವಾಗಿ ಸಹಿಸುವ ಉದಾರಿಗಳ ಆಶ್ರಯದಲ್ಲಿ, ಅವೆಲ್ಲವೂ ಬದಕು ಸಾಗಿಸುತ್ತವೆ. ಇಂತಹ ಮರುಳು ಬುದ್ಧಿಯ ಬಲ ಪ್ರಯೋಗಕ್ಕೆ ಯಾವ ಪಾಪವನ್ನೂ ಅರಿಯದ, ಈ ಎಳೆ ಕಂದಗಳು ಬಲಿಯಾಗಬೇಕಲ್ಲವೆ ? ತಾಯಾದ ಮಾತ್ರಕ್ಕೆ ಇಂತಹ ಅಧಿಕಾರವನ್ನು ನೀನು ಪಡೆದಿರುವೆಯೆಂದು ತಿಳಿದೆಯೋ ? ಅವರು ದೇವರ ಮಕ್ಕಳು ಎಚ್ಚರಿಕೆ ! ದುಡುಕಿದೆಯಾದರೆ ಇನ್ನೂ ಕೇಡು, ಇನ್ನೂ ಅಪಾಯಕ್ಕೆ ಕಾರಣವಾದೀತು.

ಭಾ — ಇದಕ್ಕಾಗಿ ಬರುವ ಅಪಾಯಗಳಿಗೆಲ್ಲಾ ನಾನು ಸಿದ್ಧಳಾಗಿಯೇ ಬಂದಿದ್ದೇನೆ. ಯಾರಾದರೂ ನನ್ನನ್ನು ಏನು 'ಮಾಡುವರು ? ಬಂಧಿಸಬಹುದು, 'ಹೊಡೆಯಬಹುದು. ಇನ್ನೂ ಅದಕ್ಕೂ ಮೀರಿ ಕೊಲ್ಲಬಹುದು. ಮಕ್ಕಳಿಗೇನೂ ಅಪಾಯವಿಲ್ಲವಲ್ಲ! ದೇವರ ಮಕ್ಕಳಂತೆ. ಯಾವ ದೇವರು ? ದೆವ್ವ ಬಡಿದಿದೆಯೇನೋ ದೈವಕ್ಕೆ, ಸಾವಿನಾಸಂತೆಯಲಿ ವ್ಯಾಪಾರ, ಮಾಡುತಾ, ನೋವಿನಾ ಜೂಜಿನಲಿ ಪಂಥವನು ಕಟ್ಟುತಾ ಉನ್ಮತ್ತನಾಗಿರುವ ದೇವರನು ನಂಬಿ, ಈ ಗತಿಗೆ ಬಂದುದಾಯಿತು. ಯಾವ ದೇವರ ನಂಬಿ ಬದುಕಬಹುದು ?

ಯ — ಹುಚ್ಚರಿಗೆ ಜಗವೆಲ್ಲ ಹುಚ್ಚಾಗಿ ಕಾಣುವುದು. ಎಲೆ ಉನ್ಮತ್ತ ಭಾಮಿನಿ ! ದೇವರಿಗೆ ಹಿಡಿದಿರುವ ದೆವ್ವವನ್ನು ಉಚ್ಚಾಟನೆ ಮಾಡಬೇಕು. ಉನ್ಮತ್ತ ನಿಳಿಸಬೇಕು. ಅದು ನಮ್ಮ ಕರ್ತವ್ಯ. ಇನ್ನೂ ನಾವು ಸುಮ್ಮನಿದ್ದರೆ ಲೋಕವು ಇನ್ನೂ ಕೆಟ್ಟು ಹೋಗುವುದು.

ಭಾ--ನನಗೆ ನಂಬಿಕೆ ಇಲ್ಲ. ನೆಮ್ಮದಿ ಇಲ್ಲ. ಆ ಕೆಲಸವನ್ನು ಯಾರು ಬೇಕಾದರೂ ಮಾಡಲಿ, ನಾನಂತೂ ಇನ್ನು ಬಾಳಲಾರೆ.

ಯ — ನಿನಗೆ ಬಾಳು ಬೇಡವಾದರೆ, ಈ ಮಕ್ಕಳಿಗೂ ಬೇಡವೋ. ಅವು ಹಾಗೆ ಹೇಳುವುದಕ್ಕೂ ಅರಿಯದ ಸ್ಥಿತಿಯಲ್ಲಿರುವಾಗ ಇಂತಹ ತೀರ್ಮಾನವನ್ನು ನೀನೇ ಮಾಡಿರುವೆ. ಈ ನ್ಯಾಯವನ್ನು ನೀನೆ ಪೂರ್ಣ ವಿಚಾರ ಮಾಡಿ ನಿರ್ಣಯಿಸಿದೆಯೋ.

ಭಾ — ನಾನು ಯಾರನ್ನೂ ಒಪ್ಪಿಸಬೇಕಾದುದಿಲ್ಲ. ನನಗೆ ಯಾರೂ ಇಲ್ಲ.

ಯ — ಮೊದಲೇ ನಾನು ಹೇಳಿದೆನಲ್ಲವೇ, ಮಾತೃಪದವಿಯನ್ನು ಹೀಗೆ ದುರುಪಯೋಗ ಮಾಡಲಾಗದೆಂದು, ನೀನು ಅನಧಿಕಾರಿಯೆಂದು. ಮಕ್ಕಳು ಬದುಕಬೇಕೆಂಬ ಆಸೆಯೇ ನಿನಗಿಲ್ಲವೇನು? ನಿನ್ನ ಬದುಕು ಸಾವುಗಳಿಗೆ ಅವರ ಆಯುಷ್ಯವನ್ನು ಹೆಣೆದುಕೊಂಡಿರುವೆಯೋ ಮೂರ್ಖಳೇ! ಅವರೇಕೆ ಸಾಯಬೇಕು. ಉತ್ತರವನ್ನು ಕೊಡು.

ಭಾ — ಅಯ್ಯಾ, ನಾನು ಅನಾಥೆ. ಉತ್ತಮ ಕುಲದವಳು. ಮತ್ತೊಬ್ಬರ ಮನೆಯ ಕೂಳಿನಾಸೆ ಇಲ್ಲ. ತೊತ್ತಾಗಿ ದುಡಿದು, ದುಡಿದು ಬಹು ಕಷ್ಟದಲ್ಲಿ ಕಾಲ ನೂಕುತ್ತಿದ್ದೆ. ಈ ಮಕ್ಕಳಿಗಾಗಿಯೇ ಹೆರರ ಮನೆಯ ಕೂಲಿಯ ಕಾಸಿಗೆ ಕೈಚಾಚಿದೆ. ಮಕ್ಕಳಿಗೆ ಎಂಜಲ ಕೂಳ ಉಣಿಸಿದೆ. ತಿಂಗಳೆರಡಾಯ್ತು. ಎಲ್ಲಿಯೂ ಕೂಲಿ ಇಲ್ಲ. ಇರಲು ನೆಲೆ ಇಲ್ಲ. ಮಕ್ಕಳಿಗೆ ತುತ್ತಿಲ್ಲ. ಬೆತ್ತಲೆಯ ಮೈಗೆ ತುಂಡು ಬಟ್ಟೆಯನ್ನು ಕೊಡುವರಿಲ್ಲ. ಬೇಡಿ ಬೇಡಿ ಬೈಗಳು ತಿಂದು ಸಾಕಾದೆ. ಜೀವ ಬಲು ರೋಸಿದೆ. ಹೆತ್ತವರು ಅತ್ತೆ ಮಾವಂದಿರು ಎಲ್ಲ, ಎಲ್ಲಿಗೆ ನಡೆದರೋ, ಪುತ್ರವತಿಯನುಗೈದ ಪುಣ್ಯಾತ್ಮನು ಎಲ್ಲಿಗೆ ನಡೆದನೋ, ಅಲ್ಲಿಗೇ ನಡೆದು ನನ್ನ ಗತಿಯನು ಕುರಿತು ವಿಚಾರ ಮಾಡಲು ನಿಶ್ಚಯಿಸಿದೆ.

ಯ — ಯಾರೊಂದಿಗೆ ವಿಚಾರ ಮಾಡುವೆ?

ಭಾ — ಅವರೆಲ್ಲರೊಂದಿಗೆ.

ಯ — (ನಗುತ್ತಾ) ನಿನ್ನಂತೆಯೇ ಬಂದು ಅವರೆಲ್ಲ ಕಾದಿರುವರೇ ಅಲ್ಲಿ ನಿನಗಾಗಿ. ನೀ ಬರುವೆಯೆಂದು, ನಿನ್ನ ಮಾತಾಡಿಸಲು ಕಾದಿರಬಹುದಲ್ಲವೇ? ಹಾಗಾದರೆ ಅವರಿಗೆಲ್ಲ ಭೂತಜನ್ಮ ಬಂದಿರಬೇಕು.

ಭಾ — ಛೀ, ಹಾಗೆಂದಿಗೂ ಆಗದು. ಅವರೆಲ್ಲ ಸದಾಚಾರಶೀಲರು.

ಯ — ಅಂದರೆ ಯಾವುದೋ ಪುಣ್ಯಲೋಕದಲ್ಲಿರಬೇಕು. ಇಲ್ಲಿರುವರೆಂದು ಹೇಗೆ ನಂಬಿದೆ?

ಭಾ — ಆತ್ಮಗಳು ಎಲ್ಲಾದರೂ ಇದ್ದು ಬಂದು ಸಮಾಧಾನ ಉತ್ತರವನ್ನು ಕೊಡಬಹುದೆಂದು ನಂಬಿದೆ. ಅವರ ಆಕಾರಗಳನ್ನು ನೋಡುವಾಸೆಯಿಂದಲ್ಲ.

ಯ — ನಿನ್ನ ಭ್ರಾಂತಿಗೇನೆನ್ನಲಿ? ಉತ್ತರವು ಯಾರ ದ್ವಾರ?

ಭಾ — ರುದ್ರನನ್ನೇ ಕರೆಯುವೆನು. ಅಲ್ಲಿರುವುದು ನಿಜವಾದರೆ ಬಂದೇ ಬರಬೇಕು. ನುಡಿಯಲೇ ಬೇಕು. ಬಹು ದಯಾಶಾಲಿಯಂತೆ, ಅದೆಂತಹ ದಯೆಯೋ ಪರೀಕ್ಷಿಸುವೆನು.

ಯ — ಈ ಪರೀಕ್ಷೆಯ ಪರಿಣಾಮವೇನು ಬಲ್ಲೆಯೋ ?

ಭಾ — ಏನಾದೀತು.

ಯ — ಭಯದಿಂದ ಇನ್ನೂ ಪೂರ್ಣ ಉನ್ಮತ್ತಳಾಗಿ ದಿಕ್ಕೆಟ್ಟು ಓಡಿಬರುವೆ.

ಭಾ — ನಾನು ನಿರ್ಭೀತೆ. ಭಯವೆಲ್ಲ ಮೆಟ್ಟಿ ಬಂದಿರುವೆ.

ಯ — ಮೂರ್ಖತನವನ್ನು ಬಿಡು, ಅನ್ಯಾಯವಾಗಿ ದುರಾಗ್ರಹದಿಂದ ದುಡುಕಬೇಡ.

ಭಾ — ಹಿಂದಕ್ಕೆ ಬಂದರೆ ಬದುಕುವೆನು. ಇಲ್ಲವೇ ಅಲ್ಲಿಯೇ ನಾಶಹೊಂದುವೆನು. ನನಗಾಗಿ ಕನಿಕರಿಸುವೆಯಾದರೆ ಈ ಮಕ್ಕಳನ್ನುಳಿಸಿಕೋ. ನಿನ್ನ ನ್ಯಾಯದಂತೆ ಅದನ್ನು ಮಾತ್ರ ನಡೆಸು.

ಯ — ಪ್ರಬಲೆ! ನೀನೇನು ಮಾಡುವೆಯೋ ಮಾಡಿ ಬಾ. ಈ ಮಕ್ಕಳಿಗೆ ಊಟಮಾಡಿಸಿ, ಕುಟೀರದಲ್ಲಿ ಬಿಟ್ಟು ಪುನಃ ಬಂದಿಲ್ಲಿಯೇ ಕಾದಿರುವೆನು. ಭಯವಾದರೆ ಮುಂದಡಿ ಇಡಬೇಡ. ಕೂಡಲೆ ಹಿಂತಿರುಗಿ ಬಂದುಬಿಡು. ಮಕ್ಕಳೇ! ಏಳಿ. ನಿಮಗೆ ಅನ್ನ ಕೊಡಿಸುವೆನು(ಮಕ್ಕಳನ್ನೆಬ್ಬಿಸಿ ಕರೆದುಕೊಂಡು ಹೋಗುವನು. ಉನ್ಮತ್ತೆಯು ಮುಂದೆ ಸಾರುವಳು.)

ದೃಶ್ಯ ೨

(ರುದ್ರಭೂಮಿಯಲ್ಲಿ)

ಭಾ — ಓ! ತಂದೆ, ಹಡೆದಮ್ಮ! ನೀವೆಲ್ಲಿರುವಿರಿ? ನನ್ನ ಗತಿ ನೋಡುತ್ತಿರುವಿರೇ? ನಾನಿನ್ನು ಭೂಮಿಯಲ್ಲಿ ಹೇಗೆ ಬದುಕಬಹುದು? ಬದುಕಬೇಕೇ, ಬೇಡವೇ? ಒಂದುತ್ತರವನ್ನು ಕೊಟ್ಟರೆ ಸಾಕು. ಎಲೆ ಪುಣ್ಯ ಜೀವಿಗಳೇ! ಅತ್ತೆ ಮಾವಂದಿರೇ! ನಿಮ್ಮ ಸೇವೆಗೆ ನಾನು ಅಲ್ಲಿಗೆ ಬರಬಹುದೇ? ಈ ನೆಲದ ಬಾಳನ್ನು ಬೇಡವಾಗಿದೆಯಲ್ಲ. ನಾನೇನು ಮಾಡಲಿ? ಒಂದಾಜ್ಞೆಯನು ದಯಪಾಲಿಸಿ. ಕೈ ಹಿಡಿದ ಪ್ರಿಯ ಬಂಧುವೇ, ನಿನ್ನ ಮಕ್ಕಳ ಪಾಡು, ನಿನ್ನಂಗನೆಯ ಪಾಡು ನೋಡುತ್ತಾ ಕರಗುತ್ತಿರುವೆಯಲ್ಲವೇ? ಏಕೆ ನುಡಿಯದಿರುವೆ? ಈಗಲೇ ನಿನ್ನಬಳಿಗೆ ಬಂದು ಬಿಡುವೆನು. ಅಪ್ಪಣೆ ಕೊಡು. ಒಂದು ಮಾತು ಸಾಕು....ಏನಿದು ಬರಿ ಶೂನ್ಯ. ಮಹಾ ಶೂನ್ಯ, ನನ್ನದೇ ಮಾರುದನಿ. ಉತ್ತರವೇ ಇಲ್ಲ. ಭೀಕರ ಶೂನ್ಯ. ಇರಲಿ. ನಿರ್ಭೀತೆ ನಾನು. ಬದುಕಿನಾಸೆಯನೆಲ್ಲ ಮೆಟ್ಟಿ ಬಂದಿರುವೆ. ಅವರು ಯಾರೂ ನುಡಿಯಲೊಲ್ಲರು. ರುದ್ರನಾಜ್ಞೆಯೋ ಏನೋ....? ಇರಬಹುದು. ಆತನಿರುವಾಗ ಇದೆಲ್ಲವನೂ ಕೇಳಿರನೇ? ಓ, ತಂದೆ, ಶರಣು, ಮಹಾರುದ್ರ! ಮಹಾದೇವ, ನಿನ್ನ ದಯೆ ನಂಬುವೆನು. ನನ್ನ ವಂಚಿಸಬೇಡ. ನನ್ನ ನೋಡುತ್ತಿರುವೆ ನೀನು. ನಿನ್ನ ನೋಡಲಾರೆ ನಾನು. ನಿನ್ನ ನುಡಿಯೊಂದೂ ಕೇಳಿಸದು ನನಗೆ, ನೀನು ನನ್ನಲ್ಲಿ

ನುಡಿಗಳ ಕೇಳುತ್ತಿರುವೆ. ಒಂದು ಸಲ ಮಾತಾಡು. ಓ, ಶಿವಾ! ಮಾತಾಡ ಲೊಲ್ಲೆಯಾ? ಒಲ್ಲೆಯಾ? ಹೀಗಾದರೆ ಒಂದನುಗ್ರಹ ಮಾಡು. ಹಣೆಗಣ್ಣ ತೆರೆ. ಇಲ್ಲಿಯೇ ನನ್ನ ಬೂದಿಮಾಡಿಬಿಡು, ಓ ಶಂಕರಾ! ಏನು ದನಿಯದು. ಅಯ್ಯೋ! ನನ್ನ ಮಾರುದನಿ. ನಂಬಿ ನಿನ್ನೆಡೆಗೆ ಬಂದೆ. ಶಿವಾ! ಮೋಸವಾಯಿತು. ಇಲ್ಲಿಲ್ಲ ನೀನು. ನಿಜವಾಗಿ ಎಲ್ಲಿಯೂ ಇಲ್ಲ ನೀನು. ನಿಜವಾಗಿ ನೀನಿಲ್ಲ.

ವಾಣಿ — ಉಂಟು. ನಾನುಂಟು.

ಭಾಮಿನಿ — ನಿಜವೇನು? ನೀನುಂಟು ಏತರಲಿ, ಏನುಂಟು?

ವಾಣಿ — ಎಲ್ಲಿ ದಯೆಯುಂಟೋ ಅಲ್ಲಿ ನಾನುಂಟು. ದಯೆಯ ಧಿಕ್ಕಾರವೇ ಎನಗೆ ಧಿಕ್ಕಾರ. ದಯೆಯ ಧರ್ಮಾಕೃತಿಯಲ್ಲಿ ನಾನಾಗಲೇ ಬಂದೆ. ಹಿತದ ಮಾತು ಆಡಿ ಮುಗಿಸಿರುವೆ ಆಗಲೇ, ಯತಿಯ ಬಾಯಿಂದ, ಅದನ್ನೆಲ್ಲ ನಿರಾಕರಿಸಿ ವಿಪರೀತ ಪರೀಕ್ಷೆಗೆ ತೊಡಗಿರುವೆ ಮೂರ್ಖತನದಲ್ಲಿ.

ಎಲೆ ಮಗಳೆ! ಭಯವಿಲ್ಲ, ಬದುಕಿನ್ನು ಕೆಲವುಕಾಲ. ಯತಿಯು ಕಾಯುವನಲ್ಲಿ ನಡೆ ಬೇಗ ಇಲ್ಲಿಂದ.

ಭಾಮಿನಿ — ಅಹಹಾ! ಏನದ್ಭುತ. ಅಬ್ಬ! ಆದರೂ ಭೀಕರ, ನಿಶ್ಶಬ್ದ, ಶೂನ್ಯ. ನಿಲ್ಲಲಾರೆ ನಾನಿಲ್ಲಿ. (ಓಡುವಳು)

ದೃಶ್ಯ ೩

(ಯತಿಯು ಮರದಡಿಯಲ್ಲಿ ಕುಳಿತಿರುವನು)

ಭಾಮಿನಿ — (ಭಾಮಿನಿ ಬರುವಳು. ಕಾತರವಾಗಿ ಕಾಣುವಳು.)

ಯತಿ — ಬಾ! ಮಗಳೇ! ಸುಧಾರಿಸಿಕೋ. ಕುಳಿತ ಕೋ. ನೀರು ಬೇಕೇ, (ಕಮಂಡಲದ ನೀರನ್ನು ಕೊಟ್ಟು) ಕುಡಿ. ನಿನಗೆ ಒಳ್ಳೆಯದಾಗುವುದು.

ಭಾಮಿನಿ — (ನೀರು ಕುಡಿದು, ಯತಿಯ ಕಾಲಿಗೆರಗುವಳು.)

ಯತಿ — ಏಕೆ? ಗಾಬರಿಗೊಂಡಂತಿರುವೆ. ಏನಾಯಿತು, ಬಹಳ ಭಯವಾಯಿ ತಲ್ಲವೆ?

ಭಾಮಿನಿ —ಎಲ್ಲವನ್ನೂ ನೀನರಿತಿರುವೆ ತಂದೆಯೇ, ನನ್ನಬಾಯಿಂದ ಮತ್ತೇಕೆ ಆಡಿಸುವೆ? ನೀನೇ ನಿಜದೈವವೀಗ. ನಿನ್ನ ದಯೆಯೇ ದೈವ. ಧರ್ಮಕ್ಕೆ ಶರಣು

ಯತಿ — ಏಕಮ್ಮ! ರುದ್ರನನ್ನು ಬೇಡಲಿಲ್ಲವೆ?

ಭಾಮಿನಿ — ಎಂತಹ ಶೂನ್ಯವದು, ಅದರಲ್ಲಿಯೇ ಬೆರೆತೆ. ಕೂಗಿ, ಕೂಗಿ ಬೇಡಿದೆ. ಯಾರೂ ನುಡಿಯಲಿಲ್ಲ. ಬರೀ ಶೂನ್ಯ.

ಯತಿ — ಆದರೂ ಧೀರೆ ನೀನು, ಗೆದ್ದು ಬಂದಿರುವೆ.

ಭಾಮಿನಿ — ಅದು ನಿನ್ನ ದಯೆ ತಂದೆ! ನಾನು ಮೂರ್ಖಳಾದೆ. ಆದರೂ

ಶಿವನು ದಯಾಳು. ನಿನ್ನಲ್ಲಿ ನೆಲಸಿ ಅನುಗ್ರಹಿಸಿರುವನು, ಅಲ್ಲೊಂದು ನುಡಿ ಕೇಳಿದೆ ; ಇಲ್ಲಿ ನಿನಗೆ ಶರಣಾದೆ.

ಯತಿ — ಜೀವವಿರುವತನಕ ಈ ಜಗದಲ್ಲಿ ಬಾಳಲು ಪ್ರಯತ್ನಿಸಬೇಕು. ದುಡುಕಬಾರದು. ದುರಾಗ್ರಹವು ತಕ್ಕುದಲ್ಲ. ದಯೆಯೂ, ಸಹನೆಯೂ, ಕ್ಷಮೆಯೂ, ಧರ್ಮದೇವತೆಯ ಪ್ರೇಮ ಪುತ್ರಿಯರು. ಅವರ ಭಕ್ತಳಾಗಿ ಜೀವನದಲ್ಲಿ ಸಮಾಧಾನ ಹೊಂದು. ನಿನ್ನಂತಹವರೇ ಕೆಲವರು ನನ್ನ ಆಶ್ರಮದಲ್ಲಿರುವರು. ನಮ್ಮಂತೆ ಜಗಕ್ಕೆ ಬಂದ ಜೀವಿಗಳೆಲ್ಲರಲ್ಲಿ ನಾವು ಮೈತ್ರಿಯಿಂದ ನಡೆದುಕೊಳ್ಳಬೇಕು. ಸಾಕಿದ ಪ್ರಾಣಿಗಳುಂಟು. ಬೆಳೆಸಿದ ಗಿಡಬಳ್ಳಿಗಳುಂಟು. ಅವುಗಳ ಸೇವೆಯು ಎಷ್ಟೋ ಆಹ್ಲಾದಕರವಾಗಿರುವುದು. ಎಷ್ಟೋ ಕರ್ತವ್ಯವನ್ನು ಹೊತ್ತು ಬಂದಿರುವ ನಾವು ಏನನ್ನೂ ಮಾಡದೆಯೇ ಈ ಲೋಕವನ್ನು ನಿಕೃಷ್ಟವಾಗಿ ಕಂಡು, ಬಾಳಿನಲ್ಲಿ ನಿರಾಸೆ ಹೊಂದುವುದು ಉಚಿತವಲ್ಲ. ಒಂದು ಕೆಲಸದಿಂದಾಗಲಿ, ಒಂದು ಮಾತಿನಿಂದಾಗಲಿ ನಮ್ಮ ಬಾಳು ಜಗತ್ತಿನಲ್ಲಿ ಸಾರ್ಥಕವಾಗಬೇಕು.

ಭಾಮಿನಿ — ಗುರುವೇ ಅಜ್ಞಾನದಿಂದ ನನ್ನನ್ನು ಬೆಳಕಿಗೆ ತಂದೆ. ಸಾವಿನಿಂದ ಬದುಕಿಗೆ ತಂದೆ. ಎಂತಹ ಬೆಳಕು ನೀನು.

ಯತಿ — ನಡೆ ಮಗಳೇ ! ಕುಟೀರವು ಸಮೀಪದಲ್ಲೇ ಇದೆ.

ಭಾಮಿನಿ — ದಯೆಯೇ, ಕ್ಷಮೆಯೇ, ಸಹನೆಯೇ, ಜೀವನದ ಭಾಗ್ಯದೇವತೆಗಳೇ! ನಿಮಗೆ ಶರಣು ಬಂದೆ. ಏನೂ ಅರಿಯದ ಈ ದುರ್ಬಲೆಗೆ ಬಲವಿತ್ತು ರಕ್ಷಿಸಿ. ರಕ್ಷಿಸಿ.

(ನಿರ್ಗಮನ)

ಕಾಲಮಹಿಮೆಗೆ ಎಲ್ಲರೂ ಆಕರ್ಷಿತರು. ಸುಧಾರಣೆಗಳ ಪರಿವರ್ತನೆಗಳ ಮಹಾವಿಪ್ಲವದ ಈ ನವ ಯುಗದಲ್ಲಿ ಎಲ್ಲ ಹೊಸಹೊಸದಾಗಿ ಯಾವುದೋ ವಿಭ್ರಾಂತಿಯ ಜಾಲಕ್ಕೆ ವಶರಾಗಿದ್ದೇವೆ. ಜೀವನ ವ್ಯವಸ್ಥೆಗಳೆಲ್ಲಾ ಮಗುಚಿಬಿದ್ದಿವೆ.

—ಭಾರತಿ

ದುಂದುಭಿ

(ಚಿಕ್ಕ ಪ್ರಹಸನ)

ಪ್ರವೇಶ–೧

(ಬೆಳಕು ಹರಿಯುವ ಮುನ್ನ ನಸುಗತ್ತಲಿನಲ್ಲಿ ಚಿಂತಾಕ್ರಾಂತನಾಗಿ ನಿಂತಿರುವ ದುರ್ಮತಿ. ಅವನನ್ನು ಸಮೀಪಿಸುತ್ತಿರುವ ಕಾಲಪುರುಷ.)

ದುರ್ಮತಿ : ಕಾಲಾಯ ತಸ್ಮೈ ನಮಃ

ಕಾಲ : ಏನು ಸನ್ನಾಹ, ದುರ್ಮತಿ ! ಆಗಲೇ ಮುಂದಿನ ಪ್ರಯತ್ನಕ್ಕೆ ಸಿದ್ಧನಾಗುತ್ತಿರುವೆಯೋ ?

ದು : ಮುಂದಿನ ಮಾತು ಮುಂದಕ್ಕೆ. ಈಗ ಸದ್ಯ ನಿಷ್ಕ್ರಮಣ ಸಿದ್ಧತೆ.

ಕಾ : ಅಂದರೆ ಅದು ಆಗಮನಕ್ಕೆ ಅಸ್ತಿಭಾರವಾಯ್ತು.

ದು : ಅದು ಮುಂದಿನ ಪರ್ವಕ್ಕೆ. ಅರವತ್ತು ವರ್ಷಗಳಿಗಲ್ಲವೆ ? ಅದುವರೆಗೆ—

ಕಾ : ಅರವತ್ತು ವರ್ಷಗಳು ನಿನ್ನ ಪಾಲಿಗೆ ಅರವತ್ತು ನಿಮಿಷಗಳೂ ಅಲ್ಲ, ಅವಸಾನಬದ್ಧರಿಗೆ ಚಿಂತೆ. ನಿನಗೇನು ? ನೀನು ಚಿರಾಯು, ದುರ್ಮತಿ.

ದು : ನಾನೊಬ್ಬನೇ ಏಕೆ, ನಾನು, ನನ್ನ ಸೋದರರು ಅರವತ್ತು ಮಂದಿಯೂ ಚಿರಾಯುಗಳೇ !

ಕಾ : ಆದರೆ ಅವರಲ್ಲಿ ನಿನ್ನಷ್ಟು ಪ್ರಬಲರು ಯಾರೂ ಇಲ್ಲ. ಸನ್ಮತಿ ನಿನ್ನ ಮುಂದೆ ಗತಾಯು. ನಿನ್ನ ಪ್ರವೇಶಕ್ಕೆ ವಿರೋಧವೆಲ್ಲಾದರೂ ಇರುವುದಾದರೆ ಅಲ್ಲೆಲ್ಲ ನಿನ್ನ ಹೆಸರೇ ಭಯಂಕರವಾಗುವುದು.

ದು : ಈ ಮರ್ಮ–ಅಲ್ಲ–ವಕ್ರೋಕ್ತಿ ಎರಡಲಗಿನ ಕತ್ತಿಯಂತಿದೆ. ಇದು ನನ್ನ ಪ್ರಶಂಸೆಯೋ ಇಲ್ಲ ತೇಜೋವಧೆಯೋ ?

ಕಾ : ನಿನ್ನ ಅಗಾಧ ಚಿಂತಾಮುದ್ರೆಯನ್ನು ಕಂಡು ಆಶ್ಚರ್ಯವಾಯಿತು. ನಿನ್ನ ಬಲದ ಹಿರಿಮೆ, ನಿನ್ನ ತಂತ್ರದ ಮಹಿಮೆ, ನಿನ್ನ ಪ್ರಮೋದ ಕಲಾಪರಿಣತೆ ಇವೆಲ್ಲಾ ನನಗೆ ದೀರ್ಘಕಾಲದ ಅನುಭವಗಳು. ನಿನಗೊಪ್ಪಿರುವ ಶೀಲಸಾಮರ್ಥ್ಯ

ಗಳೇ ನಿನ್ನ ರಕ್ಷಾಕವಚಗಳಾಗಿರಲು ನೀನು ಚಿಂತಾಕುಲನಾಗಲು ಕಾರಣವೇನು?

ದು: ಚಿಂತೆಯಲ್ಲ; ಯೋಚನೆ. ಇನ್ನು ಐವತ್ತೊಂಬತ್ತು ವರ್ಷಗಳ ಕಾಲ ನನ್ನ 'ಜೀವನಗತಿ' ಹೇಗೆಂದು ಸ್ವಲ್ಪ ವಿಚಾರವಾಯಿತು.

ಕಾ: ಈವರೆಗೆ ಎಷ್ಟೋ ಪರ್ವಗಳು ಕಳೆದಂತೆ ಇನ್ನು ಮುಂದೆಯೂ ಕಳೆಯುವುದು. ಹೊಸ ವಿಧಾನವೇನೂ ನಿನಗೆ ಅಭ್ಯಾಸವಾಗಬೇಕಾಗಿಲ್ಲವಷ್ಟೆ? ನಿನಗೆ ಸಹಜವಾಗಿ ಪ್ರಿಯವಾಗಿ ಪಳಗಿರುವ ರೀತಿಯಲ್ಲದೆ, 'ಜೀವನಗತಿ' ಇನ್ನಾವುದು ಹೊಂದಿ ಬಂದೀತು? ನೀನೊಂದು ಉಪಸರ್ಗವಾಗಿರುತ್ತ ವಿಶ್ವಬ್ರಹ್ಮಾಂಡವೆಲ್ಲ ನಿನ್ನವಶವಾಗಿರುವುದಲ್ಲವೇ?

ದು: 'ಉಪಸರ್ಗ' ಅಂದರೆ ಯಾವುದು?

ಕಾ: ಯಾವುದು ಅಂದೆ? ಆ ಕಡೆಯ ಅಕ್ಷರ.

ದು: ಓಹೋ! ನಾನು 'ದು'ಕಾರ ನಾಮಪೂರಕನೆಂಬುದಷ್ಟೆ ತಮ್ಮ ಧ್ವನಿ. ಆಗಲಿ ಒಳ್ಳೆಯದು. ನಿಮ್ಮ ಮಾತಿನಂತೆ ಈ ದುರ್ಮತಿಯ ಮುಂದೆ ಸನ್ಮತಿಯು ಗತಾಯುವಾಗಲಿ. ನನ್ನದು ಅನ್ವರ್ಥನಾಮವೇ ಆಗಲಿ.

ಕಾ: ಅಬ್ಬ! ಎಂತಹ ಪ್ರಚಂಡನು ನೀನು. ಅಯ್ಯಾ! ಈ ವರ್ಷ ಮಾತ್ರವಾದರೂ ಸ್ವಲ್ಪ ಪ್ರಸನ್ನನಾಗಿ ನಿನ್ನ ಈ ಪ್ರಚಂಡ ಶಕ್ತಿಯನ್ನು ತಡೆದಿಡು. ನಿನ್ನ ಹಳೆಯ ರೀತಿಗಳಲ್ಲಿ ಹೊಸ ವಿಧಾನವೇನಾದರೂ ಕಂಡುಬರುವಂತೆ ನಿನ್ನ ಕರ್ತವ್ಯವನ್ನು ಪಾಲಿಸು, ಸಜ್ಜನರನ್ನು ಗೌರವಿಸು, ದುಶ್ಚಿಂತೆಯನ್ನು ನಿವಾರಿಸುವುದೇ ನಿನ್ನ ಪ್ರಥಮ ಕರ್ತವ್ಯವೆಂದು ನಿಶ್ಚಯಿಸು.

ದು: ಅದನ್ನು ಮುಂದೆ ವಿಚಾರಮಾಡುವೆನು. ಈಗಲೇ ವಾಗ್ದಾನ ಮಾಡಲಾರೆ.

ಕಾ: ಅಗತ್ಯವಾಗಿ, ದೀರ್ಘಕಾಲ ವಿಚಾರಮಾಡುತ್ತ ಹಾಗೆಯೇ ವಿಶ್ರಾಂತಿಹೊಂದು. ನಿನ್ನ ಅವಧಿ ಮೀರಿತು. ಇನ್ನೇನು, ದುಂದುಭಿಯು ಈಗಲೇ ಬರುತ್ತಾನೆ.

ದು: ನಾನಿನ್ನು ಹೊರಡಬೇಕೆಂಬ ಸೂಚನೆಯೇಕೆ? ನಾನು ಮೊದಲೇ ಸಿದ್ಧನಾಗಿರುವೆನು. ಇನ್ನೇನು, ನಿಮ್ಮ ಮುದ್ದು ಮಗನು ಬರುತ್ತಿದ್ದಾನೆ. ಇಗೋ, ಕಡೆಯ ನಮಸ್ಕಾರ.

(ದುಂದುಭಿಯ ಬೀರಘೋಷವು ಕೇಳಿಸುವುದು, ಆ ಕೂಡಲೇ ದುರ್ಮತಿಯು ತೆರಳುವನು.)

ಕಾಲ: ಬಾ, ದುಂದುಭೀ! ಆದರದ ಸ್ವಾಗತ ನಿನಗೆ.

ದುಂದುಭಿ: ಹಿರಿಯರು ಆಶೀರ್ವದಿಸಬೇಕು.

ಕಾ: ನನ್ನ ಆಶೀರ್ವಾದ ಸದಾ ನಿನಗೆ ಮೀಸಲಾಗಿದೆ, ದುಂದುಭೀ! ಆದರೂ ನಿನ್ನ ಜನ್ಮದ ಸಾರ್ಥಕತೆಗೆ ನೀನೇ ಜವಾಬ್ದಾರ.

ದುಂ: ಅದನ್ನು ಸ್ಪಷ್ಟವಾಗಿ ತಿಳಿಸಬೇಕು.

ಕಾ: ನಿನ್ನ ಸಮೀಪ ಪರಂಪರೆಯಿಂದ ಹೆಮ್ಮೆಪಡುವ ಹಾಗಿಲ್ಲ. ನಿನ್ನ ಹಿಂದಿನವರನ್ನು ನೆನೆಸಿಕೋ.

ದುಂ : ರೌದ್ರಿ, ದುರ್ಮತಿ....

ಕಾ : ಸರಿ, ಇನ್ನು ಮುಂದಿನವರು?

ದುಂ : ರುಧಿರೋದ್ಗಾರಿ, ರಕ್ತಾಕ್ಷಿ, ಕ್ರೋಧನ....

ಕಾ : ಸಾಕು, ಸಾಕು. ಇಂತಹ ಮಹಾನುಭಾವರ ಮಧ್ಯೆ ಯಾವ ಪುಣ್ಯದಿಂದಲೋ ನೀನೊಬ್ಬ ಅಪವಾದವಾಗಿ ಹುಟ್ಟಿರುವೆ.

ದುಂ : ಅದು ನಿಮ್ಮ ಅನುಗ್ರಹವೇ.

ಕಾಂ : ಅದೇನೇ ಇರಲಿ. ನಿನಗೊಂದು ಅಪೂರ್ವ ಭಾಗ್ಯವು ಜನ್ಮತಃ ಲಭಿಸಿದೆ. ಅದು ನಿನ್ನ 'ವೀರಗಂಭೀರನಾದ.' ಈ ಭಾಗ್ಯವಿಶೇಷದಿಂದ ನೀನು ಇದೇ ಹೆಸರಿನಿಂದ ಮೂರು ಜನ್ಮಗಳನ್ನೆತ್ತುವೆ.

ದುಂ : ಒಂದೇ ಹೆಸರಿನ ಮೂರು ಜನ್ಮಗಳು!–ಆಶ್ಚರ್ಯ. ಇದೇನು ನಿಮ್ಮ ವರ ಪ್ರಸಾದವೋ ಹೇಗೆ?

ಕಾ : ಅದೂ ನಿಜವೆ. ನನ್ನ ಪ್ರೀತಿಯ ಪರಿಣಾಮ ಹೀಗಾಯಿತೆಂದು ತಿಳಿ. ಮೊದಲನೆಯ ಜನ್ಮ ವತ್ಸರವಾಗಿ ಚಿರಾಯುವಾಗಿರುವಂತೆ ನಿನ್ನ ಮೂರನೆಯ ಜನ್ಮದಿಂದಲೂ ನೀನು ಚಿರಾಯುವೇ. ನಿನ್ನ ಹೆಸರು ಶಾಶ್ವತವಾಗಿ ಸಾರ್ಥಕ ವಾಗಲು ಎರಡನೆಯ ಜನ್ಮವೇ ಮಧ್ಯಸ್ಥವಾಗುವುದು. ಈ ವರ್ಷದ ಅವಧಿಯು ಮುಗಿದ ಮೇಲೆ ನೀನು ಮಹಾಬಲಶಾಲಿಯಾದ ಒಬ್ಬ ಅಸುರನಾಗಿ ಜನಿಸು.

ದುಂ : ಅಸುರಜನ್ಮವೇ? ಅದೇಕೆ? ತಂದೆಯೇ, ನಾನೇನು ಅಪರಾಧವನ್ನು ಮಾಡಿದೆ?

ಕಾ : ಅದು ಮುಕ್ತಿಯನ್ನು ಸುಲಭವಾಗಿ ತ್ವರಿತವಾಗಿ ಹೊಂದುವ ಉಪಾಯ. ಕೆಲವು ಕಾಲಕ್ಕೆ ಒಬ್ಬ ಮಹಾಪುರುಷನು ಅವತರಿಸುವನು. ಈತನಿಂದ ಆ ವಿಧವಾಗಿ ಅಸುರಜನ್ಮವನ್ನು ಹೊಂದಿದವರು ಅನೇಕರು ಮುಕ್ತಿಹೊಂದುವರು. ನೀನಾದರೋ ಮುಕ್ತನೂ ಆಗುವೆ, ಶಾಶ್ವತನೂ ಆಗುವೆ.

ದುಂ : ಮಹಾಪ್ರಸಾದವು.

ಕಾ : ಕ್ಷಾಮಢಾಮರಗಳಿಂದ ಕಂಗೆಟ್ಟ ಜನರು ನಿನ್ನ ಕಾಲದಲ್ಲಾದರೂ ಸ್ವಲ್ಪ ನೆಮ್ಮದಿಯನ್ನು ಕಾಣಲಿ. ನಿನ್ನ ಉತ್ಸಾಹವು ಸದಾ ವರ್ಧಿಸುತ್ತಿರಲಿ. ವತ್ಸಾ! ಹಿಂದಿನ ಆ ಕಹಿಯ ಅನುಭವದ ನೆನಪೂ ಬೇಡ. ಮುಂದಿನ ಸವಿಯ ಸುಖಾ ಪೇಕ್ಷೆಯೂ ಬೇಡ. ಇಂದಿನ ಜೀವನವನ್ನು ಸಹ್ಯವನ್ನಾಗಿ ಮಾಡಿದರೆ ಸಾಕು. ನಿನ್ನ ನಾದಭಾಗ್ಯದಿಂದ ದೇವರ ಸೃಷ್ಟಿಯನ್ನು ಸಾರ್ಥಕವಾಗಿಸು.

ದುಂ : ಎಂದೆಂದಿಗೂ ಮರೆಯಲಾಗದಂತಹ ಹಿತಬೋಧೆ. ಶಿರಸಾವಹಿಸುವೆ.

ಕಾ : ಅಗೋ! ಸಂಭ್ರಮದಿಂದ ಜನರು ನಿನಗೆ ಸ್ವಾಗತವನ್ನು ನೀಡುವರು. ಅವರ ಆದರವನ್ನು ಸ್ವೀಕರಿಸು. ಯಶೋವಂತನಾಗು.

(ನಿಷ್ಕ್ರಮಣ)

ದುಂ: ಜನರ ಉತ್ಸಾಹ–ಸಂಭ್ರಮ ಏನು ಸೊಗಸು? ನಿಜವಾಗಿಯೂ ವೈಭವದ ಸ್ವಾಗತ.

(ಪುನಃ ವೀರಘೋಷ ಮಾಡಿ ಹರ್ಷದಿಂದ ತೆರಳುವನು.)

ಪ್ರವೇಶ–೨

ರುಧಿರೋದ್ಗಾರಿ: (ಆತುರವಾಗಿ ಬಂದು ಸುತ್ತಲೂ ನೋಡಿ) ಏನಿದು? ಯಾರೂ ಇಲ್ಲ. ಇದೇನಿಷ್ಟು ನಿಶ್ಶಬ್ದ. ನಿರ್ಜನ ಪ್ರದೇಶಕ್ಕೆ ಬಂದಹಾಗಿದೆ. ನನ್ನ ಸ್ವಾಗತಕ್ಕೆ ಜನರಿಗೆ ಉತ್ಸಾಹವೇ ಇಲ್ಲವೇನೋ. ಅದು ಯಾರು? ಓಹೋ? ನಮ್ಮ ತಂದೆ. ಏನು ಮಂದಗಮನ. ನಾನೇಕೆ ಮುಂದಾಗಬೇಕು. ಹತ್ತಿರಕ್ಕೆ ಬರಲಿ.

ಕಾ: ಇವನೇನು ಇಷ್ಟು ಬೇಗ ಬಂದು ಕಾದಿದ್ದಾನೆ? ಇರಲಿ. ಕುಮಾರ! ಬಂದು ಬಹಳ ಹೊತ್ತಾಯಿತೇನು?

ರು: ಎಷ್ಟೋ ಹೊತ್ತಾಯಿತು. ನೀವು ಸಾವಕಾಶವಾಗಿ ಬರುತ್ತಿರುವಿರಿ.

ಕಾ: ನಿನ್ನ ಜಾಗ್ರತೆ, ನನ್ನ ಸಾವಕಾಶಕ್ಕೆ ಕಾರಣ. ನಾನು ಸಕಾಲಕ್ಕೆ ಬಂದಿದ್ದೇನೆ. ಇನ್ನೇನು, ದುಂದುಭಿಯೂ ಬರುತ್ತಾನೆ.

ರು: ನನಗೇನೂ ಆತುರವಿಲ್ಲ. ಬೇಕಾದರೆ ನಾಳೆಯೇ ಬರಲಿ.

ಕಾ: ನಿನ್ನ ಆತುರ, ನಿನ್ನ ಶೀಘ್ರಕೋಪ ಸ್ವಲ್ಪ ತಾಮಸಕ್ಕೆ ಬಂದರೆ ಒಳ್ಳೆಯದು. ನಿನ್ನ ಪ್ರಭಾವ ಅದಷ್ಟು ಸೌಮ್ಯವಾಗಿಯೇ ವ್ಯಕ್ತವಾದೀತೆಂದು ನನ್ನ ಆಶಯ. ಅದೋ! ದುಂದುಭಿಯು ಬಂದ.

ದುಂದುಭಿ: (ವೀರಘೋಷ ಮಾಡುತ್ತ) ಇದು ಈ ವರ್ಷದ ಕಡೆಯ ಘೋಷ, ಹೊಸ ವರ್ಷದ ನಾಂದಿ. ಈ ತಮ್ಮನಿಗೆ ಇದು ಸ್ವಾಗತವೂ ಆಯಿತು.

ಕಾ: ರುಧಿರೋದ್ಗಾರಿ, ನೀನು ಸ್ವಲ್ಪ ಹಿಂದೆ ನಿಲ್ಲು. ಇನ್ನೂ ಅವಧಿ ಇದೆ. ಬಾ, ದುಂದುಭೀ! ವೀರಘೋಷವೇ, ವಿರೋತ್ಸಾಹವೇ ನಿನ್ನ ಸರ್ವಸ್ವವಾಗಲಿ. ಆಗಮನ ನಿರ್ಗಮನಗಳೆರಡೂ ನಿನಗೆ ಒಂದೇ ಸಮ. (ಹಸ್ತಲಾಘವವಿತ್ತು) ನೀನು ನಿನ್ನ ಮುಂದಿನ ಕರ್ತವ್ಯವನ್ನು ನೋಡು. ಮೊದಲೇ ನಿನಗೆ ತಿಳಿಸಿರುವೆನಲ್ಲವೇ?

ದುಂ: ಪ್ರಭು! ಚೆನ್ನಾಗಿ ನೆನಪಿದೆ. ಹಾಗೆಯೇ ನಡೆದುಕೊಳ್ಳುವೆನು. ನನಗಿನ್ನು ಅನುಜ್ಞೆಯೇ?

ಕಾ: ಮಗು! ಹೋಗಿ ಬಾ. ನಿನಗೆ ಸದಾ ಮಂಗಳವಾಗಲಿ.

(ದುಂದುಭಿಯ ನಿರ್ಗಮನ)

ಕಾ: ರುಧಿರೋದ್ಗಾರಿ! ದುಂದುಭಿಯು ತೆರಳಿದ. ಈಗ ನೀನೆ ವರ್ಷಾಧಿಪತಿಯು. ಆಗೋ! ನಿನ್ನ ಸ್ವಾಗತಕ್ಕೆ ಜನರು ಸಿದ್ಧರಾಗುತಿದ್ದಾರೆ. ಸಂತೋಷವಾಗಿ ಸ್ವಾಗತವನ್ನು ಸ್ವೀಕರಿಸು. ಅವರ ಸಂತೋಷವನ್ನೇ ಮುಖ್ಯವಾಗಿ ನೀನು ಹಾರೈ

ಸುತ್ತಾ ಜಾಗರೂಕನಾಗಿ ನಿನ್ನ ಕರ್ತವ್ಯವನ್ನು ಪಾಲಿಸು. (ನಿರ್ಗಮನ)

ರು: ಎಷ್ಟು ಪಕ್ಷಪಾತ. ಇರಲಿ. ಒಳ್ಳೆಯದು. ನನ್ನ ಪ್ರಭಾವ ನನಗೇ ಗೊತ್ತು. ಅದರ ಪ್ರಯೋಗವನ್ನು ಯಾರು ನನಗೆ ಬೋಧಿಸುವ ಅಗತ್ಯವಿಲ್ಲ. ನನ್ನಿಷ್ಟದಂತೆ ನಾನು ವರ್ತಿಸುತ್ತೇನೆ. (ಸಿಡುಕಿನಿಂದ ತೆರಳುವನು.)

ಪ್ರವೇಶ–೩

(ಕಿಷ್ಕಿಂಧಾಪುರ—ಶ್ರೀರಾಮ ಲಕ್ಷ್ಮಣರು–ಸುಗ್ರೀವ ಹನುಮದಾದಿ ವಾನರರು.)

ಸುಗ್ರೀವ: ರಾಮಚಂದ್ರಾ! ಅಗ್ನಿಸಾಕ್ಷಿಯಾಗಿ ನಮ್ಮ ಸ್ನೇಹವು ಬೆಳೆದಿದೆ. ಈ ಸ್ನೇಹವು ಲೋಕಕ್ಕೇ ಆದರ್ಶವಾಗುವಂತೆ ನಾವು ಆಚರಿಸಬೇಕಲ್ಲವೇ? ಯಾವ ಕಾರಣದಿಂದಲೂ ಇದಕ್ಕೆ ಭಂಗ ಬರಲಾಗದು.

ರಾಮಚಂದ್ರ: ನನಗೆ ಬೇಕಾದುದೂ ಅಷ್ಟೇ, ಸುಗ್ರೀವಾ. ಯಾವ ಸಂಶಯಕ್ಕೂ ಆಸ್ಪದವಿರಬಾರದು.

ಸು: ಪ್ರಭೂ! ಅದಕ್ಕಾಗಿ ನಾನು ಒಂದೆರಡು ಮಾತುಗಳನ್ನು ತಮ್ಮಲ್ಲಿ ಅರಿಕೆ ಮಾಡುತ್ತೇನೆ. ಎಷ್ಟೇ ಸಂಕೋಚವಾದರೂ–

ರಾ: ಸುಗ್ರೀವಾ! ನಿಸ್ಸಂಕೋಚವಾಗಿ, ಧೈರ್ಯವಾಗಿ ನಿನ್ನ ಅಭಿಪ್ರಾಯವನ್ನು ತಿಳಿಸು.

ಸು: ನಮ್ಮಣ್ಣ ವಾಲಿಯು ಮಹಾಬಲಶಾಲಿಯೆಂದು ನೀನು ತಿಳಿದೆಯಷ್ಟೇ?

ರಾ: ಚೆನ್ನಾಗಿ ತಿಳಿದೆ. ವಾಲಿಯು ನಿಜವಾಗಿಯೂ ಪರಾಕ್ರಮಶಾಲಿ.

ಸು: ಅವನಿಗೆ ಸಮಬಲನಾದ ರಾಕ್ಷಸನೊಬ್ಬನಿದ್ದನು. ಅವನ ಹೆಸರು ದುಂದುಭಿ.

ರಾ: ಇದ್ದ ಎಂದಮೇಲೆ ಈಗಿಲ್ಲವೆಂದಾಯಿತು. ವಾಲಿಯು ಅವನನ್ನು ಗೆದ್ದನೋ?

ಸು: ಕೇಳು ಪ್ರಭೂ! ಅಗೋ, ಆ ಗುಹೆಯಲ್ಲಿ ನಡೆಯಿತು ಅವರ ಕಾದಾಟ. ಗುಹೆಯ ಬಾಗಿಲಲ್ಲಿ ನನ್ನನ್ನು ಕಾವಲಿಟ್ಟು ನಮ್ಮಣ್ಣನು ಅವನೊಂದಿಗೆ ಕಾದುತ್ತಿದ್ದನು. ನಾನು ಅವನಾಜ್ಞೆಯನ್ನು ಮೀರಲಾರದೆ ಆರು ತಿಂಗಳು ಬಾಗಿಲು ಕಾದೆ. ಸಾಕಾಯಿತು. ಯಾವ ಸಂಗತಿಯೂ ತಿಳಿಯದೆ ಕಳವಳದಿಂದ ಕಂಗೆಟ್ಟು ಹೋದೆ. ಕಡೆಗೊಂದು ದಿನ ಭೀಕರ ಧ್ವನಿಯೊಂದು ಕೇಳಿಸಿತು. ಬೆದರಿ ನೋಡುತ್ತಿರಲು ಗುಹೆಯ ದ್ವಾರದಿಂದ ರಕ್ತದ ಕೋಡಿ ಹರಿದು ಬಂತು. ಅದೆಷ್ಟು ಹರಿಯಿತೋ–ನೋಡಲು ಭಯಂಕರವಾಗಿತ್ತು ಆ ರುಧಿರಸಮುದ್ರ. ಅಲ್ಲಿ ನೋಡು ಆ ಹೆಪ್ಪುಗಟ್ಟಿದ ರಕ್ತದ ಕರೆ ಇಲ್ಲಿಗೂ ಕಾಣುತ್ತಿದೆ.

ರಾ: ಹೌದು, ರಾಕ್ಷಸನ ರಕ್ತವೆಂದು ಸ್ಪಷ್ಟವಾಗುತ್ತದೆ.

ಸು: ನಾನು ಹಾಗೆ ಭಾವಿಸಲಿಲ್ಲ, ರಾಮಚಂದ್ರ! ನಮ್ಮಣ್ಣನೇ ಹತನಾದನೆಂದುಕೊಂಡೆ. ಹತಾಶನಾಗಿ ಗುಹೆಯ ಬಾಗಿಲು ಮುಚ್ಚಿ ಊರೊಳಕ್ಕೆ ಹೋದೆ. ಆರು ತಿಂಗಳಿಂದ ಅರಾಜಕವಾಗಿತ್ತು ಕಿಷ್ಕಿಂಧೆ. ಪ್ರಜೆಗಳ ಇಷ್ಟದಂತೆ ನಾನು ಆಡಳಿತವನ್ನು

ಸಹಿಸಿಕೊಂಡೆ. ಆಮೇಲೆ ವಾಲಿಯು ಬಂದು ನಾನೆಷ್ಟು ಬೇಡಿದರೂ ಕ್ಷಮಿಸದೆ ದ್ವೇಷವು ಬೆಳೆದ ಕತೆಯೆಲ್ಲಾ ನಿನಗೆ ತಿಳಿಸಿದ್ದೇನೆ.

ರಾ: ಅದನ್ನು ಪುನಃ ಕೇಳಲು ನನಗಿಷ್ಟವಿಲ್ಲ ಸುಗ್ರೀವಾ! ಈಗ ನೀನಿಲ್ಲಿಗೆ ಕರೆತಂದ ಉದ್ದೇಶವೇನು ಹೇಳು.

ಸು: ಪ್ರಭೂ! ನಿನ್ನ ಶಕ್ತಿ ಎಷ್ಟೆಂಬುದನ್ನು ನಾನು ಊಹಿಸಲಾರೆ. ನನ್ನಣ್ಣನ ಶಕ್ತಿ ಒಂದು ಬಗೆಯಲ್ಲಿ ಊಹೆಗೆ ನಿಲುಕುವಂತಿದೆ. ಅವನು ಪ್ರಬಲನಾದ ದುಂದುಭಿಯನ್ನು ಕೊಂದು ಆ ದೊಡ್ಡ ದೇಹವನ್ನು ಎಡಗೈಯಿಂದ ಗುಹೆಯಿಂದ ಹೊರಕ್ಕೆಳೆ ತಂದು ದೂರಕ್ಕೆ ಎಸೆದ. ಅದೆಷ್ಟು ದೂರಕ್ಕೆ ಬಿತ್ತೊ. ಈಗಲೂ ಅಲ್ಲಿಯೇ ಬಿದ್ದಿದೆ.

ರಾ: ಅರ್ಥವಾಯಿತು; ನೀನು ನನ್ನ ಬಲಪರೀಕ್ಷೆ ಮಾಡುವಂತಿದೆ. ಅಗತ್ಯವಾಗಿ ಆಗಬಹುದು. ಆ ದೇಹವನ್ನು ತೋರಿಸು, ನಡೆ.

(ದೂರದಲ್ಲಿ ಬಿದ್ದಿದ್ದ ದುಂದುಭಿ ದೇಹದ ಬಳಿಗೆಲ್ಲರೂ ಬರುವರು.)

ಸು: ರಾಮಚಂದ್ರ! ನೋಡು ಬರಿಯ ಕಾಷ್ಠದಂತೆ ಬಿದ್ದಿದ್ದರೂ ಆ ದೇಹ ಎಷ್ಟು ಘೋರವಾಗಿ ಕಾಣುತ್ತಿದೆ.

ರಾ: ಈಗ ನಾನೇನು ಮಾಡಬೇಕೆಂದು ನಿನ್ನಿಷ್ಟವೋ ಅದನ್ನು ತಿಳಿಸು.

ಸು: ಅದನ್ನೊಂದು ಸಲ ಒದೆದುಬಿಡು.

ರಾ: ಆಗಲಿ ಆಮೇಲೆ ಗಾವುದಗಳನ್ನಳೆದು ನೋಡು, ಅಷ್ಟೇ ಅಲ್ಲವೇ?

(ದುಂದುಭಿ ದೇಹವನ್ನೊದೆದು ದಿಟ್ಟವಾಗಿ ನಿಂತಿರಲು)

ವಾನರರು: ಓಹೋಹೋ! ಕಣ್ಣಿಗೇ ಕಾಣದಲ್ಲ. ಇದೇನು ಧೂಳು, ಅಬ್ಬಾ!

ಸು: ಹನುಮಂತಾ! ಅದೆಲ್ಲಿ ಬಿತ್ತು ನೋಡುವೆಯಾ!

ರಾ: ನೋಡು, ಹನುಮಾ! ನಾವೂ ಹಿಂದೆಯೇ ಬರುವೆವು.

(ಮಹಾಧ್ವನಿಯು ಕೇಳಿಸುವುದು.)

ಸು: ಏನಿದು, ಏನಿದು? ಅದೇ ರಾಕ್ಷಸಧ್ವನಿ. ಇನ್ನೇನು ಗತಿ, ರಾಮಚಂದ್ರಾ! ಕಾಪಾಡು, ಕಾಪಾಡು.

ಹನುಮಂತ: ದೇವಾ! ನಿನ್ನ ಪಾದಸ್ಪರ್ಶದಿಂದ ಅಸುರನು ಮತ್ತೆ ಜೀವಿಸಿದನೋ ಏನೋ.

ರಾ: ಬೇಗ ನಡೆ, ಹನುಮಾ! ನಡೆಯಿರಿ, ನಾವೂ ನೋಡುವ.

(ವೇಗವಾಗಿ ಹನುಮಂತನು ದುಂದುಭಿ ದೇಹ ಬಿದ್ದೆಡೆಗೆ ಬರುವನು)

ಹನುಮಂತ: ಇದೇನು ಹುಚ್ಚು ನಗೆ. ಓಹೋ! ಇವನೇ ನಗುತ್ತಿರುವನು. ಚೆನ್ನಾಯಿತು.

ದುಂದುಭಿ: (ಗಹಗಹಿಸಿ ನಗುತ್ತಾ) ಏಕೋ ಹನುಮಾ! ನಗದೆ ಅಳಬೇಕೇನೋ?

ಹ: ಶ್ರೀರಾಮನ ಪಾದಮಹಿಮೆ. ಇವನಿಗೆ ಪ್ರಾಣದಾನವಾಯಿತು.

ದುಂ: ಪ್ರಾಣನಾಶ ಮಾಡುವವರೂ ಉಂಟು, ಪ್ರಾಣದಾನ ಮಾಡುವವರೂ ಉಂಟು. ಅಲ್ಲವೇನೋ, ಹನುಮಾ! ನೀನೊಬ್ಬನೇ ಚಿರಂಜೀವಿ ಅಂದು ಕೊಂಡೆಯಾ? ನಾನು ಏಕೆ ಚಿರಂಜೀವಿಯಾಗಿರಬಾರದು?

ಹ: ಅಗತ್ಯವಾಗಿ ಇರಬಹುದಯ್ಯ! ಶ್ರೀರಾಮನು ಬರುತ್ತಿದ್ದಾನೆ. ಹಾಗೆ ವರ ವನ್ನು ಕೇಳಿಕೋ.

ದುಂ: ಅದನ್ನು ನಮ್ಮ ತಂದೆ ಕಾಲಪುರುಷ ಮೊದಲೇ ಹೇಳಿದ್ದಾನೆ.

ಹ: ಕಾಲಪುರುಷ ನಿನ್ನ ತಂದೆಯೋ? ಓಹೋ, ತಿಳಿಯಿತು, ನೀನು ಆ ದುಂದು ಭಿಯೋ?

ದುಂ: ಹೂ, ಆ ದುಂದುಭಿಯೇ ನಾನು. ಜೀವದೊಂದಿಗೆ ನನಗೆ ಆ ಸ್ಮೃತಿಯೂ ಬಂದಿದೆ. ಈಗ ಇನ್ನೊಂದು ಜನ್ಮಕ್ಕೆ ಸಿದ್ಧವಾಗುತ್ತಿದ್ದೇನೆ. ಅಯ್ಯೊ ಹನುಮ! ನಿನ್ನನ್ನು ಪರಮ ಮಿತ್ರನಂತೆ ತಿಳಿಯುತ್ತೇನೆ. ನನಗೆ ಸಹಾಯ ಮಾಡುವೆಯಾ!

ಹ: ಅದಕ್ಕೇನು, ನನ್ನ ಕೈಲಾದ ಸಹಾಯವನ್ನು ಮಾಡುವೆನು. ಅಗೋ ಎಲ್ಲರೂ ಬರುತ್ತಿದ್ದಾರೆ. ಜೈ ರಘುರಾಮ. ನೀನು ಹೇಳು, ದುಂದುಭೀ!

ದು: ಜೈ ರಘುರಾಮ, ಜೈ ರಘುರಾಮ.

ರಾ: ಸುಗ್ರೀವಾ! ನಿನ್ನ ಮಾತು ನಿಜ. ದುಂದುಭಿ ಜೀವಿಸಿದ್ದಾನೆ.

ಸುಗ್ರೀವ: ಶ್ರೀರಾಮಾ! ದಯಮಾಡಿ ಇನ್ನೊಂದು ಸಲ ಒದೆದು ಅವನನ್ನು ತೀರಿಸಿಬಿಡು.

ದುಂ: ಅದೇಕೋ ಸುಗ್ರೀವಾ! ಇನ್ನೊಬ್ಬರು ಬದುಕುವುದನ್ನು ಸಹಿಸಲಾರೆ ಯೇನೋ! ಶ್ರೀರಾಮಚಂದ್ರಾ! ನಿನ್ನ ಪಾದಸ್ಪರ್ಶವಾಯಿತು, ಪುನಃ ಜೀವಿಸಿದೆ. ನಿನ್ನ ದರ್ಶನವಾಯಿತು, ನನ್ನ ಅಸುರತ್ವವೇ ನಾಶವಾಯಿತು. ನಾನೀಗ ಅಸುರ ದುಂದುಭಿಯಲ್ಲ; ಕಾಲಪುರುಷನ ಪ್ರಿಯ ಸುತನಾದ ದುಂದುಭಿ.

ರಾ: ಎಲೆ ವೀರವರ! ನೀನು ಅಸುರತ್ವವನ್ನು ಪೂರ್ಣವಾಗಿ ನೀಗಬೇಕಾದರೆ ಈ ನಿನ್ನ ದೇಹವನ್ನು ತ್ಯಜಿಸಬೇಕು.

ದುಂ: ನಿಮಗಿಂತ ಹೆಚ್ಚಾಗಿ ಈ ದೇಹದ ಮೇಲೆ ನನಗೆ ಅಸಹ್ಯವಾಗುತ್ತಿದೆ. ಸುಗ್ರೀವನು ಹೇಳಿದಂತೆಯೇ ಮಾಡು. ಆದರೆ ನನ್ನದೊಂದು ಪ್ರಾರ್ಥನೆಯನ್ನು ನಡೆಸಿಕೊಡಬೇಕು.

ರಾ: ಅದೇನು ಹೇಳು, ಅಗತ್ಯವಾಗಿ ನಡೆಸಿಕೊಡುವೆನು.

ದುಂ: ವಾಲಿಯು ಎಸೆದಂತೆ ಈ ದೇಹವನ್ನೊಂದು ಕಡೆ ಎಸೆದುಬಿಡುವಿಯೋ?

ಸು: ಇನ್ನೂ ಹಾಗೆ ಮಾಡುವುದುಂಟೆ? ರಾಮಚಂದ್ರ! ನೀನು ಆ ಪಕ್ಷಿರಾಜ ಜಟಾಯುವಿಗೆ ನಿನ್ನ ಕೈಯಾರ ಅಗ್ನಿಸಂಸ್ಕಾರವನ್ನು ಮಾಡಿದೆ. ಈ ವೀರನಿಗೂ ಹಾಗೆಯೇ ಯಥೋಚಿತವಾಗಿ ಮರ್ಯಾದೆ ಸಲ್ಲಬೇಕು.

ರಾ: ಅದನ್ನು ನಾನಾಗಿಯೇ ಮಾಡುತ್ತಿದ್ದೆ. ಇನ್ನೇನು ಅಪೇಕ್ಷೆ, ದುಂದುಭೀ!

ದುಂ: ನನ್ನ ಯೋಗ್ಯತೆಗೆ ತಕ್ಕಂತೆ ಒಳ್ಳೆಯ ಜನ್ಮವನ್ನು ಬಯಸುತ್ತೇನೆ.

ರಾ: ನಿನ್ನ ವೀರಘೋಷವನ್ನು ನಾನಾಲಿಸಿದೆ. ರಣಘೋಷವಾಗಿ ಒಪ್ಪುವಂತಿದೆ.

ಹ: ಹೀಗೆ ಮಾಡುವ. ನಿನ್ನ ನೆನಪಿಗಾಗಿ ನಾನೊಂದು ವಾದ್ಯವನ್ನು ನಿರ್ಮಿಸುವೆನು. ನಿನ್ನ ಧ್ವನಿಯೆಲ್ಲ ಅಡಗಿಸು. ನಿನ್ನ ಹೆಸರನ್ನೇ ಇಟ್ಟರೆ ನಿಜವಾಗಿ ನೀನು ಚಿರಂಜೀವಿಯೇ ಆಗುವೆ.

ದುಂ: ಭಲಾ! ಭಲಾ! ಒಳ್ಳೆಯ ಸೂಚನೆ. ರಾಮಚಂದ್ರಾ! ನನ್ನ ಮಿತ್ರನ ಮಾತು ನನಗೆ ಒಪ್ಪಿತು. ಅದನ್ನೇ ವರವಾಗಿ ಅನುಗ್ರಹಿಸು.

ರಾ: ಹಾಗೆಯೇ ಆಗಲಿ, ಹನುಮಾ! ಎಲ್ಲಿ, ವಾದ್ಯವನ್ನು ಸಿದ್ಧಪಡಿಸು.

ಹ: ಇಗೋ ಆಯಿತು, ದೇವಾ. ದುಂದುಭೀ! ಎಂತಹ ಪುಣ್ಯಶಾಲಿ ನೀನು.

ರಾ: ವೀರವರ! ಎಲ್ಲಿ ಕಡೆಯ ಸಲ ವೀರಘೋಷವನ್ನು ಮಾಡಿವರೂ ಅವರಲ್ಲಿ ಪ್ರವೇಶ ಮಾಡು.

ದುಂ: ಜೈ ರಾಮಚಂದ್ರಾ! (ಎಂದು ಘೋಷಿಸುತ್ತಾ ಅಸುವಳಿಯುವನು.)

ಹ: ಧನ್ಯನಾದೆ, ದುಂದುಭೀ....ರಣೋತ್ಸಾಹ ನಿಧಿಯಾದೆ ನೀನು.

ರಾ: ಸುಗ್ರೀವಾ! ಈ ವೀರನಿಗೆ ಉಚಿತ ರೀತಿಯಲ್ಲಿ ಸಂಸ್ಕಾರವನ್ನು ಮಾಡುವ, ನಡೆಯಿರಿ.

ಪ್ರವೇಶ—೪

(ವಿಜಯನಗರ ಸಾಮ್ರಾಜ್ಯ ವಿನಾಶವಾದಮೇಲೆ ಆ ಪ್ರದೇಶದಲ್ಲಿ ಕೆಲವು ಕಾಲಾನಂತರ ಯಾತ್ರಿಕರು ಬಂದು ಹೋಗುತ್ತಿರುವ ಸಂದರ್ಭಗಳಲ್ಲಿ ಒಂದು ಸಂದರ್ಭ.)

ಒಬ್ಬ ಸಾಧು: (ಸಾವಧಾನವಾಗಿ ಬರುತ್ತಾ ಸುತ್ತಲೂ ನೋಡಿ ಪಥಿಕರ ವಿಶ್ರಾಂತಿ ಜಗಲಿಯ ಮೇಲೆ ಕುಳಿತುಕೊಳ್ಳುವನು.) ಜೈ ಭುವನೇಶ್ವರೀ! ಜೈ ರಘುವೀರ! ಇಂದೇನು, ಯಾತ್ರಿಕರು ಯಾರೂ ಕಾಣಲಿಲ್ಲ. ಪೌರ್ಣಮಿಯ ದಿನ ಯಜ್ಞವಿಧಿಯುಂಟು. ಇನ್ನು ಸ್ವಲ್ಪಕಾಲ ನೋಡುವ. ಎಲ್ಲಿಯೋ ಯಾರೋ ಮಾತನಾಡುತ್ತಿರುವಂತಿದೆ. ಅಸ್ಪಷ್ಟ. (ಮುಂದೆ ಬಂದು ಅತ್ತಿತ್ತ ನೋಡುತ್ತ) ಓಹೋ! ಯಾರೋ ಮಾತನಾಡುತ್ತಾ ಬರುತ್ತಿದ್ದಾರೆ. ಇಬ್ಬರೂ ತರುಣರು. (ಅವರು ಹತ್ತಿರಕ್ಕೆ ಬಂದಮೇಲೆ) ಇತ್ತಕಡೆ ಬನ್ನಿ, ಇತ್ತಕಡೆ ಬನ್ನಿ.

ತರುಣ: ಪುಣ್ಯಕ್ಕೆ ಯಾರೋ ಇರುವಂತಿದೆಯಪ್ಪಾ! ಓಹೋ! ಸಾಧುಗಳು. ನಮಸ್ತೇ ಸಾಧುಗಳಿಗೆ. ತಾವು ಯಾತ್ರಿಕರೋ?

ಸಾ: ಅಲ್ಲ, ನಾನು ಇಲ್ಲಿಯೇ ಇರುವವನು. ಸ್ವಲ್ಪ ದೂರದಲ್ಲಿ ನನ್ನ ಕುಟೀರವಿದೆ. ಹೀಗೆಯೇ ಅಲ್ಲಲ್ಲಿ ಸುತ್ತಾಡಿ ನಿಮ್ಮಂತೆ ಯಾತ್ರಿಕರು ಯಾರಾದರೂ ಬಂದರೆ ಅವರನ್ನು ಸತ್ಕರಿಸುವುದೇ ನಿತ್ಯರೂಢಿ. ನೀವು ದಣಿದಿರುವಂತಿದೆ. ನಿಮ್ಮ ಸ್ಥಳ?

ತ: ವಿನೀತಾ! ನೋಡಿದೆಯಾ! ಸತ್ಪುರುಷರ ರೀತಿಯನ್ನು? ಸ್ವಾಮಿ! ನಾವು ಮಲೆನಾಡಿನವರು.

ಸಾ: ನೀವಿಬ್ಬರೂ ಸೋದರರೋ, ಗೆಳೆಯರೋ?

ತ: ಗೆಳೆಯರು. ಈ ಪ್ರದೇಶದ ರಮ್ಯತೆಯನ್ನು, ಇಲ್ಲಿನ ವೈಭವವನ್ನು ಕೇಳಿದ್ದೆವು.

ಸಾ: ಕಣ್ಣಾರ ಕಾಣುವ ಅಪೇಕ್ಷೆಯಿಂದ ಬಂದಿರಲ್ಲವೇ? ಆ ವೈಭವವೆಲ್ಲಿ, ಎಂದೋ ಅಳಿಯಿತು, ಈಗ ಇದು ಹಾಳು ಹಂಪೆ. ಆದರೂ ಅಭಿಮಾನದಿಂದ ಯಾತ್ರೆ ಬರುವವರು ಇದ್ದೇ ಇರುತ್ತಾರೆ. ನನ್ನಂಥವರಿಗೆ ಇರುವುದಕ್ಕೆ ನಿರ್ಜನ ಪ್ರದೇಶವಾಗಿ ಪ್ರಶಾಂತವಾಗಿ ಚೆನ್ನಾಗಿದೆ.

ತ: ವಿಶಾಲಾ! ಈ ಸಾಮ್ರಾಜ್ಯವನ್ನು ಕಟ್ಟಲು ಮಹಾನುಭಾವರಾದ ವಿದ್ಯಾರಣ್ಯರು ತಪಶ್ಶಕ್ತಿಯನ್ನೇ ವಿನಿಯೋಗಿಸಿದರಲ್ಲಾ!

ಸಾ: ಅಯ್ಯೋ! ಅದಕ್ಕೂ ಪೂರ್ವಕಥೆ ಇಲ್ಲಿನದು. ಇದೆಂತಹ ಪವಿತ್ರ ಪ್ರದೇಶ ಎನ್ನುವಿರಿ? ಶ್ರೀರಾಮಚಂದ್ರನು ಸೀತಾದೇವಿಯನ್ನು ಹುಡುಕುತ್ತಾ ಬಂದು ಕಪಿವೀರರ ಸಹಾಯ ಹೊಂದಿದ ಕಿಷ್ಕಿಂಧೆ ಇದು.

ತ: ಹಾಗೆಂದು ಹೇಳುವುದನ್ನೂ ಕೇಳಿದ್ದೇವೆ.

ಸಾ: ಇಲ್ಲಿಗೆ ಸ್ವಲ್ಪ ದೂರದಲ್ಲಿ ಆ ಬಯಲಿಗೆ ಆಚೆಯೇ ಮತಂಗಾಶ್ರಮವಿತ್ತು. ಅಲ್ಲಿಯೇ ಶ್ರೀರಾಮ-ಲಕ್ಷ್ಮಣರು ಶಬರಿಯ ಆತಿಥ್ಯವನ್ನು ಕೈಗೊಂಡುದು.

ತ: ಆ ಕಡೆಗೆ ಕಾಣುವ ಬೆಟ್ಟಸಾಲು ಅದೇನು?

ಸಾ: ಅದೇ ಋಷ್ಯಮೂಕ. ಅಲ್ಲಿಯೇ ಸುಗ್ರೀವನು ಅಡಗಿದ್ದುದು.

ತ: ಇದೇಕೆ ಈ ನೆಲವೆಲ್ಲಾ ಸುಟ್ಟಂತೆ ಕಪ್ಪಾಗಿ ಕಾಣುತ್ತಿದೆ?

ಸಾ: ನೀವು ಕನ್ನಡಿಗರಾಗಿ ಹೀಗೆ ಕೇಳುವಿರಲ್ಲಾ! ಇದು ಕರಿನಾಡು. ಈ ನಾಡು ನಮ್ಮ ತಾಯಿಯನ್ನು ವರ್ಣಿಸಿರುವುದು ಹೀಗೆ:

> ವಿಖ್ಯಾತ ಕೃಷ್ಣವರ್ಣೇ
> ತೈಲಸ್ನೇಹೋಪಲಬ್ಧವತೇ ।
> ಕುಂತಲವಿಷಯೇ ನಿತರಾಂ
> ವಿರಾಜತೇ ಮಲ್ಲಿಕಾಮೋದಃ ॥

ತ: ಎಷ್ಟು ಸಹಜವಾಗಿದೆ ಈ ವರ್ಣನೆ!

ಸಾ: ಅದೆಷ್ಟು ಅಲ್ಲ. ನೀವು ಹೇಳಿದ ಮಾತೂ ನಿಜ. ಇದು ಸುಟ್ಟ ನೆಲ. ಮೊದಲೇ ಕರಿದು. ಅದಕ್ಕೆ ಗೇರು ಬಳಿದಂತೆ ಆಗಿದೆ.

ತ: ಇಲ್ಲೇನು ಅಗ್ನಿಪ್ರಳಯವಾಗಿತ್ತೆ, ಇಷ್ಟಾಗಿ ನೆಲವು ಸುಡಲು?

ಸಾ: ನೀವು ರಾಮಾಯಣವನ್ನೋದಿರುವಿರಲ್ಲವೇ?

ತ: ಅದನ್ನು ಓದದವರೂ ಉಂಟೇ?

ಸಾ: ಅದರಲ್ಲಿ ಕಿಷ್ಕಿಂಧಾಕಾಂಡದಲ್ಲಿ ದುಂದುಭಿವೃತ್ತಾಂತವೊಂದು ಬರುವುದು.

ತ: ಅವನನ್ನೂ ಬಲ್ಲೆವು. ವಾಲಿಯು ಅವನನ್ನು ಕೊಂದನು.

ಸಾ: ಆಮೇಲೆ ಪರೀಕ್ಷಾರ್ಥವಾಗಿ ಶ್ರೀರಾಮನು ಆ ಕಳೇಬರವನ್ನು ಕಾಲಿನಿಂದ ಒದೆದಾಗ ಅದು ಬಿದ್ದ ಪ್ರದೇಶವೇ ಇದು.

ತ: ಏನಾಶ್ಚರ್ಯ? ಅದಕ್ಕೆ ನೆಲವು ಹೀಗಾಗಬೇಕೆ?

ಸಾ: ಪರ್ವತಾಕಾರದ ಆ ಶರೀರಕ್ಕೆ ಶ್ರೀರಾಮನ ಹಸ್ತದಿಂದಲೇ ಅಗ್ನಿ ಸಂಸ್ಕಾರವಾಯಿತು.

ತ: ಇದು ಹೊಸ ಸಂಗತಿ.

ಸಾ: ಇನ್ನೂ ಇಂತಹ ಹೊಸ ಸಂಗತಿಗಳನ್ನು ಸಾವಧಾನವಾಗಿ ತಿಳಿಸುತ್ತೇನೆ. ಬನ್ನಿ. ಈ ಪ್ರದೇಶವನೆಲ್ಲ ನೋಡಬೇಕಲ್ಲವೇ!

ತ: ವಿನೀತಾ, ದುಂದುಭಿ ಪ್ರಸ್ತಾಪದಲ್ಲಿ ಮಹಾಕವಿ ಪಂಪನ ನೆನಪಾಯಿತು.

ಸಾ: ಈ ದುಂದುಭಿಗೂ ನಿಮ್ಮ ಪಂಪನಿಗೂ ಏನು ಸಂಬಂಧ?

ತ: ಆ ಕವಿಪುಂಗವನು ಹುಟ್ಟಿದ ವರ್ಷವದು. 'ದುಂದುಭಿ ಗಭೀರನಿನದಂ ದುಂದುಭಿ ಸಂವತ್ಸರೋದ್ಭವಂ' ಎಂದು ಆತನನ್ನು ಹೊಗಳಿದ್ದಾರೆ.

ತ: ಅಷ್ಟೇ ಅಲ್ಲ, ಸಾಧುಗಳೇ! ಆ ಕವಿ ಕನ್ನಡ ನಾಡಿನ ಆದಿಕವಿ, ಕವಿ ಸಾರ್ವಭೌಮ.

ಸಾ: ಅದನ್ನು ನಾವೂ ಕೇಳಿ ಬಲ್ಲೆವು.

ತ: ಆತನನ್ನು ಶ್ರೇಷ್ಠ ಕವಿಗಳೇ ನಿರ್ಮತ್ಸರದಿಂದ ಕೊಂಡಾಡಿದ್ದಾರೆ. ಈ ಪದ್ಯವನ್ನು ಕೇಳಿ:

ಆದಿಕವಿ ಪಂಪನೆಂದನು
ವಾದಿಸಿ ವಾದಿಸಿ ವಿರೋಧಿ ವಿಪರೀತತೆಯಿಂ–
ದೋದೆ ವಿಲೋಮದೆ ಪೆಸರಂ
ಮೇದಿನಿಯೊಳ್ ಅವನ ಪೆಸರೆ ಪೆಸರ್ವಡೆದೆಸೆಗುಂ ॥

ಸಾ: ಇದು ಯಾವ ಕವಿ ಹೇಳಿದ್ದು?

ತ: ಮಧುರಕವಿ.

ಸಾ: ಮಧುರವಾಗಿಯೇ ಹೇಳಿದ್ದಾನೆ.

ತ: ಇಲ್ಲಿ ಪಂಪಾ ಸರೋವರವಿತ್ತಂತೆ.

ತ: ಇಲ್ಲಿಯೂ ಆ ಹೆಸರೇ ನೆನಪಿಗೆ ಬರುವುದಲ್ಲಾ!

ಸಾ: ಅದು ಈಚಿನದು. ಅದಕ್ಕೂ ಬಹಳ ಮುಂಚಿನದು ಶ್ರೀರಾಮನ ನೆನಪು. ಪಂಪಾತೀರದಲ್ಲಿ ಕುಳಿತು ಶ್ರೀರಾಮಚಂದ್ರನು ವರ್ಷಾಕಾಲದ ವರ್ಣನೆಯನ್ನು ಮಾಡುತ್ತಾ ತನ್ನ ದುಃಖವನ್ನು ತಮ್ಮ ಲಕ್ಷ್ಮಣನಿಗೆ ಹೇಳಿಕೊಂಡನಲ್ಲವೇ? ಅದಕ್ಕೇ ಇದನ್ನು ಪಂಪಾಕ್ಷೇತ್ರವೆನ್ನುವುದು. ಈಗಲೂ ಆ ಸರೋವರವು ನಿರ್ಮಲ ಉದಕದಿಂದ ಪವಿತ್ರವಾಗಿಯೇ ಇದೆ.

ತ: ಹೌದೇ? ಮೊದಲು ಅಲ್ಲಿಗೇ ಹೋಗುವ.

ಸಾ: ಪ್ರಸಿದ್ಧ ದೇವಾಲಯಗಳನ್ನೆಲ್ಲ ನೀವು ದರ್ಶಿಸಬೇಕು. ಅಗೋ ನೋಡಿ, ಆ ಶಿಖರಗಳು ವಿರೂಪಾಕ್ಷ ದೇವಾಲಯದ್ದು.

ತ: ದೇವಾಲಯಗಳಿಗೆ ಬರಿಗೈಯಲ್ಲಿ ಹೋಗುವುದೇ?

ಸಾ: ಹಣ್ಣುಕಾಯಿಗಳೆಲ್ಲ ಸಮೀಪದಲ್ಲಿಯೇ ದೊರೆಯುವುವು.

ತ: ಮಾಧವ ಮುನಿಗಳು ತಪವೆಸುಗುತ್ತಿದ್ದ ಜಾಗವಾವುದೋ?

ಸಾ: ಅಲ್ಲಿಗೂ ಹೋಗಬಹುದು. ಎಲ್ಲವನ್ನೂ ನೋಡಲು ಒಂದು ದಿನದಲ್ಲಿ ಸಾಧ್ಯವಾಗದು. ನಿಮಗೆ ತೃಪ್ತಿಯಾಗುವವರೆಗೆ ನಾನೆಲ್ಲ ಕಡೆಗೂ ನಿಮ್ಮನ್ನು ಕರೆದುಕೊಂಡು ಹೋಗುವೆನು. ನೀವೀಗ ಬಳಲಿರುವಿರಿ. ಮೊದಲು ನಮ್ಮ ಕುಟೀರಕ್ಕೆ ಬಂದು ಮಾರ್ಗಯಾಸವನ್ನು ಕಳೆದು, ನನ್ನ ಕಿಂಚಿತ್ ಸತ್ಕಾರವನ್ನು ಸ್ವೀಕರಿಸಿ. ಹೋಗುವ ಮಾರ್ಗದಲ್ಲೇ ಪಂಪಾ ಸರೋವರವಿದೆ. ಏಳಿರಯ್ಯಾ, ಜೈ ಭುವನೇಶ್ವರಿ! ಜೈ ಭುವನೇಶ್ವರಿ!

ತ: ಸಾಧುಗಳೇ, ನಿಮ್ಮ ಉಪಕಾರಕ್ಕೆ ಪ್ರತಿಯಾಗಿ ನಾವೇನನ್ನು ಸಲ್ಲಿಸಬಲ್ಲೆವು?

ಸಾ: ನಾವು ಸಾಧುಗಳು, ಪ್ರತಿಫಲವನ್ನು ಯಾವ ವಿಧದಿಂದಲೂ ಬಯಸಲಾಗದು.

ತ: ನಾವೆಷ್ಟು ಕೃತಜ್ಞರಾಗಿದ್ದರೂ ಸಾಲದು.

ಸಾ: ಅದನ್ನೂ ಈ ತಾಯ್ನೆಲಕ್ಕೆ—ಶ್ರೀರಾಚಂದ್ರನಿಗೆ ಅರ್ಪಿಸಿಬಿಡಿರಯ್ಯ.

ತ: ಮಹಾನುಭಾವರ ರೀತಿಯನ್ನು ಕಣ್ಣಾರೆ ಕಂಡೆವಲ್ಲವೆ, ವಿಶಾಲಾ.

ತ: ಈಗಲೇ ನಮ್ಮ ಮನಸ್ಸು ಪವಿತ್ರವಾಗುತ್ತಿದೆ. ಇನ್ನು ಆ ವಿದ್ಯಾರಣ್ಯರನ್ನು ಪ್ರತ್ಯಕ್ಷ ಕಂಡವರ ಮನಸ್ಸು ಹೇಗಾಗುದ್ದಿತ್ತಿತೋ! ಇದೆಲ್ಲ ಅವರ ಪುಣ್ಯಪ್ರಭಾವವಲ್ಲವೇ? ಸ್ವಾಮಿ! ನಿಜವಾಗಿಯೂ ಆ ಹಿಂದಿನ ಸ್ಮರಣೆ ಒಂದು ಕಡೆ ದುಃಖವನ್ನೂ, ಹಿಂದೆಯೇ ಸಮಾಧಾನವನ್ನೂ ಉಂಟುಮಾಡುತ್ತದೆ. ಎಂತಹ ಸೊಗಸಿನ ಬೀಡಿದು. ಸ್ಥಲಮಹಾತ್ಮೆ ಎಂಬ ಮಾತಿನಲ್ಲಿ ಸತ್ಯ ಉಂಟೆಂದು ಈಗ ಅನುಭವ ಸಿದ್ಧವಾಯಿತು.

ಸಾ: ಇದೆಲ್ಲ ಭಗವಂತನ ಇಚ್ಛೆ. ದುಃಖ ಸಮಾಧಾನಕ್ಕೆ ಮೂಲ; ನಂಬಿಕೆ ನೆಮ್ಮದಿಗೆ ಬಲ. ಆ ಕಾಲದ ವೈಭವ ಆತನ ಇಚ್ಛೆ. ಈಗ ಈ ಪಶ್ಚಾತ್ತಾಪವೂ ಆತನ ಅನುಗ್ರಹವೇ. ಯಾರು ಬಲ್ಲರು ಪುನರಾವೃತ್ತಿಯಾಗಿ ವೈಭವೋದಯ ಆಗಬಾರದೇಕೆ? ಆಗ ವಿದ್ಯಾರಣ್ಯರೇ ಬಂದಾರು, ವ್ಯಾಸ, ಪುರಂದರರೂ ಬಂದಾರು, ನಿಮ್ಮ ಪಂಪನೂ ಬಂದಾನು, ಮಧುರನೂ ಬಂದಾನು, ಆ ಮಹಾರಾಯ ಕೃಷ್ಣದೇವನೂ ಬಂದಾನು. ಇವರೆಲ್ಲರ ಪುಣ್ಯಪ್ರಸಾದವಾಗಿ ಸುವರ್ಣವೃಷ್ಟಿಯೇ ನಾಡಿನಲ್ಲಾದೀತು. ಜೈ ಭುವನೇಶ್ವರೀ—ಮಂಗಳ ಮಹಾಶ್ರೀ!

—1961

ನಾದ ಯೋಗಾನಂದ

ಶ್ರೀರಾಗ ರೂಪಕ ತಾಳ

ನಾದ ಯೋಗಾನಂದ ಪ್ರಣವ ಸ್ವರೂಪಿಣೀ
ವೇದವಿದಿತ ಮಂಗಳಕರ ಮಹಿಮಾ ವಿಹಾರಿಣೀ ||ಪಲ್ಲವಿ||

ಸಾಧನಾ - ಬೋಧನಾ - ಸಮಯೋತ್ಸಾಹಶಕ್ತಿ - ಸಂಭಾವಿತ ಸುಮಧುರ
ಬೋಧ ಸಮ್ಮೋಹ ವೃತ್ತಿ ಸೌಮ್ಯ ಗಂಭೀರ ಶೀಲ.
ಶ್ರದ್ಧಾ ಪ್ರದಾನ ಸುಖೀ ||ಅ. ಪ.||

ಸುಭಗ ಭಾವ ಸಾಮ್ರಾಜ್ಯ ನವನವೋಲ್ಲಾಸ ಭರಿತ
ಸಂತತ ಸಂಭ್ರಮ ಪೂರಿತ ವೈಭವ ವಿಸ್ತಾರಿಣೀ |
ಅಭಯ ಪ್ರಭಾವಮಯ ಸಚ್ಚಿಂತನಾಕರ್ಷಿತ
ಜೀವನಾಹ್ಲಾದ ಮೂಲ ಪ್ರತಿಭಾ ಪ್ರಬೋಧಿನೀ ||

ಕಾಲಾತೀತ ವಿಲಾಸರಮ್ಯ ಕಲಾಪ್ರಸನ್ನ ಕೌತುಕದ
ಲೀಲಾ ವಿನೋದವೆಸೆವ ರಸಾಮೃತ ಪ್ರಸಾದಿನೀ |
ಕಲಾನುರಾಗ ರಂಜನೀಯ ಜೀವನ ಭಾಗ್ಯವ ಕರುಣಿಸಿ
ಪಾಲಿಸು ನಿನ್ನಭಿಮಾನದ ನಾಡ ಜನರ ಭಗವತೀ ||

ಕೃಪಾವಲೋಕನದಲೀ ಕರ್ಣಾಟ ಜನಪದವ
ಅಪರಾಜಿತ ಪೂರ್ಣಯಶದಿ ಕಂಗೊಳಿಸಿದ ವಿತರಣೆಗಳ
ತಪೋಜೀವನದ ಧರ್ಮ ಚೈತನ್ಯದ ಮುಂಬೆಳಗಿನ
ಅಪೂರ್ವ ಶೋಭೆಯ ನೆನೆದು ಅಕ್ಷಯವೆನು ಭುವನೇಶ್ವರಿ ||

ನೀ ನೋಡದ ನೀ ನಡೆಯದ ನಿನ್ನವಾಣಿ ಕೇಳದ
ತಾಣ ಉಂಟೆ ಕರ್ಣಾಟದಿ ನೀ ಬಗೆಯದ ಭಾವ ಉಂಟೇ |
ಶ್ರೀನಿವಾಸ ಸಕಲಕಲಾ ಸನ್ನಿಧಾನ ಸತ್ಯಾಶ್ರಯ
ಜ್ಞಾನ ಧ್ಯಾನ ಪೀಠವಿದೆನೆ ನೀನೆ ಸಾಕ್ಷಿ ವಾಗ್ಭನನೀ ||

ಧ್ಯಾನಾನು ಸಂಧಾನದ ಗಾನಕಲಾರಾಧನೆಯ
ಮಾನಿತಜನ ರಕ್ತಿ ಭಕ್ತಿಯೊಲಿದು ಹರಸು ದೇವಿ |
ವೀಣಾ ನಿಸ್ವನದಿ ವಿಶ್ವ ಕುಶಲವನೇ ನುಡಿವ ತಾಯೆ
ಈ ನಿತ್ಯವಿಕಾಸ ಲೋಕ ಜಾಗೃತಿಯ ಪರಾಶಕ್ತಿ ||

[ಗಾನಕಲಾ ಪರಿಷತ್ತಿನ ನಾಂದೀಗೀತ]

ಮಹಾಜ್ಯೋತಿ

ರಾಗ : ಜುಂಜೋಟಿ　　　　　　　　　　　　　　　ರೂಪಕತಾಳ

ಅಖಂಡ ಭರತ ಕೀರ್ತಿ ಮಹಾ
　　ಜ್ಯೋತಿ ತುಂಬಿತು ಭುವನವ
　　ಜ್ಯೋತಿ ತುಂಬಿತು ಗಗನವ
　　ಜ್ಯೋತಿ ತುಂಬಿತು ಸಕಲವ　　||ಪಲ್ಲವಿ||
ಪ್ರಕಟವಾಗಿ ಪಾವನಕೆ ಪ್ರಥಮ ದರ್ಶನವಿದಾಗಿ
ಅಕಳಂಕವ ಅತ್ಯಪೂರ್ವ ತೇಜ ಸರ್ವಸ್ವದ　　||ಅನುಪಲ್ಲವಿ||

ಸಕಲಶಾಸ್ತ್ರ ಕೋವಿದರು ಆಕರ್ಷಿತರಾಗಿರೆ
ಲೋಕ ನೀತಿ ನಿಪುಣರೆಲ್ಲ ಮೂಕ ವಿಸ್ಮಿತರಾಗಿರೆ
ಏಕಮೇವಾ ದ್ವಿತೀಯ ಅಪವಿತ್ರ ಪವಿತ್ರೀಕೃತ
ಶೋಕ ಹರ್ಷ ಸಮ ಹಿತಾರ್ಥ ಬೋಧ ಸತ್ವಾಕೃತಿಯ ||　　೧

ಅವಿನಾಶದೈಸಿರಿಯ ಅನುಭವಾಮೃತವೆರೆದು
ಭವಜೀವನ ಭಾವ್ಯವೆನಿಪ ನವಧರ್ಮ ನಿವೇದಿಸಿ
ಜೀವಭಾವ ಸಂಗಮದ ಸೇವಾನಂದವ ರೂಪಿಸಿ
ಜೀವನ್ಮುಕ್ತಿಯನೈದಿದ ದಿವ್ಯಸಿದ್ಧಿ ಸಾಕ್ಷಿಯ ||　　೨

ಜೀವ ಲೋಕವೆಲ್ಲ ನೋವ ಭಾವಿಸ ಸ್ವಭಾವದಲಿ
ಈ ವಿಶ್ವಪ್ರೇಮ ದಯಾಧೀನವಲಿಹ ಧೀರತೆಯಲಿ
ದೇವ ಸಂದೇಶವರುಹಿ ಧರೆಯ ಧನ್ಯವಾಗಿಸಿದ
ಕೇವಲ ಮಾನುಷ ರೂಪದ ಪರಮ ಚೈತನ್ಯದ ||　　೩

ತತ್ವವೆಲ್ಲ ತಿಳಿಯಾಗಿಸಿ ಭಕ್ತಿಶೀಲ ಬಿತ್ತರಿಸಿ
ಸತ್ವವೆಲ್ಲ ಗಾಲಿಸಿದ ಸತ್ವಶಾಂತಿ ಕಳೆನೆರಸಿ
ಆತ್ಮಶಕ್ತಿ ಸಾಹಸದ ಅನಾಸಕ್ತಿಯೋಗ ಕುಶಲ
ಕರ್ತವ್ಯದೀಕ್ಷೆಯಾಂತ ಪರಿಪೂರ್ಣ ವಿಭೂತಿಯ ||　　೪

ಸರ್ವಜೀವ ಸುಖಾಶ್ರಯದ ಸರ್ವಜೀವನಾಭಯದ
ಸರ್ವಧರ್ಮ ವಿಹಿತದ ಸದ್ವಿಜಯ ವಿಕಾಸದ
ಸರ್ವೋದಯ ಸಂಕಲ್ಪದಿ ಶಾಂತಿವಾಚನದ ಗೈದ
ಸರ್ವಾಭ್ಯುದಯ ಧ್ಯೇಯದ ಪೂರ್ವ ತಪೋ ಪೂರಿತದ ||　　೫

ಮಂಗಳ

★

ಕಂಗೊಳಿಸೆ ನವಯುಗದಿ
ಮಂಗಳ ಪ್ರಭಾತವು ||ಪ||

ಸಂದರುಶನವೆಸಗಲೆಂದು
ತಂದು ಬೆಳಗಿ ಶುಭದಾರತಿ ||ಅ.ಪ.||

ಧರೆಗೆ ಸಂತುಷ್ಟಿಯಾಗೆ ಹರುಷದ ಸುಮ ವರುಷದಿ
ನರರ ಸುರರಗೈವ ಕಲೆಯ ಪರಮ ಸೌಂದರ್ಯದ
ನಿರುಪಮಾನ ಮಹಿಮೆಯಲಿ ಮೆರೆವ ಪೂಜ್ಯಪ್ರಭಾತವ
ನೆರೆದು ಭಜಿಸಿ ಜಯಗಾನದಿ ಬಯಸಿ ನೀಡಿ ಸ್ವಾಗತವ ||೧||

ಸತಿಯರೇ ! ಸೌಭಾಗ್ಯದ ಸೊಡರ ಪಿಡಿದು ಬನ್ನಿ
ಮಾತೆಯರೇ ! ಮಮತೆಯ ಜ್ಯೋತಿಯನೆ ತಂದಿರಿಸಿ
ಶಾಂತಿ ದಾಂತಿಕರ ಯುಗದ ಕಾಂತಿವೆರಸಿದಾರತಿಯ
ಜಗಕೆ ಶ್ರೇಯವಾಗಲೆಂದು ಬಗೆದು ಪಾಡಿ ಬೆಳಗಿರಿ ||೨||

❋

ಭಾರತಿ
ಸಾಹಿತ್ಯ, ಸಂಗೀತ
ಸಹಜವಾಗಿದೆ ನಂಟು.



ರಚಿಸಿರುವ ಕೃತಿಗಳಂತೆಯೇ
ನಿಜ ಜೀವನದಲ್ಲೂ
ಮಹಾಸತಿ, ತಪಸ್ವಿನಿ,
ದೈವಭಕ್ತೆ, ಸದ್ಗುಣ ಸಂಪನ್ನೆ.

ಸಾಹಿತ್ಯದಷ್ಟೇ ಸಂಗೀತದಲ್ಲೂ
ವೀಣಾ ಪ್ರವೀಣೆ.

ಪರಿಶುದ್ಧ ಚಾರಿತ್ರ್ಯದಿಂದ
ಉದಾತ್ತ ಪವಿತ್ರ
ವಿಚಾರಗಳ ಬಲದಿಂದ
ತನ್ನದೇ ಆದ ವ್ಯಕ್ತಿ ವೈಶಿಷ್ಟ್ಯವನ್ನು
ಉಳಿಸಿಕೊಂಡು ಬೆಳೆಸಿಕೊಂಡು
ಬಂದಿದ್ದಾರೆ 'ಭಾರತಿ.'

ನಾಡಿನ ಈ ಹಿರಿಯ ಚೇತನದ
ಸೌಮನಸ್ಯದ ಪರಿಮಳ
ಜನತೆಯಲ್ಲಿ ಸುಸಂಸ್ಕಾರವನ್ನು
ಮೂಡಿಸುವ ಸಾಮರ್ಥ್ಯ ಹೊಂದಿದೆ.

ಬೆಲೆ: 15 ರೂ.

"ಭಾರತಿ" (ಶ್ರೀಮತಿ ತಿರುಮಲೆ ರಾಜಮ್ಮ) ಸನ್ಮಾನ ಸಮಿತಿ